Among criticisms by others, I shall notice those relating to Singiraja, Ratnakaravarni and Lakshmisa. Messrs Hardekar Manjappa and Sindagi Siddappa, authors of *Sribasavacharitre* and *Sribasavesvaranacharitre* respectively, are of opinion that *Singirajapurana* is the earliest Kannada account of Basava, Singiraja, the author of this work, being, according to them, identical with his namesake included in the Dasagana (see I, 214 and 294) and thus a contemporary of Basava. This opinion of theirs appears to be based on a story given by Mr. Basavalinga Sastri of Mysore in the introduction to his *Singirajapurana-vijaya*, a prose version of Singiraja-purana, to the effect that Singiraja, who was a Vaishnava feudatory of Bijjala, became a convert to Virasaivism and wrote Singirajapurana; and that he was subsequently included in the *Dasagana* by Palkurike Somanatha in his *Sahasraganamama*. Mr. Basavalinga Sastri has not, however, given his authority for the story. As far as I know, there does not appear to be any reliable evidence, literary or inscriptional, in support of the story. Mr. Hardekar Manjappa says in the introduction (p. 6) to his work that I have assigned the date 1650 to Singiraja in my *Kavicharite*. This statement is not correct. I have assigned the date c. 1500 to this author (II, 148). It is the generally accepted opinion among the Virasaivas that Bhimakavi's *Basavapurana* is the earliest Kannada work on Basava; and if Singirajapurana had been written before his time, it is inexplicable why

Bhimakavi should not name its author and base his own work on Singiraja's instead of basing it on the Telugu Basavapurana of Palkurike Somanatha. No Virasaiva authors of an earlier period than the middle of the 16th century name Singiraja, though they invariably name Palkurike Somanatha or Bhimakavi. The earliest writer who mentions his name is Chennabasavanka (c. 1550), author of *Mahadeviyakkana-purana*. Further, Singiraja criticises some statements relating to Basava,[1] thus showing that there were in existence some accounts of Basava before his time. He would not have done this if he had been the very first writer on the subject. When speaking of him, Virupakshapandita (1584) does not say that he was a poet, but says merely that he was a great devotee of Siva.[2] I therefore think that this author cannot be identical with his namesake of the *Dasagana*, but must be a later writer of about 1500. Singidevaiya, another person included in the *Dasagana*, has, however, written *vachanas* (p. 352), just like other contemporaries of Basava.

RATNAKARAVARNI

Messrs Ugran Mangesa Rao and Nyavatirtha Santiraja Sastri, the editors of *Bharatesvaracharite* and *Satakatrayi* respectively, have, relying on Devachandra's statement, stated that Ratnakaravarni was the author of *Ratnakaradhisvarasataka*, *Aparajitesvarasataka* and *Trilokasataka*. Though this belief is common, I have advanced some objections against it and expressed the opinion that Sringarakavi-Hamsaraja, the author of Ratnakaradhisvarasataka, was different from Ratnakaravarni, the author of the remaining two Satakas and Bharatesvaracharite for the following reasons, namely, (1) that the praise of Aparajitesvara and Mandarasvami and the use of the epithets Niranjanasiddha and Chidambarapurusha, found in what I consider as Ratnakaravarni's works, are not found in

1. ಬಲದೇವ ಕಱೆದಡಾಪದವ ಬಸವಂಗಿಕ್ಕರೆಂಬರ್, ಅದಂತಲ್ಲ (6ನೆಯ ಸಂಧಿ) ; ಇತ್ಯಾದಿ.

2. Chennabasavapurana, Kanda 5, sandhi 2, stanza 50.

Hamsaraja's work; and (2) that the guru of Ratnakaravarni was Charukirti, whereas the guru of Hamsaraja was Devendrakirti (II,274). These objections have not been satisfactorily answered by the above-mentioned editors. In order to identify the two authors, the mention of Mahendrakirti as the guru of Ratnakaravarni by Devachandra has been taken hold of as a point in their favour, and they have stated that Mahendrakirti and Devendrakirti being synonymous refer to one and the same person. But this view is not at all tenable since the names are found to refer to different individuals in inscriptions and literary works. Further, the editors assert without quoting any authority that Ratnakaravarni had the title Sringarakavi-Hamsaraja. Sringarakavi does occur as a title, and it has been borne by a few poets, but the addition of Hamsaraja to it couveys no sense. So Hamsaraja has to be taken to be the name of a different poet. Mr. Santiraja Sastri has caused to be printed the colophon which is found at the end of Ratnakaradhisvarasataka at the end of the other two Satakas also, for which there does not appear to be any warrant in the manusrcipts I have seen. There is further the clear statement in the last verse of Trilokasataka that the work was composed by Ratnakararya. As the expressions Niranjanasiddha and Chidambarapurusha are used as epithets of his guru by Ratnakaravarni (Bharatesvaracharite I,4), my statement that Niranjanasiddha was a title of the author (II, 274) is not correct.

After all, the only authority for supposing that Ratnakaravarni was the author of all the three Satakas and that he had the title Sringarakavi, is Devachandra. But this authority is not quite reliable as his work abounds in mistakes. As an instance I may give a statement of his in connection with Ratnakaravarni himself, namely, that he was a contemporary of Vijayanna, author of Dvadasanuprekshe (II, 276). But this is untenable—Vijayanna's time being 1448 and Ratnakaravarni's 1557.

There has been a long controversy in Kannada journals and newspapers about the place, creed and time of Lakshmisa,

LAKSHMISA author of Jaimini-Bharata. The generally accepted opinion about the place is that he belonged to Devanur of the Kadur Taluk, which he styles Surapura, Girvanapura &c in his work. He has also dedicated his work to the deity Lakshmiramana of the village. In the temple of this deity it is said that first honors are shown to him and that portions of his work are recited on certain special occasions as a mark of respect to his memory. His house is even now pointed out in the village. There were until a few years ago his lineal descendants living in the place. In spite of all these facts some have boldly asserted that Surapura in Hyderabad was the place of the author.

With regard to his creed, it has been stated that he was either an Advaiti or a Smarta of the Bhagavata sect, and not a Srivaishnava. As stated before, there were his lineal descendants living in the village, who were Srivaishnavas, and no Srivaishnava would accept a Smarta for his ancestor. The objection advanced against the author being a Srivaishnava is that he praises Siva, Parvati and Ganapati at the beginning of his work. Instances may be given of other authors, undoubtedly Srivaishnava, who have done the same thing. (1) Lakshmakavi, author of Bharata &c (p. 15), was a Srivaishnava of Harugadde, Anekal Taluk, whose descendants are even now *archakas* of the Chennakesava temple at the village. There can be no doubt of his having been a Srivaishnava as he states that he is a disciple of a descendant of Embar, who was a disciple of Ramanuja; and yet he praises Siva and Ganapati in his work. (2) Timmamatya, author of Ananda-Ramayana (p. 74), was a Srivaishnava, whose descendants are even now conducting the duties of *archakas* at Agara, about 6 miles to the east of Bangalore, and he, too, praises Siva and Ganapati.

Some have observed that Devanur not being an exact equivalent of Surapura, some other place has to be looked for, and their search has led them to Surapura in Hyderabad. These will, however, be surprised when they learn that

Timmamatya has Sanskritised Sadanahalli into Sahadevapura, and Lakshmakavi, Harugadde into Khagapura. Compared with these renderings, the rendering of Devanur into Surapura may be looked upon as the nearest and most appropriate.

With regard to the period of Lakshmisa, various opinions have been expressed, the balance of opinion being in favour of the date 1415. I have, however, expressed the opinion that Lakshmisa lived about the close of the 17th century (II, 523). If he had lived in 1415, it is inexplicable why his name is not mentioned by any writer from the 15th to the close of the 17th century: not even by the Brahmana authors of Bharata, Ramayana and Bhagavata, and by Chikkupadhyaya, a fellow-Srivaishnava, who mentions even the Smarta poet Rudrabhatta. The authors that mention him belong to the 18th century. It is these facts that led me to assign him to the close of the 17th century, which is likewise the period assigned to him by tradition.

Some scholars have made much of the similarities between his work and the Chennabasavapurana of Virupakshapandita (1584) and have concluded that Lakshmisa preceded Virupakshapandita. But these similarities may be interpreted in either way and do not constitute a decisive factor in determining Lakshmisa's period.

I may incidentally mention an interesting fact in Kannada literature in connection with a statement made in the *Kannada Parishatpatrike* (v, 5) with reference to Lakshmisa that no one would translate a work which was opposed to his faith. I shall give instances of Jainas having written works for their Hindu friends as if they were Hindus and vice versa. Padmarasa, a Jaina (II, 314), wrote, apparently for a Hindu friend, the *Sringarakathe* in 1599. At the beginning of the work he praises Sadasiva, Sarasvati and Ganapati as if he were a Hindu. Conversely, Pattabhirama, a Hindu (p. 25), wrote for a Jaina friend named Paduma a Jaina work styled *Ratnasekharacharite* in about 1725. The work relates a story

about the observance of the Pushpanjali vow, and the author begins the work with the praise of Jina, the siddhas &c, as if he were a Jaina.

PANDITARADHYA AND SRIPATIPANDITA

Some Virasaiva friends have written to me that Panditaradhya, the subject of *Aradhyacharitra* and other works (I,213-215), was not the one included in the group of five *acharyas* who are the founders of the Virasaiva creed, but a later namesake descended in the line of the eariler Panditaradhya, and that Sripatipandita, who does not name Basava, lived long before the latter.[1] I have not come across any reliable authority in support of these statements, and if any is forthcoming, I shall readily revise what I have written in the light of the new evidence. I shall be glad to know where an account of the earlier Panditaradhya is available and how it differs from that of his later namesake. As far as I know, only one Panditaradhya is mentioned in Virasaiva works. In case there was an earlier one, it is not clear why Sripatipandita, who praises three of the *acharyas*, namely, Revana, Marulasiddha and Ekorama, in the introduction to his *Srikarabhashya* does not mention him. Panditaradhya has written a Telugu work called Sivatattvasara in which he praises Sripatipandita. I therefore venture to think that Panditaradhya was a younger contemporary of Sripatipandita and that consequently his name does not appear in Srikarabhashya. Telugu scholars have written that Panditaradhya died two years after Basava.

With regard to Sripatipandita, I may be permitted to state that it is not right to conclude that simply because he does not name Basava he must have lived long before the latter. For that matter, Harisvara, Raghavanka, Kereya-Padmarasa and even Nijagunasivayogi do not name Basava, but we know for a fact that they all lived after Basava. In the introduction to Palkurike Somanatha's Telugu Basava-purana, the editor Mr. V. Prabhakara Sastri, states that

1. In the *Virasaivakaradarpana* it is stated that Sripatipandita lived 200 years before Basava.

Sripatipandita was guru to Anantapala, general of the Chalukya king Vikramaditya VI (1076-1126). If so, Sripatipandita may be taken to be an older contemporary of Basava. We are led to the same opinion from *sandhis* 9 and 58 of Bhimakavi's Basavapurana.

ERECTION OF GOMMATESVARA.

I may conclude this introduction by saying a word or two about the period of the erection of Gommatesvara at Sravana Belgola (I, 46). The late Mr. Rice was of opinion that Chavundaraya, minister of the Ganga king Rachamalla, set up Gommatesvara in about 983. Dr. Shama Sastri, Director of Archaeological Researches in Mysore, relying on the reading Kalkyabda 600, *ie.*, the year 600 of the Kalki era, in a verse of Bhujabalisataka, a Sanskrit work of about the middle of the 16th century, has, however, come to the conclusion that the date of the erection of Gommatesvara was A. D. 1029 (*Mysore Archaeological Report* for 1923, 16 and 30). But there are some difficulties in accepting this date. The Ganga rule had been subverted and the Cholas were the rulers at that period; consequently the generally accepted belief among the Jainas that the event took place during the reign of Rachamalla (974-984) will have to be ignored altogether. The reading found in the several manuscripts of Bhujabalisataka that I have seen is Kalyabda (Kali era) and not Kalkyabda (Kalki era). In connection with my work the Karnataka Kavicharite, I have examined more than 2000 Kannada and Sanskrit manuscripts in the Mysore State and Madras, but have not met with a single work dated in the Kalki era. Kali 600 is the date given for the event also in Belagolada Gommatesvara-charite (p, 143). In the Sthalapurana of Sravana Belgola, however, the date given is Kali 610. It will thus be seen that the traditional date is 600 of the Kali era which corresponds to 2502 B.C. This high antiquity traditionally assigned to the erection of the image is in consonance with the stories which relate that it was worshipped by Rama, Sita, Ravana and Mandodari. A similar instance from Virasaiva literature

is the tradition that Basava, the minister of Bijjala died in Saka 707 (I, 175). Further, we have clear evidence of the existence of the image of Gommatesvara at Sravana Belgola before 993, the date of the Ajitapurana of Ranna. In I, 61 of the work[1] it is stated that Attimabbe, the patroness of Ranna, ascended the hill to pay homage to Kukkutesvara, *ie.*, Gommatesvara. In some inscriptions such as S.B. 234, 335 and 349 Gommatesvara is styled Southern Kukkutesvara to distinguish him from the Kukkutesvara of Paudanapura in the North; but there are also inscriptions, such as S.B. 397, in which he is styled merely Kukkutesvara without the prefix Southern. Moreover, the mention of the mountain makes it quite clear that Ranna's reference is to Gommatesvara of Sravana Belgola and not to the image of Paudanapura which was not situated on a mountain. These circumstances lead us to doubt the accuracy of the date A. D. 1029 for the erection of Gommatesvara.

No one can be more conscious than myself of the defects of my Karnataka Kavicharite. There are very probably many errors of omission and commission in it. It was only very recently that I came across a Hampe inscription (*South Indian Inscriptions* IV, No. 260) composed by the poet Maramarasa in 1199. Another inscription at the same place (*Ibid.* No. 267) composed by the well known poet Madhura in 1410, has been imperfectly noticed on pages 376-378 of this volume. I have heard of a few private libraries in the Tumkur and Mysore Districts which are said to contain several works not noticed in my work. It was not possible for me to go and examine these libraries. On information supplied by friends that certain persons had certain rare manuscripts in their possession, attempts were made to get at least a glimpse of them but without success. As I have stated in the introduction to Volume II (p. 19), it is to be deplored that owners of manuscripts in most cases have a strong disinclination even to show them to others, not to speak of lending them even for a day or two, some going even so far as to deny the

1. I am indebted for this reference to Mr, M, Govinda Pai of Manjesvar.

possession of any manuscripts. I offer the work as a tribute to my Kannadiga friends with a full knowledge of its defects. If the work, such as it is, should, in however small a degree, awaken interest in, and conduce to the advancement of, the Kannada language, I shall deem my labours amply rewarded.

I have to express my humble gratitude to His Highness the Maharaja of Mysore for graciously permitting the dedication of Volume III also to him.

It only remains for me to express my thanks to scholars and the press for their appreciative notices of the Revised Edition of the First Volume of the Lives of Kannada Poets, and to the authorities of the Mysore University for sanctioning a grant-in-aid towards the printing charges of the present volume.

Bangalore,
22nd January 1929.

R. NARASIMHACHARYA

ಅವತರಣಿಕೆ

ಪ್ರಥಮ ಸಂಪುಟದ ಅವತರಣಿಕೆಯಲ್ಲಿ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದ ಕೆಲವು ಅಂಶಗಳು ಸಂಗ್ರಹವಾಗಿ ಉಕ್ತವಾಗಿವೆ. ಈಗ ಆ ಭಾಷೆಗಳ ವಿಷಯವಾಗಿ ಇನ್ನೂ ಕೆಲವಂಶಗಳನ್ನು ತಕ್ಕಮಟ್ಟಿಗೆ ವಿವರಿಸಿ, ಕೆಲವು ಹೊಸ ವಿಷಯಗಳನ್ನು ತಿಳಿಸಿ, ಅನಂತರ ಈ ಸಂಪುಟವನ್ನು ಕುರಿತು ಒಂದೆರಡು ಮಾತನ್ನು ಹೇಳಿ ತರುವಾಯ ಕರ್ಣಾಟಕ ಕವಿಗಳ ವಿಷಯವಾಗಿಯೂ ಕರ್ಣಾಟಕ ಕವಿಚರಿತೆಯ ವಿಷಯವಾಗಿಯೂ ಕೆಲವಂಶಗಳನ್ನು ತಿಳಿಸುತ್ತೇನೆ.

ದ್ರಾವಿಡ ಭಾಷೆಗಳು

ದ್ರಾವಿಡ ಭಾಷೆಗಳಿಗೂ ಇತರ ಭಾಷಾ ವರ್ಗಗಳಿಗೂ ಸಂಬಂಧವುಂಟೇ ಎಂಬಂಶವನ್ನು ವಿಚಾರ ಮಾಡುತ್ತ ಈ ಭಾಷೆಗಳಿಗೂ ಇಂದೋ ಯೂರೋಪಿಯನ್ ಭಾಷಾ ವರ್ಗಕ್ಕೂ ಯದ್ಯಪಿ ಕೆಲವು ಹೋಲಿಕೆಗಳು ಕಂಡುಬಂದರೂ ಈ ಭಾಷೆಗಳಿಗೂ ಸಿಥಿಯನ್ ಭಾಷಾ ವರ್ಗಕ್ಕೂ ಇರುವ ಪ್ರಬಲವಾದ ಹೋಕೆಗಳು ಒಡಹುಟ್ಟನ್ನು ಸೂಚಿಸುವಷ್ಟು ನಿಕಟ ಸಂಬಂಧ ಪ್ರದರ್ಶಕಗಳಾಗಿವೆ ಎಂದು ಡಾಕ್ಟರ್ ಕಾಲ್ಡ್ವೆಲ್ ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ಮ್ಯಾಕ್ಸ್‌ಮುಲ್ಲರ್, ವಿಟ್ನಿ, ಕಸ್ಟ್ ಮುಂತಾದ ಪಂಡಿತರೂ ಅನುಮೋದಿಸಿದ್ದಾರೆ. ಆದರೆ ಡಾಕ್ಟರ್ ಪೋಪ್ ಈ ಭಾಷೆಗಳಿಗೂ ಇಂದೋ ಯೂರೋಪಿಯನ್ ಭಾಷಾ ವರ್ಗಕ್ಕೂ ಬಹಳ ನಿಕಟವಾದ ಸಂಬಂಧವುಂಟೆಂದು ಹೇಳಿದ್ದಾರೆ. ಈ ಸಂಬಂಧವನ್ನು ಗವರ್, ಶೇಷಗಿರಿ ಶಾಸ್ತ್ರಿ, ಆರ್. ಸ್ವಾಮಿ ನಾಥಯ್ಯರ್ ಮುಂತಾದ ಪಂಡಿತರೂ ಒಪ್ಪಿದ್ದಾರೆ. ಹೀಗೆ ಎರಡು ಪಕ್ಷಗಳುಂಟು. ಡಾಕ್ಟರ್ ಗ್ರಿಯರ್ಸನ್, ಸ್ಟೆನ್‌ಕೊನೌ ಮುಂತಾದ ಇನ್ನು ಕೆಲವರು ಪಂಡಿತರು ಈ ಉಭಯ ಪಕ್ಷವನ್ನೂ ಯುಕ್ತ ಕಾರಣಗಳಿಂದ ಖಂಡಿಸಿ ಸಿಥಿಯನ್ ಭಾಷಾ ವರ್ಗಕ್ಕಾಗಲಿ ಇಂದೋ ಯೂರೋಪಿಯನ್ ಭಾಷಾ ವರ್ಗಕ್ಕಾಗಲಿ ದ್ರಾವಿಡ ಭಾಷೆಗಳು ಸಂಬಂಧಪಡುವುದಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಆದುದರಿಂದ ದ್ರಾವಿಡ ಭಾಷೆಗಳು ಒಂದು ಪ್ರತ್ಯೇಕ ಭಾಷಾ ವರ್ಗವಾಗಿವೆ ಎಂದು ತಿಳಿಯಬೇಕಾಗಿದೆ.

ದ್ರಾವಿಡ ಎಂಬ ಶಬ್ದದ ಅರ್ಥ

ದ್ರಾವಿಡ ಶಬ್ದಕ್ಕೆ ದೇಶ, ಜನ, ಭಾಷೆ ಎಂಬ ಮೂರರ್ಥಗಳಲ್ಲಿ ಪ್ರಯೋಗವುಂಟು. ಮಹಾ ಭಾರತದಲ್ಲಿ ಈ ಶಬ್ದವು ದಕ್ಷಿಣ ಹಿಂದೂ ದೇಶದ ಒಂದು

ಭಾಗ ಎಂಬರ್ಥದಲ್ಲಿ ಬಂದಿದೆ. ದಕ್ಷಿಣ ಹಿಂದೂ ದೇಶಕ್ಕೆಲ್ಲಾ ಈ ಹೆಸರನ್ನು ಪ್ರಯೋಗಿಸುವುದೂ ಉಂಟು. ಈ ಶಬ್ದವು ದ್ರಾವಿಡ ಜನರನ್ನೂ ಸೂಚಿಸುತ್ತದೆ. ಇದಕ್ಕೆ ತಮಿಳು ಮಾತನಾಡುವ ಬ್ರಾಹ್ಮಣರು ಎಂಬ ವಿಶೇಷಾರ್ಥವೂ ಇದ್ದಿತು. ತರುವಾಯ ಇದು ದಕ್ಷಿಣ ದೇಶದ ಆಂಧ್ರರು, ಕರ್ನಾಟಕರು, ಮಹರಾಠರು, ಗುಜರಾತಿಗಳು ಎಂಬ ಇತರ ಬ್ರಾಹ್ಮಣ ಸಮುದಾಯಗಳಿಗೂ ಅನ್ವಯಿಸಿತು. ಈಯಂಶವು ದೇಶೀಯ ಪಂಡಿತರು ಪ್ರಯೋಗಿಸುವ ಪಂಚ ದ್ರಾವಿಡರು ಎಂಬ ಮಾತಿನಿಂದ ವ್ಯಕ್ತವಾಗುತ್ತದೆ. ಪಂಚ ಗೌಡರು ಎಂಬ ಉತ್ತರ ದೇಶದ ಬ್ರಾಹ್ಮಣ ಸಮುದಾಯಗಳ ಆಚಾರ ವ್ಯವಹಾರಗಳಿಂದ ಭಿನ್ನವಾದ ದ್ರಾವಿಡಾಚಾರ ವ್ಯವಹಾರಗಳನ್ನು ಅನುಸರಿಸುವುದರಿಂದ ಈ ಸಮುದಾಯಗಳಿಗೆ ಪಂಚ ದ್ರಾವಿಡರು ಎಂಬ ಸಂಜ್ಞೆ ಬಂದಿದೆ. ಭಾಷೆಯನ್ನು ಸೂಚಿಸುವಾಗ ದ್ರಾವಿಡ ಶಬ್ದಕ್ಕೆ ಎರಡರ್ಥಗಳು, ಎಂದರೆ ದ್ರಾವಿಡ ಭಾಷೆಗಳು ಎಂಬ ಸಾಮಾನ್ಯಾರ್ಥವೂ ತಮಿಳು ಎಂಬ ವಿಶೇಷಾರ್ಥವೂ ಉಂಟು. ದ್ರಾವಿಡ ಶಬ್ದಕ್ಕೆ ಇರುವಂತೆಯೇ ಗೌಡ ಶಬ್ದಕ್ಕೂ ದೇಶ, ಜನ, ಭಾಷೆ ಎಂಬ ಮೂರರ್ಥಗಳಲ್ಲಿಯೂ ಪ್ರಯೋಗವುಂಟು. ಪಂಚ ದ್ರಾವಿಡವು ಹೇಗೆ ತಮಿಳೇ ಪ್ರಧಾನವಾದ ದಕ್ಷಿಣ ದೇಶದ 5 ಭಾಷೆಗಳನ್ನು ಒಳಕೊಂಡಿದೆಯೋ ಹಾಗೆಯೇ ಪಂಚ ಗೌಡವು ಬಂಗಾಳಿಯೇ ಪ್ರಧಾನವಾದ ಸಂಸ್ಕೃತದಿಂದ ಹುಟ್ಟಿದ ಉತ್ತರ ದೇಶದ 5 ಭಾಷೆಗಳನ್ನು ಒಳಕೊಂಡಿದೆ. ದೇಶೀಯ ಪಂಡಿತರು ಮಹರಾಠಿ ಗುಜರಾತಿ ಭಾಷೆಗಳನ್ನು ಪಂಚ ದ್ರಾವಿಡದಲ್ಲಿ ಸೇರಿಸಿದುದಕ್ಕೆ ಆಚಾರ ವ್ಯವಹಾರಗಳ ಸಾಮ್ಯವು ಒಂದು ಕಾರಣವೆಂದು ಹಿಂದೆ ಹೇಳಿದೆ. ಇನ್ನು ಕೆಲವು ಕಾರಣಗಳು ಪ್ರಥಮ ಸಂಪುಟದ ಇಂಗ್ಲಿಷ್ ಪೀಠಿಕೆಯಲ್ಲಿ ಕೊಟ್ಟಿವೆ. ಮತ್ತೊಂದು ಕಾರಣವನ್ನು ಇಲ್ಲಿ ಸೂಚಿಸಬಹುದು. ತೆಲುಗಿನಲ್ಲಿರುವಂತೆ ಮಹರಾಠಿಯಲ್ಲಿಯೂ ತಾಲವ್ಯಾಕ್ಷರಗಳಾದ ಚಕಾರಜಕಾರಗಳಿಗೆ ಇ ಈ ಎ ಏ ಐ ಎಂಬ ಸ್ವರಗಳು ಮುಂದಿದ್ದರೆ ಸಾಧಾರಣೋಚ್ಚಾರಣೆಯೂ ಉಳಿದ ಸ್ವರಗಳಿದ್ದರೆ ಶ್ಸ ದ್ಸ ಎಂಬ ಉಚ್ಚಾರಣೆಯೂ ಉಂಟು. ಇವೇ ಮೊದಲಾದ ಕಾರಣಗಳಿಂದ ಮಹರಾಠಿ ಗುಜರಾತಿ ಭಾಷೆಗಳು ಒಂದಾನೊಂದು ಕಾಲದಲ್ಲಿ ದ್ರಾವಿಡ ಭಾಷೆಗಳಾಗಿದ್ದಿರಬಹುದು ಎಂಬ ಸಂದೇಹಕ್ಕೆ ಅವಕಾಶವಿದೆ.

ದ್ರಾವಿಡ ಶಬ್ದದ ವ್ಯುತ್ಪತ್ತಿ

ದ್ರಾವಿಡ ಎಂಬ ಶಬ್ದವು ದ್ರವಿಡ ಎಂಬ ಸಂಸ್ಕೃತ ಶಬ್ದದಿಂದ ಬಂದಿದೆ. ದ್ರವಿಡ ಶಬ್ದವು ತಮಿಳ್ ಎಂಬುದರ ರೂಪಾಂತರವಾದ ದ್ರಮಿಳ, ದಮಿಳ ಎಂಬ ಪ್ರಾಚೀನ ರೂಪಗಳಿಂದ ಬಂದಿದೆ. ಮಹಾವಂಶವೆಂಬ ಪಾಳೀ ಗ್ರಂಥದಲ್ಲಿಯೂ ಶ್ವೇತಾಂಬರ ಜೈನರ ಮತ ಗ್ರಂಥಗಳಲ್ಲಿಯೂ ತಮಿಳರಿಗೆ ದಮಿಳ ಎಂಬ ಹೆಸರು

ಹೇಳಿದೆ. ಜೈನರ ಪ್ರಾಕೃತ ಗ್ರಂಥಗಳಲ್ಲಿಯೂ ಸಂಸ್ಕೃತ ನಾಟಕಗಳಲ್ಲಿಯೂ ಬರುವ ದವಿಳ, ದವಿಡ ಎಂಬ ರೂಪಗಳು ಪ್ರಾಕೃತ ವ್ಯಾಕರಣಾನುಸಾರವಾಗಿ ಮಕಾರವು ವಕಾರವಾದ ಈಚೆಯ ರೂಪಗಳೆಂದು ಹೇಳಬಹುದು. ಪ್ರಾಚೀನ ಗ್ರಂಥಗಳಲ್ಲಿ ದಮಿಳ ಎಂಬ ರೂಪವೇ ದೊರೆಯುತ್ತದೆ. ದಮಿಳ, ದವಿಡ ಎಂಬ ರೂಪಗಳು ಸಂಸ್ಕೃತದಲ್ಲಿ ಕ್ರಮವಾಗಿ ದ್ರಮಿಳ, ದ್ರಮಿಡ ಎಂದೂ ದ್ರವಿಡ ಎಂದೂ ಆಗಿವೆ. 6 ನೆಯ ಶತಮಾನದಲ್ಲಿದ್ದ ವರಾಹಮಿಹಿರನ ಮುದ್ರಿತವಾದ ಬೃಹತ್ಸಂಹಿತೆಯಲ್ಲಿ ದ್ರವಿಡ ಎಂಬ ರೂಪವಿದ್ದರೂ ಅವನು ದ್ರಮಿಡ ಎಂಬ ರೂಪವನ್ನೇ ಪ್ರಯೋಗಿಸಿರುವಂತೆ ತೋರುತ್ತದೆ. ಏಕೆಂದರೆ ಆ ಗ್ರಂಥದ ಹಲವು ಕೈ ಬರಹದ ಪ್ರತಿಗಳಲ್ಲಿ ದ್ರಮಿಡ ಎಂಬ ಪಾಠವಿದೆ ಎಂದು ಡಾಕ್ಟರ್ ಕೆರನ್ ಹೇಳುತ್ತಾರೆ. ತಾರಾನಾಥನು ತನ್ನ ಹಿಂದೂ ದೇಶದಲ್ಲಿಯ ಬುದ್ಧ ಮತದ ಚರಿತ್ರೆ ಎಂಬ ಗ್ರಂಥದಲ್ಲಿ ದ್ರಮಿಳರನ್ನು ಹೇಳಿದ್ದಾನೆ. ಪುರಾಣಗಳ ಹಳೆಯ ಮಲಯಾಳ ಭಾಷಾಂತರಗಳಲ್ಲಿಯೂ ಬಾದಾಮಿಯ ಬಳಿ ಮಹಾ ಕೂಟದಲ್ಲಿರುವ ಚಾಳುಕ್ಯ ರಾಜನಾದ ಮಂಗಲೇಶನ (597–608) ಶಾಸನದಂಥ ಶಾಸನಗಳಲ್ಲಿಯೂ ದ್ರಮಿಳ ಎಂಬ ರೂಪವು ದೊರೆಯುತ್ತದೆ. ರಾಮಾನುಜಾಚಾರ್ಯರಿಗೆ ಹಿಂದೆ ಇದ್ದ ಒಬ್ಬ ಬ್ರಹ್ಮಸೂತ್ರ ಭಾಷ್ಯಕಾರನಿಗೆ ದ್ರಮಿಡ ಎಂಬ ಹೆಸರು ಹೇಳಿದೆ. ನಮ್ಮಾಳ್ವಾರೆಂಬ ನಾಮಾಂತರವುಳ್ಳ ಶಠಕೋಪರ ತಿರುವಾಯ್ಮೊಳಿಯೆಂಬ ತಮಿಳು ಗ್ರಂಥದ ತಾತ್ಪರ್ಯ ರೂಪವಾದ ಸಂಸ್ಕೃತ ಪದ್ಯ ಗ್ರಂಥಗಳಿಗೆ ದ್ರಮಿಡೋಪ ನಿಷತ್ಸಂಗತಿ, ದ್ರಮಿಡೋಪ ನಿಷತ್ತಾತ್ಪರ್ಯ ರತ್ನಾವಳಿ ಎಂಬ ಹೆಸರುಗಳಿವೆ. ಜೈನರಲ್ಲಿ ಒಂದು ಸಮುದಾಯಕ್ಕೆ ದ್ರವಿಳಗಣ, ತಿವುಳಗಣ ಎಂಬ ಹೆಸರುಗಳುಂಟು. ಈ ಹೆಸರುಗಳಲ್ಲಿ ತಮಿಳು ಎಂಬ ಪದದಲ್ಲಿರುವಂತೆಯೇ ವಿಕಾರವಿರುವುದು ಗಮನಿಸತಕ್ಕ ವಿಷಯವಾಗಿದೆ. ದ್ರಮಿಡ ಎಂಬುದು ಪುನಃ ತಮಿಳಿನಲ್ಲಿ ತಿರಮಿಡ ಎಂಬ ರೂಪವನ್ನು ತಾಳಿತು.

ದ್ರಾವಿಡರ ನಾಗರಿಕತೆ

ದ್ರಾವಿಡ ಜನರು ಹಿಂದೂ ದೇಶದ ಹೊರಗೆ ವಾಸವಾಗಿಲ್ಲ. ಇವರು ಹಿಂದೂ ದೇಶದ, ಮುಖ್ಯವಾಗಿ ದಕ್ಷಿಣ ಹಿಂದೂ ದೇಶದ, ಆದಿ ನಿವಾಸಿಗಳು. ಪ್ರಾಚೀನ ತಮಿಳು ಗ್ರಂಥಗಳಲ್ಲಿ ಬಂದಿರುವ ಕೆಲವು ಹೇಳಿಕೆಗಳ ಮೇರೆಗೆ ಈಗ ಹಿಂದೂ ಸಮುದ್ರದಲ್ಲಿ ಮುಳುಗಿ ಹೋಗಿರುವ ಲೆಮೂರಿಯಾ ಎಂಬ ಭೂಖಂಡವು ದ್ರಾವಿಡರ ಮೂಲಸ್ಥಾನವು. ಏಷಿಯಾ ಮೈನರ್ ಇವರ ಮೂಲಸ್ಥಾನವೆಂದೂ ಇವರು ಅಲ್ಲಿ ಪ್ರಾಚೀನರಾದ ಅಕ್ಕೇಡಿಯನ್ ಜನರೊಡನೆ

ವಾಸ ಮಾಡುತ್ತಿದ್ದು ಬಳಿಕ ವಾಯವ್ಯ ದಿಕ್ಕಿನಿಂದ ಸಿಂಧು ವಿಷಯದ ಮಾರ್ಗವಾಗಿ ಹಿಂದೂ ದೇಶವನ್ನು ಪ್ರವೇಶಿಸಿ ಆಮೇಲೆ ಹಿಂದೂ ದೇಶದ ಬಹು ಭಾಗವನ್ನು ಆಕ್ರಮಿಸಿದರೆಂದೂ ಮತಾಂತರವೂ ಉಂಟು. ಪ್ರಾಚೀನ ತಮಿಳರಲ್ಲಿ ಬಳಕೆಯಲ್ಲಿದ್ದ ಮಾತುಗಳಿಂದ ಆರ್ಯರ ಆಗಮನಕ್ಕೆ ಹಿಂದೆ ದ್ರಾವಿಡರಲ್ಲಿದ್ದ ನಾಗರಿಕತೆಯನ್ನು ಡಾಕ್ಟರ್ ಕಾಲ್ಡ್ವೆಲ್ ಈ ರೀತಿಯಾಗಿ ಗೊತ್ತುಮಾಡಿದ್ದಾರೆ:—

ಅವರಲ್ಲಿ ದೊರೆಗಳು ಗಟ್ಟಿಯಾದ ಕಟ್ಟಡಗಳಲ್ಲಿ ವಾಸ ಮಾಡುತ್ತ ಸಣ್ಣ ನಾಡುಗಳನ್ನು ಆಳುತ್ತಿದ್ದರು; ಹಾಡುಗಾರರು ಹಬ್ಬಗಳಲ್ಲಿ ಹಾಡುಗಳನ್ನು ಹೇಳುತ್ತಿದ್ದರು. ಅವರಿಗೆ ಅಕ್ಷರಗಳು ತಿಳಿದಿದ್ದಂತೆ ತೋರುತ್ತದೆ; ಅವನ್ನು ಓಲೆಯ ಗರಿಗಳಲ್ಲಿ ಕಂಠದಿಂದ ಬರೆಯುತ್ತಿದ್ದರು. ಈ ಗರಿಗಳ ಗುಂಪನ್ನು ಪುಸ್ತಕವೆಂದು ಕರೆಯುತ್ತಿದ್ದರು. ದೇವರಿದ್ದಾನೆ ಎಂದು ನಂಬಿ ಅವನನ್ನು ಕೋ (ದೊರೆ) ಎಂದು ಕರೆಯುತ್ತಿದ್ದರು; ಕೋಯಿಲ್ (ದೇವರ ಮನೆ) ಎಂಬ ಹೆಸರಿನಿಂದ ದೇವರಿಗೆ ಆಲಯಗಳನ್ನು ಕಟ್ಟುತ್ತಿದ್ದರು. ಕಟ್ಟಳೆಗಳೂ ಪದ್ಧತಿಗಳೂ ಇದ್ದುವು; ಪರಂತು ವಕೀಲರೇ ಆಗಲಿ ನ್ಯಾಯಾಧಿಕಾರಿಗಳೇ ಆಗಲಿ ಇರಲಿಲ್ಲ. ಮದುವೆ ಉಂಟು. ತಗರ, ಸೀಸ, ಸತು ಇವುಗಳನ್ನು ಬಿಟ್ಟು ಉಳಿದ ಸಾಧಾರಣ ಲೋಹಗಳನ್ನೂ ಬುಧ ಶನಿಗಳು ಹೊರತು ಪೂರ್ವಿಕರಿಗೆ ಸಾಮಾನ್ಯವಾಗಿ ತಿಳಿದಿದ್ದ ಗ್ರಹಗಳನ್ನೂ ಅರಿತಿದ್ದರು. ಮದ್ದುಗಳೂ ಹಳಿಗಳೂ ಊರುಗಳೂ ದೋಣಿಗಳೂ ಹಡಗುಗಳೂ ಇದ್ದುವು. ಸೀಹಳದ್ವೀಪದ ಜನರನ್ನು ಬಿಟ್ಟರೆ ಸಮುದ್ರದ ಆಚೆ ಇರುವ ಮತ್ತಾವ ಜನರನ್ನೂ ಅವರು ತಿಳಿದಿರಲಿಲ್ಲ. ದ್ವೀಪ, ಭೂಖಂಡ ಎಂಬುವಕ್ಕೆ ಸರಿಯಾದ ಪದಗಳಿಲ್ಲ. ಅವರಿಗೆ ಕೃಷಿಯಲ್ಲಿ ಒಳ್ಳೆಯ ಜ್ಞಾನವೂ ಯುದ್ಧದಲ್ಲಿ ಆದರವೂ ಇದ್ದುವು. ಬಿಲ್ಲು, ಬಾಣ, ಈಟಿ, ಕತ್ತಿ ಎಂಬ ಆಯುಧಗಳೂ ನೂಲುವುದು, ನೇಯುವುದು, ಬಣ್ಣ ಹಾಕುವುದು ಮುಂತಾದ ಕೈಗಾರಿಕೆಗಳೂ ಇದ್ದುವು. ಮಡಕೆ ಮಾಡುವುದರಲ್ಲಿ ಅವರು ಪ್ರವೀಣರಾಗಿದ್ದರು.

ಮೇಲೆ ಹೇಳಿದ ಅಂಶಗಳು ಆರ್ಯರೊಡನೆ ಸಮಾಗಮವಾಗುವುದಕ್ಕೆ ಹಿಂದೆಯೇ ದ್ರಾವಿಡರಲ್ಲಿ ತಕ್ಕಮಟ್ಟಿಗೆ ನೆಲಸಿದ್ದ ನಾಗರಿಕತೆಗೆ ಸಾಕಾದ ಸಾಕ್ಷಿಗಳಾಗಿವೆ.

ಕ್ರಿಸ್ತಶಕಾರಂಭಕ್ಕೆ ಬಹಳ ಕಾಲ ಹಿಂದೆಯೇ ದಕ್ಷಿಣ ಹಿಂದೂದೇಶದ ದ್ರಾವಿಡರು ವಿಶೇಷ ಸಂಸ್ಕೃತಿಯನ್ನು ಪಡೆದು ಪ್ರಬಲವಾದ ರಾಜ್ಯಗಳನ್ನು ಕಟ್ಟಿಕೊಂಡಿದ್ದರು. ಈ ರಾಜ್ಯಗಳಲ್ಲಿ ಕೆಲವು ಏಷಿಯಾಖಂಡದ ಪಶ್ಚಿಮ ಭಾಗ, ಈಜಿಪ್ಟ್, ಈಚೆಗೆ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳು ಇವುಗಳೊಡನೆ ವಿಶೇಷವಾದ ವ್ಯಾಪಾರವನ್ನು ನಡೆಸುತ್ತಿದ್ದುವು. ಸುಮಾರು ಕ್ರಿಸ್ತ

ಪೂರ್ವ 1000 ದಲ್ಲಿ ಸಾಲೊಮನ ಹಡಗುಗಳಲ್ಲಿ ಓಹಿರಿಂದ ಸಾಗಿಸಿದ ಸರಕುಗಳೊಳಗೆ ನವಿಲನ್ನು ಸೂಚಿಸುವ ಹಳೆಯ ತಮಿಳು ಪದವಾದ ತೋಕೈ ಎಂಬುದರ ರೂಪಾಂತರವಾದ ತೂಕಿ ಎಂಬ ಶಬ್ದವು ಬೈಬಲಿನ ಹೀಬ್ರೂ ಭಾಷೆಯಲ್ಲಿ ಬಂದಿರುವುದೂ ಕೂಡ ಆರ್ಯರ ಆಗಮನಕ್ಕೆ ಹಿಂದೆ ಹಿಂದೂದೇಶದಲ್ಲಿ ಆಡುತ್ತಿದ್ದ ದ್ರಾವಿಡ ಭಾಷೆಗಳ ಪ್ರಾಚೀನತೆಯನ್ನು ದೃಢೀಕರಿಸುತ್ತದೆ.

ಈಚೆಗೆ ಹೊರಬಿದ್ದ ವಿಷಯಗಳು.

ಈಜಿಗೆ ಕಂಡು ಹಿಡಿದ ಕೆಲವಂಶಗಳು ದ್ರಾವಿಡರಿಗೂ ಅಕ್ಕೇಡಿಯನ್ ಅಥವಾ ಸುಮೇರಿಯನ್ ಜನರಿಗೂ ಸಂಬಂಧವಿದ್ದಿತೆಂಬುದನ್ನು ದೃಢೀಕರಿಸುವುದು ಮಾತ್ರವಲ್ಲದೆ ದ್ರಾವಿಡರ ನಾಗರಿಕತೆಯ ಸ್ವರೂಪ, ಪ್ರಾಚೀನತೆ ಇವುಗಳ ವಿಷಯವಾಗಿ ನಮಗೆ ಈಗ ಇರುವ ಭಾವನೆಗಳನ್ನು ಸಂಪೂರ್ಣವಾಗಿ ಮಾರ್ಪಡಿಸುವಂಥವುಗಳಾಗಿವೆ. ಹಿಂದೂದೇಶದ ವಾಯುವ್ಯ ಭಾಗದಲ್ಲಿ, ಮೊದಲು ಪಂಜಾಬಿನ ದಕ್ಷಿಣದಲ್ಲಿರುವ ಹರಪ್ಪ ಎಂಬ ಸ್ಥಳದಲ್ಲಿಯೂ ಆಮೇಲೆ ಅದಕ್ಕೆ ಸುಮಾರು 400 ಮೈಲಿ ದೂರದಲ್ಲಿ ಸಿಂಧು ವಿಷಯದಲ್ಲಿರುವ ಮೋಹನ್ ಜೋದರೋ ಎಂಬ ಸ್ಥಳದಲ್ಲಿಯೂ ಭೂಮಿಯನ್ನು ಅಗೆದು ಶೋಧಿಸಿದುದರಲ್ಲಿ ಬೌದ್ಧಮತ ಸ್ಥಾಪನೆಗೆ ಬಹಳ ಕಾಲ ಹಿಂದೆಯೇ ಪಡೆದಿದ್ದ ಹೇರಳವಾದ ಸಂಸ್ಕೃತಿಯ ಕುರುಹುಗಳನ್ನು ತೋರಿಸುವ ಎರಡು ನಗರಗಳು ಗೋಚರವಾದುವು. ಆ ನಗರಗಳಲ್ಲಿ ಸಿಕ್ಕಿದ ವಸ್ತುಗಳೊಳಗೆ ಇದುವರೆಗೂ ಗೊತ್ತಿಲ್ಲದ ಒಂದಾನೊಂದು ಚಿತ್ರಲಿಪಿಯಲ್ಲಿ ಬರೆದ ಶಾಸನಗಳುಳ್ಳ ಮುದ್ರೆಗಳು ಮುಖ್ಯವಾದುವು. ಈ ಮುದ್ರೆಗಳ ಅಕ್ಷರಗಳೂ ಸೂಸದಲ್ಲಿ ಸಿಕ್ಕಿದ ಪ್ರಾಚೀನ ಈಲಂಜನರ ಹಲಗೆಗಳ ಅಕ್ಷರಗಳೂ ಪ್ರಾಯಿಕವಾಗಿ ಒಂದೇ ಆಗಿರುವುದರಿಂದ ಪಶ್ಚಿಮ ದಿಕ್ಕಿನಲ್ಲಿರುವ ಈಲಿಯಿನ ಭಾಷೆಯೂ ಹಿಂದೂದೇಶದ ವಾಯವ್ಯ ಪ್ರಾಂತದ ಭಾಷೆಯೂ ಒಂದೇ ಆಗಿದ್ದಿರಬೇಕು. 1925ನೆಯ ಮೇ 12ರಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿ ಎಂಬ ಸಭೆಯವರು ತಮಗೆ ತ್ರೈವಾರ್ಷಿಕ ಸ್ವರ್ಣಪದಕವನ್ನು ಬಹುಮಾನ ಮಾಡಿದಾಗ ಡಾಕ್ಟರ್ ಸೇಸ್–ಈಗ ಕಂಡುಹಿಡಿಯುತ್ತಿರುವ ಕೆಲವು ವಿಷಯಗಳು ನಾಗರಿಕತೆಗಳ ಮೂಲವನ್ನು ಕುರಿತು ಹಲವು ಊಹೆಗಳ ಮತ್ತು ನಂಬಿಕೆಗಳ ಆಧಾರದ ಮೇಲೆ ನಾವು ಮಾಡಿಕೊಂಡಿದ್ದ ಭಾವನೆಗಳನ್ನು ಪೂರ್ತಿಯಾಗಿ ಮಾರ್ಪಡಿಸುವಂಥವುಗಳಾಗಿವೆ ಎಂದೂ ಇವುಗಳಲ್ಲಿ ಬಹಳ ಮುಖ್ಯವಾದ ಒಂದು ವಿಷಯದಿಂದ ಸುಮಾರು ಕ್ರಿಸ್ತ ಪೂರ್ವ 2300ರಲ್ಲಿ ಹಿಂದೂದೇಶದ ವಾಯವ್ಯ ಪ್ರಾಂತಕ್ಕೂ ಈಲಿಯಿಗೂ ನಿಕಟ ಸಂಪರ್ಕವಿದ್ದಿತೆಂಬುದನ್ನು ಸೂಚಿಸುತ್ತದೆ ಎಂದೂ ಹೇಳಿದರು.

ಹರಪ್ಪ, ಮೋಹನ್ ಜೋದರೋ, ತಿನ್ನವೆಲ್ಲಿ ಜಿಲ್ಲೆಯ ಅಡಿತ್ತನಲ್ಲೂರ್ ಈ ಸ್ಥಳಗಳಲ್ಲಿ ಕಂಡು ಹಿಡಿದ ವಸ್ತುಗಳಿಗೂ ಬಲೂಚಿಸ್ತಾನ್, ಬಾಬಿಲಾನ್, ಉರ್ (ಕಾಲ್ಡಿಯಾ), ಸುಮೇರ್, ಕ್ರೀಟ್ ಎಂಬ ಸ್ಥಳಗಳಲ್ಲಿ ಸಿಕ್ಕಿದ ವಸ್ತುಗಳಿಗೂ ಇರುವ ಹೋಲಿಕೆಗಳ ಆಧಾರದ ಮೇಲೆ ಡಾಕ್ಟರ್ ಹಾಲ್ ಹೀಗೆ ಹೇಳುತ್ತಾರೆ:—ಈಗ ದೊರೆತಿರುವ ಪ್ರಮಾಣಗಳಿಂದ ದ್ರಾವಿಡರು ಮೆಡಿಟರೇನಿಯನ್ ಜನರಾಗಿರಬಹುದೆಂದೂ ಅವರು ಕ್ರೀಟಿನಿಂದ ಹೊರಟು ಏಷಿಯಾ ಮೈನರ್ ಮೆಸೊಪೊಟೇಮಿಯಾ ಇವುಗಳ ಮಾರ್ಗವಾಗಿ ಬಂದರೆಂದೂ ಈ ಸ್ಥಳಗಳಲ್ಲಿ ಅವರಿಗೂ ಸುಮೇರಿಯನ್ ಮತ್ತು ಈಲಿಂಜನರಿಗೂ ನಿಕಟಸಂಬಾಧವಿದ್ದಿತೆಂದೂ ಈಲಿಂಜನರು ಪ್ರಾಯಶಃ ದ್ರಾವಿಡರಿಗೂ ಕ್ರೀಟ್ ಜನರಿಗೂ ಅನುಬಂಧಿಗಳಾಗಿದ್ದಿರಬಹುದೆಂದೂ ಆಮೇಲೆ ದ್ರಾವಿಡರು ಇರಾನ್ ಸಮುಸ್ಥಲದ ದಕ್ಷಿಣ ಭಾಗದ ಮಾರ್ಗವಾಗಿ ಸಿಂಧು ವಿಷಯಕ್ಕೆ ಬಂದು ಅಲ್ಲಿಂದ ಹಿಂದೂದೇಶವನ್ನು ವ್ಯಾಪಿಸಿದರೆಂದೂ ಹೇಳಬಹುದು. ಇದು ಕ್ರಿಸ್ತ ಪೂರ್ವ 3000ಕ್ಕೆ ಬಹಳ ಹಿಂದೆಯೇ ನಡೆದಿರಬೇಕು. ಕ್ರೀಟ್ ಜನರ ಸಂಬಂಧಕ್ಕೆ ಸಾಕಾದ ಪ್ರಮಾಣ ವಿಲ್ಲವೆಂದು ಭಾವಿಸಿದರೂ ಸುಮೇರಿಯನ್ ಜನರ ಸಂಬಂಧಕ್ಕೆ ಸಂಶಯವೇ ಇಲ್ಲ.

ಮುಂದೆ ಕಂಡುಹಿಡಿಯಬಹುದಾದ ವಿಷಯಗಳು ಡಾಕ್ಟರ್ ಹಾಲರ ಮೇಲೆ ತಿಳಿಸಿದ ಅಭಿಪ್ರಾಯವನ್ನು ಸ್ಥಿರೀಕರಿಸಿ ಸುಮೇರಿಯನ್ ಜನರು ಹಿಂದೂ ದೇಶದಿಂದ ಹೋದ ದ್ರಾವಿಡರೇ ಎಂದು ತೋರಿಸಲೂ ಬಹುದು. ಆ ಪಕ್ಷದಲ್ಲಿ ನಾಗರಿಕತೆ ಹಿಂದೂದೇಶದಲ್ಲಿ ಮೊದಲು ಹುಟ್ಟಿತೆಂದೂ ಬಹುಶಃ ಪ್ರಾಚೀನ ದ್ರಾವಿಡರೇ ಅದಕ್ಕೆ ಮೂಲವೆಂದೂ ಸ್ಥಾಪಿತವಾಗಬಹುದು. ಬಳಿಕ ಆ ನಾಗರಿಕತೆ ಮೆಸೊಪೊಟೇಮಿಯಾವಿಗೆ ಒಯ್ಯಲ್ಪಟ್ಟು ಈಗಿನ ನಾಗರಿಕತೆಗೆ ಆಧಾರ ಭೂತವಾದ ಬಾಬಿಲಾನಿನ ಸಂಸ್ಕೃತಿಗೂ ಇತರ ಪುರಾತನ ಸಂಸ್ಕೃತಿಗಳಿಗೂ ಜನ್ಮಸ್ಥಾನವಾಗಿರಬಹುದು.

ಸರ್ ಜಾನ್ ಮಾರ್ಷಲ್ ಈಗ ಕಂಡುಹಿಡಿದಿರುವ ಹೊಸ ವಿಷಯಗಳ ಸಂಬಂಧವಾಗಿ ಹೀಗೆ ಅಭಿಪ್ರಾಯಪಡುತ್ತಾರೆ:—ಈ ಆಶ್ಚರ್ಯಕರವಾದ ವಿಷಯಗಳು ಹಿಂದೂದೇಶದ ನಾಗರಿಕತೆಯ ವಿಷಯವಾದ ನಮ್ಮ ತಿಳಿವಳಿಕೆಯನ್ನು ಒಂದೇ ಬಾರಿ ಸುಮಾರು 3000 ವರ್ಷ ಹಿಂದಕ್ಕೆ ಒಯ್ಯುವುದಲ್ಲದೆ ಕ್ರಿಸ್ತ ಪೂರ್ವ 3ನೆಯ ಸಹಸ್ರಾಬ್ದದಲ್ಲಿಯೂ ಅದಕ್ಕೆ ಹಿಂದೆಯೂ ಸಹ ಪಂಜಾಬ್, ಸಿಂಧು ಈ ಪ್ರಾಂತಗಳ ಜನರು ಅಂದವಾದ ನಗರಗಳಲ್ಲಿ ವಾಸ ಮಾಡುತ್ತ ತಕ್ಕ ಮಟ್ಟಿಗೆ ಪರಿಪಕ್ವವಾದ ಸಂಸ್ಕೃತಿಯನ್ನೂ ಕೈಗಾರಿಕೆಯಲ್ಲಿ ಕುಶಲತೆಯನ್ನೂ ವ್ಯವಸ್ಥಿತವಾದ ಚಿತ್ರ ಲಿಪಿಯನ್ನೂ ಪಡೆದಿದ್ದರು ಎಂಬಂಶವನ್ನೂ ಸ್ಥಾಪಿಸು

ತ್ತವೆ. ಪಂಜಾಬ್, ಸಿಂಧು ಈ ಪ್ರಾಂತಗಳಲ್ಲಿ ಸಿಕ್ಕಿರುವ ಪ್ರಾಕ್ತನ ವಸ್ತು ಗಳು ಕ್ರಿಸ್ತ ಪೂರ್ವ 3ನೆಯ ಅಥವಾ 4ನೆಯ ಸಹಸ್ರಾಬ್ದಕ್ಕೆ ಸೇರಿದ ಮೆಸೊ ಪೊಟೇಮಿಯಾವಿನ ಸುಮೇರ್ ಪ್ರಾಂತದ ಪ್ರಾಕ್ತನ ವಸ್ತುಗಳಿಗೆ ನಿಕಟ ಸಂಬಂ ಧವುಳ್ಳುವುಗಳಾಗಿಯೂ ಸುಮಾರು ಸಮಕಾಲಿಕವಾಗಿಯೂ ಇವೆ ಎಂಬುದರಲ್ಲಿ ಈಗ ಆವ ಸಂದೇಹಕ್ಕೂ ಅವಕಾಶವಿಲ್ಲ. ಮೆಸೊಪೊಟೇಮಿಯಾವಿನ ಸುಮೇ ರಿಯನ್ ಜನರ ಚರಿತ್ರವು ಹೇಗಾದರೂ ಇರಲಿ; ಅವರ ಸಂಸ್ಕೃತಿಗೆ ಸರಿಸಮಾ ನವಾದ ಸಂಸ್ಕೃತಿ ಸಿಂಧು ನದೀ ಪ್ರಾಂತದಲ್ಲಿ ವಿಸ್ತಾರವಾಗಿ ವ್ಯಾಪಿಸಿ ಅಸಂ ಖ್ಯಾತವಾದ ಎಷ್ಟೋ ಶತಮಾನಗಳಿಂದಲೂ ವೃದ್ಧಿಯನ್ನು ಪಡೆದಿರಬೇಕು. ಸುಮೇರಿಯನ್ ಜನರು ಮೆಸೊಪೊಟೇಮಿಯಾವಿಗೆ ಸ್ಥಳಾಂತರದಿಂದ ಬಂದ ವರು ಎಂದು ಹೇಳುವ ವಿದ್ವಾಂಸರ ಹೇಳಿಕೆ ನಿಜವಾಗಿದ್ದ ಪಕ್ಷದಲ್ಲಿ ಬಾಪಿ ಲಾನ್, ಅಸಿರಿಯಾ ಮುಂತಾದ ದೇಶಗಳ ಸಂಸ್ಕೃತಿಗೆ ಮೂಲವಾದ ಅವರ ನಾಗರಿಕತೆಗೆ ಹಿಂದೂದೇಶವೇ ಜನ್ಮಸ್ಥಾನವು ಎಂಬ ಊಹೆ ಕೊನೆಗೆ ದೃಢ ಪಡುವ ಸಂಭವವಿದೆ.

ಸುಮೇರಿಯನ್ ಅಥವಾ ಅಕ್ಕೇಡಿಯನ್ ಭಾಷೆಯಲ್ಲಿಯೂ ದ್ರಾವಿಡ ಭಾಷೆಗಳಲ್ಲಿರುವಂತೆಯೇ ಸಂಶ್ಲಿಷ್ಟ (agglutination), ಸ್ವರಾನು ರೂಪ್ಯ (vowel harmony) ಎಂಬ ಲಕ್ಷಣಗಳಿವೆ.

ದ್ರಾವಿಡ ಭಾಷಾವರ್ಗವು ಸಂಸ್ಕೃತ ಭಿನ್ನವು.

ದ್ರಾವಿಡ ಭಾಷೆಗಳಿಗೂ ಸಂಸ್ಕೃತಕ್ಕೂ ಇರುವ ವೈಲಕ್ಷಣ್ಯಗಳು ಪ್ರಥಮ ಸಂಪುಟದ ಅವತರಣಿಕೆಯಲ್ಲಿ (ಪುಟಗಳು 2–3) ಸಂಗ್ರಹವಾಗಿ ಹೇಳಿವೆ. ತಮಿಳು ಛಂದಸ್ಸಿಗೂ ಸಂಸ್ಕೃತ ಛಂದಸ್ಸಿಗೂ ಎಷ್ಟೋ ವ್ಯತ್ಯಾಸ ಗಳಿವೆ. ಸಂಸ್ಕೃತದಲ್ಲಿ ಇಲ್ಲದ ಱ, ೞ, ಆಯಿದಂ ಎಂಬ ಹಕಾರ, ವರ್ಣಮಾಲೆಯ ಕೊನೆಯ ನ ಕಾರ (ತವರ್ಗ ಪಂಚಮಾಕ್ಷರವಲ್ಲ) ಈ ವಿಶೇಷ ಧ್ವನಿಗಳು ಅವು ಗಳನ್ನು ಉಚ್ಚರಿಸುವುದಕ್ಕೆ ಅನುಕೂಲವಾದ ತಮಿಳರ ಅವಯವ ವಿಶೇಷ ರಚನೆ ಯನ್ನು ಸೂಚಿಸಿ ಅವರ ಭಾಷೆ ಸಂಸ್ಕೃತ ಭಿನ್ನವೆಂಬುದನ್ನು ತೋರಿಸುತ್ತದೆ.

ಸಂಸ್ಕೃತದಲ್ಲಿ ನಾಮಪದಗಳ ಬಹುವಚನಕ್ಕೆ ಏಕವಚನಕ್ಕಿಂತ ಬೇರೆ ಯಾದ ವಿಭಕ್ತಿ ಪ್ರತ್ಯಯಗಳಿವೆ. ಇವುಗಳ ಪ್ರಯೋಗದಿಂದ ಬಹುತ್ವ, ಕಾರಕ ಸಂಬಂಧ ಎಂಬ ಎರಡು ಭಾವಗಳೂ ಸೂಚಿತವಾಗುತ್ತವೆ. ವಚನವನ್ನು ಬಿಟ್ಟು ವಿಭಕ್ತಿ ಗಾಗಲಿ ವಿಭಕ್ತಿಯನ್ನು ಬಿಟ್ಟು ವಚನಕ್ಕಾಗಲಿ ಪ್ರತ್ಯೇಕ ರೂಪವಿಲ್ಲ. ದ್ರಾವಿಡ ಭಾಷೆಗಳಲ್ಲಿಯಾದರೋ ಎಲ್ಲಾ ವಿಭಕ್ತಿಗಳಿಗೂ ಅನ್ವಯಿಸುವ ಹೀಗೇ ಪ್ರತ್ಯಯವು ಬಹುತ್ವವನ್ನು ಸೂಚಿಸುತ್ತದೆ. ಈ ಪ್ರತ್ಯಯವು ಪ್ರಾತಿಪ

ದಿಕದ ಏಕವಚನಕ್ಕೆ ಅವ್ಯವಹಿತವಾಗಿ ಸೇರುತ್ತದೆ. ಈ ಬಹುವಚನ ಪ್ರತ್ಯಯಕ್ಕೆ ಯಾವಾಗಲೂ ಏಕರೂಪವಾದ ವಿಭಕ್ತಿ ಪ್ರತ್ಯಯಗಳು ಸೇರಿ ವಿಭಕ್ತಿಯನ್ನು ಮಾತ್ರ ತೋರಿಸುತ್ತವೆ. ಅಲ್ಲದೆ ಸಂಸ್ಕೃತದಲ್ಲಿ ಏಕವಚನ ಬಹುವಚನಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳಿವೆ. ಆದರೆ ದ್ರಾವಿಡ ಭಾಷೆಗಳಲ್ಲಿ ಒಂದೇ ವಿಧವಾದ ವಿಭಕ್ತಿ ಪ್ರತ್ಯಯಗಳೇ ಎರಡು ವಚನಗಳಲ್ಲಿಯೂ ಉಪಯೋಗಿಸಲ್ಪಡುತ್ತವೆ. ಸಂಸ್ಕೃತದಲ್ಲಿ ಸಹಾರ್ಥಕವಾದ ತೃತೀಯಾ ವಿಭಕ್ತ್ಯಿಯಿಲ್ಲ. ಸಂಸ್ಕೃತದಲ್ಲಿ ಆಖ್ಯಾತ ಪ್ರತ್ಯಯಗಳನ್ನು ಧಾತುಗಳಿಗೇ ಸೇರಿಸುತ್ತಾರೆ. ದ್ರಾವಿಡಭಾಷೆಗಳಲ್ಲಿ ಯಾದರೋ ಆ ಪ್ರತ್ಯಯಗಳನ್ನು ಧಾತುಗಳಿಗೆ ನೆಟ್ಟಗೆ ಸೇರಿಸುವುದಿಲ್ಲ, ಧಾತುಗಳಿಗೆ ಕಾಲ ಸೂಚಕವಾದ ಪ್ರತ್ಯಯಗಳನ್ನು ಸೇರಿಸಿ ಅವುಗಳ ಮೇಲೆ ಸೇರಿಸುತ್ತಾರೆ. ಸಂಸ್ಕೃತದಲ್ಲಿರುವಂತೆ ಭ್ರಾತಾ, ಭಗಿನೀ, ಪಿತೃವ್ಯ, ಪಿತೃವ್ಯಾ ಇತ್ಯಾದಿ ಹುದುವಾದ ಶಬ್ದಗಳು ದ್ರಾವಿಡ ಭಾಷೆಗಳಲ್ಲಿಲ್ಲ; ಈ ಭಾಷೆಗಳಲ್ಲಿ ಬಾಂಧವ್ಯವನ್ನೂ ಪ್ರಾಯವನ್ನೂ ಒಟ್ಟಿಗೆ ಸೂಚಿಸುವ ಅಣ್ಣ, ತಮ್ಮ, ಅಕ್ಕ, ತಂಗಿ, ಚಿಕ್ಕಪ್ಪ, ದೊಡ್ಡಮ್ಮ ಇತ್ಯಾದಿ ಪ್ರತ್ಯೇಕ ಶಬ್ದಗಳಿವೆ.

ಸಂಸ್ಕೃತ, ಗೌಡ ಭಾಷೆಗಳು ಇವುಗಳಿಂದ ದ್ರಾವಿಡ ಭಾಷೆಗಳಲ್ಲಿ ಉಂಟಾದ ಪರಿಣಾಮ.

ಗ್ರಾಂಥಿಕ ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಕನ್ನಡ, ಮಲಯಾಳ ಇವುಗಳ ವಿಷಯದಲ್ಲಿ ಸಂಸ್ಕೃತದ ವ್ಯಾಪ್ತಿ ಶಬ್ದಕೋಶದ ಮಟ್ಟಿಗೆ ಆಗಿರುವುದೇ ಹೊರತು ವ್ಯಾಕರಣಕ್ಕಿಲ್ಲ. ತಮಿಳಿನಲ್ಲಿರುವ ಸಂಸ್ಕೃತ ಶಬ್ದಗಳು ತೆಲುಗು ಮುಂತಾದ ಇತರ ಭಾಷೆಗಳಲ್ಲಿರುವುದಕ್ಕಿಂತ ಬಹಳ ಕಡಮೆಯಾಗಿವೆ. ಈ ಭಾಷೆಗಳಲ್ಲಿ ಶಾಸ್ತ್ರ ವಿಚಾರಗಳನ್ನು ನಿರ್ವಹಿಸುವುದಕ್ಕೆ ಬೇಕಾದ ಪದಗಳನ್ನು ಒದಗಿಸಿ ಕೊಟ್ಟು ಸಂಸ್ಕೃತವು ಎಷ್ಟೋ ಸಹಾಯ ಮಾಡಿದೆ. ಆದರೆ ಕಾಲಕ್ರಮದಲ್ಲಿ ಈ ಭಾಷೆಗಳಿಗೆ ಅಂದವನ್ನೂ ಗೌರವವನ್ನೂ ಉಂಟುಮಾಡುತ್ತೇವೆ ಎಂಬ ಭಾವದಿಂದ ಹಲವರು ಅನೇಕ ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಸಂಸ್ಕೃತ ಪದಗಳನ್ನು ಹೇರಳವಾಗಿ ಉಪಯೋಗಿಸಿ ಅಕ್ಷೇಪಣೆಗೆ ಗುರಿಯಾಗಿದ್ದಾರೆ. ದ್ರಾವಿಡ ಭಾಷೆಗಳೆಂಬ ಕಟ್ಟಡಗಳಿಗೆ ಸಂಸ್ಕೃತವು ಅಂದವಾದ ಇಟ್ಟಿಗೆಗಳನ್ನೂ ಎಸರುಗಿಟ್ಟ ಕಲ್ಲುಗಳನ್ನೂ ಒದಗಿಸಿದೆ ಎಂದು ಹೇಳಬಹುದು; ಪರಂತು ಇವುಗಳನ್ನು ಒಟ್ಟಾಗಿ ಕೂಡಿಸುವ ಗಾರೆ ಮುಂತಾದ ಬಂಧನ ಸಾಮಗ್ರಿಯೂ ವ್ಯಾಕರಣ ಪ್ರಕ್ರಿಯೆಗಳೂ ದ್ರಾವಿಡವಾಗಿಯೇ ಇವೆ.

ಆದರೆ ಉತ್ತರ ಹಿಂದೂದೇಶದ ದ್ರಾವಿಡ ಭಾಷೆಗಳು ನೆರೆಹೊರೆಯಲ್ಲಿರುವ ಗೌಡ ಭಾಷೆಗಳ ಪ್ರಾಬಲ್ಯದಿಂದ ಬಹಳ ಮಟ್ಟಿಗೆ ಮಾರುಪಾಡುಗಳನ್ನು ಪಡೆ

ದಿವೆ. ಹೀಗಿದ್ದರೂ ಈ ಭಾಷೆಗಳು ತಮ್ಮ ವರ್ಗಕ್ಕೆ ಸೇರಿದ ಇತರ ಪ್ರಾಂತಗಳ ಭಾಷೆಗಳ ವ್ಯಾಕರಣ ಪ್ರಕ್ರಿಯೆಗಳಿಗೆ ಎಷ್ಟೋ ವಿಧದಲ್ಲಿ ಹೋಲಿಕೆಗಳನ್ನು ಇನ್ನೂ ಉಳಿಸಿಕೊಂಡಿರುವುದು ಗಮನಿಸತಕ್ಕ ವಿಷಯವಾಗಿದೆ.

ದ್ರಾವಿಡ ಭಾಷೆಗಳಿಂದ ಸಂಸ್ಕೃತ, ಗೌಡ ಭಾಷೆಗಳು ಇವುಗಳಲ್ಲಿ ಉಂಟಾದ ಪರಿಣಾಮ.

ಸಂಸ್ಕೃತದಿಂದ ದ್ರಾವಿಡ ಭಾಷೆಗಳು ವಿಷಯಗಳನ್ನು ಗ್ರಹಿಸಿರುವಂತೆಯೇ ಸಂಸ್ಕೃತವೂ ದ್ರಾವಿಡ ಭಾಷೆಗಳಿಂದ ಕೆಲವು ವಿಷಯಗಳನ್ನು ಗ್ರಹಿಸಿದೆ ಎಂದು ಕೆಲವರು ಪಾಶ್ಚಾತ್ಯ ಪಂಡಿತರು ಅಭಿಪ್ರಾಯಪಡುತ್ತಾರೆ. ದ್ರಾವಿಡ ಭಾಷೆಗಳ ಸಂಪರ್ಕದಿಂದ ಸಂಸ್ಕೃತ, ಗೌಡ ಭಾಷೆಗಳು ಇವುಗಳ ವ್ಯಾಕರಣದಲ್ಲಿಯೂ ಸ್ವಲ್ಪಮಟ್ಟಿಗೆ ಮಾರುಪಾಡುಗಳು ಉಂಟಾಗಿವೆ ಎಂದು ಇನ್ನು ಕೆಲವರ ಮತವು. ದ್ರಾವಿಡರು ಒಂದಾನೊಂದು ಕಾಲದಲ್ಲಿ ಸ್ವಲ್ಪ ಹೆಚ್ಚು ಕಡಮೆ ಹಿಂದೂದೇಶವನ್ನೆಲ್ಲಾ ಆಕ್ರಮಿಸಿದ್ದರು. ಬೇರೆ ಬೇರೆ ಭಾಷೆಗಳನ್ನು ಆಡುವ ಜನಸಮುದಾಯಗಳು ಒಟ್ಟಿಗೆ ವಾಸ ಮಾಡಿಕೊಂಡಿದ್ದರೆ ಒಂದು ಸಮುದಾಯದಿಂದ ಮತ್ತೊಂದು ವಿಷಯಗಳನ್ನು ಗ್ರಹಿಸುವುದು ಸಹಜವಾಗಿದೆ. ಆದುದರಿಂದ ಆರ್ಯರು ದಕ್ಷಿಣ ಹಿಂದೂ ದೇಶಕ್ಕೆ ಬಂದಾಗ ದ್ರಾವಿಡ ನಾಮಗಳನ್ನು ಪಡೆದಿರುವ ಹೊಸ ವಸ್ತುಗಳ ಪರಿಚಯವುಂಟಾಗಿ ಆ ನಾಮಗಳನ್ನು ಅವುಗಳಿಂದ ಸೂಚಿತವಾದ ವಸ್ತುಗಳೊಡನೆ ಸ್ವೀಕರಿಸಿರಬೇಕು. ಸಂಸ್ಕೃತ ನಿಘಂಟುಗಳಲ್ಲಿ ಕೊಟ್ಟಿರುವ ಅವುದಾದರೂ ಒಂದು ಪದವು ದ್ರಾವಿಡ ಭಾಷೆಗಳಿಂದ ಬಂದಿದೆ ಎಂದು ಕೆಳಗಣ ಕಾರಣಗಳಿಂದ ನಿರ್ಣಯಿಸಬಹುದು ಎಂದು ಡಾಕ್ಟರ್ ಕಾಲ್ಡ್ವೆಲ್ ಹೇಳುತ್ತಾರೆ:—1. ಆ ಪದವು ಸಂಸ್ಕೃತದಲ್ಲಿ ಧಾತುವಿಲ್ಲದೆ ಆ ಪದದಿಂದ ಹುಟ್ಟಿದ ಶಬ್ದಗಳಿಲ್ಲದೆ ಪ್ರತ್ಯೇಕವಾಗಿದ್ದು ದ್ರಾವಿಡ ಭಾಷೆಗಳಲ್ಲಿ ಅದಕ್ಕೆ ಸಂಬಂಧಿಸಿದ ಅಥವಾ ಅದರಿಂದ ಹುಟ್ಟಿದ ಹಲವು ಶಬ್ದಗಳನ್ನು ಪಡೆದಿದ್ದರೆ; 2. ಸಂಸ್ಕೃತದಲ್ಲಿ ಆ ಪದಕ್ಕೆ ಹಲವು ಪರ್ಯಾಯ ಶಬ್ದಗಳಿದ್ದು ದ್ರಾವಿಡ ಭಾಷೆಗಳಲ್ಲಿ ಆ ಅರ್ಥವನ್ನು ಕೊಡುವ ಅದೊಂದೇ ಪದವಿದ್ದರೆ; 3. ಆ ಪದವು ಸಂಸ್ಕೃತದೊಡನೆ ಸಂಬಂಧವುಳ್ಳ ಆವ ಇಂದೋಯೂರೋಪಿಯನ್ ಭಾಷೆಯಲ್ಲಿಯೂ ಇಲ್ಲದೆ ಒಂದೊಂದು ದ್ರಾವಿಡ ಭಾಷೆಯಲ್ಲಿಯೂ ಇದ್ದರೆ; 4 ಆ ಪದಕ್ಕೆ ಸಂಸ್ಕೃತ ನಿಘಂಟುಕಾರರು ಹೇಳುವ ವ್ಯುತ್ಪತ್ತಿ ಕಾಲ್ಪನಿಕವಾಗಿದ್ದು ದ್ರಾವಿಡ ನಿಘಂಟುಕಾರರು ಹೇಳುವ ವ್ಯುತ್ಪತ್ತಿ ಸಹಜವಾಗಿರುವಂತೆ ತಿಳಿಯಬಂದರೆ; 5. ಆ ಪದಕ್ಕೆ ಸಂಸ್ಕೃತದಲ್ಲಿರುವ ಅರ್ಥವು ಲಾಕ್ಷಣಿಕವಾಗಿದ್ದು ದ್ರಾವಿಡ ಭಾಷೆಗಳಲ್ಲಿ ಅದರ್ಥವು ಧಾತುವಿನ

ಅರ್ಥವನ್ನು ಅನುಸರಿಸಿ ಸ್ವಾಭಾವಿಕವಾಗಿದ್ದರೆ; 6. ಸಕಲ ಭಾಷಾ ಸಾಹಿತ್ಯಕ್ಕೂ ಸಂಸ್ಕೃತವು ಮೂಲವೆಂದು ಭಾವಿಸುವ ದೇಶೀಯ ದ್ರಾವಿಡ ಪಂಡಿತರೇ ಆ ಪದವು ದ್ರಾವಿಡವೆಂದು ಪ್ರತಿಪಾದಿಸಿದರೆ—ಈ ಕಾರಣಗಳಲ್ಲಿ ಏವುದಾದರೂ ಒಂದಾಗಲಿ ಕೆಲವಾಗಲಿ ಎಲ್ಲಾ ಆಗಲಿ ಇದ್ದರೆ ಆ ಪದವು ದ್ರಾವಿಡವೆಂದು ನಿಸ್ಸಂದೇಹವಾಗಿ ಹೇಳಬಹುದು

ಮೇಲೆ ಹೇಳಿದ ನಿಬಂಧನೆಗಳಿಗೆ ಅನುಸಾರವಾಗಿ ಸಂಸ್ಕೃತ ನಿಘಂಟುಗಳಲ್ಲಿ ಸೇರಿರುವ ಈ ಪದಗಳು ದ್ರಾವಿಡ ಭಾಷೆಗಳಿಂದ ತೆಗೆದುಕೊಂಡ ಶಬ್ದಗಳೆಂದು ತಿಳಿಯಬಹುದು:—ಅಕ್ಕ, ಅತ್ತ, ಕುಟಿ, ಕೋಟ, ನೀರ, ಪಲ್ಲಿ, ವಿಾನ, ಏಡ (ಆಡು), ಮರುತ್ತ (ಮರುಂದು, ಮರ್ದು ಇವುಗಳೊಡನೆ ಹೋಲಿಸಿ,) ಹೇರಂಬ (ಎರುಮೈ, ಎರ್ಮೆ), ಅಟ್ಟ (ಅನ್ನ. ಅಡುಧಾತುವಿನೊಡನೆ ಹೋಲಿಸಿ), ಆವ್ (ತಮಿಳು–ಆವ್), ವಲ್ಲಿ (ಬಳ್ಳಿ), ಮುಕುಲ (ಮುಗಿಳ್–ಮುಗುಳ್), ಕುಂತಲ (ಕೂಂದಲ್), ಪಾಲಿ (ಪಲೆ), ಮುಂಡ (ಮುಂಡೆ), ಕಾಕ (ಕಾಗೆ), ಮಾಜಲ (ವೊಸಳೆ), ಮೇಕ (ಮೇಕೆ), ಸೀರ (ಶೇರೈ–ಕೇರೆ), ತಾಲ (ತಾಳ), ವರುಕ (ಬರಗ, ವರಗು), ಉಲ್ಲ (ಉಳ್ಳು), ತಟಿತ್, ತಡಿತ್ (ಸಿಡಿಲ್, ತುಳು–ತೆಡಿಲ್), ಮಲಯ (ಮಲೆ), ಆಲಿ (ತೆಲುಗು–ಆಲು), ಕಲಿ, ಗಂಡ, ಸುಂದಿ (ಸೊಂದಿ), ಖಲೀನ (ಕಡಿಯಾಣ), ತಲ್ಪ (ತೆಪ್ಪ), ಕಲ್ಯ (ಕಳ್) ಖರ್ಜೂ (ಕಜ್ಜಿ), ಪಾಸ (ಪಶಿ, ಹಸಿವು), ಇತ್ಯಾದಿ. ಸಂಸ್ಕೃತವು ಲಾಟಿನ್ ಗ್ರೀಕ್ ಭಾಷೆಗಳಿಂದಲೂ ಕೂಡ ದೀನಾರ, ದ್ರಮ್ಮ, ಹೋರಾ ಇತ್ಯಾದಿ ಪದಗಳನ್ನು ತೆಗೆದುಕೊಂಡಿದೆ.

ಇದುವರೆಗೂ ಸಂಸ್ಕೃತದ ಶಬ್ದ ಕೋಶಕ್ಕೆ ಅನ್ವಯಿಸುವ ವಿಷಯವನ್ನು ಹೇಳಿದುದಾಯಿತು. ಈಗ ವ್ಯಾಕರಣಕ್ಕೆ ಅನ್ವಯಿಸುವ ಒಂದೆರಡು ವಿಷಯಗಳನ್ನು ತಿಳಿಸಬಹುದು. ಧ್ವನಿ ವಿಷಯದಲ್ಲಿ ಸಂಸ್ಕೃತದಲ್ಲಿ ಬಳಕೆಯಲ್ಲಿರುವ ಟವರ್ಗಾಕ್ಷರಗಳು ದ್ರಾವಿಡ ಭಾಷೆಗಳಿಂದ ತೆಗೆದುಕೊಂಡುವು ಎಂದು ಹಲವರು ಪಾಶ್ಚಾತ್ಯ ಪಂಡಿತರು ಹೇಳುತ್ತಾರೆ. ಈ ಅಕ್ಷರಗಳು ದ್ರಾವಿಡ ಭಾಷೆಗಳಿಗೆ ಬಹು ಮುಖ್ಯವಾದುವು. ಇವು ಸಂಸ್ಕೃತದಲ್ಲಿ ಮಾತ್ರ ದೊರೆವುವೇ ಹೊರತು ಅದಕ್ಕೆ ಸಂಬಂಧಿಸಿದ ಇತರ ಹಿಂದೋ ಯೂರೋಪಿಯನ್ ಭಾಷೆಗಳಲ್ಲಿಲ್ಲ. ಗೌಡ ಭಾಷೆಗಳಲ್ಲಿ ಸ್ವರಕ್ಕೆ ಪರವಾದ ಪರುಷಾಕ್ಷರಗಳು ಸರಳಾಕ್ಷರಳಾಗುವುದು ದ್ರಾವಿಡ ಭಾಷೆಗಳ ಮಾರ್ಗವು. ಮರಾಠಿಯಲ್ಲಿ ತಾಲವ್ಯಾಕ್ಷರಗಳಿಗೆ ಎರಡು ವಿಧವಾದ ಉಚ್ಚಾರಣೆ ಇರುವುದು ತೆಲುಗಿನ ಪದ್ಧತಿ. ದ್ರಾವಿಡ ಭಾಷೆಗಳಲ್ಲಿರುವಂತೆಯೇ ಮರಾಠಿ ಗುಜರಾತಿ ಭಾಷೆಗಳಲ್ಲಿ ಉತ್ತಮ ಪುರುಷದ ಸರ್ವನಾಮಕ್ಕೆ ಇದಿರಲಿರುವವರನ್ನು ಸೇರಿಸಿಕೊಳ್ಳುವ ಮತ್ತು

ಸೇರಿಸಿಕೊಳ್ಳದ ಎರಡು ಬಗೆಯ ಬಹುವಚನಗಳಿವೆ. ವತ್ ಎಂಬ ಪ್ರತ್ಯಯವು ಸಂಸ್ಕೃತವಾಗಿದ್ದರೂ ಸಂಸ್ಕೃತದ ಕೃತವಾನ್ ಎಂಬಂಥ ರೂಪವು ದ್ರಾವಿಡದ ಶೆಯ್ದವನ್, ಗೈಯ್ದವಂ ಎಂಬಂಥ ರೂಪವನ್ನು ಅನುಸರಿಸಿರುವಂತೆ ತೋರುತ್ತದೆ.

ದಕ್ಷಿಣ ಹಿಂದೂದೇಶದ ದ್ರಾವಿಡ ಭಾಷೆಗಳು

ಈಗ ದಕ್ಷಿಣ ಹಿಂದೂ ದೇಶದ ದ್ರಾವಿಡ ಭಾಷೆಗಳನ್ನು ಕುರಿತು ಸ್ವಲ್ಪ ಮಟ್ಟಿಗೆ ವಿಚಾರ ಮಾಡುತ್ತೇನೆ. ಪ್ರಥಮ ಸಂಪುಟದ ಅವತರಣಿಕೆಯಲ್ಲಿ (ಪುಟ 3) ಹೇಳಿರುವಂತೆ, ಇವುಗಳೊಳಗೆ ನಾಲ್ಕು, ಎಂದರೆ ತಮಿಳು, ಮಲೆಯಾಳ, ಕನ್ನಡ, ತೆಲುಗು ಎಂಬುವು ಗ್ರಾಂಥಿಕ ಭಾಷೆಗಳಾಗಿವೆ; ಉಳಿದುವು ಎಂದರೆ ತುಳು, ಕೊಡಗು, ತೊದ, ಕೋತ, ಬಡಗ ಎಂಬುವು ವರ್ಣಮಾಲೆಗಳನ್ನು ಕೂಡ ಪಡೆದಿಲ್ಲವಾದುದರಿಂದ ವ್ಯಾವಹಾರಿಕ ಭಾಷೆಗಳಾಗಿವೆ. ಇವನ್ನು ಕನ್ನಡದ ಉಪಭಾಷೆಗಳೆನ್ನಬಹುದು. ಈ ಗುಂಪಿಗೆ ಕುರುಂಬ, ಇರುಳ ಎಂಬ ಕ್ಷುಲ್ಲಕ ಭಾಷೆಗಳನ್ನೂ ಸೇರಿಸಬಹುದು.

ತ ಮಿ ಳು

ಈ ಭಾಷೆಗಳಲ್ಲಿ ತಮಿಳು ಬಹಳ ಪುರಾತನವೆಂದೂ ವಿಪುಲವಾದ ಶಬ್ದ ಸೌಂದರ್ಯವುಳ್ಳದೆಂದೂ ಪ್ರಾಚೀನ ಕಾಲದಿಂದ ಅಭಿವೃದ್ಧಿಗೆ ಬಂದಿದೆಯೆಂದೂ ಭಾವಿಸಲ್ಪಟ್ಟಿದೆ. ಆದರೆ ಕೆಲವರು ವಿದ್ವಾಂಸರು ತೆಲುಗು ಮುಂತಾದ ಭಾಷೆಗಳಲ್ಲಿ ತಮಿಳಿನಲ್ಲಿರುವುದಕ್ಕಿಂತ ಪ್ರಾಚೀನ ತರವಾದ ಕೆಲವು ಶಬ್ದ ರೂಪಗಳೂ ವ್ಯಾಕರಣ ಪ್ರಕ್ರಿಯೆಗಳೂ ದೊರೆವುದರಿಂದ ತಮಿಳು ಪುರಾತನತಮವಾದ ದ್ರಾವಿಡ ಭಾಷೆ ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ. ತಮಿಳು ಎಂಬ ಹೆಸರು ದ್ರಮಿಡ ಅಥವಾ ದ್ರವಿಡ ಎಂಬ ಸಂಸ್ಕೃತ ರೂಪವನ್ನು ಹೊಂದಿದೆ ಎಂದು ಹೇಳುತ್ತಾರೆ. ಆದರೆ ಸಂಸ್ಕೃತ ರೂಪದ ಪ್ರಥಮಾಕ್ಷರದ ರೇಫಕ್ಕೆ ಕಾರಣವು ವ್ಯಕ್ತವಾಗುವುದಿಲ್ಲ. ತಮಿಳು ಪಂಡಿತರು ತಮಿಳು ಎಂಬ ಪದವು ಮಾಧುರ್ಯವಾಚಿಯೆಂದೂ[1] ಅದು ಮಧುರವಾದ ತಮ್ಮ ಭಾಷೆಗೆ ಅನುರೂಪವಾದ ಹೆಸರೆಂದೂ ಹೇಳುತ್ತಾರೆ. ಅವರು ದ್ರಮಿಡ ಎಂಬ ಸಂಸ್ಕೃತ ಪದ

---

1. ಪಿಂಗಲಂದೈ ಎಂಬ ತಮಿಳು ನಿಘಂಟುವಿನಲ್ಲಿ ತಮಿಳೆಂಬ ಪದಕ್ಕೆ ಮಾಧುರ್ಯ, ದಯೆ ಎಂಬ ಎರಡು ಅರ್ಥಗಳು ಕೊಟ್ಟಿವೆ. ತಮಿಳು ಸಾಹಿತ್ಯದಲ್ಲಿ ಮಾಧುರ್ಯ ವಾಚಿಯಾದ ತಮಿಳ್ ಎಂಬ ಶಬ್ದವು ಒಂದೇ ಒಂದು ಕಡೆ–ತಿರುತ್ತಕ್ಕ ದೇವರ ಜೀವಕ ಚಿಂತಾಮಣಿಯಲ್ಲಿ–ಬಂದಿರುವುದಾಗಿ ತಿಳಿಯುತ್ತದೆ.

ದಿಂದ ತಮಿಳು ಎಂಬುದು ಹುಟ್ಟಿತು ಎಂಬ ಹೇಳಿಕೆ ನಿರಾಧಾರವೆನ್ನುತ್ತಾರೆ; ಏಕೆಂದರೆ ಆರ್ಯರು ಬರುವುದಕ್ಕೆ ಮುಂದೆಯೇ ಪ್ರಚಾರದಲ್ಲಿದ್ದ ಈ ಭಾಷೆ ಹೊಸದಾಗಿ ಬಂದ ಆರ್ಯರಿಂದ ತನ್ನ ಹೆಸರನ್ನು ಪಡೆಯಿತು ಎಂಬುದು ಅಸಮಂಜಸವು. ತೆಲುಗರೂ ಕನ್ನಡಿಗರೂ ತಮಿಳನ್ನು ಅರವ ಎಂದು ಕರೆವುದುಂಟು; ಈ ಹೆಸರಿಗೆ ಆ ಭಾಷೆಯಲ್ಲಿ ಮಹಾಪ್ರಾಣಾಕ್ಷರಗಳು ಇಲ್ಲದಿರುವುದು ಕಾರಣವಾಗಿರಬಹುದು. ಕೆಲವರು ತಮಿಳು ಪಂಡಿತರು ತಮಿಳನ್ನೂ ತಮಿಳರನ್ನೂ ಸೂಚಿಸುವುದಕ್ಕೆ ತೆಲುಗರು ಉಪಯೋಗಿಸುವ ಸರಿಯಾದ ಪದಗಳು ಅರುವ, ಅರುವರ್ ಎಂಬುವು ಎಂದು ಹೇಳುತ್ತಾರೆ. ಕನ್ನಡಿಗರು ತಮಿಳಿಗೆ ತಿಗುಳು ಎಂಬ ಮತ್ತೊಂದು ಹೆಸರನ್ನೂ ಹೇಳುವರು. ಪೋರ್ಚುಗೀಸರು ತಮಿಳು, ಮಲೆಯಾಳ ಈ ಎರಡು ಭಾಷೆಗಳನ್ನೂ ಮಲಬರ್ ಎಂದು ಕರೆಯುತ್ತಿದ್ದರು. ತಮಿಳೂ ಕೂಡ ಯೂರೋಪಿನಲ್ಲಿ ಬಹಳ ಕಾಲದವರೆಗೆ ಆ ಹೆಸರಿನಿಂದಲೇ ಕರೆಯಲ್ಪಡುತ್ತಿದ್ದಿತು. ತಮಿಳು ಲಿಪಿಯಲ್ಲಿ ಮೊತ್ತಮೊದಲು ಮಲಬಾರ್ ಸಮುದ್ರ ತೀರದಲ್ಲಿಯ ಅಂಬಲಕ್ಕಾಡು ಎಂಬ ಸ್ಥಳದಲ್ಲಿ 1577-9ರಲ್ಲಿ ಅಚ್ಚಾದ ಪುಸ್ತಕದಲ್ಲಿ ಅದರ ಭಾಷೆ ಮಳವರ್ ಅಥವಾ ತಮಿಳ್ ಎಂದು ಹೇಳಿದೆ. ತಮಿಳಿನಲ್ಲಿ ಗ್ರಂಥರಚನೆ ಅಗಸ್ತ್ಯರಿಂದ ಆರಂಭವಾಯಿತೆಂದು ಪ್ರತೀತಿಯಿದೆ. ಈ ಋಷಿ ಶಿವನಿಂದಲೋ ಅಥವಾ ಸುಬ್ರಹ್ಮಣ್ಯನಿಂದಲೋ ತಮಿಳನ್ನು ಕಲಿತಂತೆಯೂ ಉತ್ತರ ದೇಶದಿಂದ ಆ ಭಾಷೆಯ ವರ್ಣಮಾಲೆಯನ್ನು ತಂದಂತೆಯೂ ಪೇರಗತ್ತಿಯಂ ಎಂಬ ತಮಿಳ ಪ್ರಥಮ ವ್ಯಾಕರಣವನ್ನು ರಚಿಸಿದಂತೆಯೂ ತನ್ನ ಶಿಷ್ಯರಲ್ಲಿ ಒಬ್ಬನಾದ ತೃಣಧೂಮಾಗ್ನಿ ಎಂಬವನಿಂದ ತೊಲ್ಕಾಪ್ಪಿಯಂ ಎಂಬ ಮತ್ತೊಂದು ವ್ಯಾಕರಣವನ್ನು ಬರಸಿದಂತೆಯೂ ಹೇಳುತ್ತಾರೆ. ಶಿವನ ಡಮರುವಿನ ಬಲ ಪಾರ್ಶ್ವದ ಧ್ವನಿಯಿಂದ ಸಂಸ್ಕೃತವೂ ಎಡಪಾರ್ಶ್ವದ ಧ್ವನಿಯಿಂದ ತಮಿಳೂ ಹುಟ್ಟಿದುವೆಂದೂ ಶಿವನು ಸಂಸ್ಕೃತವನ್ನು ಪಾಣಿನಿಗೂ ತಮಿಳನ್ನು ಅಗಸ್ತ್ಯನಿಗೂಕೊಟ್ಟನೆಂದೂ ಇತಿಹಾಸವುಂಟು.[1] ಶಿವಸುಬ್ರಮ್ಮಣ್ಯಸಂವಾದರೂಪವಾದ ಶಂಭುರಹಸ್ಯವೆಂಬ ಸಂಸ್ಕೃತ ಗ್ರಂಥದ ಈ ಶ್ಲೋಕಗಳಲ್ಲಿ ಶಿವನು —"ಅಗಸ್ತ್ಯ ಋಷಿ ನನ್ನನ್ನು ಕುರಿತು ತಪಸ್ಸು ಮಾಡಿ ನಾನು ಕೊಟ್ಟ ವಿಜ್ಞಾನದಿಂದ ತಮಿಳು ವ್ಯಾಕರಣವನ್ನು ರಚಿಸಿದನು. ಆದುದರಿಂದ ತಮಿಳು ಋಷಿಜನ್ಯ ಅಥವಾ ಆರ್ಷ ಎನಿಸಿಕೊಂಡಿದೆ; ಅನಾರ್ಷವಾದ ಆಂಧ್ರ ಕರ್ಣಾಟ ಘೂರ್ಜರಾದಿ ಭಾಷೆಗಳಿಗಿರುವಂತೆ ಈಭಾಷೆಗೆ ಅಪಭ್ರಂಶ ಎಂಬ ದೋಷವಿಲ್ಲ" ಎನ್ನುತ್ತಾನೆ:—

---

1 ವಡವೇಂಕಟ' ಯ್ಯೆಪಾವ್ಪಣಿ ನಿಕ್ಕು ವಗುತ್ತರುಳಿ ತೆನ್ಕೋಟ್ಟಿಯ್ಯೆಕ್ಕುಡ ಮುನಿಕ್ಕುವಲಿಯು ಅಟುತ್ತಾರ್ ಕೊಲ್ಲೇತ್ತು ಪ್ಪಾಗರ್.

ಮಾಮುದ್ದಿಶ್ಯತಪಶ್ಚಕ್ರೇ ಪುಣ್ಯಾಗಸ್ತ್ಯೋ ಮಹಾಮುನಿಃ।
ಮಯಾಪ್ರದತ್ತವಿಜ್ಞಾನೇ ದ್ರಾವಿಡೀಂ ವ್ಯಾಕೃತಿಂ ವ್ಯಧಾತ್ ॥
ನಾಪಭ್ರಂಶಶ್ಚದೋಷೋಸ್ತಿ ದ್ರಾವಿಡೀನಾಂ ಗಿರಾಂ ತತಃ।
ಅನಾರ್ಷಮಾಂಧ್ರ ಕಾರ್ಣಾಟ ಘೌರ್ಜರಾದ್ಯಂತು ಭಾಷಿತಂ ॥
ಅಪಭ್ರಂಶಂ ವಿಜಾನೀಯಾತ್.

ಕಾಶಿಯ ಸಂಸ್ಕೃತ ಪಂಡಿತರುಗಳೊಡನೆ ಜಗಳವಾಡಿಕೊಂಡು ಅಗಸ್ತ್ಯನು ದಕ್ಷಿಣಹಿಂದೂದೇಶಕ್ಕೆ ಬಂದು ತಮಿಳುಭಾಷೆಯನ್ನು ಸ್ಥಾಪಿಸಿದನೆಂದು ಮತ್ತೊಂದು ಇತಿಹಾಸವುಂಟು. ಆದರೆ ಒಬ್ಬ ವ್ಯಕ್ತಿಯಿಂದ ಒಂದು ಭಾಷೆಯ ಸೃಷ್ಟಿಯಾಯಿತು ಎಂಬುದು ಭಾಷಾತತ್ತ್ವಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿದೆ. ಲಕ್ಷ್ಯಗ್ರಂಥಗಳಿಲ್ಲದೆ ವ್ಯಾಕರಣವೆಂಬ ಲಕ್ಷಣಗ್ರಂಥವು ಹುಟ್ಟಲಾರದು;[1] ತೊಲ್ಕಾಪ್ಪಿಯದಲ್ಲಿ ಪೂರ್ವಕವಿಗಳಿಂದ ಉದಾಹರಣಗಳು ಕೊಟ್ಟಿವೆ. ಹಾಗೆಯೇ ಅಗಸ್ತ್ಯನು ವ್ಯಾಕರಣವನ್ನು ಬರೆದಿದ್ದರೆ ಅದನ್ನು ಪೂರ್ವಕವಿಗಳ ಗ್ರಂಥಗಳ ಆಧಾರದಿಂದ ಬರೆದಿರಬೇಕು. ತಮಿಳಿನಲ್ಲಿರುವ ಎಟ್ಟುತ್ತು (ಅಕ್ಷರ), ಶುವಡಿ (ಪುಸ್ತಕ) ಎಂಬ ದೇಶ್ಯಶಬ್ದಗಳು ಅಗಸ್ತ್ಯನು ವರ್ಣಮಾಲೆಯನ್ನು ತರಲಿಲ್ಲ ಎಂಬಂಶವನ್ನು ವ್ಯಕ್ತಪಡಿಸುತ್ತವೆ. ಅಗಸ್ತ್ಯನ ಕಥೆಗೆ ಆತನು ಮೊತ್ತಮೊದಲು ತಮಿಳನ್ನು ಸಹಾನುಭೂತಿಯಿಂದ ವೃದ್ಧಿಗೊಳಿಸಿದವರಲ್ಲಿ ಮುಖ್ಯನು ಎಂದು ಅರ್ಥಮಾಡಬೇಕು. ತಮಿಳಿನಲ್ಲಿ ಸಂಸ್ಕೃತ ಪದಗಳನ್ನು ಸ್ವಲ್ಪಮಟ್ಟಿಗೆ ಬಳಕೊಂಡಿರುವ ವಿಪುಲವಾದ ಶಬ್ದಸೌಂದರ್ಯವೂ ವಿಸ್ತಾರವಾದ ಸಾಹಿತ್ಯವೂ ಇವೆ. ತಮಿಳಿಗೂ ಕನ್ನಡಕ್ಕೂ ಇರುವ ಸಂಬಂಧವು ಆ ಭಾಷೆಗೂ ಉಳಿದ ದ್ರಾವಿಡಭಾಷೆಗಳಿಗೂ ಇರುವ ಸಂಬಂಧಕ್ಕಿಂತ ನಿಕಟತರವಾದುದು.

ಮಲಯಾಳ.

ಮಲಯಾಳ ಎಂಬುದು ಪರ್ವತವಾಚಿಯಾದ ಮಲ ಎಂಬ ಮಾತಿನಿಂದಲೂ ಆಳ್ ಎಂಬ ಧಾತುವಿನಿಂದ ಹುಟ್ಟಿ ಆಳಿಕೆ ಎಂಬ ಅರ್ಥವನ್ನು ಕೊಡುವ ಆಳ ಎಂಬ ಮಾತಿನಿಂದಲೂ ಕೂಡಿ ಪರ್ವತರಾಜ್ಯ ಎಂಬ ಅರ್ಥವನ್ನು ಕೊಡುವುದಲ್ಲದೆ ಅಲ್ಲಿಯ ಭಾಷೆಗೂ ಹೆಸರಾಗಿದೆ. ಈ ಭಾಷೆ ಬಹಳ ಕಾಲಕ್ಕೆ ಹಿಂದೆ ತಮಿಳಿನಿಂದ ಒಂದು ಶಾಖೆಯಾಗಿ ಹುಟ್ಟಿತೆಂದೂ ಈಗ ಮುಖ್ಯವಾಗಿ ಆಖ್ಯಾತ ವಿಭಕ್ತಿಗಳ ಪರಿತ್ಯಾಗದಿಂದಲೂ ಅಧಿಕವಾದ ಸಂಸ್ಕೃತ ಶಬ್ದಗಳ ಸ್ವೀಕಾರ

---

1 ಇಲಕ್ಕಿಯವಿನ್ರಿಯಿಲಕ್ಕಣವಿನ್ರೇ (ಪೇರಗತ್ತಿಯಂ).

ದಿಂದಲೂ ತಮಿಳಿನಿಂದ ಭೇದಪನ್ನು ಹೊಂದಿದೆಯೆಂದೂ ಡಾಕ್ಟರ್ ಕಾಲ್ಡ್ವೆಲ್ ಅಭಿಪ್ರಾಯಪಡುತ್ತಾರೆ. 13 ನೆಯ ಶತಮಾನವಾದ ಮೇಲೆ ಆಖ್ಯಾತ ವಿಭಕ್ತಿಗಳ ತ್ಯಾಗವು ಆರಂಭವಾಗಿ 15 ನೆಯ ಶತಮಾದ ಅಂತ್ಯದೊಳಗಾಗಿ ಆ ವಿಭಕ್ತಿಗಳು ಸಂಪೂರ್ಣವಾಗಿ ಮಾಯುವಾದುವು. 16 ನೆಯ ಶತಮಾನದಲ್ಲಿ ಬಾಳಿದ ಪ್ರಸಿದ್ಧ ಗ್ರಂಥಕರ್ತನಾದ ತುಂಜತ್ತು ಎಳುತ್ತಚ್ಚನ್ ಎಂಬವನು ತಮಿಳು ದೇಶದಲ್ಲಿ ಸಂಸ್ಕೃತ ಗ್ರಂಥಗಳನ್ನು ಬರೆವುದಕ್ಕೆ ಉಪಯೋಗಿಸುವ ಗ್ರಂಥಲಿಪಿಯಿಂದ ಹುಟ್ಟಿರಬಹುದಾದ ಈಗಿನ ಮಲಯಾಳ ಲಿಪಿಯನ್ನು ಪ್ರಚಾರಕ್ಕೆ ತಂದನು ಎಂದು ಹೇಳುತ್ತಾರೆ ದ್ರಾವಿಡ ಭಾಷೆಗಳೊಳಗೆ ಮಲಯಾಳದಲ್ಲಿ ಸಂಸ್ಕೃತ ಪದಗಳು ಬಹಳ ಹೆಚ್ಚು; ತಮಿಳಿನಲ್ಲಿ ಬಹಳ ಕಡಮೆ.

ತೆ ಲು ಗು .

ದ್ರಾವಿಡ ಭಾಷೆಗಳೊಳಗೆ ಮಾಧುರ್ಯ ವಿಷಯದಲ್ಲಿ ತೆಲುಗು ಅಗ್ರಸ್ಥಾನವನ್ನು ಹೊಂದಿದೆ ಎನ್ನುತ್ತಾರೆ. ಯೂರೋಪಿಯನರು ಈ ಭಾಷೆಯನ್ನು ಜೆಂಟೂ ಎಂದು ಕರೆದರು: ಈ ಪದವು ಕ್ರಿಸ್ತನಲ್ಲದವನು ಎಂಬ ಅರ್ಥವನ್ನು ಕೊಡುವ ಜೆಂಟಿಯೋ ಎಂಬ ಪೋರ್ತುಗೀಸ್ ಶಬ್ದದ ಅಪಭ್ರಂಶವು. ಮೊದಲು ಮಹಮದೀಯರನ್ನು ಬಿಟ್ಟು ಎಲ್ಲ ಹಿಂದುಗಳಿಗೂ ಹೆಸರಾಗಿದ್ದ ಜೆಂಟೂ ಎಂಬ ಪದವು ಕೊನೆಗೆ ತೆಲುಗರಿಗೆ ಮಾತ್ರ ಹೆಸರಾಗಿ ನಿಂತಿತು. ಸಂಸ್ಕೃತ ಗ್ರಂಥಕರ್ತರು ತೆಲುಗಿಗೆ ಆಂಧ್ರ ಎಂಬ ಹೆಸರನ್ನು ಹೇಳಿದ್ದಾರೆ. ಈ ಆಂಧ್ರ ಶಬ್ದವು ಹಿಂದೂ ಜನದ ಒಂದು ಪಂಗಡಕ್ಕೆ ಹೆಸರಾಗಿ ಐತರೇಯ ಬ್ರಾಹ್ಮಣ, ರಾಮಾಯಣ, ಮಹಾಭಾರತ, ಕ್ರಿಸ್ತ ಪೂರ್ವ 3ನೆಯ ಶತಮಾನದಲ್ಲಿ ಹುಟ್ಟಿದ ಅಶೋಕನ ಶಾಸನಗಳು ಇವುಗಳಲ್ಲಿ ಉಪಯೋಗಿಸಿದೆ. ಪ್ಲಿನಿ ಎಂಬ ಗ್ರಂಥಕರ್ತನು ಆಂಧ್ರರನ್ನು ಅಂದರೀ ಎಂದು ಕರೆಯುತ್ತಾನೆ. 7ನೆಯ ಶತಮಾನದ ಮಧ್ಯದಲ್ಲಿ ಇಂಡಿಯಾವಿನಲ್ಲಿದ್ದ ಹ್ವೆನ್‌ತ್ಸಂಗ್ ಎಂಬ ಚೀನಯಾತ್ರಿಕನು ಆಂಧ್ರ ಭಾಷೆಯನ್ನು ಹೇಳಿ ಅದಕ್ಕೂ ಮಧ್ಯ ಇಂಡಿಯಾವಿನ ಭಾಷೆಗೂ ವ್ಯತ್ಯಾಸವುಂಟೆಂದೂ ಆದರೆ ಲಿಪಿಗಳು ಮಾತ್ರ ಬಹಳ ಮಟ್ಟಿಗೆ ಒಂದೇ ಎಂದೂ ಬರೆದಿದ್ದಾನೆ.

ತೆಲುಗು ಎಂಬುದಕ್ಕೆ ತೆಲುಂಗು, ತೆನುಗು, ತೆನುಂಗು, ತೆಲಿಂಗ, ತ್ರೈಲಿಂಗ ಎಂಬ ರೂಪಾಂತರಗಳೂ ಉಂಟು. ಅದು ತ್ರಿಲಿಂಗ ಎಂಬುದರಿಂದ ಹುಟ್ಟಿದೆ ಎಂದೂ ತ್ರಿಲಿಂಗ ಎಂಬುದಕ್ಕೆ ಮೂರು ಲಿಂಗಗಳ, ಎಂದರೆ ಮೂರು ಪ್ರಖ್ಯಾತವಾದ ಲಿಂಗಗಳುಳ್ಳ ದೇವಸ್ಥಾನಗಳನ್ನು ಎಲ್ಲೆಗಳಾಗಿ ಪಡೆದಿರುವ ದೇಶದ, ಭಾಷೆ ಎಂದು ಅರ್ಥವೆಂದೂ ಹೇಳುತ್ತಾರೆ. ತೆಲುಗು ದೇಶದ ಎಲ್ಲೆಗಳನ್ನು ನಿರ್ದೇಶಿಸುವ ಕಾಳೇಶ್ವರ, ಶ್ರೀಶೈಲ, ಭೀಮೇಶ್ವರ ಎಂಬ ಪರ್ವತಗಳ ಮೇಲೆ

ಶಿವನು ಲಿಂಗರೂಪವಾಗಿ ಅವತರಿಸಿದನೆಂದು ಇತಿಹಾಸವಿದೆ. ತ್ರಿಲಿಂಗ ಎಂಬುದರ ಪ್ರಾಕೃತ ರೂಪವೇ ತೆಲಿಂಗ ಎಂಬುದು. ತೆಲುಗು ದೇಶವನ್ನು ಮಹಮದೀಯರು ತೆಲಿಂಗಾನ ಎಂದು ಕರೆದರು. ತೆಲುಗು ದೇಶಕ್ಕೆ ತ್ರಿಲಿಂಗ ಎಂಬ ಹೆಸರಲ್ಲದೆ ತ್ರಿಕಲಿಂಗ ಎಂಬ ಹೆಸರೂ ಉಂಟು. ತೆಲುಗು ಪಂಡಿತರು ತೆನುಗು ಎಂಬ ಹೆಸರು ತೇನೆ (ಜೇನುತುಪ್ಪ) ಎಂಬ ಶಬ್ದದಿಂದ ಹುಟ್ಟಿ ತನ್ನ ಭಾಷೆಯ ಮಾಧುರ್ಯವನ್ನು ಸೂಚಿಸುತ್ತದೆ ಎನ್ನುವರು. ತಮಿಳು ದೇಶದಲ್ಲಿ ತೆಲುಗಿಗೆ ವಡುಗು ಎಂದೂ ತೆಲುಗರಿಗೆ ವಡುಗರ್ ಎಂದೂ ಹೆಸರುಗಳು ಪ್ರಚಾರದಲ್ಲಿವೆ; ತೆಲುಗು ದೇಶವು ತಮಿಳು ದೇಶದ ಉತ್ತರಕ್ಕೆ ಇರುವುದರಿಂದ ಈ ಹೆಸರುಗಳು ಉತ್ತರದಿಗ್ವಾಚಿಯಾದ ವಡ ಎಂಬ ಶಬ್ದದಿಂದ ಬಂದಿವೆ. ತಮಿಳಿನ ಹಳೆಯ ಗ್ರಂಥಗಳಲ್ಲಿ ವಡುಗರ್ ಎಂಬ ಹೆಸರು ತೆಲುಗರಿಗೆ ಮಾತ್ರವೇ ಅಲ್ಲದೆ ಕನ್ನಡಿಗರಿಗೂ ಉಪಯೋಗಿಸಿದೆ. ತೆಲುಗಿನಲ್ಲಿ ಮೊತ್ತಮೊದಲು ವ್ಯಾಕರಣವನ್ನು ರಚಿಸಿದವನು ಆಂಧ್ರ ರಾಯನ ಆಸ್ಥಾನದಲ್ಲಿದ್ದ ಕಣ್ವ ಋಷಿಯೆಂದು ಇತಿಹಾಸವಿದೆ. 13ನೆಯ ಶತಮಾನದ ಆದಿಭಾಗದಲ್ಲಿದ್ದ ಅಥರ್ವಣಾಚಾರ್ಯನು ತನ್ನ ತ್ರಿಲಿಂಗ ಶಬ್ದಾನುಶಾಸನದಲ್ಲಿ ಕಣ್ವನ ಹೆಸರಿನ ಜತೆಗೆ ಬೃಹಸ್ಪತಿ, ಹೇಮಚಂದ್ರ, ಪುಷ್ಪದಂತ, ರಾವಣ, ಗೌತಮ, ಧರ್ಮರಾಜ ಇವರುಗಳ ಹೆಸರನ್ನೂ ಹೇಳಿ ಇವರೆಲ್ಲರೂ ತೆಲುಗು ಭಾಷೆಗೆ ವ್ಯಾಕರಣ ಕರ್ತೃಗಳು ಎಂದು ಹೇಳುತ್ತಾನೆ. ತಮಿಳಿನಲ್ಲಿ ಅಗಸ್ತ್ಯ ಋಷಿಯೊಬ್ಬನು ಮಾತ್ರ ವ್ಯಾಕರಣ ಕರ್ತೃ; ಇಲ್ಲಿ ಹಲವರಿದ್ದಾರೆ—ಲಂಕೇಶ್ವರನಾದ ರಾವಣನೂ ಸೇರಿದ್ದಾನೆ.

ಕನ್ನಡ.

ತಮಿಳು ತೆಲುಗುಗಳಲ್ಲಿರುವಂತೆ ಕನ್ನಡದಲ್ಲಿ ಗ್ರಂಥರಚನೆ ಆವನೋ ಒಬ್ಬ ಋಷಿಯಿಂದ ಆರಂಭವಾದಂತೆ ಪ್ರತೀತಿಯಿಲ್ಲ. ಕನ್ನಡ ಶಬ್ದದ ವ್ಯುತ್ಪತ್ತಿಯ ವಿಷಯವಾಗಿ ಕೆಲವು ಅಭಿಪ್ರಾಯಗಳನ್ನು ಆಗಲೇ ಪ್ರಥಮ ಸಂಪುಟದ ಅವತರಣಿಕೆಯಲ್ಲಿ (ಪುಟ 5) ಕೊಟ್ಟಿದೆ. ಬಹುಶಃ ಕರ್ಣಾಟ ಎಂಬುದು ಕನ್ನಡ ಎಂಬುದರ ಸಂಸ್ಕೃತ ರೂಪವಾಗಿರಬೇಕು. ಈ ಸಂದರ್ಭದಲ್ಲಿ ಕ್ರಿಸ್ತಶಕದ ಆದಿ ಶತಮಾನಗಳಲ್ಲಿ ಮೈಸೂರು ದೇಶದ ದಕ್ಷಿಣಭಾಗದಲ್ಲಿದ್ದ ಪುನ್ನಾಡು ಎಂಬ ರಾಜ್ಯದ ಸಂಸ್ಕೃತ ನಾಮವಾದ ಪುನ್ನಾಟ ಎಂಬುದನ್ನು ಹೋಲಿಸಿ ನೋಡಬಹುದು. 2ನೆಯ ಶತಮಾನದಲ್ಲಿದ್ದ ಟಾಲಮಿ ಎಂಬ ಗ್ರಂಥಕರ್ತನು ಈ ರಾಜ್ಯವನ್ನು ಪೂನ್ನತ ಎಂದು ಕರೆಯುತ್ತಾನೆ. ಕನ್ನಡ ಎಂಬುದರ ಆದಿರೂಪವು ಕನ್ನಾಡು ಎಂದು ಇದ್ದಿರಬೇಕು (ಪುನ್ನಾಡು ಎಂಬುದನ್ನು ಹೋಲಿಸಿ); ಬಳಿಕ ಇದು ಕನ್ನಡು ಎಂದೂ ತರುವಾಯ ಕನ್ನಡ ಎಂದೂ ಆಗಿರ

ಬೇಕು. ಕನ್ನಡು ಎಂಬ ರೂಪವು ಕನ್ನಡ ದೇಶದ ಕೆಲವು ಪ್ರಾಂತಗಳಲ್ಲಿ ಈಗ ಲೂ ಕಿವಿಗೆ ಬೀಳುತ್ತದೆ. ಕರಿಯನಾಡು ಎಂಬ ವ್ಯುತ್ಪತ್ತಿ ಹೊರಗಣವರಿಗೆ ಉಚಿತವಾಗಿ ತೋರಬಹುದು ; ಆದರೆ ಕನ್ನಡಿಗರು ತಮ್ಮ ಭಾಷೆಯನ್ನು 'ಕರಿಯನಾಡಿನ ಭಾಷೆ' ಎಂದು ಕರೆದಿರಲಾರರು. ತಮಿಳರೂ ತೆಲುಗರೂ ತಂ ತಮ್ಮ ಭಾಷೆಗಳ ಹೆಸರುಗಳು ಮಾಧುರ್ಯವಾಚಿಯಾದ ಪದಗಳಿಂದ (ತಮಿಳ್', ತೇನೆ) ಹುಟ್ಟಿದುವೆಂದು ಹೇಳುತ್ತಾರೆ. ಕನ್ನಡಿಗರೂ ತಮ್ಮ ಭಾಷೆಯ ಹೆಸರು ಒಂದು ಸುಗುಣವಾಚಿಯಾದ ಶಬ್ದದಿಂದ ಹುಟ್ಟಿದೆ ಎಂದು ಭಾವಿಸಿದರೆ ಆಕ್ಷೇ ಪಣೆಗೆ ಕಾರಣವಿಲ್ಲ. ಈ ಶಬ್ದವು ಪರಿಮಳವಾಚಿಯಾದ ಕಮ್ಮಿತು ಎಂಬುದು. ಕಮ್ಮಿತು, ನಾಡು ಎಂಬ ಪದಗಳು ಸೇರಿ ಕನ್ನಾಡು ಎಂದು ಆಗಿವೆ. ಕನ್ನಾಡು ಎಂಬುದು ಕನ್ನಡು ಎಂದಾಗಿ ಕೊನೆಗೆ ಕನ್ನಡ ಎಂಬ ರೂಪವನ್ನು ಹೊಂದಿತು. ಅಂತು ಕನ್ನಡ ಎಂಬ ಪದಕ್ಕೆ ಪರಿಮಳವಿಶಿಷ್ಟವಾದ ದೇಶದ ಭಾಷೆ ಎಂದು ಅರ್ಥವಾಗುವುದು. ಕನ್ನಡ ದೇಶವು ಗಂಧದ ಮರಸ ಕಾಡುಗಳಿಗೂ ಪದ್ಮಾ ಕರಗಳಿಗೂ ಪ್ರಸಿದ್ಧಿಯನ್ನು ಪಡೆದಿರುವುದರಿಂದ ಈ ವಿಶೇಷಣವು ಅದಕ್ಕೆ ಅನು ರೂಪವಾದುದು ಎಂಬುದರಲ್ಲಿ ಸಂಶಯವಿಲ್ಲ[1].

11ನೆಯ ಶತಮಾನದಲ್ಲಿ ಕಲಿಂಗತ್ತುಪ್ಪರಣಿ ಎಂಬ ತಮಿಳು ಗ್ರಂಥವನ್ನು ಬರೆದ ಜಯಂಗೊಂಡಾರ್ ಎಂಬ ಕವಿ ಕೆಲವು ತೆಲುಗು ಪದಗಳೂ ಹಲವು ತಮಿಳು ಪದಗಳೂ ಸೇರಿ ಕನ್ನಡ ಭಾಷೆಯುಂಟಾಗಿದೆ ಎಂದು ತನ್ನ ವಿಚಿತ್ರ ವಾದ ಅಭಿಪ್ರಾಯವನ್ನು ತಿಳಿಸಿದ್ದಾನೆ[2]. ಆದರೆ ಪೇರಗತ್ತಿಯಂ, ಕಂಬರಾಮಾ ಯಣಂ ಮೊದಲಾದ ಗ್ರಂಥಗಳಲ್ಲಿ ಕನ್ನಡವು ಸ್ವತಂತ್ರ ಭಾಷೆ ಎಂದು ಹೇಳಿದೆ. 2ನೆಯ ಶತಮಾನದಲ್ಲಿ ಹುಟ್ಟಿತೆಂದು ಹೇಳುವ ಶಿಲಪ್ಪದಿಕಾರದಲ್ಲಿ ಕರುನಾಡರ್ ಎಂಬ ಪದವೂ ಶಡೈಯನ್ ಪರಾಂತಕನ್ ಎಂಬ ಪಾಂಡ್ಯ ರಾಜನು 770ರಲ್ಲಿ

---

1. ಶ್ರೀಮಾನ್ ಆರ್. ತಾತಾಚಾರ್ಯರು ಎಂ. ಎ. ತಮ್ಮ ಉದ್ಯಾಯನ ಚರಿತೆಯ ಈ ಪದ್ಯದಲ್ಲಿ ಇದೇ ಭಾವವನ್ನು ಸ್ಪಷ್ಟ ಮಾಡಿದ್ದಾರೆ:—

ಕಮ್ಮಿತಾದುದು ನಾಡು ನಡೆಯಿಂ । ಕಮ್ಮಿತಾದುದು ನಾಡು ನುಡಿಯಿಂ।
ಕಮ್ಮಿತಾದುದು ಚಂದನೋರ್ವಿ ರುಹದಿನೀ ನಾಡು ||
ಕಮ್ಮಿತಾದುದು ಕಮ್ಮಯಿಸುವಾ।ಕಮ್ಮರಲ್ಗಳಿನಿನಿತು ಕಂಪಿಂ।
ಕಮ್ಮಿತಲ್ಲದೆ ಕಪ್ಪು ಕನ್ನಡ ಕೆಂತು ಸಮನಿಸಿತು ||

2. ಶಿಲವಡುಗುಂ ಪಲತಮಿಟುಂ ಕುಟಿಜಿತ್ಯರುಕರು ನಾಡಿಯರ್.

ಕೊಟ್ಟ ವೇಳ್ವಿಕುಡಿ ತಾಮ್ರಶಾಸನದಲ್ಲಿ ಕರುನಾಡಗನ್ ಎಂಬ ಪದವೂ ದೊರೆಯುತ್ತವೆ ಎಂದು ಹಿಂದೆಯೇ ತಿಳಿಸಿದೆ.[1] ತುಳುಗೂ ಕನ್ನಡಕ್ಕೂ ನಿಕಟವಾದ ಸಂಬಂಧವಿದೆ. ಈ ಎರಡು ಭಾಷೆಗಳಲ್ಲಿ ಮಾತ್ರ ಕ್ರಮವಾದ ಸ್ತ್ರೀಲಿಂಗವುಂಟು. ನಾಮಾಖ್ಯಾತ ವಿಭಕ್ತಿಗಳು ಎರಡು ಭಾಷೆಗಳಲ್ಲಿಯೂ ಬಹುಮಟ್ಟಿಗೆ ಒಂದೇ ಆಗಿವೆ. ಹೀಗೆಯೇ ಇನ್ನೂ ಹಲವು ವ್ಯಾಕರಣ ಪ್ರಕ್ರಿಯೆಗಳಲ್ಲಿ ಸಾಮ್ಯವಿದೆ ಕನ್ನಡಕ್ಕೂ ತೆಲುಗಿಗೂ ಕೆಲವಂಶಗಳಲ್ಲಿ ಸಾಮ್ಯವಿದ್ದರೂ ಭೇದವೇ ಹೆಚ್ಚು.

ಕನ್ನಡದ ಉಪಭಾಷೆಗಳು.

ದಕ್ಷಿಣದ ವ್ಯಾವಹಾರಿಕದ್ರಾವಿಡ ಭಾಷೆಗಳಾದ ತುಳು, ಕೊಡಗು, ತೊದ, ಕೋತ, ಬಡಗ ಎಂಬುವನ್ನು ಕುರಿತು ಒಂದೆರಡು ಮಾತುಗಳನ್ನು ಆಡುತ್ತೇನೆ. ಕೆಳಗಣ ಹೇಳಿಕೆಗಳ ಮೇರೆಗೆ ಈ ಭಾಷೆಗಳಿಗೂ ಕನ್ನಡಕ್ಕೂ ಇರುವ ಸಂಬಂಧವು ಉಳಿದ ದ್ರಾವಿಡ ಭಾಷೆಗಳಿಗೆ ಇರುವುದಕ್ಕಿಂತ ನಿಕಟತರವಾಗಿರುವುದರಿಂದ ಇವುಗಳನ್ನು ಕನ್ನಡದ ಉಪಭಾಷೆಗಳು ಎನ್ನಬಹುದು:—"ತುಳುವಿಗೂ ಕನ್ನಡಕ್ಕೂ ವಿಶೇಷ ಭೇದವಿಲ್ಲ"; "ಕೊಡಗು ಹಳಗನ್ನಡಕ್ಕೂ ತುಳುವಿಗೂ ಮಧ್ಯವರ್ತಿಯಾಗಿದೆ ಎಂದು ಹೇಳಬಹುದು"; "ಕೋತ ಎಂಬುದು ಕನ್ನಡದ ಅತಿ ಗ್ರಾಮ್ಯವಾದ ಉಪಭಾಷೆ ಎನ್ನಬಹುದು"; "ಬಡಗ ಎಂಬುದು ಕನ್ನಡದ ಪ್ರಾಚೀನವಾದ ಉಪಭಾಷೆ"; "ತೊದಭಾಷೆ ಮೊದಲು ಹಳಗನ್ನಡವೇ ಆಗಿದ್ದಂತೆ ತೋರುತ್ತದೆ; ಪ್ರತ್ಯೇಕವಾದ ಉಷಭಾಷೆಯಲ್ಲ."

ನೀಲಗಿರಿಯ ತೊದವರ ಭಾಷೆಯಾದ ತೊದ ಎಂಬುದರಲ್ಲಿ ಫ ಎಂಬ ಧ್ವನಿಯಿರುವುದೊಂದು ವಿಶೇಷ: ಉದಾಹರಣ—ಪುಫ್ (ಹುಳು). ಈ ಭಾಷೆಯಲ್ಲಿ ನಾಮವಿಭಕ್ತಿ ಪ್ರತ್ಯಯಗಳು ಬಹಳ ಕಡಮೆ; ಪ್ರಥಮಾ ದ್ವಿತೀಯಾ ಷಷ್ಠಿಗಳಿಗೆ ವ್ಯತ್ಯಾಸವೇ ಇಲ್ಲ. ತೊದವರ ಹೆಸರು ಮೊತ್ತಮೊದಲು 1117ರಲ್ಲಿ ಹುಟ್ಟಿದ ಚಾಮರಾಜನಗರದ 83ನೆಯ ಶಾಸನದಲ್ಲಿ ದೊರೆಯುತ್ತದೆ. ಇದರಲ್ಲಿ ಹೊಯ್ಸಳ ರಾಜನಾದ ವಿಷ್ಣುವರ್ಧನನ ದಂಡನಾಯಕ ಪುಣಿಸನು ನೀಲಗಿರಿಯನ್ನು ಜಯಿಸಿದಾಗ ತೊದವರಿಗೆ ಭೀತಿಯುಂಟುಮಾಡಿದನು ಎಂದು ಹೇಳಿದೆ. ನೀಲಗಿರಿಯ ಕೋತರ ಭಾಷೆಯಾದ ಕೋತ ಎಂಬುದು ಹಿಂಸೆಗೆ ಗುರಿ ಮಾಡಲ್ಪಟ್ಟ ನೀಚ ಜಾತಿಯ ಒಂದು ಪಂಗಡದಿಂದ ಬಹಳ ಕಾಲಕ್ಕೆ ಹಿಂದೆ ಅಲ್ಲಿಗೆ ಒಯ್ಯಲ್ಪಟ್ಟಿತೆಂದು ಹೇಳುತ್ತಾರೆ. ಈ ಭಾಷೆಯಲ್ಲಿ ಷಷ್ಠಿಗೆ ಅ ಎಂಬುದೂ

---

1. I, ಅವತರಣಿಕೆ 5–6.

ಚತುರ್ಥಿಗೆ ಕೆ ಎಂಬುದೂ ಸಪ್ತಮಿಗೆ ಒಳ್ಗೆ ಎಂಬುದೂ ಪ್ರತ್ಯಯಗಳು ; ಕ್ರಿಯಾರ್ಥವನ್ನು (ತುಮುನ್) ತೋರಿಸಲು ಧಾತುವಿಗೆ ಅಲಿಕ್ ಎಂಬ ಪ್ರತ್ಯಯವು ಸೇರಿಸಲ್ಪಡುತ್ತದೆ—ಉದಾಹರಣ: ತಿನ್ + ಅಲಿಕ್, ತಿನಲಿಕ್ (ತಿನಲ್ಕೆ). ಇದೆಲ್ಲಾ ಕನ್ನಡಕ್ಕೆ ಈ ಭಾಷೆಯ ನಿಕಟಸಂಬಂಧವನ್ನು ವ್ಯಕ್ತಮಾಡುತ್ತದೆ ನೀಲಗಿರಿಯಲ್ಲಿ ವಾಸಮಾಡುವವರೊಳಗೆ ಅಧಿಕ ಸಂಖ್ಯೆಯವರಾದ ಬಡಗರ ಭಾಷೆಯೇ ಬಡಗ ಎಂಬುದು. ಇದು ಈಗ ಬಳಕೆಯಲ್ಲಿರುವ ಕನ್ನಡಕ್ಕಿಂತ ಹಳೆಯ ರೂಪವುಳ್ಳದಾಗಿ ಕೆಲವಂಶಗಳಲ್ಲಿ ಪೂರ್ವಸಾಹಿತ್ಯದ ಭಾಷೆಯನ್ನು ಹೋಲುತ್ತದೆ. ಇದರಲ್ಲಿ ,ಱ ಱ ಎಂಬ ಧ್ವನಿಗಳು ಈಗಲೂ ಇವೆ : ಅದರೆ ಕೆಲವು ಸಂದರ್ಭಗಳಲ್ಲಿ ಳಕಾರದ ಸ್ಥಾನದಲ್ಲಿ ಱಕಾರವು ಬರುತ್ತದೆ: ಆಱೆ, ಏಱು, ಕುಱಿ ಕೆಱೆ; ಇರುಳು ಎಂಬುದಕ್ಕೆ ಇಱ್ರ್, ತಿಂಗಳು ಎಂಬುದಕ್ಕೆ ತಿಂಗು, ಅವಳು ಎಂಬುದಕ್ಕೆ ಅವ, ಮಕ್ಕಳು ಎಂಬುದಕ್ಕೆ ಮಕ, ಱ ಱ ಱ
ಱಕಾರದ ಪ್ರಯೋಗದಲ್ಲಿ ಒಂದು ವಿಶೇಷವುಂಟು ; ಏನೆಂದರೆ, ಅದು ಸಾಧಾರಣವಾಗಿ ಪದದ ಪ್ರಥಮಾಕ್ಷರಕ್ಕಾಗಲಿ ದ್ವಿತೀಯಾಕ್ಷರಕ್ಕಾಗಲಿ ಒತ್ತಕ್ಷರವಾಗಿ ಬರುವುದೇ ಹೊರತು ಕನ್ನಡ ಮುಂತಾದ ಇತರ ಭಾಷೆಗಳಲ್ಲಿ ಬರುವಂತೆ ಮುಗ್ಗುಲಕ್ಷರವಾಗಿ ಬರುವುದಿಲ್ಲ:ಕೇಱು ಎಂಬುದಕ್ಕೆ ಕೇ, ಬೀಱು ಎಂಬುದಕ್ಕೆ ಱ
ಬೂ, ಮುಱಿಗು ಎಂಬುದಕ್ಕೆ ಮುಗ್ಗ, ಹೊಗಱು ಎಂಬುದಕ್ಕೆ ಹೊಗು, ಱ ಱ ಱ
ಹಾಱು ಎಂಬುದಕ್ಕೆ ಹಾ, ಹಱು ಎಂಬುದಕ್ಕೆ ಹಯೆ, ಹೊಱೆ ಎಂಬುದಕ್ಕೆ ಱ ಱ
ಹೊಯೆ, ಗುಱಿ ಎಂಬುದಕ್ಕೆ ಗುಯಿ. ಈ ಭಾಷೆಯಲ್ಲಿ ನಾಂ ಎಂಬುದು ಱ ಱ
ಉತ್ತಮಪುರುಷ ಸರ್ವನಾಮೈಕವಚನ ; ಗ ಎಂಬುದು ಚತುರ್ಥೀ ಪ್ರತ್ಯಯ—ಹೊಲಗ (ಹೊಲಕ್ಕೆ) ; ಭೂತಕ್ರಿಯೆ ಹಳಗನ್ನಡ ರೂಪವನ್ನು ಹೋಲುತ್ತದೆ—ಮಾಡಿದೆಂ. ಪುರಾತನತಮಿಳು ಸಾಹಿತ್ಯದಲ್ಲಿ ಬಡಗರ ಹೆಸರು ಉಕ್ತವಾಗಿದೆ: ಅಗನಾನೂರು ಎಂಬ ಕವಿಸೂಕ್ತಿಕದಂಬದಲ್ಲಿ ನಕ್ಕೀರರ್ ಎಂಬ ಪುರಾತನ ಕವಿಯ ಉಕ್ತಿಯಾದ 253ನೆಯ ಪದ್ಯದಲ್ಲಿ ಮೈಸೂರರಸನು (ಎರುಮೈಯೂರಾನ್-ಮಹಿಷಪುರದವನು)ಬಡಗರ ಅನುಬಂಧಿ ಎಂದು ಹೇಳಿದೆ. ತುಳು ಸಾಹಿತ್ಯ ರಹಿತವಾಗಿದ್ದರೂ ಉಚ್ಚಪರಿಣತಿಯನ್ನು ಪಡೆದಿರುವ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ. ವಿನೀತ, ಸೌಮ್ಯ ಎಂಬ ಅರ್ಥವನ್ನು ಕೊಡುವ ತುಳು ಶಬ್ದವು ಜನಕ್ಕೆ ಅನ್ವಯಿಸುತ್ತದೆಯೇ ಹೊರತು ಭಾಷೆಗಲ್ಲ. ತುಳು ಜನರು ದ್ರಾವಿಡರೊಳಗೆ ಪೂರ್ವ ಪದ್ಧತಿ ಪಾಲನದಲ್ಲಿ ಅಗ್ರಗಣ್ಯರೆಂದು ಹೆಸರು

ಪಡೆದಿದ್ದಾರೆ. ತುಳು ಭಾಷೆಗೂ ಕೊಡಗು ಭಾಷೆಗೂ ವಿಶೇಷ ವ್ಯತ್ಯಾಸವಿಲ್ಲ; ತುಳುವಿಗೂ ತಮಿಳಿಗೂ ಅತ್ಯಂತ ವೈಲಕ್ಷಣ್ಯವಿದೆ. ಕೊಡಗುದೇಶದವರ ಭಾಷೆಗೆ ಕೊಡಗು ಎಂದು ಹೆಸರು. ಈ ಪದವು ಪಶ್ಚಿಮದಿಗ್ವಾಚಿಯಾದ ಕುಡ ಎಂಬ ಶಬ್ದದಿಂದ ಹುಟ್ಟಿ ಪಶ್ಚಿಮದೇಶ ಎಂಬರ್ಥವನ್ನು ಕೊಡುತ್ತದೆ. ಕೊಡಗರ ಹೆಸರು ಮೊತ್ತಮೊದಲು 1174ರಲ್ಲಿ ಹುಟ್ಟಿದ ಹುಣಸೂರು 20ನೆಯ ಶಾಸನದಲ್ಲಿ ಉಕ್ತವಾಗಿದೆ. ಇದರಲ್ಲಿ ಚಂಗಾಳ್ವ ರಾಜನಾದ ಪೆಮ್ಮಿವೀರಪ್ಪನು ಎಲ್ಲಾ ನಾಡುಗಳ ಕೊಡಗರ ಸಹಾಯದಿಂದ ಹೊಯ್ಸಳ ರಾಜನಾದ 2ನೆಯ ಬಲ್ಲಾಳನಿಂದ ಮಹಾದೇವನೆಂಬ ಚಂಗಾಳ್ವ ರಾಜನನ್ನು ಅಡಗಿಸಲು ಕಳುಹಲ್ಪಟ್ಟು ಯುದ್ಧದಲ್ಲಿ ಅವನನ್ನು ಕೊಂದ ದಂಡನಾಯಕ ಬಿಟ್ಟರಸನನ್ನು ಇದಿರಿಸಿ ಸೋಲಿಸಿದಂತೆ ಹೇಳಿದೆ. ಕೊಡಗುಭಾಷೆ ಆದನ್ನಾಡುವವರ ವಿವಿಕ್ತವಾದ ಸ್ಥಿತಿಯಿಂದ ಹೆಚ್ಚಾಗಿ ಮಾರ್ಪಾಡನ್ನು ಪಡೆದಿಲ್ಲ.

ಸುಮಾರು ಸಾವಿರ ವರ್ಷಕ್ಕೆ ಹಿಂದೆ ಕನ್ನಡದ ವ್ಯಾಪ್ತಿ.

ಸುಮಾರು ಸಾವಿರ ವರ್ಷಕ್ಕೆ ಹಿಂದೆ ಎಂದರೆ 9ನೆಯ ಶತಮಾನದ ಆದಿ ಭಾಗದಲ್ಲಿ, ಹಿಂದೆ ತಿಳಿಸಿದಂತೆ,[1] ಕನ್ನಡಭಾಷೆ ಕಾವೇರಿಯಿಂದ ಗೋದಾವರಿಯವರೆಗೂ ಪ್ರಚಾರದಲ್ಲಿದ್ದಿತೆಂದೂ ಕಿಸುವೊಳಲ್, ಕೊಪಣ ನಗರ, ಪುಲಿಗೆರೆ, ಒಂಕುಂದ ಇವುಗಳ ಮಧ್ಯಪ್ರದೇಶವೇ ತಿರುಳುಗನ್ನಡದ ನೆಲೆಯೆಂದೂ ನೃಪತುಂಗನ (815–877) ಕವಿರಾಜಮಾರ್ಗದ ಈ ಪದ್ಯಗಳಿಂದ ತಿಳಿಯುತ್ತದೆ:—

ಕಾವೇರಿಯಿಂದಮಾಗೋ।ದಾವರಿವರಮಿರ್ದ ನಾಡದಾ ಕನ್ನಡದೊಳ್।
ಭಾವಿಸಿದ ಜನಪದಂ ವಸು।ಧಾವಳಯವಿಲೀನವಿಶದ ವಿಷಯವಿಶೇಷಂ ||
ಆದಱೊಳಗಂ ಕಿಸುವೊಳಲಾ । ವಿದಿತ ಮಹಾ ಕೊಪಣ ನಗರದಾ
ಪುಲಿಗೆಱೆಯಾ।
ಸದಳಿಸ್ತುತನುಪ್ಪೊಂಕುಂ।ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ||

ಇಲ್ಲಿ ಹೇಳಿರುವ ವ್ಯಾಪ್ತಿ ಈಗ ಶುದ್ಧ ಮಹರಾಠ ದೇಶವೆಂದು ಭಾವಿಸಲ್ಪಟ್ಟಿರುವ ಪ್ರದೇಶದ ಅಧಿಕಭಾಗವನ್ನು ಒಳಕೊಂಡಿದೆ. ಆದರೂ ನೃಪತುಂಗನು ಹೇಳುವ ಕನ್ನಡ ಭಾಷೆಯು ಉತ್ತರ ದಿಕ್ಕಿನ ಎಲ್ಲೆಯ ವಿಷಯವಾಗಿ ಸಂದೇಹಪಡಬೇಕಾದುದಿಲ್ಲ. 9ನೆಯ ಶತಮಾನದಲ್ಲಿ ಮಹರಾಠ ದೇಶದ ಅಧಿಕ

---

1. I, ಉತ್ತರಣಿಕೆ, 4.

ಭಾಗದಲ್ಲಿ ಕನ್ನಡವು ಪ್ರಚಾರದಲ್ಲಿಗ್ದು ಮಹರಾಠ ಚಕ್ರಾಧಿಪತ್ಯವು ಆರಂಭವಾದಮೇಲೆ ಮಹರಾಠಿ ಭಾಷೆಯು ಆಕ್ರಮಣಕ್ಕೆ ಸ್ಥಳ ಕೊಡಬೇಕಾಗಿ ಬಂದಿತು. ಡಾಕ್ಟರ್ ಫ್ಲೀಟ್ ಹೇಳಿರುವಂತೆ[1] ಈಗ ಶುದ್ಧ ಮಹರಾಠ ಪ್ರಾಂತವೆಂದೆನಿಸಿಕೊಂಡಿರುವ ಕೊಲ್ಲಾಪುರವು ಪೂರ್ವಕಾಲದಲ್ಲಿ ಹಾಗಿರಲಿಲ್ಲ. ಇದಕ್ಕೆ ಕೊಲ್ಲಾಪುರ ಪಟ್ಟಣದ ಮಧ್ಯದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನದೊಳಗಣ ಕನ್ನಡ ಶಾಸನಗಳೂ ಕೊಲ್ಲಾಪುರದ ಜೈನಮಠದಲ್ಲಿರುವ ಕೈಬರಹದ ಕನ್ನಡ ಪುಸ್ತಕಗಳ ಅಧಿಕಸಂಖ್ಯೆಯೂ ಕೊಲ್ಲಾಪುರಪ್ರಾಂತದಲ್ಲಿ ಪ್ರಚಾರದಲ್ಲಿರುವ ಸಿರೋಲ್ (ಸಿರಿವೊಳಲ್) ಎಂಬುದೇ ಮುಂತಾದ ಸ್ಥಳೀಯ ಕನ್ನಡ ಹೆಸರುಗಳೂ ಕೊಲ್ಲಾಪುರದ ಲಕ್ಷ್ಮೀಸೇನ ಮಠಾಧಿಪತಿಗಳು ಕರಹಾಟಕಪ್ರಾಂತವೆಂಬ ಸಾತಾರಾಜಿಲ್ಲೆಯಲ್ಲಿರುವ ತಮ್ಮ ಶಿಷ್ಯ ವರ್ಗಕ್ಕೆ ಅದ್ಯಾಪಿ ಕಳುಹಿಸಿ ಕೊಡುತ್ತಿರುವ ಕನ್ನಡ ಶ್ರೀಮುಖಗಳೂ ಸಾಕಾದ ನಿದರ್ಶನಗಳಾಗಿವೆ. ಅಲ್ಲದೆ ಕೊಲ್ಲಾಪುರದಲ್ಲಿರುವ ರಾಜಕಾರ್ಯ ಪ್ರತಿನಿಧಿಗೆ (Political Agent) ಈಗಲೂ ಕರವೀರ ಇಲಾಖೆಯ ಮತ್ತು ಕರ್ನಾಟಕ ಪ್ರಾಂತದ ರಾಜಕಾರ್ಯ ಪ್ರತಿನಿಧಿ ಎಂಬ ಹೆಸರಿದೆಯೇ ಹೊರತು ದಕ್ಷಿಣ ಮಹಾರಾಷ್ಟ್ರದ ಅಥವಾ ದಕ್ಷಿಣ ಮಹಾರಾಠ ದೇಶದ ರಾಜಕಾರ್ಯ ಪ್ರತಿನಿಧಿ ಎಂಬ ಹೆಸರಿಲ್ಲ. ಬೆಳಗಾಂ, ಬಿಜಾಪುರ, ಧಾರವಾಡ ಎಂಬ ಮೂರು ಕನ್ನಡ ಜಿಲ್ಲೆಗಳನ್ನೂ ಕೊಲ್ಲಾಪುರ, ಮಿರಜ್ ಮುಂತಾದ ದೇಶೀಯ ಸಂಸ್ಥಾನಗಳನ್ನೂ ಒಳಕೊಂಡಿರುವ ಪ್ರದೇಶಕ್ಕೆ ದಕ್ಷಿಣ ಮಹರಾಠ ದೇಶ ಎಂಬ ಸರಕಾರಿ ಹೆಸರು ಅಸಂಗತವಾದುದು. ಚಾಳುಕ್ಯ ರಾಜನಾದ 2ನೆಯ ಪುಲಕೇಶಿಯ (609–642) ಒಂದಾನೊಂದು ಹಳೆಯ ಶಾಸನದಲ್ಲಿ ಈ ಪ್ರಾಂತವು ಮಹಾರಾಷ್ಟ್ರದಲ್ಲಿ ಅಂತರ್ಗತವಾದುದೆಂದು ಹೇಳಿರುವುದೇನೋ ನಿಜ; ಆದರೆ ಮಹಾರಾಷ್ಟ್ರ ಎಂಬ ಪದಕ್ಕೆ ಆಗ ದೊಡ್ಡ ದೇಶ ಎಂಬ ಅರ್ಥವಿದ್ದಿತೇ ಹೊರತು ಆ ಪದದಿಂದ ಹುಟ್ಟಿರುವ ಮಹರಾಠ, ಮಹರಾಠಿ ಎಂಬ ಶಬ್ದಗಳಿಗೆ ಈಗ ಬಂದಿರುವ ಒಂದಾನೊಂದು ಜನಸಮುದಾಯ, ಒಂದಾನೊಂದು ಭಾಷೆ ಎಂಬರ್ಥವಿರಲಿಲ್ಲ. ದಕ್ಷಿಣಮಹರಾಠದೇಶವೆನಿಸಿಕೊಂಡಿರುವ ಪ್ರಾಂತದೊಳಗೆಲ್ಲಾ ಎರಡು ಮೂರು ಶತಮಾನಗಳಿಗಿಂತಲೂ ಪುರಾತನವಾದ ಒಂದು ಮಹರಾಠಿ ಶಾಸನವಾದರೂ ಸಿಕ್ಕಿಲ್ಲ; ಇದುವರೆಗೂ ಸಿಕ್ಕಿರುವ ಹಳೆಯ ಶಾಸನಗಳೆಲ್ಲಾ ಸಂಸ್ಕೃತದಲ್ಲಿಯಾಗಲಿ ಕನ್ನಡದಲ್ಲಿಯಾಗಲಿ ಈ ಎರಡು ಭಾಷೆಗಳಲ್ಲಿಯೂ ಆಗಲಿ ಇವೆಯೇ ಹೊರತು ಮಹರಾಠಿಯಲ್ಲಿಲ್ಲ. ಈ ವಿಷಯವು ಪೂರ್ವಕಾಲ

---

1 Dynasties of Kanarese Districts.

ದಲ್ಲಿ ಈ ಪ್ರಾಂತದಲ್ಲಿ ಬಳಕೆಯಲ್ಲಿದ್ದ ಭಾಷೆ ಯಾವುದು ಎಂಬಂಶವನ್ನು ಸೃಷ್ಟಪಡಿಸುತ್ತದೆ. ಈಗಲೂ ಬಹಳಮಟ್ಟಿಗೆ ಬ್ರಿಟಿಷ್ ಜಿಲ್ಲೆಗಳ ಜನರು ಕನ್ನಡಿಗರೇ, ಭಾಷೆಯೂ ಕನ್ನಡವೇ. ಆದರೆ ದೇಶೀಯ ಸಂಸ್ಥಾನಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಕನ್ನಡಿಗರ ಸ್ಥಾನವು ಮಹರಾಠರಿಂದಲೂ ಕನ್ನಡದ ಸ್ಥಾನವು ಮಹರಾಠಿಯಿಂದಲೂ ಆಕ್ರಮಿಸಲ್ಪಟ್ಟಿವೆ. ಸೋಲಾಪುರಜಿಲ್ಲೆ ಈಗ ಸರಕಾರದ ಲೆಕ್ಕದಲ್ಲಿ ಮಹರಾಠ ಜಿಲ್ಲೆಯೆಂದಾಗಿದ್ದರೂ ಸೋಲಾಪುರದಲ್ಲಿಯೂ ಆ ಜಿಲ್ಲೆಯಲ್ಲಿಯೂ ಎಷ್ಟೋಕನ್ನಡ ಶಾಸನಗಳು ದೊರೆತಿವೆ. ಠಾಣದ ಶಿಲಾಹಾರರಲ್ಲಿ ಬಳಕೆಯಲ್ಲಿರುವ ನಪ್ಪುವಣ್ಣ, ಲಸ್ಥಿಯವ್ವ ಎಂಬಂಥ ಹೆಸರುಗಳು ಅವಕ್ಕೆ ಕನ್ನಡವೇ ಮೂಲವೆಂಬುದನ್ನು ವ್ಯಕ್ತಪಡಿಸುತ್ತವೆ.

ಈಗ ತೆಲುಗು ದೇಶವೆನಿಸಿಕೊಂಡಿರುವ ಪ್ರಾಂತದಲ್ಲಿ ಹಿಂದೆ ಇದ್ದ ಕನ್ನಡದ ಪ್ರಾಬಲ್ಯಕ್ಕೆ ಆ ಪ್ರಾಂತದ ಹಳೆಯ ತೆಲುಗು ಶಾಸನಗಳಲ್ಲಿ ತೆಲುಗು ರಾಜರಿಗೂ ಸಾಮಂತರಿಗೂ ಪ್ರಯೋಗಿಸಿರುವ ಕನ್ನಡ ಬಿರುದುಗಳೇ ಸಾಕ್ಷಿಗಳಾಗಿವೆ. ಸುಮಾರು 9ನೆಯ ಶತಮಾನದ ಒಂದು ತೆಲುಗು ವೈದುಂಬ ಶಾಸನದಲ್ಲಿ ಒಬ್ಬ ಸೇನಾಪತಿಗೆ ಮನುಜರದೇವ ಎಂಬ ಉಪನಾಮವು ಹೇಳಿದೆ[1]; ಮೂಡಣ ಚಾಳುಕ್ಯ ರಾಜನಾದ ಗುಣಗವಿಜಯಾದಿತ್ಯನಿಗೆ (844–888) ಗುಣಕೆನಲ್ಲ ಎಂಬ ಬಿರುದಿದ್ದಿತು; ಕೆಲವರು ರೆಡ್ಡಿ ಪ್ರಭುಗಳು ಜಗದೊಬ್ಬಗಂಡ, ಜಗದಗೋಪಾಲ ಎಂಬ ಬಿರುದುಗಳನ್ನು ಪಡೆದಿದ್ದರು[2]. ಈ ಸಂದರ್ಭದಲ್ಲಿ ಸುಮಾರು 9ನೆಯ ಶತಮಾನದಲ್ಲಿ ಹುಟ್ಟಿರುವ ಬೆಜವಾಡದ ಬಳಿಯ ಇಂದ್ರಕೀಲ ಪರ್ವತದ ತೆಲುಗು ಶಾಸನದಲ್ಲಿ ಬರುವ ಸಂವತ್ಸರದುಳ್ ಎಂಬ ಮಾತಿನಲ್ಲಿ ಲೋ ಎಂಬ ತೆಲುಗು ಸಪ್ತಮೀ ವಿಭಕ್ತಿ ಪ್ರತ್ಯಯಕ್ಕೆ ಪ್ರತಿಯಾಗಿ ಉಳ್ ಎಂಬ ಕನ್ನಡದ ಪ್ರಾಚೀನ ಸಪ್ತಮೀ ವಿಭಕ್ತಿ ಪ್ರತ್ಯಯವು ಪ್ರಯುಕ್ತವಾಗಿರುವ ಅಂಶವನ್ನೂ ತಿಳಿಸಬಹುದಾಗಿದೆ.

ಆದಿಪಂಪನು (941) ತನ್ನ ಭಾರತವನ್ನು ನೃಪತುಂಗನು ಶುದ್ಧ ಕನ್ನಡದ ನೆಲೆಯೆಂದು ಹೇಳುವ ನಾಲ್ಕು ಸ್ಥಳಗಳಲ್ಲಿ ಒಂದಾಗ ಪುಲಿಗೆರೆಯ ತಿರುಳ್ಗನ್ನಡದಲ್ಲಿ ಬರೆದೆನೆಂದು ಹೇಳುತ್ತಾನೆ. ರನ್ನನೂ (993) ಕೂಡ ಎರಡೂ ಸೇರಿ ಆರುನೂರಾಗುವ ಪ್ರದೇಶದ ಕನ್ನಡವು ತಿರುಳ್ಗನ್ನಡವೆಂದೂ[3] ತಾನು ಅದರಲ್ಲಿ ಬರೆದೆನೆಂದೂ ಹೇಳುತ್ತಾನೆ. ರನ್ನನು ಹೇಳುವ ಎರಡು ಎಂಬುದು ಬೆಳ್ವೊಲ

---

1 Madras Epigraphical Report for 1923, p. 98. 2 *Ibid* p. 124.

3. ಎರಡರಿನೂರಿರ್ಪಿಕನ್ನಡ ಮಾತಿತುಳಕನ್ನಡಂ.

ಮುನ್ನೂರಿಗೂ ಪುಲಿಗೆರೆ ಮುನ್ನೂರಿಗೂ ಅನ್ವಯಿಸುತ್ತದೆ[1] ಇಲ್ಲಿಯೂ ಪುಲಿಗೆರೆ ಶುದ್ಧ ಕನ್ನಡ ಪ್ರಾಂತವೆಂದು ಹೇಳಲ್ಪಟ್ಟಿದೆ. ಎರಡರು ನೂರು ಎಂಬ ಮಾತು ಕುಂತಳದೇಶಕ್ಕೆ ಅಲಂಕಾರ ಪ್ರಾಯವಾಗಿದ್ದ ಒಂದು ಭಾಗಕ್ಕೆ ಹೆಸರಾಗಿ 930 ರಲ್ಲಿ ಹುಟ್ಟಿದ ಕಲಾಸ್ ಶಾಸನದಲ್ಲಿ ಬರುತ್ತದೆ[2] ಇದೇ ಹೆಸರು ದ್ವಿತ್ರಿ ಶತಂ (ಎರಡುಮುನ್ನೂರುಗಳು) ಎಂಬ ರೂಪದಲ್ಲಿ 982 ರಲ್ಲಿ ಹುಟ್ಟಿದ ನೀಲಗುಂದ ಶಾಸನದಲ್ಲಿ ಪ್ರಯೋಗಿಸಲ್ಪಟ್ಟಿದೆ

ಶುದ್ಧಕನ್ನಡ ಪ್ರಾಂತವೆಂದು ತಾನು ಹಿಂದೆ ಹೇಳಿದ ಪ್ರದೇಶದಲ್ಲಿರುವ ಕನ್ನಡಿಗರ ಪೌರುಷ್ಯಚಾತುರ್ಯಗಳ ವಿಷಯವಾಗಿ ನೃಪ ತುಂಗನು ಹೀಗೆ ಹೇಳುತ್ತಾನೆ :—

ಪದನಱಿದು ನುಡಿಯಲುಂ ನುಡಿ । ದುದನಱಿದಾರಯಲುಮಾರ್ಪರಾ
ನಾಡನಗರ್ಗಳ್ ।

ಚದುರರ್ ನಿಜದಿಂ ಕುಱಿತೋ । ದರೆಯುಂ ಕಾವ್ಯಪ್ರಯೋಗಪರಿಣತಮ
ತಿಗಳ್ ॥

ಕುಱಿತವರಲ್ಲದೆ ಮತ್ತಂ । ಪೆರಱಿಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ।
ಕಿಡಿವಕ್ಕಳು ಮಾಮೂಗರು । ನುಡಿಪಲ್ಕಱಿ'ವರ್ ವಿವೇಕಮುಂ ಮಾತು
ಗಳಂ ॥

ಕನ್ನಡಿಗರ ನಾಗರಿಕತೆ.

ಏಲೇಲನೆಂಬ ಚೋಳರಾಜನು ಕ್ರಿಸ್ತ ಪೂರ್ವ 205ರಲ್ಲಿ ಮೈಸೂರು ಸೇನೆಯ ಸಹಾಯದಿಂದ ಸಿಂಹಳದ್ವೀಪವನ್ನು ಜಯಿಸಿದನೆಂದು ಆ ದ್ವೀಪದ ಚರಿತ್ರೆಗಳಿಂದ ತಿಳಿದುಬರುತ್ತದೆ[3] ರಾಷ್ಟ್ರಕೂಟರಾಜನಾದ ದಂತಿದುರ್ಗನ ಸುಮಾರು 8ನೆಯ ಶತವಾನದ ಮಧ್ಯದಲ್ಲಿ ಹುಟ್ಟಿದ ಒಂದು ಶಾಸನದಲ್ಲಿ ಕರ್ಣಾಟಕ ಸೈನ್ಯವು ಕಾಂಚಿಯ ಪಲ್ಲವ ರಾಜನನ್ನೂ ಕೇರಳ ಪಾಂಡ್ಯಚೋಳರಾಜರನ್ನೂ ಸೋಲಿಸುವಷ್ಟು ಪರಾಕ್ರಮಶಾಲಿಯಾಗಿದ್ದಿತೆಂದು ಹೇಳಿದೆ[5] ಪಾಂಡ್ಯರಾ

---

1 ಬೆಳ್ವೊಲ ಮೂನೂಱಿಂಮುಂ ಪುಲಿಗೆಱೆ ಮೂನೂಱಿಂಮುಂ ಎರಡಱಿ
ನೂಱಿಂಮುಂ *Epigraphia Indica XV*, 339.

2 ಕುಂತಳಧರಾತಳಂ, ತದ್ವಿಷಯಕ್ಕೆರಡಱಿನೂಱಿ ಲಲಾಮುಂ.
Ibid, XIII, 326. 3 *Ibid IV* 207. 4 The Lost Cities of Ceylon' 26. 5 Indian Antiquary, XI, 114.

ಜನಾದ ಶಡೈಯನ್ ಪರಾಂತಕನ ಸುಮಾರು 770 ರಲ್ಲಿ ಹುಟ್ಟಿದ ವೇಳ್ವಿಕುಡಿ ತಾಮ್ರಶಾಸನದಲ್ಲಿ ಸುಮಾರು 6 ನೆಯ ಶತಮಾನದಲ್ಲಿ ಪಾಂಡ್ಯದೇಶವನ್ನು ಸ್ವಾಧೀನ ಮಾಡಿಕೊಂಡಿದ್ದರೆಂದು ಹೇಳಿರುವ ಕಳಭ್ರರೆಂಬವರು ಕರ್ಣಾಟಕರೇ ಎಂದು ತಿಳಿಯ ಬಂದಿದೆ. ಎರುಮೈನಾಡಿನ (ಮೈಸೂರಿನ) ವಡುಗರು (ಬಡಗರು ಅಥವಾ ಕನ್ನಡಿಗರು) ತಮಿಳು ಸಂಘಕಾಲದ ಗ್ರಂಥಗಳಲ್ಲಿ ಹೇಳಿರುವ ವೋರಿಯರ, ಎಂದರೆ 5, 6, 7ನೆಯ ಶತಮಾನಗಳಲ್ಲಿ ಆಳಿದ ಕೊಂಕಣದ ಮೌರ್ಯರ, ಮಂಗಾವಲಿನವರಾಗಿದ್ದು ಪಾಂಡ್ಯ ರಾಜನಾದ ನೆಡುಂಜೆಳಿಯನ ದಂಡನಾಯಕ ವೋಹೂರೆಂಬವನಿಗೆ ವಿರೋಧವಾಗಿ ಕೋಶರಿಗೆ ಸಹಾಯಮಾಡಲು ಹೋದಂತೆ ತಿಳಿಯುತ್ತದೆ[1] ದಕ್ಷಿಣ ಹಿಂದೂದೇಶದಲ್ಲಿ ಆಳಿದ ಗಂಗ, ಕದಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ಸೇವುಣ, ಕಳಚುರ್ಯ, ರಟ್ಟ, ಶಿಲಾಹಾರ, ಕೊಂಗಾಳ್ವ, ಚಂಗಾಳ್ವ, ನಿಂದ, ಬಾಣ, ಸೊಳಂಬ, ವೈದುಂಬ, ಸಾಳುವ, ಸಾಂತರ, ಸೇನವಾರ, ವುನ್ನಾಡು, ವಿಜಯನಗರ, ಮೈಸೂರು, ಕೊಡಗು ಮುಂತಾದ ರಾಜವಂಶಗಳೂ; ಕೆಳದಿ, ಉಮ್ಮತ್ತೂರು, ನುಗ್ಗೆಹಳ್ಳಿ, ಬೇಲೂರು, ಸುಗಟೂರು, ಹದಿನಾಡು, ಮುದಿಗೆರೆ, ಚಿತ್ರದುರ್ಗ, ನಿಡುಗಲ್ಲು, ಚೆನ್ನಪಟ್ಟಣ, ಮಾಗಡಿ, ಎಲಹಂಕ, ಸಂತೆ ಬೆನ್ನೂರು, ಪಿರಿಯಪಟ್ಟಣ, ಚಿಕ್ಕನಾಯಕನಹಳ್ಳಿ, ಮದ್ದಗಿರಿ, ಬಿಜ್ಜವರ, ಕೋಟೆ, ಕಳಲೆ ಮುಂತಾದ ಪಾಳೆಯಗಾರರ ಸಂತತಿಗಳೂ ಕರ್ಣಾಟಕವೇ ಆಗಿವೆ. ಅಲ್ಲದೆ ಗುಜರಾತು, ನೇಪಾಳ ಈ ಪ್ರಾಂತಗಳಲ್ಲಿಯೂ ಕರ್ಣಾಟಕ ರಾಜವಂಶಗಳು ಆಳುತ್ತಿದ್ದುವು.

ಕನ್ನಡ ಭಾಷೆಯು ದೇಶ್ಯಪದಗಳಿಂದ ಸೂಚಿತವಾದ ಕನ್ನಡಿಗರ ನಾಗರಿಕತೆ ಬಹಳ ಉಚ್ಚಸ್ಥಿತಿಗೆ ಏರಿಲ್ಲದಿದ್ದರೂ ಅಸಡ್ಡೆ ಮಾಡುವಂಥದಾಗಿಲ್ಲ ಕನ್ನಡಿಗರಿಗೆ ಕೃಷಿಯಲ್ಲಿ ಒಳ್ಳೆಯ ಜ್ಞಾನವಿದ್ದಿತೆಂದು ಉಲಿವುದು, ಕುಳ, ಕುಂಟೆ, ಕೂರಿಗೆ, ಏರು, ಎಲ್ಲಿ, ಏತ, ಪಯಿರು, ಕಳೆ, ಕದಿರು, ತೆನೆ, ಅರಿ, ಕುಯಿಲು, ಕುಡುಗೋಲು, ಒಕ್ಕಣೆ, ಬಯಲು, ಕೊಳ, ಕಾಲುವೆ, ಕೆಸ್ತ, ಏರಿ, ತೂಂಬು ಮುಂತಾದ ಮಾತುಗಳಿಂದಲೂ: ನೂಲುವುದು, ನೇಯುವುದು, ಮನೆಕಟ್ಟುವುದು ಮುಂತಾದ ಕೈಗಾರಿಕೆಗಳಲ್ಲಿ ತಕ್ಕಮಟ್ಟಿಗೆ ತಿಳಿವಳಿಕೆ ಇದ್ದಿತೆಂದು ನೂಲುವುದು, ಜಾಟಿ, ಪಲ್ಲಿ, ತುಒಟ; ನೇಯುವುದು, ಹಾಸು, ಹೊಕ್ಕು, ಪಟ; ಮನೆ, ಬಾಗಿಲು, ಸೂರು, ಹಿತ್ತಿಲು, ಓಣರಿ, ಕಡೆ, ಕದ, ಜಗಲಿ, ಕೇರು, ಮಣ್ಣು, ಮರ, ಗಾರೆ, ಗಚ್ಚು ಇತ್ಯಾದಿ ಶಬ್ದಗಳಿಂದಲೂ ತಿಳಿಯುತ್ತದೆ. ಅವರು ವೊನ್, ಬೆಳ್ಳಿ, ಕರ್ಬೊನ್ (ಕಬ್ಬಿಣ), ಕಿಸು (ತಾಮ್ರ) ಎಂಬಂಥ ಸಾಧಾರಣ ಲೋಹಗ

---

1 Journal of the Reyal Asiatic Society for 1924, 666.

ಳನ್ನೂ ಪೂರ್ವಿಕರಿಗೆ ಸಾಮಾನ್ಯವಾಗಿ ತಿಳಿದಿದ್ದ ನೇಸಱು, ತಿಂಗಳ್, ಪೆಜ್ಜೆ, ಬೆಳ್ಳಿ, (ಶುಕ್ರ), ಚಾಟಿ (ರಾಹು) ಎಂಬಂಥ ಗ್ರಹಗಳನ್ನೂ ಅರಿತಿದ್ದರು. ಅವರಿಗೆ ಯುದ್ಧದಲ್ಲಿ (ಪೋರ್, ಕೊಳುಗುಳ) ಪ್ರೇಮವೂ ಬಿಲ್ಲು, ಕೋಲು, ಇಟ್ಟಿ, ಅಡ್ಡಣ, ಕತ್ತಿ, ಕಡಿತಲೆ ಮೊದಲಾದ ಆಯುಧಗಳೂ ಇದ್ದುವು. ಅವರಲ್ಲಿ ಮುದುವೆ, ಮದ್ದು, ಬಾಡ (ಹಳ್ಳಿ), ತೆಪ್ಪ, ಹಡಗು, ಜೆಱಪು (ಹಬ್ಬ) ಒಂದರಿಂದ ಒಂಬಯ್ನೂರತೊಂಬತ್ತೊಂಬತ್ತರವರೆಗೆ ಲೆಕ್ಕ ಇವು ಉಂಟು. ಜೋಟು, ಗೇಣು, ಅಡಿ, ಮೊಳ, ಮಾರು; ಮಣ, ವೀಸೆ, ಕೊಳಗ, ಬಳ್ಳ, ಅರೆ, ಕಾಲು ಬೇಳೆ, ವೀಸ ಇತ್ಯಾದಿ ಪದಗಳು ಅವರಿಗೆ ಇದ್ದ ಅಳತೆ, ತೂಕ, ಭಿನ್ನರಾಶಿಗಳು ಇವುಗಳ ಜ್ಞಾನವನ್ನು ಸೂಚಿಸುತ್ತವೆ. ಅವರ ಸಾಮಾನ್ಯ ವ್ಯವಹಾರಕ್ಕೆ ಬೇಕಾದ ಮಾತುಗಳೆಲ್ಲಾ ಇದ್ದುವು. ತಮಿಳರು ದೇವರಿದ್ದಾನೆ ಎಂದು ತಿಳಿದು ದೇವಸ್ಥಾನಗಳನ್ನು ಕಟ್ಟಿಸಿದರು. ಆದರೆ ಕನ್ನಡಿಗರಿಗೇ ಆಗಲಿ ತೆಲುಗರಿಗೇ ಆಗಲಿ ದೇವರನ್ನೂ ದೇವಸ್ಥಾನವನ್ನೂ ಸೂಚಿಸುವ ಮಾತುಗಳಿಲ್ಲ. ತೆಲುಗಿನಲ್ಲಿ ಸೂರ್ಯಚಂದ್ರರನ್ನು ಸೂಚಿಸುವ ದೇಶ್ಯಶಬ್ದಗಳು ಸಹ ಇಲ್ಲ. ಕನ್ನಡಿಗರಿಗೆ ಲಿಪಿಜ್ಞಾನವಿದ್ದಂತೆ ತಿಳಿವುದಿಲ್ಲ. ಅವರ ಭಾಷೆಯಲ್ಲಿ ಸ್ವರ್ಗನರಕಗಳನ್ನು ಸೂಚಿಸುವ ಪದಗಳೂ ಇಲ್ಲ. ತೆಲುಗಿನಲ್ಲಿಯೂ ಹೀಗೆಯೇ ಇದೆ. ದ್ರಾವಿಡರೆಲ್ಲರಿಗೂ ನರಕವೇ ಗೊತ್ತಿಲ್ಲವೆಂದು ಹೇಳಬಹುದು.

ತೃತೀಯ ಸಂಪುಟ.

1919ರಲ್ಲಿ ಪ್ರಕಟವಾದ ದ್ವಿತೀಯ ಸಂಪುಟದ ಅವತರಣಿಕೆಯಲ್ಲಿ (ಪುಟ 33)—"17ನೆಯ ಶತಮಾನದಿಂದ ಈಚೆಗೆ ಬಾಳಿದ ಕವಿಗಳ ಚರಿತ್ರೆಯನ್ನು 3ನೆಯ ಸಂಪುಟವಾಗಿ ಬರೆಯಬೇಕೆಂಬ ಕೋರಿಕೆಯಿದೆ. ಈ ಕೋರಿಕೆಯನ್ನು ದೇವರು ನೆರವೇರಿಸಬೇಕೆಂದು ಪ್ರಾರ್ಥಿಸುತ್ತೇನೆ" ಎಂದು ಬರೆದಿದ್ದೆನು. ಅದೇ ಮೇರೆಗೆ 3ನೆಯ ಸಂಪುಟದ ಕೆಲಸವು ಕೂಡಲೆ ಆರಂಭವಾಯಿತು. ಆದರೆ ಮುದ್ರಣಾಲಯದಲ್ಲಿ ಉಂಟಾದ ಕಾಲವಿಳಂಬದಿಂದಲೂ ಬೇರೆ ಕೆಲವು ಅನಿವಾರ್ಯಗಳಿಂದಲೂ ಪ್ರಕಟನಕಾರ್ಯವು ಶೀಘ್ರವಾಗಿ ನಡೆಯಲು ಅವಕಾಶವಾಗಲಿಲ್ಲ. ಈ ಕಾಲವಿಳಂಬವು ಶೋಚನೀಯವಾದರೂ ಕೆಲವು ಹೊಸ ವಿಷಯಗಳನ್ನು ದೊರೆತಹಾಗೆಲ್ಲಾ ಸೇರಿಸಲು ಅನುಕೂಲವಾಯಿತು. ಈ ಹೊಸವಿಷಯಗಳು ಪರಿಶಿಷ್ಟಗಳ ರೂಪವಾಗಿ ಅಲ್ಲಲ್ಲಿ ಸೇರಿರುವುದರಿಂದ ಪುಸ್ತಕವು ಸ್ವಲ್ಪ ಮಟ್ಟಿಗೆ ಹರಕುಮುರಕಾಗಿ ಕಾಣಬಹುದು. ಈ ಸಂಪುಟದಲ್ಲಿ ಮೂಲಗ್ರಂಥವಲ್ಲದೆ 7 ಪರಿಶಿಷ್ಟಗಳೂ ಅನುಬಂಧವೂ ಗ್ರಂಥ ಶುದ್ಧಿಯೂ ಅಕಾರಾದಿ ಸೂಚಿಯೂ ಇವೆ. ಇದರಲ್ಲಿ ಒಟ್ಟು 567 ಗ್ರಂಥಕರ್ತರ ಚರಿತ್ರವು ಹೇಳಿದೆ. ಇವ

ರಲ್ಲಿ 352 ಮಂದಿ ಹಿಂದಣವರು, 215 ಮಂದಿ ಆಧುನಿಕರು. ಈ ಆಧುನಿಕರೆಂಬವರು ಪ್ರಾಯಿಕವಾಗಿ 19ನೆಯ ಶತಮಾನದ ಉತ್ತರಾರ್ಧದಲ್ಲಿ ಇದ್ದವರು; ಇವರಲ್ಲಿ ಜೀವಂತರಾಗಿರುವವರಾರೂ ಸೇರಿಲ್ಲ. ಆಧುನಿಕರಲ್ಲಿ ನಿಜವಾಗಿಯೂ ಕವಿಗಳೆನ್ನಿಸಿಕೊಳ್ಳುವವರು ಬಹಳ ಸ್ವಲ್ಪವಂದಿ. ಆದರೂ ಚರಿತ್ರೆ ತಕ್ಕಮಟ್ಟಿಗೆ ಸಮಗ್ರವಾಗಬೇಕೆಂಬ ಭಾವನೆಯಿಂದ ಅವರನ್ನೆಲ್ಲಾ ಸೇರಿಸಿ ಅವರ ಚರಿತ್ರವನ್ನು ಅತಿಸಂಗ್ರಹವಾಗಿ ಕೊಟ್ಟಿದ್ದೇನೆ. ವಿಷಯಸೂಚಿಕೆಯಲ್ಲಿಯೂ ಅಕಾರಾದಿ ಸೂಚಿಯಲ್ಲಿಯೂ ಆಧುನಿಕರ ಹೆಸರಿನ ಮುಂದೆ ಬರುವ 19 ಶ. ಎಂಬುದಕ್ಕೆ 19ನೆಯ ಶತಮಾನ ಎಂದರ್ಥವು. ಪರಿಶಿಷ್ಟಗಳಲ್ಲಿ ಉಕ್ತರಾಗಿ ಪ್ರಥಮ ದ್ವಿತೀಯ ಸಂಪುಟಗಳ ಕಾಲಕ್ಕೆ ಸೇರಬೇಕಾದ ಕವಿಗಳನ್ನು ಬಿಟ್ಟು ಉಳಿದ ಪೂರ್ವ ಕವಿಗಳು ಪ್ರಾಯಿಕವಾಗಿ 18ನೆಯ ಶತಮಾನಕ್ಕೂ 19ನೆಯ ಶತಮಾನದ ಪೂರ್ವಾರ್ಧಕ್ಕೂ ಸೇರಿದವರಾಗಿದ್ದಾರೆ. ಕೆಲವರು ಇನ್ನೂ ಸ್ವಲ್ಪ ಈಚೆಯವರಾಗಿರಬಹುದು. ಇವರಲ್ಲಿಯೂ ಕೂಡ ಪ್ರಥಮ ದ್ವಿತೀಯ ಸಂಪುಟಗಳಲ್ಲಿ ಉಕ್ತರಾದವರಲ್ಲಿರುವಂತೆಯೇ ಕೆಲವರು ನ್ಯಾಯವಾಗಿ ಕವಿಗಳ ಗೋಷ್ಠಿಗೆ ಸೇರಲಾರರು. ಆದರೆ ಅಂಥವರ ಸಂಖ್ಯೆ ಆಧುನಿಕರಲ್ಲಿರುವಂತೆ ಇಲ್ಲಿ ಹೆಚ್ಚಾಗಿಲ್ಲ. ವಚನಗಳು ಗದ್ಯವಾದರೂ ಕಾವ್ಯಸರಣಿಯಲ್ಲಿರುವುದರಿಂದ ವಚನಕಾರರನ್ನು ಕವಿಗಳೆಂದೇ ಹೇಳಬಹುದು.

ಇನ್ನು ಈ ಸಂಪುಟದಲ್ಲಿ ಹೇಳಿರುವ ವಿಷಯಗಳನ್ನು ವಿವರಿಸುತ್ತೇನೆ. ಮೂಲಗ್ರಂಥದ 216 ಪುಟಗಳಲ್ಲಿ 1705ರಿಂದ 1887ರ ವರೆಗೆ ಬಾಳಿದ 165 ಕವಿಗಳ ಚರಿತ್ರವು ಹೇಳಿದೆ. ಈ ಸಂಖ್ಯೆಯಲ್ಲಿ ಇಬ್ಬರು ಸ್ತ್ರೀಯರು ಸೇರಿದ್ದಾರೆ; ಇವರಲ್ಲಿ ಒಬ್ಬಾಕೆ ನೈಸೂರು ಮಹಾರಾಣಿಯರಲ್ಲಿ ಒಬ್ಬಳು, ಮೂಲಗ್ರಂಥದ ಉಳಿದ ಭಾಗವು, ಎಂದರೆ 217 ರಿಂದ 240ರ ವರೆಗಿನ ಪುಟಗಳು. 155 ಆಧುನಿಕರ ವಿಷಯವನ್ನು ಒಳಕೊಂಡಿದೆ. 1 ನೆಯ ಪರಿಶಿಷ್ಟದಲ್ಲಿ (ಪುಟಗಳು 241–260) 1430 ರಿಂದ 1869 ರವರೆಗೆ ಬಾಳಿದ 35 ಕವಿಗಳ ಚರಿತ್ರವು ಹೇಳಿದೆ. ಇವರಲ್ಲಿ ಇಬ್ಬರು ವಚನಕಾರರು. ಈ 35 ಮಂದಿಯಲ್ಲಿ ಇಬ್ಬರು ಪೂರ್ವಪರಿಚಿತರು; ಉಳಿದವರಲ್ಲಿ 16 ಮಂದಿ ದ್ವಿತೀಯ ಸಂಪುಟಕ್ಕೂ ಮಿಕ್ಕವರು ಈ ಸಂಪುಟಕ್ಕೂ ಸೇರತಕ್ಕವರು. 2 ನೆಯ ಪರಿಶಿಷ್ಟವು (ಪುಟಗಳು 261–326) 1300 ರಿಂದ 1884 ರ ವರೆಗೆ ರಚಿತವಾದ ಆದರೆ ಕವಿಗಳು ಗೊತ್ತಿಲ್ಲದ 213 ಗ್ರಂಥಗಳ ವಿಷಯವನ್ನು ಒಳಕೊಂಡಿದೆ. 3ನೆಯ ಪರಿಶಿಷ್ಟದಲ್ಲಿ (ಪುಟಗಳು 327–333) 324ನೆಯ ಪುಟದವರೆಗೆ ಗ್ರಂಥಶುದ್ಧಿಯೂ ಕೆಲವು ಹೊಸವಿಷಯಗಳೂ ಹೇಳಿವೆ. 4ನೆಯ ಪರಿಶಿಷ್ಟವು (ಪುಟಗಳು 334–389) ಬಹಳ ಮಟ್ಟಿಗೆ ವಚನಕಾರರಾದ ಹಲವರು ಹೊಸಕವಿಗಳ ಚರಿತ್ರವನ್ನು ಹೇಳುತ್ತದೆ: ಪುಟ

ಗಳು 334–338 ರಲ್ಲಿ ಪೂರ್ವ ಪರಿಚಿತರಾದ 11 ವಚನಕಾರರ (ಪ್ರಥಮ ಸಂಪುಟ, 190–209, 275) ಮತ್ತೆ ಕೆಲವು ವಚನಗಳು ಕೊಟ್ಟಿವೆ. ಪುಟಗಳು 338–360ರಲ್ಲಿ ಸುಮಾರು 1160ರಿಂದ 1725ರ ವರೆಗೆ ಬಾಳಿದ 59 ಹೊಸ ವಚನ ಕಾರರ ವಿಷಯವು ಅವರ ವಚನಗಳೊಡನೆ ಹೇಳಿದೆ. ಇವರೊಳಗೆ 15 ಮಂದಿ ಸ್ತ್ರೀಯರು. ಈ 59 ಕವಿಗಳಲ್ಲಿ 45 ಮಂದಿ ಪ್ರಥಮ ಸಂಪುಟಕ್ಕೂ 12 ಮಂದಿ ದ್ವಿತೀಯ ಸಂಪುಟಕ್ಕೂ ಒಬ್ಬರುಮಾತ್ರ ಈ ಸಂಪುಟಕ್ಕೂ ಸೇರತಕ್ಕವರಾಗಿದ್ದಾರೆ. ಪುಟಗಳು 360–361ರಲ್ಲಿ 52 ಹೊಸ ವಚನಕಾರರ ಹೆಸರುಗಳು ಅವರ ಅಂಕಿತಗಳೊಡನೆ ಹೇಳಿವೆ; ಆದರೆ ವಚನಗಳು ಉದಾಹೃತವಾಗಿಲ್ಲ. ಇವರಲ್ಲಿ 7 ಮಂದಿ ಸ್ತ್ರೀಯರು. ಈ ಕವಿಗಳೆಲ್ಲಾ ಪ್ರಾಯಿಕವಾಗಿ ಬಸವನ ಸಮಕಾಲಿಕರಾದುದರಿಂದ ಪ್ರಥಮ ಸಂಪುಟಕ್ಕೆ ಸೇರತಕ್ಕವರು–362 ನೆಯ ಪುಟದಲ್ಲಿ 6 ಹೊಸ ವಚನಕಾರರ ಹೆಸರು ಹೇಳಿದೆ; ಇವರಾರೂ ಈ ಸಂಪುಟಕ್ಕೆ ಸೇರತಕ್ಕವರಂತೆ ಕಾಣುವುದಿಲ್ಲ. ಪುಟಗಳು 362–371 ರಲ್ಲಿ 46 ಅಂಕಿತಗಳು ವಚನಗಳೊಡನೆ ಕೊಟ್ಟಿದೆ; ಇವುಗಳಲ್ಲಿ 15 ದ್ವಿತೀಯ ಸಂಪುಟದಲ್ಲಿ (121–124) ಬರುತ್ತವೆ. 371ನೆಯ ಪುಟದಲ್ಲಿ ವಚನಗಳಿಲ್ಲದೆ 13 ಹೊಸ ಅಂಕಿತಗಳೂ ಉಕ್ತವಾಗಿವೆ. ಪುಟಗಳು 372–389ರಲ್ಲಿ 1099 ರಿಂದ 1700 ರವರೆಗೆ ಬಾಳಿದ 79 ಕವಿಗಳ ವಿಷಯವು ಹೇಳಿದೆ; ಇವರಲ್ಲಿ 11 ಮಂದಿ ಪೂರ್ವ ಪರಿಚಿತರು, ಉಳಿದವರಲ್ಲಿ ಶಾಸನ ಕವಿಗಳಾದ ಮೂವರು ಪ್ರಥಮ ಸಂಪುಟಕ್ಕೂ ಮಿಕ್ಕ ಐವರು ದ್ವಿತೀಯ ಸಂಪುಟಕ್ಕೂ ಸೇರತಕ್ಕವರು. 5 ನೆಯ ಪರಿಶಿಷ್ಟವು (ಪುಟಗಳು 390–398) ಕೆಲವರು ಪೂರ್ವಿಕ ಕವಿಗಳನ್ನೂ ಕೆಲವರ್ಷ ಆಧುನಿಕರನ್ನೂ ಕವಿಗಳು ಗೊತ್ತಿಲ್ಲದ ಕೆಲವು ಹೊಸ ಗ್ರಂಥಗಳನ್ನೂ ತಿಳಿಸುತ್ತದೆ. ಪುಟಗಳು 390–392 ರಲ್ಲಿ 5 ಕವಿಗಳ ವಿಷಯವು ಹೇಳಿದೆ; ಇವರಲ್ಲಿ ಇಬ್ಬರು ಪೂರ್ವ ಪರಿಚಿತರು; 1800 ರಿಂದ 1860ರ ವರೆಗೆ ಬಾಳಿದ ಉಳಿದ ಮೂವರು ಈ ಸಂಪುಟಕ್ಕೆ ಸೇರತಕ್ಕವರು ಪುಟಗಳು 392–396ರಲ್ಲಿ 32 ಆಧುನಿಕ ಗ್ರಂಥಕರ್ತರ ವಿಷಯವು ತಿಳಿಸಿದೆ. ಇವರಲ್ಲಿ ಮೂವರು ಪೂರ್ವ ಪರಿಚಿತರು. 397ನೆಯ ಪುಟದಲ್ಲಿ ಸುಮಾರು 1600 ರಿಂದ 1811ರ ವರೆಗೆ ಹುಟ್ಟಿದ ಕವಿಗಳು ಗೊತ್ತಿಲ್ಲದ 6 ಹೊಸಗ್ರಂಥಗಳು ಹೇಳಿವೆ. ಇವು 2 ನೆಯ ಪರಿಶಿಷ್ಟದಲ್ಲಿ ಕೊಟ್ಟಿರುವ 213 ಗ್ರಂಥಗಳೊಡನೆ ಸೇರತಕ್ಕುವು. 398 ನೆಯ ಪುಟದಲ್ಲಿ 347 ರಿಂದ 382ರ ವರೆಗಿನ ಪುಟಗಳ ಗ್ರಂಥ ಶುದ್ಧಿ ತಿಳಿಸಿದೆ. 6 ನೆಯ ಪರಿಶಿಷ್ಟವು (ಪುಟಗಳು 399–417) ಪ್ರಥಮ ದ್ವಿತೀಯ ಸಂಪುಟಗಳಲ್ಲಿ ಹೇಳಿರುವ ಕವಿಗಳ ಮತ್ತು ಗಂಥಗಳ ಸೂಚಿಯ ರೂಪವಾಗಿದೆ. ಇದಾದಮೇಲೆ ಬರುವ ಅನುಬಂಧದಲ್ಲಿ (ಪುಟಗಳು 418–433) ಮೂರು ಸಂಪುಟಗಳಲ್ಲಿಯೂ ಹೇಳ

ದಿರುವ ಕೆಲವು ಹೊಸ ಗ್ರಂಥಗಳ ಹೆಸರು ಹೇಳಿದೆ. 7ನೆಯ ಪರಿಶಿಷ್ಟವು (ಪುಟಗಳು 435–470) ಕೆಲವರು ಹೊಸ ಪೂರ್ವಕವಿಗಳ ಮತ್ತು ಆಧುನಿಕರ ಚರಿತ್ರವನ್ನು ಒಳಕೊಂಡಿದೆ. ಪುಟಗಳು 435–462 ರಲ್ಲಿ 32 ಪೂರ್ವಕವಿಗಳ ವಿಷಯವು ಹೇಳಿದೆ: ಇವರಲ್ಲಿ 8 ಮಂದಿ ಪೂರ್ವಪರಿಚಿತರು–7 ಮಂದಿ ಹಿಂದೆ ಪುಟಗಳು 360–361ರಲ್ಲಿ ಉಕ್ತರಾಗಿದ್ದಾರೆ. ಆದರೆ ಇಲ್ಲಿ ಅವರ ವಚನಗಳು ಕೊಟ್ಟಿವೆ: ಮತ್ತೊಬ್ಬನು ದ್ವಿತೀಯ ಸಂಪುಟದಲ್ಲಿ ಉಕ್ತನಾಗಿದ್ದಾನೆ. 1109 ರಿಂದ 1840 ರ ವರೆಗೆ ಬಾಳಿದ ಉಳಿದ 24 ಕವಿಗಳಲ್ಲಿ 8 ಮಂದಿ ಪ್ರಥಮ ಸಂಪುಟಕ್ಕೂ ಮೂವರು ದ್ವಿತೀಯ ಸಂಪುಟಕ್ಕೂ 13 ಮಂದಿ ಈ ಸಂಪುಟಕ್ಕೂ ಸೇರತಕ್ಕವರು: ಇವರಲ್ಲಿ ಒಬ್ಬ ಸ್ತ್ರೀಯನ್ನು ಒಳಕೊಂಡ ಮೂವರು ವಚನಕಾರರೂ ಐವರು ಶಾಸನ ಕವಿಗಳೂ ಸೇರಿದ್ದಾರೆ. ಪುಟಗಳು 462–470 ರಲ್ಲಿ 44 ಆಧುನಿಕ ಗ್ರಂಥಕರ್ತರ ವಿಷಯವು ಹೇಳಿದೆ: ಇವರಲ್ಲಿ 13 ಮಂದಿ ಪೂರ್ವಪರಿಚಿತರು. ಆದರೆ ಇಲ್ಲಿ ಅವರ ಇನ್ನು ಕೆಲವು ಗ್ರಂಥಗಳು ಕೊಟ್ಟಿವೆ. ಗ್ರಂಥಶುದ್ಧಿಯಲ್ಲಿ (ಪುಟಗಳು 471–497) ಮಧುವಯ್ಯ, ಲಿಂಗಣಾರಾಧ್ಯ ಎಂಬ ಎಂಬ ಇಬ್ಬರು ಪೂರ್ವಕವಿಗಳ ವಿಷಯವು ಹೇಳಿದೆ: ಇವರಲ್ಲಿ 1ನೆಯವನು ಪ್ರಥಮ ಸಂಪುಟಕ್ಕೂ 2 ನೆಯವನು ದ್ವಿತೀಯ ಸಂಪುಟಕ್ಕೂ ಸೇರತಕ್ಕವರು. ಕೊನೆಯಲ್ಲಿರುವ ಅಕಾರಾದಿ ಸೂಚಿ 7 ನೆಯ ಪರಿಶಿಷ್ಟದಲ್ಲಿಯೂ ಗ್ರಂಥಶುದ್ಧಿಯಲ್ಲಿಯೂ ಹೇಳಿರುವ ಕವಿಗಳ ಮತ್ತು ಗ್ರಂಥಗಳ ಹೆಸರನ್ನು ತಿಳಿಸುತ್ತದೆ.

ಈ ಸಂಪುಟದಲ್ಲಿ ಹೇಳಿರುವ ಪೂರ್ವಕವಿಗಳ ಒಟ್ಟು ಸಂಖ್ಯೆ—ಮೂಲಗ್ರಂಥದಲ್ಲಿ 165, 1 ನೆಯ ಪರಿಶಿಷ್ಟದಲ್ಲಿ 33, 4ನೆಯ ಪರಿಶಿಷ್ಟದಲ್ಲಿ 125, 5ನೆಯ ಪರಿಶಿಷ್ಟದಲ್ಲಿ 3, 7ನೆಯ ಪರಿಶಿಷ್ಟದಲ್ಲಿ 24, ಗ್ರಂಥಶುದ್ಧಿಯಲ್ಲಿ 2—ಹೀಗೆ 352. ಈ ಸಂಖ್ಯೆಯಲ್ಲಿ 23 ಸ್ತ್ರೀಯರನ್ನು ಒಳಕೊಂಡ 124 ವಚನಕಾರರೂ ಬೇರೆ ಇಬ್ಬರು ಕಬ್ಬಿಗಿತಿಯರೂ 8 ಶಾಸನಕವಿಗಳೂ ಸೇರಿದ್ದಾರೆ. ಮತಾನುಸಾರವಾಗಿ ವಿಭಾಗಿಸಿದರೆ ಇವರಲ್ಲಿ ವೀರಶೈವರು 191, ಬ್ರಾಹ್ಮಣರು 108, ಜೈನರು 23, ಇತರರು 30. ಇತರರೊಳಗೆ 10 ಮಂದಿ ಅರಸರೂ 12 ಮಂದಿ ಒಕ್ಕಲಿಗರೂ 6 ಮಂದಿ ದೇವಾಂಗದವರೂ ಸೇರಿದ್ದಾರೆ. ಈ 352 ಕವಿಗಳಲ್ಲಿ 110 ಮಂದಿ ಪ್ರಥಮ ಸಂಪುಟಕ್ಕೂ 43 ಮಂದಿ ದ್ವಿತೀಯ ಸಂಪುಟಕ್ಕೂ ಸೇರತಕ್ಕವರು: ಉಳಿದ 199 ಮಂದಿಯೇ ಈ ಸಂಪುಟಕ್ಕೆ ಸೇರುತ್ತಾರೆ.

ಹಾಗೆಯೇ ಈ ಸಂಪುಟದಲ್ಲಿ ಹೇಳಿರುವ ಆಧುನಿಕ ಗ್ರಂಥಕರ್ತರ ಒಟ್ಟು ಸಂಖ್ಯೆ—ಮೂಲಗ್ರಂಥದಲ್ಲಿ 155, 5ನೆಯ ಪರಿಶಿಷ್ಟದಲ್ಲಿ 29, 7ನೆಯ ಪರಿಶಿ

ಷ್ಟದಲ್ಲಿ 31 – ಹೀಗೆ 215. ಇವರಲ್ಲಿ 7 ಮಂದಿ ಸ್ತ್ರೀಯರು ಸೇರಿದ್ದಾರೆ. ಮತದ ಪ್ರಕಾರ ಎಂಗಡಿಸಿದರೆ ಇವರಲ್ಲಿ ಬ್ರಾಹ್ಮಣರು 159, ವೀರಶೈವರು ಆ ಮತಕ್ಕೆ ಸೇರಿದ ಒಬ್ಬ ಮುಸಲ್ಮಾನನನ್ನು ಕೂಡಿಸಿಕೊಂಡು 27, ಜೈನರು 1, ಇತರರು 28. ಇತರರೊಳಗೆ ಇಬ್ಬರು ಒಕ್ಕಲಿಗರೂ 18 ಮಂದಿ ಕ್ರಿಸ್ತರೂ ಸೇರಿದ್ದಾರೆ.

ಪೂರ್ವಕವಿಗಳೂ ಆಧುನಿಕರೂ ಸೇರಿ ಈ ಸಂಪುಟದಲ್ಲಿ ಹೇಳಿರುವ ಗ್ರಂಥ ಕರ್ತರ ಒಟ್ಟು ಸಂಖ್ಯೆ 352+215=567. ಈ ಸಂಖ್ಯೆಯಲ್ಲಿ 124 ವಚನ ಕಾರರೂ 32 ಸ್ತ್ರೀಯರೂ 8 ಶಾಸನ ಕವಿಗಳೂ ಸೇರಿದ್ದಾರೆ. ಮತದ ಪ್ರಕಾರ ಇವರಲ್ಲಿ ಬ್ರಾಹ್ಮಣರು 267, ವೀರಶೈವರು 218, ಜೈನರು 24, ಇತರರು 58 ಇತರರೊಳಗೆ 10 ಮಂದಿ ಅರಸರೂ 14 ಮಂದಿ ಒಕ್ಕಲಿಗರೂ 6 ಮಂದಿ ದೇವಾಂಗದವರೂ 18 ಮಂದಿ ಕ್ರಿಸ್ತರೂ ಸೇರಿದ್ದಾರೆ. ಹಿಂದೆ ತಿಳಿಸಿದಂತೆ ಈ ಸಂಪುಟಕ್ಕೆ ಸೇರಬೇಕಾದ ಪೂರ್ವಕವಿಗಳ ಸಂಖ್ಯೆ 199: ಇದಕ್ಕೆ ಆಧುನಿಕರ ಸಂಖ್ಯೆಯಾದ 215ನ್ನು ಸೇರಿಸಿದರೆ ಒಟ್ಟು ಈ ಸಂಪುಟದ ಕವಿಗಳ ಸಂಖ್ಯೆ 414 ಆಗುತ್ತದೆ.

ವಚನಕಾರರು.

ಈ ಸಂಪುಟದಲ್ಲಿ ಕೊಟ್ಟಿರುವ ವಚನಕಾರರ ಸಂಖ್ಯೆ (124) ತಕ್ಕಮಟ್ಟಿಗೆ ದೊಡ್ಡದಾಗಿದೆ. ಇದಕ್ಕೆ ಪ್ರಥಮ ದ್ವಿತೀಯ ಸಂಪುಟಗಳಲ್ಲಿಯ ವಚನ ಕಾರರ ಸಂಖ್ಯೆಯನ್ನು (60) ಸೇರಿಸಿದರೆ ಒಟ್ಟುಸಂಖ್ಯೆ 184 ಆಗುತ್ತದೆ. ಇದಲ್ಲದೆ 6 ನೆಯ ಪರಿಶಿಷ್ಟದಲ್ಲಿ ವಚನಗಳೊಡನೆಯೂ ವಚನಗಳಿಲ್ಲದೆಯೂ 59 ಅಂಕಿತಗಳು ಉಕ್ತವಾಗಿವೆ. ಈ ಅಂಕಿತಗಳನ್ನು ಉಪಯೋಗಿಸಿದ 59 ವಚನಕಾರರು ಇದ್ದೇ ಇರಬೇಕು. ಆದುದರಿಂದ ನಮಗೆ ತಿಳಿದಮಟ್ಟಿಗೆ ವಚನಕಾರರ ಸಂಖ್ಯೆ 243 ಆಗುತ್ತದೆ. ಇವರಲ್ಲಿ ಕೆಲವರು ಮಾತ್ರ ಬಸವನ ಕಾಲಕ್ಕೆ ಹಿಂದೆ ಇದ್ದವರು: ಆದರೆ ಬಹುಸಂಖ್ಯಾತರು ಬಸವನ ಸಮಕಾಲದವರು. ಬಸವಯುಗದಲ್ಲಿ ಹುಟ್ಟಿದ ವಚನಗಳ ಸಂಖ್ಯೆ 160 ಕೋಟಿ ಎಂದು ಇತಿಹಾಸವಿದೆ. ಬಸವನ ಕಾಲಕ್ಕೆ ಈಚೆಯೂ ಹಲವರು ವಚನಗಳನ್ನು ಬರೆದಿದ್ದಾರೆ. ಈ ವಚನಗಳು ಕನ್ನಡಸಾಹಿತ್ಯದಲ್ಲಿ ಪೂಜ್ಯಸ್ಥಾನವನ್ನು ಪಡೆಯಲು ಅರ್ಹವಾಗಿವೆ. ಇವು ಗೂಢವಾದ ವೇದಾಂತ ವಿಷಯಗಳನ್ನು ಸುಲಭವಾದ ಮಾತುಗಳಿಂದ ಬಿಗಿಯಾದ ಶೈಲಿಯಲ್ಲಿ ಮನಮುಟ್ಟುವಂತೆ ಬೋಧಿಸುತ್ತವೆ. ಇವನ್ನು ಕನ್ನಡ ಉಪನಿಷತ್ತುಗಳು ಎಂದು ಕರೆಯಬಹುದು. ಇವುಗಳ ಮಹತ್ವವನ್ನು ಬಸವನೇ ಮೊದಲಾದವರು ಹೀಗೆ ಹೊಗಳಿದ್ದಾರೆ:—

ಆದ್ಯರ ವಚನ ಪರುಷ ಕಂಡಯ್ಯ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

ಹಾಲ ತೊಜ್ಜೆಗೆ ಬೆಲ್ಲದಂತಹ ಕೆಸಱು; ಸಕ್ಕರೆಯಂತಹ ಮಱಲು; ತವರಾ ಜನಂತಹ ನೊರೆತೆರೆಗಳು. ಇಂತಪ್ಪ ಆದ್ಯರ ವಚನವಿರಲು ಬೇಱಿ ಬಾವಿಯ ತೋಡಿ ಉಪ್ಪುನೀರ ಸವಿದಂತಾಯಿತ್ಕಯ್ಯ ಎನ್ನ ಯುಕ್ತಿ.

ಬಸವ

ನಮ್ಮ ಆದ್ಯರ ವಚನ ಜ್ಞಾನದ ನೆಲೆಯ ತೆಗೆದಿರಿಸಿತ್ತು. ನಮ್ಮ ಆದ್ಯರ ವಚನ ಮದಮೂತ್ಸರ್ಯಾದಿ ಅರಿಷಡ್ವರ್ಗ ಸಪ್ತವ್ಯಸನ ಪಂಚೇಂದ್ರಿಯ ದಶವಾಯುಗ ಳಿಚ್ಛೆಗೆ ಹರಿವ ಮನವ ಸ್ವಸ್ಥವಾಗಿ ನಿಲಿಸಿತ್ತು. ನಮ್ಮ ಆದ್ಯರ ವಚನ ಅಂಗೇಂದ್ರಿ ಯಂಗಳ ಲಿಂಗೇಂದ್ರಿಯವೆನಿಸಿತ್ತು. ನಮ್ಮ ಆದ್ಯರ ವಚನ ನೂಱಿಂದುಸ್ಥಲವ ವಿಾಱಿದ ಮಹದಲ್ಲಿ ನೆಲಸಿತ್ತು. ಇಂತಪ್ಪ ಆದ್ಯರ ವಚನ ಭಂಡಾರವ ನಮ್ಮ ಪ್ರಭುದೇವರು ಮುಖ್ಯವಾದ 770 ಅಮರಗಣಂಗಳು ಅಸಂಖ್ಯಾತ ಪುರಾತ ನರು ಪ್ರಮಥಗಣಂಗಳು ಕೇಳಿ ಹೇಱಿ ಕೊಂಡಾಡಿದ ಕಾರಣ ನಮ್ಮ ಕೂಡಲ ಚೆನ್ನ ಸಂಗಯ್ಯನಲ್ಲಿ ಸರ್ವಸುಖವ ಸೂಱಿಗೊಂಡು ಸ್ವಯಲಿಂಗವಾದರು. ಇಂತ ಪ್ಪ ಪುರಾತನರ ವಚನಂಗಳ ಎರಡಿಲ್ಲದೆ ಕೊಂಡಾಡಿ ತನುಮನಧನವ ಎರಡಿಲ್ಲದೆ ಸಮರ್ಪಿಸುವ ಭಕ್ತರ ಭೃತ್ಯ ನಾನು, ಆಳಿನಾಳಯ್ಯ ನಾನು.

ಚೆನ್ನಬಸವ

ತಿಳಿಪಲ್ ಶಿವಜೀವೈಕ್ಯಮು। ನಿಲಿಪಲ್ ಭವಪಾಶಬಂಧಮುಂ ಶಿವಪದವಿ। ತ್ರುಟಿಪಲ್ ನಿಜದೊಳ್ ಚಿತ್ಕಿ ್ರಯೆ। ಯಳವಟ್ಟ ಪುರಾತನೋಕ್ತಿಯೊಂದೆ ಸಮರ್ಥಂ॥

ಕಂಬಾಳ ಶಾಂತಮುಲ್ಲೇಶ (380ನೆಯ ಪುಟವನ್ನು ನೋಡಿ).

ಪುಟಗಳು 356—359ರಲ್ಲಿ ಉಕ್ತರಾದ ವಚನಕಾರರಿಗೆ ಕೊಟ್ಟಿರುವ ಕಾಲವು ಸರಿಯಾಗಿದೆ ಎಂದು ಖಂಡಿತವಾಗಿ ಹೇಳಲಾರೆನು.

ಆದಿಭಾಗದಲ್ಲಿ ವಾಚಕರ ಸೌಕರ್ಯಕ್ಕಾಗಿ ಈ ಸಂಪುಟದಲ್ಲಿ 7ನೆಯ ಪರಿಶಿ ಷ್ಟದವರೆಗೆ ವಿವರಿಸಿರುವ ಕವಿಗಳ ಮತ್ತು ಗ್ರಂಥಗಳ ಪಟ್ಟಿಗಳು ಬೇರೆ ಬೇರೆ ವರ್ಣಾನುಕ್ರಮವಾಗಿ ಪುಟಸಂಖ್ಯೆಯೊಡನೆ ಕೊಟ್ಟಿವೆ. 7ನೆಯ ಪರಿಶಿಷ್ಟದ ಲ್ಲಿಯೂ ಅದರ ಮುಂದೆ ಇರುವ ಗ್ರಂಥಶುದ್ಧಿಯಲ್ಲಿಯೂ ಬರುವ ಕವಿಗಳ ಮತ್ತು ಗ್ರಂಥಗಳ ಹೆಸರುಗಳು ಕೊನೆಯಲ್ಲಿರುವ ಅಕಾರಾದಿಸೂಚಿಯಲ್ಲಿ ಕೊಟ್ಟಿವೆ. ಈ ಸಂಪುಟದಲ್ಲಿ ಗ್ರಂಥಶುದ್ಧಿ ಪುಟ 327, ಪುಟ 398, ಪುಟ 471

ಹೀಗೆ ಮೂರುಕಡೆ ಬರುತ್ತದೆ. ಕೊನೆಯ ಗ್ರಂಥಶುದ್ಧಿ ಈ ಸಂಪುಟಕ್ಕೆ ಮಾತ್ರ ವಲ್ಲದೆ ಪ್ರಥಮ ದ್ವಿತೀಯ ಸಂಪುಟಗಳಿಗೂ ಅನ್ವಯಿಸುತ್ತದೆ.

ಈ ಸಂಪುಟವು ಹಿಂದೆ ತಿಳಿಯದಿದ್ದ ಅನೇಕ ಕವಿಗಳ ಮತ್ತು ಗ್ರಂಥಗಳ ವಿಷಯವನ್ನು ಒಳಕೊಂಡಿದೆ. ಇದರಲ್ಲಿ ಹೇಳಿರುವ ಕವಿಗಳ ಮತ್ತು ಗ್ರಂಥಗಳ ವಿಷಯವು ಅರ್ಧಪಾಲಿಗಿಂತ ಹೆಚ್ಚು ಹೊಸದೆಂದು ಸ್ಥೂಲವಾಗಿ ಹೇಳಬಹುದು. ಈ ಅಂಶವು ಗ್ರಂಥವನ್ನು ಕ್ರಮವಾಗಿ ಓದಿ ನೋಡಿದಲ್ಲಿ ಸ್ವತಃ ವ್ಯಕ್ತವಾಗುವುದರಿಂದ ಅದನ್ನು ಇಲ್ಲಿ ವಿವರಿಸಬೇಕಾದ ಅವಶ್ಯಕತೆ ಕಾಣಬರುವುದಿಲ್ಲ. ಇಲ್ಲಿ ಹೇಳಿರುವರೆಲ್ಲರೂ ಉದಾತ್ತಮಕವಿಗಳೆಂದು ಭಾವಿಸಲಾಗದು ಇವರಲ್ಲಿ 2 ಮುಖ್ಯವಾಗಿ ಅಧುನಿಕರಲ್ಲಿ, ಹಲವರು ಕವಿಗಳೆನ್ನಿಸಿಕೊಳ್ಳಲು ಅರ್ಹರಲ್ಲವೆಂದು ಹಿಂದೆಯೇ ಹೇಳಿದ್ದೇನೆ. ನನ್ನ ತಿಳಿವಳಿಕೆಗೆ ಬಂದ ಪ್ರತಿಯೊಬ್ಬ ಗ್ರಂಥಕರ್ತನ ಹೆಸರೂ ಗ್ರಂಥದಲ್ಲಿ ಇರಬೇಕೆಂದು ಭಾವಿಸಿ ಎಲ್ಲರನ್ನೂ ಸೇರಿಸಿದ್ದೇನೆ. ಈಚೀಚೆಗೆ ಕವಿತಾಶಕ್ತಿ ಕುಂದುತ್ತ ಬಂದಿರುವುದು ಎಲ್ಲರಿಗೂ ವೇದ್ಯವಾಗಿಯೇ ಇದೆ.

ಈ ಸಂಪುಟವನ್ನು ಬರೆವುದಕ್ಕಾಗಿ ಮೈಸೂರು ಸಾಹಿತ್ಯಕೋಶಾಲಯ. ಶ್ರೀಮತ್ಪರಮಹಂಸೇತ್ಯಾದಿಗಳಾದ ಮೇಲುಗೋಟೆ ಯತಿರಾಜಸ್ವಾಮಿಗಳು. ಶ್ರೀಮಂತರು ಕರ್ಣಾಟಕ ಭಾಷಾರತ್ನ ಮೈಸೂರು ಕರಿಬಸವಶಾಸ್ತ್ರಿಗಳು, ಬೆಂಗಳೂರು ಪಂಡಿತ ಎಂ. ಎಲ್ಲಪ್ಪನವರು, ಅರಳೆಪೇಟೆ ಗುರುಸಿದ್ದಪ್ಪನವರು ಇವರುಗಳಲ್ಲಿದ್ದ ಪುಸ್ತಕ ಸಂಗ್ರಹಗಳು ಇವುಗಳನ್ನು ಪರೀಕ್ಷಿಸಿದೆನು. ಕೋಶಾಲಯದ ಅಧಿಕಾರಿಗಳಿಗೂ ಮೇಲೆ ಹೇಳಿದ ಮಹಾಶಯರುಗಳಿಗೂ ನನ್ನ ಕೃತಜ್ಞತೆಯನ್ನು ತಿಳಿಸುತ್ತೇನೆ. ಪೀಠಿಕೆಯೇ ಕೈಬರಹದ ಪುಸ್ತಕಗಳನ್ನಾಗಲಿ ಸೂಚನೆಗಳನ್ನಾಗಲಿ ಗುಣದೋಷ ವಿಮರ್ಶೆಗಳನ್ನಾಗಲಿ ಕಳುಹಿಸಿಕೊಟ್ಟು ಸಹಾಯವಾಡಿದ ಶ್ರೀಸಂತರು ಬಾರಣಗೆರೆ ನಿಜಾಲಿಂಗ ಮತದ ಶಾಂತವೀರಾರ್ಯರು, ಹೆಗ್ಗಡದೇವನ ಕೋಟೆ ತಾಲ್ಲೂಕು ಎತ್ತಗ ಮಠದ ದೊಡ್ಡರಾಮಾರಾಧ್ಯರು, ಮಹಾಮಹೋಪಾಧ್ಯಾಯ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು. ಧಾರವಾಡದ ರಾಮಚಂದ್ರ ಹನುಮಂತ ದೇಶಪಾಂಡೆ ಎಂ. ಎ., ಪುತ್ತೂರು ಉಗ್ರಾಣ ಮಂಗೇಶರಾಯರು, ಮದರಾಸ್ ಬೆನಗಲ್ ರಾಮರಾಯರು ಎಂ. ಎ. ಎಲ್. ಎಲ್. ಬಿ., ಹಲಸಂಗಿ ಜೆ. ಚೆನ್ನಮಲ್ಲಪ್ಪನವರು, ಧಾರವಾಡದ ಎಸ್. ಎನ್. ಕೊಪ್ಪಿಕರ್, ಕರ್ಕಿಯ ವೆಂಕಪ್ಪ ಪರಮಯ್ಯ ಹೆಗ್ಗಡೆ ಕಡೆಕೋಡಿ, ಹಾವೇರಿಯ ಎಚ್. ಜಿ. ಬೆಂಗೇರಿ ಬಿ. ಎ., ಮೈಸೂರು ಪಂಡಿತ ರಘುಪತ್ಯಾಚಾರ್ಯರು ಮತ್ತು ಪಂಡಿತ ಕೆ. ಸಿ. ನಂಜುಂಡಾರಾಧ್ಯರು, ಕನ್ನಡ ಪ್ರೊಫೆಸರ್. ಎಚ್. ಚೆನ್ನಕೇಶವಯ್ಯಂಗಾರ್, ಬೆಂಗಳೂರು ಜೀರಿಗೆ ಬಸವಲಿಂಗಪ್ಪನ

ವರು ಮಂಜೇಶ್ವರದ ಎಂ. ಗೋವಿಂದ ಪೈ, ಮದರಾಸ್ ಯೂನಿವರ್ಸಿಟಿ ಕನ್ನಡ ಫೆಲ್ಲೋ ಎಚ್. ಶೇಷಯ್ಯಂಗಾರ್, ಎಚ್. ನಾರಾಯಣರಾಯರು ಬಿ. ಎ. ಬಿ.ಎಲ್., ರಾಯ್ ಬಹಾದುರ್ ಎಂ. ರಘುನಾಥರಾಯರು ಬಿ.ಎ., ಈ ಮಹನೀಯರುಗಳ ಉಪಕಾರವು ಚಿರಸ್ಮರಣೀಯವಾಗಿದೆ. ಇವರೊಳಗೆ ಮೊದಲು ಹೇಳಿರುವ ಇಬ್ಬರು ಮಹಾಶಯರು ದೂರವಾದ ತಮ್ಮ ವಾಸಸ್ಥಳಗಳಿಂದ ನನ್ನ ಅವಲೋಕನಕ್ಕಾಗಿ ಹಲವು ಓಲೆಯ ಪುಸ್ತಕಗಳನ್ನು ತರುವ ಶ್ರಮವನ್ನು ವಹಿಸಿ ಬಹಳ ಸಹಾಯಮಾಡಿದ್ದಾರೆ. ಈ ಸಂದರ್ಭದಲ್ಲಿ ಮೈಸೂರು ಶಾಸನ ಇಲಾಖೆಯ ಶ್ರೀಮಾನ್ ಎಂ. ಸಿ. ಶ್ರೀನಿವಾಸಯ್ಯಂಗಾರ್ ಈ ಸಂಪುಟದ ಮತ್ತು, ದ್ವಿತೀಯ ಸಂಪುಟದ ಕೆಲವು ಭಾಗಗಳನ್ನು ಮುದ್ರಣಕ್ಕೊಕ್ಕುರ ಪ್ರತಿಮಾಡಿ ಸಹಕರಿಸಿದುದೂ ಸ್ಮರಿಸತಕ್ಕುದಾಗಿದೆ. ಕೊನೆಗೆ ಶ್ರೀಮಾನ್ ಸಿ. ವಿ. ರಾಘವೇಂದ್ರಯ್ಯ, ನನ್ನ ಸೋದರದಳಿಯ ಶ್ರೀಮಾನ್ ಎಂ. ಎ. ರಂಗಸ್ವಾಮಯ್ಯಂಗಾರ್ ಬಿ. ಎ. ಮತ್ತು ನನ್ನಮಗ ಶ್ರೀಮಾನ್ ಆರ್. ತಿರುನಾರಣಯ್ಯಂಗಾರ್ ಇವರುಗಳು ಮುದ್ರಣಕ್ಕಾಗಿ ಈ ಸಂಪುಟದ ಕೆಲವುಭಾಗಗಳನ್ನು ಪ್ರತಿಮಾಡುವುದು, ಈ ಸಂಪುಟಕ್ಕೆ ವಿಷಯಸೂಚಿಕೆ, ಅನುಬಂಧ, ಅಕಾರಾದಿಸೂಚಿ ಇವುಗಳನ್ನು ಸಿದ್ಧಮಾಡುವುದು ಈ ಕೆಲಸಗಳಲ್ಲಿ ಮಾಡಿದ ಸಹಾಯವೂ ತಿಳಿಸತಕ್ಕುದಾಗಿದೆ.

ಈ ಸಂಪುಟವು 18,19 ಈ ಎರಡು ಶತಮಾನಗಳಲ್ಲಿದ್ದ ಕವಿಗಳ ಸಮಗ್ರವಾದ ಮತ್ತು ನಿರ್ದೋಷವಾದ ಚರಿತೆಯನ್ನು ಒಳಕೊಂಡಿದೆ ಎಂದು ನಾನು ಹೇಳಲಾರೆನು. ಇದರಲ್ಲಿ ಎಷ್ಟೋ ಕುಂದು ಕೊರತೆಗಳಿವೆ. ಆದರೆ ನನಗೆ ದೊರೆತ ಸಾಮಗ್ರಿಯ ಆಧಾರದಿಂದ ಎಷ್ಟರಮಟ್ಟಿಗೆ ಸಮಗ್ರವಾಗಿಯೂ ದೋಷರಹಿತವಾಗಿಯೂ ಮಾಡಲು ಸಾಧ್ಯವೊ ಅಷ್ಟರಮಟ್ಟಿಗೆ ಮಾಡಲು ಪ್ರಯತ್ನಿಸಿದ್ದೇನೆ. 69ನೆಯ ವಯಸ್ಸನ್ನು ನಡೆಯುತ್ತಿರುವ ವಾರ್ಧಕ್ಯ, ಎರಡುಕಣ್ಣುಗಳಿಗೂ ಬಂದಿರುವ ಪರೆಯಿಂದ ಉಂಟಾಗಿರುವ ನೇತ್ರ ಪಾಟವದ ಕೊರತೆ, ಈ ಪ್ರತಿಬಂಧಕಗಳಿದ್ದರೂ ಈ ಸಂಪುಟವನ್ನು ಪೂರ್ತಿಮಾಡಲು ಸಾಧ್ಯವಾದುದಕ್ಕಾಗಿ ಸಂತೋಷಿಸಿ ಇದನ್ನೂ ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದ್ದೇನೆ. ಇದೂ ಅವರ ಮೆಚ್ಚಿಕೆಗೂ ಪ್ರೋತ್ಸಾಹಕ್ಕೂ ಪಾತ್ರವಾದರೆ ನನ್ನ ಶ್ರಮವು ಸಾರ್ಥಕವೆಂದು ಭಾವಿಸುವೆನು.

ಕರ್ಣಾಟಕ ಕವಿಚರಿತೆ.

ಕನ್ನಡ ಸಾಹಿತ್ಯದ ವಿಪುಲತೆ.

ಕನ್ನಡದಲ್ಲಿ ಹೇರಳವಾಗಿ ಗ್ರಂಥಗಳು ಹುಟ್ಟಿವೆ. ಈ ಭಾಷೆಯ ಸಾಹಿತ್ಯವು ದಕ್ಷಿಣ ಹಿಂದೂದೇಶದ ಇತರ ದ್ರಾವಿಡಭಾಷೆಗಳ ಸಾಹಿತ್ಯದೊಡನೆ

ಹೋಲಿಸಿದರೆ ಹಿಂದಾಗುವಂತಿಲ್ಲ. ಕರ್ಣಾಟಕ ಕವಿಚರಿತೆಯ ಮೂರುಸಂಪುಟಗಳನ್ನು ಸ್ಥೂಲದೃಷ್ಟಿಯಿಂದ ನೋಡಿದರೂ ಈ ಹೇಳಿಕೆಯ ನಿಜತ್ವವು ದೃಢಪಡುತ್ತದೆ. ಇತರ ದ್ರಾವಿಡ ಭಾಷೆಗಳಲ್ಲಿರುವಂತೆಯೇ ಕನ್ನಡದಲ್ಲಿ ಬಹು ಗ್ರಂಥಗಳು ಮತಕ್ಕೆ ಸಂಬಂಧಪಟ್ಟುವು. ಭಟ್ಟಾಕಳಂಕನು (1604) ಕನ್ನಡದಲ್ಲಿ ವ್ಯಾಕರಣ, ತರ್ಕ, ವೇದಾಂತ ಇವಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳೂ ಕಾವ್ಯ, ನಾಟಕ, ಅಲಂಕಾರ ಕಲೆ, ಶಾಸ್ತ್ರ ಇವಕ್ಕೆ ಸಂಬಂಧಪಟ್ಟ ಅಸಂಖ್ಯಾತವಾದ ಗ್ರಂಥಗಳೂ ಹುಟ್ಟಿವೆ ಎಂದು ತನ್ನ ಶಬ್ದಾನುಶಾಸನದ ಉಪೋದ್ಘಾತದಲ್ಲಿ ಹೇಳಿ[1] ಕರ್ಣಾಟಕ ಸಾಹಿತ್ಯದ ವಿಪುಲತೆಯನ್ನು ಸೂಚಿಸಿದ್ದಾನೆ. ಕನ್ನಡ ಸಾಹಿತ್ಯವನ್ನು ಪರೀಕ್ಷಿಸಿದರೆ ಕಾವ್ಯಗಳು, ಛಂದೋಲಂಕಾರ ವ್ಯಾಕರಣ ವಿಷಯವಾದ ಗ್ರಂಥಗಳು, ನಿಘಂಟುಗಳು ಮಾತ್ರವಲ್ಲದೆ ಜೀವನ ಚರಿತ್ರೆ, ಸ್ಥಳೀಯ ಚರಿತ್ರೆ, ತತ್ವಶಾಸ್ತ್ರ ಇವುಗಳ ವಿಷಯವಾದ ಗ್ರಂಥಗಳೂ ವೈದ್ಯ, ಗಣಿತ. ಜ್ಯೋತಿಷ, ಪಾಕಶಾಸ್ತ್ರ, ಕಾಮುಶಾಸ್ತ್ರ ಮುಂತಾದ ವಿಷಯಗಳನ್ನು ಪ್ರತಿವಾದಿಸುವ ಹಲವು ಗ್ರಂಥಗಳೂ ಗೋಚರವಾಗುತ್ತವೆ. ಇದಲ್ಲದೆ ಉತ್ತಮ ಕಾವ್ಯ ಸರಣಿಯಲ್ಲಿ ಘ್ರೌಢ ಕವಿಗಳಿಂದ ರಚಿತವಾದ ಅನೇಕ ಕನ್ನಡಶಾಸನಗಳೂ ದೊರೆಯುತ್ತವೆ.

ಕನ್ನಡ ಕವಿಗಳು.

ಕನ್ನಡಭಾಷೆಗೆ ಜೈನರೇ ಆದಿಕವಿಗಳು. ಈಗ ನಮಗೆ ದೊರೆತಿರುವ ಪುರಾತನವಾದ ಮತ್ತು ಉತ್ತಮವಾದ ಗ್ರಂಥಗಳೆಲ್ಲಾ ಜೈನಕವಿಗಳಿಂದ ರಚಿತವಾಗುವು. ಗ್ರಂಥ ರಚನೆಯಲ್ಲಿ ಜೈನರ ಪ್ರಾಬಲ್ಯದ ಕಾಲವು ಕನ್ನಡ ಸಾಹಿತ್ಯದಉಚ್ಚಸ್ಥಿತಿಯ ಕಾಲವೆಂದು ತಿಳಿಯಬೇಕು. ಕನ್ನಡಭಾಷೆಯ ಸೌಂದರ್ಯ ಕಾಂತಿಗಳಿಗೆ ಹಿಂದಣ ಜೈನ ಕವಿಗಳೇ ಬಹಳ ಮಟ್ಟಿಗೆ ಕಾರಣಭೂತರು. ಇವರು ಶುದ್ಧವಾದ ಮತ್ತು ಗಂಭೀರವಾದಶೈಲಿಯಲ್ಲಿ ಗ್ರಂಥಗಳನ್ನು ರಚಿಸಿ ಗ್ರಂಥರಚನಾಕೌಶಲವನ್ನು ಎತ್ತರವಾದ ಅಂತಸ್ತಿಗೆ ಏರಿಸಿದ್ದಾರೆ. ಪಂಪಪೊನ್ನರನ್ನರು ಕವಿಗಳೊಳಗೆ ರತ್ನತ್ರಯರೆನ್ನಿಸಿಕೊಂಡಿರುವುದು ಉಚಿತವೇ ಸರಿ. ಪೊನ್ನನು ರಾಷ್ಟ್ರಕೂಟರಾಜನಾದ 3ನೆಯ ಕೃಷ್ಣನಿಂದಲೂ ರನ್ನನು ಚಾಳುಕ್ಯರಾಜನಾದ ತೈಲಪನಿಂದಲೂ ಜನ್ನನು ಹೊಯ್ಸಳರಾಜನಾದ 2ನೆಯ ಬಲ್ಲಾಳನಿಂದಲೂ ಕವಿಚಕ್ರವರ್ತಿ ಎಂಬ

---

1. ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ ಕಲಾಶಾಸ್ತ್ರ ವಿಷಯಾಣಾಂಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್.

ಬಿರುದನ್ನು ಪಡೆದರು. 2ನೆಯ ನಾಗವರ್ಮನು ಚಾಳುಕ್ಯರಾಜನಾದ 2ನೆಯ ಜಗದೇಕಮಲ್ಲನಲ್ಲಿಯೂ ಜನ್ನನ ತಂದೆಯೂ ಕೇಶಿರಾಜನ ಮಾತಾಮಹನೂ ಆದ ಸುಮನೋಬಾಣನು ಹೊಯ್ಸಳರಾಜನಾದ 2ನೆಯ ನಾರಸಿಂಹನಲ್ಲಿಯೂ ಕಟ ಕೋಪಾಧ್ಯಾಯರಾಗಿದ್ದರು. ಇತರ ಕವಿಗಳೂ ಕೂಡ 14ನೆಯ ಶತಮಾನದ ಕೊನೆಯವರೆಗೆ ಶ್ಲಾಘ್ಯವಾದ ಚಂಪೂಕಾವ್ಯಗಳನ್ನು ಬರೆದರು. ಇವರಲ್ಲಿ ಕೊನೆಯವನು ಮಧುರನೆಂದು ಹೇಳಬಹುದು. ಕನ್ನಡ ಭಾಷಾಭ್ಯಾಸಕ್ಕೆ ಸಹ ಕಾರಿಯಾದ ಛಂದೋಲಂಕಾರ ವ್ಯಾಕರಣಗ್ರಂಥಗಳೂ ನಿಘಂಟುಗಳೂ ಬಹಳ ಮಟ್ಟಿಗೆ ಜೈನರಿಂದಲೇ ರಚಿತವಾಗಿವೆ. ತಮಿಳನಲ್ಲಿಯೂ ತಕ್ಕಮಟ್ಟಿಗೆ ಹೀಗೆಯೇ ಆಗಿದೆ.

ಷಟ್ಪದೀ ಗ್ರಂಥಗಳನ್ನು ಬರೆದವರಲ್ಲಿ ಕುಮುದೇಂದು, ಭಾಸ್ಕರ, 3ನೆಯ ಮಂಗರಸ ಮುಂತಾದವರನ್ನು ಹೇಳಬಹುದು.

ವೀರಶೈವರು ತಮ್ಮ ಮತಗ್ರಂಥಗಳನ್ನು ಬಹಳಮಟ್ಟಿಗೆ ಕನ್ನಡದಲ್ಲಿ ಬರೆದು ಆ ಭಾಷೆಯ ಅಭಿವೃದ್ಧಿಗೆ ವಿಶೇಷವಾಗಿ ಸಹಾಯ ಮಾಡಿದ್ದಾರೆ. ಹಿಂದೆ ತಿಳಿಸಿದಂತೆ ಬಸವನೂ ಅವನ ಸಮಕಾಲದವರೂ ಪ್ರಾಯಿಕವಾಗಿ ಸಾಮಾನ್ಯ ಜನರ ಉಪಯೋಗಕ್ಕೊಸ್ಕರ ವಚನಗಳನ್ನು ಪ್ರಚಾರಕ್ಕೆ ತಂದರು. ಬಸವನ ಸಮಕಾಲಿಕರಾದ ಸಮಾರು 200 ಮಂದಿಯೂ ಅವನಿಗೆ ಹಿಂದೆ ಕೆಲವರೂ ಈಚೆ ಹಲವರೂ ವಚನಗಳನ್ನು ಬರೆದಿದ್ದಾರೆ. ಈ ವಚನಕಾರರಲ್ಲಿ ಹಲವರು ಸ್ತ್ರೀಯರೂ ಸೇರಿದ್ದಾರೆ. ಡಾಕ್ಟರ್ ಫ್ಲೀಟ್ ಹೇಳುವಂತೆ[2] ಉತ್ತರದಿಕ್ಕಿನಿಂದ ಅಡಿಗಡಿಗೆ ಆಕ್ರಮಣ ಮಾಡುತ್ತಿದ್ದ ಮಹರಾಠರ ಅವಾಂತರದಲ್ಲಿ ಇತ್ತೀಚೆಗೆ ಅಂದವಾದ ಕನ್ನಡಭಾಷೆಯನ್ನು ಉಳಿಸಿದ ಕೀರ್ತಿ ಬಹಳಮಟ್ಟಿಗೆ ವೀರಶೈವರಿಗೆ ಸಲ್ಲತಕ್ಕುದಾಗಿದೆ. ವೀರಶೈವ ಕವಿಗಳಲ್ಲಿ ಹರೀಶ್ವರನು ಪ್ರಥಮಸ್ಥಾನವನ್ನು ಪಡೆದಿದ್ದಾನೆ. ಈಚೆಗೆ ಚಂಪೂಗ್ರಂಥಗಳನ್ನು ಬರೆದವರಲ್ಲಿ ಷಡಕ್ಷರದೇವ, ಸುರಂಗ ಕವಿ ಇವರ ಹೆಸರುಗಳನ್ನು ಹೇಳಬಹುದು. ರಾಘವಾಂಕ, ಪದ್ಮಣಾಂಕ, ವಿರೂಪಾಕ್ಷ ಪಂಡಿತ, ಮಲ್ಲಣಾರ್ಯ, ಬೊಮ್ಮರಸ, ನಜುಂಡ ಮೊದಲಾದ ಹಲವರು ಕವಿಗಳು ಷಟ್ಪದಿಯಲ್ಲಿಯೂ ಸಾಂಗತ್ಯದಲ್ಲಿಯೂ ಒಳ್ಳೆಯ ಗ್ರಂಥಗಳನ್ನು ಬರೆದಿದ್ದಾರೆ.

---

1. ಕನ್ನರನಾದರದಿಂ ಕುಡೆ! ಪೊನ್ನಂ ಮನವೊಸೆದು ತೈಲಪಂ ಕುಡೆರನ್ನಂ
ಮನ್ನಿಸಿ ಬಲ್ಲಾಳಂ ಕುಡೆ । ಜನ್ನಂ ಕವಿಚಕ್ರವರ್ತಿವೆಸರಂ ಪಡೆದಂ॥

2. Dynasties of Kanarese Districts, 477

ಬ್ರಾಹ್ಮಣ ಕವಿಗಳಲ್ಲಿ ರುದ್ರಭಟ್ಟನು ಅಗ್ರಗಣ್ಯನು. ಈಚೆಗೆ ಬಾಳಿದ ಜಂಪೂಗ್ರಂಥಕಾರರಲ್ಲಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಮಲ್ಲಿಕಾರ್ಜುನ, ತಿಮ್ಮಕವಿ ಇವರು ಗಣ್ಯರು. ಷಟ್ಪದೀಗ್ರಂಥಕಾರರಲ್ಲಿ ಕುಮಾರ ವ್ಯಾಸ, ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಲಕ್ಷ್ಮಕವಿ ಮೊದಲಾದವರನ್ನು ಹೇಳ ಬಹುದು.

ಮೈಸೂರು ಮಹಾರಾಜರುಗಳಲ್ಲಿ ಚಾಮರಾಜ ಒಡೆಯರ್, ಚಿಕ್ಕದೇವ ರಾಜ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್ ಈ ಮೂವರು ಕನ್ನಡ ಭಾಷಾಭಿವೃದ್ಧಿಯಲ್ಲಿ ಆದರವನ್ನು ತೋರಿಸಿ ಗ್ರಂಥಕರ್ತರಿಗೆ ಉತ್ತೇಜನವನ್ನು ಕೊಟ್ಟುದಲ್ಲದೆ ಸ್ವತಃ ಗ್ರಂಥಗಳನ್ನೂ ರಚಿಸಿರುವುದು ಗಮನಿಸತಕ್ಕ ವಿಷಯ ವಾಗಿದೆ. ಅಲ್ಲದೆ ಮೈಸೂರು ಮಹಾರಾಜರಾದ 1ನೆಯ ಕೃಷ್ಣರಾಜ ಒಡೆಯರ ಮಹಿಷಿಯಾದ ಚೆಲುವಾಂಬೆ ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವುದು ಸ್ತೋತ್ರಾರ್ಹವಾಗಿದೆ. ಗ್ರಂಥ ಕರ್ತರಾದ ಇತರ ಸ್ತ್ರೀಯರಲ್ಲಿ ಹೊನ್ನಮ್ಮ, ಶ್ರೀರಂಗಮ್ಮ, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರನ್ನು ಹೇಳಬಹುದು.

ಗ್ರಂಥಕರ್ತರ ಒಟ್ಟು ಸಂಖ್ಯೆ.

ಈ ಸಂಪುಟದಲ್ಲಿ ಹೇಳಿರುವ ಗ್ರಂಥಕರ್ತರ ಸಂಖ್ಯೆಯೂ ಮತದ ಪ್ರಕಾರ ಅವರ ವಿಭಾಗವೂ ಹಿಂದೆಯೇ ಕೊಟ್ಟಿವೆ(ಪುಟ xxviii). ಪ್ರಥಮ ಸಂಪುಟದಲ್ಲ ಹೇಳಿರುವ ಕವಿಗಳ ಸಂಖ್ಯೆ 280. ಇದರಲ್ಲಿ 45 ಮಂದಿ ವಚನಕಾರರೂ 40 ಮಂದಿ ಶಾಸನ ಕವಿಗಳೂ 6 ಮಂದಿ ಸ್ತ್ರೀಯರೂ ಒಬ್ಬ ದೊರೆಯೂ ಇಬ್ಬರು ರಾಜಕುಮಾರರೂ ಸೇರಿದ್ದಾರೆ. ಮತದ ಪ್ರಕಾರ ಇವರಲ್ಲಿ ಜೈನರು 95, ವೀರಶೈವರು 90, ಬ್ರಾಹ್ಮಣರು 45, ಇತರರು 50. ಪ್ರಥಮಸಂಪುಟದ ತಿದ್ದಿದ ಮುದ್ರಣಕ್ಕೆ ದ್ವಿತೀಯ ಸಂಪುಟದಿಂದ ಸೇರಿಸಿರುವ ಕವಿಗಳನ್ನು ಬಿಟ್ಟು ದ್ವಿತೀಯ ಸಂಪುಟದ ಕವಿಗಳ ಸಂಖ್ಯೆ 301. ಇದು 15 ಮಂದಿ ವಚನಕಾರ ರನ್ನೂ 3 ಮಂದಿ ಶಾಸನಕವಿಗಳನ್ನೂ 4 ಮಂದಿ ಸ್ತ್ರೀಯರನ್ನೂ ಮೂವರು ಮಹಾರಾಜರನ್ನು ಒಳಕೊಂಡ 12 ಮಂದಿ ಅರಸರನ್ನೂ ಒಳಕೊಂಡಿದೆ. ಇವ ರಲ್ಲಿ ಮತದ ಪ್ರಕಾರ ವೀರಶೈವರು 145, ಬ್ರಾಹ್ಮಣರು 76, ಜೈನರು 56, ಇತರರು 24. ಅಂತು ಮೂರು ಸಂಪುಟಗಳಲ್ಲಿಯೂ ಹೇಳಿರುವ ಗ್ರಂಥಕ ರ್ತರ ಒಟ್ಟು ಸಂಖ್ಯೆ 1148 ಆಗುತ್ತದೆ. ಮೇಲೆ ತಿಳಿಸಿರುವ ಅಂಶಗಳನ್ನು ಕೆಳ ಗಣ ಪಟ್ಟಿ ವಿಶದವಾಗಿ ತೋರಿಸುತ್ತದೆ:—

ಸಂಪುಟ	ಗ್ರಂಥಕರ್ತರಸಂಖ್ಯೆ	ಜೈನರು	ವೀರಶೈವರು	ಬ್ರಾಹ್ಮಣರು	ಇತರರು
I	280	95	90	45	50
II	301	56	145	76	24
III ಪೂರ್ವಿಕರು	352	23	191	108	30
,, ಆಧುನಿಕರು	215	1	27	159	28
ಒಟ್ಟು	1148	175	453	388	132

ಈ 1148 ಎಂಬ ಸಂಖ್ಯೆ 184 ಪಡನಕಾರರನ್ನೂ 51 ಶಾಸನ ಕವಿಗಳನ್ನೂ 42 ಸ್ತ್ರೀಯರನ್ನೂ ಐವರು ಮಹಾರಾಜರನ್ನು ಒಳಕೊಂಡ 25 ಅರಸರನ್ನೂ ಒಳಕೊಂಡಿದೆ. ಮೇಲಣ ಪಟ್ಟಿಯಿಂದ 1148 ಗ್ರಂಥ ಕರ್ತರಲ್ಲಿ 933 ಮಂದಿ ಪೂರ್ವಿಕರೆಂದೂ 215 ಮಂದಿ ಆಧುನಿಕರೆಂದೂ ತಿಳಿಯುತ್ತದೆ. ಹಿಂದೆ ತಿಳಿಸಿದಂತೆ (ಪುಟ xxvii) ಈ ಸಂಪುಟದಲ್ಲಿ ಹೇಳಿರುವ 352 ಪೂರ್ವ ಕವಿಗಳಲ್ಲಿ 110 ಮಂದಿ ಪ್ರಥಮ ಸಂಪುಟಕ್ಕೂ 43 ಮಂದಿ ದ್ವಿತೀಯ ಸಂಪುಟಕ್ಕೂ ಸೇರತಕ್ಕವರಾದುದರಿಂದ ಅವರನ್ನು ಬಿಟ್ಟರೆ ಈ ಸಂಪುಟಕ್ಕೆ ಮಾತ್ರ ಸೇರತಕ್ಕವರು 199ಮಂದಿಯೇ ಆಗುತ್ತಾರೆ. ಕೆಳಗಣ ಪಟ್ಟಿ ಒಂದೊಂದು ಸಂಪುಟಕ್ಕೂ ನ್ಯಾಯವಾಗಿ ಸೇರಬೇಕಾದ ಗ್ರಂಥಕರ್ತರ ಸಂಖ್ಯೆಯನ್ನು ತೋರಿಸುತ್ತದೆ :—

ಸಂಪುಟ	ಗ್ರಂಥಕರ್ತರ ಸಂಖ್ಯೆ	ಮೊತ್ತ	
I	280+110	390	1148
II	301 + 43	344	
III	199+215	414	

ಈ ಸಂಖ್ಯೆಗಳು ಮಾಜಕರಿಗೆ ಕನ್ನಡ ಸಾಹಿತ್ಯದ ಸಮೃದ್ಧಿಯನ್ನು ಸ್ಪಷ್ಟಪಡಿಸದೆ ಇರಲಾರವು.

ಕನ್ನಡ ಭಾಷೆಯಲ್ಲಿ ವಿಶೇಷಾಭಿಮಾನದಿಂದ 1894 ರಲ್ಲಿ, ಎಂದರೆ ಸುಮಾರು 35 ವರುಷಗಳಿಗೆ ಹಿಂದೆ, ಆರಂಭಿಸಿದ ಈ ಕೆಲಸವು ಭಗವದನುಗ್ರಹದಿಂದ ಪೂರ್ತಿಯಾದುದಕ್ಕಾಗಿ ಸಂತೋಷಿಸುತ್ತೇನೆ. ಇದು ಬಹಳ ಶ್ರಮಸಾಧ್ಯವಾದ ಕೆಲಸ ಎಂದು ನಾನು ಹೇಳಬೇಕಾಗಿಲ್ಲ. ಪ್ರಥಮ ಸಂಪುಟವನ್ನು ಬರೆವಾಗ ನನಗೆ ಸಹಾಯಕರಾಗಿದ್ದ ನನ್ನ ಭ್ರಾತೃಪುತ್ರರಾದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರು ಬದುಕಿದ್ದರೆ ನನ್ನ ಕೆಲಸವು ಸುಲಭವಾಗುತ್ತಿದ್ದುದಲ್ಲದೆ

ಬಹುಶಃ ಇನ್ನೂ ಶೀಘ್ರವಾಗಿಯೇ ಕೊನೆಗಾಣುತ್ತಿದ್ದಿತು. ಆದರೆ ಇದು ದೇವರ ಚಿತ್ತಕ್ಕೆ ಬರಲಿಲ್ಲ ; ವಾರ್ಧಿಕ್ಯದಲ್ಲಿ ಸಹಾಯಶೂನ್ಯನಾಗಿ ನಾನೊಬ್ಬನೇ ಈ ಕಷ್ಟವಾದ ಕೆಲಸವನ್ನು ಮುಗಿಸಬೇಕಾಗಿ ಬಂದಿತು. ಅನೇಕ ಗ್ರಂಥಾವೇಕ್ಷಣವೂ ವಿಶೇಷ ಪರಿಶೋಧನವೂ ಅತ್ಯವಶ್ಯವಾದ ಇಂಥ ದೊಡ್ಡ ಗ್ರಂಥದೊಳಗೆ ಇಲ್ಲಿ ಅಲ್ಲಿ ತಪ್ಪುಗಳು ಸಿಕ್ಕುವುದೇನಾಶ್ಚರ್ಯವಲ್ಲ. ಇವುಗಳನ್ನು ತಿದ್ದಿ ಗ್ರಂಥವು ವಿಶೇಷ ಪ್ರಯೋಜನಕಾರಿಯಾಗುವಂತೆ ಮಾಡುವುದಕ್ಕೆ ಸಹಾಯಮಾಡುವ ವಿದ್ವಾಂಸರಿಗೆ ಅತ್ಯಂತ ಕೃತಜ್ಞನಾಗಿರುವೆನು. ನನ್ನಿಂದ ಸಾಧ್ಯವಾದಷ್ಟು ಕೆಲಸವನ್ನು ಮಾಡಿದ್ದೇನೆ. ಇನ್ನುಮುಂದೆ ಈ ವಿಚಾರವನ್ನು ನನಗಿಂತ ಚಿಕ್ಕ ವಯಸ್ಸಿನವರು ಕೈಕೊಂಡು ಮುಂದುವರಿಸಬೇಕೆಂದು ಕೋರುತ್ತೇನೆ.

ಆಕ್ಷೇಪಣೆಗಳು

ನಾನು ಈ ಗ್ರಂಥವನ್ನು ಬರೆವುದಕ್ಕೆ ಆರಂಭಿಸಿದಾಗ ಕನ್ನಡ ಸಾಹಿತ್ಯದಲ್ಲಿ ಆದರವನ್ನು ತೋರಿಸುತ್ತಿದ್ದ ಜನರ ಸಂಖ್ಯೆ ಬಹಳ ಸ್ವಲ್ಪವಾಗಿದ್ದಿತು. ಈಗ ಈ ವಿಷಯದಲ್ಲಿ ಆದರವು ಹೆಚ್ಚುತ್ತಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಕೆಲವರು ವಿಮರ್ಶಕರು ಕವಿಚರಿತೆಯ ವಿಷಯವಾಗಿ ಪತ್ರಿಕೆಗಳಲ್ಲಿಯೂ ಪುಸ್ತಕಗಳಲ್ಲಿಯೂ ಆಕ್ಷೇಪಣೆಗಳನ್ನು ಬರೆಯಲು ಆರಂಭಿಸಿರುವುದೂ ನನಗೆ ಸಂತೋಷಜನಕವಾಗಿದೆ. ಈ ಆಕ್ಷೇಪಣೆಗಳ ವಿಷಯವಾಗಿ ವಿಚಾರ ನಡಸುವುದಕ್ಕೆ ಮುಂಚೆ ಬೆಂಗಳೂರು ಡೆಯಿಲಿಪೋಸ್ಟ್ ಎಂಬ ಇಂಗ್ಲಿಷ್‌ಪತ್ರಿಕೆಯಲ್ಲಿ (12-9-1924) ಧರ್ಮ ಎಂಬ ಸುಳ್ಳು ಹೆಸರನ್ನು ವಹಿಸಿ ಒಬ್ಬ ಮಹನೀಯರು ನನ್ನನ್ನು ದ್ರೋಹಿ ಎಂದು ದೂಷಿಸಿ ಬರೆದಿರುವ ಬರೆವಣಿಗೆಯ ವಿಷಯವಾಗಿ ಒಂದೆರಡು ಮಾತನ್ನು ಆಡುವುದು ಅವಶ್ಯಕವಾಗಿದೆ. ಈ ಬರವಣಿಗೆಯೂ ಇದಕ್ಕೆ ಅದೇ ಪತ್ರಿಕೆಯಲ್ಲಿ ಆಚ್ಚಾಗಿರುವ ನನ್ನ ಉತ್ತರವೂ (26-9-1924) ಈ ಸಂಪುಟದ ಇಂಗ್ಲಿಷ್ ಅವತರಣಿಕೆಯಲ್ಲಿ ಪೂರ್ತಿಯಾಗಿ ಬಂದಿರುವುದರಿಂದ ಇಲ್ಲಿ ಈ ವಿಷಯವನ್ನು ಕುರಿತು ಲಂಬಿಸಬ್ಬೇಕಾಗಿಲ್ಲ. ಇದರ ನಾನು ಈ ಬರೆವಣಿಗೆಗೆ ಉತ್ತರವನ್ನು ಬರೆಯಬೇಕೆಂದಿರಲಿಲ್ಲವಾಕೆ, ವಿಶ್ವಬಂಧು, ಸಾರಾಂಶವೂ ಟೀಕೆಗಳೂ ಸಂಪದಭ್ಯುದಯ, ವೃತ್ತಾಂತ ಪ್ರಕಟವಾದುದನ್ನು ಪ್ರಬುದ್ಧಕರ್ಣಾಟಕ ಮುಂತಾದ ಕನ್ನಡ ಪತ್ರಿಕೆಗಳಲ್ಲಿ ಆದಾದ ತಪ್ಪು ತಿಳಿವಳಿಕೆಯನ್ನು ನೋಡಿ ನನ್ನ ಮಿತ್ರರು ಕೆಲವರು ಜನರಲ್ಲಿ ಉಂಟಾಗಬಹುದೆಂದು ಉತ್ತರವನ್ನು ಬರೆಯಬೇಕೆಯನ್ನು ನಿವಾರಣ ಮಾಡುವುದಕ್ಕಾಗಿ ನಾನು ಉತ್ತೇಜಿಸಿದೆನು. ಆಲೋಚಿಸಿ ಕೆಂದು ನಿರ್ಧರಿಸಿದುದರಿಂದ ಅದೇ ಪತ್ರಿಕೆಗೆ ಬರೆದು

ಕಾರವಾಡಿ ಶಿರಶ್ಛೇದನ ಮಾಡುವುದು ಎಂಬಂತೆ ಧರ್ಮರು ನನ್ನನ್ನು ಮೊದಲು ಭೂಷಿಸಿ ಆಮೇಲೆ ದೂಷಿಸಿದ್ದಾರೆ. ಅವರು ಬರೆದಿರುವುದರ ಸಾರಾಂಶವೇ ನೆಂದರೆ—ಪ್ರಥಮ ಸಂಪುಟವನ್ನು ಬರೆವುದರಲ್ಲಿ ಸಹಾಯಕರಾಗಿದ್ದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರ ಹೆಸರನ್ನು ಅಸೂಯೆಯಿಂದ ತಿದ್ದಿದ ಮುದ್ರಣದಲ್ಲಿ ಹೇಳದೆ ಅವರ ಮಾತನ್ನೇ ಎತ್ತದೆ ಅವರಿಗೆ ದ್ರೋಹ ಮಾಡಿದ್ದೇನೆ; ಹೀಗೆಯೇ ಶ್ರವಣಬೆಳ್ಗೊಳದ ಶಾಸನಗಳು, ಕರ್ಣಾಟಕ ಶಬ್ದಾನುಶಾಸನ ಈ ಗ್ರಂಥಗಳ ತಿದ್ದಿದ ಮುದ್ರಣಗಳಲ್ಲಿಯೂ ಮೆ॥ ಬಿ. ಎಲ್. ರೈಸರ ಹೆಸರನ್ನು ಅಸೂಯೆಯಿಂದ ಬಿಟ್ಟಿದ್ದೇನೆ–ಎಂಬುದೇ. ಈ ತಿದ್ದಿದ ಮುದ್ರಣಗಳಲ್ಲಿ ಹಲವು ಅಂಶಗಳನ್ನು ಬಿಟ್ಟು ಹಲವು ಹೊಸ ವಿಷಯಗಳನ್ನು ಸೇರಿಸಿ ಅನೇಕ ವ್ಯತ್ಯಾಸಗಳನ್ನು ಮಾಡಿರುವುದರಿಂದ ಈ ಮೂರುಪಾಡುಗಳಿಗೆಲ್ಲಾ ನಾನೊಬ್ಬನೇ ಉತ್ತರವಾದಿ ಎಂಬಂಶವನ್ನು ತಿಳಿಸುವುದಕ್ಕಾಗಿ ಅವರ ಹೆಸರುಗಳನ್ನು ಬಿಟ್ಟಿದ್ದೇನೆಯೇ ಹೊರತು ಮತ್ತೆ ಬೇರೆ ಇಲ್ಲ. ನನ್ನ ಉತ್ತರದಲ್ಲಿ ಮೆ॥ ರೈಸರ ಪತ್ರಗಳಿಂದ ಅನುವಾದ ಮಾಡಿ ಅವರಿಗೆ ತಿದ್ದಿದ ಮುದ್ರಣಗಳಲ್ಲಿ ತಮ್ಮ ಹೆಸರಿರಬೇಕೆಂಬ ಭಾವನೆಯೇ ಇರಲಿಲ್ಲವೆಂಬುದನ್ನು ವ್ಯಕ್ತಗೊಳಿಸಿದ್ದೇನೆ. ಧರ್ಮರಿಗೆ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರು ನನ್ನ ಸಮೀಪ ಬಂಧು, ಭ್ರಾತೃಪುತ್ರರು, ಎಂಬಂಶವು ತಿಳಿದಿರಲಾರದು. ಇವರು ಗತಿಸಿದಾಗ ನನಗಿಂತ ಹೆಚ್ಚಾಗಿ ದುಃಖಿಸಿದವರಾರೂ ಇಲ್ಲ. ದ್ವಿತೀಯ ಸಂಪುಟದ ಅವತರಣಿಕೆಯಲ್ಲಿ(ಪುಟ 29) ಇವರ ವಿಷಯವಾಗಿ ಹೀಗೆ ಬರೆದಿದ್ದೆನು: "ಪ್ರಥಮ ಸಂಪುಟವನ್ನು ಬರೆವಾಗ ನನಗೆ ವಿಶೇಷ ಸಹಾಯಕರಾಗಿದ್ದ ಮು॥ ರಾ॥ ಎಸ್. ಜಿ. ನರಸಿಂಹಾಚಾರ್ಯರು ಆ ಪುಸ್ತಕವು ಪ್ರಕಟವಾದ ಕೆಲವು ವರ್ಷಗಳಲ್ಲಿಯೇ ವೈಕುಂಠವಾಸಿಯಾದ ಸಂಗತಿ ಎಲ್ಲರಿಗೂ ವಿದಿತವಾಗಿಯೇ ಇದೆ. ಇವರಿಗಿದ್ದ ಕೂಲಂಕಷವಾದ ಕರ್ಣಾಟಕ ಭಾಷಾ ಪಾಂಡಿತ್ಯವೂ ಮನೋಹರವಾದ ಕವಿತಾಮಾರ್ಗವೂ ಇಂಥ ವೈದುಷ್ಯಕ್ಕೆ ಅಲಂಕಾರವಾದ ವಿನಯಸಂಪತ್ತಿಯೂ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಿದ್ದುವು. ಇವರ ಅಕಾಲ ಮರಣದಿಂದ ಮೈಸೂರು ದೇಶಕ್ಕೆ ಮಾತ್ರವೇ ಅಲ್ಲದೆ ಕನ್ನಡ ನಾಡೆಲ್ಲಕ್ಕೂ ವಿಶೇಷ ನಷ್ಟವುಂಟಾಯಿತೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ನನಗಂತು ಇವರ ಮರಣದಿಂದ ಬಲದ ಭುಜವೇ ಹೋದ ಹಾಗಾಯಿತು." ಹಿಂದೆ ಇಷ್ಟು ಹೇಳಿದ್ದುದರಿಂದ ತಿದ್ದಿದ ಮುದ್ರಣದಲ್ಲಿ ಪುನಃ ಹೇಳುವುದು ಆವಶ್ಯಕವಿಲ್ಲವೆಂದು ಸುಮ್ಮನಾದೆನು. ಅಸೂಯೆಯೆಂಬುದು ನನ್ನ ಸ್ವಭಾವದಲ್ಲಿಯೇ ಇಲ್ಲ; ತತ್ರಾಪಿ ನನ್ನ ಸಮೀಪ ಬಂಧುವಾದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರ ವಿಷಯದಲ್ಲಿ ಇದು ಅಸಂಭಾವ್ಯವೇ ಸರಿ.

ಮೇಲೆ ಹೇಳಿದ ಬರೆವಣಿಗೆಯಲ್ಲಿ ಧರ್ಮರು ಪ್ರಥಮ ಸಂಪುಟದಲ್ಲಿ ಗ್ರಂಥಗಳ ಗುಣ ವಿಮರ್ಶೆ ಇರುವುದರಿಂದಲೂ ನಾನೊಬ್ಬನೇ ಬರೆದ ದ್ವಿತೀಯ ಸಂಪುಟದಲ್ಲಿ ಅದರ ಅಭಾವದಿಂದಲೂ ಈ ವಿಮರ್ಶಾತ್ಮಕವಾದ ಕೆಲಸವು ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರದೇ ಆಗಿರಬಹುದು ಎಂಬ ತಮ್ಮ ಊಹೆಯನ್ನು ತಿಳಿಸಿದ್ದಾರೆ. ಆದರೆ ಪ್ರಥಮ ಸಂಪುಟವನ್ನು ಬರೆದಾಗ ನಮ್ಮಲ್ಲಿ ಇಂಥ ಕಾರ್ಯ ವಿಭಾಗವು ಏರ್ಪಟ್ಟಿರಲಿಲ್ಲ. ವಿಮರ್ಶಾತ್ಮಕವಾದ ಕೆಲಸವನ್ನು ಇಬ್ಬರೂ ಮಾಡಿದ್ದೇವೆ. ಆದರೂ ಈ ಕೆಲಸದಲ್ಲಿ ನನ್ನ ಭಾಗವೇ ಹೆಚ್ಚು ಎಂದು ಹೇಳಬಹುದು. ಇದರಿಂದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರ ವೈದುಷ್ಯಕ್ಕಾಗಲಿ ಅವರು ಮಾಡಿದ ಸಹಾಯದ ಮಹತ್ವಕ್ಕಾಗಲಿ ಎಳ್ಳಷ್ಟೂ ಕೊರತೆಯಿಲ್ಲ. ದ್ವಿತೀಯ ಸಂಪುಟದಲ್ಲಿ ಗ್ರಂಥಗಳ ಗುಣ ವಿಮರ್ಶೆಯಿಲ್ಲ ಎಂಬ ಧರ್ಮರ ಹೇಳಿಕೆ ನಿಜವಲ್ಲ; ಆ ಸಂಪುಟದ 44, 67, 82, 90, 95, 135, 162, 181, 194, 205, 210, 218, 233, 235, 249, 279, 310, 350, 383, 395, 427, 443, 463, 471, 472, 494, 503, 524 ಮುಂತಾದ ಪುಟಗಳನ್ನು ನೋಡಿದರೆ ಈ ಅಂಶವು ವ್ಯಕ್ತವಾಗುತ್ತದೆ. ಪ್ರಥಮ ಸಂಪುಟದಲ್ಲಿ ಹಲವರು ಉದ್ದಾಮ ಕವಿಗಳ ಚರಿತ್ರವು ಬಂದಿದೆ; ದ್ವಿತೀಯ ಸಂಪುಟದಲ್ಲಿ ಅಂಥ ಕವಿಗಳ ಸಂಖ್ಯೆ ಬಹಳ ಕಡಮೆ; ಆದುದರಿಂದ ಎಷ್ಟರವಟ್ಟಿಗೆ ಅಲ್ಲಿ ಗುಣ ವಿಮರ್ಶೆ ಇದೆಯೋ ಅಷ್ಟರವಟ್ಟಿಗೆ ಇಲ್ಲಿಲ್ಲ. ಅಷ್ಟೇ ಹೊರತು ಇಲ್ಲಿ ಇಲ್ಲವೇ ಇಲ್ಲ ಎಂದು ಹೇಳಲಾಗುವುದಿಲ್ಲ. ಪೂರ್ವ ಪ್ರಬಂಧಗಳ ಉತ್ಕೃಷ್ಟತೆಯೂ ಕಾಲಕ್ರಮದಲ್ಲಿ ಆ ಉತ್ಕೃಷ್ಟತೆ ಕಡಮೆಯಾಗುತ್ತ ಬಂದಿರುವುದೂ ಸರ್ವರಿಗೂ ತಿಳಿದ ವಿಷಯವೇ. ಈ ಸಂಪುಟದ 23, 27, 52, 85, 88 130, 149, 449 ಮುಂತಾದ ಪುಟಗಳನ್ನು ನೋಡಿದರೆ ಇಲ್ಲಿಯೂ ಕೂಡ ಗುಣ ವಿಮರ್ಶೆ ತಕ್ಕ ಮಟ್ಟಿಗೆ ಇದ್ದೇ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಮೆ॥ ಬಿ. ಎಲ್. ರೈಸರ ಮರಣ.

ಕಳೆದ ಜುಲೈ ತಿಂಗಳಲ್ಲಿ ಸಂಭವಿಸಿದ ಮೆ॥ ಬಿ. ಎಲ್. ರೈಸರ ಮರಣಕ್ಕಾಗಿ ನನ್ನ ದುಃಖವನ್ನು ತಿಳಿಸಬೇಕಾಗಿದೆ. ಅವರು ಮೈಸೂರು ಸೀಮೆಯಲ್ಲಿ ಕನ್ನಡ ಭಾಷೆಯ ಪ್ರಾಥಮಿಕ ಶಿಕ್ಷಣಕ್ಕೆ ಅಸ್ತಿಭಾರ ಹಾಕಿದವರು. ಕನ್ನಡ ಸಾಹಿತ್ಯದ ವಿಷಯದಲ್ಲಿಯೂ ಮಾರ್ಗದರ್ಶಿಗಳಾಗಿದ್ದುದು ಮಾತ್ರವಲ್ಲದೆ ಕೆಲವು ಶಾಲ್ಲಘ್ಯವಾದ ಗ್ರಂಥಗಳನ್ನು ಮೊತ್ತಮೊದಲು ಮುದ್ರಿಸಿ ಕನ್ನಡ ಭಾಷಾಭಿವೃದ್ಧಿಗೆ ಬಹಳ ಸಹಾಯ ಮಾಡಿದ್ದಾರೆ. ಶಾಸನದ ಇಲಾಖೆಯಲ್ಲಿ ಇವರು ಮಾಡಿದ ಕಾರ್ಯದ ಮಹತ್ವವನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ.

1899 ರಿಂದ 1906ರ ವರೆಗೆ ಅವರಿಗೆ ಸಹಾಯಕನಾಗಿ (Assistant) ಈ ಇಲಾಖೆಯಲ್ಲಿ ಕೆಲಸ ಮಾಡುವ ಗೌರವವು ನನಗೆ ಲಭಿಸಿದ್ದಿತು; ಆದರೆ ಅವರ ಪರಿಚಯವು ನನಗೆ 1890 ರಿಂದಲೂ ಉಂಟು. ಇವರು ಕರ್ಣಾಟಕ ಕವಿ ಚರಿತೆಯನ್ನು ಬರೆವುದರಲ್ಲಿ ನನಗೆ ಮೊದಲಿಂದಲೂ ಪ್ರೋತ್ಸಾಹಕರಾಗಿದ್ದರು. ಕನ್ನಡ ಸಾಹಿತ್ಯದ ವಿಷಯದಲ್ಲಿ ನಾನು ಮಾಡಿದ ಅಲ್ಪಸಹಾಯವನ್ನು ಕೂಡ ಅವರು 1897 ರಲ್ಲಿ ಮುದ್ರಿಸಿದ ಮೈಸೂರು ಗೆಜಟಿಯರಿನಲ್ಲಿ (ಪುಟಗಳು 495-496) ತಿಳಿಸಿದ್ದಾರೆ. ಕನ್ನಡ ಭಾಷೆಯಲ್ಲಿಯೂ ಕನ್ನಡ ಸಾಹಿತ್ಯದ ಲ್ಲಿಯೂ ಅವರಿಗಿದ್ದ ಅಭಿಮಾನವು ಇಂಗ್ಲೆಂಡಿಗೆ ಹೋದಮೇಲೆ ಎಳ್ಳಷ್ಟೂ ಕಡಮೆಯಾಗಲಿಲ್ಲ. ಅವರಿಗೂ ನನಗೂ ಪತ್ರವ್ಯವಹಾರವು ನಡೆಯುತ್ತಲೇ ಇದ್ದಿತು. ಒಂದು ಪತ್ರದಲ್ಲಿ ಕವಿಚರಿತೆಯನ್ನು ಇಂಗ್ಲಿಷಿಗೆ ಪರಿವರ್ತಿಸುವು ದಾಗಿ ತಿಳಿಸಿದ್ದರು. ಕನ್ನಡದಲ್ಲಿಯೂ ಮೈಸೂರಲ್ಲಿಯೂ ಅವರಿಗಿದ್ದ ಪ್ರೀತಿ ಅವರು ಸಾವವರೆಗೂ ಉಜ್ಜ್ವಲವಾಗಿಯೇ ಇದ್ದಿತು. ಅವರು ಸಾವುದಕ್ಕೆ ಮೂರೇ ತಿಂಗಳು ಮುಂದೆ, ಎಂದರೆ 1927 ನೆಯ ಏಪ್ರಿಲ್ 6ರಲ್ಲಿ, ಬರೆದ ಪತ್ರ ದಲ್ಲಿ ಈ ಮಾತುಗಳು ಉಕ್ತವಾಗಿವೆ: "ಕನ್ನಡಭಾಷೆಯ ವಿಷಯವಾದ ನಿಮ್ಮ ಉಪನ್ಯಾಸಗಳು ಆವಾಗ ನನಗೆ ತಲಪುತ್ತವೆಯೋ ಎಂದು ಇದಿರು ನೋಡುತ್ತ ಇದ್ದೆನು. ನಿಮ್ಮ ಕರ್ಣಾಟಕ ಕವಿಚರಿತೆ ಕ್ಷಿಪ್ರದಲ್ಲಿಯೇ ಪೂರ್ತಿಯಾಗುವ ಸಂಭವವಿದೆ ಎಂದು ಕೇಳಿ ಸಂತೋಷಿಸುತ್ತೇನೆ. ಈ ಗ್ರಂಥವು ಕನ್ನಡ ಸಾಹಿತ್ಯ ಜ್ಞಾನಕ್ಕೆ ಬಹಳ ಸಹಕಾರಿಯಾಗಿರುವದು. ನನ್ನ ವಿಷಯವಾಗಿ ಇನ್ನೂ ವಿಚಾ ರಿಸುವವರಿಗೆಲ್ಲಾ ದಯೆಯಿಟ್ಟು ನನ್ನ ಜ್ಞಾಪಕವನ್ನು ಕೊಡಿ. ಮೈಸೂರಲ್ಲಿ ನನಗಿರುವ ಪ್ರೀತಿಗೆ ಚ್ಯುತಿಯೇ ಇಲ್ಲ." ಇವರ ಪತ್ನಿ ಬರೆದ ಪತ್ರದಲ್ಲಿ ಕೆಲವು ವರ್ಷಗಳಿಂದ ಇವರು ಕಾಲು ಸ್ವಾಧೀನವಿಲ್ಲದೆ ಕಷ್ಟಪಡುತ್ತಿದ್ದರೆಂದೂ ಇನ್ನು ಒಂದು ವಾರ ಬದುಕಿದ್ದಿದ್ದರೆ 90 ವರುಷವು ಪೂರ್ತಿಯಾಗುತ್ತಿದ್ದಿತೆಂದೂ ತಿಳಿಸಿ ದ್ದಾರೆ. ಇವರು ಬಹಳ ಕುತೂಹಲದಿಂದ ಇದಿರು ನೋಡುತ್ತಿದ್ದ ಈ ಸಂಪು ಟದ ಬಂದು ಪ್ರತಿಯನ್ನು ಓದುಕಿದ್ದಾಗಲೇ ಅವರಿಗೆ ಕಳುಹಿಸಿ ಕೊಡಲು ಲಭ್ಯ ವಿಲ್ಲದೆ ಹೋದುದಕ್ಕಾಗಿ ವ್ಯಸನಪಡಬೇಕಾಗಿದೆ.

ಡಾಕ್ಟರ್ ಎ. ವೆಂಕಟಸುಬ್ಬಯ್ಯನವರ ಆಕ್ಷೇಪಣೆಗಳು.

ನನ್ನ ಗ್ರಂಥವನ್ನು ಕುರಿತು ಆಕ್ಷೇಪಣೆಗಳು ಬಂದಿವೆ ಎಂದು ಹಿಂದೆ (ಪುಟxxxvi) ಸೂಚಿಸಿದ್ದೆನು. ಈ ಆಕ್ಷೇಪಕರಲ್ಲಿ ಡಾಕ್ಟರ್ ಎ. ವೆಂಕಟಸು ಬ್ಬಯ್ಯ ಎಂ.ಎ., ಪಿಎಚ್.ಡಿ., ಎಲ್ಎಲ್.ಬಿ. ಇವರು ಪ್ರಥಮಸ್ಥಾನವನ್ನು ವಹಿಸಿದ್ದಾರೆ ಎಂದು ಹೇಳಬಹುದು. ಇವರು ನನ್ನ ಗ್ರಂಥಕ್ಕೆ, ಮುಖ್ಯವಾಗಿ

ಪ್ರಥಮ ಸಂಪುಟಕ್ಕೆ, ವಿಶೇಷವಾದ ಗಮನವನ್ನು ಕೊಟ್ಟು ಆಕ್ಷೇಪಣೆಗಳನ್ನು ಹುಡಿ ಸುಮಾರು 280 ಪುಟಗಳನ್ನು ಮುದ್ರಿಸಿದ್ದಾರೆ. ಇವು ಪ್ರಬುದ್ಧ ಕರ್ಣಾಟಕ ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಅಚ್ಚಾಗುತ್ತ ಬಂದುವು; ಪುಸ್ತಕರೂಪವಾಗಿಯೂ ಪ್ರಕಟವಾಗಿವೆ. ಇವುಗಳಲ್ಲಿ ದುರ್ಗಸಿಂಹ, ಚಂದ್ರರಾಜ, ರಾಜಾದಿತ್ಯ, ವೃತ್ತವಿಲಾಸ ಈ ಕವಿಗಳಿಗೆ ನಾನು ಹೇಳಿರುವ ಕಾಲದ ವಿಷಯದಲ್ಲಿಯೂ ಕೆಲವರು ಜೈನ ಗುರುಗಳ ನಾಮಸಾಮ್ಯದಿಂದ ನಾನು ಮಾಡಿರುವ ಸಮೀಕರಣದ ವಿಷಯದಲ್ಲಿಯೂ ಅಯ್ಯನವರು ಹೇಳಿರುವ ಆಕ್ಷೇಪಣೆಗಳು ನ್ಯಾಯವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಉಳಿದುವುಗಳಲ್ಲಿ ಕೆಲವಕ್ಕೆ ಸರಿಯಾದ ಆಧಾರವೇ ಇಲ್ಲ; ಮತ್ತೆ ಕೆಲವಕ್ಕೆ ಬರಿಯ ಛಿದ್ರಾನ್ವೇಷಣ ದೋಷಾವಿಷ್ಕರಣೇಚ್ಛೆಗಳೇ ಮೂಲವೆಂದು ಹೇಳಬೇಕಾಗಿದೆ. ಹೀಗೆ ಇವರ ಆಕ್ಷೇಪಣೆಗಳಲ್ಲಿ ಹಲವು ಪ್ರಯೋಜನಕಾರಿಯಲ್ಲದೆ ಇದ್ದರೂ ನನ್ನ ಪಕ್ಷವನ್ನು ಪುನರ್ವಿಮರ್ಶೆ ಮಾಡಲು ನನಗೆ ಅವಕಾಶವನ್ನು ದೊರೆಯಿಸಿಕೊಟ್ಟುದಕ್ಕಾಗಿ ಇವರಿಗೆ ಧನ್ಯವಾದವನ್ನು ಹೇಳಬೇಕಾಗಿದೆ. ಮುಖ್ಯವಾಗಿ ಆಕ್ಷೇಪಣೆಗಳ ಸಮುಗ್ರಪ್ರತಿಯನ್ನು ನನಗೆ ಕಳುಹಿಸಿ ಕೊಟ್ಟು ಪ್ರಬುದ್ಧ ಕರ್ಣಾಟಕದಲ್ಲಿ ಇವು ಪೂರ್ತಿಯಾಗಿ ಅಚ್ಚಾಗುವವರೆಗೆ ಕಾದುಕೊಂಡಿರುವ ಕಷ್ಟವನ್ನು ತಪ್ಪಿಸಿದುದಕ್ಕಾಗಿ ಇವರಿಗೂ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರಿಗೂ ನನ್ನ ಕೃತಜ್ಞತೆಯನ್ನು ತಿಳಿಸಬೇಕಾಗಿದೆ ನನ್ನ ಗ್ರಂಥದಲ್ಲಿ ಸುಮಾರು 35 ಕವಿಗಳ ಚರಿತ್ರೆಯ ವಿಷಯವಾಗಿ ಶ್ರೀಮಾನ್ ವೆಂಕಟಸುಬ್ಬಯ್ಯನವರು ಆಕ್ಷೇಪಣೆಗಳನ್ನು ಲಂಬಿಸಿ ಬರೆದಿದ್ದಾರೆ. ಈ ಅವತರಣಿಕೆಯಲ್ಲಿ ಇವರ ಮತ್ತು ಇತರರ ಆಕ್ಷೇಪಣೆಗಳಿಗೆಲ್ಲಾ ವಿಸ್ತಾರವಾಗಿ ಸಮಾಧಾನವನ್ನು ಹೇಳುವುದು ಸಾಧ್ಯವಲ್ಲ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಮುಖ್ಯವಾದ ಆಕ್ಷೇಪಣೆಗಳನ್ನು ತೆಗೆದುಕೊಂಡು ಅವಕ್ಕೆ ತಕ್ಕಮಟ್ಟಿಗೆ ಸಂಗ್ರಹವಾಗಿ ಸಮಾಧಾನವನ್ನು ತಿಳಿಸುತ್ತೇನೆ. ಈ ಕೆಲಸವನ್ನು ತೊಡಗುವುದಕ್ಕೆ ಮುಂಚೆ ನೆನಪಿಗೆ ಬಂದ ಎರಡು ಶ್ಲೋಕಗಳನ್ನು ಇಲ್ಲಿ ಬರೆಯುತ್ತೇನೆ—

ಗಚ್ಛತಃ ಸ್ಖಲನಂ ಕ್ವಾಪಿ ಭವತ್ಯೇವ ಪ್ರಮಾದತಃ |
ಹಸಂತಿ ದುರ್ಜನಾಸ್ತತ್ರ ಸಮಾದಧತಿ ಸಜ್ಜನಾಃ ||
ದೋಷಾನುತ್ಸೃಜ್ಯ ದೋಷಜ್ಞಾಸ್ತುಷ್ಯಂತಿ ಗುಣಲೇಶತಃ
ಹಂಸಾ ಇವಾಂಬುಪಯಸೋರ್ಮೇಳನೇ ದುಗ್ಧಪಾಯಿನಃ ||

ಇದರಿಂದ ತಪ್ಪುಗಳನ್ನು ಉಪೇಕ್ಷಿಸಬೇಕೆಂದಾಗಲಿ ಗಣಿಸಲೇಕೂಡದೆಂದಾಗಲಿ ನನ್ನ ಭಾವವಲ್ಲ. ತಪ್ಪಿಲ್ಲದೆ ಶುದ್ಧವಾಗಿ ಗ್ರಂಥವನ್ನು ಬರೆಯಬೇಕೆಂಬುದೇ ಕೋರಿಕೆ. ಆದರೆ ನಾನು ಸರ್ವಜ್ಞನಲ್ಲ; ತಪ್ಪುಗಳಿರಬಹುದು.

ಹೊಸದಾಗಿ ಗ್ರಂಥರಚನೆ ಮಾಡುವುದು ಕಷ್ಟ, ದೋಷ ದರ್ಶನ ಸುಲಭ. ಉಕ್ತವಾದ ಅಂಶವನ್ನು ಖಂಡಿಸಬೇಕಾದರೆ ಪ್ರಬಲವಾದ ಹೇತುಗಳಿರಬೇಕು; ದುರ್ಬಲವಾದ ಹೇತ್ವಾಭಾಸಗಳು ಕಾರ್ಯಕಾರಿಯಾಗುವುದಿಲ್ಲ. ಆಕ್ಷೇಪಿಸುವುದರಲ್ಲಿಯೂ ಒಂದು ಕ್ರಮವೂ ಮರ್ಯಾದೆಯೂ ಉಂಟು. ಗ್ರಂಥದಲ್ಲಿರುವ ಪ್ರಮಾದಗಳನ್ನು ಸೌಹಾರ್ದದಿಂದ ತೋರಿಸಿಕೊಡುವವರು ಉಪಕಾರಿಗಳೇ ಸರಿ. ಆದರೆ ನಮ್ಮ ಅಯ್ಯನವರು ಹಲವು ಸಂದರ್ಭಗಳಲ್ಲಿ ಏತಿ ಎಂದರೆ ಪ್ರೇತಿ ಎನ್ನಬೇಕು ಎಂಬ ಉದ್ದೇಶದಿಂದಲೇ ಆಕ್ಷೇಪಿಸಿರುವಂತೆ ತೋರುವುದು; ಕೆಲವು ಸಂದರ್ಭಗಳಲ್ಲಿ ಕಾರಣವಿಲ್ಲದೆ ನಿಂದಾಗರ್ಭವಾಗಿಯೂ ಪರಿಹಾಸಗರ್ಭವಾಗಿಯೂ ಒರೆದಿರುವುದು ಶೋಚನೀಯವಾಗಿದೆ.

ನಾಗಚಂದ್ರ.

ನಾಗಚಂದ್ರನು 10 ನೆಯ ಶತಮಾನದ ಅಂತ್ಯ ಭಾಗದಲ್ಲಿಯೋ ಅಥವಾ 11 ನೆಯ ಶತಮಾನದ ಆದಿಭಾಗದಲ್ಲಿಯೋ ಇದ್ದಿರಬೇಕೆಂದು ಅಯ್ಯನವರು ನಿರ್ಣಯಿಸಿರುವುದು (ಪುಟಗಳು 33–56) ಭ್ರಾಂತಿ ಮೂಲವು. ಏಕೆಂದರೆ 1024–1042ರಲ್ಲಿ ಇದ್ದನೆಂದು ಇವರು ಹೇಳುವ ದುರ್ಗಸಿಂಹನು ಸ್ತುತಿಸಿರುವ ಪಂಪನು ನಾಗಚಂದ್ರನೆಂದು ಭ್ರಮಿಸಿ ಹೀಗೆ ನಿರ್ಣಯಿಸಿದ್ದಾರೆ. ಆದರೆ ದುರ್ಗಸಿಂಹನಿಂದ ಸ್ತುತನಾದ ಪಂಪನು ಆದಿಪಂಪನೇ ಹೊರತು ಅಭಿನವ ಪಂಪನಲ್ಲ. ನಾಗಚಂದ್ರನು ಸುಮಾರು 1100ರಲ್ಲಿ ಇದ್ದನೆಂಬ ನನ್ನ ಹೇಳಿಕೆಯನ್ನು (I, 101) ಖಂಡಿಸಿ ತಮ್ಮ ಭ್ರಾಂತಿ ಮೂಲವಾದ ನಿರ್ಣಯವನ್ನು ಸ್ಥಾಪಿಸಲು ಅಯ್ಯನವರು ಬಹಳ ಶ್ರಮಪಟ್ಟಿದ್ದಾರೆ. ನನ್ನ ಪಕ್ಷಕ್ಕೆ ಸಾಧಕವಾದ ಅಂಶಗಳಲ್ಲಿ ಕೆಲವನ್ನು ಕೆಳಗೆ ಕೊಡುತ್ತೇನೆ:—

(1) ಅಯ್ಯನವರ ಹೇಳಿಕೆಯ ಪ್ರಕಾರ ಹಿಂದೆ ತಿಳಿಸಿದಂತೆ ನಾಗಚಂದ್ರನು 10 ನೆಯ ಶತಮಾನದ ಅಂತ್ಯಭಾಗದಲ್ಲಿಯೋ ಅಥವಾ 11 ನೆಯ ಶತಮಾನದ ಆದಿಭಾಗದಲ್ಲಿಯೋ, ಅಂತು 1024ಕ್ಕೆ ಹಿಂದೆ, ಇದ್ದಿರಬೇಕು. ಆದರೆ ನಾಗಚಂದ್ರನು 993ರಲ್ಲಿ ರನ್ನನಿಂದ ರಚಿತವಾದ ಅಜಿತಪುರಾಣವನ್ನು 'ಕೃತಿರತ್ನ' ವೆಂದು ಸ್ತುತಿಸಿದ್ದಾನೆ. ಇದರಿಂದ ಈ ಗ್ರಂಥವು ನಾಗಚಂದ್ರನ ಕಾಲದಲ್ಲಿ ಹುಟ್ಟಿರಲಾರದು ಎಂದು ತಿಳಿಯುತ್ತದೆ. ಅದಕ್ಕೆ ಇಷ್ಟು ಪ್ರಶಸ್ತಿ ಬರಬೇಕಾದರೆ ಅದು ಹುಟ್ಟಿದ ಕಾಲಕ್ಕೂ ನಾಗಚಂದ್ರನ ಕಾಲಕ್ಕೂ ಮಧ್ಯದಲ್ಲಿ ಕನಿಷ್ಠ ಪಕ್ಷ ಅರ್ಧ ಶತಮಾನದ ಅಂತರವಾದರೂ ಇದ್ದಿರಬೇಕು. ಆದುದರಿಂದ ನಾಗಚಂದ್ರನು 1024ಕ್ಕೆ ಹಿಂದೆ ಇದ್ದಿರಲಾರನು, ಅಲ್ಲದೆ ದುರ್ಗಸಿಂಹನು (ಸು. 1024) ರನ್ನನ ಹೆಸರನ್ನು ಹೇಳಿಲ್ಲ; ಅವನ ಕಾಲಕ್ಕೆ ರನ್ನನ್ನು

ಬಹಳ ಆಧುನಿಕನಾಗಿದ್ದನೆಂಬುದೇ ಇದಕ್ಕೆ ಕಾರಣವಾಗಿರಬೇಕು. ಹೀಗಿರುವಲ್ಲಿ ದುರ್ಗಸಿಂಹನಿಗೆ ಹಿಂದೆ ಇದ್ದನೆಂದು ಅಯ್ಯನವರು ಹೇಳುವ ನಾಗಚಂದ್ರನು ರನ್ನನ ಗ್ರಂಥವನ್ನು ಕೃತಿರತ್ನವೆಂದು ಸ್ತುತಿಸುವುದು ಅಸಂಭಾವ್ಯವೇ ಸರಿ.

(2) ನಾಗಚಂದ್ರನ ಕಾಲವನ್ನು ನಿರ್ಣಯಿಸುವುದಕ್ಕೆ "ಅದ್ಯತನನಾಗಿಯುಂ ನೆಗ|ಲ್ದಾರ್ಯರ ದೊರೆಯೆನಿಸಿ ಮೆಲ್ದಿದು....ನಾಗಚಂದ್ರ ಕವೀಂದ್ರಂ॥" ಎಂದು ಅವನ ವಿಷಯವಾಗಿ ಕರ್ಣಪಾರ್ಯನು ಹೇಳಿರುವುದು (I, 101) ಬಹಳ ಸಹಕಾರಿಯಾಗಿದೆ. 'ಅದ್ಯತನ' ಎಂಬ ಪದದ ಪ್ರಯೋಗದಿಂದ ನಾಗಚಂದ್ರನು ಕರ್ಣಪಾರ್ಯನಿಗಿಂತ ಬಹಳ ಹಿಂದೆ ಇದ್ದಿರಲಿಲ್ಲ ಎಂದು ಭಾಸವಾಗುತ್ತದೆ. ಅವನು ಕರ್ಣಪಾರ್ಶ್ವನಿಗಿಂತ ಸುಮಾರು ಒಂದು ತಲೆ ಹಿಂದೆ ಇದ್ದಿರಬಹುದು. ಕರ್ಣಪಾರ್ಯನಿಗೆ ನಾನು ಹೇಳಿರುವ ಕಾಲವು ಸು. 1140 ಆದುದರಿಂದ (I, 139) ನಾಗಚಂದ್ರನ ಕಾಲವು ಸ್ಥೂಲವಾಗಿ ಸು. 1100 ಎನ್ನಬಹುದು. ಆಗರೆ ಕರ್ಣಪಾರ್ಯನು ಸು. 1174ರಲ್ಲಿದ್ದನು ಎಂಬ ಅಯ್ಯನವರ ನಿರ್ಣಯದ ಪ್ರಕಾರ (ಪುಟ 85) ನಾಗಚಂದ್ರನು ಸು.1100 ಕ್ಕಿಂತ ಈಚೆ ಇದ್ದಿರಬೇಕಾಗುತ್ತದೆ. ಹೀಗಿರುವಲ್ಲಿ ಅಯ್ಯನವರು ಹೇಳುವಂತೆ 1024ಕ್ಕೆ ಹಿಂದೆ ಬಾಳಿದ ನಾಗಚಂದ್ರನನ್ನು 1174ರಲ್ಲಿದ್ದ ಕರ್ಣಪಾರ್ಯನು ಅದ್ಯತನ ಎಂದು ನಿರ್ದೇಶಿಸಲು ಸಾಧ್ಯವೇ?

(3) ನಾಗಚಂದ್ರನು "ಮುನಿನಾಥಂ ದಶಧರ್ಮಧಾರಿ" ಎಂಬ ತನ್ನ ರಾಮಾಯಣದ ಪದ್ಯದಲ್ಲಿ (I, 20) ಮೇಘಚಂದ್ರತ್ರೈವಿದ್ಯನೆಂಬ ಒಬ್ಬ ಜೈನ ಗುರುವನ್ನು ಸ್ತುತಿಸಿದ್ದಾನೆ. ಸುಮಾರು 1115 ರಲ್ಲಿ ಹುಟ್ಟಿದ ಶ್ರವಣಬೆಳ್ಗೊಳದ 127ನೆಯ ಶಾಸನದಲ್ಲಿ ಇದೇ ಗುರು 1115 ರಲ್ಲಿ ಗತಿಸಿದನೆಂದು ಹೇಳಿದೆ. ನಾಗಚಂದ್ರನು ಸ್ತುತಿಸುವ ಪದ್ಯದಿಂದಲೇ ಶಾಸನದಲ್ಲಿಯೂ ಸ್ತುತನಾಗಿರುವುದರಿಂದ ಗುರು ಒಬ್ಬನೇ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ನಾಗಚಂದ್ರನು 1024ಕ್ಕೆ ಹಿಂದೆ ಇದ್ದಿದ್ದ ಪಕ್ಷದಲ್ಲಿ ಆ ಕಾಲಕ್ಕಿಂತ ಸುಮಾರು ಒಂದು ಶತಮಾನ ಈಚೆ, ಎಂದರೆ 1115 ರಲ್ಲಿ, ಗತಿಸಿದ ಗುರುವನ್ನು ಸ್ತುತಿಸುವ ಬಗೆ ಹೇಗೆ? ಈ ಕಷ್ಟದ ಪರಿಹಾರಕ್ಕಾಗಿ ಅಯ್ಯನವರು "ಈ ಶಾಸನಗಳನ್ನು ಬರೆದವರು ಒಂದು ಶತಮಾನದವರೆಗೆ ಸುಮ್ಮನಿದ್ದು ಆಮೇಲೆ ನಾಗಚಂದ್ರನ ಪದ್ಯಗಳಿಂದ ಅದೇ ಹೆಸರಿನ ಬೇರೆ ಗುರುಗಳನ್ನು ಸ್ತುತಿಸಲು ತೊಡಗಿದರು" ಎಂಬ ವಿಚಿತ್ರವಾದ ಹೇಳಿಕೆಯನ್ನು ಹೇಳಿದ್ದಾರೆ (ಪುಟ 47). ಈ ಮಾತು ಹಾಸ್ಯಾಸ್ಪದವಾಗಿಯೂ ಜೈನ ಗ್ರಂಥಕರ್ತರ ವಿಷಯದಲ್ಲಿ ನಿಷ್ಕಾರಣವಾದ ನಿಂದಾರೂಪವಾಗಿಯೂ ಇದೆ. ಈ ಕಾರಣದಿಂದ ನಾಗಚಂದ್ರನ ಕಾಲವು ಸು. 1100

ಎಂದು ನಿರ್ಣಯಿಸಲೇ ಬೇಕಾಗುತ್ತದೆ. ಈ ನಿರ್ಣಯದಿಂದ ಶ್ರುತಕೀರ್ತಿಯೆ ಬ ಜೈನಗುರುವಿನ ನಿಷಯವಾಗಿ ಅಯ್ಯನವರು ಉದ್ಭವಿಸುವ ಕಷ್ಟವೂ (ಪುಟ 45) ಒಡನೆ ಪರಿಹಾರವಾಗುವುದು.

(4) ಮೇಘಚಂದ್ರನೆಂಬ ಒಬ್ಬ ಗ್ರಂಥಕರ್ತನು 1148ರಲ್ಲಿ ' ವಿತತಯಂ ಶೋನಿಧಿಪಂಪನ ಸುತಂಗೆ ತಿಳಿವಂತು ಪೊಚ್ಚಪೊಸಗನ್ನಡದಿಂ " ಪೂಜ್ಯಪಾದನ ಸಮಾಧಿಶತಕಕ್ಕೆ ವ್ಯಾಖ್ಯಾನವನ್ನು ಬರೆದುದಾಗಿ ತಿಳಿಯುತ್ತದೆ (ಇಂಡಿಯನ್ ಆಂಟಿಕ್ವರಿ, XII, 20). ಇಲ್ಲಿ ಹೇಳಿರುವ ಪಂಪನು ನಾಗಚಂದ್ರನೇ ಆಗಿರಬೇಕು; ಈ ಹೇಳಿಕೆಯಿಂದ ಅವನ ಕಾಲವು ಸುಮಾರು 1100 ಎಂದು ನಿರ್ಧರವಾಗುತ್ತದೆ. ಈ ಮೇಘಚಂದ್ರನು ಬಹುಶಃ ಶ್ರ. ಬೆ. 66 ನೆಯ ಶಾಸನದಲ್ಲಿ ನಯಕೀರ್ತಿಯ ತಿಷ್ಯರೊಳಗೆ ಮೊದಲನೆಯವನಾಗಿ ಹೇಳಿರುವ ಮೇಘಚಂದ್ರನೇ ಆಗಿರಬಹುದು.

(5) ಕೊನೆಗೆ, ನಾನು ಹಿಂದೆ ಹೇಳಿರುವಂತೆ (I, 449), ಬಿಜಾಪುರದ ಮ್ಯೂಜಿಯಮಿನಲ್ಲಿ ಇಟ್ಟಿರುವ, ಚಾಳುಕ್ಯರಾಜನಾದ 6ನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ (1076-1126) ಹುಟ್ಟಿದ ಎ 23 ಎಂಬ ಸಂಖ್ಯೆಯ ಶಾಸನವು ನಾಗಚಂದ್ರರಚಿತವೆಂದು ಊಹಿಸುವುದಕ್ಕೆ ಆ ಶಾಸನದ ಕೆಲವು ಪದ್ಯಗಳಿಗೂ ಪಂಪರಾಮಾಯಣದ ಕೆಲವು ಪದ್ಯಗಳಿಗೂ ಶಬ್ದದಲ್ಲಿಯೂ ಅರ್ಥದಲ್ಲಿಯೂ ಕಂಡುಬರುವ ಸಾಮ್ಯವು ಪ್ರಬಲಕಾರಣವಾಗಿದೆ. ಈ ಸಾಮ್ಯವು ಕೆಳಗಣ ಉದಾಹರಣಗಳಿಂದ ವ್ಯಕ್ತವಾಗುತ್ತದೆ :—

ಬಿಜಾಪುರ ಶಾಸನದ 2ನೆಯ ಪದ್ಯ

ಪಿರಿದಾಯಾಸದಿನಿನ್ನೆಗಂ ತಳೆದ ಧಾತ್ರೀಭಾರಮಂ ವಿಕ್ರಮಾ ।
ಭರಣಂಗೊಪ್ಪಿಸಿ ಬೇಟ್ಟಿಪ್ಪುದಂ ಪಡೆದುವೆಂತಾನುಂ ದಿಶಾದಂತಿ ದಿ ॥
ಕ್ಕರಿಣೀಪೇಜಕ ಚುಂಬನೈಕಸುಖಮುಂ ಶೇಷೋರಗಂ ಭೋಗಿನೀ
ಪರಿರಂಭೋತ್ಸವಮುಂ ಪುರಾಣಕಮಠಂ ನಿದ್ರಾಂಗನಾಸಂಗಮುಂ ॥

ಪಂಪರಾಮಾಯಣದ 6ನೆಯ ಆಶ್ವಾಸದ 84ನೆಯ ಪದ್ಯ

ಧರೆಯಂ ದ್ವಾದಶಚಕ್ರವರ್ತಿಗಳಿನಿತ್ತಲ್ ದೇವ ನಿಮ್ಮೀ ಭುಜಾ ।
ಪರಿಘಕ್ಕೊಪ್ಪಿಸಿ ಬೇಟ್ಟಿಪ್ಪುದಂ ಪಡೆದುವೆಂತಾನುಂ ದಿಶಾದಂತಿ ದಿ ॥
ಕ್ಕರಿಣೀಪೇಜಕ ಚುಂಬನೈಕಸುಖಮುಂ ಶೇಷೋರಗಂ ಭೋಗಿನೀ ।
ಪರಿರಂಭೋತ್ಸವಮುಂ ಪುರಾಣಕಮಠಂ ನಿದ್ರಾಂಗನಾಸಂಗಮುಂ ॥

ಬಿಜಾಪುರ ಶಾಸನದ 3ನೆಯ ಪದ್ಯ

ಆಕೊಲ್ಲೀಣೀಧರವದುವುಂ (?) । ದಕ್ಷಿಣದಿಙ್ಮುಖದೊಳೆಸೆವ ಶಶಿಖಂಡ
ದವೋ

ಲೀಕ್ಷಣ ಸುಖಮಯವಿಪ್ಪುದು । ದಕ್ಷಿಣಭರತ ತ್ರಿಖಂಡದಾರ್ಯ್ಯ
ಖಂಡಂ ॥

ಪಂಪರಾಮಾಯಣದ 1ನೆಯ ಆಶ್ವಾಸದ 45ನೆಯ ಪದ್ಯ
ಆಕ್ಷ್ಮೋಣೀ ಧರವಲ್ಲಭ । ದಕ್ಷಿಣ ದಿಙ್ಮುಖದೊಳೆಸೆದು ಶಶಿಖಂಡ
ದವ್ವೋ ।
ಲೀಕ್ಷಣಸುಖಮಯವಿಪ್ಪುದು । ದಕ್ಷಿಣಭರತ ತ್ರಿಖಂಡದಾರ್ಯ್ಯ
ಖಂಡಂ ॥

ಬಿಜಾಪುರ ಶಾಸನದ 1ನೆಯ ಪದ್ಯ
ಶ್ರೀಮಚ್ಚಳುಕ್ಯನಂಶಲ । ಲಾಮುಂ ಚತುರುದಧಿ ಮೇಖಲಾಲಂಕೃತಧಾ।
ಶ್ರೀಮಂಡಲಮುಂ ವಿಕ್ರಮ । ಧಾಮುಂ ನಿಜಭುಜ ಕೃಪಾಣದಿಂ ರಕ್ಷಿ
ಸಿದಂ ॥

ಪಂಪರಾಮಾಯಣದ 10ನೆಯ ಆಶ್ವಾಸದ 77ನೆಯ ಪದ್ಯ
ಚತುರುದಧಿಮೇಖಲಾಲಂ । ಕೃತವಸುಧೆಯನಾಳ್ದ ಪಡೆದು ಸುತರಿ
ನ್ನರನಾ
ಜಿತ ಶತ್ರು ವಿಜಯಸಾಗರ । ರತರ್ಕ್ಯಭುಜವೀರ್ಯ್ಯರಸುಗೆಯ್ಯುತ್ತಿ
ರ್ದರ್ ॥

ಪಂಪರಾಮಾಯಣದ 2ನೆಯ ಆಶ್ವಾಸದ 39ನೆಯ ಪದ್ಯ
ಚತುರುದಧಿಮೇಖಲಾಲಂ । ಕೃತವಸುಧಾದೇವಿಗಜ್ಜಗಾಪಿನವರ್ ದಿ ।
ಕ್ಪತಿಗಳೆನಿ ಸಾರ್ವಭೌಮೋ । ನ್ನತಿಯಂ ತಳೆದಂ ಸುಕೌಶಲಕ್ಷ್ಮಿತಿ
ನಾಥಂ ॥

ಈ ವಿಷಯವೂ ಕೂಡ ನಾಗಚಂದ್ರನು ಸು. 1100 ರಲ್ಲಿ ಬಾಳಿದನು ಎಂಬುದನ್ನು ದೃಢೀಕರಿಸುತ್ತದೆ.

ನಾಗಚಂದ್ರನ ವಿಷಯವಾದ ಅಯ್ಯನವರ ಬರೆವಣಿಗೆಯಲ್ಲಿ ಇನ್ನು ಕೆಲ ವಂಶಗಳು ಪ್ರಾಸಂಗಿಕವಾಗಿ ಹೇಳಿವೆ (ಪುಟಗಳು 36-42,52-56). ಅವುಗಳನ್ನು ಕುರಿತು ಒಂದೆರಡು ಮಾತನ್ನು ಆಡಬೇಕಾಗಿದೆ. ಶ್ರ. ಬೆ. 127ನೆಯ ಶಾಸನದಲ್ಲಿ 1115ರಲ್ಲಿ ಗತಿಸಿದನೆಂದು ಹೇಳಿರುವ ಮೇಘಚಂದ್ರನೂ ಶ್ರ. ಬೆ. 39,66 ಇವುಗಳಲ್ಲಿ ಉಕ್ತರಾದ ಮೇಘಚಂದ್ರರೂ ಒಬ್ಬರೇ. ವಕ್ರಗಚ್ಛದ ಬಾಲಚಂದ್ರನೂ ಶ್ರ ಬೆ. 140 ರಲ್ಲಿ ಹೇಳಿರುವ ಶುಭಕೀರ್ತಿಯ ತಂದೆ ಬಾಲಚಂದ್ರನೂ ಒಂದೇ ವ್ಯಕ್ತಿ (I,102-103)–ಎಂಬಂಥ ನನ್ನ ತಪ್ಪಾದ ಸಮೀಕರಣಗಳನ್ನು ಅಯ್ಯನವರು ಆಕ್ಷೇಪಿಸಿರುವುದು ನ್ಯಾಯವೇ ಸರಿ. ಈ ಸಂದರ್ಭದಲ್ಲಿ ನಾಗಚಂದ್ರನ ಗುರುವಾದ ಸುಮಾರು 1100 ರಲ್ಲಿದ್ದ ವಕ್ರಗಚ್ಛದ ಒಬ್ಬ ಬಾಲಚಂದ್ರನೂ ಸುಮಾರು 1180 ರಲ್ಲಿದ್ದ ಅಧ್ಯಾತ್ಮಿ ಎಂಬ ಉಪಪದವುಳ್ಳ

ಪುಸ್ತಕಗಚ್ಛದ ಒಬ್ಬ ಬಾಲಚಂದ್ರನು ಹೀಗೆ ಇಬ್ಬರು ಬಾಲಚಂದ್ರರಿದ್ದರೆಂದು ತೋರಿಸುವುದೇ ನನ್ನ ಮುಖ್ಯೋದ್ದೇಶವು. ಆದರೆ ಅಯ್ಯನವರು ಈ ಬಾಲಚಂದ್ರರಿಬ್ಬರೂ ಸಮಕಾಲದವರು ಎಂಬ ಕಲ್ಪನೆಯನ್ನು ಮಾಡಿಕೊಂಡು ಅದಕ್ಕೆ ಸರಿಯಾಗಿ ವಿಷಯಗಳನ್ನು ಹವಣಿಸಲು ಪ್ರಯತ್ನಿಸಿದ್ದಾರೆ. ಮೊದಲು ನಾನು ಸು. 1100 ರಲ್ಲಿ ಹುಟ್ಟಿತೆಂದು ಹೇಳುವ ಶ್ರ. ಬೆ. 69ನೆಯ ಶಾಸನವು ಸು. 1180 ರಲ್ಲಿ ಹುಟ್ಟಿತೆಂದು ವಾದವನ್ನು ಆರಂಭಿಸಿದ್ದಾರೆ (ಪುಟ 36). ಈ ಶಾಸನದಲ್ಲಿ ಕಾಲವನ್ನು ಕೊಟ್ಟಿಲ್ಲ. ಇದರಲ್ಲಿ ಒಂದು ಕಡೆ ವಕ್ರಗಚ್ಛದ ಬಾಲಚಂದ್ರನು ಗೋಪನಂದಿಯ ಶಿಷ್ಯನಾದ ಗೌಳದೇವನ ಸಧರ್ಮನೆಂದೂ ಮತ್ತೊಂದು ಕಡೆ ಗೋಪನಂದಿಯ ಸಧರ್ಮನಾದ ಮಾಘನಂದಿಯ ಶಿಷ್ಯ ತ್ರಿರತ್ನನಂದಿಯ ಸಧರ್ಮನೆಂದೂ ಹೇಳಿದೆ. ಅಂತು ಈತನು ಗೋಪನಂದಿಯ ಕಾಲಕ್ಕಿಂತ ಬಹಳ ಈಚೆಯವನಲ್ಲ ಎಂಬುದು ಸಿದ್ಧವಾಗುತ್ತದೆ. ಚೆನ್ನರಾಯಪಟ್ಟಣದ 148ನೆಯ ಶಾಸನದಲ್ಲಿ ಇದೇ ಗೋಪನಂದಿಗೆ ವಿನಯಾದಿತ್ಯನ ಮಗನಾದ ಎರೆಯಂಗನು 1094 ರಲ್ಲಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಆದುದರಿಂದ ವಕ್ರಗಚ್ಛದ ಬಾಲಚಂದ್ರನ ಕಾಲವು ಸು. 1100 ಆಗುತ್ತದೆ. ಇದೇ ಕಾಲವನ್ನೇ ನಾನು ಶ್ರ. ಬೆ. 69ಕ್ಕೆ ಕೊಟ್ಟಿದ್ದೇನೆ. ಈ ಬಾಲಚಂದ್ರನ ಶಿಷ್ಯನಾದ ನಾಗಚಂದ್ರನ ಕಾಲವೂ ಸುಮಾರು ಇದೇ ಆಗಿರಬೇಕು.

ಇದರಿಂದ ವಕ್ರಗಚ್ಛದ ಬಾಲಚಂದ್ರನೂ ಸು. 1180 ರಲ್ಲಿದ್ದ ಪುಸ್ತಕಗಚ್ಛದ ಅಧ್ಯಾತ್ಮಿ ಬಾಲಚಂದ್ರನೂ ಸಮಕಾಲದವರೆಂಬ ಅಯ್ಯನವರ ಕಲ್ಪನೆ ಅಸಮಂಜಸವೆಂಬುದು ಸ್ಪಷ್ಟವಾಗುತ್ತದೆ. ಅಯ್ಯನವರು ತಮ್ಮ ಕಲ್ಪನೆಯನ್ನು ಸ್ಥಾಪಿಸುವುದಕ್ಕಾಗಿ 3 ಶಾಸನಗಳನ್ನು ಉದಾಹರಿಸುತ್ತಾರೆ; ಆದರೆ ಇವು ಪ್ರಯೋಜನಕಾರಿಯಾಗುವುದಿಲ್ಲ. 1 ನೆಯ ಶಾಸನವು ಮೈಸೂರು ಶಾಸನದ ಇಲಾಖೆಯ 1923ನೆಯ ವರ್ಷದ ವರದಿಯಲ್ಲಿ (ಪುಟಗಳು 36-39) ಅಚ್ಚಾಗಿದೆ. ಇದರಲ್ಲಿ ಕವಡಮಯ್ಯನ ದೇವಿಸೆಟ್ಟಿ ತಾನು ಕಟ್ಟಿಸಿದ ವೀರಬಲ್ಲಾಳಜಿನಾಲಯಕ್ಕಾಗಿ ಬಾಲಚಂದ್ರನೆಂಬ ಜೈನಗುರುವಿಗೆ 1176 ರಲ್ಲಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಶ್ರ. ಬೆ. 69 ರಂತೆಯೇ ವಕ್ರಗಚ್ಛದ ಬಾಲಚಂದ್ರನ ಗುರುಪರಂಪರೆಯನ್ನು ಹೇಳಿದ ಬಳಿಕ ಈ ಶಾಸನವು ಈ ಬಾಲಚಂದ್ರನ ಗುಡ್ಡನು ಕವಡಮಯ್ಯನ ಅಣುವಂತಯ್ಯನೆಂದೂ ಈ ಅಣುವಂತಯ್ಯನಿಂದ ನಾಲ್ಕನೆಯ ತಲೆಯವನು ಕವಡಮಯ್ಯನ ದೇವಿಸೆಟ್ಟಿಯೆಂದೂ ತಿಳಿಸುತ್ತದೆ. ಆದುದರಿಂದ ಕವಡಮಯ್ಯನ ಅಣುವಂತಯ್ಯನ ಗುರುವಾದ ವಕ್ರಗಚ್ಛದ ಬಾಲಚಂದ್ರನೂ ಈ ಅಣುವಂತಯ್ಯನ ವಂಶೋದ್ಭವನಾದ ಕವಡಮಯ್ಯನ ದೇವಿಸೆಟ್ಟಿಯಿಂದ ದಾನವನ್ನು ಪಡೆದ ಬಾಲಚಂದ್ರನೂ ಬೇರೆ ಬೇರೆ ಮನುಷ್ಯರು ಎಂಬುದರಲ್ಲಿ ಸಂಶ

ಯವಿಲ್ಲ. ಈ 2ನೆಯ ಬಾಲಚಂದ್ರನು ಸು. 1180ರಲ್ಲಿ ಹುಟ್ಟಿದ ಶ್ರ. ಬೆ. 234 ನೆ ಶಾಸನದಿಂದ ಕವಡಮಯ್ಯನ ದೇವಿಸೆಟ್ಟಿಯ ಸಮಕಾಲದವನೆಂದು ತಿಳಿದು ಒರುವ ಅಧ್ಯಾತ್ಮಿಬಾಲಚಂದ್ರನಾಗಿರಬೇಕು. 2ನೆಯ ಶಾಸನವು 1196ರಲ್ಲಿ ಹುಟ್ಟಿದ ಜೇಲೂರು 129. ಇದರಲ್ಲಿ ಕವಡಮಯ್ಯನ ದೇವಿಸೆಟ್ಟಿ ಕಟ್ಟಿಸಿದ ಶಾಂತಿನಾಥಬಸ್ತಿಯ ಪ್ರಾಕಾರದಲ್ಲಿ ತಾವು ಪ್ರತಿಷ್ಠೆಮಾಡಿಸಿದ ಮಲ್ಲಿನಾಥ ದೇವರಿಗಾಗಿ ಕೆಲವರು ಜೈನರು ಭೂಮಿಯನ್ನು ಬಿಟ್ಟಂತೆ ಹೇಳಿದೆ. ಈ ದತ್ತಿ ದೇವಿಸೆಟ್ಟಿಯ ಕಾಲವಾದ ಮೇಲೆ ಬಿಡಲ್ಪಟ್ಟಿರಬಹುದು. ಶಾಸನದ ಆದಿಯಲ್ಲಿ ವಕ್ರಗಚ್ಛದ ಬಾಲಚಂದ್ರನ ಸ್ತುತಿ ಇದೆ. ದಾನಮಾಡಿದ ಭೂಮಿಯನ್ನು ಮಾಂಡವಿಯ ಬಾಲಚಂದ್ರನ ಶಿಷ್ಯ ರಾಮಚಂದ್ರನಿಂದ ಕೊಂಡುಕೊಂಡರು ಎಂದು ಹೇಳಿದೆ. ಇದರಿಂದ ಅಯ್ಯನವರು ವಕ್ರಗಚ್ಛದ ಬಾಲಚಂದ್ರನೂ ಮಾಂಡವಿಯ ಬಾಲಚಂದ್ರನೂ ಒಬ್ಬನೇ ಎಂದು ಭ್ರಮಿಸಿ ವಕ್ರಗಚ್ಛದ ಬಾಲಚಂದ್ರನು ಶಾಸನದ ಕಾಲವಾದ 1196ರಲ್ಲಿದ್ದನು ಎಂದು ಹೇಳಿದ್ದಾರೆ. ಇದು ಸರಿಯಲ್ಲ. 1 ನೆಯ ಶಾಸನದಲ್ಲಿ ಹೇಳಿರುವಂತೆ ವಕ್ರಗಚ್ಛದ ಬಾಲಚಂದ್ರನು ಕವಡಮಯ್ಯನ ದೇವಿಸೆಟ್ಟಿಯ ಕುಲಗುರುವಾದುದರಿಂದ ಅವನ ಸ್ತುತಿ ಆರಂಭದಲ್ಲಿ ಬಂದಿದೆ. ಮಾಂಡವಿಯ ಬಾಲಚಂದ್ರನಿಗೂ ವಕ್ರಗಚ್ಛದ ಬಾಲಚಂದ್ರನಿಗೂ ಅವ ಸಂಬಂಧವೂ ಇಲ್ಲ. ಹಾಗೆಯೇ ಅವನಿಗೂ ಅಧ್ಯಾತ್ಮಿ ಬಾಲಚಂದ್ರನಿಗೂ ಅವ ಸಂಬಂಧವೂ ಕಾಣುವುದಿಲ್ಲ. ಶ್ರ. ಬೆ. 186ನೆಯದಾದ 3 ನೆಯಶಾಸನದಲ್ಲಿ ಅಧ್ಯಾತ್ಮಿಬಾಲಚಂದ್ರನ ಗುಡ್ಡ ಪದುಮಸೆಟ್ಟಿಯ ಮಗನಾದ ಗೊಮ್ಮಟಸೆಟ್ಟಿ 1231 ರಲ್ಲಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ದಾನವು ಅಧ್ಯಾತ್ಮಿ ಬಾಲಚಂದ್ರನಿಂದ ಎರಡುತಲೆ ಈಚೆ ನಡೆದಿರುವುದರಿಂದ ಅಯ್ಯನವರು ಭಾವಿಸುವಂತೆ ಅವನು 1231 ರಲ್ಲಿ ಬದುಕಿದ್ದನೆಂಬುದಕ್ಕೆ ಕಾರಣವೇ ಇಲ್ಲ.

ಅಯ್ಯನವರು ನೂತ ಎಂಬ ಪದವನ್ನು ನಾನು ನೂತ್ನ ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದೇನೆಂದು ಭಾವಿಸಿಕೊಂಡು ಅಕ್ಷೇಪಣೆಯನ್ನು ಹೂಡಿರುವುದು ಜ್ಞಾನೋದಯವಾಗಬೇಕೆಂದು ಈ ವಿಷಯವಾಗಿ ಎರಡು ಪುಟಗಳನ್ನು (53–54)ಬರೆದಿದ್ದಾರೆ. ನೂತ ಎಂಬುದಕ್ಕೆ ಪರ್ಯಾಯಶಬ್ದವಾಗಿ ನಾನು ಕೊಟ್ಟಿರುವ ಅಭಿನವ ಎಂಬ ಶಬ್ದವನ್ನೂ ಪರ್ಯಾಯಶಬ್ದಗಳೇ ಆಗಿರುವ ನೂತ, ನವೀನ ಎಂಬ ಪದಗಳಿಗೆ ನಾನು ಸೂಚಿಸುವ ಅರ್ಥವ್ಯತ್ಯಾಸವನ್ನೂ (I, 100)ಸ್ವಲ್ಪಮಟ್ಟಿಗೆ ಗಮನಿಸಿದ್ದರೆ ನೂತ್ನ ಎಂಬುದಕ್ಕೆ ಪ್ರತಿಯಾಗಿ ನೂತ ಎಂದು ತಪ್ಪುಜಿದ್ದಿದೆ ಎಂದು ಆರೇ ಆಗಲಿ ತಿಳಿದುಕೊಳ್ಳುವುದರಲ್ಲಿ ಸಂದೇಹವಿಲ್ಲ. ನನಗೆ ಸಂಸ್ಕೃತದಲ್ಲಿ ಅವರಿಗಿರುವಷ್ಟು ಪಾಂಡಿತ್ಯವಿಲ್ಲವಾದರೂ ಅಲ್ಪಸ್ವಲ್ಪ ಜ್ಞಾನವಾದರೂ ಉಂಟು ಎಂದು ಅವರು ಭಾವಿಸಬಹುದಾಗಿದ್ದಿತು.

ನಾಗಚಂದ್ರನೇ ಜಿನಮುನಿತನಯನನ್ನು ಬರೆದಿರಬೇಕು ಎಂದು ಹೇಳಿ ಅಯ್ಯನವರು ಹೀಗೆ ವಾದಿಸುತ್ತಾರೆ (ಪುಟಗಳು 55–56)—" ಪೊನ್ನನ ಶಾಂತಿಪುರಾಣಕ್ಕೂ ಜಿನಾಕ್ಷರಮಾಲೆಗೂ ಶೈಲಿಯಲ್ಲಿ ಸಾಮ್ಯವಿಲ್ಲದಿದ್ದರೂ ಜಿನಾಕ್ಷರಮಾಲೆ ಪೊನ್ನರಚಿತನೆಂದು ನಂಬುವಂತೆಯೇ ಜಿನಮುನಿತನಯನಕ್ಕೂ ನಾಗಚಂದ್ರನ ಇತರ ಗ್ರಂಥಗಳಿಗೂ ಶೈಲಿಯಲ್ಲಿ ವ್ಯತ್ಯಾಸವಿದ್ದರೂ ಜಿನಮುನಿತನಯನನ್ನು ಅವನೇ ಬರೆದನೆಂದು ನಂಬಬೇಕು." ಕನ್ನಡ ಕಾವ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಪರಿಚಯವುಳ್ಳವರೂ ಕೂಡ ಪೊನ್ನನ ಎರಡು ಗ್ರಂಥಗಳ ಶೈಲಿಯಲ್ಲಿ ಇರುವ ಅತ್ಯಂತ ಸಾಮ್ಯವನ್ನೂ ನಾಗಚಂದ್ರನ ಇತರ ಗ್ರಂಥಗಳ ಮತ್ತು ಜಿನಮುನಿತನಯದ ಶೈಲಿಯಲ್ಲಿ ಇರುವ ಅತ್ಯಂತ ವೈಷಮ್ಯವನ್ನೂ ಒಡನೆ ಗ್ರಹಿಸುವರು. ಅವರು ಕೇಳುವ, ಪೇಳುವ, ಚಿನುಮಯ, ಕೊಲುವರ್ ಎಂಬಂಥ ರೂಪಗಳನ್ನು ಪ್ರಯೋಗಿಸಿದನು, ಹಲವ್ರಬಗೆಯಾದ ವ್ಯಾಕರಣ ದೋಷಗಳಿಗೆ ಎಡೆಗೊನು ಎಂಬ ಅಪವಾದವನ್ನು ಉದ್ದಾಮಕವಿಯಾದ ನಾಗಚಂದ್ರನ ಮೇಲೆ ಎಂದಿಗೂ ಹೊರಿಸಲಾರರು. ಈ ವಿಷಯದಲ್ಲಿ ಅಭಿಪ್ರಾಯವನ್ನು ಕೊಡಲು ಸಾಕಾದ ಕಾವ್ಯಪರಿಚಯವು ಅಯ್ಯನವರಿಗೆ ಇಲ್ಲ ಎಂದು ಹೇಳಬೇಕಾಗಿದೆ.

ಇನ್ನು ಶ್ರ ಬಿ. 69ರಲ್ಲಿ ಬರುವ ಪರಿಯಳಿ ಎಂಬುದು ಒಂದು ಗ್ರಾಮದ ಹೆಸರೆಂದೂ ವಡ್ಡದೇವ ಎಂಬುದು ಆ ಗ್ರಾಮದ ಬಸ್ತಿಯ ಜಿನಬಿಂಬದ ಹೆಸರೆಂದೂ ಅಯ್ಯನವರು ಮಾಡಿರುವ (ಪುಟ 37) ವಿಚಿತ್ರವಾದ ವಿವರಣದ ಸಾಧುತ್ವಾಸಾಧುತ್ವಗಳ ನಿರ್ಣಯವನ್ನು ಜೈನಪಂಡಿತರಿಗೆ ಬಿಟ್ಟಿದ್ದೇನೆ.

ರುದ್ರಭಟ್ಟ

ರುದ್ರಭಟ್ಟನ ಕಾಲದ ವಿಷಯವಾಗಿ ವಿಚಾರಮಾಡುತ್ತ ಅವನು ಸುಮಾರು 1218–19ರಲ್ಲಿ ಇದ್ದನೇ ಹೊರತು ನಾನು ಹೇಳಿರುವಂತೆ ಸು. 1180 ರಲ್ಲಿ (I, 269)ಇದ್ದಿರಲಿಲ್ಲ ಎಂದು ಅಯ್ಯನವರು ನಿರ್ಣಯಿಸಿದ್ದಾರೆ(ಪುಟಗಳು 95–115). ತಮ್ಮ ನಿರ್ಣಯಕ್ಕೆ ಕೊಟ್ಟಿರುವ ಆಧಾರಗಳು :— (1) 2 ನೆಯ ಬಲ್ಲಾಳನ ಮಹಿಷಿಯಾದ ಉಮಾದೇವಿಯನ್ನು ಹೆಸರಿಸುವ ಆದಿಶಾಸನವು 1185 ರಲ್ಲಿ ಪುಟ್ಟಿರುವುದರಿಂದ, ಅವಳು 1180 ರಲ್ಲಿ ಆ ರಾಜನ ಮಹಿಷಿಯಾಗಿದ್ದಿರಲಾರಳು. ಆದುದರಿಂದ ಉಮಾದೇವಿಯನ್ನು ಹೇಳುವ ರುದ್ರಭಟ್ಟನು 1185ಕ್ಕಿಂತ ಈಚೆಗೆ ತನ್ನ ಗ್ರಂಥವನ್ನು ಬರೆದಿರಬೇಕು (ಪುಟ 101).

(2) ಜಗನ್ನಾಥವಿಜಯದ 2ನೆಯ ಮಂಗಳ ಪದ್ಯದಲ್ಲಿ 2ನೆಯ ಬಲ್ಲಾಳನಿಗೆ ಪರಮೈಶ್ವರ್ಯಾಸ್ಪದಂ ಎಂಬ ವಿಶೇಷಣವನ್ನು ಕವಿ ಕೊಟ್ಟಿರುವುದರಿಂದ ಆ ರಾಜನಿಗೆ ಆ ಕಾಲದಲ್ಲಿ ಪರಮೇಶ್ವರ ಎಂಬ ಚಕ್ರವರ್ತಿತ್ವಸೂಚಕವಾದ ಬಿರುದು

ಇದ್ದಿರಬೇಕು. ಈ ಬಲ್ಲಾಳನು ಸೇವುಣರಾಜನಾದ ಭಿಲ್ಲಮನನ್ನು ಸೋಲಿಸಿದ ಮೇಲೆ ಸು.1190 ರಲ್ಲಿ ಚಕ್ರವರ್ತಿತ್ವಸೂಚಕವಾದ ಬಿರುದುಗಳನ್ನು ವಹಿಸಿದುದರಿಂದ ರುದ್ರಭಟ್ಟನು 1190 ಕ್ಕಿಂತ ಈಚೆಗೆ ತನ್ನ ಗ್ರಂಥವನ್ನು ರಚಿಸಿರಬೇಕು (ಪುಟ 102).

(3) ಅದೇ ವಂಗಳ ಪದ್ಯದಲ್ಲಿ 2ನೆಯ ಬಲ್ಲಾಳನಿಗೆ ಕೊಟ್ಟಿರುವ ರಾಜ ರಾಜಪ್ರತಿಷ್ಠಾನಿರತಂ ಎಂಬ ವಿಶೇಷಣವು ಆ ರಾಜನ ಆಳಿಕೆಯಲ್ಲಿ ಅವನ ಮಗನಾದ 2ನೆಯ ನಾರಸಿಂಹನು ಚೋಳರಾಜನಾದ 3ನೆಯ ರಾಜರಾಜನನ್ನು (1216-1246) ಕಳೆದುಕೊಂಡಿದ್ದ ಸಿಂಹಾಸನದ ಮೇಲೆ ಕುಳ್ಳಿರಿಸಿದ ಸಂಗತಿಯನ್ನು ತಿಳಿಸುತ್ತದೆ. 1218ರಲ್ಲಿ ಬರೆದ ನಾಗವಂಗಲ 29 2ನೆಯ ಬಲ್ಲಾಳನಿಗೆ ಚೋಳರಾಜಪ್ರತಿಷ್ಠಾಚಾರ್ಯ, ಮಗಧರಾಜ್ಯದಿಶಾಪಟ್ಟ, ಪಾಂಡ್ಯಗಜ ಕೇಸರಿ ಎಂಬ ಬಿರುದುಗಳನ್ನು ಹೇಳುವುದರಿಂದ ರಾಜರಾಜನನ್ನು ಸಿಂಹಾಸನದಮೇಲೆ ಕುಳ್ಳಿರಿಸಿದುದೂ ಮಗಧರಾಜ್ಯವನ್ನು ಜಯಿಸಿದುದೂ 1217 ರಲ್ಲಿ ನಡೆದಿರಬೇಕು (ಪುಟ 113). ತನ್ನ ಮಗ 2ನೆಯ ನಾರಸಿಂಹನು 1217 ರಲ್ಲಿ ಪಡೆದ ವಿಜಯಗಳ ದೆಸೆಯಿಂದ 2ನೆಯ ಬಲ್ಲಾಳನು ಈ ಬಿರುದುಗಳನ್ನು ವಹಿಸಿದನು (ಪುಟ 114). ರುದ್ರಭಟ್ಟನು 1217 ರಲ್ಲಿ 3 ನೆಯ ರಾಜರಾಜನನ್ನು ಸಿಂಹಾಸನದ ಮೇಲೆ ಸ್ಥಾಪಿಸಿದ ಸಂಗತಿಯನ್ನು ಹೇಳುವುದರಿಂದ ಆ ವರ್ಷಕ್ಕೆ ಈಚೆಯೂ 2ನೆಯ ಬಲ್ಲಾಳನು ಗತಿಸಿದ 1220 ಕ್ಕೆ ಹಿಂದೆಯೂ, ಎಂದರೆ ಸು. 1218–19 ರಲ್ಲಿ ಇದ್ದಿರಬೇಕು.

ನನ್ನ ಸಮಾಧಾನಗಳು

(1) ಈಗ ಸಿಕ್ಕಿರುವ ಶಾಸನಗಳೊಳಗೆ 1185 ರಲ್ಲಿ ಹುಟ್ಟಿದ ಒಂದರಲ್ಲಿ ಉಮಾದೇವಿಯ ಹೆಸರು ಹೇಳಿದೆ ಎಂದ ಮಾತ್ರಕ್ಕೆ ಆ ವರ್ಷಕ್ಕೆ ಕೆಲವು ವರ್ಷಗಳ ಹಿಂದೆ, ಎಂದರೆ ಸು. 1180 ರಲ್ಲಿ, ಅವಳು 2 ನೆಯ ಬಲ್ಲಾಳನ ಮಹಿಷಿಯಾಗಿರಕೂಡದು ಎಂಬ ನಿರ್ಬಂಧವೇನೂ ಇಲ್ಲ. ಉಮಾದೇವಿಯನ್ನು ಹೇಳುವ, 1185 ಕ್ಕಿಂತ ಹಿಂದಣಕಾಲದ, ಆವುದಾದ ಒಂದು ಶಾಸನವು ಆವ ನಿವಿಷದಲ್ಲಿಯಾದರೂ ದೊರೆಯಬಹುದು. ಅಲ್ಲದೆ ನಾನು ರುದ್ರಭಟ್ಟನಿಗೆ ಕೊಟ್ಟಿರುವ ಕಾಲವು ಸುಮಾರು 1180 ಆಗಿರುವುದರಿಂದ ಈ ವರ್ಷ ಸಂಖ್ಯೆಗೆ ಕೆಲವು ವರ್ಷಗಳನ್ನು ಸೇರಿಸುವುದಕ್ಕು ಇದರಿಂದ ಕೆಲವನ್ನು ಬಿಡುವುದಕ್ಕೂ ಅವಕಾಶವುಂಟು.

(2) ರುದ್ರಭಟ್ಟನು ಪರಮೈಶ್ವರ್ಯಾಸ್ಪದಂ ಎಂಬ ವಿಶೇಷಣವನ್ನು ಅಯ್ಯನವರು ಕಲ್ಪಿಸಿರುವ ಅರ್ಥದಲ್ಲಿ ಪ್ರಯೋಗಿಸಿದ್ದಾನೆ ಎಂದು ನಾನು ನಂಬಲಾರೆನು. ಇದಕ್ಕೆ "ವಿಶೇಷವಾದ ಪ್ರಭುತ್ವಕ್ಕೆ ಅಥವಾ ಸಂಪತ್ತಿಗೆ ನೆಲೆ"

ಎಂದು ಅರ್ಥವೇ ಹೊರತು ಮತ್ತೆ ಬೇರೆ ಇಲ್ಲ. ಚಕ್ರವರ್ತಿತ್ವ ಸೂಚಕವಾದ ಪರಮೇಶ್ವರ ಎಂಬ ವಿಶೇಷ ಬಿರುದನ್ನು ಹೇಳಬೇಕಾಗಿದ್ದರೆ ಕವಿ ಪಾರಮೈಶ್ವರ್ಯ (ಪರಮೇಶ್ವರತ್ವ) ಎಂಬ ರೂಪವನ್ನು ಪ್ರಯೋಗಿಸುತ್ತಿದ್ದನು. ಅಲ್ಲದೆ ಶ್ರ. ಬೆ. 240 (ಸು. 1175), 1926ನೆಯ ವರ್ಷದ ಮೈಸೂರು ಶಾಸನದ ಇಲಾಖೆಯ ವರದಿಯ 35ನೆಯ ಸಂಖ್ಯೆಯ ಶಾಸನ (1183), 1923ನೆಯ ವರ್ಷದ ಅದೇ ಇಲಾಖೆಯ ವರದಿಯ 5ನೆಯ ಸಂಖ್ಯೆಯ ಶಾಸನ (1185) ಮುಂತಾದ 1190ಕ್ಕೆ ಹಿಂದೆ ಹುಟ್ಟಿದ ಶಾಸನಗಳಲ್ಲಿಯೂ ಕೂಡ 2ನೆಯ ಬಲ್ಲಾಳನಿಗೆ ಚಕ್ರವರ್ತಿತ್ವ ಸೂಚಕವಾದ ಬಿರುದುಗಳು ಹೇಳಿವೆ. ಹಾಗೆಯೇ ನಂಜನ ಗೂಡು 71 (1192), ಶ್ರ. ಬೆ. 335 (1195), ತಿರುಮುಕೂಡಲು ನರಸೀಪುರ 31 (1195–96) ಮುಂತಾದ 1190ಕ್ಕೆ ಈಚೆಗೆ ಹುಟ್ಟಿದ ಶಾಸನಗಳಲ್ಲಿಯೂ ಸಹ ಆ ರಾಜನಿಗೆ ಅಧೀನತಾ ಸೂಚಕವಾದ ಮಹಾಮಂಡಲೇಶ್ವರ ಎಂಬ ಬಿರುದು ಮಾತ್ರ ಹೇಳಿದೆ.

(3) ಅಯ್ಯನವರು ಭಾವಿಸುವಂತೆ ರುದ್ರಭಟ್ಟನು ರಾಜರಾಜಪ್ರತಿಷ್ಠಾನಿರತಂ ಎಂಬ ವಿಶೇಷಣವನ್ನು 2ನೆಯ ಬಲ್ಲಾಳನಿಗೆ ಪ್ರಯೋಗಿಸಿದಾಗ ಆ ರಾಜನ ಮಗ 2ನೆಯ ನಾರಸಿಂಹನು 1217ರಲ್ಲಿ 3ನೆಯ ರಾಜರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ ಚಾರಿತ್ರಿಕ ಸಂಗತಿಯನ್ನು ಮನಸ್ಸಿನಲ್ಲಿಟ್ಟು ಕೊಂಡಿದ್ದನು ಎಂಬುದು ಅಸಂಭಾವ್ಯವು. ಈ ವಿಶೇಷಣಕ್ಕೆ ''ರಾಜ ಶ್ರೇಷ್ಠರನ್ನು ಸ್ಥಾಪಿಸುವುದರಲ್ಲಿ ಕುತೂಹಲವುಳ್ಳ'' ಎಂದು ಅರ್ಥವೇ ಹೊರತು ಮತ್ತೆ ಬೇರೆ ಇಲ್ಲ. ರುದ್ರಭಟ್ಟನು ತನ್ನ ಗ್ರಂಥವನ್ನು ಬರೆದಾಗ ಉಮಾದೇವಿ 2ನೆಯ ಬಲ್ಲಾಳನ ಮಹಿಷಿಯಾಗಿಯೂ ಚಂದ್ರಮೌಳಿ ಮಂತ್ರಿಯಾಗಿಯೂ ಇದ್ದರೆಂಬ ವಿಷಯವನ್ನು ಜ್ಞಾಪಕದಲ್ಲಿಡಬೇಕು. ಶಾಸನಗಳಿಂದ ಉಮಾದೇವಿಯ ಕಾಲವು 1185–1209 ಎಂದು ಸ್ಥೂಲವಾಗಿ ನಿರ್ಣಯಿಸಬಹುದು. ಪ್ರಕೃತವಿಚಾರದಲ್ಲಿ ಜಗನ್ನಾಥವಿಜಯದ ರಚನೆಗೆ ಕಾರಣಭೂತನಾದ ಚಂದ್ರಮೌಳಿಯ ಕಾಲವು ಬಹು ಮುಖ್ಯವಾದುದು. ಚಂದ್ರಮೌಳಿಯ ಹೆಸರನ್ನು ಹೇಳುವ, ಈಗ ಉಪಲಬ್ಧವಾಗಿರುವ ಶ್ರ. ಬೆ. 327 (1181), ಚೆನ್ನರಾಯಪಟ್ಟಣ 150 (1182), ಅರಸಿಯಕೆರೆ 127 (1185) ಈ ಶಾಸನಗಳಿಂದ ಅವನ ಕಾಲವು 1181–1185 ಎಂದು ತಿಳಿಯುತ್ತದೆ. ಚಂದ್ರಮೌಳಿಯನ್ನು ಹೇಳುವ, 1185ಕ್ಕೆ 'ಈಚೆ ಹುಟ್ಟಿದ, ಶಾಸನವಾವುದೂ ದೊರೆತಿಲ್ಲವಾದುದರಿಂದ ಅವನು ಮೇಲೆ ಹೇಳಿದ ಕಾಲಾವಧಿಗಿಂತ ಬಹಳ ಕಾಲ ಈಚೆ ಮಂತ್ರಿಯಾಗಿರಲಿಲ್ಲವೆಂದೂ ಜಗನ್ನಾಥವಿಜಯದ ರಚನೆಯೂ ಆ ಕಾಲದಲ್ಲಿಯೇ ಆಗಿರಬೇಕೇ ಹೊರತು ಅದಕ್ಕಿಂತ ಸುಮಾರು 35 ವರ್ಷ ಈಚೆ 1218–19 ರಲ್ಲಿ ಆಗಿರಲಾರದೆಂದೂ ಭಾವಿಸುವುದು ತಪ್ಪಾಗಲಾರದು.

ಇದಲ್ಲದೆ ನನಗೆ ತಿಳಿದಮಟ್ಟಿಗೆ 2ನೆಯ ಬಲ್ಲಾಳನಿಗಾಗಲಿ ಅವನ ಮಗ 2ನೆಯ ನಾರಸಿಂಹನಿಗಾಗಲಿ ಅವನ ಹಿಂದೆ ಬಂದ ಆವ ರಾಜನಿಗೇ ಆಗಲಿ ರಾಜ ರಾಜಪ್ರತಿಷ್ಠಾನಿರತ ಎಂಬ ಬಿರುದು ಆವ ಶಾಸನದಲ್ಲಿಯೂ ಹೇಳಿಲ್ಲ. 3ನೆಯ ರಾಜರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ 2ನೆಯ ನಾರಸಿಂಹನಿಗೆ ಈ ಬಿರುದು ಸಲ್ಲುವುದಾದರೂ ಅವನಿಗೆ ಚೋಳರಾಜ್ಯ ಪ್ರತಿಷ್ಠಾಚಾರ್ಯ ಎಂಬ ಬಿರುದಿರುವುದೇ ಹೊರತು ಈ ಬಿರುದಿಲ್ಲ. ಮಗರರಾಜ್ಯವನ್ನು ಜಯಿಸಿದುದರಿಂದ ಅವನಿಗೆ ಮಗರರಾಜ್ಯ ನಿರ್ಮೂಲನ ಎಂಬ ಬಿರುದೂ ಉಂಟು. ಈ ಎರಡು ಬಿರುದುಗಳನ್ನೂ ಪಾಂಡ್ಯಗಂಡಶೈಲವಜ್ರದಂಡ ಎಂದಾಗಲಿ ಅಥವಾ ಅದೇ ಅರ್ಥವನ್ನು ಕೊಡುವ ಬೇರೆ ಪದಸಮುದಾಯ ರೂಪವಾಗಿಯಾಗಲಿ ಇರುವ ಮತ್ತೊಂದು ಬಿರುದನ್ನೂ 2ನೆಯ ನಾರಸಿಂಹನಿಗೆ ಚೆನ್ನರಾಯಪಟ್ಟಣ 197 ಮತ್ತು 203 (1223), ಚೆನ್ನಗಿರಿ 72 (1221), ದಾವಣಗೆರೆ 25 (1224), ಗುಬ್ಬಿ 45 (1233) ಮೊದಲಾದ ಹಲವು ಶಾಸನಗಳಲ್ಲಿ ಕೊಟ್ಟಿರುವುದು ನ್ಯಾಯವಾಗಿಯೇ ಇದೆ. ಪರಂತು ಈ ಬಿರುದುಗಳನ್ನು 2ನೆಯ ನಾರಸಿಂಹನ ತಂದೆಯಾದ 2ನೆಯ ಬಲ್ಲಾಳನಿಗೆ ನಾಗಮಂಗಲ 29 (1218) ಎಂಬ ಒಂದೇ ಒಂದು ಶಾಸನದಲ್ಲಿ ಕೊಟ್ಟಿರುವುದು ತಪ್ಪೆಂದು ಭಾವಿಸಬೇಕಾಗಿದೆ. 1217 ರಲ್ಲಿ ಮಗನು ಪಡೆದ ವಿಜಯಗಳ ದೆಸೆಯಿಂದ ತಂದೆಯಾದ 2ನೆಯ ಬಲ್ಲಾಳನು ಈ ಬಿರುದುಗಳನ್ನು ವಹಿಸಿದನು ಎಂದು ಅಯ್ಯನವರು ಹೇಳುತ್ತಾರೆ(ಪುಟ 114). ಆದರೆ ತಂದೆಯ ಬಿರುದುಗಳನ್ನು ಮಗನು ವಹಿಸುವುದು ವಾಡಿಕೆಯಾಗಿದೆಯೇ ಹೊರತು ಮಗನ ಬಿರುದುಗಳನ್ನು ತಂದೆ ವಹಿಸುವ ವಾಡಿಕೆ ಇಲ್ಲ. ಮತ್ತೊಂದು ಕಡೆ (ಪುಟ 110) ಅಯ್ಯನವರು ಪಾಂಡ್ಯಗಂಡಶೈಲ ವಜ್ರದಂಡ ಎಂಬ ಅಥವಾ ಅದೇ ಅರ್ಥವನ್ನು ಕೊಡುವ ಪಾಂಡ್ಯಗಜಕೇಸರಿ, ಪಾಂಡ್ಯರಾಜದಿಶಾಪಟ್ಟ ಇತ್ಯಾದಿ ರೂಪವಾದ ಬಿರುದನ್ನು ಮೊತ್ತಮೊದಲು 2ನೆಯ ಬಲ್ಲಾಳನೂ ಅಮೇಲೆ ಅವನ ಮಗನೂ ಮೊಮ್ಮಗನೂ ವಹಿಸಿದರೆಂದು ಹೇಳುತ್ತಾರೆ. ಇದು ತಪ್ಪು. ಇಂಥ ಬಿರುದು 2ನೆಯ ಬಲ್ಲಾಳನ ತಾತನಾದ ವಿಷ್ಣುವರ್ಧನನಿಗೂ ತಂದೆಯಾದ 1ನೆಯ ನಾರಸಿಂಹನಿಗೂ ಉಂಟು: ವಿಷ್ಣುವರ್ಧನನಿಗೆ ನಾಗಮಂಗಲ 76ರಲ್ಲಿ (1145) ಪಾಂಡ್ಯಕುಲಪಯೋಧಿ ಬಡಬಾನಲ ಎಂಬ ಬಿರುದೂ ಕಡೂರು 96 ರಲ್ಲಿ (1141) ಪಾಂಡ್ಯ ಗಂಡಗರ್ವಪರ್ವತಪಾಕ ಶಾಸನ ಎಂಬ ಬಿರುದೂ ಹೇಳಿವೆ; 1ನೆಯ ನಾರಸಿಂಹನಿಗೆ ಶ್ರ. ಬೆ. 345 ರಲ್ಲಿಯೂ (ಸು. 1159) ಕೃಷ್ಣರಾಜಪೇಟೆ 53 ರಲ್ಲಿಯೂ (1171) ಪಾಂಡ್ಯಕುಲ ಕಮಲವೇತಂಡ ಎಂಬ ಬಿರುದು ಹೇಳಿದೆ. ಪಾಂಡ್ಯಕುಲಕಮಲವೇತಂಡ ಎಂಬ

---

1 ಅರಸಿಯಕೆರೆ 183ರ ಕಾಲವು ಸಂದೇಹಾಸ್ಪದವಾಗಿದೆ.

1ನೆಯ ನಾರಸಿಂಹನ ಬಿರುದೇ ಅವನ ಮಗ 2ನೆಯ ಬಲ್ಲಾಳನಿಗೂ ಶ್ರ. ಬೆ. 327 (1181) ಮತ್ತು 335 (1195), ಅರಸಿಯುಕೆರೆ 8890 (1184) ಮತ್ತು 93 (1189), ಮುಂತಾದ ಶಾಸನಗಳಲ್ಲಿ ಹೇಳಿದೆ.

ಅಂತು ರುದ್ರಭಟ್ಟನಿಗೆ ನಾನು ಹೇಳಿರುವ ಸು. 1180 ಎಂಬ ಕಾಲವನ್ನು ಮಾರ್ಪಡಿಸುವುದಕ್ಕೆ ಸಾಕಾದ ಕಾರಣವಾವುದೂ ಉಕ್ತವಾಗಿಲ್ಲ. ಆದರೂ ಉಮಾದೇವಿಚಂದ್ರ ಮೌಳಿಗಳ ಕಾಲಕ್ಕೆ ಸರಿಹೋಗುವಂತೆ ನಾನೇ ಅದನ್ನು ಸು. 1185 ಎಂದು ತಿದ್ದುತ್ತೇನೆ.

ಸುಮನೋಬಾಣ

ಸುಮನೋಬಾಣನನ್ನು ಕುರಿತು ಅಯ್ಯನವರು ಬಹಳ ವಿಸ್ತಾರವಾಗಿ (124 ರಿಂದ 149 ರವರೆಗೆ 26 ಪುಟಗಳನ್ನು) ಬರೆದಿದ್ದಾರೆ. ಈ ಬರವಣಿಗೆಯಲ್ಲಿ ಬಹಳ ಭಾಗವು ಪ್ರಕೃತವಿಷಯಕ್ಕೆ ಸಂಬಂಧಿಸುವುದೇ ಇಲ್ಲ. ಜನ್ನನ ಅನಂತನಾಥ ಪುರಾಣದಲ್ಲಿ ಬರುವ (I,162, 329).

ಜನನಾಥಂ ಜಗದೇಕಮಲ್ಲ ಕಟಕೋಪಾಧ್ಯಾಯನಾನಾಗವ ।
ರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ॥
ದು ನೃಸಿಂಹಕ್ಷ್ಮಾಪತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ ।
ಕ್ತಿನವೀನೋಜ್ವಲ ಬಾಣನಪ್ಪ ಸುಮನೋ ಬಾಣಂ ಕವಿಶ್ರೇಷ್ಠರೊಳ್॥

ಎಂಬ ಪದ್ಯಕ್ಕೆ ಅಯ್ಯನವರು ಅಪಾರ್ಥವಮಾಡಿ ಅದರ ಮೇಲೆ ಕೆಲವು ಊಹೆಗಳನ್ನು ಕಟ್ಟಿದ್ದಾರೆ. ಕನ್ನಡ ಪಂಡಿತರಾರೇ ಆಗಲಿ ಉಪಾಧ್ಯಾಯಂ ಎಂಬುದರವರೆಗೆ ಒಂದು ವಾಕ್ಯ, ಉಳಿದ ಭಾಗವು ಒಂದು ವಾಕ್ಯ ಹೀಗೆ ಈ ಪದ್ಯವು ಎರಡು ವಾಕ್ಯಗಳನ್ನು ಒಳಕೊಂಡಿದೆ ಎಂದೂ ಇದಕ್ಕೆ "ಜಗದೇಕಮಲ್ಲ ರಾಜನಲ್ಲಿ ಕಟಕೋಪಾಧ್ಯಾಯನೂ ಅಭಿನವ (ಇದಾನೀಂತನ) ಶರ್ವವರ್ಮನೆನ್ನಿಸಿಕೊಂಡವನೂ ಆಗಿದ್ದ ಪ್ರಸಿದ್ಧನಾದ ನಾಗವರ್ಮನು ಜನ್ನನಿಗೆ ಉಪಾಧ್ಯಾಯನು; ಈಗ ನೃಸಿಂಹರಾಜನಲ್ಲಿ ಕಟಕೋಪಾಧ್ಯಾಯನಾರೆಂದು ಕೇಳುತ್ತೆಯಾ? ಅವನು ಕವಿಶ್ರೇಷ್ಠರೊಳಗೆ ಸೂಕ್ಷ್ಮಯಲ್ಲಿ ಅಭಿನವ ಬಾಣನಾದ ಸುಮನೋಬಾಣನು" ಎಂಬುದು ಅರ್ಥವೆಂದೂ ಹೇಳುವರು. ಈ ಪದ್ಯದಲ್ಲಿ ಹಿಂದಣ ಸಂಗತಿ ಒಂದು, ಈಗಿನ ಸಂಗತಿ ಒಂದು ಹೀಗೆ ಎರಡು ವಿಷಯಗಳು ಹೇಳಿವೆ. ಆದರೆ ಅಯ್ಯನವರು ಈ ಪದ್ಯವನ್ನು ನಾಗವರ್ಮಂ ಎಂಬಲ್ಲಿಗೆ ಒಂದು ಭಾಗ, ಉಳಿದುದು ಒಂದು ಭಾಗ ಹೀಗೆ ಎರಡು ಭಾಗಮಾಡಿ ನಾಗವರ್ಮನು ಜಗದೇಕಮಲ್ಲರಾಜನ ಕಟಕೋಪಾಧ್ಯಾಯನಾಗಿದ್ದನು, ಅಭಿನವ ಶರ್ವವರ್ಮನೂ ಜನ್ನನಿಗೆ ಉಪಾಧ್ಯಾಯನೂ ಅಭಿನವಬಾಣನೂ ಆದ ಸುಮನೋಬಾಣನು ನೃಸಿಂಹರಾಜನ ಕಟಕೋಪಾಧ್ಯಾಯನಾಗಿದ್ದನು ಎಂದು ಅರ್ಥ

ಮಾಡಿದ್ದಾರೆ. ಕನ್ನಡ ಕಾವ್ಯಪರಿಚಯವುಳ್ಳವರಾರೂ ಈ ವಿಚಿತ್ರವಾದ ವಿವರಣವನ್ನು ಒಪ್ಪಲಾರರು. ಈ ವಿವರಣದಲ್ಲಿ ಬಹಳ ಮುಖ್ಯವಾದ ಇಂದು ಎಂಬ ಪದದ ಅರ್ಥವೇ ಬಿಟ್ಟು ಹೋಗಿದೆ; ಆರೆಂಬ ಎಂಬುದಕ್ಕೆ ಅರ್ಥವು ತಿಳಿದಂತೆ ತೋರುವುದಿಲ್ಲ. 2ನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿಯ

ಅಭಿಮತ ಶಬ್ದ ಸಂಸ್ಮರಣದಿಂ ಜನಮುಂ ತಿಳಿವಂತು ಮಾಡಿ ವಾ ।
ಗ್ವಿಭವಮದ ಪ್ರತಕ್ರ್ಯಮೆನೆ ಸಂದಿಸಕಂದೆಸೆಯುಂತನೆಯ್ದಿ ತ ॥
ತ್ಸಭೆಗಳೊಳಗ್ರ ವೂಜೆವಡೆದೊಂದು ಮಹಾಮಹಿನೂನುಭಾವದಿಂ ।
ದಭಿನವಶರ್ವವರ್ಮನಿವನೆಂದ ಪುದುರ್ವರೆ ನಾಗವರ್ಮನಂ ॥

ಎಂಬ ಪದ್ಯದಲ್ಲಿ (I,145) ಕೆಲವು ಕಾರಣಗಳನ್ನು ಕೊಟ್ಟು 2ನೆಯ ನಾಗವರ್ಮನಿಗೆ ಅಭಿನವಶರ್ವವರ್ಮ ಎಂಬ ಬಿರುದನ್ನು ಹೇಳಿದೆ. ಈ ಕಾರಣಗಳಲ್ಲಿ ಮುಖ್ಯವಾದುದು ಕನ್ನಡ ಭಾಷೆಗೆ ಶಬ್ದಸ್ಮೃತಿ ಎಂಬ ಸುಲಭವಾದ ವ್ಯಾಕರಣವನ್ನು ಬರೆದುದು. ಶರ್ವವರ್ಮನು ಸಂಸ್ಕೃತ ಭಾಷೆಗೆ ಕಾತಂತ್ರ ವೆಂಬ ಸುಲಭವಾದ ವ್ಯಾಕರಣವನ್ನು ಬರೆದಿದ್ದಾನೆ. ಆದುದರಿಂದ ಅಭಿನವ ಶರ್ವವರ್ಮ ಎಂಬುದಕ್ಕೆ ಪರ್ಯಾಯವಾಗಿ ಜನ್ನನು ಪ್ರಯೋಗಿಸಿರುವ ಇದಾನೀಂತನ ಶರ್ವವರ್ಮ ಎಂಬುದು ನಾಗವರ್ಮನಿಗೆ ಅನ್ವಯಿಸಬೇಕೇ ಹೊರತು ಸುಮನೋಬಾಣನಿಗಲ್ಲ. ಈ ಕಾರಣದಿಂದಲೇ ''ಜನ್ನಂಗುಪಾಧ್ಯಾಯಂ'' ಎಂಬುದೂ ನಾಗವರ್ಮನಿಗೇ ಅನ್ವಯಿಸಬೇಕು; ಸುಮನೋಬಾಣನಿಗಲ್ಲ. ಜನ್ನನು ತನ್ನ ಯಶೋಧರ ಚರಿತೆಯಲ್ಲಿ ತಾನು ''ಕವಿಸುಮನೋಬಾಣನ ಮಗನೆಂದಖಿಳ ಕೊ್ಷಣಿಗೆ ಪೆಸರಾಯ್ತು'' ಎಂದೂ ತನ್ನ ಅನಂತನಾಥಪುರಾಣದಲ್ಲಿ ''ಶಂಕರಪುತ್ರಂ'' ಎಂದೂ ಹೇಳಿಕೊಂಡಿರುವುದರಿಂದ ಸುಮನೋಬಾಣನ ನಿಜವಾದ ಹೆಸರು ಶಂಕರ ಎಂದು ವ್ಯಕ್ತವಾಗುತ್ತದೆ. ಆದರೆ ಅಯ್ಯನವರು ಸುಮನೋಬಾಣ, ಶಂಕರ ಎಂಬವರು ಬೇರೆ ಬೇರೆ ಮನುಷ್ಯರು ಎಂದು ಭಾವಿಸುವುದು ಮಾತ್ರವಲ್ಲದೆ ''ಜನ್ನಂಗುಪಾಧ್ಯಾಯಂ'' ಎಂಬುದು ಸುಮನೋಬಾಣನಿಗೆ ಅನ್ವಯಿಸುತ್ತದೆ ಎಂಬ ತಮ್ಮ ಕಲ್ಪನೆಗೆ ಹೊಂದಿಕೆಯಾಗಬೇಕೆಂದು ''ಕವಿಸುಮನೋಬಾಣನಮಗಂ'' ಎಂಬಲ್ಲಿ ಮಗ ಎಂಬುದಕ್ಕೆ ಶಿಷ್ಯ ಎಂದು ಅರ್ಥಮಾಡಿದ್ದಾರೆ. ಸುಮನೋಬಾಣನು ಜೈನನಲ್ಲ ಎಂದೂ ಸೂಚಿಸಿದ್ದಾರೆ. ಅಯ್ಯನವರ ಈ ಕಲ್ಪನೆಯೂ ಅಪಾರ್ಥವೂ ಕಾರ್ಯಕಾರಿಯಾಗುವಂತಿಲ್ಲ. ಜನ್ನನು ಸುಮನೋಬಾಣನ ಮಗನೆಂಬುದಕ್ಕೂ ಜೈನರಾದ ಮಲ್ಲಿಕಾರ್ಜುನ ಕೇಶಿರಾಜರಬಂಧುವೆಂಬುದಕ್ಕೂ ಆವ ಸಂದೇಹವೂ ಇಲ್ಲ. ಮಲ್ಲಿಕಾರ್ಜುನ ಕೇಶಿರಾಜರು ಜೈನರೆಂಬುದು ಮುಖ್ಯವಾಗಿ ಮೊದಲಯವನು ತನ್ನ ಸೂಕ್ತಿಸುಧಾರ್ಣವದ ಆರಂಭದಲ್ಲಿ ಮಾಡಿರುವ ಜಿನಸ್ತುತಿಯಿಂದಲೂ ಎರಡನೆಯವನು ತನ್ನ ಶಬ್ದ

ಮಣಿದರ್ಪಣದ 9ನೆಯ ಸೂತ್ರದಲ್ಲಿ "ಶಬ್ದದ್ರವ್ಯಂಶ್ಚೇತಂ" ಎಂಬುದರಿಂದಲೂ ಸ್ಪಷ್ಟವಾಗಿದೆ. ಜೈನರು ಮತಾಂತರದವರನ್ನು ತಮ್ಮ ಸಮುದಾಯಕ್ಕೆ ಸೇರಿದವರೆಂದು ಎಂದಿಗೂ ಭಾವಿಸಲಾರರು.

ಸುಮನೋಬಾಣನ ಕಾಲದ ವಿಷಯದಲ್ಲಿ ಮೇಲಣ ಪದ್ಯದಲ್ಲಿ "ಇಂದು" ಎಂಬ ಪದದ ಪ್ರಯೋಗದಿಂದ ಅವನು ಹೊಯ್ಸಳರಾಜನಾದ 2ನೆಯ ನಾರಸಿಂಹನ ಆಳಿಕೆಯಲ್ಲಿ (1220-1235) ಕಟಕೋಪಾಧ್ಯಾಯನಾಗಿದ್ದನೆಂದು ಹೇಳಬೇಕು, 1 ನೆಯ ನಾರಸಿಂಹನ ಆಳಿಕೆಯಲ್ಲಲ್ಲ (I, 162). ಈ ಕವಿ 2ನೆಯ ನಾರಸಿಂಹನ ಆಳಿಕೆಯ ಆದಿಭಾಗದಲ್ಲಿ ಇದ್ದಿರಬಹುದಾದರೂ ಇವನ ಮಗನಾದ ಜನ್ನನು ಚೆನ್ನರಾಯಪಟ್ಟಣ 179ನೆಯ ಶಾಸನವನ್ನು ರಚಿಸಿದಾಗ (1190) ಸುಮಾರು 25 ವರ್ಷದವನಾಗಿದ್ದಿರಬೇಕೆಂದು ಭಾವಿಸಿದರೆ ತಂದೆಯ ಕಾಲವನ್ನು ಹಿಂದಕ್ಕೆ ಎಂದರೆ ಸು. 1175 ಕ್ಕಾದರೂ ತಳ್ಳಬೇಕಾಗುತ್ತದೆ. ಇದರಿಂದ ಸುಮನೋಬಾಣನ ಕಾಲಕ್ಕೂ (ಸು. 1150) ಅವನ ಆಳಿಯನಾದ ಮಲ್ಲಿಕಾರ್ಜುನನ ಕಾಲಕ್ಕೂ (ಸು. 1245) ಅಯ್ಯನವರು ತೋರಿಸುವ 95 ವರ್ಷಗಳ ಅಂತರದಲ್ಲಿ 25 ವರ್ಷಗಳು ಕಡಮೆಯಾಗುತ್ತವೆ. ಅಲ್ಲದೆ ಮಲ್ಲಿಕಾರ್ಜುನನಿಗೆ ಕೊಟ್ಟಿರುವ ಸು. 1245 ಎಂಬುದು ಅವನಿಗೆ ಮದುವೆಯಾವ 30ನೆಯ ಅಥವಾ 40 ನೆಯ ವರ್ಷವನ್ನು ತಿಳಿಸುತ್ತದೆಂದು ಭಾವಿಸುವುದು ತಪ್ಪಲ್ಲವಾದುದರಿಂದ ಮೇಲೆ ಹೇಳಿದ ಅಂತರವು ಇದರಿಂದ ಇನ್ನೂ ಕಡಮೆಯಾಗಿ ಸಹಜ ಸ್ಥಿತಿಗೆ ಬರುವುದು. "ಸು. 1145 ರಲ್ಲಿದ್ದ 2ನೆಯ ನಾಗವರ್ಮನು 1230 ರಲ್ಲಿದ್ದ ಜನ್ನನಿಗೆ ಹೇಗೆ ಉಪಾಧ್ಯಾಯನಾಗಬಲ್ಲನು?" ಎಂಬ ಅಯ್ಯನವರ ಪ್ರಶ್ನೆಗೂ ಹೀಗೆ ಉತ್ತರವನ್ನು ಹೇಳಬಹುದು:—"ಸಾಮಾನ್ಯವಾಗಿ ಹುಡುಗರಿಗೆ ಪಾಠ ಹೇಳುವುದಕ್ಕೋಸ್ಕರ ಉಪಾಧ್ಯಾಯನನ್ನು ಗೊತ್ತುಮಾಡುತ್ತಾರೆ. ಜನ್ನನು ಅನಂತನಾಥಪುರಾಣವನ್ನು ಬರೆದಾಗ (1230), ಎಂದರೆ ಅವನಿಗೆ ಸ್ವಲ್ಪ ಹೆಚ್ಚು ಕಡಮೆ 70 ವರ್ಷವಾಗಿದ್ದಾಗ, 2ನೆಯ ನಾಗವರ್ಮನು ಅವನಿಗೆ ಉಪಾಧ್ಯಾಯನಾಗಿದ್ದನು ಎಂದು ಆವ ವಿವೇಕಿಯಾದರೂ ಭಾವಿಸುವನೇ? ನಾನು ಹಿಂದೆ ಹೇಳಿದಂತೆ 1190ರಲ್ಲಿ ಜನ್ನನು 25 ವರ್ಷದ ಪ್ರಾಯದವನಾಗಿಯಾದರೂ ಇದ್ದಿರಬೇಕು. 2ನೆಯ ನಾಗವರ್ಮನು ಸು. 1145 ಕ್ಕಿಂತ ಈಚೆ ಸುಮಾರು ಇಪ್ಪತ್ತು ಮೂವತ್ತು ವರ್ಷಗಳ ವರೆಗೆ ಬದುಕಿದ್ದಿರಬಹುದು ಎಂಬುದಕ್ಕೆ ಅಡ್ಡಿಯೇನೂ ಕಾಣುವುದಿಲ್ಲ. ಆದುದರಿಂದ ಉಪಾಧ್ಯಾಯನಾದ 2ನೆಯ ನಾಗವರ್ಮನಿಗೂ ವಿದ್ಯಾರ್ಥಿಯಾದ ಜನ್ನನಿಗೂ ಸಂಬಂಧವನ್ನು ಕಲ್ಪಿಸುವುದರಲ್ಲಿ ಆವ ಕಷ್ಟವೂ ಇಲ್ಲ.

ಇದಾದಮೇಲೆ ಅಯ್ಯನವರು—ಜನ್ನನು ಜೈನನಾದ ಮಾತ್ರಕ್ಕೆ ಅವನ ಪೂರ್ವಜರುಗಳು ಜೈನರಾಗಿದ್ದರು ಎಂದು ನಾನು ಹೇಳಿರುವುದು ತಪ್ಪೆಂದು

ಹೇಳಿ ಹಿಂದುಗಳು ಜೈನಸ್ತ್ರೀಯರನ್ನು ಮದುವೆಯಾದ ಕೆಲವು ಉದಾಹರಣಗಳನ್ನು ಕೊಟ್ಟಿದ್ದಾರೆ. ಆದರೆ ತಂದೆಯ ಮತವನ್ನು ಮಗನು ಅನುಸರಿಸುವುದು ಸರ್ವಸಾಧಾರಣವಾದುದರಿಂದ ಈ ಉದಾಹರಣಗಳು ಪ್ರಕೃತ ವಿಷಯಕ್ಕೆ ಹೊಂದಿಕೆಯಾಗಿಲ್ಲ. ಇನ್ನು ಅಯ್ಯನವರು 10 ರಿಂದ 13 ನೆಯ ಶತಮಾನದ ವರೆಗಿನ ಕಾಲದಲ್ಲಿ ಶಿವಭಕ್ತರೂ ವಿಷ್ಣುಭಕ್ತರೂ ಜಿನನನ್ನು ಪೂಜಿಸಿದರು, ಜಿನ ಭಕ್ತರು ಶಿವ ವಿಷ್ಣುಗಳನ್ನು ಪೂಜಿಸಿದರು; ವೇದಮಾರ್ಗಾನುಸಾರಿಗಳು, ಜೈನರು, ಬೌದ್ಧರು ಎಂಬಂಥ ಭೇದವಿರಲಿಲ್ಲ; ಜನರು ಜಿನನನ್ನಾಗಲಿ ಬುದ್ಧನನ್ನಾಗಲಿ ಪರದೈವನೆಂದು ಪೂಜಿಸಿದರೂ ವೇದಮಾರ್ಗಾನುಸಾರಿಗಳೆಂದು ಭಾವಿಸಲ್ಪಡುತ್ತಿದ್ದರು—ಎಂಬ ವಿಚಿತ್ರವಾದ ಮಾತುಗಳನ್ನಾಡಿ ಅವಕ್ಕೆ ಆಧಾರವಾಗಿ ದೊರೆಗಳೂ ಮಂಡಲಿಕರೂ ಮತಾಂತರದ ಜನರಿಗೂ ದೇವಸ್ಥಾನ ಮಠಾದಿಗಳಿಗೂ ದಾನವನ್ನು ಕೊಟ್ಟ ಹಲವು ಉದಾಹರಣಗಳನ್ನು (ಪುಟಗಳು 136—148) ಶಾಸನಗಳಿಂದ ಕೊಟ್ಟಿದ್ದಾರೆ. ಇವು ದಾತೃಗಳ ಹೃದಯ ವಿಶಾಲತೆಯನ್ನೂ ಔದಾರ್ಯವನ್ನೂ ತೋರಿಸುತ್ತವೆಯೇ ಹೊರತು ಅವರ ಮತಾಂತರಾವಲಂಬನವನ್ನು ತೋರಿಸುವುದಿಲ್ಲ.

ನಾಗವರ್ಮ

ಅಯ್ಯನವರು ನಾಗವರ್ಮರಿಬ್ಬರಿಲ್ಲ, ಆ ಹೆಸರಿನ ಒಬ್ಬನೇ ಒಬ್ಬ ಗ್ರಂಥಕರ್ತನು ಸು. 1050 ರಲ್ಲಿದ್ದು ಕಾವ್ಯಾವಲೋಕನ, ಕರ್ಣಾಟಕಭಾಷಾಭೂಷಣ, ವಸ್ತುಕೋಶ, ಛಂದೋಂಬುಧಿ, ಕಾದಂಬರಿ ಎಂಬ 5 ಗ್ರಂಥಗಳನ್ನೂ ಬರೆದಿದ್ದಾನೆ—ಎಂಬ ಆಧಾರಶೂನ್ಯವಾದ ಕಲ್ಪನೆಯನ್ನು ಮಾಡಿಕೊಂಡು ಅದನ್ನು ಸ್ಥಾಪಿಸುವುದಕ್ಕೆ ಎಷ್ಟೋ ಸಾಹಸಪಟ್ಟಿದ್ದಾರೆ. "ಜನನಾಥಂ ಜಗದೇಕನಲ್ಲಿ" ಎಂಬ ಪದ್ಯಕ್ಕೂ "ಭಾಳಲೋಚನಂ ಕವಿಸುಮನೋಬಾಣನ ಮಗಂ" ಎಂಬ ವಾಕ್ಯಕ್ಕೂ ಅವರು ಮಾಡಿರುವ ಅಪಾರ್ಥವನ್ನು ಹಿಂದೆಯೇ ತಿಳಿಸಿದ್ದೇನೆ. ಆ ಪದ್ಯವು ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾಗಿದ್ದನು ಎಂದು ಸ್ಪಷ್ಟವಾಗಿ ಹೇಳುತ್ತದೆ. ಇದನ್ನು ಒಪ್ಪಿಕೊಂಡರೆ ನಾಗವರ್ಮನು ಸು. 1050 ರಲ್ಲಿದ್ದನೆಂಬ ಕಲ್ಪನೆಯನ್ನು ಬಿಡಬೇಕಾಗುವುದರಿಂದ ಅಯ್ಯನವರು ಜನ್ನನಿಗೆ ಸುಮನೋಬಾಣನು ಉಪಾಧ್ಯಾಯನಾಗಿದ್ದನು ಎಂದು ಪದ್ಯಕ್ಕೆ ವಿಚಿತ್ರವಾದ ಅರ್ಥವನ್ನು ಮಾಡಿದ್ದಾರೆ. ಅಲ್ಲದೆ ಪದ್ಯದಲ್ಲಿ ಉಕ್ತನಾದ ಜಗದೇಕನು 1015 ರಿಂದ 1042 ರ ವರೆಗೆ ಆಳಿದ 1ನೆಯ ಜಗದೇಕಮಲ್ಲನೆಂದು ಹೇಳುತ್ತಾರೆ. ಹಾಗಿದ್ದ ಪಕ್ಷದಲ್ಲಿ ತನ್ನ ಕಾಲಕ್ಕೆ ಸುಮಾರು ಒಂದು ಶತಮಾನ ಹಿಂದೆ ನಾಗವರ್ಮನು 1ನೆಯ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂಬ ತಸಗೆ ಅವ ವಿದ್ವಲ್ಲಿಯುವ ಪಂಡಿತಪಕ್ಷದ [illegible]

ಹೇಳುವುದರಲ್ಲಿ ಜನ್ನನ ಉದ್ದೇಶವಿಂಥದು ಎಂದು ಕಂಡುಹಿಡಿವುದು ಕಷ್ಟವಾಗಿದೆ. ಈ ಪದ್ಯವನ್ನು ರಚಿಸುವುದರಲ್ಲಿ ಜನ್ನನ ಉದ್ದೇಶವೇನೆಂದರೆ ಮಹಾಪುರುಷರಾದ ನಾಗವರ್ಮ ಸುಮನೋಬಾಣರ ಸಂಬಂಧವು ತನಗುಂಟು ಎಂಬ ಮಹತ್ವದ ವಿಷಯವನ್ನು ತಿಳಿಸುವುದೇ. ಆದುದರಿಂದ ಈ ಜಗದೇಕಮಲ್ಲನು 1ನೆಯವನಲ್ಲ. ಅಲ್ಲವೆ ಹಿಂದೆ ತಿಳಿಸಿದಂತೆ ಅಯ್ಯನವರು ''ಕವಿಸುಮನೋಬಾಣನ ಮಗಂ'' ಎಂಬಲ್ಲಿ ಮಗಂ ಎಂಬ ಶಬ್ದಕ್ಕೆ ಶಿಷ್ಯ ಎಂಬ ವಿಶೇಷಾರ್ಥವನ್ನು ಬೇಕೆಂದು ಮಾಡಿದ್ದಾರೆ. ಗುರು ಪರಂಪರೆಯನ್ನು ಹೇಳುವಾಗ ಎಲ್ಲಿಯಾದರೂ ಶಿಷ್ಯ ಎಂಬರ್ಥದಲ್ಲಿ ಮಗ ಎಂಬ ಶಬ್ದವು ಬರುವುದುಂಟು. ಪ್ರಕೃತ ಸಂದರ್ಭದಲ್ಲಿ ಆ ಅರ್ಥಕ್ಕೆ ಅವಕಾಶವೇ ಇಲ್ಲ. ಇನ್ನು ಅಯ್ಯನವರು ಮೂರನೆಯ ಅಪಾರ್ಥಕ್ಕೆ ಹೊರಟಿದ್ದಾರೆ. ಛಂದೋಂಬುಧಿಯನ್ನು ಬರೆದ ನಾಗವರ್ಮನೂ ಕಾವ್ಯಾವಲೋಕನ ವಸ್ತುಕೋಶಗಳನ್ನು ಬರೆದ ನಾಗವರ್ಮನೂ ಒಬ್ಬನೇ ಎಂಬ ತಮ್ಮ ಕಲ್ಪನೆಯನ್ನು ಸಾಧಿಸುವುದಕ್ಕೋಸ್ಕರ ಮಗ ಎಂಬ ಶಬ್ದಕ್ಕೆ ಮಮ್ಮಗ ಎಂದು ಅರ್ಥವಾಡಿಕೊಂಡಿದ್ದಾರೆ. ಛಂದೋಂಬುಧಿಯಲ್ಲಿ ಕವಿ ತಾನು ದಾಮಮಯ್ಯನ ಮಮ್ಮಗನೆಂದು ಹೇಳಿದ್ದಾನೆ. ದಾಮ ಎಂಬುದಕ್ಕೆ ದಾಮೋದರ ಎಂಬರ್ಥದಲ್ಲಿ ಕೆಲವುಕಡೆ ಪ್ರಯೋಗವುಂಟು. ಕಾವ್ಯಾವಲೋಕನ ವಸ್ತುಕೋಶಗಳನ್ನು ಬರೆದ ಕವಿ ಆ ಗ್ರಂಥಗಳ

ವಾಮನನುಂ ರುದ್ರಟನುಂ । ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಿಂ ।
ತೀಮಹಿಗೆನೆಗಲ್ತಿ ಪೇೞ್ದಿಂ । ದಾನೋದರ ತನಯನೀ ವಜೋಲಂಕೃತಿಯಂ ॥
ಸಾಮಾನ್ಯ ವಾಚಿಗಳನೀತೆಱದಿಂದನನ್ಯ ಸಾಮಾನ್ಯಮಾನ್ಯ ಸುಚರಿತ್ರ ಗುಣಾವತಾರಂ
ಸಾಮಾನ್ಯಮಪ್ಪ ಜನಮುಂ ತಿಳಿವಂತು ಪೇೞ್ದಿಂ ದಾಮೋದರ ಪ್ರಿಯ ಸುತಂ ಕವಿಕರ್ಣಪೂರಂ ॥

ಎಂಬ ಪದ್ಯಗಳಲ್ಲಿ ತಾನು ದಾಮೋದರನ ಮಗ ಎಂದು ಹೇಳಿದ್ದಾನೆ. ಇಲ್ಲಿ ಮಗ ಎಂಬುದು ಮಮ್ಮಗ ಎಂಬರ್ಥದಲ್ಲಿ ಬಂದಿದೆ ಎಂದೂ ಇದಕ್ಕೆ ಧರ್ಮಶಾಸ್ತ್ರಗಳ ವ್ಯಾಖ್ಯಾನಗಳಲ್ಲಿ ಪ್ರಮಾಣವುಂಟೆಂದೂ ಅಯ್ಯನವರು ಬರೆದಿದ್ದಾರೆ. ಕವಿಗಳು ವಾಚಕರಿಗೆ ಭ್ರಮೆ ಹುಟ್ಟುವಂತೆ ಹೀಗೆ ಎಂದಿಗೂ ಬರೆಯಲಾರರು ಅಯ್ಯನವರು ಹೇಳುವಂತೆ ಕಾವ್ಯಾವಲೋಕನ ವಸ್ತುಕೋಶಗಳ ಕವಿ ತಂದೆಯ ಹೆಸರನ್ನು ಬಿಟ್ಟುಬಿಟ್ಟು ತಾತನ ಹೆಸರನ್ನು ಮಾತ್ರ ಹೇಳಿಕೊಳ್ಳುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಆದರೆ ಅಯ್ಯನವರು ಮೇಲಣ ಪದ್ಯಗಳಲ್ಲಿ

ಮಕಾರ ಪ್ರಾಸದ ಅವಶ್ಯಕತೆಯೇ ಇದಕ್ಕೆ ಕಾರಣವೆಂದು ಹೇಳಿಬಿಟ್ಟಿದ್ದಾರೆ (ಪುಟ 162). ಇದರಿಂದ ಗ್ರಂಥಕರ್ತನ ಕವಿತಾಶಕ್ತಿಗೆ ಕುಂದನ್ನು ಕಲ್ಪಿಸಿದಂತಾಯಿತೇ ಹೊರತು ಮತ್ತೆ ಬೇರೆ ಅಲ್ಲ. ಮಮ್ಮಗ ಎಂದು ಹೇಳುವುದು ಕವಿಯ ಉದ್ದೇಶವಾಗಿದ್ದ ಪಕ್ಷದಲ್ಲಿ ಛಂದಸ್ಸಿಗೂ ಪ್ರಾಸಕ್ಕೂ ಅವ ಕೊರತೆಯೂ ಇಲ್ಲದಂತೆ 1 ನೆಯ ಪದ್ಯದಲ್ಲಿ ದಾವೋದರಪೌತ್ರನೀವಚೋಲಂಕೃತಿಯುಂ ಎಂದೂ 2ನೆಯದರಲ್ಲಿ ದಾವೋದರಾತ್ಮಜಸುತಂ ಕವಿಕರ್ಣಪೂರಂ ಎಂದೂ ಬಹಳ ಸುಲಭವಾಗಿ ಬರೆದುಬಿಡುತ್ತಿದ್ದನು.

ನಾಗಚಂದ್ರನು ಸು- 1100 ರಲ್ಲಿ ಬಾಳಿದನೆಂದು ಹಿಂದೆಯೇ ತೋರಿಸಿದ್ದೇನೆ (ಪುಟ xliv) ಕರ್ಣಾಟಕ ಭಾಷಾಭೂಷಣವನ್ನು ರಚಿಸಿದವನು ಆ ಗ್ರಂಥದ "ಅಸಾಂವ್ಯತ್ಯಯೋ ಬಹುಳಂ" ಎಂಬ 88 ನೆಯ ಸೂತ್ರದ ಕೆಳಗೆ "ಬಹು ತಾಪಕ್ಕೆ ಬಿಗುರ್ತು ವಿಷ್ಣುಪಡೆದಂ ಮತ್ಸ್ಯಾವತಾರಕ್ಕೆ" ಎಂಬ ಪಂಪರಾಮಾಯಣದ ಪದ್ಯಭಾಗವನ್ನು (VII, 98) ಉದಾಹರಿಸಿರುವುದರಿಂದ ಅವನು ಸು. 1100 ಕ್ಕಿಂತ ಈಚೆಯವನಾಗಿರಬೇಕು. ಅವನು "ದೀರ್ಘೋಕ್ತಿರ್ನಯ ಸೇನಸ್ಯ" (ನಯಸೇನಾಚಾರ್ಯನ ಮತದಿಂ ಸಂಬೋಧನೆಯೊಳ್ ದೀರ್ಘಾದೇಶಮಕ್ಕುಂ) ಎಂಬ 73ನೆಯ ಸೂತ್ರದಲ್ಲಿ ನಯಸೇನನೆಂಬ ಒಬ್ಬ ಕನ್ನಡ ವೈಯ್ಯಾಕರಣನ ಹೆಸರನ್ನೂ ಹೇಳುತ್ತಾನೆ. ಈ ನಯಸೇನನು 1053 ರಲ್ಲಿ ಹುಟ್ಟಿದ ಮುಳುಗುಂದದ ಶಾಸನದಲ್ಲಿ (ಎಪಿಗ್ರಾಫಿಯಾ ಇಂಡಿಕ XVI,54) ಉಕ್ತನಾದ ನಯಸೇನನೇ ಎಂದು ಅಯ್ಯನವರು ಬರೆದಿದ್ದಾರೆ (ಪುಟಗಳು 179-181). ಆದರೆ ಶಾಸನೋಕ್ತನಾದ ನಯಸೇನನು ಸಂಸ್ಕೃತ ವೈಯ್ಯಾಕರಣನಾದುದರಿಂದ ಸೂತ್ರೋಕ್ತ ನಯಸೇನನು ಅವನಲ್ಲ, 1112ರಲ್ಲಿ ಧರ್ಮಾಮೃತವನ್ನು ಬರೆದ ಕನ್ನಡಕವಿ ನಯಸೇನನೇ ಆಗಿರಬೇಕು. ಕಾವ್ಯಾವಲೋಕನದಲ್ಲಿ ಉದಾಹೃತವಾಗಿರುವ

ತಂವೇಟುಂ ಮಾಣಿಕ್ಯಭಂಡಾರದ ಪುಟಿಕೆಗಳಂ ಪುಂಜಿಸಲ್ವೇಟುಂ ಸುವರ್ಣೋ ।
ತ್ಕರಮುಂ ತೋಲಿಲ್ಕೆವೇಟುಂ ದಂತಿಗಳ ನಿರಿಸವೇಟುಕ್ ಮುಂದೆ ಪಾಹಂಗಳಂ ಬಿ ॥
ತ್ತರಿಸಲ್ವೇಟುಂ ಜಿತ್ರಚೀನಾಂಬರ ಪರಿಕರಮುಂ ಮಾಣದೆಂದೋಳಿಯಿಂಲೆಂ ।
ಕರನಾಗಳ್ ಪೇೞ್ದಿ ನೀಯಲ್ಕೆರೆದವರ್ಗೆ ಮಹಾದಾನಮುಂ ವಿಕ್ರಮಾಂಕಂ॥

ಎಂಬ ಪದ್ಯದಲ್ಲಿ (284) ಉಕ್ತನಾದ ವಿಕ್ರಮಾಂಕನು 1076 ರಿಂದ 1126 ರ

ವರೆಗೆ ಆಳಿದ 6 ನೆಯ ಚಾಳುಕ್ಯ ವಿಕ್ರಮಾದಿತ್ಯನೇ ಹೊರತು ಅಯ್ಯನವರು ಹೇಳುವಂತೆ (ಪುಟಗಳು 178-179) 4 ನೆಯವನಾಗಲಿ 5 ನೆಯವನಾಗಲಿ ಅಲ್ಲ. ಅಲ್ಲದೆ ಕಾವ್ಯಾವಲೋಕನ ಕರ್ತನು ಉದಾಹರಿಸಿರುವ

ಪ್ರಣುತಗುಣನೆನಿಪವಿಬುಧ ಗ್ರಣಿಗಳ್‌ಕೆಯ್ಕೊಂಡು ಪೊಗಲ್ವಿ ಸಲೆನೆ
ಗಲ್ತಿವ್ವು ಧಾ ।
ರಿಣಿಯೊಳಗೆ ನಾಗವರ್ಮನ । ಗುಣವರ್ಮನ ಶಂಖವರ್ಮನ ಧ್ವಾನಂ
ಗಳ್ ॥185॥

ತಾರಾತಾರಾಮಳಿನ ಗುಳಿಕಾಹಾರ ನೀಹಾರ ನೀಕಾ ।
ಶೋರಃಸ್ಫೂರ್ಜತ್ಪ್ರವಿತತಯಶೋರಂಜಿತಾ ಶೇಷಲೋಕಂ ॥
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ ।
ದಾರ ಪ್ರಜ್ಞಂ ನೆಗಲ್ದಿನವನೀಭಾಗದೊಳ್ ನಾಗವರ್ಮಂ ॥547॥

ಎಂಬ ಪದ್ಯಗಳಲ್ಲಿ ಕವಿಗೆ ಹಿಂದೆ ಇದ್ದ ಒಬ್ಬ ನಾಗವರ್ಮನ ಸ್ತುತಿ ಇದೆ. ಈ ನಾಗವರ್ಮನು ಕವಿಯೇ ಎಂದು ಅಯ್ಯನವರು ಹೇಳುತ್ತಾರೆ. ಆದರೆ ಕವಿಯು ಸ್ತುತಿರೂಪವಾದ ಪದ್ಯಗಳು ಪ್ರಕರಣಗಳ ಅಂತ್ಯದಲ್ಲಿ ಬರುತ್ತವೆಯೇ ಹೊರತು ಮಧ್ಯದಲ್ಲಿ ಉದಾಹರಣರೂಪವಾಗಿ ಎಲ್ಲಿಯೂ ಬರುವುದಿಲ್ಲ. ಇದೂ ಅಲ್ಲದೆ ಛಂದೋಂಬುಧಿ ಕರ್ತನಿಗೆ ಕವಿರಾಜಹಂಸ, ಬುಧಾಬ್ಜವನಕಲಹಂಸ, ಕಂದ ಕಂದರ್ಪ, ನೆಗಲ್ತಿತ್ತಿಗೋಜ ಎಂಬ ಬಿರುದುಗಳೂ ಸಮ್ಯಕ್ತ್ವಿಯೂತ ಎಂಬ ಉಪನಾಮವೂ ಉಂಟು. ಕಾವ್ಯಾವಲೋಕನ ವಸ್ತುಕೋಶಕರ್ತನಿಗಾದರೋ ಅಭಿನವಶರ್ವವರ್ಮ, ಕವಿತಾ ಗುಣೋದಯ, ಕವಿಕರ್ಣಪೂರ, ಕವಿಕಂಠಾಭರಣ ಎಂಬ ಬಿರುದುಗಳು ಹೇಳಿವೆ. ಛಂದೋಂಬುಧಿಯನ್ನು ಬರೆದವನೂ ಕಾವ್ಯಾವಲೋಕನವಸ್ತುಕೋಶಗಳನ್ನು ಬರೆದವನೂ ಒಬ್ಬನೇ ಆಗಿದ್ದ ಪಕ್ಷದಲ್ಲಿ ಮೊದಲು ಹೇಳಿದ ಬಿರುದುಗಳಲ್ಲಿ ಒಂದಾದರೂ ಕಾವ್ಯಾವಲೋಕನವಸ್ತುಕೋಶಗಳಲ್ಲಿಯಾಗಲಿ ಎರಡನೆಯದಾಗಿ ಹೇಳಿದ ಬಿರುದುಗಳಲ್ಲಿ ಒಂದಾದರೂ ಛಂದೋಂಬುಧಿಯಲ್ಲಿಯಾಗಲಿ ಬಾರದೆ ಇರುವುದು ಆಶ್ಚರ್ಯಕರವೇ ಸರಿ. ಛಂದೋಂಬುಧಿಕರ್ತನು ಯುದ್ಧವೀರನೆಂದು (ಕುಂತೀಪುತ್ರಂ ಪೊಣರ್ದಂಗಣದೊಳ್) ಹೇಳಿದೆ; ಮತ್ತೊಬ್ಬನಿಗೆ ಇಂಥ ವಿಶೇಷಗುಣವೆಲ್ಲಿಯೂ ಹೇಳಿಲ್ಲ.

ಕಾವ್ಯಾವಲೋಕನದ ಅಂತ್ಯದಲ್ಲಿ ಬರುವ

ಛಂದೋನಿಚಿತಿಯಲಂಕೃತಿ । ಸಂದಭಿಧಾನ. ಕೋಶವೆಂಬಿವು ವಾಕ್ಯ ।
ಸುಂದರಿಗೆ ರತ್ನಮಂಡನ । ದಿಂದದೊಳಿದಪ್ಪುವು ನಾಗವರ್ಮನ ಕೃತಿ
ಗಳ್ ॥

ಎಂಬ ಪದ್ಯದಲ್ಲಿ ಈ ಗ್ರಂಥಕರ್ತನ ಕೃತಿಗಳೊಳಗೆ ಛಂದೋವಿಚಿತಿಯನ್ನು ಒಂದಾಗಿ ಹೇಳಿದೆ. ಇದನ್ನು ನೋಡಿ ಅಯ್ಯನವರು ಈ ಗ್ರಂಥವು ಛಂದೋಂಬುಧಿಯೇ ಎಂದು ನಿಶ್ಚಯಿಸಿ ಬಿಟ್ಟಿದ್ದಾರೆ (ಪುಟ 166). ಕಾವ್ಯಾವಲೋಕನ ಕರ್ತನು ಛಂದೋವಿಚಿತಿಯನ್ನು ಬರೆದಿರಬೇಕೆಂಬುದಕ್ಕೆ ಒಂದು ವಿಚಿತ್ರಕಾರಣವನ್ನೂ ಹೇಳಿದ್ದಾರೆ: ಏನೆಂದರೆ—ಈ ಕವಿ ದಂಡಿಯನ್ನು ಅನುಸರಿಸುವಂತೆ ಹೇಳುತ್ತಾನೆ; ದಂಡಿಛಂದೋವಿಚಿತಿಯನ್ನು ಬರೆದಿದ್ದಾನೆ; ಆದುದರಿಂದ ಇವನೂ ಬರೆದಿರಬೇಕು—ಎಂಬುದೇ (ಪುಟ 168). ಇವನು ಛಂದೋವಿಚಿತಿಯನ್ನು ಬರೆದಿರಬಹುದು; ಪರಂತು ನಾನು ಹಿಂದೆ ಹೇಳಿರುವ ಕಾರಣಗಳಿಂದ ಅದು ಛಂದೋಂಬುಧಿಯಾಗಿರಲಿಕ್ಕಿಲ್ಲ. ಈ ಗ್ರಂಥವನ್ನೇ ಬರೆದಿದ್ದ ಪಕ್ಷದಲ್ಲಿ "ಛಂದೋವಿಚಿತಿಯಲಂಕೃತಿ" ಎಂಬುದಕ್ಕೆ ಪ್ರತಿಯಾಗಿ "ಛಂದೋಂಬುನಿಧಿಯಲಂಕೃತಿ" ಎಂದು ಬರೆಯುತ್ತಿದ್ದನು. ಅಯ್ಯನವರು ಈಚೆಗೆ ಬಂದ ಚಾವುಂಡರಾಯರುಗಳಿಗೂ ರಾಯ ಎಂಬ ಬಿರುದುಂಟು ಎಂದು ವಾದಿಸುತ್ತಾರೆ (ಪುಟ 169). ಈ ಅಂಶವು ಇವರುಗಳು ಪ್ರಸಿದ್ಧನಾದ ಹಿಂದಣ ಚಾವುಂಡರಾಯನನ್ನು ಅನುಕರಿಸಿದರು ಎಂಬುದನ್ನು ತೋರಿಸುವುದೇ ಹೊರತು ಮತ್ತೆಬೇರೆ ಇಲ್ಲ. ಆದುದರಿಂದ ಗಂಗರಾಜನಾದ ರಾಚಮಲ್ಲನು ತನ್ನ ದಂಡನಾಯಕನಾದ ಚಾವುಂಡರಾಜನ ಔದಾರ್ಯಕ್ಕೆ ಮೆಚ್ಚಿ ಅವನಿಗೆ ರಾಯ ಎಂಬ ಬಿರುದನ್ನು ಕೊಟ್ಟನು ಎಂದು ಭುಜಬಲಿಶತಕದಲ್ಲಿ ಹೇಳಿರುವುದನ್ನು ನಂಬದೆ ಇರುವುದಕ್ಕೆ ಅವಕಾಶವೂ ಇಲ್ಲ.

ಈ ವಿಷಯಗಳನ್ನೆಲ್ಲಾ ಆಲೋಚಿಸಿದ ಪಕ್ಷದಲ್ಲಿ ಅಯ್ಯನವರು ತಮ್ಮ ಕಲ್ಪನೆಯನ್ನು ಸ್ಥಾಪಿಸುವುದಕ್ಕಾಗಿ ಮಾಡಿರುವ ಪ್ರಯತ್ನವು ನಿಷ್ಪ್ರಯೋಜನವೆಂಬುದು ಸ್ಪಷ್ಟವಾಗದೆ ಇರಲಾರದು. ಆದುದರಿಂದ ನಾನು ಹೇಳಿರುವಂತೆ (I, 52–54) ಬೇರೆ ಬೇರೆ ಕಾಲಗಳಲ್ಲಿ ಇಬ್ಬರು ನಾಗವರ್ಮರಿದ್ದರು ಎಂಬುದರಲ್ಲಿ ಅವ ಸಂಶಯವೂ ಇಲ್ಲ.

ಮಲ್ಲಿಕಾರ್ಜುನ

ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವವನ್ನು ಸು. 1263 ರಲ್ಲಿ ಬರೆದನೆಂದೂ ಅವನು ಮಂಡ್ಯ 121, 122ನೆಯ ಶಾಸನಗಳನ್ನು ಒರೆದ ಜಿದಾನಂದ ಕವಿಯಿಂದ (I, 354) ಅಭಿನ್ನನೆಂದೂ ಅಯ್ಯನವರು ಹೇಳುತ್ತಾರೆ (ಪುಟಗಳು 182—189). ಈ ಹೇಳಿಕೆಗಳು ಭ್ರಮಮೂಲವಾದುವು. ಸೂಕ್ತಿಸುಧಾರ್ಣವದಲ್ಲಿಯ

ಹಣಿದಂಬೊಯ್ಯಲ್ ಜವಂ ರಾಯರನೆ ಒಯಿಸಿ ಬರ್ಪಂತಿ ಸೋಮೇಶ್ವರಂ ತೆಂ[illegible]

ಕಣರಾಯಂ ಬಂದನಾಶಾಜಯಕೆಲೆಲೆಮಹಾದೇವ ವಿದ್ವಿಣ್ಣೃಪಗ್ಗೆ ॥
ತೃಣ ತೋರ್ಪೆನ್ನೆತೃಣಾರ್ಪೆತೃಣ ಜಯದೊದವಿನ್ನೆತ್ತೃಣಾ ಟೋಪವಿನ್ನೆ।
ತೃಣ ಧಾತ್ರೀಚಕ್ರವಿನ್ನೆತೃಣ ಗಜಘಟೆಯಿನ್ನೆತೃಣಾತ್ಮೀಯಸೈನ್ಯಂ ॥

ಎಂಬ ಪದ್ಯದಲ್ಲಿ ಬರುವ "ಎಲೆಲೆ ಮಹಾದೇವ" ಎಂಬುದು ಸೋಮೇಶ್ವರನ ಪರಾಕ್ರಮಕ್ಕಾಗಿ ಆಶ್ಚರ್ಯವನ್ನು ಸೂಚಿಸುವ ಉಕ್ತಿಯೆಂದು ತಿಳಿಯದೆ ಸೇವುಣ ರಾಜನಾದ ಮಹಾದೇವನನ್ನು (1260—1271) ಹೇಳುತ್ತದೆ ಎಂದು ಭ್ರಮಿಸಿ ಅಯ್ಯನವರು ಮಲ್ಲಿಕಾರ್ಜುನನಿಗೆ ಸು. 1263 ಎಂಬ ಕಾಲವನ್ನು ಕೊಟ್ಟಿದ್ದಾರೆ. ನಾಗಮಂಗಲದ 39ನೆಯ ಶಾಸನದಿಂದ ಸೋಮೇಶ್ವರನ ಮಗನಾದ 3ನೆಯ ನಾರಸಿಂಹನು ಸುಮಾರು 1271ರಲ್ಲಿ ಸೇವುಣರಾಜನಾದ ಮಹಾದೇವನನ್ನು ಸೋಲಿಸಿದಂತೆ ತಿಳಿಯುತ್ತದೆ. ಹೀಗಿರುವಲ್ಲಿ 1264 ರಲ್ಲಿ ಗತಿಸಿದು ದಾಗಿ ತಿಳಿದು ಬರುವ ಸೋಮೇಶ್ವರನಿಗೂ ಈ ಮಹಾದೇವನ ಸೋಲಿಗೂ ಹೇಗೆ ಸಂಬಂಧವನ್ನು ಕಲ್ಪಿಸಬಹುದು? ಸೋಮೇಶ್ವರನು ತನ್ನ ಬಾಳಿಕೆಯಲ್ಲಿ ಬಹಳಕಾಲವನ್ನು ಶ್ರೀರಂಗದ ಸಮೀಪದಲ್ಲಿರುವ ಕಣ್ಣನೂರಿನಲ್ಲಿ ಕಳೆದನು. ಆದರೂ ಅವನು ಕನ್ನಡದೇಶದಲ್ಲಿ 1236 (1897–98 ರ ಬಾಂಬೆ ಶಾಸನದ ಇಲಾಖಾ ವರದಿ), 1237 (ಮಂಡ್ಯ 122), 1252 (1907 ರ ಮೈಸೂರು ಶಾಸನ ಇಲಾಖಾ ವರದಿ, ಪುಟ 4) ಈ ವರ್ಷಗಳಲ್ಲಿದ್ದನು; ಇತರ ಕಾಲಗಳ ಲ್ಲಿಯೂ ಇದ್ದಿರಬಹುದು. ಮಲ್ಲಿಕಾರ್ಜುನನು

ಒರಂತೆ ಮೆಚ್ಚಿದಂ ಕೃತಿ। ಸಾರಂ ಕೃತಿಶೇಖರಕ್ಕೆ ಹೊಯ್ಸಳವಂಶೋ।
ದ್ಧಾರಂ ನರಸಿಂಹಸುತಂ। ದೋರಸಮುದ್ರಾಧಿನಾಯಕಂ ಸೋಮ
ನೃಪಂ ॥

ಎಂಬ ಪದ್ಯದಲ್ಲಿ ಪ್ರಯೋಗಿಸಿರುವ 'ದೋರಸಮುದ್ರಾಧಿ ನಾಯಕಂ' ಎಂಬ ವಿಶೇ ಷಣದಿಂದ ಈಗ್ರಂಥಶ್ರವಣವು ಸೋಮೇಶ್ವರನಿಗೆ ದೋರಸಮುದ್ರದಲ್ಲಿಯೇ ಆಗಿ ರಬೇಕೆಂದು ತೋರುತ್ತದೆ. ಆದುದರಿಂದ ಸೂಕ್ತಿಸುಧಾರ್ಣವದ ರಚನೆಗೆ ನಾನು ಹೇಳಿರುವ ಸು. 1245 ನ್ನು ಮಾರ್ಪಡಿಸಬೇಕಾದ ಆವಶ್ಯಕತೆಯೇನೂ ಕಾಣಬರುವುದಿಲ್ಲ. ಆ ಗ್ರಂಥರಚನೆ ಆ ಕಾಲಕ್ಕಿಂತ ಇನ್ನೂ ಕೆಲವುವರ್ಷಗಳು ಹಿಂದೆ ಆಗಿದ್ದರೂ ಇರಬಹುದು.

ಇನ್ನು ಮಲ್ಲಿಕಾರ್ಜುನ ಚಿದಾನಂದರ ಸಮೀಕರಣಕ್ಕೆ ಅವರುಗಳ ನಾಮೈ ಕದೇಶ ಸಾಮ್ಯವೂ ಶಾಸನಪದ್ಯಗಳಲ್ಲಿ ಎರಡು ಸೂಕ್ತಿ ಸುಧಾರ್ಣವದಲ್ಲಿರು ವುದೂ ಕಾರಣವೆಂದು ತೋರುತ್ತದೆ. ಮಲ್ಲಿಕಾರ್ಜುನನಿಗೆ ಮಲ್ಲ, ಮಲ್ಲಪ, ಚಿದಾನಂದ ಮಲ್ಲಿಕಾರ್ಜುನ ಎಂಬ ಹೆಸರುಗಳೂ ಉಂಟು. ಒಂದು ಪದ್ಯದಲ್ಲಿ ಸೂಕ್ತಿ (I 270) ಚಿದಾನಂದ ಎಂಬ ಸಂಕ್ಷಿಪ್ತವಾದ ಹೆಸರು ಹೇಳಿದೆ. ಆದರೆ

ಶಾಸನ ಕವಿಗೆ ಚಿದಾನಂದ ಎಂಬ ಒಂದು ಹೆಸರು ಮಾತ್ರ ಹೇಳಿದೆಯೇ ಹೊರತು ಇನ್ನಾವುದೂ ಹೇಳಿಲ್ಲ. ಅಲ್ಲದೆ ನಾನು ಹಿಂದೆ ತಿಳಿಸಿದಂತೆ (ಪುಟ lii) ಮಲ್ಲಿಕಾರ್ಜುನನು ಜೈನನು; ಶಾಸನ ಕವಿಯಾದರೋ 'ಬ್ರಹ್ಮವಿದ್ಯೈಗಾಸ್ಪದ ರೂಪಂ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದ ಬ್ರಾಹ್ಮಣನೆಂಬುದರಲ್ಲಿ ಸಂದೇಹವಿಲ್ಲ. ಸೂಕ್ತಿಸುಧಾರ್ಣವವು ಹಲವು ಕಡೆಯಿಂದ ಪದ್ಯಗಳನ್ನು ಆರಿಸಿ ಸಂಯೋಜಿಸಿದ ಗ್ರಂಥವಾದುದರಿಂದ ಶಾಸನದ ಎರಡು ಪದ್ಯಗಳು ಈ ಗ್ರಂಥದಲ್ಲಿ ಕಂಡ ಮಾತ್ರಕ್ಕೆ ಶಾಸನ ಕವಿಯೂ ಈ ಗ್ರಂಥಕರ್ತನೂ ಒಬ್ಬನೇ ಎಂಬ ಭಾವನೆಗೇ ಅವಕಾಶವಿಲ್ಲ.

ಸುಮನೋಬಾಣ, ಮಲ್ಲಿಕಾರ್ಜುನ, ಕೇಶಿರಾಜ ಇವರು ಸ್ಮಾರ್ತ ಬ್ರಾಹ್ಮಣರಾಗಿದ್ದಿರಬಹುದು ಎಂಬ ಅಯ್ಯನವರ ಶಂಕೆಗೆ (ಪುಟ 189) ಆಧಾರವೇ ಇಲ್ಲ. ಇವರೆಲ್ಲರೂ ಜೈನರು ಎಂದು ಹಿಂದೆಯೇ ತೋರಿಸಿದ್ದೇನೆ (ಪುಟ lii). ಇವರು ಜೈನರಲ್ಲದ ಪಕ್ಷದಲ್ಲಿ ಜೈನರು ಇವರನ್ನು ತಮ್ಮ ಸಮುದಾಯಕ್ಕೆ ಸೇರಿದವರೆಂದು ಎಂದಿಗೂ ಹೇಳಲಾರರು. ಶಂಕರ, ಗಂಗೆ, ಜನಾರ್ದನ ಎಂಬ ಹೆಸರುಗಳು (ಪುಟ 149) ಜೈನರಲ್ಲಿ ಬಳಕೆಯಲ್ಲಿವೆ. ರನ್ನನು ಶಂಕರಗಂಡ ಎಂಬ ಒಬ್ಬ ಜೈನ ರಾಜಕುಮಾರನನ್ನು ಹೇಳಿ ಅವನಿಗಿಂತ ತನ್ನ ಪೋಷಕಿಯಾದ ಅತ್ತಿಮಬ್ಬೆ ದಾನಶೀಲಳು ಎಂದು ಬರೆದಿದ್ದಾನೆ (I, 66). ನಾಳ್ಪನು ಶಂಕರಾಂಬಿಕೆ ಎಂಬ ಒಬ್ಬ ಜೈನಸ್ತ್ರೀಯನ್ನು ಹೇಳಿದ್ದಾನೆ (II, 244). ಶಿವದೇವಮ್ಮ ಎಂಬ ಹೆಸರು ಜೈನರಲ್ಲಿ ಈಗಲೂ ವಾಡಿಕೆಯಲ್ಲಿದೆ. ಗಂಗಿಸೆಟ್ಟಿ, ಗಂಗಾಯಿ ಎಂಬುವು ಶ್ರ. ಬೆ. 235, 300 ನೆಯ ಶಾಸನಗಳಲ್ಲಿ ಒಬ್ಬ ಜೈನನ ಮತ್ತು ಜೈನಸ್ತ್ರೀಯ ಹೆಸರುಗಳಾಗಿ ಬಂದಿವೆ. ಜನ್ನಕವಿಯ ಹೆಸರು ಜನಾರ್ದನ ಎಂಬುದರ ಸಂಕ್ಷಿಪ್ತರೂಪವು. ಜನಾರ್ದನ ಎಂಬ ಹೆಸರು ಜೈನರಲ್ಲಿ ಬಹಳ ಸಾಧಾರಣವಾಗಿದೆ. ಮಧುರನು ತನ್ನ ಧರ್ಮನಾಥಪುರಾಣವನ್ನು ಒಬ್ಬ ಜೈನ ಮಲ್ಲಿಕಾರ್ಜುನನ ಪ್ರೇರಣೆಯಿಂದ ಬರೆದಂತೆ ಹೇಳುತ್ತಾನೆ (I, 427). ಶಬ್ದಮಣಿದರ್ಪಣದ ಕೊನೆಯಲ್ಲಿ ಹೇಳಿರುವ ಕೇಶಿರಾಜನ ಗ್ರಂಥಗಳ ಹೆಸರಿನಿಂದ ಅವನು ಶಿವಪೂಜಕನೆಂದು ತಿಳಿಯಬಹುದು ಎಂಬ ಅಯ್ಯನವರ ಅಭಿಪ್ರಾಯವು (ಪುಟಗಳು 148–149) ಯುಕ್ತವಾಗಿ ತೋರುವುದಿಲ್ಲ; ಏಕೆಂದರೆ ಆ ಗ್ರಂಥಗಳನ್ನು ನೋಡದೆಯೇ ಹೀಗೆ ಅಭಿಪ್ರಾಯಪಡುವದು ಅಸಮೀಕ್ಷ್ಯಕಾರಿತ್ವವೇ ಸರಿ.

ಕರ್ಣಪಾರ್ಯ.

ಕರ್ಣಪಾರ್ಯನ ವಿಷಯದಲ್ಲಿ ಅವನು ಹೇಳಿರುವ ಕೆಲವರು ಗುರುಗಳನ್ನು ಶ್ರ. ಬೆ. ಶಾಸನಗಳಲ್ಲಿ ಉಕ್ತರಾದ ಅದೇ ಹೆಸರಿನ ಗುರುಗಳೊಡನೆ ವಾಮ್ಮು

ಮಾಡಿರುವ ಸಮೀಕರಣವು ಸರಿಯಲ್ಲವೆಂದು ಮೊದಲೇ ಒಪ್ಪಿಕೊಳ್ಳುತ್ತೇನೆ. ಶಿಲಾಹಾರರಾಜನಾದ ಗಂಡರಾದಿತ್ಯನಿಗೆ ಗೋವರ್ಧನ, ಗೋಪಣ, ಶ್ರೀಭೂಷಣ ಎಂಬ ನಾಮಾಂತರಗಳಿದ್ದುವೆಂದೂ ಅವನಿಗೆ ವಿಜಯಾದಿತ್ಯ, ಲಕ್ಷ್ಮಣ, ವರ್ಧಮಾನ, ಶಾಂತ ಎಂಬ ನಾಲ್ವರು ಮಕ್ಕಳಿದ್ದರೆಂದೂ ನಾನು ಬರೆದಿರುವುದು (I, 140) ಆವುದೋ ಒಂದು ಕೈಬರಹದ ಪುಸ್ತಕದ ಆಧಾರದಿಂದಲೇ ಎಂದು ತಿಳಿಯುತ್ತೇನೆ ; ಆದರೆ ಪುಸ್ತಕವು ಇಂಥದು ಎಂದು ಜ್ಞಾಪಕಕ್ಕೆ ಬರಲಿಲ್ಲ. ಮೈಸೂರು ಪ್ರಾಚ್ಯಕೋಶಾಲಯದಲ್ಲಿ ಈಗ ದೊರೆವ ಎ. 52 ಮತ್ತು 4 ಎಂಬ ಸಂಖ್ಯೆಯುಳ್ಳ ನೇಮಿನಾಥಪುರಾಣದ 2 ಹಸ್ತ ಲಿಖಿತ ಪ್ರತಿಗಳಲ್ಲಿ ನಾನು ಮೇಲೆ ಹೇಳಿರುವ ಅಂಶಗಳು ಉಕ್ತವಾಗಿಲ್ಲ. ನೇಮಿನಾಥಪುರಾಣದ ಮತ್ತೊಂದು ಪ್ರತಿಯನ್ನು ಸಂಪಾದಿಸಲು ಒಂದು ವರ್ಷದಿಂದ ಮಾಡಿದ ಪ್ರಯತ್ನವು ಫಲಿಸಲಿಲ್ಲ. ಅಯ್ಯನವರು ವಿಜಯಾದಿತ್ಯನಿಗೆ ತಮ್ಮಂದಿರಿಲ್ಲ, ಲಕ್ಷ್ಮಣನು ರಾಜವಂಶಕ್ಕೆ ಸೇರಿದವನಲ್ಲ ಎನ್ನುತ್ತಾರೆ (ಪುಟ 78). ಈ ಸಂದರ್ಭದಲ್ಲಿ ಈಗ ದೊರೆತಿರುವ ಆಧಾರದಮೇಲೆ ಒಂದೆರಡಂಶಗಳನ್ನು ಹೇಳಬಹುದು. ಅಯ್ಯನವರು ಸೂಚಿಸಿರುವ (ಪುಟ 85) ವಿಜಯಾದಿತ್ಯನ 1165 ರಲ್ಲಿ ಹುಟ್ಟಿದ ಎಕ್ಸಂಬಿ ಶಾಸನದಲ್ಲಿ (ಮೈಸೂರು ಶಾಸನ ಇಲಾಖೆಯ 1916 ನೆಯ ವರ್ಷದ ವರದಿ, ಪುಟಗಳು 48–50) ವಿಜಯಾದಿತ್ಯನು ಗಂಡರಾದಿತ್ಯನ ಜ್ಯೇಷ್ಠಪುತ್ರನೆಂದು ಹೇಳಿದೆ. ಇದರಿಂದ ವಿಜಯಾದಿತ್ಯನಿಗೆ ತಮ್ಮನಾಗಲಿ ತಮ್ಮಂದಿರಾಗಲಿ ಇದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಗಂಡರಾದಿತ್ಯನಿಗೂ ವಿಜಯಾದಿತ್ಯನಿಗೂ ಹೇಳಿರುವ ರೂಪನಾರಾಯಣ ಎಂಬ ಬಿರುದನ್ನು ಲಕ್ಷ್ಮಣನಿಗೂ ಹೇಳಿರುವುದರಿಂದ (ಪುಟ 80, ಪದ್ಯ 27) ಅವನೂ ರಾಜವಂಶಕ್ಕೆ ಸೇರಿದವನೆಂದು ತೋರುತ್ತದೆ. ಕರ್ಣಪಾರ್ಯನೇಮಿಚಂದ್ರರಿಬ್ಬರೂ ಸೌಂದತ್ತಿಯ ರಟ್ಟರಾಜನಾದ ಲಕ್ಷ್ಮೀದೇವನ ಆಶ್ರಿತರಾಗಿದ್ದರೆಂದೂ (1, ಅವತರಣಿಕೆ 17 ; ಮೈಸೂರು ಶಾಸನ ಇಲಾಖೆಯ 1916 ನೆಯ ವರ್ಷದ ವರದಿ, ಪುಟ 50) ಈ ಕವಿಗಳಿಬ್ಬರೂ ಶಿಲಾಹಾರರಾಜನ ಪ್ರೋತ್ಸಾಹದಿಂದ ಗ್ರಂಥಗಳನ್ನು ಬರೆದರೆಂದೂ (II, ಇಂಗ್ಲಿಷ್ ಮತ್ತು ಕನ್ನಡ ಅವತರಣಿಕೆಗಳು, ಕ್ರಮವಾಗಿ ಪುಟಗಳು 10 ಮತ್ತು 16) ನಾನು ಬರೆದಿರುವುದನ್ನು ತಿದ್ದಬೇಕಾಗಿದೆ. ಕರ್ಣಪಾರ್ಯನು ಶಿಲಾಹಾರರಾಜನಾದ ವಿಜಯಾದಿತ್ಯನ ಆಳಿಕೆಯಲ್ಲಿ ಲಕ್ಷ್ಮಣನ ಅಥವಾ ಲಕ್ಷ್ಮೀದೇವನ ಪ್ರೋತ್ಸಾಹದಿಂದಲೂ ನೇಮಿಚಂದ್ರನು ಸೌಂದತ್ತಿಯ ರಟ್ಟರಾಜನಾದ 3 ನೆಯ ಕಾರ್ತವೀರ್ಯನ ಮಗ ಲಕ್ಷ್ಮೀದೇವನ ಪ್ರೋತ್ಸಾಹದಿಂದಲೂ ಗ್ರಂಥಗಳನ್ನು ಬರೆದರು. ಇವರಿಬ್ಬರಿಗೂ ಲಕ್ಷ್ಮೀದೇವ ಎಂಬ ಒಂದೇ ಹೆಸರಿರುವುದರಿಂದಲೂ ಇಬ್ಬರ ಹೆಂಡತಿಯರಿಗೂ ಚಂದ್ರಿಕಾ ದೇವಿ ಎಂಬ ಒಂದೇ ಹೆಸರಿರುವುದರಿಂದಲೂ ಈ ಭ್ರಮವುಂಟಾಯಿತು.

ಇನ್ನು ಕರ್ಣಪಾರ್ಯನ ಕಾಲದ ವಿಚಾರದಲ್ಲಿ ಹಿಂದೆ ಹೇಳಿದಂತೆ ಅವನು ವಿಜಯಾದಿತ್ಯನ ಆಳಿಕೆಯಲ್ಲಿ ತನ್ನ ಗ್ರಂಥವನ್ನು ಬರೆದನು. ವಿಜಯಾದಿತ್ಯನು 1143, 1153 (ಕನ್ನಡ ಜಿಲ್ಲೆಗಳ ವಂಶಾವಳಿಗಳು, 545), 1165 (ಹಿಂದೆ ಹೇಳಿದ ಎಕ್ಸಂಬಿ ಶಾಸನ) ಈ ವರ್ಷಗಳಲ್ಲಿ ಆಳಿದಂತೆ ಶಾಸನಗಳಿಂದ ತಿಳಿಯುತ್ತದೆ. ಆದರೆ ಕರ್ಣಪಾರ್ಯನು ಶ್ರೀಭೂಷಣನ (ಗಂಡರಾದಿತ್ಯನ) ಇಷ್ಟಾನುಸಾರವಾಗಿ ತನ್ನ ಗ್ರಂಥವನ್ನು ಬರೆದಂತೆ ಹೇಳುವುದರಿಂದ ಗ್ರಂಥರಚನೆ 1143 ಕ್ಕೆ ಸ್ವಲ್ಪ ಕಾಲ ಹಿಂದೆಯೇ ಆರಂಭವಾಗಿರಬೇಕು. ಆದುದರಿಂದ ಈ ಕವಿಯ ಕಾಲವು ಸು.1140 ಎಂದುಹೇಳಿದ್ದೇನೆ. ಅಯ್ಯನವರು ಕವಿಯ ಕಾಲವೆಂದು ಕೊಟ್ಟಿರುವ 1174ಕ್ಕೆ ಆಧಾರವಿಲ್ಲ. ಪರಮಜಿನಮತಕ್ಷೀರವಾರಾಶಿಚಂದ್ರ, ಭವ್ಯನ ಜನನ ಮಾತಾರ್ಯಂಡ ಎಂಬ ಬಿರುದುಗಳು ಕರ್ಣಪಾರ್ಯನ ಪೋಷಕನಾದ ಲಕ್ಷ್ಮಣನಿಗೆ ಅನ್ವಯಿಸುತ್ತವೆಯೇ ಹೊರತು ಕರ್ಣಪಾರ್ಯನಿಗಲ್ಲ ಎಂದು ಅಯ್ಯನವರು ಅಭಿಪ್ರಾಯಪಡುತ್ತಾರೆ. ಆದರೆ ಜೈನ ಕವಿಗಳ ಮಾರ್ಗವನ್ನು ತಿಳಿದ ಕನ್ನಡ ಪಂಡಿತರು ಈಅಭಿಪ್ರಾಯವನ್ನು ಅಂಗೀಕರಿಸಲಾರರು.

ದುರ್ಗಸಿಂಹನು (ಸು. 1025) ಮಾಳವೀ ಮಾಧವಕರ್ತೃ ಎಂದು ಸ್ತುತಿಸುವ ಕರ್ಣಪಾರ್ಯನ ಕಾಲವು ಸು. 1000 ಎಂದು ಹೇಳಬಹುದು.

ಸೋಮರಾಜ

ಸೋಮರಾಜನು ಚೌಟವಂಶದವನಾಗಿರಬಹುದು ಎಂಬ ನನ್ನ ಹೇಳಿಕೆ (I,339) ಊಹೆಯೇ ಹೊರತು ನಿರ್ಣಯವಾವ ಮಾತಲ್ಲ. ಈ ಅಂಶವನ್ನು ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ.

ಸೋಮರಾಜನು ನುಗ್ಗೆಹಳ್ಳಿ ಪಾಳೆಯಗಾರನೆಂದೂ ಅವನು ನಾನು ಹೇಳಿರುವಂತೆ 1222 ರಲ್ಲಿ ಗ್ರಂಥವನ್ನು ಬರೆಯಲಿಲ್ಲ, ಪರಂತು 1522 ರಲ್ಲಿ ಬರೆದನು ಎಂದೂ ಅಯ್ಯನವರು ಸಿದ್ಧಾಂತ ಮಾಡಿದ್ದಾರೆ (ಪುಟಗಳು 219–227). ಇದಕ್ಕೆ ಅವರು ಹೇಳುವ ಮುಖ್ಯ ಕಾರಣಗಳು: (1) 1573 ರಲ್ಲಿ ಹುಟ್ಟಿದ ಹಾಸನ 117ನೆಯ ಶಾಸನದಲ್ಲಿ ಚಂದ್ರವಂಶದ ತಿರುಮಲನ ಮಮ್ಮಗನೆಂದೂ ರಾಯಣನ ಮಗನೆಂದೂ ಹೇಳಿರುವ ನುಗ್ಗೆಹಳ್ಳಿ ಪಾಳೆಯಗಾರನಾದ ಇಂದುಶೇಖರನು ಸೋಮರಾಜನ ತಂದೆಯಾಗಿರಬೇಕು; (2) ಸಾಸಿರದ ನಾನೂರ್ವಂದ ನಾಲ್ವತ್ತುನಾಲ್ಕು (1444) ಎಂಬ ಶುದ್ಧವಾದ ಪಾಠವನ್ನು ನಾನು ಸಾಸಿರವ ನೂಱಿಂಸೊಂದ ನಾಲ್ವತ್ತುನಾಲ್ಕು (1144) ಎಂದು ಮಾರ್ಪಡಿಸಿದ್ದೇನೆ—ಎಂಬುವೇ, ಆದರೆ ಈ ಕಾರಣಗಳು ತೃಪ್ತಿಕರವಾಗಿಲ್ಲ. ಸೋಮರಾಜನ ಗ್ರಂಥದಿಂದ ಅವನು ವೀರಶೈವನೆಂಬುದು ಸ್ಪಷ್ಟವಾಗಿದೆ.

ನಾಮಸಾಮ್ಯವಿದ್ದರೂ ನುಗ್ಗೆಹಳ್ಳಿ ಪಾಳೆಯಗಾರರು ವೀರಶೈವರು ಬೇರೆ ಅಲ್ಲ: ಏಕೆಂದರೆ ಅವರಿಗೆ ಹಾಸನ 117 ರಲ್ಲಿ ಅತ್ರೇಯಗೋತ್ರವೂ ಆಪಸ್ತಂಬ ಸೂತ್ರವೂ ಯಜುಶ್ಶಾಖೆಯೂ ಹೇಳಿವೆ. ಅಲ್ಲದೆ ಹಾಸನ 117 ಸೋಮರಾಜನ ಹೆಸರನ್ನು ಹೇಳುವುದಿಲ್ಲ. ಪರಂತು ಇಂದುಶೇಖರನ ಮಗ ಬಸವರಾಜ ಎಂದು ಹೇಳಿ ಅವನ ಕಾಲವು 1573 ಎನ್ನುತ್ತದೆ. ಅಯ್ಯನವರು ಕಲ್ಪಿಸಿರುವಂತೆ ಸೋಮರಾಜನು ಈ ಇಂದು ಶೇಖರನ ಮಗನಾಗಿದ್ದಪಕ್ಷದಲ್ಲಿ ಅವನ ಕಾಲವೂ 1573 ಆಗಬೇಕೇ ಹೊರತು 1522 ಆಗಕೂಡದು. ಇದೂ ಅಲ್ಲದೆ ನುಗ್ಗೆಹಳ್ಳಿ ಪಾಳೆಯಗಾರನಾದ ರಾಯಣನು ವಿಜಯನಗರದ ರಾಜನಾದ ಅಚ್ಯುತನ (1530—1542) ಸಾಮಂತನಾಗಿದ್ದಂತೆ ಶಾಸನಗಳಿಂದ ತಿಳಿಯುತ್ತದೆ (II,215); ಸೋಮರಾಜನು ಈ ರಾಯಣನ ಮಮ್ಮಗನಾಗಿದ್ದ ಪಕ್ಷದಲ್ಲಿ ಅವನ ಕಾಲವು 1522ಕ್ಕಿಂತ ಬಹಳ ವರ್ಷಗಳು ಈಚೆ ಆಗಬೇಕಾಗುತ್ತದೆ. ಇನ್ನು ಎರಡನೆಯ ಕಾರಣವನ್ನು ನೋಡುವ. ಸೋಮರಾಜನ ಕಾಲವನ್ನು ಹೇಳುವ ಪದ್ಯದಲ್ಲಿ ನಾನು ಅವ ವಿಧವಾದ ಮಾರುಪಾಡನ್ನೂ ಮಾಡಲಿಲ್ಲವೆಂಬ ನಂಬಿಕೆಯಿದೆ; ಪರಂತು ಈ ಕವಿಯ ಚರಿತೆಯನ್ನು ಅವ ಕೈಬರಹದ ಪುಸ್ತಕವನ್ನು ಇಟ್ಟುಕೊಂಡು ಬರೆದೆನೋ ಜ್ಞಾಪಕವಿಲ್ಲ. ಅಯ್ಯನವರು ಸೂಚಿಸಿರುವ ಪಾಠವು ವ್ಯಾಕರಣಕ್ಕೆ ವಿರೋಧವಾಗಿರುವುದರಿಂದ ಸಮಂಜಸವಾಗಲಾರದು. ಶುದ್ಧವಾದ 'ನೂಱಿಸಂದ' ಎಂಬ ರೂಪಕ್ಕೆ ಪ್ರತಿಯಾಗಿ 'ನೂಸರ್ಂದ' ಎಂಬ ರೂಪವನ್ನು ಗಣ್ಯನಾದ ಅವ ಕವಿಯೂ ಪ್ರಯೋಗಿಸಲಾರನು. ಸಮಾಸವಿಲ್ಲದಾಗ ನೂಱು ಎಂಬ ಪದದ ಅಂತ್ಯಸ್ವರಕ್ಕೆ ಲೋಪವಿಲ್ಲ. ಈ ಅಂಶವು ಶಬ್ದಾನುಶಾಸನದ 82ನೆಯ ಸೂತ್ರದ ಕೆಳಗೆ ಕೊಟ್ಟಿರುವ ದೂಱುಪುಟ್ಟಿತು ಎಂಬ ನಿಷೇಧೋದಾಹರಣದಿಂದ ವ್ಯಕ್ತವಾಗುತ್ತದೆ. ಮೂಱು ಎಂಬ ಪದಕ್ಕೂ ಹೀಗೆಯೇ: 'ಅಱಿವತ್ತುಮೂಱು ಸಂದಂದು' (1,30) ಎಂಬ ಆದಿಪಂಪನ ಪ್ರಯೋಗವನ್ನು ನೋಡಬಹುದು.

ತಮ್ಮ ಕಲ್ಪನೆಗೆ ಮತೊಂದಾಧಾರವಾಗಿ ಅಯ್ಯನವರು ಉದ್ಭಟ ಕಾವ್ಯವನ್ನು ಪ್ರತಿ ಮಾಡಿದ ರಾಯಸದ ಲಿಂಗರಸನೂ ನುಗ್ಗೆಹಳ್ಳಿ ಪಾಳೆಯಗಾರನಾದ ರಾಯಣನ ಮಂತ್ರಿಯೂ ಕಬ್ಬಿಗರ ಕೈಪಿಡಿಯನ್ನು ಬರೆದವನೂ ಆದ ಲಿಂಗಮಂತ್ರಿಯೂ (II, 215) ಒಬ್ಬನೇ ಎಂದು ಗ್ರಹಿಸಿದ್ದಾರೆ (ಪುಟ227). ಈ ಗ್ರಹಿಕೆಗೆ ಆ ಹೆಸರುಗಳ ಏಕದೇಶಸಾಮ್ಯವೇ ಮೂಲವಾಗಿರಬೇಕು. ಇದು ಸಾಲದು. ಅಲ್ಲದೆ ಮಂತ್ರಿಪದವಿಯಲ್ಲಿರುವವನು ರಾಯಸದಕೆಲಸದವನಾಗಿರುವುದು ಅಸಂಭವವು. ಅಯ್ಯನವರು ಹೇಳುವ ಮತೊಂದಂಶವೇನೆಂದರೆ— ಸೋಮರಾಜನ ಉದ್ಭಟಕಾವ್ಯದ 8ನೆಯ ಆಶ್ವಾಸದ 43ನೆಯ ಪದ್ಯವನ್ನು

ತನ್ನ ರಸರತ್ನಾಕರದಲ್ಲಿ ಉದಾಹರಿಸಿರುವ ಸಾಳ್ವನು 1529ಕ್ಕೆ ಹಿಂದೆ ಇದ್ದಿರಬೇಕು (ಪುಟ 224), ನಾನು ಹೇಳಿರುವಂತೆ (11,244) ಸು. 1550 ರಲ್ಲಿ ಅಲ್ಲ–ಎಂಬುದು. ಈಯಂಶವು ಅಯ್ಯನವರ ಕಲ್ಪನೆಗೆ ಹೇಗೆ ಸಾಧಕವಾಗುವುದೋ ತಿಳಿಯಲಿಲ್ಲ. ಆದರೆ ಸಾಳ್ವನ ಪೋಷಕನಾದ ಸಾಳ್ವದೇವನು 1559ರವರೆಗೆ ಆಳಿದಂತೆ ಶಾಸನಗಳಿಂದ ತಿಳಿಯುತ್ತದೆ (ಪಂಚಕಜ್ಜಾಯ, 162). ಆದುದರಿಂದ ಸಾಳ್ವನಿಗೆ ನಾನು ಕೊಟ್ಟಿರುವ ಕಾಲವು ಬಹಳ ತಪ್ಪಾಗಿರಲಾರದು. 1488ರಲ್ಲಿ ಹುಟ್ಟಿದ ಸಾಗರ 163ನೆಯ ಶಾಸನವನ್ನು ಆಧಾರವಾಗಿಟ್ಟುಕೊಂಡು ಅಯ್ಯನವರು ಸಂಗೀತಪುರದ ಸಂಗಮರಾಜನ ಆಜ್ಞಾನುಸಾರವಾಗಿ ಜೀವಂಧರ ಷಟ್ಪದಿಯನ್ನು ಬರೆದ ಕೋಟೀಶ್ವರನು ಸು. 1480ರಲ್ಲಿದ್ದನು, ನಾನು ಹೇಳಿರುವಂತೆ (11,145) ಸು. 1500 ರಲ್ಲಿರಲಿಲ್ಲ—ಎಂದು ಪ್ರಸ್ತಾವಿಸಿದ್ದಾರೆ (ಪುಟ 227). ಆದರೆ ಈ ಸಂಗಮರಾಜನಿಗೂ ಸಾಗರ 163 ರಲ್ಲಿ ಹೇಳಿರುವ ಸಂಗಿರಾಜನಿಗೂ ಆವ ಸಂಬಂಧವೂ ಇಲ್ಲ. ಸಂಗಮರಾಜನು ಸಾಳ್ವದೇವನ ಕಾಲವಾದ ಮೇಲೆ ಆಳಿದಂತೆ ತೋರುವುದರಿಂದ (ಪಂಚಕಜ್ಜಾಯ, 161) ಅವನ ಕಾಲವು ಸು. 1560 ಆಗಬಹುದು; ಕೋಟೀಶ್ವರನ ಕಾಲವೂ ಇದೇ ಆಗಬೇಕಾಗುವುದು.

ಶ್ರೀಮಾನ್ ಮಂಜೇಶ್ವರದ ಎಂ ಗೋವಿಂದ ಪೈಯವರೂ ಸಹ ಸೋಮರಾಜನ ವಿಷಯವಾಗಿ ಸ್ವದೇಶಾಭಿಮಾನಿಯಲ್ಲಿಯೂ (19 ಮತ್ತು 26, 8, 1927) ಕನ್ನಡ ಪರಿಷತ್ಪತ್ರಿಕೆಯಲ್ಲಿಯೂ (XII, 48–66) ಬರೆದಿದ್ದಾರೆ. ಈ ಕವಿ ತನ್ನ ಗ್ರಂಥವನ್ನು 1222 ರಲ್ಲಿ ಬರೆಯಲಿಲ್ಲ, 1522ರಲ್ಲಿ ಬರೆದನು ಎಂದು ಇವರೂ ಅಭಿಪ್ರಾಯಪಡುತ್ತಾರೆ. ತಮ್ಮ ಅಭಿಪ್ರಾಯಕ್ಕೆ ಇವರು ಹೇಳಿರುವ ಮುಖ್ಯವಾದ ಆಧಾರಗಳೂ ಅವಕ್ಕೆ ನನ್ನ ಸಮಾಧಾನಗಳೂ ಕೆಳಗೆ ಕೊಟ್ಟಿವೆ:—

(1) 1222 ರಲ್ಲಿ ಆಶ್ವಯುಜ ಶುದ್ಧ ಏಕಾದಶಿ ಆದಿತ್ಯವಾರವಾಗುತ್ತದೆ; ಸೋಮರಾಜನ ಪದ್ಯದಲ್ಲಿ ಹೇಳಿರುವಂತೆ—ವನಜಾರಾತಿತನೂಜವಾಸರದೊಳಾದಶು – ಬುಧವಾರವಾಗುವುದಿಲ್ಲ. ಆದರೆ 1522 ರಲ್ಲಿ ವಾರವು ಸರಿ ಹೋಗುತ್ತದೆ. ಆದುದರಿಂದ ನಾನು ಕೊಟ್ಟಿರುವ 'ನೂಱಿಂಸಂದ' ಎಂಬುದಕ್ಕೆ ಪ್ರತಿಯಾಗಿ 'ನಾಲ್ನೂರ್ಸಂದ' ಎಂಬ ಪಾಠವಿರಬೇಕು. ನೂಱಿಂಸಂದ ನಾಲ್ವತ್ತುನಾಲ್ಕು ಎಂಬುದಕ್ಕೆ ಇವರು 100–44 ಎಂದು ವಿಚಿತ್ರವಾದ ಅರ್ಥವನ್ನು ಮಾಡಿದ್ದಾರೆ. ನೂಱಿಂಸಂದ ಎಂದರೆ ನೂರರಿಂದ ಮೇಲೆ ಸಂದ (100+44) ಎಂದೇ ಅರ್ಥವು. ನಾನು ಹಿಂದೆ ತಿಳಿಸಿದಂತೆ ನೂರ್ಸಂದ ಎಂಬ ಪ್ರಯೋಗವು ವ್ಯಾಕರಣ ವಿರುದ್ಧವಾದುದು. ಎಷ್ಟೋ ಶಾಸನಗಳಲ್ಲಿ ಹೇಳಿ

ರುವ ಕಾಲದ ಅಂಗಗಳೊಳಗೆ ಒಂದೆರಡು ಹೊಂದಿಕೆಯಾಗುವುದಿಲ್ಲ. ಇಷ್ಟು ಮಾತ್ರಕ್ಕೆ ಆ ಶಾಸನದ ಕಾಲವನ್ನು ನೂರಾರು ವರ್ಷ ಈಚೆಗೆ ಎಳೆವುದು ನ್ಯಾಯವಲ್ಲ. ಪ್ರಕೃತದಲ್ಲಿ ಚಿತ್ರಭಾನುವಿನಲ್ಲಿ(1222)ಆಶ್ವಯುಜ ಶುದ್ಧ ಏಕಾದಶಿ ಬುಧವಾರವಾಗದಿದ್ದರೂ ಅದರ ಹಿಂದಣವರ್ಷವಾದ ವೃಷ(ವಿಷು)ದಲ್ಲಿ(1221) ಬುಧವಾರವಾಗುತ್ತದೆ.[1] ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಕೊಟ್ಟಿರುವ ಕಾಲದಲ್ಲಿ ಹೀಗೆ ಒಂದು ವರ್ಷ ಹಿಂದುಮುಂದಾಗುವುದು ಬಹಳ ಸಾಧಾರಣವಾಗಿದೆ.

(2) ಕಥಾನಾಯಕನಾದ ಕುಮಾರಪಾಲನ ಅಥವಾ ಉದ್ಭಟನ ಕಾಲಕ್ಕೂ (ಸು. 1150) ಕಥೆಯನ್ನು ಹೇಳುವ ಸೋಮರಾಜನ ಕಾಲಕ್ಕೂ (1222) ಇರುವ ಅಂತರವು ಈ ಕಥೆ ಗುಜರಾತಿನಿಂದ ಕರ್ಣಾಟಕಕ್ಕೆ ಹರಡುವುದಕ್ಕೆ ಸಾಲದು. ಕಥೆ ಹರಡುವ್ದಕ್ಕೆ ಮುಕ್ಕಾಲು ಶತಮಾನದ ಕಾಲವು ಬೇಕಾದಷ್ಟಾಯಿತು ಎಂದು ನಾನು ಭಾವಿಸುತ್ತೇನೆ.

(3) ಶೈಲಿ 13ನೆಯ ಶತಮಾನದ ಶೈಲಿಯಂತಿಲ್ಲ, 16ನೆಯ ಶತಮಾನದ ಶೈಲಿಯಂತಿದೆ. ಪ್ರಮಾಣಾಂತರವಿಲ್ಲದೆ ಶೈಲಿಯನ್ನು ಮಾತ್ರ ಸಂಬಿಕೊಂಡು ಗ್ರಂಥಗಳ ಕಾಲವನ್ನು ನಿರ್ಣಯಿಸಲು ಹೊರಡುವುದು ಅಪಾಯಕರವೇ ಸರಿ.

ಈ ಇಬ್ಬರು ವಿದ್ವಾಂಸರು ಹೇಳುವಂತೆ ಸೋಮರಾಜನು ತನ್ನ ಗ್ರಂಥವನ್ನು 1522 ರಲ್ಲಿ ಬರೆದಿದ್ದ ಪಕ್ಷದಲ್ಲಿ ಅವನು ಪೂರ್ವಕವಿಗಳಲ್ಲಿ 1200ಕ್ಕೆ ಹಿಂದೆ ಇದ್ದವರನ್ನು ಮಾತ್ರ ಹೇಳಿ 1200ರಿಂದ 1500ರ ವರೆಗಿನ ಮೂರು ಶತಮಾನಗಳಲ್ಲಿದ್ದ ಒಬ್ಬ ಕವಿಯನ್ನಾದರೂ, ಬಸವಪುರಾಣಕರ್ತೃವಾದ ಭೀಮಕವಿಯನ್ನೂ ಸಹ, ಸ್ಮರಿಸದೆ ಇರುವುದಕ್ಕೆ ಕಾರಣವನ್ನು ಊಹಿಸುವುದು ಕಷ್ಟವಾಗಿದೆ. ಆದುದರಿಂದ ಮಾರ್ಪಡಿಸುವುದಕ್ಕೆ ಅಚಾಲ್ಯವಾದ ಆಧಾರವು ದೊರೆವವರೆಗೆ ಸೋಮರಾಜನ ಕಾಲವನ್ನು 1222 ಎಂದೇ ಇಟ್ಟುಕೊಳ್ಳಬಹುದು.

ಹರೀಶ್ವರ, ರಾಘವಾಂಕ, ಕೆರೆಯಪದ್ಮರಸ

ಹರೀಶ್ವರ ರಾಘವಾಂಕ ಕೆರೆಯಪದ್ಮರಸರು ಸು. 1165 ರಲ್ಲಿ ಬಾಳಿದರು ಎಂಬ ನನ್ನ ಹೇಳಿಕೆಯನ್ನು (I, 222) ಅಯ್ಯನವರು ಕೆಳಗಣ ಕಾರಣಗಳನ್ನು ಹೇಳಿ ಆಕ್ಷೇಪಿಸುತ್ತಾರೆ (ಪುಟಗಳು 260–278):—

---

1 ಈಯಂಶವನ್ನು ಮೈಸೂರು ಶಾಸನ ಇಲಾಖೆಯ ಶ್ರೀಮಾನ್ ಆರ್ ರಾಮರಾಯರು ಬಿ. ಎ. ತಿಳಿಸಿದುದಕ್ಕಾಗಿ ಅವರಿಗೆ ನನ್ನ ಧನ್ಯವಾದವು.

(1) ಹರೀಶ್ವರ ಕೆರೆಯಪದ್ಮರಸರನ್ನು ಸ್ತುತಿಸುವ ಸೋಮರಾಜನು ತನ್ನ ಉದ್ಭಟಕಾವ್ಯವನ್ನು 1522 ರಲ್ಲಿ ಬರೆದನು, 1222 ರಲ್ಲಿ ಅಲ್ಲ.

(2) ಮಲ್ಲಿಕಾರ್ಜುನನು (ಸು. 1263) ತನ್ನ ಸೂಕ್ತಿಸುಧಾರ್ಣವದಲ್ಲಿ ಹರೀಶ್ವರನ ಗಿರಿಜಾಕಲ್ಯಾಣದಿಂದ ಪದ್ಯಗಳನ್ನು ಅನುವಾದ ಮಾಡಿರುವುದರಿಂದ ಆ ಗ್ರಂಥವು 1263 ಕ್ಕೆ ಹಿಂದೆ ಇದ್ದಿತೆಂದು ಹೇಳಬಹುದೇ ಹೊರತು ರಾಘವಾಂಕ ಕೆರೆಯಪದ್ಮರಸರು ಆಕಾಲಕ್ಕೆ ಹಿಂದೆ ಇದ್ದರೆಂದು ಹೇಳುವುದಕ್ಕಾಗುವುದಿಲ್ಲ.

(3) ಪದ್ಮರಾಜಪುರಾಣದಲ್ಲಿ ಬರುವ 'ನರಸಿಂಹ ಬಲ್ಲಾಳ' ಎಂಬುದಕ್ಕೆ ನರಸಿಂಹನ ಮಗ ಬಲ್ಲಾಳ ಎಂದು ಅರ್ಥವಾಗಬೇಕು: ಎಂದರೆ 3 ನೆಯ ನರಸಿಂಹನ ಮಗ 3 ನೆಯ ಬಲ್ಲಾಳ (1291–1342) ಎಂದರ್ಥವು ; ಆದೇಗ್ರಂಥದಲ್ಲಿ ಹೇಳಿರುವ ಬಿಟ್ಟಿದೇವನು 4 ನೆಯ ಬಲ್ಲಾಳನು.

(4) 1162 ರಲ್ಲಿ ರುದ್ರದೇವನೆಂಬ ರಾಜನಿದ್ದನು. ಇವನ ರಾಜಧಾನಿ ಅನುಮಕೊಂಡ, ಓರಗಲ್ಲಲ್ಲ. ಆ ಕಾಲದಲ್ಲಿ ಪ್ರತಾಪರುದ್ರ ಎಂಬ ರಾಜನಿರಲಿಲ್ಲ.

(5) ವಿಜಯನಗರದ ರಾಜನಾದ 1 ನೆಯ ಹರಿಹರನಿಗೆ ಹಿಂದೆ ಬ್ರೌನ್ ಹೇಳುವಂತೆ ಪಂಪಾಪುರದಲ್ಲಿ ದೇವರಾಜನೆಂಬ ದೊರೆ 1286 ರಿಂದ 1328ರ ವರೆಗೆ ಆಳಿದನು ಎಂಬುದು ಅಸಂಭಾವ್ಯವಲ್ಲ.

(6) ಕೆರೆಯಪದ್ಮರಸನ ತಂದೆ ಬಸವನ ಸಮಕಾಲದವನಾದುದರಿಂದ ಕೆರೆಯಪದ್ಮರಸನು 1165 ರಲ್ಲಿ ಬಹಳ ಚಿಕ್ಕವಯಸ್ಸಿನವನಾಗಿರಬೇಕು. ಆದುದರಿಂದ ಅವನು 1ನೆಯ ನಾರಸಿಂಹನ (1141–1173) ಆಳಿಕೆಯಲ್ಲಿ ಇದ್ದಿರಲಾರನು.

(7) 1 ನೆಯ ನರಸಿಂಹನು ಹರೀಶ್ವರನನ್ನು ಹಂಪೆಗೆ ಕಳುಹಿಸಿದಂತೆ ಹೇಳಿದೆ. ಹಂಪೆ ಹೊಯ್ಸಳರಾಜ್ಯಕ್ಕೆ 2ನೆಯ ಬಲ್ಲಾಳನ (1173–1220) ಆಳಿಕೆಯಲ್ಲಿ ಸೇರಿತಾದುದರಿಂದ 1 ನೆಯ ನರಸಿಂಹನ ರಾಜ್ಯಕ್ಕೆ ಸೇರಲಿಲ್ಲ. ಆದುದರಿಂದ ಹರೀಶ್ವರನನ್ನು ಹಂಪೆಗೆ ಕಳುಹಿಸಿದವನು 1 ನೆಯ ನರಸಿಂಹನಲ್ಲ.

ಈ ಆಕ್ಷೇಪಣೆಗಳಲ್ಲಿ ಒಂದೂ ತೃಪ್ತಿಕರವಾಗಿಲ್ಲ. ಇವಕ್ಕೆ ನನ್ನ ಸಮಾಧಾನಗಳು—

(1) ಹರೀಶ್ವರನನ್ನು ಸ್ತುತಿಸುವ ಉದ್ಭಟಕಾವ್ಯವು 1222 ರಲ್ಲಿ ರಚಿತವಾಯ್ತೆಂದೂ ಹರೀಶ್ವರನ ಗಿರಿಜಾ ಕಲ್ಯಾಣದ ಪದ್ಯಗಳನ್ನು ಅನುವಾದ ಮಾ

ಡುವ ಮಲ್ಲಿಕಾರ್ಜುನನು ಸು. 1245 ರಲ್ಲಿ ಬಾಳಿದನೆಂದೂ ಹಿಂದೆಯೇ ತೋರಿಸಿದ್ದೇನೆ (ಪುಟಗಳು lix, lxv). ಆದುದರಿಂದ ಹರೀಶ್ವರನು ಮೇಲೆ ನಿರ್ದಿಷ್ಟವಾದ ವರ್ಷಗಳಿಗೆ ಹಿಂದೆ ಇದ್ದನೆಂಬುದಕ್ಕೆ ಆವ ಸಂದೇಹವೂ ಇಲ್ಲ.

(2) ಹರೀಶ್ವರ ರಾಘವಾಂಕ ಕೆರೆಯಪದ್ಮರಸರು ಸಮಕಾಲದವರೆಂಬುದನ್ನು ವೀರಶೈವ ಗ್ರಂಥಗಳಿಂದ ತೋರಿಸಿದ್ದೇನೆ (I, 222). ರಾಘವಾಂಕನು ಹರೀಶ್ವರನ ಸೋದರಮಳಿಯನು; ಹರೀಶ್ವರನೂ ಕೆರೆಯಪದ್ಮರಸನೂ 1ನೆಯ ನಾರಸಿಂಹನ ಕೈಯ ಕೆಳಗೆ ಅಧಿಕಾರಿಗಳಾಗಿದ್ದರು.

(3) ನರಸಿಂಹಬಲ್ಲಾಳ ಎಂಬುದಕ್ಕೆ ನರಸಿಂಹನ ಮಗ ಬಲ್ಲಾಳ ಎಂದು ಅರ್ಥವನ್ನು ಕಲ್ಪಿಸುವುದು ಸಮಂಜಸವಲ್ಲ. ಈ ವಿಧವಾದ ಅರ್ಥವು ತೆಲುಗುದೇಶದಲ್ಲಿ ಮಾತ್ರ ವಾಡಿಕೆಯುಲ್ಲಿದೆ. ಆದರೆ ಇಲ್ಲಿ ಬಲ್ಲಾಳ ಶಬ್ದವು ಹೊಯ್ಸಳ ಎಂಬರ್ಥದಲ್ಲಿ ಪ್ರಯೋಗಿಸಿದೆ. ಹಲವು ಕನ್ನಡ ಗ್ರಂಥಗಳಲ್ಲಿ ಹೊಯ್ಸಳರಿಗೆ ಬಲ್ಲಾಳರು ಎಂಬ ಹೆಸರು ಹೇಳಿದೆ. ಆದುದರಿಂದ ನರಸಿಂಹಬಲ್ಲಾಳ ಎಂದರೆ ಹೊಯ್ಸಳರಾಜನಾದ ನರಸಿಂಹ (I) ಎಂದೂ ಅವನ ಮಗ ಬಿಟ್ಟಿದೇವನು ಎಂದರೆ ಬಿಟ್ಟಿದೇವನ ಅಥವಾ ವಿಷ್ಣುವರ್ಧನನ ಮಮ್ಮಗನಾದ ಬಲ್ಲಾಳ (II) ನೆಂದೂ ತಿಳಿಯಬೇಕು. ನರಸಿಂಹ ಬಲ್ಲಾಳ ಎಂಬುದಕ್ಕೆ 3ನೆಯ ನರಸಿಂಹನ ಮಗ 3ನೆಯ ಬಲ್ಲಾಳ (1291–1342) ಎಂದೂ ಅವನ ಮಗ ಬಿಟ್ಟಿದೇವ ಎಂದರೆ 3ನೆಯ ಬಲ್ಲಾಳನ ಮಗ 4ನೆಯ ಬಲ್ಲಾಳನೆಂದೂ ಅರ್ಥಮಾಡಿದರೆ ಹರೀಶ್ವರನಿಗೂ ಈ ದೊರೆಗಳ ಕಾಲಕ್ಕೂ ಸಂಬಂಧವೇ ಇರುವುದಿಲ್ಲ. ಬಿಟ್ಟಿದೇವ, ಬಲ್ಲಾಳ ಎಂಬ ಶಬ್ದಗಳು ಪರ್ಯಾಯನಾಮಗಳಲ್ಲ.

(4) 1162 ರಲ್ಲಿ ಪ್ರತಾಪರುದ್ರನೆಂಬ ಒಬ್ಬ ಕಾಕತೀಯರಾಜನಿದ್ದನು. ಇವನು 1140 ರಿಂದ 1196ರ ವರೆಗೆ ಆಳಿದನು. ಈತನು ನೀತಿಸಾರವೆಂಬ ಒಂದು ತೆಲುಗು ಗ್ರಂಥವನ್ನು ಬರೆದನೆಂದೂ ಓರಗಲ್ಲಿಗೆ ಹೋಗಿದ್ದನೆಂದೂ ಅಲ್ಲಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು ಕೇಳಿದನೆಂದೂ ಆಮೇಲೆ ಪಾಲ್ಕುರಿಕೆ ಸೋಮನಾಥನಿಗೆ ಒಂದಗ್ರಹಾರವನ್ನು ಕೊಟ್ಟನೆಂದೂ ತೆಲುಗು ಪಂಡಿತರು ಬರೆದಿದ್ದಾರೆ. (ವೀರೇಶಲಿಂಗಂಪಂತುಲು, ತೆಲುಗು ಕವಿಗಳು I,217–222). ಆ ಕಾಲದಲ್ಲಿ ಓರಗಲ್ಲು ರಾಜಧಾನಿಯಾಗಿರಲಿಲ್ಲ ಎಂಬುದಕ್ಕೆ ಅಯ್ಯನವರು ಆವಪ್ರಮಾಣವನ್ನೂ ತೋರಿಸಿಲ್ಲ. ರಾಜನಿಗೆ ತನ್ನ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚಾದ ರಾಜಧಾನಿಗಳಿದ್ದಿರಬಹುದು. 'ತಸ್ಯಾಸ್ತೇನುಮ ಕೊಂಡ ನಾಮನಗರೀ ಶ್ರೀ ರಾಜಧಾನೀವಯಾ' ಎಂಬ ಶಾಸನಪದ್ಯದಲ್ಲಿ (ಪುಟ 263) ಅನುಮಕೊಂಡವು ರಾಜಧಾನಿಯು ಹಾಗಿದೆ (ರಾಜಧಾನೀವ) ಎಂಬುದರಿಂದ ರಾಜಧಾನಿ ಮತ್ತೊಂದು ಸ್ಥಳ ಎಂದು ಭಾಸವಾಗುತ್ತದೆ.

(5) ಪಂಪಾಪುರದಲ್ಲಿ 1286 ರಿಂದ 1328ರ ವರೆಗೆ ದೇವರಾಜನೆಂಬ ದೊರೆ ಆಳಿದನು ಎಂಬ ಹೇಳಿಕೆಗೆ ಆವ ಶಾಸನದ ಅಥವಾ ಪೂರ್ವಗ್ರಂಥದ ಆಧಾರವೂ ಇಲ್ಲ.

(6) ಕೆರೆಯಪದ್ಮರಸನ ತಂದೆಯೂ ಬಸವನೂ ಸಮಕಾಲದವರಾದ ಮಾತ್ರಕ್ಕೆ ಕೆರೆಯಪದ್ಮರಸನು 1165 ರಲ್ಲಿ ಬಹಳ ಚಿಕ್ಕನಯಸ್ಸಿನವನಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ಕೆರೆಯಪದ್ಮರಸನ ತಂದೆ ಬಸವನಿಗಿಂತ ಹೆಚ್ಚು ವಯಸ್ಸಿನವನಾಗಿದ್ದಿರಬಹುದು.

(7) 1ನೆಯ ನರಸಿಂಹನು ಹರೀಶ್ವರನನ್ನು ಹಂಪೆಗೆ ಕಳುಹಿಸಬೇಕಾದರೆ ಹಂಪೆ ತನ್ನ ರಾಜ್ಯದಲ್ಲಿಯೇ ಇದ್ದಿರಬೇಕೆಂಬ ನಿರ್ಬಂಧವೇನೂ ಕಾಣುವುದಿಲ್ಲ. ಆ ಸ್ಥಳವು ಆರಾಜನ ಅಧೀನದಲ್ಲಿರಲಿಲ್ಲ ಎಂಬುದಕ್ಕೆ ಸಾಕಾದ ಪ್ರಮಾಣವು ಕೊಡಲ್ಪಟ್ಟೂ ಇಲ್ಲ.

ಅಯ್ಯನವರು ಇನ್ನೂ ಕೆಲವಂಶಗಳನ್ನು ಹೇಳಿದ್ದಾರೆ. ಅವಕ್ಕೂ ಉತ್ತರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಹರೀಶ್ವರ ರಾಘವಾಂಕರು ಬಸವನ ಹೆಸರನ್ನು ಹೇಳಿಲ್ಲವಾದುದರಿಂದ ಅವರು ವೀರಶೈವರಲ್ಲ ಎಂದು ಅಯ್ಯನವರು ಬರೆದಿದ್ದಾರೆ. ಹಾಗೆ ನೋಡಿದರೆ ನಿಜಗುಣ ಶಿವಯೋಗಿಯೇ ಮೊದಲಾದ ಪ್ರಸಿದ್ಧ ವೀರಶೈವರು ಬಸವನ ಹೆಸರನ್ನು ಹೇಳಿಲ್ಲ.

ಬಿಜ್ಜಳನ ಮಕ್ಕಳ ಶಂಕರ, ಸೋಮೇಶ್ವರ ಎಂಬ ಹೆಸರುಗಳಿಂದ ಅವನು ಜೈನನಲ್ಲ ಎಂಬುದು ವ್ಯಕ್ತವಾಗುತ್ತದೆ ಎಂದು ಅಯ್ಯನವರು ಹೇಳುತ್ತಾರೆ. ಜೈನರಲ್ಲಿ ಶಂಕರ ಎಂಬ ಹೆಸರು ವಾಡಿಕೆಯಲ್ಲಿರುವ ವಿಷಯವನ್ನು ಹಿಂದೆಯೇ ತಿಳಿಸಿದ್ದೇನೆ (ಪುಟ lx). ಮತ್ತೊಂದು ಹೆಸರೂ ಹಾಗೆಯೇ ಇರಬಹುದು. ಜೈನರಲ್ಲಿ ಮಾತ್ರವೇ ಅಲ್ಲದೆ ವೀರಶೈವರಲ್ಲಿಯೂ ಸಹ ಬಿಜ್ಜಳನು ಜೈನನು ಎಂಬ ಪ್ರತೀತಿ ಇದೆ.

ಮಲ್ಲಿಕಾರ್ಜುನನು ತನ್ನ ಸೂಕ್ತಿಸುಧಾರ್ಣವದಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ ಏಕೆ ಪದ್ಯಗಳನ್ನು ಅನುವಾದಮಾಡಿಲ್ಲ ಎಂದು ಅಯ್ಯನವರು ಕೇಳುತ್ತಾರೆ. ಮಲ್ಲಿಕಾರ್ಜುನನು ಕಂದ ವೃತ್ತಗಳನ್ನು ಮಾತ್ರ ಅನುವಾದಮಾಡಿದ್ದಾನೆ; ಹರಿಶ್ಚಂದ್ರ ಕಾವ್ಯವು ಷಟ್ಪದೀ ಗ್ರಂಥವಾದುದರಿಂದ ಅದರಿಂದ ಪದ್ಯಗಳನ್ನು ಅನುವಾದಮಾಡಿಲ್ಲ.

ವೀರಶೈವ ಜೈನ ಗ್ರಂಥಗಳಲ್ಲಿ ಬ ಸವಚೆನ್ನ ಬಸವರು ಬಿಜ್ಜಳನ ಆಸ್ಥಾನ

ದಲ್ಲಿದ್ದರು ಎಂದು ಬರೆದಿರುವುದು ತಪ್ಪೆಂದು ಹೇಳಿ ಅಯ್ಯನವರು ಈ ಹೇಳಿಕೆಗೆ ಆಧಾರವಾಗಿ "ಬಸವನ ಸತ್ತೆಗೆ ಶಾಸನ ಪ್ರಮಾಣವಿಲ್ಲದುದರಿಂದ ವೀರಶೈವ ಮತಸ್ಥಾಪಕನು ಬಹುಶಃ ಏಕಾಂತದ ರಾಮಯ್ಯನಾಗಿರಬಹುದು, ಬಸವನಲ್ಲ" ಎಂದು ಡಾಕ್ಟರ್ ಫ್ಲೀಟ್ ಬರೆದಿರುವುದನ್ನು ಅನುವಾದ ಮಾಡಿದ್ದಾರೆ. ವ್ಯಕ್ತಿಗಳ ಸತ್ತೆಗೆ ಶಾಸನವೇ ಪ್ರಮಾಣವಾದ ಪಕ್ಷದಲ್ಲಿ ಶಾಸನೋಕ್ತರಲ್ಲದ ಶಂಕರಾಚಾರ್ಯ ರಾಮಾನುಜಾಚಾರ್ಯಾದಿಗಳ ಸತ್ತೆಯನ್ನು ಹೇಗೆ ನಂಬುವುದು ? ಬಸವನ ವಿಷಯವಾಗಿ ಒಂದು ಹೊಸ ಶಾಸನವು ಬೆಳಗಾಂ ತಾಲ್ಲೂಕಿನ ಅರ್ಜುನವಾಡದಲ್ಲಿ ಈಗತಾನೆ ದೊರೆತಿರುವುದು ಸಂತೋಷಿಸತಕ್ಕ ಸಂಗತಿಯಾಗಿದೆ. ಇದು ಸೇವುಣರಾಜನಾದ ಕಂಥಾರನ ಅಳಿಕೆಯಲ್ಲಿ(1247–1260) ಶಕ1182ರಲ್ಲಿ(1259–1260) ಹುಟ್ಟಿದೆ. ಇದರಲ್ಲಿ ಬಸವನೂ ಅವನ ತಂದೆಯೂ ಬಸವನ ಸಂತತಿಯಲ್ಲಿ ಐದುತಲೆಯವರೂ ಉಕ್ತರಾಗಿದ್ದಾರೆ (ಶಿವಾನುಭವ III,94). ಇದು ಬಿಜ್ಜಳನಕಾಲದಲ್ಲಿ ಬಸವನ ಸತ್ತೆಗೆ ಅಚಾಲ್ಯವಾದ ಪ್ರಮಾಣವಾಗಿದೆ.

ಅಯ್ಯನವರಂತೆ ಆವ ವಿದ್ವಾಂಸನೂ ಎಲ್ಲಾ ವೀರಶೈವ ಜೈನಬ್ರಾಹ್ಮಣ ಸಂಪ್ರದಾಯ ಗ್ರಂಥಗಳನ್ನೂ ಆತ್ಯಂತಿಕವಾಗಿ ನಿಂದಿಸಿ ಅವುಗಳಲ್ಲಿ ದೊರೆಯಬಹುದಾದ ಸಹಾಯವನ್ನು ನಿರಾಕರಿಸಲಾರನು ಎಂದು ನಂಬಿದ್ದೇನೆ. ಒಂದು ಗ್ರಂಥದಲ್ಲಿ ಕೆಲವು ದೋಷಗಳಿದ್ದ ಮಾತ್ರಕ್ಕೆ ಅದನ್ನು ಸಂಪೂರ್ಣವಾಗಿ ನಿರಾಕರಿಸುವುದು ವಿವೇಕವಲ್ಲ. ಚರಿತ್ರವೆಂದು ಹೇಳಿಸಿಕೊಳ್ಳುವ ಗ್ರಂಥಗಳಲ್ಲಿಯೂ ಕೂಡ ಅಂಥ ದೋಷಗಳು ದೊರೆಯುತ್ತವೆ. ವೀರಶೈವಾದಿ ಗ್ರಂಥಗಳಿಂದ ನಾನು ಅನುವಾದ ಮಾಡಿರುವುದರಿಂದ ಅಯ್ಯನವರು ನನಗೆ ಮೂಢ ಶ್ರದ್ಧಾಳುತೆಯನ್ನು ಕಲ್ಪಿಸಿದ್ದಾರೆ. ಒಂದು ಗ್ರಂಥದಿಂದ ಅನುವಾದ ಮಾಡಿದ ಮಾತ್ರಕ್ಕೆ ಆ ಗ್ರಂಥದಲ್ಲಿ ಹೇಳಿರುವುದನ್ನೆಲ್ಲಾ ನಂಬಬೇಕೆಂಬ ನಿರ್ಬಂಧವೇನೂ ಇಲ್ಲ ಒಂದು ಗ್ರಂಥದ ಕಾಲವು ತಿಳಿದಿದ್ದರೆ ಆ ಗ್ರಂಥದಲ್ಲಿ ಉಕ್ತರಾದ ಗ್ರಂಥಕರ್ತರು ಆ ಕಾಲಕ್ಕೆ ಹಿಂದೆ ಇದ್ದರು ಎಂಬುದು ನ್ಯಾಯವಾಗಿಯೇ ಇದೆ. ವೀರಶೈವಾದಿ ಗ್ರಂಥಗಳಲ್ಲಿ ಅಯ್ಯನವರು ತೋರಿಸಿರುವಂಥ ಪರಸ್ಪರ ವಿರೋಧಗಳು ಶಾಸನಗಳಲ್ಲಿಯೂ ಕಂಡುಬರುತ್ತವೆ.

ಮೇಲೆ ಹೇಳಿದ ಕಾರಣಗಳಿಂದ ಹರೀಶ್ವರ ರಾಘವಾಂಕ ಕೆರೆಯ ಪದ್ಮರಸರುಗಳಿಗೆ ನಾನು ಹೇಳಿರುವ ಕಾಲವನ್ನು ಮಾರ್ಪಡಿಸಬೇಕಾಗಿಲ್ಲ ಎಂಬುದು ಸ್ಪಷ್ಟವಾಗದೆ ಇರಲಾರದು.

ಇನ್ನು ಕೆಲವು ಆಕ್ಷೇಪಣೆಗಳು

ಅಯ್ಯನವರ ಆಕ್ಷೇಪಣೆಗಳಲ್ಲಿ ಮುಖ್ಯವಾದುವೆಂದು ನನಗೆ ತೋರಿದು ಕೆಲವಕ್ಕೆ ಸಮಾಧಾನವನ್ನು ಹೇಳಿದುದಾಯಿತು. ಇನ್ನು ಕೆಲವಕ್ಕೆ ಬಹಳ ಸಂಗ್ರಹವಾಗಿ ಸಮಾಧಾನವನ್ನು ಸೂಚಿಸಬೇಕಾಗಿದೆ.

ದೇವಕವಿ, ಕಮಲಭವ

ರುದ್ರಭಟ್ಟನನ್ನು ಸ್ತುತಿಸುವುದರಿಂದ ದೇವಕವಿ 1217ಕ್ಕೆ ಈಚೆ ಇದ್ದಿರಬೇಕು ಎಂದು ಅಯ್ಯನವರು ಬರೆದಿದ್ದಾರೆ (ಪುಟ 116). ಆದರೆ ರುದ್ರಭಟ್ಟನ ಕಾಲವು ಸು. 1185 ಎಂದು ನಾನು ಹಿಂದೆಯೇ ತೋರಿಸಿರುವುದರಿಂದ ದೇವಕವಿ ಸು. 1200 ರಲ್ಲಿದ್ದನು ಎಂದು ನಾನು ಹೇಳಿರುವುದು (I,314) ಸರಿಯಾಗಿಯೇ ಇದೆ.

ದೇವಕವಿ 1245-50 ರಲ್ಲಿ ಇದ್ದಿರಬೇಕೆಂದು ಭಾವಿಸಿ ಅದಕ್ಕೆ ಅಯ್ಯನವರು ಇನ್ನು ಕೆಲವು ಕಾರಣಗಳನ್ನು ಹೇಳಿದ್ದಾರೆ (ಪುಟಗಳು 116-118). ಅದರೆ ಈ ಕಾರಣಗಳು ಬರಿಯ ಊಹೆಗಳೇ ಹೊರತು ಮತ್ತೆ ಬೇರೆ ಅಲ್ಲ. ಈ ಊಹೆಗಳ ಆಧಾರದ ಮೇಲೆ ಕಮಲಭವನ ಕಾಲವು ಸು 1255 ಎಂದು ಕಲ್ಪಿಸಿ ಅವನಿಗೆ ಕವಿತಾ ವಿಷಯದಲ್ಲಿ ದೇವಕವಿ ಪ್ರೋತ್ಸಾಹಕನಾಗಿದ್ದುದರಿಂದ ಇವನು ಅವನಿಗಿಂತ ಕೆಲವು ವರ್ಷಗಳು ಹಿಂದೆ ಇದ್ದಿರಬೇಕು ಎಂದು ತೀರ್ಮಾನಿಸಿದ್ದಾರೆ. ಕಮಲಭವನು ಹೇಳುವ ಈಚೆಯ ಕಾಲದ ಗುರುಗಳಲ್ಲಿ ಒಬ್ಬನಾದ ವಿನಯೇಂದು ಸೇವುಣರಾಜನಾದ ಸಿಂಹಣನಿಂದ (1210-1247) ಗೌರವಿಸಲ್ಪಟ್ಟನು ಎಂದು ಹೇಳಿರುವುದರಿಂದ ಕಮಲಭವನು ತನ್ನ ಗ್ರಂಥವನ್ನು 1247ಕ್ಕೆ ಈಚೆ ಬರೆದಿರಬೇಕು ಎಂದು ಅಯ್ಯನವರು ಊಹಿಸುತ್ತಾರೆ. ವಿನಯೇಂದುವೂ ಅವನ ಜತೆಯಲ್ಲಿ ಉಕ್ತರಾದ ಇನ್ನು ಕೆಲವರು ಗುರುಗಳೂ ಕವಿಯ ಸಮಕಾಲದವರಾಗಿದ್ದಿರಬಹುದಾದುದರಿಂದ 1247ಕ್ಕೆ ಈಚೆಯೇ ಕವಿ ಗ್ರಂಥವನ್ನು ಬರೆದಿರಬೇಕೆಂಬ ನಿರ್ಬಂಧವೇನೂ ಇಲ್ಲ. ಅಲ್ಲದೆ ಕವಿ ಹೇಳಿರುವ ಕುಮುದೇಂದುವಿನ ಶಿಷ್ಯನಾದ ಮಾಘನಂದಿ 1253 ರಲ್ಲಿ ಶ್ರಾವಕಾಚಾರಸಾರವನ್ನು ಬರೆದ (I,389) ಅಭಿನವಸಾರಚತುಷ್ಟಯಕರ್ತೃ ಎಂದು 1265 ರಲ್ಲಿ ಹುಟ್ಟಿದ ಬಿಳ್ಳೆಗುಡ್ಡದ ಶಾಸನದಲ್ಲಿ (1911ನೆಯ ವರ್ಷದ ಮೈಸೂರು ಶಾಸನದ ಇಲಾಖೆಯವರದಿ, ಪುಟಗಳು 48-49) ಉಕ್ತನಾದ, ಬಲಾತ್ಕಾರಗಣದ ಮಾಘನಂದಿಯೇ ಎಂದು ಊಹಿಸಿದ್ದಾರೆ. ಮಾಘನಂದಿಗೆ ಈ ಶಾಸನದಲ್ಲಿ ಹೇಳಿರುವ ಕಾಲವನ್ನು ಗ್ರಹಿಸಿ ಕಮಲಭವನು 1275ರಲ್ಲಿದ್ದನು ಎಂದು ಹೇಳುವುದನ್ನು ಬಿಟ್ಟು 1255 ರಲ್ಲಿದ್ದನು ಎಂದೇ ಹೇಳಿರುವುದಕ್ಕೆ ಕಾರಣ

ವೇನೋ ತಿಳಿಯಲಿಲ್ಲ. ಇದು ಹೇಗಾದರೂ ಇರಲಿ. ಕವಿ ಹೇಳಿರುವ ಗುರು ಗಳೆಲ್ಲಾ ದೇಶೀಯ ಗಣದವರು, ಭಾನುಕೀರ್ತಿ ಒಬ್ಬನು ಮಾತ್ರ ಕಾಣೂ ರ್ಗಣದವನು. ಕವಿ ಜಯಕೀರ್ತಿಯನ್ನು ದೇಶೀಯಗಣದವನೆಂದು ಹೇಳಿ ಅವನ ಹಿಂದೆ ಮಾಘನಂದಿಯನ್ನು ಹೇಳಿರುವುದರಿಂದ ಇವನೂ ಅದೇ ಗಣದವ ನಾಗಿರಬೇಕು; ಹಾಗಿಲ್ಲದ ಪಕ್ಷದಲ್ಲಿ ಭಾನುಕೀರ್ತಿಯು ವಿಷಯದಲ್ಲಿ ಬೇರೆ ಗಣ ವನ್ನು ಹೇಳಿದಂತೆ ಇಲ್ಲಿಯೂ ಹೇಳುತ್ತಿದ್ದನು. ಆದುದರಿಂದ ಕವಿ ಹೇಳುವ ದೇಶೀಯಗಣದ ಮಾಘನಂದಿಗೂ ಶಾಸನೋಕ್ತನಾದ ಬಲಾತ್ಕಾರ ಗಣದ ಮಾಘನಂದಿಗೂ ಏನೂ ಸಂಬಂಧವಿಲ್ಲ. ಹೀಗಿರುವುದರಿಂದ ನಾನು ಕಮಲ ಭವನಿಗೆ ಕೊಟ್ಟಿರುವ ಕಾಲವನ್ನು ಮಾರ್ಪಡಿಸಬೇಕಾದ ಆವಶ್ಯಕತೆ ಏನೂ ಇಲ್ಲ.

ಕೀರ್ತಿವರ್ಮ, ಬ್ರಹ್ಮಶಿವ

ಕೀರ್ತಿವರ್ಮನು (I, 129) ಚಾಳುಕ್ಯರಾಜನಾದ ತ್ರೈಲೋಕ್ಯಮಲ್ಲನ ಮಗನಲ್ಲ, ಆ ದೊರೆಯ ಹೆಸರನ್ನು ವಹಿಸಿದ್ದ ಒಬ್ಬ ಸಾಮಂತನ ಮಗನು ಎಂದು ಅಯ್ಯನವರು ಬರೆದಿದ್ದಾರೆ (ಪುಟಗಳು 204–205). ಇದು ನಿರಾಧಾ ರವಾದ ಮಾತು. ಏಕೆಂದರೆ ಕೀರ್ತಿವರ್ಮನ ಸಮಕಾಲಿಕನಾದ ಬ್ರಹ್ಮಶಿ ವನು ಅವನ ವಿಷಯವಾಗಿ ಬರೆದಿರುವ

ಜನತಾನಂದಂ ಚಳುಕ್ಯಾಭರಣ ನವನಿಪಾಲೋತ್ತಮಂ ಸಾರ್ವಭೌಮಂ।
ಜನಕಂ ತ್ರೈಲೋಕ್ಯಮಲ್ಲಂ ಸಕಲವಸುಮತೀವಲ್ಲಭಂ ವಿಕ್ರಮಾಂಕಾ॥
ಹ್ವನಿಪಂ ತಾನಗ್ರಜಾತಂ ತ್ರಿಭುವನಪತಿ ದೇವಾದಿದೇವಂ ಜಿನೇಂದ್ರಂ।
ತನಗಾಪ್ತಂ ಮತ್ತೆನಲ್ಕೇಂ ಪಿರಿಯನೊಜಗತೀನಾಥರೊಳ್ ಕೀರ್ತಿ
ವರ್ಮಂ॥

ಎಂಬ ಪದ್ಯದಲ್ಲಿ ಪ್ರಯೋಗಿಸಿರುವ ಚಳುಕ್ಯಾಭರಣಂ, ಅವನಿಪಾಲೋ ತ್ತಮಂ, ಸಾರ್ವಭೌಮಂ ಎಂಬ ವಿಶೇಷಣಗಳು ಕೀರ್ತಿವರ್ಮನ ತಂದೆಯಾದ ತ್ರೈಲೋಕ್ಯಮಲ್ಲನು ಚಾಳುಕ್ಯ ರಾಜನೆಂಬುದನ್ನು ಸ್ಪಷ್ಟಪಡಿಸುತ್ತವೆ. ಆದರೆ ಅಯ್ಯನವರು ತಮ್ಮ ಹೇಳಿಕೆಯನ್ನು ಸಾಧಿಸುವುದಕ್ಕೋಸ್ಕರ ಪದ್ಯದ ಮೊದಲು ಪಾದವೇ ಒಂದು ಪ್ರತ್ಯೇಕ ವಾಕ್ಯವು ಎಂದು ಪದ್ಧತಿಯಪ್ರಕಾರ ಅಪಾರ್ಥಮಾ ಡಿದ್ದಾರೆ. ಈ ಅಪಾರ್ಥವನ್ನು ಆವ ಕನ್ನಡ ಪಂಡಿತನೂ ಅಂಗೀಕರಿಸಲಾರನು ಇನ್ನು ಕೀರ್ತಿವರ್ಮನು 6ನೆಯ ವಿಕ್ರಮಾದಿತ್ಯನ ತಮ್ಮಂದಿರಾದ ಜಯಸಿಂಹ, ವಿಷ್ಣುವರ್ಧನ ವಿಜಯಾದಿತ್ಯ ಎಂಬವರಲ್ಲಿ ಒಬ್ಬನಾಗಿರಬಹುದೋ ಎಂದು ನಾನು ಊಹಿಸಿದುದಕ್ಕಾಗಿ ಆಕ್ಷೇಪಿಸಿ ಇವರಿಬ್ಬರಲ್ಲಿ ಒಬ್ಬರೂ 1125 ರಲ್ಲಿ ಬದುಕಿರಲಿಲ್ಲವೆಂದು ಸರಿಯಾದ ಆಧಾರವಿಲ್ಲದೆ ಬರೆದಿದ್ದಾರೆ (ಪುಟ 201).

ನಾನು ಹೇಳಿರುವುದು ಬರಿಯ ಊಹೆ. ವಿಕ್ರಮಾದಿತ್ಯನಿಗೆ ಕೀರ್ತಿವರ್ಮನು 3ನೆಯ ತಮ್ಮನಾಗಿದ್ದರೂ ಇರಬಹುದು ತ್ರೈಲೋಕ್ಯಮಲ್ಲನು 1068 ರಲ್ಲಿ ಗತಿಸಿದುದರಿಂದ ಅವನ ಮಗನಾದ ಕೀರ್ತಿವರ್ಮನ ಕಾಲವು 1100 ಎಂದು ಭಾವಿಸುವುದು ಉಚಿತವೆಂದು ಆಗಲೇ 1125ನ್ನು ವಾರ್ಪಡಿಸಿದ್ದೇನೆ. ಅಯ್ಯನವರ ಮತ್ತೊಂದಾಕ್ಷೇಪಣೆ ಏನೆಂದರೆ—1163ರಲ್ಲಿ ಗತಿಸಿದ ದೇವಕೀರ್ತಿಯ ಶಿಷ್ಯನ ಸಧರ್ಮನೆಂದು ಶ್ರ. ಬೆ 64 ರಲ್ಲಿ ಹೇಳಿರುವ ದೇವಚಂದ್ರನು ಸು. 1163ರಲ್ಲಿ ಇದ್ದಿರಬೇಕಾದುದರಿಂದ ಇವನು ಕೀರ್ತಿವರ್ಮನ ಗುರುವಲ್ಲ–ಎಂಬುದೇ (ಪುಟ 202). ಈ ಹೇಳಿಕೆಗೆ ಈ ಶಾಸನವನ್ನು ಚನ್ನಾಗಿ ಪರಿಶೀಲಿಸದೆ ಹೋದುದೇ ಮೂಲವು. ಈ ಶಾಸನವ 96ನೆಯ ಪಙ್ಕ್ತಿಯಲ್ಲಿ ದೇವಚಂದ್ರನ ಸಧರ್ಮ ಮಾಘನಂದಿ ಎಂದು ಹೇಳಿ ವಾಕ್ಯವು ಮುಗಿಯುತ್ತದೆ. ಮುಂದಣ 97–100 ಪಙ್ಕ್ತಿಗಳಲ್ಲಿ ದೇವಕೀರ್ತಿಯ ಶಿಷ್ಯರು ಉಕ್ತರಾಗಿದ್ದಾರೆ. ಇವರಿಗೂ ದೇವಚಂದ್ರನಿಗೂ ಅವ ಸಂಬಂಧವೂ ಇಲ್ಲ. ಏಕೆಂದರೆ–ಗಂಡವಿಮುಕ್ತನ ಸಧರ್ಮನೂ ರಾಘವಪಾಂಡವೀಯ ಕರ್ತನೂ ಆದ ಶ್ರುತಕೀರ್ತಿಯು ಅಣ್ಣನೆಂದು ಹೇಳಿರುವ ದೇವಚಂದ್ರನು ಗಂಡವಿಮುಕ್ತನ ಶಿಷ್ಯನಾದ ದೇವಕೀರ್ತಿಯ ಶಿಷ್ಯರ ಸಧರ್ಮನಾಗಿರುವುದು ಎಂದಿಗೂ ಸಾಧ್ಯವಲ್ಲ. ಅಯ್ಯನವರು ಇಲ್ಲಿಯೂ ಈ ಶ್ರುತಕೀರ್ತಿ ರಾಘವಪಾಂಡವೀಯವನ್ನು ಬರೆದವನಲ್ಲ ಎಂದು ಬರೆದಿದ್ದಾರೆ. ಇದು ತಪ್ಪು ಎಂದು ನಾಗಚಂದ್ರನ ವಿಷಯವಾಗಿ ವಿಚಾರಮಾಡಿದಾಗಲೇ ತೋರಿಸಿದ್ದೇನೆ.

ಬ್ರಹ್ಮಶಿವನು ಕೀರ್ತಿವರ್ಮನ ಸಮಕಾಲದವನಾದುದರಿಂದ ಅವನ ಕಾಲವೂ 1100 ಆಗುವುದು. ಆದುದರಿಂದ 1115 ರಲ್ಲಿ ಗತಿಸಿದ ಮೇಘಚಂದ್ರನ ಮಗ ವೀರಣಂದಿ ಬ್ರಹ್ಮಶಿವನ ಗುರುವಾಗಿರಲಾರದನು ಎಂಬ ಅಯ್ಯನವರ ಆಕ್ಷೇಪಣೆಗೆ (ಪುಟ 207) ಈಗ ಅವಕಾಶವಿಲ್ಲ.

ಅಭಿನವ ಶ್ರುತಮುನಿ

ಅಭಿನವ ಶ್ರುತಮುನಿ ಎಂಬ ಗ್ರಂಥಕರ್ತನು (I,422) ಶ್ರ. ಬೆ. 254ರಲ್ಲಿ ಹೇಳಿರುವನಲ್ಲ, 1371ರಲ್ಲಿ ಹುಟ್ಟಿದ ಸಂಜಸಗೂಡು 64 ರಲ್ಲಿ ಹೇಳಿರುವ ನೂತ್ನ ಶ್ರುತಮುನಿ ಎಂದು ಅಯ್ಯನವರು ಬರೆದಿದ್ದಾರೆ (ಪುಟಗಳು 208–209). ಆದರೆ ಆ ಎರಡು ಶಾಸನಗಳಲ್ಲಿಯೂ ಉಕ್ತರಾದ ಶ್ರುತಮುನಿಗಳು ಒಬ್ಬ ವ್ಯಕ್ತಿಗೇ ಅನ್ವಯಿಸುತ್ತವೆ ಎಂಬುದರಲ್ಲಿ ಅವ ಸಂಶಯವೂ ಇಲ್ಲ; ಏಕೆಂದರೆ ಇಬ್ಬರ ಗುರುಪರಂಪರೆಯೂ ಒಂದೇ ಆಗಿದೆ–ಅಭಯಚಂದ್ರ, ಶ್ರುತಮುನಿ, ಚಂದ್ರಕೀರ್ತಿ, ಅಭಿನವ ಶ್ರುತಮುನಿ; ಆದರೆ ಶ್ರ. ಬೆ. 254 ರಲ್ಲಿ ಚಂದ್ರಕೀರ್ತಿಯ ಹೆಸರನ್ನು ಹೇಳದೆ ಅಭಿನವ ಶ್ರುತಮುನಿ ಶ್ರುತಮುನಿಯ ಪ್ರಶಿಷ್ಯ

ಎಂದು ಹೇಳಿದೆ. ಇಷ್ಟೇ ವ್ಯತ್ಯಾಸ. ಅಲ್ಲದೆ ಶ. ಬೆ. 254 ರಲ್ಲಿ ಉಕ್ತನಾದ ಅಭಿನವ ಶ್ರುತಮುನಿ 1398ಕ್ಕೆ ಈಚೆ ಇದ್ದಿರಬೇಕು ಎಂದು ಅಯ್ಯನವರು ಹೇಳುತ್ತಾರೆ. ಈ ಹೇಳಿಕೆಗೆ ಆಧಾರವು ಏನಂತೆ ತೋರುವುದಿಲ್ಲ. ಈ ಶಾಸನದ 87ನೆಯ ಪಙ್ಕ್ತಿಯಿಂದ ಶ್ರುತಕೀರ್ತಿ ವಿಶ್ವವಿದ್ಯಾವಿನೋದನ ಅಥವಾ ಅಭಿನವ ಶ್ರುತಮುನಿಯು (77ನೆಯ ಪಙ್ಕ್ತಿಯನ್ನು ನೋಡಿ) ಶಿಷ್ಯನೆಂದು ತಿಳಿಯುತ್ತದೆ. ಆದುದರಿಂದ ಶ್ರುತಕೀರ್ತಿಯಾದನೆಲೆ ಬರುವ ಗುರುಗಳೆಲ್ಲರೂ ಅಭಿನವ ಶ್ರುತಮುನಿಗೆ ಈಚೆಯವರಾಗಿರಬೇಕು. ಇದರಿಂದ ನಾನು ಅಭಿನವ ಶ್ರುತಮುನಿಗೆ ಕೊಟ್ಟಿರುವ ಕಾಲವು ಸರಿಯಾಗಿದೆ ಎಂದು ತಿಳಿಯಬಹುದು.

ಶಿಶುಮಾಯಣ

1233ರಿಂದ ದೇವರಾಜನ (II,43) ಕಾಲವಾದ 1410 ರ ವರೆಗೆ ಸಾಂಗತ್ಯಗ್ರಂಥಗಳಿಲ್ಲವಾದುದರಿಂದ ಶಿಶುಮಾಯಣನು (I,349) 1233 ರಷ್ಟು ಹಿಂದೆ ಗ್ರಂಥರಚನೆಮಾಡಿರಲಾರನು ಎಂದು ಹೇಳಿ, ಈ ಕವಿ ಹೇಳಿರುವ ಜೈನ ಗುರುಗಳ ಸಮೀಕರಣಕ್ಕಾಗಿ ವಿಚಿತ್ರವಾದ ಊಹೆಗಳನ್ನು ಮಾಡಿ, ಕೊನೆಗೆ ಕವಿ 17ನೆಯ ಶತಮಾನದ ಮಧ್ಯಭಾಗದಲ್ಲಿದ್ದನೆಂದು ಅಯ್ಯನವರು ಸಿದ್ಧಾಂತ ಮಾಡಿದ್ದಾರೆ (ಪುಟಗಳು 228-231) ಮೇಲೆ ಹೇಳಿದ ಕಾಲದ ಸಾಂಗತ್ಯಗ್ರಂಥಗಳು ಈಗ ದೃಷ್ಟಿಗೋಚರವಾಗದ ಮಾತ್ರಕ್ಕೆ ಆ ಕಾಲದಲ್ಲಿ ಅಂಥ ಗ್ರಂಥಗಳು ರಚಿತವಾಗಲೇ ಇಲ್ಲ ಎಂದು ಹೇಳಲಾಗುವುದಿಲ್ಲ. ಮುಂದೆ ಶೋಧನೆಮಾಡಿದರೆ ಅವು ದೊರೆಯಬಹುದು. ಶಿಶುಮಾಯಣನು ತನ್ನ ಗ್ರಂಥಗಳಲ್ಲಿ ಒಂದನ್ನು ಬೆಳುಕೆರೆಯ ಪ್ರಭು ಗುಮ್ಮಟದೇವನ ಪ್ರೇರಣೆಯಿಂದ ಬರೆದಂತೆ ಸ್ಪಷ್ಟವಾಗಿ ಹೇಳಿದ್ದಾನೆ. ಈ ಗುಮ್ಮಟದೇವನು 1313 ರಲ್ಲಿ ಹುಟ್ಟಿದ ಶ. ಬೆ. 65 ರಲ್ಲಿ ಉಕ್ತನಾಗಿರುವ ಬೆಳುಕೆರೆಯ ಪ್ರಭು ಗುಮ್ಮಟ್ಟನಿಂದ ಅಭಿನ್ನನಾಗಿರಬೇಕು. ಇದರಿಂದ ಈ ಕವಿ 1313 ರಲ್ಲಿ ಇದ್ದನೆಂಬುದಕ್ಕೆ ಆಸ್ಪಾರವು ದೊರೆತಂತಾಯಿತು. ಅವನು 1233ಕ್ಕೆ ಸಂಪಾದಿಯಾದ ಕಾಲವನ್ನು ಸೂಚಿಸಿರುವಂತೆ ತೋರುತ್ತದೆ. ಇದು ನಿಜವಾಗಿದ್ದಪಕ್ಷದಲ್ಲಿ ಕವಿ ಹೇಳುವ ಗುಮ್ಮಟನು ಶಾಸನೋಕ್ತನಾದ ಗುಮ್ಮಟನ ತಾತನಾಗಿರಬಹುದೆಂದು ನನಗೆ ತೋರುತ್ತದೆ- ಕವಿ 17ನೆಯ ಶತಮಾನದವನು ಎಂಬುದಕ್ಕೆ ಇವ ಆಧಾರವೂ ಇಲ್ಲ.

ನಾಗವವರ್ಮಾಚಾರ್ಯ.

ನಾಗವವರ್ಮಾಚಾರ್ಯನ (I, 87) ವಿಷಯದಲ್ಲಿ ನಾನು ಷಿಕಾರಿಪುರ 129, 130 ಇವುಗಳಲ್ಲಿ ಉಕ್ತರಾದ ಇಬ್ಬರು ಉದಯಾದಿತ್ಯರ ಬಿರುದುಗಳನ್ನು ವಿಶ್ಲೇಷಮಾಡಿರುವುದು ತಪ್ಪೆಂದು ಅಯ್ಯನವರು ತೋರಿಸಿರುವುದು (ಪುಟಗಳು

234–235) ನ್ಯಾಯವೇ ಸರಿ. ನನುಗೆ ಬೇಕಾದ ಉದಯಾದಿತ್ಯನು 129 ರಲ್ಲಿ ಉಕ್ತನಾದವನು. ಈ ತಪ್ಪಿಗೆ ಮೂಲವೇನೋ ತಿಳಿಯಲಿಲ್ಲ; ಬಹುಶಃ ನೆ॥ರೈಸ್ ಮಾಡಿರುವ ಈ ಇಬ್ಬರು ಉದಯಾದಿತ್ಯರ ಸಮೀಕರಣವೇ (ಶಿವಮೊಗ್ಗ I, ಪೀಠಿಕೆ 21) ಆಗಿರಬಹುದು

ಅಯ್ಯನವರು ದುರ್ಬಲವಾದ ಆಧಾರಗಳ ಮೇಲೆ ಚಂದ್ರಚೂಡಾಮಣಿ ಶತಕದಲ್ಲಿ ಉಕ್ತರಾದ ಉದಯಾದಿತ್ಯ ನಾಗವರ್ಮಾಚಾರ್ಯರು ಷಿಕಾರಿಪುರ 129 ರಲ್ಲಿ ಹೇಳಿರುವ ಅದೇ ಹೆಸರಿನ ವ್ಯಕ್ತಿಗಳಿಂದ ಭಿನ್ನರೆಂದು ಹೇಳುತ್ತಾರೆ (ಪುಟ135). ಅವರ ಆಧಾರಗಳಾವುವೆಂದರೆ—1. ಶಾಸನವು ನಾಗವರ್ಮಾಚಾರ್ಯನು ಉದಯಾದಿತ್ಯನ ಸಂಧಿವಿಗ್ರಹಿ ಎಂದು ಹೇಳುವುದಿಲ್ಲ; 2. ರಾಜನಾದ ಭುವನೈಕಮಲ್ಲನು ತನ್ನ ಸೇವಕನ ಕೈಯಕೆಳಗಿರುವವನ ಕಾಲನ್ನು ತೊಳೆಯುವಾರನು—ಎಂಬುವೇ. ಗ್ರಂಥದಲ್ಲಿ ಉಕ್ತವಾದ ಒಂದೊಂದಂಶವೂ ಶಾಸನದಲ್ಲಿ ಹೇಳಿಯೇ ಇರಬೇಕು ಎಂಬ ನಿಯಮವೇನೂ ಇಲ್ಲ. ಸಂಧಿ ವಿಗ್ರಹಿ ಎಂಬವನು ಕೇವಲ ಸೇವಕನಾಗಿಯೇ ಇರಬೇಕೆಂಬುದಿಲ್ಲ. ಅವನು ಬ್ರಾಹ್ಮಣನಾಗಿದ್ದರೆ ಸೇವಕನಾದರೂ ಅವನ ಕಾಲನ್ನು ಮೇಲಣ ಅಧಿಕಾರಿ ಸಮಯ ಬಿದ್ದಾಗ ತೊಳೆಯುವುದು ಹಿಂದೆಗೆವುದಿಲ್ಲ. ಪ್ರಕೃತ ವಿಷಯವನ್ನು ಈ ರೀತಿ ಸ್ಪಷ್ಟಪಡಿಸುತ್ತೇನೆ—ಚಂದ್ರಚೂಡಾಮಣಿ ಶತಕದಲ್ಲಿ ಉದಯಾದಿತ್ಯನೆಂಬ ಒಬ್ಬ ಅಧಿಕಾರಿಯೊಡನೆ ಸಂಬಂಧವುಳ್ಳ ಒಬ್ಬ ನಾಗವರ್ಮಾಚಾರ್ಯನು ಉಕ್ತನಾಗಿದ್ದಾನೆ; ಪರಸ್ಪರ ಸಂಬಂಧವುಳ್ಳ ಅದೇ ಹೆಸರಿನ ಇಬ್ಬರು ವ್ಯಕ್ತಿಗಳು ಒಂದೇ ಒಂದು ಶಾಸನದಲ್ಲಿ (ಷಿಕಾರಿಪುರ 129) ಉಕ್ತರಾಗಿದ್ದಾರೆ ; ಈ ಸಾಮ್ಯವು ಕಾಕತಾಳೀಯವಾಗಿರಲಾರದು ; ಗ್ರಂಥೋಕ್ತ ವ್ಯಕ್ತಿಗಳು ಶಾಸನೋಕ್ತ ವ್ಯಕ್ತಿಗಳಿಂದ ಅಭಿನ್ನರಾಗಿರಬಹುದು ಎಂದು ಭಾವಿಸುವುದು ತಪ್ಪೇ ?

ಬಳಿಕ ಅಯ್ಯನವರು ಈ ಶತಕವು ನಾಗವರ್ಮಾಚಾರ್ಯ ಕೃತವಲ್ಲವೆಂಬ ತಮ್ಮ ಕಲ್ಪನೆಯನ್ನು ಸಾಧಿಸಲಿಕ್ಕೆ ಪದ್ಧತಿಯ ಪ್ರಕಾರ

ಉದಯಾದಿತ್ಯನ ಸಂಧಿವಿಗ್ರಹಿಲಲಾಮಂ ನಾಗವರ್ಮಂ ಸಮುಂ ।
ತುದಯಾದಿತ್ಯನ ರಾಜಭಾರಿಯೆ ನಿಸಿರ್ದಾತ್ಮಾ ಗ್ರಜಂ ಭಾಸ್ಕರಂ ॥
ಮೊದಲಾದೀಶ್ವರ ಭಕ್ತರಪ್ಪವರ್ಗೆಪೇಲ್ದಿಂದ್ರಜ್ಞಾನಸಾರಂ ಸುಖಾ ।
ಸ್ಪದಮೊಲ್ದೊದುಗೆ ಭುಕ್ತಿಮುಕ್ತಿ ಫಲಮುಂ ಶ್ರೀಚಂದ್ರಚೂಡಾಮಣೀ॥

ಎಂಬ ಪದ್ಯಕ್ಕೆ ಅಪಾರ್ಥ ಮಾಡಿದ್ದಾರೆ(ಪುಟ 236). ಈ ಪದ್ಯದ ಮೊದಲನೆಯ ಪಾದದಲ್ಲಿರುವ ನಾಗವರ್ಮಂ ಎಂಬುದು 3 ನೆಯ ಪಾದದಲ್ಲಿರುವ ಪೇಲ್ದಿ ಎಂಬುದರೊಡನೆ ಅನ್ವಯಿಸುವುದಿಲ್ಲವಂತೆ ; ಸಮುಂತು ಎಂಬ ಪದದ ಪ್ರಯೋಗದಿಂದ ನಾಗವರ್ಮಂ ಎಂಬುದು ಈಶ್ವರಭಕ್ತರ್ ಎಂಬುದರೊಡನೆಸೇರುತ್ತದಂತೆ.

ಹೀಗಾದರೆ ಆತ್ಮಾಗ್ರಜಂ ಎಂಬುದರಲ್ಲಿ ಆತ್ಮ ಶಬ್ದಕ್ಕೆ ಪ್ರಯೋಜನವೇನೋ ಪೇಳ್ದಿ ಎಂಬುದಕ್ಕೆ ಕರ್ತೃವಾವುದೋ ತಿಳಿವುದಿಲ್ಲ. ಕನ್ನಡದಲ್ಲಿ ಸ್ವಲ್ಪಮಟ್ಟಿಗೆ ಕಾವ್ಯಪರಿಚಯವಿರುವರೂ ಕೂಡ ಈ ವಿಚಿತ್ರ ವ್ಯಾಖ್ಯಾನವನ್ನು ಒಪ್ಪಲಾರರು. ಆಮೇಲೆ ಅಯ್ಯನವರು ಆರು ಉದಯಾದಿತ್ಯರನ್ನು ಹೇಳುತ್ತಾರೆ. ಆದರೆ ನಮಗೆ ಪಿಕಾರಿಪುರ 129 ರಲ್ಲಿರುವಂತೆ ನಾಗವರ್ಮಾಚಾರ್ಯನೊಡನೆ ಸಂಬಂಧವುಳ್ಳ ಉದಯಾದಿತ್ಯನು ಬೇಕೆ ಹೊರತು ಉಳಿದವರು ಬೇಕಿಲ್ಲ. ಆದುದರಿಂದ ನನ್ನ ಬರೆವಣಿಗೆಯನ್ನು ಮಾರ್ಪಡಿಸುವದಕ್ಕೆ ಸಾಕಾದ ಕಾರಣಗಳು ದೊರೆವನರೆಗೆ ಹಾಗೆಯೇ ಇಟ್ಟುಕೊಳ್ಳುತ್ತೇನೆ.

ಮೌಕ್ತಿಕ ಕವಿ.

ಮೌಕ್ತಿಕಕವಿಗೆ (I, 128) ನಾನು ಹೇಳಿರುವ ಸು. 1120 ಎಂಬ ಕಾಲಕ್ಕೆ ಆಧಾರವಿಲ್ಲ ಎಂದು ಅಯ್ಯನವರು ಬರೆದಿದ್ದಾರೆ. (ಪುಟಗಳು 238-240) ಅದೇ ಕಾಲವೆಂದು ನಾನು ಖಂಡಿತವಾಗಿ ಹೇಳಿಲ್ಲ; ಕೆಲವು ಸಂದರ್ಭಗಳಿಂದ ಹಾಗಿರಬಹುದು ಎಂದು ಊಹಿಸಿದ್ದೇನೆ. ಜೈನರಾದ ಕೊಂಗಾಳ್ವರಾಜರ ಆಳಿಕೆ ಸು. 1100 ಕ್ಕಿಂತ ಈಚೆ ಬಹಳ ದಿನ ನಡೆಯಲಿಲ್ಲ, (ಹಾಸನ ಶಾಸನಗಳು, ಪೀಠಿಕೆ, ಪುಟ 7). ಕವಿಯೂ ಜೈನನು, ಇವನು ಸು. 1120 ರಲ್ಲಿ ವೀರಕೊಂಗಾಳ್ವರಾಜನು ಒಬ್ಬ ಜೈನ ಗುರುವಿಗೆ ಕೊಟ್ಟ ಪೆರ್ಣ್ಣೆಂಗಡಲು ಎಂಬ ಸ್ಥಳವನ್ನು ಹೇಳುತ್ತಾನೆ. ಜೈನರಾಜರ ಆಳಿಕೆ ಕೊನೆಗಂಡ ಮೇಲೆ ಜೈನಮತದ ಪ್ರಾಬಲ್ಯವು ಕಡಮೆಯಾಯಿತು ಎಂಬುದು ನ್ಯಾಯವಾಗಿಯೇ ಇದೆ. ಕವಿ ಕೊಂಗಾಳ್ವರಾಜರ ಆಶ್ರಯದಲ್ಲಿ ಗ್ರಂಥರಚನೆ ಮಾಡಿದನೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ನಾನು ಹೇಳಿರುವ ಕಾಲವು ಅಸಮಂಜಸವಲ್ಲ.

ಈ ಸಂದರ್ಭದಲ್ಲಿ ಅಯ್ಯನವರು ಕೆಲವು ವಿಚಿತ್ರವಾದ ಮಾತುಗಳನ್ನು ಬರೆದಿದ್ದಾರೆ. ಮೂರು ಶಾಸನಗಳಲ್ಲಿ ಮಾತ್ರ ಉಕ್ತವಾಗಿ ಉಳಿದವುಗಳಲ್ಲಿ ಉಕ್ತವಾಗದೆ ಇರುವುದರಿಂದ ಪೆರ್ಣ್ಣೆಂಗಡಲು ಪ್ರಸಿದ್ಧವಾದ ಸ್ಥಳವಲ್ಲ ಎನ್ನುತ್ತಾರೆ. ಒಂದು ಸ್ಥಳದ ಪ್ರಸಿದ್ಧಿ ಅದು ಹೇಳಲ್ಪಟ್ಟಿರುವ ಶಾಸನಗಳ ಸಂಖ್ಯೆಯಿಂದ ನಿರ್ಣೀತವಾಗಬೇಕೆಂಬ ನಿಯಮವೇನೂ ಇಲ್ಲ. ಅಲ್ಲದೆ ರಾಮನಿಂದ ಪ್ರತಿಷ್ಠಿತವಾದ ಚಂದ್ರನಾಥ ಜಿನಬಿಂಬವನ್ನುಳ್ಳ ತ್ರಿಭುವನ ತಿಲಕ ಎಂಬ ಬಸ್ತಿ ಪೆರ್ಣ್ಣೆಂಗಡಲಲ್ಲಿ ಇದ್ದಿತು ಎಂದು ಇನ್ನೆಲ್ಲಿಯೂ ಹೇಳಿಲ್ಲವಾದುದರಿಂದಲೂ ಕೊಲ್ಲಾಪುರದಲ್ಲಿ ಚಂದ್ರನಾಥ ಜಿನಬಿಂಬವನ್ನುಳ್ಳ ತ್ರಿಭುವನ ತಿಲಕ ಬಸ್ತಿಯಿರುವುದರಿಂದಲೂ

ಕೃತಕೃತ್ಯಂ ಮೌಕ್ತಿಕಂ ಸತ್ಕವಿವಿರಚಿಸಿದೀ ಸಾರಮುಪ್ಪಟ್ಟಕಶ್ರೀ ।
ಸ್ತುತಿಯುಂ ಪೇಲಿಪ್ಪೊದ್ದುವಾಲಪ್ಪವಗೆ ನಿರುಪಮಾನಂದಮುಂ ಮಾ
ಲಿಕ್ಕಿಸೀತಾ ॥

ಪತಿರಾಮಸ್ಥಾಪಿತೋದ್ಯತ್ತ್ರಿ ಭುವನತಿಲಕಾಲಂಕೃತ ಖ್ಯಾತಿನಾಮಾಂ ।
ಕಿತಮಾಗೊಪ್ಪುವ ಪೆಣ್ಣೆಂಗಡಲ ಪುರವರಾಧೀಶ್ವರಂ ಜಂದ್ರನಾಥಾ ॥

ಎಂಬ ಪದ್ಯದಲ್ಲಿ ಕವಿ ಹೇಳಿರುವ ಬಸ್ತಿಯೂ ಜಿನಬಿಂಬವೂ ಕೊಲ್ಲಾಪುರಕ್ಕೆ ಅನ್ವಯಿಸಬಹುದು ಎಂದು ಅಯ್ಯನವರು ಹೇಳುತ್ತಾರೆ ಕವಿ ಕಂಠೋಕ್ತವಾಗಿ ಆ ಬಸ್ತಿ ಪೆಣ್ಣೆಂಗಡಲಲ್ಲಿದ್ದಿತು ಎಂದು ಹೇಳಿರುವಾಗ ಅದು ಮತ್ತೊಂದು ಕಡೆ ಇದ್ದಿತು ಎಂದು ಕಲ್ಪಿಸುವುದಕ್ಕೆ ನಾಸಾರಾಂ? ಜಿನಬಿಂಬವು ರಾಮನಿಂದ ಪ್ರತಿಷ್ಠಿತವಾದುದು ಎಂಬುದಕ್ಕೆ ಮೈಸೂರು ಸೀಮೆಯಲ್ಲಿಯೇ ಎಡತೊರೆ 26 ರಲ್ಲಿ ಸುತ್ತೊಂದುದಾಹರಣವು ದೊರೆಯುತ್ತದೆ: ಇದರಲ್ಲಿ ಚಿಕ್ಕಹನಸೋಗೆಗಾ ಮದ ಶಾಂತೀಶ್ವರ ಬಸ್ತಿಯು ಬಿಂಬವು "ದಶರಥಸುತನುಂ ಲಕ್ಷ್ಮಣಾಗ್ರಜನುಂ ಸೀತಾವಲ್ಲಭನುಂ ಇಕ್ಷ್ವಾಕು ಕುಳಜನುಮಪ್ಪ ರಾಮನ ಪ್ರತಿಷ್ಠೆ" ಎಂದು ಹೇಳಿದೆ. ಕವಿ ಹೇಳಿರುವಂತೆ ಪೆಣ್ಣೆಂಗಡಲಲ್ಲಿ ತ್ರಿಭುವನ ತಿಲಕ ಎಂಬ ಬಸ್ತಿ ಏಕಿರಕೂಡದು ?

ಶ್ರೀವರ್ಧದೇವ

ಶ್ರೀವರ್ಧದೇವನು (I, 7) ತುಂಬುಲೂರಾಚಾರ್ಯನಿಂದ ಭಿನ್ನನೆಂದೂ, ತದ್ರಚಿತವಾದ ಚೂಡಾಮಣಿ ಸಂಸ್ಕೃತಕಾವ್ಯವಾಗಿರಬೇಕು ಅದಕ್ಕೂ ತುಂಬುಲೂರಾಚಾರ್ಯಕೃತವಾದ ಚೂಡಾಮಣಿಯೆಂಬ ಕನ್ನಡ ವ್ಯಾಖ್ಯಾನಕ್ಕೂ ಸಂಬಂಧವಿಲ್ಲ ಎಂದೂ, ಶ್ರೀ ವರ್ಧದೇವನು ಸು. 710ರಲ್ಲಿದ್ದನು, ನಾನು ಹೇಳಿರುವಂತೆ ಸು. 650ರಲ್ಲಿ ಅಲ್ಲ ಎಂದೂ ಒರೆದಿದ್ದಾರೆ (ಪುಟಗಳು 243–245). ಶ್ರೀವರ್ಧದೇವನ ಚೂಡಾಮಣಿಕಾವ್ಯ, ತುಂಬ.ಲೂರಾಚಾರ್ಯನ ಚೂಡಾಮಣಿವ್ಯಾಖ್ಯಾನ ಇವುಗಳ ಅಭಿನ್ನತೆಯ ವಿಷಯದಲ್ಲಿ ನನ್ನ ಸಂದೇಹವನ್ನು ಹಿಂದೆಯೇ (I, 9) ತಿಳಿಸಿದ್ದೇನೆ. ಅಲ್ಲದೆ ನನ್ನ ಯೂನಿವರ್ಸಿಟಿ ರೀಡರ್ಷಿಪ್ ಉಪನ್ಯಾಸದಲ್ಲಿ ಶ್ರ. ಬೆ. 67ರಲ್ಲಿ ಹೇಳಿರುವ ಚೂಳಾಮಣಿಕಾವ್ಯವು ಶ್ರೀವರ್ಧದೇವ ಎಂಬ ನಾಮಾಂತರವುಳ್ಳ ತೋಲಾಮೊಳಿದೇವನೆಂಬ ಜೈನಕವಿಯಿಂದ ರಚಿತವಾದ ಚೂಳಾಮಣಿಯೆಂಬ ತಮಿಳು ಪುರಾತನಕಾವ್ಯವಾಗಿರಬಹುದು ಎಂದು ಹೇಳಿದ್ದೇನೆ. ಅಯ್ಯನವರು ಶ್ರೀವರ್ಧದೇವನಿಗೆ ಕೊಟ್ಟಿರುವ ಕಾಲಕ್ಕೆ ಕೆಲವು ನಿರಾಧಾರವಾದ ಕಲ್ಪನೆಗಳೇ ಮೂಲವಾಗಿವೆ.ಅವರು ಶ್ರ.ಬೆ. 67ರಲ್ಲಿ ಶ್ರೀವರ್ಧದೇವನ ಶಿಷ್ಯ ಮಹೇಶ್ವರ,ಅವನ ಶಿಷ್ಯ ಅಕಳಂಕ ಎಂದು ಹೇಳಿದೆ ಎಂದು ತಿಳಿದುಕೊಂಡಿದ್ದಾರೆ.ಆದರೆ ಶಾಸನದಲ್ಲಿ ಹಾಗೆ ಹೇಳಿಲ್ಲ. ಅಲ್ಲದೆ ಶ್ರ.ಬೆ. 254ನ್ನು ನಿರ್ದೇ

ಶಿಸಿ ನೃಪತುಂಗನಿಂದ ಪೂಜಿತನಾದ ಮತ್ತು 783ರಲ್ಲಿ ಹರಿವಂಶವನ್ನು ಬರೆದ, ಜಿನಸೇನನಿಗೆ ಅಕಳಂಕನು ಗುರುವಾಗಿದ್ದನು ಎನ್ನುತ್ತಾರೆ. ಈ ಶಾಸನವು ಹೀಗೆ ಹೇಳುವುದಿಲ್ಲ ; ಭಟ್ಟಾಕಳಂಕನ ಹೆಸರನ್ನು ಹೇಳಿ ಆಮೇಲೆ ಮಹಾಪುರಾಣಕರ್ತೃವಾದ ಜಿನಸೇನನ ಹೆಸರನ್ನು ಹೇಳುತ್ತದೆ. ಹರಿವಂಶವನ್ನು 783ರಲ್ಲಿ ಬರೆದ ಜಿನಸೇನನೂ ಮಹಾಪುರಾಣವನ್ನು ಸು. 838ರಲ್ಲಿ ಬರೆದ ಜಿನಸೇನನೂ ಒಬ್ಬನೇ ಎಂದು ಅಯ್ಯನವರು ಭ್ರಮಿಸಿದ್ದಾರೆ. ಅಕಳಂಕನು ಜಿನಸೇನನ ಗುರು ಎಂದು ಎಲ್ಲಿಯೂ ಹೇಳಿಲ್ಲ. ಆದುದರಿಂದ ಅಕಳಂಕನಿಗೆ ಹೇಳಿರುವ 770ಕ್ಕೂ ಅವರಿಂದ ಊಹಿಸಿ ಶ್ರೀವರ್ಧದೇವನಿಗೆ ಹೇಳಿರುವ 710ಕ್ಕೂ ಆಧಾರವಿಲ್ಲ.

ಗುಣನಂದಿ

ಅಯ್ಯನವರು ಒಂದುಕಡೆ (ಪುಟ 247) ಗುಣನಂದಿ 700ಕ್ಕೆ ಹಿಂದೆ ಇದ್ದಿರಬೇಕು ನಾನು ಹೇಳಿರುವಂತೆ ಸು. 900ರಲ್ಲಿ (I, 22) ಅಲ್ಲ ಎಂದೂ ಮತ್ತೊಂದು ಕಡೆ (ಪುಟ 248) ಅವನು ಸು. 1250ರಲ್ಲಿ ಇದ್ದಿರಬೇಕು ಎಂದೂ ಹೇಳಿದ್ದಾರೆ. ಈ ಹೇಳಿಕೆಗಳಿಗೆ ಆಧಾರವು ಬಹಳ ದುರ್ಬಲವಾದುದು. ಮೊದಲ ಹೇಳಿಕೆಗೆ ಗುಣನಂದಿ ಬೌದ್ಧರನ್ನು ವಾದದಲ್ಲಿ ಸೋಲಿಸಿದ ಅಕಳಂಕನಿಗೆ ಹಿಂದೆ ಇದ್ದನೆಂಬ ಕಲ್ಪನೆಯೇ ಮೂಲವು. ಶ್ರ. ಬೆ. 127 ರಲ್ಲಿ ಸ್ಥೂಲವಾಗಿ ಗುಣನಂದಿ ಬಲಾಕಪಿಂಛನ ಶಿಷ್ಯನೆಂದು ಹೇಳಿದೆ. ಈ ಹೇಳಿಕೆಯನ್ನೇ ಶ್ರ. ಬೆ. 117,140,66 ಇವುಗಳಲ್ಲಿಯೂ ಅನುವಾದಮಾಡಿದೆ. ಆದರೆ ಗುಣನಂದಿ ಬಲಾಕಪಿಂಛನ ಸಾಕ್ಷಾಚ್ಛಿಷ್ಯನಲ್ಲ, ಅವನ ಶಿಷ್ಯಪರಂಪರೆಗೆ ಸೇರಿದವನು ಎಂಬುದು ಶ್ರ. ಬೆ. 64ರಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಸಮಂತಭದ್ರ, ಪೂಜ್ಯಪಾದ, ಅಕಳಂಕ ಮುಂತಾದವರು ಬಲಾಕಪಿಂಛನ ಶಿಷ್ಯಪರಂಪರೆಗೆ ಸೇರಿದವರು ಎಂದು ಕಂಠೋಕ್ತವಾಗಿ ಹೇಳಿದೆ. ಗುಣನಂದಿ ಪೂಜ್ಯಪಾದನ ಜೈನೇಂದ್ರ ವ್ಯಾಕರಣಕ್ಕೆ ವ್ಯಾಖ್ಯಾನವನ್ನು ಬರೆದಿರುವುದು ನಮಗೆ ಗೊತ್ತೇ ಇದೆ. ಅಯ್ಯನವರು ತಮ್ಮ ಹೇಳಿಕೆಗೆ ಪಂಪನು ಪ್ರಮಾಣವೆಂದು ಹೇಳುತ್ತಾರೆ. ಪಂಪನು ತನ್ನ ಗುರು ದೇವೇಂದ್ರನನ್ನು ಹೇಳಿ ಆಮೇಲೆ ಅಕಳಂಕನೆಂಬ ಒಬ್ಬ ಗುರುವನ್ನು ಹೇಳುತ್ತಾನೆ. ಈ ಅಕಳಂಕನು ಪಂಪನ ಸಮಕಾಲದವನಾಗಿರಬೇಕೇ ಹೊರತು ಇವನ ಕಾಲಕ್ಕೆ ಹಿಂದೆ ಬೌದ್ಧರನ್ನು ನಿಗ್ರಹಿಸಿದ ಅಕಳಂಕನು ಬೇರೆ ಅಲ್ಲ. ಶ್ರ. ಬೆ. 127 ರಂತೆ ದೇವೇಂದ್ರನಿಗೂ ಮೇಘಚಂದ್ರನಿಗೂ ಮಧ್ಯೆ ಏಳು ತಲೆಗಳಾಗುತ್ತವೆ ಎಂಬ ನನ್ನ ಹೇಳಿಕೆ (I,23) ತಪ್ಪಾಗಿರಬಹುದು ; ಆದರೆ ಇನ್ನೂ ಕೆಲವು ತಲೆಗಳಿದ್ದರೂ ನಾನು ಗುಣನಂದಿಗೆ ಹೇಳಿರುವ ಕಾಲಕ್ಕೆ ಭಂಗವೇನೂ ಇಲ್ಲ.

ಗುಣನಂದಿ ಸು. 1250 ರಲ್ಲಿದ್ದನು ಎಂಬ ಅಯ್ಯನವರ ಎರಡನೆಯ ಹೇಳಿಕೆಗೆ ಕೊಟ್ಟಿರುವ ಕಾರಣವೇನೆಂದರೆ—ನೃಪತುಂಗ ನಾಗವರ್ಮರಂಥ ಹಿಂದಣ ಕವಿಗಳೂ ಮಲ್ಲಿಕಾರ್ಜುನ, ಕೇಶಿರಾಜರ ಹೊರತು ಅಜಣ್ಣ, ಜನ್ನ, ಪಾರ್ಶ್ವ, ಗುಣವರ್ಮ ಇವರಂಥ ಈಚೆಯ ಕವಿಗಳೂ ಕೂಡ ಅವನ ಹೆಸರನ್ನು ಹೇಳಿಲ್ಲ ಎಂಬುದೇ. ಒಬ್ಬ ಕವಿಯ ಹೆಸರನ್ನು ಇನ್ನು ಕೆಲವರು ಕವಿಗಳು ಹೇಳದ ಮಾತ್ರಕ್ಕೆ ಆ ಕವಿ ಅವರಿಗಿಂತ ಈಚೆ ಇದ್ದಿರಬೇಕು ಎಂಬ ವಾದವು ಪರಿಹಾಸಾಸ್ಪದವೇ ಸರಿ.

ಕಂತಿ

ಕಂತಿಯ (I, 110) ವಿಷಯವಾಗಿ ಮಾತನಾಡುತ್ತ ಅಯ್ಯನವರು ಅಸಂಬದ್ಧವಾದ ಹಲವು ವಿಷಯಗಳನ್ನು ಪ್ರತಿಪಾದಿಸಿ (ಪುಟಗಳು 149-159) ಕೊನೆಗೆ ಆ ಹೆಸರಿನ ಕಬ್ಬಿಗಿತಿಯೇ ಇರಲಿಲ್ಲ ಎಂದು ಸಿದ್ಧಾಂತವಾಡಿದ್ದಾರೆ. ಸು. 1560ರಲ್ಲಿದ್ದ ಬಾಹುಬಲಿಕವಿ ತನ್ನ ನಾಗಕುಮಾರ ಚರಿತೆಯಲ್ಲಿ ಕಂತಿಯ ವಿಷಯವಾಗಿ ಬರೆದಿರುವ

ವಿಬುಧ ಜನಸ್ತುತ ಶ್ರೀವೀರಪೋಡೆಯ ।
ಸಭೆಗೆ ಮಂಗಳ ಲಕ್ಷ್ಮಿಯೆನಿಪ ।
ಶುಭಗುಣ ಚರಿತೆ ಕಂತಿಕೆಯರ ಪೊಗಲ್ವೆನಾ । ನಭಿನವವಾಗ್ದೇವಿಯರ ॥

ಎಂಬ ಪದ್ಯದಿಂದ ಅವಳು ದೋರಸಮುದ್ರದ ರಾಜನ ಸಭೆಯಲ್ಲಿ ಪಂಡಿತೆಯಾಗಿದ್ದುದು ಸ್ಪಷ್ಟವಾಗುತ್ತದೆ. ಬಾಹುಬಲಿ ನೇಮಿಚಂದ್ರನ ಲೀಲಾವತಿಯನ್ನು ಹೇಳುವಾಗ ಬಾಣನ ಕಾದಂಬರಿಯನ್ನು ಸುಡಿಸಿದ ಇತಿಹಾಸವನ್ನು ಹೇಳುವುದರಿಂದ (I, 259) ಅವನನ್ನು ನಂಬಕೂಡದು ಎಂದು ಅಯ್ಯನವರು ಹೇಳುತ್ತಾರೆ. ಬಾಹುಬಲಿ 16ನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಇತಿಹಾಸವನ್ನು ಅನುವಾದ ಮಾಡಿದ್ದಾನೆಯೇ ಹೊರತು ಬಾಣನು ನೇಮಿಚಂದ್ರನ ಸಮಕಾಲದವನು ಎಂದು ಹೇಳಿಲ್ಲ. ಇದೇ ಇತಿಹಾಸವನ್ನು ಸು. 1550ರಲ್ಲಿದ್ದ ದೊಡ್ಡಯ್ಯನೂ ತನ್ನ ಚಂದ್ರಪ್ರಭ ಚರಿತೆಯಲ್ಲಿ ಹೇಳಿದ್ದಾನೆ (I, 260). ಆದುದರಿಂದ ಬಾಹುಬಲಿಯನ್ನು ನಂಬದೆ ಇರುವುದಕ್ಕೆ ಕಾರಣವಿಲ್ಲ. ಕಂತಿ ಹಂಪನ ಸಮಸ್ಯೆಗಳು ಎಂಬ ಗ್ರಂಥದಿಂದ ಕಂತಿ ಪಂಪನ ಸಮಕಾಲದವಳು ಎಂಬುದು ವ್ಯಕ್ತವಾಗುತ್ತದೆ. ಈ ಪಂಪನು ಅಭಿನವಪಂಪನಾಗಿರಬೇಕು: ಏಕೆಂದರೆ ಆದಿಪಂಪನಕಾಲದಲ್ಲಿ (941) ಹೊಯ್ಸಳರಾಜನಾರೂ ಇರಲಿಲ್ಲ. ಅಭಿನವ ಪಂಪನಕಾಲವು ಸು. 1100 ಎಂದು ಹಿಂದೆಯೇ ತೋರಿಸಿದ್ದೇನೆ. ಆದುದರಿಂದ ಕಂತಿಯ ಕಾಲವೂ ಅದೇ ಆಗಿರಬೇಕು. ಬಾಹುಬಲಿ ದೊರೆಯ ಹೆಸರನ್ನು ಹೇಳದಿದ್ದರೂ ಕಂತಿಯ ಕಾಲದಲ್ಲಿ ಆಳುತ್ತಿದ್ದ ರಾಜನು 1ನೆಯ ಬಲ್ಲಾ

ಳನು (1100-1106) ಎಂದು ತಿಳಿಯಬಹುದು. ಸು. 1100 ರಲ್ಲಿ ರಾಜಧಾನಿಯಾಗಿದ್ದ ಬೇಲೂರನ್ನು ಹೇಳದೆ ದೋರಸಮುದ್ರವು ರಾಜಧಾನಿ ಎಂಬುದರಿಂದ ಬಾಹುಬಲಿದೇವಚರಿತ್ರದಲ್ಲಿ ಕಂತಿಹಂಪನ ಸಮಸ್ಯೆಗಳು ಎಂಬ ಗ್ರಂಥವೂ ನಂಬಿಕೆಗೆ ಅರ್ಹವಲ್ಲ ಎಂದು ಅಯ್ಯನವರು ಹೇಳುತ್ತಾರೆ. ದೋರಸಮುದ್ರವು ಹೊಯ್ಸಳರ ಪ್ರಸಿದ್ಧ ರಾಜಧಾನಿಯಾದುದರಿಂದ ಅದು ಹೇಳಲ್ಪಟ್ಟಿದೆ. ಅದು ಆ ಕಾಲದಲ್ಲಿ ರಾಜಧಾನಿಯಾಗಿರಲಿಲ್ಲ ಎಂದು ಆವ ಶಾಸನವೂ ಹೇಳುವುದಿಲ್ಲ. ಶ್ರ. ಬೆ. 143 ರಲ್ಲಿ ವಿನಯಾದಿತ್ಯನೇ ದೋರಸಮುದ್ರವನ್ನು ಸಿದ್ಧವಾಡಿ ಅಲಂಕರಿಸುತ್ತಿದ್ದನು ಎಂದು ಹೇಳುವಂತಿದೆ. ಬೇಲೂರು 147 ದೋರಸಮುದ್ರವು 1121 ರಲ್ಲಿ ರಾಜಧಾನಿಯಾಗಿದ್ದಿತೆಂದು ಹೇಳುತ್ತದೆ; ಆದರೆ ಹಾಸನ 116 ಬೇಲೂರು 1123 ರಲ್ಲಿ ರಾಜಧಾನಿಯಾಗಿದ್ದಿತೆಂದು ಹೇಳುತ್ತದೆ; ಇದರಿಂದ ದೋರಸಮುದ್ರವು 1123 ರಲ್ಲಿ ರಾಜಧಾನಿಯಾಗಿರಲಿಲ್ಲ ಎಂದು ಊಹಿಸುವುದಕ್ಕಾಗುವುದಿಲ್ಲ. ಆದುದರಿಂದ ಕಂತಿಯ ಸತ್ತೆಯನ್ನು ಶಂಕಿಸುವುದಕ್ಕೆ ಆವ ಆಧಾರವೂ ಇಲ್ಲ ಎಂಬುದು ಸ್ಪಷ್ಟವಾಗದೆ ಇರಲಾರದು. ಕಂತಿ ಎಂಬುದಕ್ಕೆ ಸನ್ಯಾಸಿನಿ ಎಂದರ್ಥವು, ಶಿಷ್ಯಳು ಎಂದಲ್ಲ.

ಕವಿಗಳಲ್ಲ, ಕವಿಮಾರ್ಗವೇತ್ರೃಗಳು

ನಾನು ಸಾಕಾದ ಆಧಾರವಿಲ್ಲದೆ ಕೆಲವರನ್ನು ಕವಿಗಳು ಅಥವಾ ಗ್ರಂಥಕರ್ತೃಗಳು ಎಂದು ಕರೆದಿದ್ದೇನೆ ಎಂದು ಅಯ್ಯನವರು ಆಕ್ಷೇಪಿಸುತ್ತಾರೆ (ಪುಟಗಳು 22–27). ಈ ವಿಷಯದಲ್ಲಿ ನಾನು ಆ ಆ ವ್ಯಕ್ತಿಗಳ ವಿಶೇಷಣಗಳು, ವರ್ಣನೆ ಇವುಗಳನ್ನು ಪರಿಶೀಲಿಸಿ ಅರ್ಹತೆಯನ್ನು ಊಹಿಸಿ ಬಳಿಕ ಕವಿ ಅಥವಾ ಗ್ರಂಥ ಕರ್ತೃ ಎಂಬ ಹೆಸರನ್ನು ಹೇಳಿದ್ದೇನೆ. ಇತರ ದ್ರಾವಿಡ ಭಾಷೆಗಳಲ್ಲಿ ಸಾಹಿತ್ಯ ಚರಿತೆಯನ್ನು ಬರೆದಿರುವವರೂ ಹೀಗೆಯೇ ಮಾಡಿದ್ದಾರೆ. ತಿಕ್ಕನ ಸೋಮಯಾಜಿಯ ತಾತ ಮಂತ್ರಿ ಭಾಸ್ಕರನ ವಿಷಯವಾಗಿ ಕೇತನಕೃತದಶಕುಮಾರ ಚರಿತದಲ್ಲಿ "ಸಾಹಿತ್ಯ ವಿದ್ಯಾಪಾರೀಣುಡು ಅನಿ ಜೆಪ್ಪುಟ ಚೇತಯಾತಡು ಕವಿಯೈನಟ್ಟೂಹಜೇಯವಚ್ಚನು" ಎಂದು ಶ್ರೀಮಾನ್ ವೀರೇಶಲಿಂಗಂಪಂತುಲು ತೆಲುಗು ಕವಿಗಳ ಚರಿತ್ರೆಯ 1ನೆಯ ಸಂಪುಟದಲ್ಲಿ ಬರೆದಿದ್ದಾರೆ. (ಪುಟ 121) ಈ ವ್ಯಕ್ತಿಗಳಿಗೆ ಕವಿ ಎಂಬ ಉಪಪದವು ಹೇಳಿದ್ದರೂ ಅದಕ್ಕೆ ಕವಿಮಾರ್ಗವೇತ್ರೃ ಎಂದು ಅರ್ಥಮಾಡಬೇಕೇ ಹೊರತು ಕವನ ಮಾಡುವವನು ಎಂದು ಅರ್ಥಮಾಡಕೂಡದು ಎಂದು ಅಯ್ಯನವರು ಹೇಳುತ್ತಾರೆ. ಈ ಸೂಕ್ಷ್ಮಭೇದವನ್ನು ಗ್ರಹಿಸುವುದು ಸಾಮಾನ್ಯ ಜನರಿಗೆ ಸಾಧ್ಯವಲ್ಲ. ಕವಿಮಾರ್ಗವೇತ್ರೃ ಕವಿಯಾಗಿ ಏಕಿರಕೂಡದು ಎಂಬ ಸಂದೇಹವು ಅನೇಕರಿಗೆ ಹುಟ್ಟದೆ

ಇಲ್ಲವಾದರು. ದುರ್ಗಸಿಂಹ, ರನ್ನ, ಚಂದ್ರರಾಜ ಇವರಂಥ ಉದ್ದಾಮ ಕವಿಗಳ ಕಾವ್ಯಗಳನ್ನು ತಿದ್ದಬೇಕಾದರೆ ಸ್ವತಃ ಪ್ರೌಢಕವಿಗಳಲ್ಲದವರಿಗೆ ಎಂದಿಗಾದರೂ ಸಾಧ್ಯವಾಗುವುದೇ? ಉದಾಹರಣೆಗಾಗಿ ಬೂಚರಾಜನನ್ನು (I,266) ತೆಗೆದುಕೊಳ್ಳುವ. ಹಾಸನ 119 ರಲ್ಲಿ ಈತನನ್ನು ಕನ್ನಡ, ಸಂಸ್ಕೃತ ಎರಡರಲ್ಲಿಯೂ ಪೊನ್ನನಿಗೆ ಸಮಾನನಾದ ಕವಿ ಎಂದು ವರ್ಣಿಸಿದೆ. ಇವನನ್ನು ಕವಿ ಎಂದು ಕರೆಯುವುದೂ ಇವನು ಗ್ರಂಥಗಳನ್ನು ಬರೆದಿರಬಹುದೆಂದು ಊಹಿಸುವುದೂ ಅಸಾಧುವೇ?

ಈಪ್ರಕಾರವಾಗಿ ನನಗೆ ತಿಳಿದ ಮಟ್ಟಿಗೆ ಶ್ರೀಮಾನ್ ವೆಂಕಟಸುಬ್ಬಯ್ಯನವರ ಆಕ್ಷೇಪಣೆಗಳಿಗೆ ಸಮಾಧಾನವನ್ನು ಹೇಳಿದ್ದೇನೆ. ಇನ್ನೂ ಕೆಲವು ಸಣ್ಣ ಆಕ್ಷೇಪಣೆಗಳಿವೆ, ಅವಕ್ಕೆ ನಾನು ಇದುವರೆಗೂ ಬರೆದಿರುವುದರಲ್ಲಿಯೇ ಬಹಳ ಮಟ್ಟಿಗೆ ಸಮಾಧಾನವು ದೊರೆಯಬಹುದು. ಅಂತು ಇಲ್ಲಿ ಈ ವಿಷಯವನ್ನು ಮುಗಿಸಿ ಮುಂದೆ ಇನ್ನು ಕೆಲವರು ಮಾಡಿರುವ ಆಕ್ಷೇಪಣೆಗಳನ್ನು ವಿಚಾರ ಮಾಡುತ್ತೇನೆ.

ಇತರರ ಆಕ್ಷೇಪಣೆಗಳು

ಸಿಂಗಿರಾಜ

ಶ್ರೀಮಾನ್ ಹರ್ಡೇಕರ್ ಮಂಜಪ್ಪನವರು ತಮ್ಮ ಶ್ರೀ ಬಸವ ಚರಿತ್ರೆಯಲ್ಲಿಯೂ ಶ್ರೀಮಾನ್ ಸಿಂದಗಿ ಸಿದ್ದಪ್ಪನವರು ತಮ್ಮ ಶ್ರೀ ಬಸವೇಶ್ವರನ ಚರಿತ್ರೆಯಲ್ಲಿಯೂ ಬಸವನ ಚರಿತೆಯನ್ನು ಹೇಳುವ ಕನ್ನಡ ಗ್ರಂಥಗಳೊಳಗೆ ಸಿಂಗಿರಾಜಪುರಾಣವೇ ಮೊದಲನೆಯದೆಂದೂ ಅದನ್ನು ಬರೆದ ಸಿಂಗಿರಾಜನು ದಶಗಣದಲ್ಲಿ (I, 214, 294) ಉಕ್ತನಾದ ಸಿಂಗಿರಾಜನಿಂದ ಅಭಿನ್ನನೆಂದೂ ಆದುದರಿಂದ ಬಸವನ ಸಮಕಾಲದವನೆಂದೂ ಅಭಿಪ್ರಾಯಪಟ್ಟಿದ್ದಾರೆ. ಬಿಜ್ಜಳನ ಸಾಮಂತನಾದ ಸಿಂಗಿರಾಜನು ಮೊದಲು ವೈಷ್ಣವನಾಗಿದ್ದು ಆಮೇಲೆ ವೀರಶೈವನಾಗಿ ಸಿಂಗಿರಾಜಪುರಾಣವನ್ನು ಬರೆದನೆಂದೂ ಈ ಕಾರಣದಿಂದ ಪಾಲ್ಕುರಿಕೆ ಸೋಮನಾಥನು ತನ್ನ ಸಹಸ್ರಗಣನಾಮದಲ್ಲಿ ಅವನನ್ನು ದಶಗಣದೊಳಗೆ ಸೇರಿಸಿದನೆಂದೂ ಶ್ರೀಮಾನ್ ಮೈಸೂರು ಬಸವಲಿಂಗಶಾಸ್ತ್ರಿಗಳು ಸಿಂಗಿರಾಜ ಪುರಾಣದ ಗದ್ಯಾನುವಾದವಾದ ತಮ್ಮ ಸಿಂಗಿರಾಜ ಪುರಾಣವಿಜಯದ ಪೀಠಿಕೆಯಲ್ಲಿ ಒರೆದಿರುವ ಕಥೆಯೇ ಈ ಅಭಿಪ್ರಾಯಕ್ಕೆ ಆಧಾರವೆಂದು ತೋರುತ್ತದೆ. ಆದರೆ ಶ್ರೀಮಾನ್ ಬಸವಲಿಂಗಶಾಸ್ತ್ರಿಗಳು ಈ ಕಥೆಗೆ ಮೂಲವನ್ನು ತಿಳಿಸಿಲ್ಲ. ನನಗೆ ತಿಳಿದಮಟ್ಟಿಗೆ ಈ ಕಥೆಗೆ ಶಾಸನಗಳಲ್ಲಿಯಾಗಲಿ ಪೂರ್ವಗ್ರಂಥಗಳಲ್ಲಿಯಾಗಲಿ ಆಧಾರವಿರುವಂತೆ ತೋರುವುದಿಲ್ಲ. ಶ್ರೀಮಾನ್ ಹರ್ಡೇಕರ್

ಮುಂಜಪ್ಪನವರು ತಮ್ಮ ಗ್ರಂಥದ ಪೀಠಿಕೆಯಲ್ಲಿ (ಪುಟ 6) ಸಿಂಗಿರಾಜನ ಕಾಲವು 1650 ಎಂದು ನಾನು ಕವಿಚರಿತೆಯಲ್ಲಿ ಬರೆದಿರುವುದಾಗಿ ಹೇಳಿದ್ದಾರೆ. ಈ ಹೇಳಿಕೆಗೆ ಆಧಾರವಿಲ್ಲ : ನಾನು ಸಿಂಗಿರಾಜನಿಗೆ ಕೊಟ್ಟಿರುವ ಕಾಲವು ಸು. 1500 (II, 148). ಭೀಮಕವಿಯ ಬಸವಪುರಾಣವೇ ಕನ್ನಡ ಬಸವ ಚರಿತೆಗಳಲ್ಲಿ ಮೊದಲನೆಯದು ಎಂದು ವೀರಶೈವರಲ್ಲಿ ಪ್ರಬಲವಾದ ಪ್ರತೀತಿ ಇದೆ. ಭೀಮಕವಿಯ ಕಾಲಕ್ಕೆ ಹಿಂದೆ ಸಿಂಗಿರಾಜಪುರಾಣವು ರಚಿತವಾಗಿದ್ದ ಪಕ್ಷದಲ್ಲಿ ಅವನು ಆ ಗ್ರಂಥದ ಆಧಾರದಿಂದ ತನ್ನ ಗ್ರಂಥವನ್ನು ಬರೆಯದೆ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣವನ್ನು ಪ್ರಮಾಣವಾಗಿಟ್ಟುಕೊಂಡು ಗ್ರಂಥರಚನೆ ಮಾಡುವುದಕ್ಕೆ ಕಾರಣವನ್ನು ಹೇಳುವುದು ಕಷ್ಟವಾಗಿದೆ. 16ನೆಯ ಶತಮಾನದ ಮಧ್ಯ ಭಾಗಕ್ಕೆ ಹಿಂದೆ ಬಾಳಿದ ವೀರಶೈವಕವಿಗಳಾರೂ ಸಿಂಗಿರಾಜನ ಹೆಸರನ್ನು ಹೇಳಿಲ್ಲ ; ಪರಂತು ಪಾಲ್ಕುರಿಕೆ ಸೋಮನಾಥನ ಅಥವಾ ಭೀಮಕವಿಯ ಹೆಸರನ್ನು ತಪ್ಪದೆ ಹೇಳಿದ್ದಾರೆ. ಸಿಂಗಿರಾಜನ ಹೆಸರನ್ನು ಹೇಳುವವರಲ್ಲಿ ಮೊದಲನೆಯ ಕವಿ ಮಹಾದೇವಿಯಮ್ಮನ ಪುರಾಣಕರ್ತೃವಾದ ಚೆನ್ನಬಸವಾಂಕನು (ಸು. 1550) ಅಲ್ಲದೆ ಸಿಂಗಿರಾಜನು ಬಸವನ ವಿಷಯವಾದ ಕೆಲವು ಹೇಳಿಕೆಗಳನ್ನು ಉಕ್ಕೇಪಿಸುತ್ತಾನೆ ಉದಾಹರಣೆಗಾಗಿ " ಬಲದೇವಕಲ್ಲಿಂದೊಡಾಪದವ ಬಸವಂಗಿತ್ತರೆಂಬರ್ ; ಅದಂತಲ್ಲ " (6ನೆಯ ಸಂಧಿ) ಎಂಬ ಭಾಗವನ್ನು ತಿಳಿಸಬಹುದು. ಇದರಿಂದ ಸಿಂಗಿರಾಜನ ಕಾಲಕ್ಕೆ ಹಿಂದೆ ಬಸವಚರಿತೆಗಳಿದ್ದುವು ಎಂದು ಊಹಿಸಬಹುದಾಗಿದೆ. ಇವನೇ ಬಸವ ಚರಿತೆಯನ್ನು ಮೊತ್ತಮೊದಲು ಬರೆದವನಾಗಿದ್ದಪಕ್ಷದಲ್ಲಿ ಹೀಗೆ ಹೇಳುತ್ತಿರಲಿಲ್ಲ. ದಶಗಣದ ಸಿಂಗಿರಾಜನನ್ನು ಹೇಳುವಾಗ ವಿರೂಪಾಕ್ಷ ಪಂಡಿತನು (1584) ತನ್ನ ಚೆನ್ನಬಸವಪುರಾಣದಲ್ಲಿ (ಕಾಂಡ 5, ಸಂಧಿ 2, ಪದ್ಯ 50) ಪರಮ ಶಿವಭಕ್ತ ಎಂದಿರುವನೇ ಹೊರತು ಕವಿ ಎಂದು ಹೇಳಿಲ್ಲ. ಈ ಕಾರಣಗಳಿಂದ ಸಿಂಗಿರಾಜಪುರಾಣಕರ್ತನು ದಶಗಣದ ಸಿಂಗಿರಾಜನು ಬೇರೆ ಅಲ್ಲ ; ಸು. 1500ರಲ್ಲಿದ್ದ ಮತ್ತೊಬ್ಬ ಈಚೆಯ ಕವಿಯಾಗಿರಬೇಕು. ದಶಗಣಕ್ಕೆ ಸೇರಿದ ಸಿಂಗಿದೇವಯ್ಯನು ಬಸವನ ಸಮಕಾಲಿಕರಾಗಿ ವಚನಗಳನ್ನು ಬರೆದಿದ್ದಾನೆ (ಪುಟ 352).

ರತ್ನಾಕರ ವರ್ಣಿ

ಭರತೇಶ್ವರ ಚರಿತೆಯು ಪ್ರಕಾಶಕರಾದ ಶ್ರೀಮಾನ್ ಉಗ್ರಾಣ ಮಂಗೇಶರಾಯರೂ ಶತಕತ್ರಯಿಯ ಪ್ರಕಾಶಕರಾದ ಶ್ರೀಮಾನ್ ನ್ಯಾಯತೀರ್ಥ ಶಾಂತಿರಾಜಶಾಸ್ತ್ರಿಗಳೂ ದೇವಚಂದ್ರನ ಹೇಳಿಕೆಯನ್ನು ನಂಬಿ ರತ್ನಾಕರವರ್ಣಿ ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕ ಎಂಬ ಮೂರು ಶತಕಗಳನ್ನೂ ಬರೆದಿದ್ದಾನೆ ಎಂದು ಹೇಳುತ್ತಾರೆ ಹೀಗೆ ಶತಕತ್ರ

ಯವೂ ಏಕಕವಿರಚಿತವೆಂಬ ಪ್ರತೀತಿ ಪ್ರಚಾರದಲ್ಲಿದ್ದರೂ ರತ್ನಾಕರವರ್ಣೀಕೃತವಾದ ಅಪರಾಜಿತೇಶ್ವರ ಶತಕ ತ್ರಿಲೋಕ ಶತಕ ಭರತೇಶ್ವರ ಚರಿತೆಗಳಲ್ಲಿ ನಿಯತವಾಗಿ ಬರುವ ಅಪರಾಜಿತೇಶ್ವರ ಮುಂದರಸ್ವಾಮಿಗಳ ಸ್ತುತಿಯೂ ಚಿದಂಬರ ಪುರುಷ, ನಿರಂಜನಸಿದ್ಧ ಎಂಬ ವಿಶೇಷಣಗಳ ಪ್ರಯೋಗವೂ ಶೃಂಗಾರಕವಿ ಹಂಸರಾಜಕೃತವಾದ ರತ್ನಾಕರಾಧೀಶ್ವರ ಶತಕದಲ್ಲಿ ದೊರೆವುದಿಲ್ಲವಾದುದರಿಂದಲೂ, ರತ್ನಾಕರವರ್ಣಿಯ ಗುರು ಚಾರುಕೀರ್ತಿಯೆಂದೂ ಹಂಸರಾಜನ ಗುರು ದೇವೇಂದ್ರ ಕೀರ್ತಿಯೆಂದೂ ಸ್ಪಷ್ಟವಾಗಿ ಹೇಳಿರುವುದರಿಂದಲೂ ರತ್ನಾಕರವರ್ಣಿ ಹಂಸರಾಜನಿಂದ ಭಿನ್ನನೆಂದು ನಾನು ಬರೆದಿದ್ದೇನೆ (II, 274). ಕವಿಭಿನ್ನತೆಗೆ ನಾನು ಹೇಳಿರುವ ಕಾರಣಗಳಿಗೆ ಮೇಲೆ ಹೇಳಿದ ಪ್ರಕಾಶಕರು ಸರಿಯಾದ ಸಮಾಧಾನವನ್ನು ಹೇಳಿಲ್ಲ. ರತ್ನಾಕರವರ್ಣಿಯ ಗುರು ಮಹೇಂದ್ರಕೀರ್ತಿ ಎಂಬ ದೇವಚಂದ್ರನ ಹೇಳಿಕೆಯನ್ನು ಅನಲಂಬಿಸಿ ಪ್ರಕಾಶಕರು ಮಹೇಂದ್ರ ಕೀರ್ತಿ, ದೇವೇಂದ್ರಕೀರ್ತಿ ಎಂಬುವು ಪರ್ಯಾಯ ಶಬ್ದಗಳಾದುದರಿಂದ ಒಂದೇ ವ್ಯಕ್ತಿಯನ್ನು ನಿರ್ದೇಶಿಸುತ್ತವೆ ಎಂದು ತಿಳಿದುಕೊಂಡು ಕವಿಗಳು ಅಭಿನ್ನರು ಎನ್ನುತ್ತಾರೆ. ಈ ಹೇಳಿಕೆ ಸಮಂಜಸವಾಗಿಲ್ಲ : ಏಕೆಂದರೆ ರತ್ನಾಕರವರ್ಣಿ ತನ್ನ ಗುರು ಚಾರುಕೀರ್ತಿ ಎಂದು ಕಂಠೋಕ್ತವಾಗಿ ಹೇಳಿಕೊಂಡಿರುವಾಗ ದೇವಚಂದ್ರನ ಹೇಳಿಕೆಯನ್ನು ಹೇಗೆ ನಂಬುವುದು ? ಒಂದುವೇಳೆ ನಂಬಿದರೂ ಮಹೇಂದ್ರಕೀರ್ತಿ, ದೇವೇಂದ್ರಕೀರ್ತಿ ಎಂಬುವು ಬೇರೆಬೇರೆ ವ್ಯಕ್ತಿಗಳನ್ನು ಸೂಚಿಸುತ್ತವೆ ಎಂಬುದಕ್ಕೆ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಎಷ್ಟೋ ಉದಾಹರಣಗಳು ದೊರೆಯುತ್ತವೆ. ಅವು ಪರ್ಯಾಯನಾಮಗಳು ಬೇರೆ ಅಲ್ಲ. ಇದಲ್ಲದೆ ಪ್ರಕಾಶಕರು ಆವ ಪ್ರಮಾಣವನ್ನೂ ತೋರಿಸದೆ ರತ್ನಾಕರವರ್ಣಿಗೆ ಶೃಂಗಾರಕವಿ ಹಂಸರಾಜ ಎಂಬ ಬಿರುದುಂಟು ಎಂದು ಹೇಳಿದ್ದಾರೆ. ಶೃಂಗಾರಕವಿ ಎಂಬ ಬಿರುದು ಕೆಲವರು ಕವಿಗಳಿಗುಂಟು. ಆದರೆ ಅದರೊಂದಿಗೆ ಸೇರಿರುವ ಹಂಸರಾಜ ಎಂಬುದಕ್ಕೆ ಅರ್ಥವಿಲ್ಲ. ಶಬ್ದಮಣಿದರ್ಪಣದ 289ನೆಯ ಸೂತ್ರದ ಕೆಳಗೆ ಕೇಶಿರಾಜನು ಹಂಸರಾಜನೆಂಬ ಒಬ್ಬ ಪೂರ್ವ ಕವಿಯನ್ನು ಹೇಳಿದ್ದಾನೆ (I, 139). ರತ್ನಾಕರಾಧೀಶ್ವರ ಶತಕ ಕರ್ತನು ತದ್ಭಿನ್ನನೆಂದು ತೋರಿಸುವುದಕ್ಕೆ ಶೃಂಗಾರ ಕ~ ಎಂಬ ಉಪಪದವು ಸೇರಿಸಿದೆ ಎಂಬುದಕ್ಕೆ ಸಂದೇಹವಿಲ್ಲ ಆದುದರಿಂದ ಹಂಸರಾಜ ಎಂಬುದು ಬೇರೊಬ್ಬ ಕವಿಯ ಹೆಸರು ಎಂದು ಗ್ರಹಿಸಬೇಕು.

ಶ್ರೀಮಾನ್ ಶಾಂತಿರಾಜಶಾಸ್ತ್ರಿಗಳು ರತ್ನಾಕರಾಧೀಶ್ವರಶತಕದ ಅಂತ್ಯದಲ್ಲಿರುವ " ಶ್ರೀಮದ್ದೇವೇಂದ್ರ ಕೀರ್ತಿ " ಇತ್ಯಾದಿ ಗದ್ಯವನ್ನು ಉಳಿದ ಎರಡು ಶತಕಗಳ ಅಂತ್ಯದಲ್ಲಿಯೂ ಮುದ್ರಿಸಿದ್ದಾರೆ. ಇದಕ್ಕೆ ನಾನು ನೋಡಿದ ಕೈಬರ

ಹದ ಪುಸ್ತಕಗಳಲ್ಲಿ ಆಧಾರವಿರುವಂತೆ ತೋರುವುದಿಲ್ಲ. ಅಲ್ಲದೆ ತ್ರಿಲೋಕಶತಕದ ಕೊನೆಯ ಪದ್ಯದಲ್ಲಿ ಆ ಗ್ರಂಥವು ರತ್ನಾಕರಾರ್ಯಕೃತ ಎಂದು ಸ್ಪಷ್ಟವಾಗಿ ಹೇಳಿದೆ. (ಸೃಜಿಸಿದಂ ರತ್ನಾಕರಾರ್ಯಂ). ನಿರಂಜನಸಿದ್ಧ, ಚಿದಂಬರ ಪುರುಷ ಎಂಬ ಮಾತುಗಳನ್ನು ರತ್ನಾಕರವರ್ಣಿ ತನ್ನ ಗುರುವಿಗೆ ವಿಶೇಷಣವಾಗಿ ಹೇಳಿರುವುದರಿಂದ (ಭರತೇಶ್ವರ ಚರಿತೆ, I, 4) ನಿರಂಜನಸಿದ್ಧ ಎಂಬುದು ಕವಿಯ ಬಿರುದು ಎಂದು ನಾನು ಬರೆದಿರುವುದು (II,274) ತಪ್ಪು.

ಇಷ್ಟರ ಮೇಲೆ ಶತಕತ್ರಯವನ್ನೂ ರತ್ನಾಕರವರ್ಣಿಯೇ ಬರೆದನುಎಂಬುದಕ್ಕೆ ದೇವಚಂದ್ರನ ಹೇಳಿಕೆಯೇ ಪ್ರಮಾಣವು. ಈತನು ಬರೆದಿರುವ ರಾಜಾವಳೀ ಕಥೆಯಲ್ಲಿ ಹಲವು ತಪ್ಪುಗಳು ಸೇರಿರುವುದರಿಂದ ಇದನ್ನು ಸಂಪೂರ್ಣವಾಗಿ ನಂಬುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ ರತ್ನಾಕರ ವರ್ಣಿಯ ವಿಷಯವಾಗಿಯೇ ದೇವಚಂದ್ರನು ಬರೆದಿರುವ ಒಂದಂಶವನ್ನು ಇಲ್ಲಿ ತಿಳಿಸಬಹುದು. ಅದೇನೆಂದರೆ ದ್ವಾದಶಾನು ಪ್ರೇಕ್ಷೆಯನ್ನು ಬರೆದ ವಿಜಯಣ್ಣನೂ ರತ್ನಾಕರ ವರ್ಣಿಯೂ ಸಮಕಾಲದವರು ಎಂಬುದು (II, 276). ಅವರವರೇ ಹೇಳಿಕೊಂಡಿರುವಂತೆ ವಿಜಯಣ್ಣನು 1448 ರಲ್ಲಿಯೂ ರತ್ನಾಕರವರ್ಣಿ 1557 ರಲ್ಲಿಯೂ ಇದ್ದುದರಿಂದ ದೇವಚಂದ್ರನ ಮೇಲಣ ಬರೆವಣಿಗೆ ತಪ್ಪೆಂಬುದು ಕರತಲಾಮಲಕವು.

ಲಕ್ಷ್ಮೀಶ

ಜೈಮಿನಿ ಭಾರತ ಕರ್ತನಾದ ಲಕ್ಷ್ಮೀಶನ ಸ್ಥಳ, ಮತ, ಕಾಲ ಇವುಗಳನ್ನು ಕುರಿತು ಕನ್ನಡ ಪತ್ರಿಕೆಗಳಲ್ಲಿ ಬಹಳ ಕಾಲದಿಂದ ಅನೇಕವಾಗ್ಯುದ್ಧಗಳು ನಡೆಯುತ್ತಿವೆ. ಈ ಕವಿಯ ಸ್ಥಳವು ಮೈಸೂರು ಸೀಮೆಯ ಕಡೂರು ತಾಲ್ಲೂಕಿನಲ್ಲಿರುವ ದೇವನೂರು ಎಂದು ಬಹು ಜನಗಳ ಅಭಿಪ್ರಾಯವು. ಈ ಊರನ್ನು ಕವಿ ಸುರಪುರ, ಗೀರ್ವಾಣಪುರ ಇತ್ಯಾದಿ ಪರ್ಯಾಯ ನಾಮಗಳಿಂದ ನಿರ್ದೇಶಿಸಿದ್ದಾನೆ. ತನ್ನ ಗ್ರಂಥವನ್ನು ಆ ಊರ ಲಕ್ಷ್ಮೀರಮಣ ದೇವರಿಗೆ ಅರ್ಪಿಸಿದ್ದಾನೆ. ಈ ದೇವರ ದೇವಸ್ಥಾನದಲ್ಲಿ ಕವಿಗೆ ಅಗ್ರಮರ್ಯಾದೆ ನಡೆಯುತ್ತಿದೆ ಎಂದೂ ಇವನ ಗ್ರಂಥದ ಕೆಲವು ಭಾಗಗಳನ್ನು ಕೆಲವು ವಿಶೇಷ ಸಮಯಗಳಲ್ಲಿ ದೇವಸ್ಥಾನದಲ್ಲಿ ಪಠಿಸುವ ವಾಡಿಕೆ ಇದೆ ಎಂದೂ ಹೇಳುತ್ತಾರೆ. ಗ್ರಾಮಸ್ಥರು ಈಗಲೂ ಇವನ ಮನೆಯನ್ನು ತೋರಿಸುತ್ತಾರೆ. ಕೆಲವು ವರ್ಷಗಳಿಗೆ ಹಿಂದೆ ಇವನ ಸಂತತಿಯವರು ಈ ಗ್ರಾಮದಲ್ಲಿ ವಾಸವಾಡಿಕೊಂಡಿದ್ದರು. ಕವಿಗೂ ಈ ಗ್ರಾಮಕ್ಕೂ ಸಂಬಂಧವನ್ನು ತೋರಿಸುವ ಇಷ್ಟು ಅಂಶಗಳಿದ್ದರೂ ಕೆಲವರು ಕವಿಯ ಸ್ಥಳವು ಹೈದರಾಬಾದಿನಲ್ಲಿರುವ ಸುರಪುರವೆಂದು ನಿಶ್ಶಂಕರಾಗಿ ಹೇಳುತ್ತಿದ್ದಾರೆ.

ಕವಿಯಮತದ ವಿಷಯದಲ್ಲಿ ಇವನು ಅದ್ವೈತಿಯೋ ಅಥವಾ ಭಾಗವತ ಸಂಪ್ರದಾಯದ ಸ್ಮಾರ್ತನೋ ಆಗಿರಬೇಕೇ ಹೊರತು ಶ್ರೀವೈಷ್ಣವನಲ್ಲ ಎಂದು ಕೆಲವರು ಹೇಳಿದ್ದಾರೆ. ಕೆಲವು ವರ್ಷಗಳಿಗೆ ಹಿಂದೆ ದೇವನೂರಲ್ಲಿ ವಾಸಮಾಡಿ ಕೊಂಡಿದ್ದರೆಂದು ಹಿಂದೆ ಹೇಳಿದ ಕವಿಯ ಸಂತತಿಯವರು ಶ್ರೀ ವೈಷ್ಣವರೇ ಆಗಿದ್ದರು. ಶ್ರೀ ವೈಷ್ಣವರು ಸ್ಮಾರ್ತರನ್ನು ತಮ್ಮ ಪೂರ್ವಿಕರೆಂದು ಎಂದೂ ಭಾವಿಸಲಾರರು. ಕವಿ ಶ್ರೀವೈಷ್ಣವನಲ್ಲ ಎಂಬುದಕ್ಕೆ ಅವನು ಗ್ರಂಥಾದಿಯಲ್ಲಿ ಶಿವ, ಪಾರ್ವತಿ, ಗಣಪತಿ ಇವರುಗಳನ್ನು ಸ್ತುತಿಸಿರುವುದೇ ಸಾಕ್ಷಿ ಎಂದು ಕೆಲವರು ಬರೆದಿದ್ದಾರೆ. ಆದರೆ ಶ್ರೀವೈಷ್ಣವರು ಎಂಬುದರಲ್ಲಿ ಎಳ್ಳಷ್ಟೂ ಸಂದೇಹಕ್ಕೆ ಆಸ್ಪದವಿಲ್ಲದ ಇತರ ಕವಿಗಳೂ ಹೀಗೆ ಮಾಡಿರುವದಕ್ಕೆ ಉದಾಹರಣಗಳು ದೊರೆಯುತ್ತವೆ: (1) ಭಾರತಾದಿ ಗ್ರಂಥಗಳನ್ನು ಬರೆದಿರುವ ಲಕ್ಷ್ಮೀಕವಿ (ಪುಟ 15) ಆನೆಕಲ್ಲು ತಾಲ್ಲೂಕಿಗೆ ಸೇರಿದ ಹಾರುಗದ್ದೆಯ ಶ್ರೀವೈಷ್ಣವನು. ಇವನ ಸಂತತಿಯವರು ಈಗಲೂ ಆ ಗ್ರಾಮದ ಚೆನ್ನಕೇಶವ ಸ್ವಾಮಿದೇವಸ್ಥಾನದ ಅರ್ಚಕರಾಗಿದ್ದಾರೆ. ರಾಮಾನುಜಾಚಾರ್ಯರ ಶಿಷ್ಯರಾದ ಎಂಬಾರೆಂಬವರ ಸಂತತಿಯವರು ತನಗೆ ಗುರುಗಳು ಎಂಬುದರಿಂದ ಕವಿ ಶ್ರೀವೈಷ್ಣವನು ಎಂಬುದಕ್ಕೆ ಆವ ಸಂದೇಹವೂ ಇಲ್ಲ. ಆದರೂ ಇವನು ತನ್ನ ಗ್ರಂಥಗಳಲ್ಲಿ ಶಿವಗಣಪತಿಗಳನ್ನು ಸ್ತುತಿಸಿದ್ದಾನೆ. (2) ಆನಂದರಾಮಾಯಣವನ್ನು ಬರೆದ ತಿಮ್ಮಾಮಾತ್ಯನು (ಪುಟ 74) ಶ್ರೀವೈಷ್ಣವನು. ಇವನ ಸಂತತಿಯವರು ಬೆಂಗಳೂರಿನ ಪೂರ್ವದಿಕ್ಕಿಗೆ ಸುಮಾರು 6 ಮೈಲಿ ದೂರದಲ್ಲಿರುವ ಅಗರವೆಂಬ ಗ್ರಾಮದಲ್ಲಿ ಅರ್ಚಕರಾಗಿದ್ದಾರೆ. ಈ ಕವಿಯೂ ಶಿವಗಣಪತಿಗಳನ್ನು ಸ್ತುತಿಸಿದ್ದಾನೆ.

ದೇವನೂರು ಸುರಪುರ ಎಂಬುದಕ್ಕೆ ಸರಿಯಾದ ನಾಮಾಂತರವಲ್ಲ ಎಂದು ಭಾವಿಸಿ ಕೆಲವರು ಬೇರೆ ಸ್ಥಳವನ್ನು ಹುಡಕಲು ಹೊರಟು ಹೈದರಾಬಾದಿನಲ್ಲಿಯ ಸುರಪುರವೇ ಆ ಸ್ಥಳವೆಂದು ನಿಶ್ಚಯಿಸಿದ್ದಾರೆ. ಆದರೆ ತಿಮ್ಮಾಮಾತ್ಯನು ಸಾದನಹಳ್ಳಿಯನ್ನು ಸಹದೇವಪುರವೆಂದೂ ಲಕ್ಷ್ಮೀಕವಿ ಹಾರುಗದ್ದೆಯನ್ನು ಖಗಪುರವೆಂದೂ ಭಾಷಾಂತರ ಮಾಡಿರುವುದನ್ನು ನೋಡಿದರೆ ಅವರು ಆಶ್ಚರ್ಯಪಡದೆ ಇರಲಾರರು. ಈ ರೂಪಗಳೊಡನೆ ಹೋಲಿಸಿದರೆ ದೇವನೂರೆಂಬುದು ಸುರಪುರಕ್ಕೆ ಬಹಳ ಅನುರೂಪವಾದ ಭಾಷಾಂತರವೆನ್ನಬಹುದು.

ಲಕ್ಷ್ಮೀಶನಕಾಲದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಅವನು 1415 ರಲ್ಲಿದ್ದನೆಂದು ಬಹುಮಂದಿ ಅಭಿಪ್ರಾಯಪಡುತ್ತಾರೆ. ಈ ಕವಿ 17ನೆಯ ಶತಮಾನದ ಅಂತ್ಯಭಾಗದಲ್ಲಿದ್ದನೆಂದು ನಾನು ಬರೆದಿದ್ದೇನೆ (II, 523). ಇವನು 1415ರಲ್ಲಿ ಇದ್ದ ಪಕ್ಷದಲ್ಲಿ 15, 16, 17 ಈ ಶತಮಾನಗಳಲ್ಲಿದ್ದ ಒಬ್ಬ

ಕವಿಯಾದರೂ ಈತನ ಹೆಸರನ್ನು ಹೇಳದಿರುವುದಕ್ಕೆ ಕಾರಣವೇನೋ ಗೊತ್ತಾಗುವುದಿಲ್ಲ; ಭಾರತ ರಾಮಾಯಣ ಭಾಗವತಗಳನ್ನು ಬರೆದ ಸ್ಮಾರ್ತ ಕವಿಗಳೂ ಸ್ಮಾರ್ತನಾದ ರುದ್ರಭಟ್ಟನನ್ನು ಕೂಡ ಸ್ತುತಿಸುವ ಶ್ರೀವೈಷ್ಣವಕವಿ ಚಿಕ್ಕುಪಾಧ್ಯಾಯನೂ ಸಹ ಇವನನ್ನು ಸ್ಮರಿಸದೆ ಬಿಟ್ಟಿರುವುದು ಆಶ್ಚರ್ಯಕರವೇ ಸರಿ. ಇವನನ್ನು ಸ್ತುತಿಸುವ ಕವಿಗಳೆಲ್ಲಾ 18ನೆಯ ಶತಮಾನದವರು. ಈ ಕಾರಣಗಳಿಂದ ನಾನು ಈ ಕವಿಗೆ ಮೇಲೆ ಹೇಳಿದ ಕಾಲವನ್ನು ಕೊಟ್ಟಿನು. ಜನರಲ್ಲಿ ಸಾಮಾನ್ಯವಾಗಿರುವ ಪ್ರತೀತಿಯೂ ಹೀಗೆಯೇ ಇದೆ. ಕೆಲವರು ಜೈಮಿನಿ ಭಾರತಕ್ಕೂ ವಿರೂಪಾಕ್ಷ ಪಂಡಿತ (1584) ಚೆನ್ನಬಸವ ಪುರಾಣಕ್ಕೂ ಇರುವ ಕೆಲವು ಸಾಮ್ಯಗಳನ್ನು ದೊಡ್ಡವು ಮಾಡಿ ಲಕ್ಷ್ಮೀಶನು ವಿರೂಪಾಕ್ಷ ಪಂಡಿತನಿಗೆ ಹಿಂದೆ ಇದ್ದನು ಎಂದು ಊಹಿಸಿದ್ದಾರೆ. ಆದರೆ ಈ ಸಾಮ್ಯಗಳಿಗೆ ಎರಡು ವಿಧವಾಗಿಯೂ ಅರ್ಥವಾಡಬಹುದಾದುದರಿಂದ ಇವು ಲಕ್ಷ್ಮೀಶನ ಕಾಲವನ್ನು ನಿಸ್ಸಂದೇಹವಾಗಿ ನಿರ್ಣಯಿಸುವುದಕ್ಕೆ ಸಹಕಾರಿಯಾಗಲಾರವು.

ಕರ್ನಾಟಕ ಕುವಲಯಾನಂದವನ್ನು ಬರೆದಿರುವ ಜಾಯೇಂದ್ರನು ಜೈಮಿನಿಭಾರತದಿಂದ ಪದ್ಯಗಳನ್ನು ಉದಾಹರಿಸಿದ್ದಾನೆ. ಇವನ ಕಾಲವು 1734 ಎಂದು ನಾನು ಬರೆದಿದ್ದೇನೆ (ಪುಟ 38). ಆದರೆ ಶ್ರೀಮಾನ್ ಮುಂಜೇಶ್ವರದ ಎಂ. ಗೋವಿಂದಪೈ ತಾವು ಗುಣಿಸಿ ನೋಡಿದುದರಲ್ಲಿ ಜಾಯೇಂದ್ರನ ಕಾಲವು 1674 ಕ್ಕೆ ಸರಿಹೋಗುತ್ತದೆ ಎಂದು ನನಗೆ ಬರೆದಿದ್ದಾರೆ. ಇವರು ಗುಣಿಸಿರುವುದು ಸರಿಯಾಗಿದ್ದ ಪಕ್ಷದಲ್ಲಿ ಲಕ್ಷ್ಮೀಶನ ಕಾಲವು ಸು. 1650 ಎನ್ನಬಹುದು.

ಲಕ್ಷ್ಮೀಶನ ವಿಷಯವಾಗಿ ತನ್ನ ಮತಕ್ಕೆ ವಿರೋಧವಾದ ಗ್ರಂಥವನ್ನು ಆರೂ ಪರಿವರ್ತಿಸುವುದಿಲ್ಲ ಎಂಬ ಕನ್ನಡ ಪರಿಷತ್ಪತ್ರಿಕೆಯಲ್ಲಿಯ (V, 5) ಉಕ್ತಿಯ ಸಂಬಂಧವಾಗಿ ಕನ್ನಡ ಸಾಹಿತ್ಯದಲ್ಲಿ ಗಮನಿಸತಕ್ಕ ಒಂದು ವಿಶೇಷಾಂಶವನ್ನು ಇಲ್ಲಿ ಪ್ರಸಂಗವಶಾತ್ ತಿಳಿಸಬಹುದು, ಜೈನರು ತಮ್ಮ ಹಿಂದು ಮಿತ್ರರಿಗೋಸ್ಕರ ತಾವು ಹಿಂದುಗಳೋ ಎಂಬಂತೆಯೂ ಹಿಂದುಗಳು ತಮ್ಮ ಜೈನ ಮಿತ್ರರಿಗೋಸ್ಕರ ತಾವು ಜೈನರೋ ಎಂಬಂತೆಯೂ ಗ್ರಂಥಗಳನ್ನು ಬರೆದಿರುತ್ತಾರೆ. ಇದಕ್ಕೆ ಒಂದೊಂದು ದಾಹರಣವನ್ನು ಕೊಡುತ್ತೇನೆ—ಜೈನನಾದ ಪದ್ಮರಸನು (II, 314) ಬಹುಶಃ ಒಬ್ಬ ಹಿಂದುಮಿತ್ರನಿಗಾಗಿ ಶೃಂಗಾರ ಕಥೆ ಎಂಬ ಗ್ರಂಥವನ್ನು 1599 ರಲ್ಲಿ ಬರೆದಿದ್ದಾನೆ. ಗ್ರಂಥಾರಂಭದಲ್ಲಿ ಕವಿ ಹಿಂದುವಾಗಿದ್ದರೆ ಹೇಗೋ ಹಾಗೆ ಸದಾಶಿವ, ಗಣೇಶ ಇವರ ಸ್ತುತಿಯನ್ನು ಮಾಡಿದ್ದಾನೆ. ಹಾಗೆಯೇ ಹಿಂದುವಾದ ಪಟ್ಟಾಭಿರಾಮನು (ಪುಟ 25) ಪದುಮನೆಂಬ ಜೈನಮಿತ್ರನಿಗಾಗಿ ರತ್ನಶೇಖರಚರಿತೆ ಎಂಬ ಜೈನ ಗ್ರಂಥವನ್ನು ಸು. 1725 ರಲ್ಲಿ ಬರೆದಿದ್ದಾನೆ. ಗ್ರಂಥವು ಪುಷ್ಪಾಂಜಲಿ ಎಂಬ ಜೈನವ್ರತದ ಆಚರಣೆಗೆ ಸಂ

ಬಂಧಿಸಿದ ಒಂದು ಕಥೆಯನ್ನು ಹೇಳುತ್ತದೆ. ಕವಿ ಜೈನನಾಗಿದ್ದರೆ ಹೇಗೋ ಹಾಗೆ ಗ್ರಂಥಾದಿಯಲ್ಲಿ ಜಿನ, ಸಿದ್ಧಾದಿಗಳು ಇವರುಗಳ ಸ್ತುತಿಯನ್ನು ಮಾಡಿದ್ದಾನೆ.

ಪಂಡಿತಾರಾಧ್ಯ, ಶ್ರೀಪತಿಪಂಡಿತ.

ಗ್ರಂಥವು 6 ಕಲ್ಪಗಳಾಗಿ ಭಾಗಿಸಲ್ಪಟ್ಟಿದೆ. ಆದಂಭದಲ್ಲಿ ಚಿನ್ನಿಗರಾಯ, ತ್ರಿಮೂರ್ತಿಗಳು, ಗಣೇಶ ಇವರುಗಳ ಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಅಲಿಸೈ ಬಾಹಿರದಿ ಪ್ರಜ್ವಲಿಪ ಪ್ರಭೆಯಿರಲು ।
ಲೀಲೆಯಿಂ ತಿಳಿಯದನು ಪಿಂಡ ರಂಗವದೆಂದು ।
ಬಾಲಾರ್ಕನಿದಿನೊಳ್ ಪಿಡಿಯೆ ರತ್ನದಮಧ್ಯೆ ಛಾಯೆ ತಾ ತೋಱಿತಿರಲು ॥
ಪಾಲಿಸದ ಛಾಯೆ ರಂಗಮದೆಂದು ಪೇಳ್ವಿದದ ।
ನಾಲಿಸೈ ಮಾಣಿಕಕೆ ಕಾಂತಿ ರಂಗಗಳ್ನು !
ಮೇಲೆ ಸಿರದೊಳು ನೋಡಿ ಕುಶಲದಿಂ ಕ್ರಯಮಾಡಿ ಶ್ವೇತಸರ್ಷಪಮಿತಿಯೊಳು ॥
ನೀಲಮುಂ ಪರಿಕಿಪ್ಪನಾದಡಂಗೈತಳದಿ।
ಹಾಲ ಮಧ್ಯದೊಳಿರಿಸಲದು ನೀಲಿರಸದಂತೆ ।

ನೀಲವರ್ಣವುದಾಗಲಿಂದ್ಯನೀಲವುದೆನಿಪ್ಪದದು ತೃಣವ ಗಾತ್ರಿಸುವುದು ||
ಮೇಲು ಸಿಂಹದಲ್ಲಿ ಪುಟ್ಟಿನಿತು ಗುಣವಿರಲು |
ಪಾಲಿಸಲುಬೇಕದನು ಗುಣದೋಷಗಳ ನೋಡ |
ದೀಲಲಿತರತ್ನವಿರಲೆನೆಯಪರಿಮಾಣಕ್ಕೆನೂರುಸಾಹಸ್ರಮೆಂದು ||
ಕೃತ್ತಿಮದ ಮುತ್ತು ತಾನಿರಲು ಪರಿಕಿಸುವ ಪರಿ |
ಮುತ್ತದನು ಮಡಕೆಯೊಳು ಗೋಮೂತ್ರನನು ತುಂಬಿ |
ತತ್ತುಗೊಳ್ಳಿಸಿ ಲವಣವನು ಮನೆಯು ನೆನೆಯಿಸಲುಬೇಕೊಂದುರಾತ್ರಿಯದನು ||
ಭತ್ತಗೋಧಿಯ ಹೊಟ್ಟಿನೊಳಗದನು ಉದ್ದಿದೊರ |
ಸುತ್ತ ನೋಡಲು ವರ್ಣ ಪೋಗದಿರೆಯಾಮಣಿಯು |
ಉತ್ತಮೋತ್ತಮವೆಂದು ಪೇಳ್ದನಾಗಸ್ತ್ಯಮುನಿ ಬಿತ್ತರಿಸಿ ಮುನಿವರಗ್ಗೆ ||
ಛಾಯೆಯಿಲ್ಲದ ಮೂಗಕ್ಕೆ ಮೂದಳರಸದಿ |
ಸ್ನೇಯದಿಂದಲತಿಗೆಯು ರಸದಿ ಭಾವನೆಗೆಯ್ಯ |
ಲಾಯತದಿ ಗಜನಿಂಬೆಹುಳಿಯೊಳೇಳ್ಪುಂವೇಳೆ ಭಾವನೆಮುಗಿಯ್ಯಲದನು ||
ಮಾಯಕದ ರತ್ನವಾಗಿರೆ ತೋರ್ಪುದಲ್ಲದೊಡೆ |
ಛಾಯೆ ವಧಿಸ್ಪುದದಕೆ ನೀಲಕತಿಪೇಟ್ಟಿಪೆನು |
ಸಾಯದಿಂ ನೀಲಿರಸಗಜನಿಂಬೆನಿಂಬೆರಸವೇಟಿಭಾವನೆಗ್ಯೈದು ||
ಪವಳವನು ನೀರಿನೊಳು ತೊಳೆದುವೊಪ್ಪವನಿಕ್ಕ |
ಲವನು ಬಿಳಿಲೊಳಗಿಟ್ಟು ಆಲತಿಗೆಯ ರಸದಲ್ಲಿ |
ತವೆ ಮುತ್ತುಗದ ಪುಷ್ಪವನು ಅರೆದು ಎಳ್ಳೆಣ್ಣೆಯೊಳ್ ಕಲಸಿ ಲೇಪಿಸಲ್ಕೆ ||
ಕವಡೆಹತ್ತಿಯಬೀಜ ಗಜ್ಜುಗದ ತಿರುಳಿನಿಂ |
ದವನು ನೀರಲಿಯರೆದು ತೊಳೆಯುಲ್ಕೆ ಛಾಯೆ ತಾ |
ಪವಳಕತಿತೋರ್ಪುದದನಱಿದು ಮಂಡಲಿಮಾಟ್ಪಿನೆಂದಗಸ್ತ್ಯಂ ಪೇಟ್ಟಿನು ||

—೦—

ವೀರರಾಜ ಸು. 1720

ಈತನು ವೈದ್ಯಸಂಹಿತಾಸಾರಾರ್ಣವವನ್ನು ಬರೆದಿದ್ದಾನೆ. ಇವನು ಕಳಲೆರಾಜರಲ್ಲಿ ಒಬ್ಬನು. ಇವನ ಪಿತಾಮಹನು ಕಾಂಕಯ್ಯ; ತಂದೆ

ಮೈಸೂರು ದೊರೆಯಾದ ಚಿಕ್ಕದೇವರಾಜನಲ್ಲಿ (1672--1704) ದಳವಾಯಿಯಾಗಿದ್ದ ದೊಡ್ಡೇಂದ್ರನು. ಈ ದೊಡ್ಡೇಂದ್ರನು

ಮರಾಟರೊಳ್ ಪ್ರಸಿದ್ಧರಾಗಿದ್ದ ಜೇಜೇಗಾಟಿ ಮುಂತಾದ ಮಹಾಕೂರ್ಮಂ ಕಡಿದು ಅವರಾನೆಕುದುರೆಬಿರುದುಮುಂತಾಪನಂ ಕೊಂಡು ಜಸವಂತರಾಯನ ಮೂಗಂ ಕೊಯಿಸಿ ಕರ್ನಾಟಕದೇಶಮಂ ವಿಜಯಲಕ್ಷ್ಮೀನಾಟಕಪ್ರದೇಶಮೆನಿಸಿ ಕರ್ನಾಟಕ ಚಕ್ರವರ್ತಿ ಚಿಕ್ಕದೇವೇಂದ್ರಂಗೆ ದಕ್ಷಿಣಭುಜಾದಂಡಮೆನಿಸಿ ಕೀರ್ತಿವಡೆದಂ ಎಂದು ಕವಿ ಹೇಳುತ್ತಾನೆ. ಕಳಲೆಯಪುರವರಾಧೀಶ್ವರನುಂ ದಾನ ಕರ್ಣನುಂ ಸಂಗ್ರಾಮಾರ್ಜುನನುಂ ಸಚ್ಚಕ್ರವರ್ತಿಸಮನುಂ ದೊಡ್ಡೇಕನೃ ವಾಳಕರೊಳಿಣಿಕೆವೆತ್ತ ಸುಧರ್ಮಾದಿಸದ್ಗುಣಗಣಭೂಷಣ ಭೂಷಿತಾವಯವನುಮೆನಿಸಿ ಲೋಕಮುಂ ತನ್ನ ಜಸದಿಂ ಬೆಳಗುವ ಶ್ರೀವೀರರಾಜಭೂಪಾಲಂ--ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1720 ಆಗಬಹುದು. ದಳವಾಯಿದೇವರಾಜನೂ ಕಳಲೆ ನಂಜರಾಜನೂ ಇವನ ಮಕ್ಕಳು.

ದೇವಚಂದ್ರನು ತನ್ನ ರಾಜಾವಳೀಕಥೆಯಲ್ಲಿ (1838) ಈತನ ವಿಷಯವಾಗಿ ಹೀಗೆ ಬರೆದಿದ್ದಾನೆ—

ಕಳಲೆವಂಶದ ವೀರರಾಜಂ ದೊಡ್ಡಕೃಷ್ಣರಾಯರ ದಿವಸದಲ್ಲಿ ಅನೇಕ ವೈದ್ಯ ಶಾಸ್ತ್ರಂಗಳಿಂಕಿಪ್ಪ ರೋಗಹರಮಪ್ಪ ಚಿಕಿತ್ಸೆಗಳಂ ಕನ್ನಡನಾಕ್ಯದೊಳ್ ವೀರರಾಜೋಕ್ತಿವಿಲಾಸಮೆಂದು ಬರೆಯಿಸಿದಂ.

ಇವನ ಗ್ರಂಥ

ವೈದ್ಯಸಂಹಿತಾಸಾರಾರ್ಣವ

ಇದಕ್ಕೆ ವೀರರಾಜೋಕ್ತಿವಿಲಾಸವೆಂಬ ಹೆಸರೂ ಉಂಟು. ಇದರಲ್ಲಿ ಅನೇಕಸಂಹಿತೆಗಳೊಳಗೆ ಹೇಳಿರುವ ಪ್ರಯೋಗಗಳು ಗದ್ಯರೂಪವಾಗಿ ವಿವರಿಸಲ್ಪಟ್ಟಿವೆ; ಒಟ್ಟು ಪ್ರಯೋಗಗಳ ಸಂಖ್ಯೆ 169. ಈ ಗ್ರಂಥವು ಹುಟ್ಟುವುದಕ್ಕೆ ಕಾರಣವು ಹೀಗೆ ಹೇಳಿದೆ: —

ಎಳವೆಯೊಳ್ ಕಾವ್ಯನಾಟಕಾಲಂಕಾರವ್ಯಾಕರಣತರ್ಕಾಯುರ್ವೇದಧನುರ್ವೇದಾದಿಸಮಸ್ತವಿದ್ಯೆಗಳಂ ಕಲ್ತು, ಶೌರ್ಯೌದಾರ್ಯಸ್ಥೈರ್ಯಗಾಂಭೀರ್ಯಮಾಧುರ್ಯಚಾತು

ರ್ಯವಿನಯಾದಿಗುಣಂಗಳಂ ಮೂರ್ತಿಗೊಂಡಂತೆ ಪಜ್ಜಳಿಸುತ್ತಿ ನಗಲಿತ್ತಿವಡೆದು ತಾಂ ಸಕಲಕಲಾಕೋವಿದನಪ್ಪುದಱಿಂ ವಿದ್ವತ್ಸನ್ನಾಜದೊಳ್ ಕಾವ್ಯನಾಟಕಾಲಂಕಾರತರ್ಕ ಶಬ್ದವಿಚಾರಂಗೆಯ್ಯುತ್ತಿ ಒಂದುದಿನಮಾಯುರ್ವೇದಮಂ ವಿಚಾರಿಸುತಿರ್ದು

ದತೆಯೊಳ್ ಭೈಷಜ್ಯಶಾಸ್ತ್ರಂ ಸುಖಕರಮಖಿಳಗಾರ್ಹದೊಡಂ ವೈದ್ಯಬೋಧಂ |
ತರದಿಂ ತಳ್ಗುತ್ತಿ ಬಂದತ್ತವನಿಯೊಳಿನುತಾವೈದ್ಯಶಾಸ್ತ್ರಕ್ಕೆ ಟೀಕಂ ||
ಬರೆದಂ ವೈದ್ಯಪ್ರವೀಣರ್ ಪೊಗಳುತಿರೆ ಮಹಾಸಂಹಿತಾದುರ್ಧರತ್ನಾ |
ಕರದಿಂದೆತ್ತುತ್ತಿ ಸಾರಾಂತಮನೊಡನೊಲವಿಂ ವೀರರಾಜಕ್ಷಿತೀಂದ್ರಂ ||

ಧನ್ವಂತರಿ ವೆಂಬದಱಾದವನಿಂವೀಯಾಯುರ್ವೇದಂ ಪಲವುವಿಧವನಾಗಿ ನೆಗಳ್ತ್ತಿ ವೆತ್ತಿಪ್ಪುದು. ಆ ಸಮಸ್ತಗ್ರಂಥಂಗಳಂ ಕ್ರೋಡೀಕರಿಸಿ ಪರಿಶೋಧಿಸಿ ಲೋಕಹಿತಾರ್ಥಮಾಗಿ ಸಾರಾಂತಮಂ ಜತೆಗೆಯ್ದು ನವರತ್ನದೊಳಾಣಿಮಣಿಯನಾಯ್ದಾಯ್ದು ಹಾರಮಂ ಬಿತ್ತರಿಸುವಂತೆ ಈ ವೈದ್ಯಸಂಹಿತಾಸಾರಾರ್ಣವ ಗ್ರಂಥಮಂ ಕನ್ನಡವಾಕ್ಯದಿಂದೆ ವಿರಚಿಸಿದಂ.

ಗ್ರಂಥಾವತಾರದಲ್ಲಿ ಶಿವ, ಪಶ್ಚಿಮರಂಗನಾಥ, ರಾಮ ಇವರುಗಳ ಸ್ತುತಿಯಿದೆ. ಬಳಿಕ ಚಿಕ್ಕದೇವರಾಜ, ದೊಡ್ಡೆಂದ್ರ ಇವರುಗಳ ಸ್ತುತಿರೂಪವಾದ ಕೆಲವು ಗದ್ಯಗಳನ್ನು ಹೇಳಿ ಅನಂತರ ಕವಿ ಗ್ರಂಥವನ್ನು ಆರಂಭಿಸಿದ್ದಾನೆ. ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀವಾಗೀಶಾದ್ಯಮರಪರಿವೃಢಸುರುಚಿರಮಣಿಮುಕುಟನೂತ್ನರತ್ನಪ್ರಭಾಕಿಮ್ಮೀರಿತಚಾರುಚರಣಾರವಿಂದದ್ವಂದ್ವ ಶ್ರೀಮದುಮಾಮಹೇಶ್ವರಕೃಪಾಕಟಾಕ್ಷಪಡೆಂದ್ರಿ ಕಾಚಕೋರಾಯಮಾನ ಕಳುಲಿಪುರವರಾಧೀಶ್ವರ ಪರಾಕ್ರಮಪಾರ್ಥ ದೊಡ್ಡರಾಜೇಂದ್ರತನೂಭವ ಸಕಲಕಲಾಪ್ರವೀಣ ಶ್ರೀಮದ್ವೀರರಾಜೇಂದ್ರಪ್ರಣೀತಮಪ್ಪ ಸಕಲವೈದ್ಯಸಂಹಿತಾಸಾರಸಮುದ್ರದೊಳ್

ಈ ಗ್ರಂಥದಿಂದ ರಾಮಸ್ತುತಿರೂಪವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಶ್ರೇಯಂ ಪಾಲಿತದಿವಿಜನಿ | ಕಾಯಂ ನಿಯಮಿತಸಮಸ್ತಲೋಕಾಭ್ಯುದಯೋ ||
ಪಾಯಂ ಕಡುಗೆಮಗಖಿಲವಿ | ಧೇಯಂ ಶ್ರೀರಾಮನವಳಗುಣಗಣಧಾಮಂ||

———

ಚೆನ್ನಯ್ಯ ಸು. 1720

ಈತನು ಪದ್ಮಿನೀಪರಿಣಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ; ಪೆಂಬಳ್ಳಿವಂಶದವನು; ಗಾರ್ಗ್ಯಗೋತ್ರದವನು; 'ಸೇನಾಧೀಶಗೃಹಾಧ್ಯಕ್ಷನಾಗಿಯೆ ಸೇನಾನಿಶ್ವನಾಮವನು ಪಡೆದ' ಶಿವಪೂಜಾನಿರತನೂ ಆದ ಚೆನ್ನಯಾವನಾತ್ಯನ ಮುಮ್ಮಗನು. ತನ್ನ ಪೋಷಕನಾದ ಕಳಲೆವೀರರಾಜನ (ಸು. 1720 ಇಷ್ಟಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಈ ವೀರರಾಜನ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ.—

ಕರ್ನಾಟಕದೇಶದ ಕಾವೇರಿಯ ತೀರದಲ್ಲಿರುವ ಶ್ರೀರಂಗಪಟ್ಟಣವನು ಮಹಿಶೂರ ಕೃಷ್ಣೇಂದ್ರನಾಳುತ್ತಿಹನು. ಅವನ ಕುಲಪರಂಪರೆಯಲ್ಲಿ ಸೌರಾಷ್ಟ್ರದೇಶಾಧೀಶರಾದ ಕಳಲೆವಂಶದವರು ಸೇನಾನಿಗಳಾಗಿದ್ದರು. ಈ ಸೇನಾನಿಗಳಲ್ಲಿ ಕಾಂತರಾಜನು ಪ್ರಸಿದ್ಧನು. ಅವನ ಮಗ ದೊಡ್ಡಯರಾಜ. ಅವನ ಮಗ ಒಹಳಧವಿಷ್ಯನಾದ ವೀರರಾಜ. ಇವನ ಮಕ್ಕಳು ರಾಮಭಕ್ತನಾದ ದೇವರಾಜ, ದೊಡ್ಡಯರಾಜ, ಶಿವಭಕ್ತನಾದ ನಂಜರಾಜ.

ಕವಿ ಹೇಳುವ ದೊರೆ ದೊಡ್ಡಕೃಷ್ಣರಾಜ (1713-1731) ನಾಗಿರಬೇಕು. "ಭಾಗ್ಯಪುರವಾಸ ಜಯತು" ಎನ್ನುತ್ತಾನೆ. ಈ ಭಾಗ್ಯಪುರವಾವುದೋ ತಿಳಿಯದು. ಕವಿಯ ಕಾಲವು ಸುಮಾರು 1720 ಆಗಬಹುದು.

ಇವನ ಗ್ರಂಥ

ಪದ್ಮಿನೀಪರಿಣಯ

ಇದು ಸಾಂಗತ್ಯದಲ್ಲಿ ಬರೆದಿದೆ; ಆಶ್ವಾಸ 3, ಸಂಧಿ 18, ಪದ್ಯ 2500. ಕವಿ ಕಳಲೆ ವೀರರಾಜನನ್ನು ಸಂಬೋಧಿಸಿ ಈ ಗ್ರಂಥವನ್ನು ಬರೆದಿದ್ದಾನೆ. ವೀರರಾಜನು ಕೇಳಿದುದರಿಂದ ಇದಕ್ಕೆ ಸೊಬಗುಂಟಾಯಿತೆಂದು—

ಕಳಲೆಯ ವಂಶೋದ್ಧಾರಕ ಮಹಿಶೂ | ರಿಳಿಪಾಣ್ಮಗತಿಪಿತನೆನಿಸು |
ಸಲೆ ರಾಜಿಪ ವೀರೇಂದ್ರಕೇಳಲು ನೀಂ | ಜೆಲುವೆತ್ತುದೀಕಾವ್ಯರಚನೆ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ. ಇದರಲ್ಲಿ ತಿರುವತಿ ವೆಂಕಟರಮಣಸ್ವಾ

ಮಿಗೂ ಪದ್ಮಾವತಿಗೂ ನಡೆದ ವಿವಾಹದ ಕಥೆ ಹೇಳಿದೆ. ಇದರ ಕಥಾಗಳ್ಳ
ವನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ —

ಶಿತಕರಾನ್ವಯಜಾತನಾಕಾಶರಾಜನ | ಸುತೆ ಪದ್ಮಿನಿಯಿಂವಿರೆಯು |
ಪತಿ ವೆಂಕಟೇಶನ ವರಿಸಿದ ಕಥೆಯು ಸಂ | ಗತಿವೆತ್ತು ಪಸ್ತರಿಸುವೆನು ॥

ಈ ಕಥೆ ವರಾಹಪುರಾಣೋಕ್ತವೆಂದು ಹೇಳುತ್ತಾನೆ. ತನ್ನ ಗ್ರಂಥದ
ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಇನಿಯುಳ ತಂಗಾಳಿಯು ಭಾವನ್ನದ | ಣ್ಪಿನ ಜೊನ್ನದ ಜಾತಿಯುಲರ |
ಘನಸಾರದ ಸೋಂಕಿನ ಸುಖವೀವುದು | ಜನಪತಿಯಿಾಕೃತಿವಾಕ್ಯ ॥
ಇದು ಶೃಂಗಾರಾಂಗನೆಯಲಂಕೃತಿ ಕೇ | ಳಿದು ಕನ್ನಡದೊಳ್ನುಡಿಯು |
ಸದನಕ್ಕಲಿ ಬೀಡು ಶುಭದಾಡಂಬೊಲ | ನಿದು ಪುಣ್ಯದಗಣ್ಯಪಣ್ಯ ॥

ಪ್ರತಿಸಂಧಿಯ ಆರಂಭದಲ್ಲಿಯೂ ಚೆನ್ನಕೇಶವದೇವರ ಅಂಕಿತವಿದೆ.
ಗ್ರಂಥಾವತಾರದಲ್ಲಿ ಚೆನ್ನಕೇಶವ ಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ,
ಗಣೇಶ, ಸರಸ್ವತಿ, ಸೂರ್ಯ, ಲಕ್ಷ್ಮಿ ಇವರುಗಳನ್ನು ಹೊಗಳಿದ್ದಾನೆ. ಈ
ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ದೇಶ

ಹಾಯೆಂಬುದು ಸೋಮಮಂತ್ರದ ಕಡೆಯೊಳು | ಹೂಹೆಂಬುದು ಕೇಳ್ವ ಕಥೆಗೆ |
ಕಾಯೆಂಬುದು ಸರಹದೊಳಲ್ಲದೆ ಬೇ | ಱೂಹಿಸಲಾನಾಡೊಳಿಲ್ಲ ॥

ರಾಜಸಭೆ

ಹಲವುಬುದ್ಧಿಯನುಳ್ಳ ಬಹುಲಿಪಿಗಳ ಬಲ್ಲ | ತಿಳಿರು ಶಾಸನದಕ್ಕರದ |
ಬಲುಹುಳ್ಳ ನೆನಹುಳ್ಳ ಕರಣಿಕರೆಸೆದರು | ನಲವಿನಿಂದಾಸಭೆಯೊಳಗೆ ॥
ಎಸೆವ ಕೈಜಳಕವಾಡಕಸುಶಬ್ದಗಳುಳ್ಳ | ವಸುಧೇಶಗಸುಸಮನೆನಿಪ |
ದೆಸೆಯ ವಾರ್ತೆಗಳನೋದುವ ಕೇಳ್ವ ಲಿಪಿಸರಾ | ಯಸದವರೆಸೆದೊತ್ತಿನಲಿ |
ಜರೆರುಜೆಗಳ ಮಾಣಿಸಿ ಮಾನವರ ನಿ | ರ್ಜರರ ಸಮಾನಂಗೊಳಿಪ |
ಕರಶುದ್ಧಿನಿರ್ಮಳಕರಣಗಳುಳ್ಳ ವೈ | ದ್ಯರ ತಂಡ ಸಭೆಯೊಳೊಪ್ಪಿದುದು ॥

ನಕ್ಷತ್ರ

ಜಳಜಭವಾಂಡಕರಂಕಕಿಕ್ಕಿದ ಮು | ಚ್ಚುಳು ತಿಥಿಲತೆಯುಪ್ಪುದೆಂದು |
ಜಳಜುಜ ಬಿಟ್ಟದ ಬೆಳ್ಳಯ ನೊಳೆಗಳಂ |ತಳವಟ್ಟುವ ತಾರೆಗಳು ||

ಮೂವಿನವರ

ನನೆಯೆಳದಳಿರ್ ಪಸುರೆಲೆ ಮುಗುಳಲಗ್ ಮಿಡಿ | ಕೊನರ್ ದೋರೆಗಾಯ್ ತನಿವಣ್ಣು |
ಕೊನೆಪರಿಯಂತ ತೀವಿರೆ ಚೂತವೆಸೆದುದು | ಮನಸಿಜಮಂಟಪದಂತೆ ||

ವರ್ಷಾಕಾಲ

ತೆಪ್ಪಿದಕ್ಷಿಜಂಜುಗಳ್ ನೆಗೆದು ನೀಡಿದ ಕಂತ | ಮಗಳ್ದ ತುಪ್ಪುಟಿಂಕೆಗಳು |
ನೆಜ್ಜೆಯೆ ಮುಂಬನಿಯ ತಂಬನಿಯ ಕದ್ರುಂಕಿದು | ವಿರಬೆ ಚಾತಕಗಳು ನಲಿದು||

ಶರತ್ಕಾಲ

ಮುನ್ನೀರೊಳು ನೀರ್ಗಳನೆಲ್ಲ ಕಾರ್ಮುಗಿಲ್ | ಮುನ್ನವೆ ತಂದು ಸೂಸಿದೊಡೆ |
ಇನ್ನು ಬೆಳ್ಮಗಿಲು ಮುತ್ತುಗಳನೆ ಕಱ್ಪಿದಪು | ದೆನ್ನಲಾದುದು ಶರದ್ವರ್ಷ ||

—೦—

ರಾಮಾಯಣಂ ತಿರುವಾಲೆಯಾಚಾರ್ಯ 1722

ಈತನು ಶ್ರೀರಂಗಪಟ್ಟಣದ 64 ನೆಯ ಮತ್ತು 100 ನೆಯ ಶಾಸನಗಳನ್ನು ಬರೆದಂತೆ ಆ ಶಾಸನಗಳ ಕೊನೆಯಲ್ಲಿರುವ ಈ ಶ್ಲೋಕಗಳಿಂದ ತಿಳಿಯುತ್ತದೆ—

ಕರ್ಣಾಟಾಂಧ್ರಸುಸಂಸ್ಕೃತಕವಿತಾಗಾಂಧರ್ವಕೇಷು ಯಃ ಕುಶಲಃ |
ತೇನೇದಂ ರಾಮಾಯಣತಿರುಮಲೆಯಾಚಾರ್ಯಸೂರಿಣಾ ಫಣಿತಾಃ |
ಗ್ರಂಥಾಃ ಸಂತೋಷಾಯ ಪ್ರಭವಂತ್ವಿಹ ತಾಮ್ರಶಾಸನೇ ಲಿಖಿತಾಃ ||

ಶ್ರೀರಾಮಾಯಣಭಾರತಪಾರಾಯಣನಿಹಿತವೃತ್ತಿನಾ ಕೃತಿನಾ |
ಕವಿನಾ ತಿರುಮಲೆಯಾಚಾರ್ಯೇಣೇದಂ ತಾಮ್ರಶಾಸನಂ ಲಿಖಿತಂ ||

ಈತನು ಶ್ರೀವೈಷ್ಣವಕವಿ; ಕೌಂಡಿನ್ಯಗೋತ್ರದವನು. ಇವನಿಗೆ ಸಂಸ್ಕೃತ, ಕನ್ನಡ, ತೆಲುಗು ಈ ಮೂರು ಭಾಷೆಗಳಲ್ಲಿಯೂ ಕವಿತೆಯನ್ನು ಮಾಡುವ ಶಕ್ತಿಯೂ ಸಂಗೀತದಲ್ಲಿ ಪಾಂಡಿತ್ಯವೂ ಇದ್ದಂತೆಯೂ, ರಾಮಾಯಣಭಾರತಗಳನ್ನು ಓದುವುದು ಇವನಿಗೆ ವೃತ್ತಿಯಾಗಿದ್ದಂ

ತೆಯೂ ಮೇಗಣ ಶ್ಲೋಕಗಳಿಂದ ತಿಳಿಯುತ್ತದೆ. ಮೇಲೆ ಹೇಳಿದ ಶಾಸನಗಳಲ್ಲಿ 64 ನೆಯದು 1722 ರಲ್ಲಿಯೂ ಮತ್ತೊಂದು 1724 ರಲ್ಲಿಯೂ ಬರೆದುವು. ಒಂದನೆಯದರಲ್ಲಿ ಮೈಸೂರು ದೊರೆಯಾದ ದೊಡ್ಡಕೃಷ್ಣರಾಜನು (1713-1731) ತೊಣ್ಣೂರಿನಲ್ಲಿ ಎರಡು ಅಗ್ರಹಾರಗಳನ್ನು ಮಾಡಿ ಬ್ರಾಹ್ಮಣರಿಗೆ ಬಿಟ್ಟಂತೆಯೂ ಎರಡನೆಯದರಲ್ಲಿ ಕಾಂಚಿಯ ವರದರಾಜ ದೇವರಿಗೆ ಕೆಲವು ಗ್ರಾಮಗಳನ್ನು ಕೊಟ್ಟಂತೆಯೂ ಹೇಳಿದೆ. ಈ ಎರಡು ಶಾಸನಗಳನ್ನೂ ರಾಜನ ಆಜ್ಞಾನುಸಾರವಾಗಿ ಕವಿ ಬರೆದಂತೆ ಹೇಳುತ್ತಾನೆ. 100 ನೆಯ ಶಾಸನವು ಸಂಸ್ಕೃತದಲ್ಲಿದೆ; 64 ನೆಯದರಲ್ಲಿ ಕವಿ ಮಧ್ಯೇ ಮಧ್ಯೇ ಕೆಲವು ಕನ್ನಡ ಪದ್ಯಗಳನ್ನು ಸೇರಿಸಿದ್ದಾನೆ. ಇವುಗಳಲ್ಲಿ ಕೆಲವು ತಿರುಮಲಾರ್ಯನ (1645-1706) ಅಪ್ರತಿಮವೀರಚರಿತೆಯಿಂದ ಅನುವಾದ ಮಾಡಲ್ಪಟ್ಟವೆ. ಕೆಲವು ಇವನ ಸ್ವಂತಪದ್ಯಗಳಾಗಿರಬಹುದು. ಒಂದನ್ನು ಉದಾಹರಿಸುತ್ತೇವೆ—

ಕೃಷ್ಣರಾಜನ ಸ್ತುತಿ

ಎರೆವಗರ್ಗೀವುವು ಸುರತರು । ಸುರಮಣಿಸುರಪಶುಗಳೆರೆಯದೊಡವೊಲ್ವೀವಂ ।
ಮರನುಂ ಮಣಿಯುಂ ಪಶುವುಂ । ದೊರೆಯೇ ಶ್ರೀಕೃಷ್ಣರಾಜಧರಣೀಶ್ವರನೊಳ್॥

—•—

ಲಕ್ಷ್ಮಕವಿ. 1723

ಈತನು ಭಾರತವನ್ನೂ ರುಕ್ಮಾಂಗದಚರಿತ್ರೆಯನ್ನೂ ಬರೆದಿದ್ದಾನೆ. ಭಾರತದಲ್ಲಿ "ಕುಕವಿಗಳೆಂಬ ಪರ್ವತಂಗಳಿಗೆ ಪವಿ ಕವಿಲಕ್ಷ್ಮ ಪೇಳ್ದ ಘನ ಸರ್ವಲಕ್ಷಣವಾದ ಕರ್ಣಾಟಕದ ಚತುರ್ದಶವಾದ ಸತ್ಕವಿತ್ವ" ಎಂಬುದರಿಂದ ಭಾರತವು ಇವನು ಬರೆದ ಕನ್ನಡ ಗ್ರಂಥಗಳಲ್ಲಿ 14 ನೆಯದು ಎಂದು ತಿಳಿಯುತ್ತದೆ. ಉಳಿದ ಗ್ರಂಥಗಳಾವುವೋ ತಿಳಿಯದು. ಕಂದ ರೂಪವಾದ ಒಂಸುನೀತಿಗ್ರಂಥವೂ ವಿತತ್ಕೃತವೆಂದು ತಿಳಿಯುತ್ತದೆ.

ಇವನು ಶ್ರೀವೈಷ್ಣವಕವಿ; ಕಾಶ್ಯಪಗೋತ್ರದವನು; ರಾಮಚಂದ್ರನ ಮಗನು; "ಶೇಷಖಗರಾಜನವತಾರ ರಾಮಾನುಜಾ । ಧೀಕನಗ್ರಜದಿವ್ಯಬಿರುದುವೈತ್ತಮಣಿಪ್ರ । ಕಾಶಪಡ್ದರ್ಕನಸ್ಥಾಪನಾಚಾರ್ಯ ಮಾಯಾವಾದಿಕೋ

ಳಾಹಳ ॥ ಶ್ರೀಕನೆಪ್ಪತ್ತ್ನಾಲ್ಕೆಸೆವ ಸಿಂಹಾಸನಾ। ಗ್ರೇಕರೆನೆ ಪೆಸರಾದ ಎಂ
ಬಾರ ವರವಂಕ | ದೇಶಿಕೋತ್ತಮರ" ಶಿಷ್ಯನು. ಇವನ ಸ್ಥಳ ಬಗಪುರ ;
ಇದು ಆನೆಕಲ್ಲಿಗೆ ಸವಿಾಪದಲ್ಲಿರುವ ಹಾರುಗದ್ದೆಯು ನಾಮಾಂತರವು. ಅಲ್ಲಿ
ಯ ದೇವರಾದ ಚೆನ್ನಿಗರಾಯನ ಅಂಕಿತದಲ್ಲಿ ಈ ಗ್ರಂಥಗಳನ್ನು ಬರೆದಿ
ದ್ದಾನೆ. ಪೂರ್ವ ಕವಿಗಳಲ್ಲಿ ಕುಮಾರವ್ಯಾಸನನ್ನು (ಸು. 1430) ಅನುಸ
ರಿಸುವಂತೆ ಹೇಳುತ್ತಾನೆ ಮತ್ತೊಂದುಕಡೆ "ಸುರಪುರದ ಲಕ್ಷ್ಮೀಶಕವಿ
ಯೊರ್ವನಲ್ಲದೆ ಮಿಕ್ಕ ಬರಡುಗವಿಗಳ ಲೆಕ್ಕಿಸದ ಬಿರುದು" ಎಂಬುದರಿಂದ
ಜೈಮಿನಿಭಾರತವನ್ನು ಬರೆದ ಲಕ್ಷ್ಮೀಶನಿಗೆ (ಸು. 1700) ಈಚೆಯವನೆಂ
ಬುದು ವ್ಯಕ್ತವಾಗುತ್ತದೆ. 7ನೆಯ ಪರ್ವದ ಕೊನೆಯಲ್ಲಿ ಕವಿಯು ಸ್ತುತಿ
ರೂಪವಾದ ಒಂದು ಪದ್ಯವನ್ನು ಹೇಳಿ ಅನಂತರ ಶಕ 1642 ನೆಯ ಶೋಭ
ಕೃದ್ವರ್ಷವು ಹೇಳಿದೆ ಇದು ಬಹುಶಃ ಗ್ರಂಥರಚನಾಕಾಲವಾಗಿರಬೇಕು.
ಆದರೆ ಶೋಭಕೃದ್ವರ್ಷವು ಶಕ 1646 (ಕ್ರಿಸ್ತ 1723) ಆಗುತ್ತದೆ. ಈ
ಕವಿಗೆ ಪುಂಭಾವಭಾರತಿ ಅಥವಾ ಗಂಡುಕಾರದೆ, ಕನ್ನಡಕವೀಂದ್ರಾಭರಣ
ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ ಲಕ್ಷ್ಮೀಯ ಅನುಗ್ರಹದಿಂದ
ಹುಟ್ಟಿದುದರಿಂದ ಲಕ್ಷ್ಮ ಎಂಬ ಹೆಸರು ಒಂದಂತೆ ಕವಿ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಬಾಣ, ವರರುಚಿ, ವಾಲ್ಮೀಕಿ, ವ್ಯಾಸ, ದಂಡಿ
ಭವಭೂತಿ, ಕಾಳಿದಾಸ, ಕುಮಾರವ್ಯಾಸ, ಲಕ್ಷ್ಮೀಪತಿ ಇವರುಗಳನ್ನು
ಸ್ಮರಿಸಿದ್ದಾನೆ.

ತನ್ನ ಕವಿತಾಶಕ್ತಿ, ಪಾಂಡಿತ್ಯ ಮುಂತಾದ ವಿಷಯಗಳನ್ನು ಈ ಪದ
ಗಳಲ್ಲಿ ಹೇಳಿದ್ದಾನೆ—

ವಿಗಡಕವಿವರ್ಗಘನನಿಕರಮಾರ್ತಾಂಡನಿಲಂ |
ಸುಗುಣವಿದ್ವತ್ಕವಿಸಮೂಹಮಂದಾನಿಲಂ |
ಜಗದಿ ಕಾವ್ಯಿಬ್ಬನುಂ ರಚಿಸಿ ಕೋಟಲೆಗೊಳ್ವ ಜಡಕವಿಯುರಣ್ಯಾನಿಲಂ |
ವಿಗೆ ಪೂರ್ವಕೃತಿಚೋರಕಲಿತಮಂಧಾರ್ಕ ವರ |
ಬಗಪುರದ ರಾಮಚಂದ್ರನ ಲಕ್ಷ್ಮನೆಂದು ತಾಂ |
ಬಗೆಯುಜ್ಜಿವ ರಸಿಕರಹುದೆನ್ನ ದೆಸೆಯಿನ್ನ ಸತ್ಕವಿತೆ ವರ್ತಿಪುದಿ ಧರೆಗೆ ॥

ಲೋಕತ್ರಯಂ ತನ್ನ ಶೇಷಮಂದನು ಬಾಳ್ದ |
ಸಾಕುಟ್ಟಿದ ಕವಿಗಳನ್ನೆಡೆಸುವೆನೆ ಎಂದಸಂ |
ದಾಕುಮೂರವ್ಯಾಸನವರ ನುಡಿಯುನ್ನತಿಯ ಕೈಕೊಂಡು ಖಗಪುರದೊಳು ||
ಶ್ರೀಕಮನಜಿನ್ನರಾಯನ ಪರಂಬೆತ್ತು ತಾಂ |
ಬೇಕಾದ ವರ್ಣವಸ್ತುಕಕಾವ್ಯಮುಂ ಪೇಟ್ಟು |
ವ್ಯಾಕರಣಸಾಂಡಿತ್ಯದಿಂದುಟ್ಟಿದ ಕುಕವಿಗಳು ತೃಣವೆಂದನಾಲಕ್ಷ್ಮೀನು ||
ಹರಿಯಿತ್ತ ವರ ಬರೆದುದೆಲ್ಲಂ ಕವಿತ್ವ ವಿ |
ಸ್ತರಪ್ರಬಂಧಕೆ ಚಕ್ರವರ್ತಿ ತತ್ಕಾರ್ಥಕ್ಕೆ |
ನರಜನ್ಮಶೇಷ ಶತ್ಕ್ಷಣಯುಕ್ತಿಯೊಳಗೆ ಕನ್ನಡಕಾವ್ಯವಾಸನೆಸಿಸಿ ||
ವರತಪಸ್ಸಿಂದ ಪುಂಭಾವಭಾರತಿಯೆಂಬ |
ಧರುವೆಸರಾಂತ ಸತ್ಕವಿರಾಮಲಕ್ಷ್ಮೀನಿಗೆ |
ಸರಿಯೆಂಬ ಕನ್ನಡಕವಿಗಳು ವಾಸಿಸಿ ಸೋಲ್ತರಂತಾಗಿ ಮುನ್ನಿನರೊಲು ||
ಬರೆದಮೇಲ್ ತೊಡೆದ ಕವಿಯುಲ್ಲ ಪದಗಳನಿಟ್ಟು ಮರಳೆ ಯೋಚಿಸ ಕವಿಯುಲ್ಲ.

ಇವನ ಗ್ರಂಥಗಳಲ್ಲಿ

1. ಭಾರತ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 7 ಪರ್ವಗಳೂ 8 ನೆಯ ಪರ್ವವಾದ ಕರ್ಣಪರ್ವದಲ್ಲಿ 4 ಸಂಧಿಗಳೂ ಇವೆ; ಒಟ್ಟು ಸಂಧಿ 99, ಪದ್ಯ 4187. "ಭಾರತವನಾನಾದಿವಿಡಿದೊಡನೆ ಪೇಟ್ದೆ ವಿದ್ವತ್ಸಭೆಗಳಹುದೆನೆ", "ಭಾರತಕಥೆಯ ಕನ್ನಡದಿ ವಿಸ್ತರಿಪೆ" ಎಂಬುದರಿಂದ ಭಾರತಕಥೆಯನ್ನು ಪೂರ್ತಿಯಾಗಿ ಬರೆದಿರಬೇಕು. ಆದರೆ "ಕೃಷ್ಣಾರ್ಜುನರ ಚಾರುಲೀಲಾಸ್ಪದವ ಧಾರಿಣಿಯೊಳಭಿವರ್ಣಿಪೆಂ, ಕೃಷ್ಣಾರ್ಜುನರ ಸಂಗ್ರಾಮವಂ ವರ್ಣಿಪೆಂ, ಅಚ್ಯುತಾರ್ಜುನರ ಸಲ್ಲೀಲೆ" ಎಂಬುದರಿಂದ ಈ ಭಾಗಕ್ಕೆ ಕವಿ ವಿಶೇಷವಾಗಿ ಗಮನವನ್ನು ಕೊಟ್ಟಿರುವಂತೆ ತೋರುತ್ತದೆ. ಭಾರತಕಥೆಯನ್ನು ವರ್ಣಿಸುವುದು ಸದರವಲ್ಲ ಎಂಬ ಅಂಶವನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ವೆಚ್ಚಕ್ಕೆ ಕನಕಗಿರಿಯಾಗಿ ದೀಪಾಳಿಗಂ |
ದೊಚ್ಚತದ ಸರ್ಪಸಾಗರಮಾಗೆ ಸ್ಥಾವರದ |
ವೊಚ್ಚವೊಸಪರ್ಣಗಳ್ ತಾಮೆಂತೋಲೆಯೆನಿಸೆಯಿನಬಾಣಾಸುರರು ಕರಗಳ ||
ಮೆಚ್ಚಿ ಕೊಡೆ ಶೇಷನಿಚ್ಛಾಸಿರದ ಜಿಹ್ವೆಯಂ |
ನಿಚ್ಚಳದೊಳೀಯೆ ಸುರಕುಜ ಕಂಠವಾಗಿ ಬರೆ |
ದುಚ್ಚರಿಸಲಸದಳದ ಭಾರತವ ಪೇಳ್ದಿನೀಗಂಡುಶಾರದೆ ಧರೆಯೊಳು ||

ಅಲ್ಲದೆ ಭಾರತಕಥೆಯ ವಿಷಯದಲ್ಲಿ—

ಸಕಲ ವೇದಶಾಸ್ತ್ರವೆಂಬ ಪುಣ್ಯನದಿಗಳಂ ರಾಸಿಗೈದು ಬ್ರಹ್ಮನು ಭಾರತವೆಂಬ ವಾಗಾಶಿಯಂ ವ್ಯಾಸನೆಂಬ ಮಂದರದಿಂ ಕಡೆಯುಲ್ಕೆ ದ್ರೌಪದಿಯೆಂಬ ಲಕ್ಷ್ಮಿಯೂ ಭೀಷ್ಮನೆಂಬ ಸುರಭೂಜವೂ ಯುಧಿಷ್ಠಿರನೆಂಬ ಚಂದ್ರನೂ ಭೀಮನೆಂಬ ಐರಾವತವೂ ಅರ್ಜುನನೆಂಬ ಉಚ್ಚೈಶ್ರವಸ್ಸೂ ಕೃಷ್ಣನೆಂಬ ಅಮೃತವೂ ಕೌರವನೆಂಬ ಹಾಲಾಹಲವೂ ವಿದುರನೆಂಬ ಕಾಮಧೇನುವೂ ದ್ರೌಣನೆಂಬ ಚಿಂತಾರತ್ನವೂ ಗಾಂಧಾರಿಯೆಂಬ ಜ್ಯೇಷ್ಠಾದೇವಿಯೂ ಹುಟ್ಟಿದರು—

ಎಂದು ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಖಗಪುರದ ಚೆನ್ನಿಗರಾಯನ ಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಶಿವ, ಗಣೇಶ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಸೂರ್ಯೋದಯ

ಕತ್ತಲೆಯದೆಂಬ ಗಜನೊತ್ತಮಂ ರವಿಸಿಂಹ |
ನೆತ್ತಿಯನ್ನಡರಿಯುವುದೊತ್ತಿ ಪಲ್ಗಳನೆ ಮಸೆ|
ಯುತ್ತ ಮಸ್ತಕಮಣಿಯ ಕಿತ್ತು ದೆಸೆದೆಸೆಗೆ ಚೆಲ್ಲುತ್ತಿಸೆವ ರೀತಿನೆತ್ತು ||
ಮತ್ತರುಣನುದಯಮೆಯ್ದಿತ್ತು ಸತ್ಕಿರಣ ಪ |
ರ್ವತ್ತು ಜಾರರಿಗದೇ ಎಂತ್ತು ಪದ್ಮಗಳ ಸಂ |
ಪತ್ತು ಕೈರವಕೆಯಾಪತ್ತೆನಲ್ಕಕ್ಕ ತೋಱಿತ್ತು ಪರಿಶೋಭಿತದೊಳು ||

ವರ್ಷಾಕಾಲ

ಕಟ್ಟಿನಾಗನದಿ ಕಾಳ್ಮೀಘಗಳ್ ಸ.ಟಿಸುಟಿದು |
ಟಿ
ತಿಟ್ಟಿನೆ ತಿರುಗಿದುನಾರ್ಚುಂದ್ರುಸಿಲನ ನಶದಿ|
ಟಿ
ಸುಟಿನಂಬುಧಿಯ ಜಲಮುಂ ಪೀದುರ್ಕಾಂ ಜಲಕ್ರೀಡೆಯುಂ ಮಾಟ್ಪಿತೆಟಿದಿ ||
ಟಿ
ಬಿಟಿನೆಟಿಗುವ ಸಿಡಿಲ್ಮಿಂಚಾಲಿಗಲ್ಗಳಿಂ |
ಟಿ
ತಟಿನೆ ಬಟ್ಟಿತ ಕುಜಗಳಿಗೆ ತಂವುಗಾಣಿಸುತ |
ಟಿ
ಸೆಟಿ ಸಟಿನೆ ಸರಿವ್ಪಟಿಗಳೆಟಿಗಿ ಪೊಯ್ದುವಾದಿವರಾತ್ರಿಯೆನ್ನದಿಳೆಗೆ ||
ಟಿ ಟಿ

ಸ್ತ್ರೀವರ್ಣನೆ

ಹಾಟಿ'ದುವು ಹಂಸೆಮಲ್ಲಟಿ'ಗಳಾನಡೆಮುಡಿಗೆ |
ತಾಟಿ'ದುವು ನಲ್ನುಡಿಗೆ ದನಿಗೆ ಗಿಳಿಪರವುಟ್ಟ |
ಜಾಟಿ'ದುವು ಚಕ್ರಯುಗನವಿಲು ಜಾತಿಸ್ತ್ರೀಯರುಗಳ ಕುಜಯುಗನಟನೆಗೆ ||
ಊಟಿ' ನೀರೊಳಗೆ ತಲೆಕೆಳಗಾಗಿ ನೊಗಬಾಡಿ |
ತಾಟಿತಟ್ಟಾದುವಾಮಶ್ಯಸ್ಯಕುಮುದಾಳಿಗಳು |
ನೀಟಿಯರ ಕಣ್ಗಳ ವಿಲಾಸಕ್ಕೆ ನಾಚ್ಚಿ ಮರುಳಾಗದವರಾವಿಳೆಯೊಳು ||

ಅರ್ಜುನ ಪರಿಹಾಸ

ಏನಿವೆದ್ದಿರುವಾಧ್ಯರೆಲ್ಲಿಗ್ಮೆದುವಿರಿಯಾ ||
ಮಾನಿನಿಗೆ ಮನವೆಳಸಿತೇ ನಿಮಗೆ ನೋಡೆ ಸಂ |
ಧ್ಯಾನುಕ್ರಮನೆ ನಿತ್ಯಕರ್ಮವೇ ಜಪಹೋಮದೇವತಾರ್ಚನೆಯೆ ಬ್ಟ'ಕ ||
ತಾನಿರುದ್ಧಕೆ ದೊರೆದೊರೆಗಳ ಭಂಗಿಪ ಧನುವ |
ನಾನಲಾಸಿರೆ ಎಂದು ಭೂಸುರಸ್ತೋಮ ನಗೆ |
ನೋನೆಯಂ ಸ.ದಿದರಲ್ಲಲ್ಲಿಯಟಿಯದೆ ಪಾರ್ಥನೆಂಬ ನಿಶ್ಚಯದಿರವನು ||

ಕೃಷ್ಣನಿಂದೆ.

ಕಳ್ಳಿಗೂಟನೆ ಕವರಿ ಬಿಣ್ಣಿವಾಳ್ಗಿನೆಗಳಂ |
ಗೊಲ್ಲಪಳ್ಳಿಯಲಿ ಕದ್ದುಂಡು ಪೂತನಿಯ ತನು |
ವಲ್ಲಿಪ ಕೆನ್ನೀರ ಸುರಿದು ಗೋಪಾಂಗನೆಯರಲ್ಲಿ ಕಳವನಲಿ ಸಿಲ್ಕಿ ||
ಕೊಲ್ಲದ ಕೊಲೆಗೆ ಸೊಕ್ಕಿ ನೇಣಸಿಂದಂ ಕೊರಲಿ |
ನಲ್ಲಿ ಕಟ್ಟಿಸಿಕೊಂಡು ಕರಿಯಹೀಲಿಯನುಟ್ಟು |
ನುಲ್ಲರೊಳ್ ಕಾದಿ ಮೈಗರೆದ ಮಾನವಗಗ್ರಪೂಜೆಯೇ ಭೂಪಾಲಕ ||

ಅಭಿಮನ್ಯುವರಾಕ್ರಮ.

ಎಚ್ಚ ವರಬಾಣಗಳನೆಡೆಗೆಡೆಗೆ ಖಂಡಿಸುವ |
ಮುಚ್ಚಿ ಬಹ ನಾಯಕರ ಮುದಗೆಡಿಪ ಮೋಹರಿಪ |
ನುಚ್ಚುಗರ ನುಗ್ಗನುಸಿಗೈವ ನೂಚಿಸಾಲುಸೂಚಿ'ನಲಿ ನೆಚಿತಿ ಬೊಬ್ಬಿಡುತ್ತ ||
ಕೊಚ್ಚುವಂ ಕೊಚ್ಚಿದು ಥಟ್ಟುಚ್ಚರ್ಪವಂ ಭೋ ಎಂದು |
ಪೆಚ್ಚುವಂತಿರಗಳನು ಬಿಚ್ಚುವಂ ವರ್ಣಿಸ |
ಲ್ಕಚ್ಚರಿ ಧನಂಜಯಾತ್ಮಜನತಿಜಮತ್ಕಾರಮೆಂತುಟೋ ಸಂಗರದೊಳು ||

2 ರುಕ್ಮಾಂಗದ ಚರಿತ್ರೆ.

ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 17, ಪದ್ಯ 953. ಇದರಲ್ಲಿ ನಾರದೀಯಪುರಾಣದೊಳಗೆ ವಸಿಷ್ಠನು ಮಾಂಧಾತನಿಗೆ ಹೇಳಿದ ಏಕಾದಶೀಮಾಹಾತ್ಮ್ಯವು ವರ್ಣಿತವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ.—

ಸಲ್ಲಲಿತಮಾಗಿ ಸರಸೋಕ್ತಿಗೀಡಾಗಿ ವಿಭ |
ವೋಲ್ಲಾಸಕಿಂವಾಗಿ ಲಲಿತಷಟ್ಚರಣಂಗ |
ಳಿಲ್ಲಿಡೆಯೊಳೊಪ್ಪಿತರ್ಪಳಾಗಿ ಕೇಳುವರ ಕರ್ಣಕಮೃತಾಸಾರವ
ಸೊಲ್ಲು ಸೊಲ್ಲಿಂಗೆ ರಮ್ಯವೆನೆಯುತಿದೆ.
ತಿಳಿಗೊಳದೊಳೊಲೆವ ಕೆಂದಾವರೆಗಳಂತೆ ಪೊಂ |
ಗಳಸಳುಜದಬಲೆಯರ ತನುಸೊಬಗಿನಂತೆ ಪ್ರ |

ಜ್ವಲಿಸಿ ಥಳಥಳಿಪ ಪೂರ್ಣೇಂದುಮಂಡಲದಂತೆ ಸಿರಿಯ ಮಾಂಗಲ್ಯದಂತೆ ॥
ಪೊಳೆವಿಂದುಕಾಂತಭಿತ್ತಿಗಳಮೇಲ್ ಪನ್ನೀರ |
ತಳೆದು ತೇದಿಟ್ಟ ಬಾವನ್ನದಿಂವುಗಳಂತೆ |
ಕಳಕಳಿಸಿ ಸೊಗಸೆಸಿಸಿ ಕಾಂತಿಯಿಂ ಶಾಂತಿಯಿಂ ಕಾವ್ಯ ಕಡುಸೊಂಪೀವುದು ॥

ಗ್ರಂಥಾವತಾರದಲ್ಲಿ ಖಗಪುರದ ಚೆನ್ನಕೇಶವಸ್ತುತಿ ಇದೆ.. ಬಳಿಕ ಕವಿ ಶಿವ, ಗಣಪತಿ, ಸರಸ್ವತಿ, ಲಕ್ಷ್ಮೀ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಚಂದ್ರೋದಯ.

ಮಾರನಸ್ತ್ರಂಗಳಂ ಮುಸಿವ ಪೊಸಸಾಣೆಯೋ |
ಧಾರಿಣಿಯ ಒರಹಿಗಳನರಿವ ಪಾಟುಂಬಳೆಯೊ |
ಶ್ರೀರಮಣೆಯಣುಗನಂಗನೆ ಪಿಡಿದ ಕೈಪಿಡಿಯೊ ಸುಮನಸರ್ ಬಿಲ್ಲಿಂಗಳ ॥
ಓರಂತೆ ಧರೆಗೆ ಕುಮ್ಮರಿಸಿದ ಭಾಂಡವೋ |
ಕಾರೊಡೆ ನುರದೊಳೊವ್ವುವ ಕೌಸ್ತುಭಾಕೃತಿಯೊ |
ಮೀಱುತಿಂದ್ರನದಿಶಾವನಿತೆ ಧರಿಸಿರ್ಪ ಸಿಂದೂರಬೊಟ್ಟನೆ ಶಶಾಂಕ ॥

ಉದ್ಯಾನವನ.

ಮಲ್ಲಿಗೆಯ ಪುಷ್ಪರಸಮಂ ಸೋಂಕುತೀಂಟುತಂ |
ಮೊಲ್ಲಿಯ ಪರಾಗಮಂ ತೆಗೆದು ತೇಂಕಾಡುತಂ |
ಮಲ್ಲಾಸದೊಳ್ ಕೇತಕಿಯ ಮೇಲಡದ್ದುಳ್ ಪಾಟಲದ ಸೌರಭವ ಪೀದುಳ್ ॥
ನಿಲ್ಲದಾವನದೊಳ್ ತಿರುಕನಿಕರದಂತೆ ತಣಿ |
ವಿಲ್ಲದರೆಗಱಿಗೆಯುಂ ನಿಲ್ಲದಾಕ್ಷಸುಮಂಗ |
ಳಲ್ಲಿ ಭೃಂಗಾಳಿಗಳ್ ಝೇಂಕಾರಮುಂ ಗೈದುವಾನಂದವಿಮ್ಮಡಿಸಲು ॥

ಸ್ತ್ರೀಯರು.

ನುಡಿಗಳಿಂದಮೃತಮೊಸರ್ವಂತೆ ಮುಖರಸದೊಳಿಂ |
ಗಡಲ ತನಯನನೇಡಿಪಂತೆ ನಗೆಯಿಂದ ಮುಗು |

ಳಿಡಿದ ಮಲ್ಲಿಗೆಯ ಸುರಿವಂತೆ ಕುಡಿನೋಟದಿಂ ಲೋಕಮಂ ಮೋಹಿಪಂತೆ ॥
ನಡೆಯಿಂದೆ ಹಂಸೆದಂತಿಗಳ ಸೋಲಿಸುವಂತೆ |
ಕಡುಜಾಣ್ಮೆಗಾತಿಯರ್ ಕಂಜದಳನೇತ್ರೆಯರ್ |
ಒಡನಡುವಿನಬಲೆಯರ್ ಬಲುವಿಟರ ಧೈರ್ಯಾಪಹಾರಿಯರ್ ಸೊಗಯಿಸಿದರು ॥

3 ನೀತಿಕಂದ.

ಇದರಲ್ಲಿ ಸುಮಾರು 250 ಪದ್ಯಗಳಿವೆ; ಪ್ರತಿಪದ್ಯವೂ "ಖಗ ಪುರಿಚೆನ್ನಾ" ಎಂದು ಮುಗಿಯುತ್ತದೆ. ಕೆಲವು ಪದ್ಯಗಳನ್ನು ಉದಾಹರಿಸುತ್ತೇವೆ—

ಗೂಡಿಗೆ ಸಿಲ್ಕಿದ ಹುಲಿಯಂ | ನೋಡದೆ ತೆಗೆವನನ ಗಾದೆಯಾಗದೆ ಮಾಣದು |
ಕೇಡಾಳಿಗೆ ಮುನ್ನಿಲ್ಲ'ಯದೆ | ಮಾಡಿದ ಹಿತವಹಿತವಹುದು ಖಗಪುರಿಚೆನ್ನಾ ॥
ಜಲವಿಲ್ಲದಿರ್ಪ ಕೋಪಂ | ಗೆಲವಿಲ್ಲದ ಜೂಜಿನಂತೆ ಡೊರೆಯಾಗಿರ್ದಂ |
ಬಲವಿಲ್ಲದಿರಲ್ ಧರೆಯೊಳ್ | ಫಲವಿಲ್ಲದ ವೃಕ್ಷದಂತೆ ಖಗಪುರಿಚೆನ್ನಾ ॥

ಚಿಲುವಾಂಬೆ. ಸು. 1725.

ಈಕೆ ವರನಂದೀಕಲ್ಯಾಣ, ವೇಂಕಟಾಚಲಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗೆಲಾಲಿಪದ, ತುಲಾಕಾವೇರೀ ಮಾಹಾತ್ಮ್ಯ ಟೀಕೆ ಇವುಗಳನ್ನು ಬರೆದಿದ್ದಾಳೆ. ಇವಳು ಮೈಸೂರು ದೊರೆಯಾದ ದೊಡ್ಡ ಕೃಷ್ಣರಾಜನ (1713–1731) ಮಹಿಷಿ; ಪಳವಾಯಿ ದೊಡ್ಡೇಂದ್ರನ ತನುಜ ಕಳಿಲೆಕಾಂತನೃಪನ ಮಗಳು. ಗಂಡನ ಆಜ್ಞಾನುಸಾರವಾಗಿ ವರನಂದೀ ಕಲ್ಯಾಣವನ್ನು ರಚಿಸಿದಂತೆ ಹೇಳುತ್ತಾಳೆ. ಈ ಗ್ರಂಥವು ತಿರುಪತಿ ವೇಂಕಟರಮಣಸ್ವಾಮಿಯ ಅಂಕಿತದಲ್ಲಿ ಬರೆದಿದೆ.

ಇವಳ ಗ್ರಂಥಗಳಲ್ಲಿ—

1. ವರನಂದೀ ಕಲ್ಯಾಣ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 7, ಪದ್ಯ 881. ಇದರಲ್ಲಿ ತಿಳ್ಳಿ ಪಾದಶಾಹನ ಮಗಳಾದ ವರನಂದಿಗೂ ಮೇಲುಗೋಟೆ ಚಿಲುವರಾಯಸ್ವಾ

ವಿಗೂ ನೆಡೆದ ಮದುವೆ ವರ್ಣಿತವಾಗಿದೆ. ಸತ್ಯಭಾಮೆಯೇ ವರನಂದಿಯಾಗಿ ಹುಟ್ಟಿದಂತೆ ಹೇಳಿದೆ. ಗ್ರಂಥಾವತಾರದಲ್ಲಿ ವೇಂಕಟೇಶನ ಸ್ತುತಿ ಇದೆ. ಬಳಿಕ ಗುರು ಮೊದಲಾದ [illegible]ಯ ತೀರ್ಥ್ಯಮಧ್ಯಮವಾದ ಶ್ರೀಧರ ಪರ್ಯಂತವಾದ ಗುರುಪರಂಪರೆಗೆ ಎರಗಿ, ವ್ಯಾಸವಾಲ್ಮೀಕಿಮೊದಲಾದ [illegible]ಕವಿಗಳನ್ನು ವಂದಿಸಿ, ಪರಕಾಲಗುರುವಿನ ಅನುಜ್ಞೆಯೊಳು ವೇಂಕಟೇಶನಿಗೂ ಅಲರ್ಮೇಲುಮಂಗೆಗೂ ಪ್ರಪತ್ತಿಯನ್ನು ಮಾಡಿ "ಅಚ್ಯುತನನ್ನಡದಿನಿವಾತ ಚಿನ್ನತೆಗೊಳಿಸಿ ವರ್ಣಕದಿ ಬನ್ನಣೆಗಳವಟ್ಟ ವರನಂದಿದೇವಿಯ ಚರಿತವ ಪೇಟ್ಪೆ"–ಎಂದು ಗ್ರಂಥನನ್ನು ಆರಂಭಿಸಿದ್ದಾಳೆ.

ಇವಳ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವರನಂದಿಯ ಸೌಂದರ್ಯ.

ನೋಡುವ ನೈದಿಲುಗಳೊ ಕಂಗಳೊ ಮಾ | ತಾಡುವ ಮುಕುರವೊ ಮೊಗವೋ |
ಪಾಡುತಿರುವ ಪೊಂಬಣ್ಣದ ಶಂಖವೊ | ಗಾಡಿಕಾತಿಯ ನುಣ್ಗೊರಲೋ ||
ಸಡೆವೆಳಮಿಂಚೊ ಪೊಂಜೆಳೆಮಯ್ಯೊ ಬಿಡದುಸಿರಿಹುವ ಸಂಪಗೆಯೊ ನಾಸಿಕವೋ |
ಕಡುಸವಿಯೇಱಿ ಮಿಡುಕುತಿಪ್ಪ ಪವಳವೊ | ಬಿಡಗಿಯ ಜಿಂಬಣ್ಣದುಟಿಯೋ ||
ಮೊಗದಾವರೆಗಂಪ ಕೊಳಲೆಂದು ಬಂದು ಸಂ | ಪಗೆಯೆಂದು ಬಗೆದು ನಾಸಿಕವ |
ಸುಗಿದು ಪೆಱಗೆ ನಿಂದ ತುಂಬಿವಿಂಡೆಂಬಂತೆ | ಬಗೆಗೆ ಬಂದುದು ಮುಡಿಯವಳ ||

ವರನಂದಿಯ ವಿರಹ.

ಕುಸುಮಬಾಣಗಳೆಂದು ನಿನ್ನ ಶರಗಳಿಗೆ | ಪೆಸರನಿಟ್ಟವರಾರೊ ತಿಳಿಯೆ |
ಮಸೆದು ಕಿತ್ತಡಸಿ ನುಂಗುವ ಮಾರಿಯ ಬಾಯ|ಬಿಸದ ದಾಡೆಯೊಲು ತೋಱುವುವು||
ಕುಸುಮವೆಂದಳಿಗಳು ಮುಸುಕಲು ಗಱಿ'ಸೀದು | ಮಸಿಯಂತೆ ಕರಿಕುವಡೆದುವು|
ಬಿಸದ ಗುಳಿಗೆಗಿಂತೊಳುವೆಸರಿಟ್ಟು ಮಾ | ನಿಸರ ಕೊಲ್ಲುವನಂತಕನು ||
ಸಂಗರದೊಳು ಶೂರರು ಪುಲ್ಲ ಕರ್ಜೆ ಮು | ರಂಗಳ ಪತ್ತೆ ಕಾದಪರು |
ಅಂಗನೆಯರೊಳು ಕೈಯೆತ್ತರೀಮದನನು | ಹೆಂಗೊಲೆಗೆಂದೆ ಪುಟ್ಟಿದನು ||

ವೇಂಕಟಾಚಲಮಾಹಾತ್ಮ್ಯ ಲಾಲಿಪದ.

ಇದರಲ್ಲಿ ವೇಂಕಟಾಚಲಮಾಹಾತ್ಮ್ಯವನ್ನು ನಿರೂಪಿಸುವ 203 ಲಾಲಿಪದಗಳಿವೆ. ಇವುಗಳಿಂದ ಒಂದೆರಡು ಪದಗಳನ್ನು ತೆಗೆದು ಬರೆಯುತ್ತೇವೆ—

ಮಣಿಮಯದ ಬ್ರಹ್ಮಾಂಡಮಂಟಪದೊಳಿಸೆವ ।
ಫಣಿರಾಜನೆನಿಪ ಸರಪಣಿಯ ಕಟ್ಟಿರುವ ॥
ಅಣಿಯುಳದ ವೃಷಭಾದ್ರಿಕೊಟ್ಟಿಲೊಳು ಮೆಱೆವ ।
ಗುಣ ನಿನ್ನ ತೂಗುವರು ನಾಡಿ ಗುಣಗಣವ ॥ ಲಾಲಿ ॥

ಆದಿಶೇಷ ವಾಯುಗಳ ಸಂವಾದ.

ಜಗವನೊರ್ವಿಡಿವಣಿಯೊಳಣುವೆಂದು ಬಗೆದು ।
ಜಗದೀಕನೆನ್ನ ಮೇಲೊಱಗಿರಲು ನಲಿದು
ಪಗಲಿರುಳು ತಳೆದಿರ್ಪ ಬಲ್ಮೆಯನು ತಿಳಿದು ।
ತಗುಳದಡೆ ನಿನ್ನ ನುಂಗುವೆನು ಬಾಯ್ದೆಱೆದು ॥ ಲಾಲಿ ॥
ಕಾಲಡಗಿ ಕಯ್ಮುಡುಗಿ ತಿವಿಗಳನು ನೀಗಿ ।
ನಾಲಗೆಗಳೆರಡಾಗಿ ನಗೆಗೇಡಿಯಾಗಿ ॥
ಕಾಲಕೂಟವನೊಗದಿ ಕಾರುತಿಪನಾಗಿ ।
ಬಾಲಭಾಷೆಗಳೆ ನಡೆ ಬವರಕನುವಾಗಿ ॥ ಲಾಲಿ ॥

ತಿ ಅಲಮೇಲುಮಂಗೆ ಲಾಲಿಪದ

ಇದರಲ್ಲಿ ತಿರುಪತಿ ವೇಂಕಟರಮಣಸ್ವಾಮಿಯ ಪತ್ನಿಯಾದ ಅಲಮೇಲುಮಂಗೆ ಎಂಬ ಲಕ್ಷ್ಮೀದೇವಿಯ ಸ್ತುತಿರೂಪವಾದ 35 ಲಾಲಿಪದಗಳಿವೆ. ಇವುಗಳಲ್ಲಿ ಒಂದೆರಡನ್ನು ಉದಾಹರಿಸುತ್ತೇವೆ—

ಮಿಸುನಿವಾಲ್ಬೆಮ ಗೆಡೆಗಳಂತೆ ಕಣ್ಗೊಳಿಸಿ ।
ಕುಸುಮಬಾಣನ ಗಂಧಗಜಕೆ ಸೊಬಗೆನಿಸಿ ।
ಮಿಸುಪ ಸುಂತಿಲ್ಲಿದೇ ಈಡುಜೋಡೆನಿಸಿ ।
ಘಟಿಯುಳೊಳುಪೊಗೆಗಳೊಪ್ಪಿದ ವು ಮುದನವಿಸಿ ॥ ಲಾಲಿ ॥

ಪುಸಿನಡುವೆನಿಸುವಾಗಸದೊಳಗೊಡರಿಸಿದ |
ಮಿಸುಪ ಸುಬ್ಬಿವೊಕ್ಕುಟ್ಟಿನಿಪೆವ ತಣ್ಗೊಳದ |
ಮಿಸುನಿಯಿಂದೆಸಗಿರುವ ಪಡಿಗಳೆನಲೊಗೆದ |
ಪೊಸತಿನಳೆ ರಾಜಿಪುದು ಕಣ್ಗಳಿಗೆ ಜನದ || ಲಾಲಿ ||

4 ತುಲಾಕಾವೇರೀ ಮಾಹಾತ್ಮ್ಯ ಟೀಕೆ

ಇದು ಆಗ್ನೇಯಪುರಾಣೋಕ್ತವಾದ ತುಲಾಕಾವೇರೀ ಮಾಹಾತ್ಮ್ಯಕ್ಕೆ ಗದ್ಯರೂಪವಾದ ಕನ್ನಡ ವ್ಯಾಖ್ಯಾನ ; ಅಧ್ಯಾಯ 30. ಇದಕ್ಕೆ ಚೆಲುವಾಂಬಿಕಾವಾಣೀವಿಲಾಸವೆಂದು ಹೆಸರು. ಗ್ರಂಥಾಂತ್ಯದಲ್ಲಿರುವ ಒಂದುಶ್ಲೋಕ[1]ದಿಂದ ಚೆಲುವಾಂಬಿಕೆಯ ಅಂಕಿತದಲ್ಲಿ ಮೌದ್ಗಲ್ಯಗೋತ್ರದ ವೇಂಕಟಾರ್ಯನ ಮಗನಾದ ಶ್ರೀನಿವಾಸನು ಈ ಟೀಕೆಯನ್ನು ಬರೆದಂತೆ ತೋರುತ್ತದೆ.

— o —

ಪಟ್ಟಾಭಿರಾಮ. ಸು. 1725

ಈತನು ರತ್ನಶೇಖರಚರಿತ್ರೆಯನ್ನು ಬರೆದಿದ್ದಾನೆ. ಇವನು ಸ್ಮಾರ್ತ ಬ್ರಾಹ್ಮಣನೆಂದು ತೋರುತ್ತದೆ. ಇವನ ತಂದೆ ಕೋದಂಡರಾಮನ ಚಿವಶೇಖರ, ತಾಯಿ ಸೋಮಾಂಬೆ, ಸಹೋದರನು " ಧೀಮಣಿಸಕಲಕಲಾಭಿಜ್ಞ ಫಣಿಸಾರ್ವಭೌಮವಾಗ್ವೈಭವನೆನಿಪ " ರಾಮಕನೀಂದ್ರ. " ವಾವಿಲಿಪಾಟಿ ರಾಘವಪಾದಪದ್ಮಾರಾಧಕನು " ಎಂದು ಹೇಳಿಕೊಂಡಿರುವುದರಿಂದ ಕವಿಯ ಸ್ಥಳವು ವಾವಿಲಿಪಾಟಿಯಾಗಿರಬಹುದು, ಈ ಗ್ರಂಥರಚನೆಗೆ ಕಾರಣವನ್ನು ಹೀಗೆ ಹೇಳುತ್ತಾನೆ—

ಪಶ್ಚಿಮಸಮುದ್ರದ ತೀರದಲ್ಲಿ ತೌಳವದೇಶದೊಳಗೆ ಮಲೆನಾಡ ನಾತುಸಾಹಸನಾದ ಸೋಮಶೇಖರನೆಂಬ ದೊರೆಯಿದ್ದನು. ಪೂರ್ವವೇಣುಪುರದಲ್ಲಿ (ಮೂಡ

---

1. ಮೌದ್ಗಲ್ಯಾನ್ವಯದುಗ್ಧಸಿಂಧುರಜನೀಕಾಂತೇನ ಪುಣ್ಯಾತ್ಮನಾ
ಶ್ರೀವಾಸಾಖ್ಯವಿಪಶ್ಚಿತಾ ಜನಿಜುಷಾ ಶ್ರೀವೇಂಕಟಾರ್ಯಾದ್ಭುವಿ |
ವ್ಯಾಖ್ಯಾನಂ ಚ ತುಲಾಕವೇರನೃಪಜಾಲೀಲಾಮಹಿಮ್ನಃ ಕೃತಂ
ಕಾಶ್ಯಾಗಟೋಕ್ತಿನುಯುಂ ಸರಂ ಮಿಳಯಿತಾಮಾಸೇತುಹೇಮಾಚಲಂ ||

ಬಿದಿರೆ) ಚೌಟಕುಲಶೇಖರನಾದ ಚಿಕ್ಕರಾಯನೆಂಬ ಚೌಟರಾಜನ ವಂಶದಲ್ಲಿ ಜನಿಸಿದ ಅಬ್ಬಕ್ಕದೇವಿಯೇ ಮುಂತಾದವರು ಆಳುತ್ತಿದ್ದರು. ಆ ಪಟ್ಟಣದ ಬೆಟ್ಟುಕೇರಿಯಲ್ಲಿರುವ ವೀರನಾಥನ ಬಸದಿಯಲ್ಲಿ ಪ್ರಭಾಚಂದ್ರಮುನಿಯಿದ್ದನು. ಈತನ ಶಿಷ್ಯ ಗುಮ್ಮಣ್ಣಸೆಟ್ಟಿ; ಇವನ ಹೆಂಡತಿ ಗುಮ್ಮಕ್ಕ; ಇವರ ಮಕ್ಕಳು ಪದುಮ, ಶಾಂತ, ಅಕ್ಕಮ್ಮ. ಈ ಪದುಮನನ್ನು ಪ್ರಭಾಚಂದ್ರನು ಕರೆದು ಪುಷ್ಪಾಂಜಲಿಯುನೋಂಪಿಯ ಕಥೆಯನ್ನು ಕನ್ನಡದಲ್ಲಿ ಬರೆಯಿಸ ಹೇಳಿದನು. ಪದುಮನು ತನ್ನ ಸ್ನೇಹಿತನಾದ "ಕವಿಕುಲತಿಲಕ ಭೂಡಿವಿಜಾಗ್ರಣಿ" ಪಟ್ಟಾಭಿರಾಮನಿಂದ ಈ ಗ್ರಂಥವನ್ನು ಬರೆಯಿಸಿದನು.

ಚೌಟರಾಜ್ಞರ ಪರಂಪರೆಯಲ್ಲಿ ಚಿಕ್ಕರಾಯನಿಂದೀಚೆಗೆ ಒಬ್ಬಳು ಅಬ್ಬಕ್ಕದೇವಿ ಸುಮಾರು 1720 ರಲ್ಲಿ ಆಳಿದಂತೆ ತಿಳಿಯುತ್ತದೆ. ಕವಿಯ ಕಾಲವು ಸ್ವಲ್ಪ ಹೆಚ್ಚು ಕಡಮೆ ಇದೇ ಆಗಿರಬಹುದು. ಕವಿ "ಭಾವಜ್ಞ ಪ್ರಚುರಭಂದೋವಿದ ಮೃದುಕವಿತಾವಿಶಾರದನು" ಎಂದೂ "ಸಕಲಸುಕವಿ ಜನನುನೋವನವಸಂತ ವಿವಿಧಭಾಷಾವಿಶೇಷಪ್ರಬುಧಬಂಧುರವಾಙ್ಮಾಧುರ್ಯಧುರೀಣನು" ಎಂದೂ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಪೂರ್ವ ಕವಿಗಳಲ್ಲಿ ಕವಿಪರಮೇಷ್ಠಿ, ಸುಜನನುನೋಜ, ಶ್ರೀವಿಜಯ, ಆದಿಪಂಪ, ಅಗ್ಗಳ, ನೇಮಿಚಂದ್ರ, ಗಜಾಂಕುಶ ಇವರುಗಳನ್ನು ಈ ಪದ್ಯಗಳಲ್ಲಿ ಸ್ತುತಿಸಿದ್ದಾನೆ—

ಮಂಗಳಕರಪುರಾಣಂಗಳ ಕಥೆಗಳ | ಪಿಂಗದೆ ಧರೆಗೆ ವಿಸ್ತರಿಸಿ |
ಕಂಗೊಳಿಸುವ ಕವಿಪರಮೇಷ್ಠಿಮುಖ್ಯರೇ | ನಾಂಗಮುನಿಗಳೆಗೆಱಗುವೆ ॥
ತ್ರಿಜಗನ್ನುತಿವೆತ್ತ ಭುಜಗಾಧಿಪತಿಯಂತೆ | ನಿಜವಾಗ್ವಿಳಾಸಿಗಳಾದ |
ಸುಜನಮನೋಜನ ಗುಜಗನ ಪ್ರಜುರಶ್ರೀ | ವಿಜಯನ ನಾ ಪೊಗಟುವೆನು ॥

ಭೂತಲದೊಳಗಾರನಾಥನ ಚರಿತವ | ಖ್ಯಾತಿಯಿಂದಲಿ ವಿರಚಿಸಿದ |
ಚಾತುರ್ಯಶಾಲಿಯೆಂದೆನಿಸಿದ ಪಂಪನ | ರೀತಿಯ ಕೊಂಡಾಡುವೆನು ॥
ಘನತರಚಂದ್ರನಾಥನ ಚರಿತ್ರವನು | ಘನವಾಗಿ ರಚಿಸಿದಗ್ಗಳನ |
ಎನುಗಕವಿತ್ವದ ಗೌರವದೇಳ್ಗೆಯ | ಮನಮೊಲೆದಾಂ ಪೊಗಟ್ಟುವೆನು ॥
ಶೃಂಗಾರಕವಿರಾಜಪುಂಗವನೆನಿಸಿ ಬೆ | ಳಂಗಾಂತ ನೇಮಿಚಂದ್ರನುನ |

ತುಂಗನಿಖ್ಯಾತಪ್ರಸಂಗಗಜಾಂಕುಶ | ರಂಗೆ ನಾಂ ಕೈವಾರಿಸುವೆ ॥

ಈ ಕವಿ ಮತಾಂತರದವನಾದರೂ ಜೈನನಾದ ಸ್ನೇಹಿತನಿಗೋಸ್ಕರ ಜೈನಕವಿಗಳ ರೀತಿಯಲ್ಲಿಯೇ ಈ ಜೈನಗ್ರಂಥವನ್ನು ರಚಿಸಿರುವುದು ಗಮನಿಸತಕ್ಕ ವಿಷಯವಾಗಿದೆ.

ಇವನ ಗ್ರಂಥ

ರತ್ನಶೇಖರಚರಿತ್ರೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಆಶ್ವಾಸ 5, ಸಂಧಿ 15. ಇದರಲ್ಲಿ ರತ್ನಶೇಖರನೆಂಬ ರಾಜನು ಪುಷ್ಪಾಂಜಲಿಯ ನೋಂಪಿಯನ್ನು ಆಚರಿಸಿ ಮುಕ್ತಿಯನ್ನು ಪಡೆದ ಕಥೆ ಹೇಳಿದೆ. ಪ್ರಭಾಚಂದ್ರನ ಅನುಜ್ಞೆಯಿಂದ "ಸರಸಾಲಂಕಾರಭಾವನಗಳಿಂ" ಈ ಗ್ರಂಥವನ್ನು ರಚಿಸಿದಂತೆ ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ವೀರಜಿನಸ್ತುತಿ ಇದೆ. ಬಳಿಕ ಕವಿ ಪಾರ್ಶ್ವನಾಥ, ಸಿದ್ಧಾದಿಗಳು, ಗಣಧರರು, ಕೊಂಡಕುಂದ, ಅಕಲಂಕ, ಪದ್ಮಾವತಿ ಇವರುಗಳನ್ನು ಸ್ತುತಿಸಿದ್ದಾನೆ. ಅನಂತರ ಪೂರ್ವಕವಿಗಳನ್ನು ಸ್ಮರಿಸಿ ಗ್ರಂಥರಚನೆಗೆ ಕಾರಣವನ್ನು ತಿಳಿಸಿ ಕಥೆಯನ್ನು ಆರಂಭಿಸುತ್ತಾನೆ. ಆಶ್ವಾಸಾಂತ್ಯದಲ್ಲಿ ಈ ಗದ್ಯವಿದೆ—

ಶ್ರೀಮಜ್ಜಿನೇಂದ್ರಸಾವರದ್ಮನುತ್ತಮಮಧುಕರೋಪಮಾನಮಾನಸವಿರಾಜಿತ ಜಿನಸಮಯಾಬ್ಧಿಚಂದ್ರ ಜಿನಗುಣಸ್ತವನಪರಾಯಣ ವಿನಯಕಾರುಣ್ಯಕಟಾಕ್ಷಲಬ್ಧಸತ್ಪುಣ್ಯೈಕಸದ್ಮ ಪದ್ಮನಾಭನಿಂ ಸಕಲಸುಕವಿಜನಮನೋವನರಸಾತ ವಿನಿಬದ್ಧಭಾವಾನಿಶೇಷಪ್ರಬಂಧ ಬಂಧುರವಾಙ್ಮಾಧುರ್ಯಧುರೀಣಸಪ್ತ ರಾಮಕವಿಸಹಜನ ಪಟ್ಟಾಭಿರಾಮವಿರಚಿತ ರತ್ನಶೇಖರೋಪಾಖ್ಯಾನಮಷ್ಟಾಧ್ಯಾಯಚರಿತದೊಳ್.

—o—

ರಾಮಕವಿ ಸು. 1725

ಈತನು ರತ್ನಶೇಖರಚರಿತ್ರೆಯನ್ನು ಬರೆದ ಪಟ್ಟಾಭಿರಾಮನ ಸಹೋದರನು. ಪಟ್ಟಾಭಿರಾಮನು ಈತನನ್ನು "ಧೀಮಣಿಸಕಲಕಲಾಭಿಜ್ಞಫಣಿಸಾ

ರ್ವಭೌಮವಾಗ್ವೈಭವನೆನಿಪ ರಾಮಕವೀಂದ್ರ" ಎಂದು ಸ್ತುತಿಸಿರುವುದರಿಂದ ಇವನು ದೊಡ್ಡ ಕವಿಯಾಗಿದ್ದಿರಬೇಕು. ಕನ್ನಡದಲ್ಲಿ ಈವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

—೦—

ನಿರ್ವಾಣಮಂತ್ರಿ ಸು. 1725

ಈತನು ಶಿವಪೂಜಾವಿಧಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕೆಳದಿಯರಾಜನಾದ ಸೋಮಶೇಖರನಾಯಕನಲ್ಲಿ (1714–1739) ಪ್ರಧಾನಿಯಾಗಿದ್ದನು. ಇವನ ಕಾಲವು ಸುಮಾರು 1725 ಆಗಬಹುದು.

ಇವನ ಗ್ರಂಥ

ಶಿವಪೂಜಾವಿಧಾನ.

ಇದು ಗದ್ಯರೂಪವಾಗಿದೆ; ಅಲ್ಲಲ್ಲಿ ಸಂಸ್ಕೃತಶ್ಲೋಕಗಳು ಉದಾಹೃತವಾಗಿವೆ. ಇದರಲ್ಲಿ ವೀರಶೈವಮತಾನುಸಾರವಾಗಿ ಶಿವಪೂಜಾಕ್ರಮವು ವಿವರಿಸಿದೆ.[1]

———

ಕಾಡಸಿದ್ದೇಶ. ಸು. 1725

ಈತನು ಇಷ್ಟಲಿಂಗ ಶತಕವನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಪರ್ವತೇಶನ ಅಂಗೈಯೊಳಗೆದಾತ ಭಕ್ತರಣುಗ ಕಾಡಸಿದ್ಧೇಶ" ಎಂಬುದರಿಂದ ಇವನ ಗುರು ಪರ್ವತೇಶ ಎಂದು ತಿಳಿಯುತ್ತದೆ. ಈ ಪರ್ವತೇಶನು ಚತುರಾಚಾರ್ಯಪುರಾಣವನ್ನು 1698 ರಲ್ಲಿ ಬರೆದ ಪರ್ವತೇಶ್ವರನಾಗಿರಬಹುದೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಕವಿಯ ಕಾಲವು ಸುಮಾರು 1725 ಆಗಬಹುದು.

ಇವನ ಗ್ರಂಥ

---

1. ವೀರಶೈವಕ್ರಮಾಚಾರ ಪೂಜಾಪದ್ಧತಿರುಚ್ಯತೇ |
ನಿರ್ವಾಣಮಂತ್ರಿವರ್ಯೇಣ ವೇದಶಾಸ್ತ್ರಾನುಸಾರಿಣೀ ||

ಇಷ್ಟಲಿಂಗಶತಕ.

ಇದರಲ್ಲಿ 111 ವೃತ್ತಗಳಿವೆ; ಪ್ರತಿವೃತ್ತವೂ ಶ್ರೀ ಯಿಷ್ಟಲಿಂಗೇಶ್ವರಾ ಎಂದು ಮುಗಿಯುತ್ತದೆ. ಶಿವಾಧಿಕ್ಯವನ್ನು ಬೋಧಿಸುವುದರಿಂದ ಗ್ರಂಥಕ್ಕೆ ಶಿವಾಧಿಕ್ಯ ಎಂಬ ಹೆಸರೂ ಉಂಟು. ಆರಂಭದಲ್ಲಿ ಶಿವಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ಉದಾಹರಿಸುತ್ತೇನೆ.

ಜಗಮಂ ರಕ್ಷಿಪ ದೇವ ತಾನೆ ಗುಗುಪಂ ಹಸ್ತಾಬ್ಜದಲ್ಕೊಪ್ಪಿರಲ್ |
ಬಗೆಯಿಂ ಪೂಜಿಸಿ ಮುಕ್ತರಾಗಿ ಭವಪಾರಾವಾರಮಂ ದಾಂಟದೇ ||
ನಗೆಗೀಡಾಗಿ ಕುಜಾತಿಗೂಡಿ ಕುಣಿದಾಡೀಪಾಡಿ ಭೂತಂಗಳಂ |
ಮಿಗಿಲಾರಾಧಿಸಿ ಬೀಳ್ವರೇಕೆ ಭವದೊಳ್ ಶ್ರೀಯಿಷ್ಟಲಿಂಗೇಶ್ವರಾ ||

—೦—

ವಿಜಯರಾಯ ಸು. 1725

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಬಳ್ಳಾರಿ ಜಿಲ್ಲಾ ಚೀಕಲಮರಿಯಲ್ಲಿ ಹುಟ್ಟಿ ಸರಕಾರಿ ನೌಕರಿಯಲ್ಲಿದ್ದು ವಿರಕ್ತನಾಗಿ ಕಾಶಿಗೆ ಹೋಗಿ ಅಲ್ಲಿರುವಾಗ ಸ್ವಪ್ನದಲ್ಲಿ ಪುರಂದರದಾಸನಿಂದ ಉಪದೇಶವನ್ನು ಹೊಂದಿ ಅನೇಕ ಪಾಡುಗಳನ್ನೂ ಸುಳಾದಿಗಳನ್ನೂ ರಚಿಸಿದಂತೆ ತಿಳಿಯುತ್ತದೆ ಈತನಿಗೆ ಗೋಪಾಲದಾಸ, ವೇಣುಗೋಪಾಲದಾಸ, ಮೋಹನದಾಸ, ಹಯವದನದಾಸ ಎಂಬ ನಾಲ್ವರು ಶಿಷ್ಯರಿದ್ದರು ಈತನು ತನ್ನ ಶಿಷ್ಯ ಮೋಹನದಾಸನ ಸ್ಥಳವಾದ ಚಿಪ್ಪಗಿರಿಯಲ್ಲಿ ವಾಸವಾಗಿದ್ದಂತೆಯೂ ಅಲ್ಲಿ ಈತನು ಅಹ್ನಿಕ ಮುಂತಾದುದನ್ನು ಮಾಡುತ್ತಿದ್ದ ವಿಜಯರಾಯರ ಕಟ್ಟೆ ಎಂದು ಈಗಲೂ ಪ್ರಸಿದ್ಧವಾಗಿರುವ ಸ್ಥಳಕ್ಕೆ ಅನೇಕ ಭಕ್ತರು ಹೋಗಿ ಬರುವಂತೆಯೂ ಹೇಳುತ್ತಾರೆ. ಈತನ ಪ್ರಶಿಷ್ಯನಾದ ಜಗನ್ನಾಥದಾಸನು ಸುಮಾರು 1775 ರಲ್ಲಿ ಇದ್ದುದಾಗಿ ತಿಳಿದುದರಿಂದ ಇವನ ಕಾಲವು ಸುಮಾರು 1725 ಆಗಿರಬಹುದು. ಈತನಿಗೆ ವಿಜಯದಾಸ ಎಂಬ ಹೆಸರೂ ಉಂಟು. ಈತನ ಕೀರ್ತನೆಗಳಲ್ಲಿ ವಿಜಯವಿಠಲ ಎಂಬ ಅಂಕಿತವು ದೊರೆಯುತ್ತದೆ. ಒಂದನ್ನು ಉದಾಹರಿಸುತ್ತೇವೆ—

ರಾಗ—ಆನಂದಭೈರವಿ. ಚಾಪುತಾಳ.

|| ಪಲ್ಲವಿ || ಏನಾದರೇನು ಜ್ಞಾನವಿಲ್ಲದೆ ಮೋಕ್ಷವಿಲ್ಲ ||

ವೇದವನೋದಿದರೇನು । ಶಾಸ್ತ್ರವನೋದಿದರೇನು ।
ಕಾದಿ ಕಾದಾಡಿ ಪೆಬ್ಬರೇನು । ಜ್ಞಾನವಿಲ್ಲದೆ ಮೋಕ್ಷವಿಲ್ಲ || 1 ||
ಕಾಶಿಗೆ ಹೋದರೇನು । ಕಾನನವೇರಿದರೇನು ।
ಕಾಶಿಪೀತಾಂಬರವುಟ್ಟರೇನು । ಜ್ಞಾನವಿಲ್ಲದೆ ಮೋಕ್ಷವಿಲ್ಲ || 2 ||
ಜಪತಪಮಾಡಿಯೇನು । ಜಾಣತನಮೆಚ್ಚಿದರೇನು ।
ವಿಜಯವಿಠಲನ ಕಾಣದಿರೇನು । ಜ್ಞಾನವಿಲ್ಲದೆ ಮೋಕ್ಷವಿಲ್ಲ || 3 ||

ಚೆಲುವ ಸು. 1725

ಇವನು **ಮಡಿವಾಳಯ್ಯನ ಚರಿತೆ**, ವೀರಭದ್ರಚರಿತೆ ಇವುಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ. ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಆದರೆ ಮೊದಲು ಗ್ರಂಥದ ಕೊನೆಯಲ್ಲಿರುವ

ಮಲೆತ ದೂಷಕರನೆ ಸುಜನರನು ಮಡಿವಾಳಯ್ಯ । ಬಲವುಳ್ಳ ರಾಯಬಿಜ್ಜಳಗೆ
ನೆಲೆಗಾಣಿಸಿ ಪುಟ್ಟಿಕಟ್ಟಿದ ಕಥೆಯಿಂದು । ಚೆಲುವನ ಪಲಿತ ಸಂಪೂರ್ಣ ||

ಎಂಬ ಪದ್ಯದಿಂದ ಕವಿಯ ಹೆಸರು ಚೆಲುವ ಎಂದಿರಬಹುದೋ ಎಂಬ ಊಹೆಗೆ ಸ್ವಲ್ಪ ಅವಕಾಶವಿದೆ. ಅನುದರಿಂದ ಈ ಹೆಸರನ್ನು ಸಂದೇಹವಾಗಿ ಮೇಲೆ ಕೊಟ್ಟಿದ್ದೇವೆ. ಈ ಗ್ರಂಥದ ಒಂದು ಪ್ರತಿ 1790 ರಲ್ಲಿ ಬರೆದಂತೆ ತಿಳಿವುದರಿಂದ ಗ್ರಂಥವು ಸುಮಾರು 1725 ರಲ್ಲಿ ಹುಟ್ಟಿರಬಹುದು ಎಂದು ತೋರುತ್ತದೆ.

ಇವನ ಗ್ರಂಥಗಳಲ್ಲಿ

ಮಡಿವಾಳಯ್ಯನ ಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ 2, ಪದ್ಯ 127. ಇದರಲ್ಲಿ ಬಸವನ ಸಮಕಾಲದವನಾದ ಮಡಿವಾಳ ಮಾಚಯ್ಯನ ಕಥೆ ಹೇಳಿದೆ. ಕಥಾಗರ್ಭವನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಭವಿಬಿಜ್ಜಳನ ಕಪ್ಪಡವ ತೊಳೆಯಲೊಲ್ಲದೆ | ಯವಗಡದಾನೆಯು ಮುರಿದ |
ಭುವನದೊಳಗೆ ಮಡಿವಳನ ಪ್ರತಾಪವ | ಶಿವಶರಣರು ಆಳಿದುಪು ||

ಆದಿಯಲ್ಲಿ ಶಿವಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ

ಸಿಡಿಲು ಸರ್ಪನ ಕೂಡುವತೆಱನಂತೆ ಯಾ | ಕಡುಗಲಿ ಮಡಿವಾಳಯ್ಯ |
ಹಿಡಿದು ಅನೆಯು ಕೈಮೂಡಲುರವನೊತ್ತಿ | ಹೊಡೆದನು ಕಿಬ್ಬದಿಗಳನು ||
ಸಿಲಕೆ ಅಸ್ಪಳಿಸುತ ಮಲೆತ ರಾವುತರನು | ತಲೆಯು ಪಾದದಲಿ ತುಬ್ಬಿದನು |
ಹೊಲಬುದಪ್ಪಿದರು ಜಲದೊಳು ಕಡ್ಡಿಯು ಕಚ್ಚಿ | ತಲೆಗಾಯಿ ಎಂದೊಲಿದರು |

ಇವನ ವೀರಭದ್ರಚರಿತೆ ನಮಗೆ ದೊರೆತಿಲ್ಲ.

ದೇವ ಸು. 1725

ಈತನು ಬತ್ತೀಸಪುತ್ತಳಿಕಥೆ, ಧೈರ್ಯಾವೃತ, ವಾಮನಚರಿಕಥಾವಳಿ, ಶಕುನಪ್ರಪಂಚ, ದಕ್ಷಾಧ್ವರಧ್ವಂಸಚಾರಿತ್ರ, ಶ್ರೀ ಕಥೆ ಈ ಗ್ರಂಥಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿಯೆಂದು ತೋರುತ್ತದೆ; ಕನಕ ಪಾಂಡುರಂಗನಾಥನ ಮಗನು. ಇವನಿಗೆ ದೇವಣ, ದೇವಣಾರ್ಯ ಎಂಬ ಹೆಸರೂ ಕವಿಭೂಷಾಹ್ವ ಎಂಬ ಬಿರುದೂ ಉಂಟು. ಇವನ ಬತ್ತೀಸಪುತ್ತಳಿಕಥೆಯು ಒಂದು ಪ್ರತಿಯಲ್ಲಿ ಯಲಹಕ್ಕನಾಡ ಪ್ರಭು ಈ ಕಥೆಯನ್ನು ಕೇಳಿದಂತೆ ಹೇಳಿರುವುದರಿಂದ ಕವಿ ಆತನ ಆಶ್ರಿತನಾಗಿದ್ದಿರಬಹುದು. ಈ ಪ್ರತಿ 1817 ರಲ್ಲಿ ಬರೆದುದಾದುದರಿಂದ ಗ್ರಂಥವು ಆ ಕಾಲಕ್ಕೆ ಹಿಂದೆ ಹುಟ್ಟಿರಬೇಕು ಕವಿಯ ಕಾಲವು ಸುಮಾರು 1725 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ

ಬತ್ತೀಸಪುತ್ತಳಿಕಥೆ

ಇದು ಚಂಪೂರೂಪವಾಗಿದೆ; ಪ್ರಕರಣ 32. ಕ್ಷೇಮೇಂದ್ರಕವಿಯ ಬೃಹತ್ಕಥಾಮಂಜರಿಯ 18 ನೆಯ ಲಂಬಕದ ಬತ್ತೀಸಪುತ್ತಳಿಕಥಾ ಪ್ರಬಂ

ಧವನ್ನು ಕನ್ನಡಿಸಿದಂತೆ ಕವಿ ಹೇಳುತ್ತಾನೆ. 'ಜಗಕ್ಕೆ ನೆಗಳ್ತೆವೆತ್ತು ಸಂ
ದನುಪಮವಿಕ್ರಮಾರ್ಕನ ಸುವೀರತೆಯಿಂ ಕಡುಭೋಗದೇಳ್ಗೆಯಿಂದನು
ಗತವಾದ ಪುತ್ತಳಿಯ ಸತ್ಕಥೆಯಂ ನೆಗಳ್ದಂ' ಎನ್ನುತ್ತಾನೆ. ಈ ಗ್ರಂ
ಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಕುಳಿರ್ವೇಲರಂತೆ ನಂದನಸಮಾಲದ ತಣ್ಣೆಲರಂತೆ ಪುಷ್ಪಮಂ |
ಡಳನವಗಂಧದಂತೆ ಪುದಿವಿಂಗದಿರಂತೆ ನಿಜಪ್ರಿಯಾಂಗನೋ ॥
ಜ್ವಳತಿಯಂತೆ ಜಂದನದ ತಪ್ಪೆಯ ಸೌರಭದಂತೆ ಚಾರುವು |
ತ್ತಳಿಯ ಕಥಾರಸಂ ಸುಜನರಂ ತಲೆದೂಗಿಸದೇ ನಿರಂತರಂ ॥

ಆರಂಭದಲ್ಲಿ ಸರಸ್ವತಿ, ಗಣೇಶ ಇವರುಗಳ ಸ್ತುತಿ ಇದೆ. ಪ್ರಕರ
ಣಗಳ ಕೊನೆಯಲ್ಲಿ ಈ ಗದ್ಯವಿದೆ—

ಇಂತೀ ಕವಿಭೂಳನೇತ್ರ ಸರಸಕವೀಶ್ವರ ದೇವಣಾಚಾರ್ಯವಿರಚಿತ
ಮಪ್ಪ ಬತ್ತೀಸಪುತ್ತಳಿಯ ಕಥೆಯ ಸುಧಾರಸಕಾವ್ಯದೊಳ್[1]

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಬಡತನ

ಎಡರೆಂಬೀಪೊಲೆ ಪೊದಿಸಿದಂದು ಮನದೊಳ್ ನಿರ್ವೇಗಮುಕ್ಕುಂ ಬಲಂ |
ಕೆಡುಗುಂ ಸತ್ಯಮದುಂ ಮಹಾಮತಿನೆಯುಂ ಚಾತುರ್ಯಮುಂ ಶೌರ್ಯಮುಂ ॥
ಕಡೆಸಾಗುರ್ಕಂ ಪುರುಷಾರ್ಥಮೋಗರಿಸುಗುಂ ಕೂಪೋಡುಗುಂ ತನ್ನ ನಿಂ |
ದೆಡೆಯೊಳ್ ನೀರ್ದಳಿವರ್ ಯಥಾತ್ಮನಳದಿಂ ದಾರಿದ್ರ್ಯಮೋಗೆಯ್ಸುದೋ ॥

ಸ್ತ್ರೀಗರ್ಹಣ

ಸತಿ ಗುಣವತಿ ದೊರೆಕೊಂಡೊಡೆ | ಪತಿಗಾಸ್ತ್ರೀ ರತ್ನಮೆಂಬ ಪೆಸರಂ ಪಡೆಗುಂ |
ಸತಿ ದುರ್ಗುಣೆ ದೊರೆಕೊಂಡೊಡೆ | ಪತಿಗಾಸ್ತ್ರೀ ವ್ಯಾಧಿಯೆಂಬ ಪೆಸರಂ ಪಡೆಗುಂ॥
ಹರನುರಿಗಣ್ಣಮೇಲೆ ನಲಿದಾಡುವರಂಗನೆಯರ್ಕಳಂಬುಜೋ |
ದರನ ಕರಾಗ್ರಚಕ್ರದೊಳೆ ಚಕ್ಕಣಮಿಕ್ಕುವರಬ್ಜಗರ್ಭನೊಳ್ ॥
ಸರಸಮನಾಡಿ ಪಾಶದೊಳೆ ಕಟ್ಟುವರೆಂಗೊಡೆ ಮಿಕ್ಕಿನನ್ಯರಂ |

1 ಮತ್ತೊಂದು ಪ್ರತಿಯಲ್ಲಿ 'ಇಂತು ಕರ್ಣಾಟಕಭಾಷಾವಿರಚಿತಮಪ್ಪ ಬತ್ತೀಸ
ಪುತ್ತಳಿಗಳ ಕಥೆಯಲ್ಲಿ' ಎಂದಿದೆ.

ಸ್ಮಶರಪಂಜರಾಂತರದೊಳಿರ್ದರನಾಕೆಯರೂದಿಮುಕ್ಕರೇ ॥

ವೇಶ್ಯೆಯರು

ನಸೆಗಣಯೋಕೆ ಕಾಮ ಸೆಜಸಾರ್ ಮುಳಿಸೇಕೆ ಜಯಂಕ ನಿನ್ನ ಮಂ |
ಧನಸರಿಶೋಷಮಂ ಬಿಡು ಶುಚೀರತನೂಭವ ಸಾಕು.... ॥
ಮನದ ಮಜುಂಕಮೇಕೆಲೆಲೆ ಭದ್ರಕ ಮೆಲ್ಲನೆ ಜಾಜು ಜತ್ತಕಾ |
ಮನದ ವಿಡಂಬಮೇಕೆನುತ ಸಾಜು'ದರಾವುರಸಾರನಾರಿಯರ್ ॥

ಈ ಗ್ರಂಥವನ್ನು ಕವಿ ಗದ್ಯರೂಪವಾಗಿಯೂ ಬರೆದಿರುವಂತೆ ತಿಳಿಯುತ್ತದೆ. ಕಥೆಗಳ ಕೊನೆಯಲ್ಲಿ-ಇದು ಕವಿ ದೇವಣಾರ್ಯವಿರಚಿತವಪ್ಪ ಬತ್ತೀಸಪುತ್ತಳಿಕಥೆಯೊಳ್-ಎಂದಿದೆ.

ಈ ಕವಿಯ ಇತರ ಗ್ರಂಥಗಳು ನಮಗೆ ದೊರೆತಿಲ್ಲ.

ಮಹಾದೇವ ಸು. 1725

ಈತನು ಬ್ರಹ್ಮೋತ್ತರಖಂಡವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತನ್ನ ಹೆಸರನ್ನು ವ್ಯಕ್ತವಾಗಿ ಹೇಳಿಕೊಂಡಿಲ್ಲ; ಆದರೂ 'ಕಥೆಗೆ ನಾಯಕಸೀಶ್ವರನು ಸ|ತ್ಕಥನ ಬ್ರಹ್ಮೋತ್ತರದಖಂಡ| ಸ್ಥಿತಿ ಮಹಾದೇವಾಖ್ಯ ಭಕ್ತಿವಿಲಾಸನಿಸ್ತಾರ' ಎಂಬ ಪದ್ಯಭಾಗದಿಂದ ಈತನ ಹೆಸರು ಮಹಾದೇವ ಎಂದು ತೋರುತ್ತದೆ. 'ಗುರುಶಾಂತೇಶಲಿಂಗನು ನುಡಿಸಿದವೊಲಾನುಸಿದೆ ನೀಕವಿತಾಪ್ರಬಂಧನನು' ಎಂದು ಹೇಳುತ್ತಾನೆ. ಲಕ್ಷ್ಮೀಶನ (ಸು. 1700) ಜೈಮಿನಿಭಾರತಕ್ಕೂ ಇವನ ಗ್ರಂಥಕ್ಕೂ ಹೋಲಿಕೆಗಳು ಕೆಲವುಕಡೆಕಂಡು ಬರುವುದರಿಂದ ಈ ಕವಿ ಲಕ್ಷ್ಮೀಶನಿಗೆ ಈಚೆ ಸುಮಾರು 1725 ರಲ್ಲಿ ಇದ್ದಿರಬಹುದೆಂದು ತೋರುತ್ತದೆ

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ಲೇಸೆನಿಪ ವಾಲ್ಮೀಕಿ ವೇದ | ವ್ಯಾಸನುದ್ಭಟ ಬಾಣನಗ್ಗದ |
ಕೇಶಿರಾಜ ಮಯೂರ ಮಲುಹಣ ಕಾಳಿದಾಸಾಂಕ ॥
ಭೂಸುರಾಗ್ರಣಿಯೆನಿಪ ಪಂಪಾ | ವಾಸಪೂಂದೇವಾದಿಕವಿಗಳ |
ಭಾಸುರಾಂಘ್ರಿಸರೋಜಯುಗೆ ಸುಮತಿಗೆ ಮಂಗಳವ ॥

ಇವನ ಗ್ರಂಥ

ಬ್ರಹ್ಮೋತ್ತರಖಂಡ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 32, ಪದ್ಯ 1898.[1] ಅಲ್ಲಲ್ಲಿ ರಗಳೆ, ವೃತ್ತ, ಗದ್ಯ, ಇವೂ ಇವೆ. ಇದು ಅಷ್ಟಾದಶಪುರಾಣಗಳಿಗೆ ಮೊಗಲೆನಿಸಿದ ಬ್ರಹ್ಮೋತ್ತರಪುರಾಣದ ಭಾಷಾಂತರವು. ಇದರಲ್ಲಿ ಷಡಕ್ಷರಮಹಿಮೆ, ವಿಭೂತಿಮಹಿಮೆ, ರುದ್ರಾಕ್ಷಮಹಿಮೆ, ಪುರಾಣಶ್ರವಣಮಹಿಮೆ, ಶಿವರಾತ್ರಿಯೇ ಮೊದಲಾದ ವ್ರತಗಳ ಮಹಿಮೆ, ಶಿವಶಿವಯೋಗಿಗಳ ಪೂಜೆ ಮೊದಲಾದ ಹಲವು ವಿಷಯಗಳು ಹೇಳಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಯತಿಗಣಂಗಳ ನೇಮದನುಕೂ | ಲತೆಯಿನಾಸುಮನೋನುರಾಗ |
ಸ್ಥಿತಿಯ ಸದಲಂಕಾರದಿಂ ಕುಮುದಪ್ರಪೀಡತೆಯಿಂ ||
ವಿತತದೋಷವಿಧೂತಪರಿನಿ | ಶ್ಚಿತಪದಾರ್ಥದಿ ಮೆಱೆವುದೆನ್ನಯ |
ಕೃತಿ ಜಮತ್ಕೃತಿಯಾಗಿ ಸೂರ್ಯೋದಯದವೋಲ್ ಧರೆಗೆ ||
ಸರಸಮಧುರಧ್ವನಿಗಳಿಂ ಬಂ | ಧುರದ ಸುನುನೋರಾಗದೇಱ್ಗೆಯ |
ಸುರುಚಿರಾಯತವರ್ಣಗಳಲಂಕೃತಿಯ ಸೊಬಗಿಂದ ||
ಒರೆದ ಭಾಮಿನಿಷಟ್ಪದಿಗಳಾ | ದರದಿ ವಿದ್ವತ್ಸಭೆಯ ಹೃತ್ಸರ |
ಸಿರುಹಕೋರಕಗಳನಲರ್ಚಿಸಿ ನಲಿಯದಿರ್ದಪುವೇ[2] ||

ಗ್ರಂಥಾವತಾರದಲ್ಲಿ ಶಾಂತೇಶ್ವರಸ್ತುತಿ ಇದೆ. ಬಳಿಕ ಕವಿಪೂರ್ವಕ್ತಿ, ವಿನಾಯಕ, ಷಣ್ಮುಖ, ವೀರಭದ್ರ, ಭೃಂಗಿ, ನಂದಿ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಮಧುರಾನಗರ

ತ್ರಿದಶಜನಕಾವಾಸವಾದಗು | ವೊದಗದನ್ನಾಹಾರವನಿಬರಿ |
ಗದಱೀನೀಸುಖನಿದ್ರೆಯೆಂಬುದ ಕಾರಣರೆಂದೆಂದುಂ ||

---

1 ಮತ್ತೊಂದು ಪ್ರತಿಯಲ್ಲಿ ಸಂಧಿ 31, ಪದ್ಯ 1945 ಎಂದಿದೆ.

2. ಜೈಮಿನಿಭಾರತ, I, 13 ನೆಯ ಪದ್ಯದೊಡನೆ ಹೋಲಿಸಿ.

ಮುದದೊಳಿನಿಪ್ಪಳಗಿರ್ದ ಜನವಂ | ಪದವ ಪೋಲವೆನುತ್ತಲಮರರ |
ಸದನವೆನಿಪಮರಾವತಿಯನಿಲ್ಪಿಕೆಯುದ್ದಾನಗರ ||

ವಸಂತ

ಎತ್ತ ನೋಡಲು ತಳಿತ ಬನದಿಂ | ದೆತ್ತ ನೋಡಲು ಪೂತ ಲತೆಯಿಂ |
ದೆತ್ತ ನೋಡಲು ನಲಿವ ನವಿಲರಸಂಜೆಕೋಗಿಲೆಯಿಂ ||
ಎತ್ತ ನೋಡಲು ತಂವುತಂಪನು | ಹೊತ್ತು ಮೆಲ್ಲನೆ ತೀಡುವೆಲರಿಂ |
ದೆತ್ತ ನೋಡಲು ಕಣ್ಗೆ ಮಂಗಳವಾಯ್ತು ಮಧುಮಾಸ ||

ಗ್ರೀಷ್ಮ

ತಳದೊಳಗೆ ಮುನ್ನೀರನಂಬರ | ತಳದೊಳಗೆ ಸುರನದಿಯು ಸುತ್ತಲು |
ಒಳಸಿದಂಬುಧಿಯೇಳು ನಡುವೆ ಮಹಾನದೀನದವ ||
ಬಲಿದು ವಿಧಿ ಮುಂಬಪ್ಪ ಕಜ್ಜವ | ತಿಳಿದು ನಿರ್ಮಿಸಿಯುಲಿದುನಲ್ಲದೊ |
ಡಲಿವುದುಂಟೇ ಅವನಿ ತೀವ್ರನಿದಾಘಮರುಬಿಯಲಿ ||

ಹೇಮಂತ

ಉದಧಿಯೊಳು ಕಾಷ್ಠದೊಳು ಜೀವರ | ಹೃದಯದೊಳು ಶಿಲೆಗಳೊಳು ಮೇಘದ |
ಕೊದಲಿನೊಳು ಲೋಹದೊಳು ಪಿಸುಣವಜಃಪ್ರದೇಶದೊಳು ||
ಪುದುಗಿಯುರಿ ಮಱೆಗೊಳಲು ಶೀತಕೆ | ಹೆದಱಿಯುಷ್ಣಮರೀಚಿಯಗ್ನಿಯ |
ಸದಸದಾಸೆಗೆ ಪೋಪನೆನೆಯುಳುಕಿಸಿತು ಹಿಮಸಮಯ ||

ನೀತಿ

ಕಾಲದಾವುದು ದೇಶವಾವುದು | ಮೇಲೆ ತನ್ನಯ ಶಕ್ತಿಯಾವುದು |
ಕೇಳಮೇಳದರಾರು ಜೆಂಬಲವಾರು ಹಗೆಯಾರು ||
ಸೋಲವಾವುದು ಗೆಲವದಾವುದು | ಆಳುಗೆಲಸದರಾರೆನುತ ಸ |
ಲ್ಲೀಲೆಯಿಂ ನಿಶ್ಚೈಸಿ ಕಾರ್ಯವನೆಸಗು ನೀನೆಂದ ||
ಕನಕತುರಗಸುರತ್ನಗೋಧನ | ವನಿತೆಯರ ಸೇವಕರ ಗುಣಗಳ |
ನಿನಿತು ನೋಡದೆ ಒಜ್ಜೆಯ ಸ್ವಾಮ್ಯಾಕೃತಿಯನೇ ಕಂಡು ||

ಮನವೆಳಸಿ ಕೈವಿಡಿದು ನಂಬುವ | ಜನರಿಗತಿಶಯದುಃಖವಲ್ಲದೆ |
ಜನಿಸಲರಿವುದೆ ಸೌಖ್ಯಮಯರಸವೆಂದನಾ ಸೂತ ||

ಪುಣ್ಯಾರಣ್ಯ

ಬೀಸದಾಬಿಜ್ರುಗಾಳಿ ಬಿಜ್ರುವಲಿ | ಸೂಸಲಮ್ಮದು ರವಿಕಿರಣ ಳ|
ಟ್ಟಾಸುರದಿ ಕಡುಗಾಯಲರಿಯದು ಮಂಜು ಮಳುಗೊಮ್ಮೆ ||
ಬಾಸಣಿಸದಗಲದಲಿ ಷಡುಋತು | ವೋಸರಿಸದಾವಾಗ ಸೌಖ್ಯನಿ |
ವಾಸವೆಂದೆನಿಸುವುದು ಪುಣ್ಯಾರಣ್ಯ ಋಷಿಗಳಿಗೆ||

ನಿಟ್ಟೂರು ವಂಜಯ್ಯ ಸು. 1725

ಈತನು ಶಬ್ದಮಣಿದರ್ಪಣಕ್ಕೆ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಸ್ಥಳ ನಿಟ್ಟೂರು. ಭಟ್ಟಾಕಳಂಕನ (1604) ಕರ್ನಾಟಕ ಶಬ್ದಾನುಶಾಸನದ ಸೂತ್ರಗಳನ್ನು ಉದಾಹರಿಸುವುದರಿಂದ ಅವನ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗಿಯೇ ಇದೆ. ಸುಮಾರು 1725 ರಲ್ಲಿ ಇದ್ದಿರಬಹುದು. ಇವನು ಸಂಸ್ಕೃತದಲ್ಲಿ ವೇದಾಂತ ಸಾರ ವೀರಶೈವಚಿಂತಾಮಣಿಯನ್ನು ಬರೆದಿದ್ದಾನೆ.

ಬೊಂಬೆಯಾಟದ ಸಿದ್ದಯ್ಯ ಸು. 1725

ಸಾಂಬಯ್ಯನು (ಸು. 1750) ತನ್ನ ಕರಿಯಬಂಟನ ಕಥೆಯಲ್ಲಿ ತನ್ನ ತಂದೆಯಾದ ಬೊಂಬೆಯಾಟದ ಸಿದ್ದಯ್ಯನು ಮೋಹನಕವಿ ಎಂಬ ಬಿರುದನ್ನು ಪಡೆದಿದ್ದಂತೆಯೂ ಸಂಗೀತ ಸಾಹಿತ್ಯಗಳಲ್ಲಿ ನಿಪುಣನಾಗಿದ್ದಂತೆಯೂ ಹೇಳುತ್ತಾನೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಚಿದಾನಂದ ಸು. 1725

ಇವನು ಚಿದಖಂಡಾನುಭವಸಾರ, ಹರಿಭಕ್ತಿರಸಾಯನ ಇವುಗಳನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ಜ್ಞಾನಸಿಂಧುವನ್ನು ಬರೆದ

ಚಿದಾನಂದಾವಧೂತನ (ಸು. 1750) ಗುರುವೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಇವನ ಕಾಲವು ಸುಮಾರು 1725 ಆಗಬಹುದು.

ಇವನ ಗ್ರಂಥಗಳಲ್ಲಿ

1 ಚಿದಖಂಡಾನುಭವಸಾರ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 8, ಪದ್ಯ 537; ಅದ್ವೈತವೇದಾಂತವನ್ನು ಬೋಧಿಸುತ್ತದೆ.

2 ಹರಿಭಕ್ತಿರಸಾಯನ

ಇದೂ ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 5, ಪದ್ಯ 301.

ದೇವ ಸು. 1725

ಈತನು ದೇವಾಂಗಪುರಾಣವನ್ನು ಬರೆದಿದ್ದಾನೆ. ಇವನು ದೇವಾಂಗದವನು; ಇವನ ಪಿತಾಮಹನು ಕಳಾಬ್ಧಿಯಪುರದ ಹರಿಸೆಟ್ಟಿ; ತಂದೆ ತಮ್ಮಿಸೆಟ್ಟಿ; ತಾಯಿ ನಾಗಮ್ಮ. ಇವನು ಸುಮಾರು 1725 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ದೇವಾಂಗಪುರಾಣ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 13, ಪದ್ಯ 1380. "ಬ್ರಹ್ಮಾಂಡಪುರಾಣದೊಳ್ ವಸ್ತುವ ನಿರ್ಮಿಸಿ ಪಡೆದ ದೇವಾಂಗಚಾರಿತ್ರವ ಪೇಳ್ವೆನು" ಎಂದು ಈತ ಹೇಳುತ್ತಾನೆ.

ರಂಗಯ್ಯ ಸು. 1730

ಇವನು ಕಾವೇರೀಮಾಹಾತ್ಮ್ಯವನ್ನು ಬರೆದಿದ್ದಾನೆ. "ಮೈಸೂರು ದಳಪತಿ ದೇವರಾಜನೈಪವರೇಣ್ಯ ಪೇಟೆಯೆ ಪೇಟ್ದಿಂ" ಎಂಬುದರಿಂದ ಈತನು ದಳವಾಯಿ ದೇವರಾಜನ ಆಶ್ರಿತನಾಗಿದ್ದಂತೆ ತಿಳಿಯುತ್ತದೆ. ಈ ದೇವರಾಜನು ಕಳಲೆ ವೀರರಾಜನ (ಸು. 1720) ಮಗನು; ಮೈಸೂರು ದೊರೆ

ಯಾದ ದೊಡ್ಡಕೃಷ್ಣರಾಜನಲ್ಲಿ (1713-1731) ಸೇನಾಪತಿಯಾಗಿದ್ದನು. ಅದುದರಿಂದ ಕವಿಯ ಕಾಲವು ಸುಮಾರು 1730 ಆಗಬಹುದು.

ಇವನ ಗ್ರಂಥ

ಕಾವೇರೀ ಮಾಹಾತ್ಮ್ಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ.

ಜಾಯೋಂದ್ರ 1734

ಈತನು ಕರ್ಣಾಟಕುವಲಯಾನಂದ, ರಸಮಂಜರಿ ಇವುಗಳನ್ನು ಬರೆದಿದ್ದಾನೆ. ಇವನು ರಾಜವಂಶಕ್ಕೆ ಸೇರಿದವನು; ತೊರಗಲ್ ಸೀಮೆಯ ಅರಸಾದ ಲಿಂಗರಾಜನ ಮಗನು. ಜೈಮಿನಿಭಾರತದಿಂದ ಅಲಂಕಾರಗಳಿಗೆ ಉದಾಹರಣಗಳನ್ನು ಕೊಟ್ಟಿದ್ದಾನೆ. ಕರ್ಣಾಟಕುವಲಯಾನಂದವನ್ನು "ವರುಷವಾನಂದನಾಥವನಾಸದಲ್ಲಿ ಭಾ| ಸುರಶುಕ್ಲಪಕ್ಷಪ್ರತಿಪದಿರವಿವಾ ಸರದಿ" ನುಗಿಸಿದಂತೆ ಹೇಳುತ್ತಾನೆ. ಈ ಆನಂದವರ್ಷವು 1734 ಆಗಿರ ಬಹುದೆಂದು ತೋರುತ್ತದೆ.

ಇವನ ಗ್ರಂಥಗಳಲ್ಲಿ

1 ಕರ್ಣಾಟಕುವಲಯಾನಂದ

ಇದು ಷಟ್ಪದಿಯಲ್ಲಿ ಬರೆದಿದೆ; ಸಂಸ್ಕೃತ ಕುವಲಯಾನಂದದ ಸಂಗ್ರಹರೂಪವಾದ ಭಾಷಾಂತರ; ಅಲಂಕಾರಶಾಸ್ತ್ರ. ಇದರಲ್ಲಿ ಉದಾಹರಣಗಳೊಡನೆ 101 ಅಲಂಕಾರಗಳು ವಿವರಿಸಲ್ಪಟ್ಟಿವೆ. ಸೂತ್ರಗಳು ಶರಷಟ್ಪದಿಯಲ್ಲಿ ಅಥವಾ ಸಾಂಗತ್ಯದಲ್ಲಿ ಇವೆ. ಉದಾಹರಣಗಳು ಪ್ರಾಯಿಕವಾಗಿ ಸೌಂದರಪುರಾಣ, ಉದ್ಭಟಕಾವ್ಯ, ಚಾಯಣಭಾರತ, ಚಿತ್ರ ಭಾರತ, ಭಿಕ್ಷಾಟನಕಾವ್ಯ, ಚೇರವುಕಾವ್ಯ, ಭಾವಚಿಂತಾರತ್ನ, ಜೈಮಿನಿ ಭಾರತ ಇವೇ ಮೊದಲಾದ ಷಟ್ಪದೀಗ್ರಂಥಗಳಿಂದ ಅನುವಾದ ಮಾಡಲ್ಪಟ್ಟಿವೆ. ಒಂದೊಂದಲಂಕಾರಕ್ಕೂ ಮೂರು ಮೂರು ಉದಾಹರಣಗಳನ್ನು ಕೊಟ್ಟಿವೆ. ಗ್ರಂಥದ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಕುವಲಯಾನಂದಾಲಂಕಾರಶಾಸ್ತ್ರಕರ್ಣಾಟಭಾಷಾಯಾಂ ಜಾಯಗೊಂಡ ದೇಶಾಯಿ ವಿರಚಿತಕವನಂ ಸಂಪೂರ್ಣಂ.

ಈ ಗ್ರಂಥದಿಂದ ಕವಿಗೆ ಸಂಬಂಧಿಸುವ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ —

ತುಹಿನಗಿರಿಜಾತೆಯಂಕದಲಿರುವ ಸಮಯದಲಿ ।
ಗುಹ ಬರಲು ಪತಿಯ ನಿಟ್ಟಿಸೆ ಭಾವವಱಿತು ಸತಿ ॥
ಸಹಜೈಕಕಾಲದಲ್ಲಱಿವೊಗವ ಜಗಂಬಸುತಲಮರ್ದಪ್ಪಿ ಸಂತೈಸಿದ ॥
ಅಹಿರಾಡ್ವಿಭೂಷಣಸುಪಾದೇವನವತರಿಸಿ ।
ಮಹಿಯೊಳಗೆ ಕಾಡಸಿದ್ಧೇಶನಾಮದಿ ಬಂದು ।
ಮಹಿಮೆಯಂ ಮೆಱೆಯುತ್ತ ಸಿದ್ಧಗಿರಿಯಿಂದಲೈತಂದು ಕುಲದೈವವಾಗಿ ॥
ಇರುವ ತೊಱಗಲ್ಸೀಮೆಗರಸಾದ ಲಿಂಗಭೂ ।
ವರನ ಸತ್ಪುತ್ರ ಜಾಯೇಂದ್ರನಿಂ ನಿರ್ಮಿಸಿದ ।
ಸರಸನವಕಕಾವ್ಯಸುಧೆಯೊಳಿಸು ಲಾಲಿಪುದು ಪಾಲಿಪುದು ಲೀಲೆಯಿಂದ ॥

2 ರಸಮಂಜರಿ

ಇದೂ ಷಟ್ಪದಿಯಲ್ಲಿ ಬರೆದಿದೆ; ಪದ್ಯ 100. ಇದಕ್ಕೆ ಶೃಂಗಾರತಿಲಕ ಎಂಬ ಹೆಸರೂ ಉಂಟು.

ಮೊದಿಯರುದ್ರ 1737

ಈತನು ವಿರಕ್ತರಕಾವ್ಯ, ಪಂಚವೋದ್ಭವಕಾವ್ಯ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಕಾಮಾರಿಭಕ್ತರ ಚರಣಕಿಂಕರ, ಪಂಚಮಕುಲಜೋದ್ಭವನಿಜಹೃದಯ, ಸರಸಕವಿವರ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ವಿರಕ್ತರಕಾವ್ಯವನ್ನು ಶಕ 1658 ಪಿಂಗಳದಲ್ಲಿ, ಎಂದರೆ 1737 ರಲ್ಲಿ, ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಪಾಲ್ಕುರಿಕೆಸೋಮ, ಹರಿಹರ, ಮಲಯರಾಜ,

ಪುಷ್ಪದಂತ, ಭೀಮಕವಿ, ರಾಘವ ಕೆರೆಯಪದ್ಮರಸ, ಹರದತ್ತಾಚಾರ್ಯ, ಪಂಡಿತಸ್ವಾಮಿ, ಉದ್ಭಟ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥಗಳಲ್ಲಿ

ವಿರಕ್ತರಕಾವ್ಯ

ಇದು ವಾರ್ಧಕ, ಪರಿವರ್ಧಿನಿ ಈ ಷಟ್ಪದಿಗಳಲ್ಲಿ ಬರೆದಿದೆ; ಸಂಧಿ 6, ಪದ್ಯ 742. ಇದರಲ್ಲಿ ಶಿವಭಕ್ತರಾದ 101 ವಿರಕ್ತರ ಚರಿತೆ ಹೇಳಿದೆ. ಈ ಗ್ರಂಥವು ಹುಟ್ಟುವುದಕ್ಕೆ ಕಾರಣವನ್ನು ಕವಿ ಹೀಗೆ ಹೇಳುತ್ತಾನೆ —

ತಗಮದ ಗ್ರಂಥದರ್ಥವನು ನೋಡಿ ಪಂಚಮೋದ್ಭವಕಾವ್ಯವನು ವಿರಚಿಸಲ್ಕ ಭಕ್ತಮಾಹೇಶ್ವರರು ಒರೆದೋಗಿ ಜರಿಸುತಂ ಮಲೆದೇಶಬಿದರೂರಪಟ್ಟಣಕೆ ಬರಲು ಅಲ್ಲಿ ಪರ ಪ್ರಮುಖಶಿವಭಕ್ತಸನ್ಮೇಳದ ಶಿವಶರಣರು ನೋಡಲು ಒರ್ವ ಷಟ್ಸ್ಥಲಜ್ಞಾನ ಕೋವಿದ ಮಳಯಸ್ವಾಮಿಯೆಂಬ ಕೋವಿದನು ಗ್ರಂಥವನು ಕೇಳಿ ಆನಂದಿಸಿ ಕವಿಯನು ಕರೆದು ಈ ಕಾವ್ಯವ ರಚಿಸಿದಂತೆ ನೂರೊಂದುವಿರಕ್ತಮಾಹೇಶ್ವರರ ಚರಿತ್ರವ ವಿರಚಿಸೆಂದು ನುಡಿಯಲ್ಕೆ ಅವರ ಬೆಸನಾಗಿತು ವಿರಚಿಸಿದೆನು

ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ —

ಸಮುದ್ರ

ಇಂದ್ರಂಗೆಯ್ರಾವತವನೈರಿಗಳನಾ । ನಂದದಿಂದಿತ್ತ ಚಂದ್ರನನಿತ್ತ ಪಶಿನಗೆ ।
ನಂದಸೂನುಗೆ ರಮೆಯನಿತ್ತ ರತ್ನವ ಧರೆಗೆ ಮೌಕ್ತಿಕವ ಸಕಲಜಗಕೆ ॥
ಅಂದದಿಂದಿತ್ತ ಭಿಕ್ಷವ ಬೇಡಿ ತಿರಿದುಂಬ|ನುಂದಿಗಳಿಗಿತ್ತ ಶಂಖನ ಜಗಕೆಯುಪಕಾರ|
ನೊಂದು ತಪ್ಪದೆ ಮಾಡಿದೆನು ನನಗೆ ಸರಿಯುದಾರೆಂದು ಭೋಗರೆಯುತಿಹುದು ॥

ಇವನ ಪಂಚಮೋದ್ಭವಕಾವ್ಯವು ನನಗೆ ದೊರೆತಿಲ್ಲ.

ಕಳಲೆನಂಜರಾಜ ಸು. 1740

ಈತನು ಕಕುದ್ಗಿರಿಮಾಹಾತ್ಮ್ಯ, ಕಾಶೀಮಹಿಮಾರ್ಥದರ್ಪಣ, ಕಾಶೀಕಾಂಡ, ಗರಳಪುರೀಮಹಿಮಾವರ್ಣನ, ಭಕ್ತವಿಲಾಸದರ್ಪಣ, ಭಕ್ತಗಿರಿಮಾಹಾತ್ಮ್ಯ, ಭಾರತ, ಮಾರ್ಕಂಡೇಯಪುರಾಣ, ವಿಘ್ನೇಶ್ವರವ್ರತಕಲ್ಪ, ಶಿವಗೀತೆ, ಶಿವಧರ್ಮೋತ್ತರ, ಶಿವಭಕ್ತಿಮಾಹಾತ್ಮ್ಯ, ಶೈವಧರ್ಮ, ಸೇತು

ಪುಷ್ಪವಿಮಾದರ್ಶ, ಹರದತ್ತಾಚಾರ್ಯಸೋಹಾತ್ಮ್ಯ, ಹರಿವಂಶ, ಹಾಲಾಸ್ಯಮಾಹಾತ್ಮ್ಯ ಇವುಗಳನ್ನು ಬರೆದಿದ್ದಾನೆ.

ಇವನು ಮೈಸೂರುರಾಜರ ಸೇನಾಪತಿಗಳ ವಂಶಕ್ಕೆ ಸೇರಿದವನು; ಭಾರದ್ವಾಜಗೋತ್ರದವನು ; ಆಶ್ವಲಾಯನಸೂತ್ರದವನು ; ಋಗ್ವೇದಿ. ತನ್ನ ವಂಶಪರಂಪರೆಯನ್ನು ಹೀಗೆ ಹೇಳಿದ್ದಾನೆ—

ಚಂದ್ರವಂಶದ ರಾಜರಲ್ಲಿ ಭಾರದ್ವಾಜಗೋತ್ರದ ಋಕ್ಯಾಖಾನುವರ್ತಿಯಾದ ತಿಮ್ಮನರೇಂದ್ರನು ಕಳಲೆ ಕುಲದಲ್ಲಿ ಪ್ರಸಿದ್ಧನಾಗಿದ್ದನು. ಇವನ ಮಗ ಕಾಂತರಾಜ. ಇವನ ಮಗ ಕಳಲೆ ದೊಡ್ಡರಾಜ: ಇವನು ಯುದ್ಧದಲ್ಲಿ ಶತ್ರುಗಳ ಸೊಕ್ಕನ್ನು ಮುರಿದು ಮರಾಟರಾಯರನೊಕ್ಕಲಿಕ್ಕಿ ಅನ್ಯರಿಗೆ ದಕ್ಕಲರಿಯದ ಕಪಿ ಪತಾಕೆಯನ್ನೂ ಸಿಂಹಲಲಾಟಪಲ್ಲಕ್ಕಿಯನ್ನೂ ಪಡೆದು ಅಸಮವೀರನೆನಿಸಿದನು; ಮರಾಟಿ ಜಯಘಾಟಿ ಮೊದಲಾದೈವರನು ರಣಘಾಟಿಯುಂಪ ಆಡ್ಡಹಾಯ್ದು ತಾನೇ ಖಡ್ಗದಲ್ಲಿ ಕಡಿದನು. ಇವನಮಗ ವೀರರಾಜ (ಸು. 1720)[1]. ಇವನ ಮಕ್ಕಳು ದೇವರಾಜ ನಂಜರಾಜರು. ಈ ದೇವರಾಜನನ್ನು ಕೆಣಕಿ ಮಾಗಡಿಯ ಭೂವರನು ನಿಜದುರ್ಗರಾಷ್ಟ್ರವನು ನೀಗಿಕೊಂಡನು[2]. ದೇವರಾಜನ ತಮ್ಮನಾದ ನಂಜರಾಜನೇ ಕವಿ.

ಈತನು ಗರಳಪುರಪತಿ ನೀಲಕಂಠನ ಭಕ್ತನು. ಶಿವಾಗಮಗಳ ಅರ್ಥವನರಿದು ಬುಧಜನದೊಡನೆ ಗೋಷ್ಠಿಯ ನೆಗಳಿದಂತೆಯೂ ಶೈವಪಂಚಾಕ್ಷರದ ನಿಜಗುರುಸೌಂದರೇಶ್ವರಭೂಸುರರಿಂದರಿದು ಭಸಿತಶಿವಾಕ್ಷಮಾಲೆಗಳ ಧರಿಸಿ ಲಿಂಗಾರ್ಚನೆಯನನುದಿನ ಮಾಡುತ ಪಾಶುಪತಶಾಸ್ತ್ರಾರ್ಥತತ್ವವನು ದೇಶಿಕೋತ್ತಮರಂಘ್ರಿಸೇವೆಯಿಂದ ತಿಳಿದಂತೆಯೂ ಹೇಳಿಕೊಂಡಿದ್ದಾನೆ. ಇವನಿಗೆ ಗರಳಪುರಾಧಿನಾಥಜಲಜಾತಾರವಿಂದಸೇವಾಸಮಾಸಾದಿತಗೀರ್ವಾಣಾಂಧ್ರಕರ್ಣಾಟಕಾದಿ ನಾನಾಭಾಷಾವಿಶೇಷಕಾವ್ಯರಚನಾಚಾತುರೀಧುರೀಣ, ,ದಾನಕ್ಷ್ಮಾಕ್ಷಾಧೀಶ್ವರ, ಹನೂಮದ್ಧ್ವಜಬಿರುದಾಂಕಿತ ಎಂಬ ವಿಶೇಷಣಗಳು ಹೇಳಿವೆ. ಅಲ್ಲದೆ ಈತನು ಕವಿಗಳಿಗೆ ಪೋಷಕನಾಗಿ ನೂತನಭೋಜರಾಜ ಎಂಬ ಬಿರುದನ್ನು ಪಡೆದಿದ್ದಂತೆಯೂ ಸಂಗೀತಗಂಗಾಧರವೇ ಮೊದಲಾದ ಸಂಸ್ಕೃತಗ್ರಂಥಗಳನ್ನು

---

1. 9 ನೆಯ ಪುಟವನ್ನು ನೋಡಿ. 2 ಇದು 1728 ರಲ್ಲಿ ನಡೆದಂತೆ ತಿಳಿಯುತ್ತದೆ.

ಬರೆದಂತೆಯೂ ಇವನ ಆಶ್ರಿತನಾದ ನೃಸಿಂಹಕವಿಯು ಚಂದ್ರಕಲಾಪರಿಣಯವೆಂಬ ನಾಟಕದಿಂದ ತಿಳಿಯುತ್ತದೆ[1]. ಈ ನೃಸಿಂಹಕವಿ ಕಳಲೆನಂಜರಾಜನ ಸ್ತುತಿರೂಪವಾಗಿ ನಂಜರಾಜಯಶೋಭೂಷಣ ಎಂಬ ಒಂದು ಅಲಂಕಾರಗ್ರಂಥವನ್ನೂ ಬರೆದಿದ್ದಾನೆ.

ನಂಜರಾಜನು ಮೈಸೂರು ದೊರೆಯಾದ ಇಮ್ಮಡಿ ಕೃಷ್ಣರಾಜನ (1734-1766) ಸೇನಾಪತಿಯಾಗಿಯೂ ಮಂತ್ರಿಯಾಗಿಯೂ ಇದ್ದನು. ಇವನಿಗೆ ಕರಾಚಕುರಿ ನಂಜರಾಜ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1740 ಆಗಬಹುದು.

ದೇವಚಂದ್ರನು ತನ್ನ ರಾಜಾವಳೀಕಥೆಯಲ್ಲಿ (1838) ಈ ಕವಿಯ ವಿಷಯವಾಗಿ ಹೀಗೆ ಬರೆದಿದ್ದಾನೆ—

ವೀರರಾಜಕುಮಾರ ದೇವರಾಜನನುಜ ಕಳಲೆ ನಂಜರಾಜಂಗೆ ಕೇರಳದೇಶಕೊಂಗನಾಡತ್ರಯಂದಾಂಡಿಗಳ್ ಬಂದು ಸೇರಿ ವೀರಶೈವಪುರಾಣಮೆಂದು ಅನೇಕಕಲ್ಪನಾಕಥೆಗಳಂ ಪೇಟ್ಪರ್. ಅವರೊಳೆ ಅತಿಭಕ್ತಿ ಪುಟ್ಟಿ ಕನ್ನಡವಾಕ್ಯಂಗಳಿಂ ನಂಜರಾಜಕೃತಮೆಂದು ಗ್ರಂಥಂಗಳಂ ವಿರಚಿಸಿದಂ.

ಇವನ ಗ್ರಂಥಗಳಲ್ಲಿ

1. ಹಾಲಾಸ್ಯಮಾಹಾತ್ಮ್ಯ

ಇದು ಸ್ಕಾಂದಪುರಾಣದ ಅಗಸ್ತ್ಯಸಂಹಿತೆಯಲ್ಲಿರುವ ಹಾಲಾಸ್ಯಮಾಹಾತ್ಮ್ಯದ ಗದ್ಯರೂಪವಾದ ಭಾಷಾಂತರವು; ಅಧ್ಯಾಯ 71. ಇದರಲ್ಲಿ

---

1. ಸೂತ್ರಧಾರಃ—ತತ್ಕವಿಸಮಕ್ಷಮೇವ ಕೃತಿನಾ ಕೃತಿನಾಯಕೇನ ಕಲು ಲೇಕುಲಚಿರಂತಕೇನ ಸ್ವಕಪೋಲಕಲ್ಪಿತ ಸಂಗೀತಗಂಗಾಧರಾದ್ಯನೇಕ ಪ್ರಬಂಧಾಭಿನಯದರ್ಶನಜನಿತಕೌತುಕೇನ ಕರ್ನಾಟಭಾಷಾವಿರಚಿತ ಹಾಲಾಸ್ಯಮಾಹಾತ್ಮ್ಯ ಶಿವಭಕ್ತ್ಯವಿಲಾಸಾದಿ ಬಹುಪ್ರಬಂಧಸಮುದಯೇನ ಸಕಲವಿದ್ವಜ್ಜನಭಾಗಧೇಯೇನ ನೂತನಭೋಜರಾಜೇನ ನಂಜರಾಜೇನ ಸಬಹುಮಾನಮಾಹೂತಃ ಸಮಾದಿಷ್ಟೋಽಸ್ಮೀತಿ.

ಏರುದ್ಧಯೋಃ ಶ್ರೀಭಾರತ್ಯೋರೇಕತ್ರ ಘಟನಂ ಕುತಃ |
ಮೈದಗಾಧ್ಯಾತ್ಮತತ್ತ್ವಸ್ಯೈವ ಕಲುಲೇನಂಜಭೂಪತೇಃ ||

ಮಧುರೆಯ ಸುಂದರೇಶ್ವರದೇವರ 64 ಲೀಲೆಗಳು ಹೇಳಿವೆ. ಇದಕ್ಕೆ ನಂಜರಾಜವಾಣೀವಿಲಾಸ ಎಂದು ಹೆಸರು. ಗ್ರಂಥಾವತಾರದಲ್ಲಿ ದೇವತಾಸ್ತುತಿ, ಕವಿವಂಶ ಮುಂತಾದ ವಿಷಯಗಳನ್ನು ಪ್ರತಿಪಾದಿಸುವ 15 ಭಾಮಿನೀಷಟ್ಪ

1 (1) ದೇವೇಂದ್ರಪಾಪಪರಿಹಾರ.
(2) ಐರಾವತಶಾಸವಿಮೋಚನೆ
(3) ಕದಂಬವನದಲ್ಲಿ ಮಧುರಾಪುರ ರಚನೆ
(4) ತಟಾಕಾದೇವಿಯ ಜನನ
(5) ಮೀನಾಕ್ಷಿ ಸೌಂದರೇಶರ ಕಲ್ಯಾಣ
(6) ಪರಮೇಶ್ವರನ ನಾಟ್ಯಪ್ರದರ್ಶನ
(7) ಕುಂಡೋದರನಿಗೆ ಅನ್ನಭಕ್ಷಣ ಸಾಮರ್ಥ್ಯದಾನ
(8) ಕುಂಡೋದರನಿಗೆ ಅಪಸರಾಪ್ರದರ್ಶನ
(9) ಸಪ್ತಸಾಗರರಾಜನಯನ
(10) ಮಲಯಧ್ವಜಭೂಪಾನಯನ
(11) ಉಗ್ರಪಾಂಡ್ಯನಿಗೆ ವಲಯಾಯುಧಪ್ರದಾನ
(12) ಸಮುದ್ರನ ಗರ್ವಭಂಗ
(13) ದೇವೇಂದ್ರಕಿರೀಟಭೇದನ
(14) ಮೇರುಕಾಂಚನಹರಣ
(15) ಮುನಿಗಳಿಗೆ ವೇದಾರ್ಥೋಪದೇಶ
(16) ರತ್ನವಿಕ್ರಯ
(17) ಮೇಘಗಳಿಂದ ಸಮುದ್ರಪಾನ
(18) ಅತಿವೃಷ್ಟಿನಿವಾರಣ
(19) ಸಿದ್ಧವೇಷಧಾರಣ
(20) ಶಿಲಾಗಜಕ್ಕೆ ಇಕ್ಷುಪ್ರದಾನ
(21) ನಗ್ನಹಸ್ತಿಹನನ
(22) ದ್ವಿಜಕನ್ಯಾನುಗ್ರಹ
(23) ವ್ಯತ್ಯಸ್ತನರ್ತನ
(24) ದ್ವಿಜಪತ್ನಿಯ ವಧನಿರೂಪಣ
(25) ಬ್ರಹ್ಮಘ್ನದೋಷಪರಿಹಾರ
(26) ಸಿದ್ಧನಂ ಒಂಟಿಕಾಳಗದಲ್ಲಿ ಗೆದ್ದುದು
(27) ನಗ್ನಸರ್ಪಹನನ
(28) ನಗ್ನಧೇನುಪಾತನ
(29) ಕುಲಭೂಷಣನಿಗೆ ಸೇನಾಪ್ರದರ್ಶನ
(30) ಕುಲಭೂಷಣನಿಗೆ ಸುವರ್ಣಮಯವಾಗಮುಡುಪನಿತ್ತುದು
(31) ವಲಯವಿಕ್ರಯ
(32) ಯಕ್ಷಸ್ತ್ರೀಯರಿಗೆ ಅಷ್ಟಸಿದ್ಧ್ಯುಪದೇಶ
(33) ಚೋಳರಾಜನಿಗೆ ಬಾಗಿಲಂತೆಗೆದುದು
(34) ಪಾಂಡ್ಯಭಟರಿಗೆ ಪಾನೀಯದಾನ
(35) ರಸವಾದ ಪ್ರದರ್ಶನ

ದಿಯ ವಕ್ಯಗಳಿವೆ; ಮುಂದಕ್ಕೆ ಎಲ್ಲಾ ಗದ್ಯವೇ ಇದೆ. ಇದೇ ರೀತಿಯಾಗಿ ಇನ್ನೂ ಕೆಲವು ಗ್ರಂಥಗಳಲ್ಲಿಯೂ ಇದೆ. ಗ್ರಂಥಾದಿಯಲ್ಲಿ ಈಶ್ವರಸ್ತುತಿ ಇಷ್ಟೆ. ಬಳಿಕ ಕವಿ ವಾಸವದತ್ತೆ, ಇತರ ಮತಗಳ ಭಂಗಿಸಿ ಶಿವವಿಶಿಷ್ಟಾದ್ವೈತಮತವೇ ವ್ಯಾಸಮುನಿಗಭಿಮತವೆಂದು ನಿರೂಪಿಸಿದ ಶ್ರೀಕಂಠದೇಶಿಕ, ವಿಮತಸಭೆಯೊಳು ಶಿವನೇ ಪರಮಾತ್ಮನೆಂದು ವಾಚಾಣಾವೃಷಭಂಗೆ ತೃಣವಂ

---

(36) ಚೋಳರಾಯನಂ ಜಯಿಸಿದುದು
(37) ಶೂದ್ರನಿಗೆ ತಂಡುದಾನ
(38) ವೈಶ್ಯನ ಮಗನಿಗೆ ಜಯವನಿತ್ತುದು
(39) ವರಗುಣಪಾಂಡ್ಯನ ಬ್ರಹ್ಮಹತ್ಯಾವಿಮೋಚನ
(40) ಕಾಷ್ಠಭಾರಪಕ್ಷಯ
(41) ಚೇರರಾಯನಿಗೆ ಪತ್ರಿಕಾಲೇಖನ
(42) ಭದ್ರನಿಗೆ ಪೀಠವನಿತ್ತುದು.
(43) ಭದ್ರವನಿತೆಗೆ ಅಭಯಪ್ರದಾನ
(44) ಸೂಕರಶಿಶುಗಳಿಗೆ ಸ್ತನ್ಯಪ್ರದಾನ
(45) ಸೂಕರಶಿಶುಗಳಿಗೆ ಮಂತ್ರಿತ್ವವನಿತ್ತುದು
(46) ಭಾರದ್ವಾಜಪಕ್ಷಿಗೆ ಮೃತ್ಯುಂಜಯಮಂತ್ರೋಪದೇಶ
(47) ನೀರುಕಾಗೆಗೆ ಮುಕ್ತಿಯನಿತ್ತುದು
(48) ಪುರಸೀಮಾಪ್ರದರ್ಶನ
(49) ಚೋಳಸೇನಾಪ್ರಭಂಜನ
(50) ಸಂಘಕವಿಗಳಿಗೆ ಪೀಠವನಿತ್ತುದು
(51) ಬ್ರಾಹ್ಮಣಕುಮಾರನಿಗೆ ಆರ್ಯಾವೃತ್ತವ ಬರೆದುಕೊಟ್ಟುದು
(52) ಸತ್ಕೀರ್ತಿಶಾಸನುಗ್ರಹಕರಣ
(53) ಅಸತ್ಕೀರ್ತಿಕವಿಗೆ ದಾಸ್ಯವಿಡ ಸೂತ್ರೋಪದೇಶ
(54) ಪ್ರಬಂಧತಾರತಮ್ಯನಿರೂಪಣ
(55) ಉತ್ತರಹಾಲಾಸ್ಯವಾದುಭಾವ
(56) ಕೈವತಕಕನ್ಯಾಪಾಣಿಗ್ರಹಣ
(57) ವಾತಪುರೇಶ್ವರೀಕಾಪ್ರಪ್ರದಾನ
(58) ಮಾಯಾಶ್ವವಿಜಯ
(59) ನದ್ಯಾಕರ್ಷಣ
(60) ಹಿಟ್ಟಿಗಾಗಿ ಶಿವನು ಮಣ್ಣು ಹೊತ್ತುದು
(61) ಕುಬ್ಜಪಾಂಡ್ಯಜ್ವರಶಮನ
(62) ಶೂಲಗಳಿಂದ ಅರ್ಹತರಂ ಸಂಹರಿಸಿದುದು
(63) ಶಂಖುಕೂಪಕವಿವಾವೃಕ್ಷಾಪನಯನ
(64) ವಸಿಷ್ಠಾದಿ ಮುನಿಗಳಿಗೆ ಕದಂಬವನಪ್ರವೇಶ

ಮೆಲಿಸಿ ಪೋಷಿಸಿದ ಹರದನಹಳ್ಳಿ ಒಕ್ಕಲಿಗರ ಇಮ್ಮಡಿಗಳನ್ನು ಸ್ತುತಿಸಿದ್ದಾನೆ. ಬಳಿಕ ತನ್ನ ವಂಶಾವಳಿಯನ್ನು ಹೇಳಿ "ವ್ಯಾಸಕೃತಪುರಾಣಸೂಕ್ತಿಗ । ಳಾಶಯವನಳಿದಚ್ಚಗನ್ನಡ । ಭಾಷೆಯಿಂದುಸಿರುವೆನು ಹಾಲಾಸ್ಯೇಶಲೀಲೆಗಳ" ಎಂದು ಟೀಕೆಯನ್ನು ಆರಂಭಿಸಿದ್ದಾನೆ.

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಚಂದ್ರವಂಶೋದ್ಭವರಾದ ಭಾರದ್ವಾಜಸಗೋತ್ರದ ಆಶ್ವಲಾಯನಸೂತ್ರದ ಋಗ್ವೇದಿಗಳಾದ ಮಹಿಸೂರ ದಳವಾಯಿ ದೊಡ್ಡಯ್ಯನವರ ಪೌತ್ರರಾದ ಕಳಲೆ ವೀರರಾಜಯ್ಯನವರ ಪುತ್ರರಾದ ನಂಜರಾಜಯ್ಯನವರು ಸ್ಕಾಂದಪುರಾಣದೊಳ್ ಪೇಳಿದ ಹಾಲಾಸ್ಯಪತಿಯಾದ ಸೌಂದರೇಶನ ಅಖಿಲವತ್ತು ನಾಲ್ಕು ಲೀಲೆಗಳಂ ಕರ್ಣಾಟಕೋಕ್ತಿಯಿಂದವಿಳರಱಿವಂತೆ ಪೇಳಿರಿದ ನಂಜರಾಜವಾಣೀವಿಲಾಸವೆಂಬೀಟೀಕೆಯಲ್ಲಿ

ಈ ಗ್ರಂಥದಿಂದ ಪಾರ್ವತೀಸ್ತುತಿರೂಪವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಬೆಟ್ಟದರಸಿನ ಕುವರಿ ಗಿರಿಶನ । ಪಟ್ಟದರಸಿ ಜರಾಜರಂಗಳ ।
ಸೃಷ್ಟಿಯಂ ನಿಜದೃಷ್ಟಿಲೀಲಾಮಾತ್ರದಿಂದೆಸಗಿ ॥
ಕಷ್ಟಮುಂ ಪರಿಹರಿಸಿ ಬೇಡಿದ । ಭೀಷ್ಟವರಗಳನೀವ ನಿಪುಣೆ ಮ ।
ದಿಷ್ಟಸಿದ್ಧಿಯನಿತ್ತು ಸಲಹು ಗಣೇಶಗುಹಜನನಿ ॥

2 ಭದ್ರಗಿರಿಮಾಹಾತ್ಮ್ಯ

ಇದು ಸ್ಕಾಂದಪುರಾಣೋಕ್ತವಾದ ಭದ್ರಗಿರಿಮಾಹಾತ್ಮ್ಯದ ಟೀಕೆ. ಈ ಭದ್ರಗಿರಿಯೊಳ್ಪಡುದು ಪಿನಾಕಿನೀ ವಹ್ನಿನದಿಗಳ ಸಂಗಮದ ನೈರುತ್ಯದಲ್ಲಿರುವಂತೆ ತಿಳಿಯುತ್ತದೆ. ಗ್ರಂಥಾರಂಭದಲ್ಲಿ ಕವಿ ಶಿವವಿಶಿಷ್ಟಾದ್ವೈತಸ್ಥಾಪಕನಾದ "ಶ್ರೀಕಂಠದೇಶಿಕರಡಿಗೆ ಪೊಡಮಡುವೆನು" ಎನ್ನುತ್ತಾನೆ ಬಳಿಕ ತನ್ನ ಗುರುಪರಂಪರೆಯನ್ನು ಹೇಳಿ

ಪಾಶುಪತಶಾಸ್ತ್ರಾರ್ಥತತ್ವನ । ದೇಶಿಕೋತ್ತಮರಂಘ್ರಿಸೇವೆಯ ।
ಲೇಸಿನಿಂದಲಿ ತಿಳಿದು ನಂಜನರೇಂದ್ರ ನಾನೀಗ ॥
ವ್ಯಾಸರಚಿತಪುರಾಣಸೂಕ್ತಿಗ । ಳಾಶಯವ ತಿಳಿದಚ್ಚಗನ್ನಡ ।
ಭಾಷೆಯಿಂದುಸಿರುವೆನು ಭದ್ರಗಿರೀಶಮಹಿಮೆಯನು ॥

ಎಂದು ಟೀಕೆಯನ್ನು ಆರಂಭಿಸಿದ್ದಾನೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 14 ಅಧ್ಯಾಯಗಳಿವೆ.

3 ಹರದತ್ತಾಚಾರ್ಯಮಾಹಾತ್ಮ್ಯ

ಇದು ಭವಿಷ್ಯೋತ್ತರಪುರಾಣೋಕ್ತವಾದ ಹರದತ್ತಾಚಾರ್ಯಚರಿತ್ರದ ಭಾಷಾಂತರವು; ಅಧ್ಯಾಯ 10. ಕಥಾಸಾರವನ್ನು ಕವಿ ಸಂಗ್ರಹವಾಗಿ ಈ ಪದ್ಯದಲ್ಲಿ ಸೂಚಿಸಿದ್ದಾನೆ--

ವಿಮತಸಭೆಯೊಳು ಶಿವನೆ ಕಮಲಾ | ರಮಣಮೊದಲಾದಮರವಂದ್ಯನು |
ಸಮರಧಿಕರವರಿಲ್ಲ ಸತ್ಯಮಿದೆಂದು ತಿಳಿಪಂತೆ ॥
ಕುಮತಿಕೋಲಾಹಲವ ಖಂಡಿಸಿ | ಗಮಕದಿಂ ಪಾಷಾಣವೃಷಭಗೆ |
ಸುಮತಿ ತೃಣವನು ಮೆಲಿಸಿದಾಹರದತ್ತ ಸಲಹೆಮ್ಮ ॥

4 ಕಕುದ್ಗಿರಿಮಾಹಾತ್ಮ್ಯ

ಇದು ಶಿವಗಂಗೆಯ ಮಹಿಮೆಯನ್ನು ನಿರೂಪಿಸುತ್ತದೆ; ಅಧ್ಯಾಯ 20.

5 ಭಕ್ತವಿಲಾಸದಪರ್ಣ

ಇದು ಸ್ಕಾಂದಪುರಾಣದಲ್ಲಿಯ ಶಿವಭಕ್ತಮಾಹಾತ್ಮ್ಯದಲ್ಲಿ 90ನೆಯ ಅಧ್ಯಾಯದ ಭಾಷಾಂತರವು.

6. ಸೇತುಮಹಿಮಾದರ್ಶ

ಇದು ಸ್ಕಾಂದಪುರಾಣಾಂತರ್ಗತವಾದ ಸೇತುಮಾಹಾತ್ಮ್ಯದ ಟೀಕೆ; ಅಧ್ಯಾಯ 52.

7. ಗರಳಪುರೀಮಹಿಮಾದರ್ಶ

ಇದು ನಂಜನಗೂಡಿನ ಮಹಿಮೆಯನ್ನು ನಿರೂಪಿಸುತ್ತದೆ; ಅಧ್ಯಾಯ 12.

8 ಶಿವಗೀತೆ

ಇದು ಪದ್ಮಪುರಾಣಾಂತರ್ಗತವಾದ ಶಿವಗೀತೆಯ ಭಾಷಾಂತರವು; ಅಧ್ಯಾಯ 18

9 ಶಿವಧರ್ಮೋತ್ತರ

ಇದು ಸ್ಕಾಂದಪುರಾಣೋಕ್ತವಾದ ಶಿವಧರ್ಮೋತ್ತರದ ಟೀಕೆ; ಅಧ್ಯಾಯ 50.

10 ವಿಘ್ನೇಶ್ವರವ್ರತಕಲ್ಪ

ಇದು ಸ್ಕಾಂದಪುರಾಣೋಕ್ತವಾದ ವಿಘ್ನೇಶ್ವರವ್ರತಕಲ್ಪದ ಟೀಕೆ; ಅಧ್ಯಾಯ 3. ಇದಕ್ಕೆ ಸಂಕಟಹರಚತುರ್ಥೀವ್ರತಮಹಿಮೆ ಎಂಬ ಹೆಸರೂ ಇರುವಂತೆ ತಿಳಿಯುತ್ತದೆ.

ಉಳಿದ ಗ್ರಂಥಗಳು ಪ್ರಾಯಿಕವಾಗಿ ಆಯಾನಾಮಗಳುಳ್ಳ ಸಂಸ್ಕೃತ ಗ್ರಂಥಗಳ ಭಾಷಾಂತರಗಳಾಗಿವೆ.

ನೂರೊಂದ ಸು. 1740

ಈತನು ಸೌಂದರಕಾವ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಆದರೂ ಅಲ್ಲಲ್ಲಿ ವಿಷ್ಣುಸ್ತುತಿಯನ್ನು ಮಾಡಿದ್ದಾನೆ. ಶ್ರೀರಂಗಪಟ್ಟಣದಲ್ಲಿ ಕೃಷ್ಣರಾಜನು ಆಳುತ್ತಿರುವನೆಂದೂ ಆತನ ಸೇನಾಪತಿಯಾದ ಕಳಲೆ ನಂಜರಾಜನು (ಸು. 1740) ತುರುಕರನ್ನು ಜಯಿಸಿದನೆಂದೂ ಹೇಳಿ ಈ ನಂಜರಾಜನನ್ನು ವಿಶೇಷವಾಗಿ ಸ್ತುತಿಸುವುದರಿಂದ ಕವಿ ಇವನ ಆಶ್ರಿತನಾಗಿದ್ದಂತೆ ತೋರುತ್ತದೆ. ಈ ಕೃಷ್ಣರಾಜನು ಮೈಸೂರು ದೊರೆಯಾದ ಇಮ್ಮಡಿ ಕೃಷ್ಣರಾಜ (1734-1766) ನಾಗಿರಬೇಕು. ಆದುದರಿಂದ ಕವಿಯ ಕಾಲವು ಸುಮಾರು 1740 ಆಗಬಹುದು. ಈ ಗ್ರಂಥವನ್ನು ಕಾರ್ತಿಕ ಶುದ್ಧ ದಶಮೀ ಶನಿವಾರ ಆರಂಭಿಸಿ ಆಶ್ವಯುಜ ಶುದ್ಧ ದಶಮಿಗೆ ಮುಗಿಸಿದಂತೆ ಹೇಳುತ್ತಾನೆ. ವರ್ಷದ ಹೆಸರನ್ನು ಹೇಳಿದ್ದರೆ ಕವಿಯ ಕಾಲವನ್ನು ನಿಸ್ಸಂದೇಹವಾಗಿ ನಿಶ್ಚಯಿಸಬಹುದಾಗಿದ್ದಿತು.

ಇವನ ಗ್ರಂಥ

ಸೌಂದರಕಾವ್ಯ

ಇದು ಸಾರಿಗತ್ಯದಲ್ಲಿ ಬರೆದಿದೆ; ಸಂಧಿ 13, ಪದ್ಯ 1395. ಈ ಗ್ರಂಥದಲ್ಲಿ ಪುರಾತನಕಥೆ ಯಾವುದೂ ಹೇಳಿಲ್ಲ[1]. ತನ್ನ ಸಮಕಾಲದವರಾದ ಕೃಷ್ಣ

---

1. ಒಂದು ಪ್ರತಿಯು ಕೊನೆಯಲ್ಲಿ 'ಹರಿಹರನೊರೆದ ಶ್ರೀಕರವೀರ ಸೌಂದರನ| ವರಚಾರುಕೀರ್ತಿಪೇಳಿದೆನು' ಎಂದಿದೆ. ಆದರೆ ಮತ್ತೊಂದು ಪ್ರತಿಯಲ್ಲಿ ಸೌಂದರನ ಮಾತೇ ಇಲ್ಲ.

ರಾಜ, ಅವನ ದಳಪತಿಗಳಾದ ಕಳಲೆ ದೇವರಾಜ ನಂಜರಾಜರು ಇವರುಗಳ ಮೈಭವ ಪರಾಕ್ರಮಾದಿಗಳನ್ನು ಕವಿ ವಿಶೇಷವಾಗಿ ವರ್ಣಿಸಿದ್ದಾನೆ.

ಮೊದಲು ಮೂರು ಸಂಧಿಗಳಲ್ಲಿ ಕೃಷ್ಣರಾಜನ ಆಸ್ಥಾನವರ್ಣನೆ ಇದೆ. ಆ ಆಸ್ಥಾನಕ್ಕೆ ಹಲವು ಪ್ರಭುಗಳು[1] ಬಂದಿದ್ದಂತೆ ಹೇಳಿದೆ

ಬಳಿಕ ಕವಿ ಕಳಲೆದೇವರಾಜನು ಮೂಗಡಿಯನ್ನು ವಶಮಾಡಿಕೊಂಡು ಅಲ್ಲಿಯ ಪ್ರಭುವನ್ನು ಸೆರೆಹಿಡಿದನೆಂದು ಹೇಳಿ ಕಳಲೆ ನಂಜರಾಜನು ಸೈನ್ಯದೊಡನೆ ತೆರಳಿ ಚನ್ನಪಟ್ಟಣದ ಸಮೀಪದಲ್ಲಿ ತುರುಕರೊಡನೆ ಯುದ್ಧ ಮಾಡಿ ಬಾರಮಲ್ಲ ಮುಂತಾದ ಹಲವರನ್ನು ಕೊಂದು ಜಯಶಾಲಿಯಾದನೆಂದು ಹೇಳುತ್ತಾನೆ. ಈ ಯುದ್ಧದಲ್ಲಿ ಸತ್ತ ತುರುಕಸರದಾರರ ಹೆಸರು ಈ ಪದ್ಯದಲ್ಲಿ ಹೇಳಿದೆ—

ಪಿದ್ದ ಸುಲ್ತಾನಮುರತ್ರಾಣ ರಣದೂಲ | ಬಿದ್ದ ದರಿಯ ಬಲದೊಳಗೆ |
ಬಿದ್ದನು ಹಂಡೊಸಾಹೆಬನು ಕಾಸಿಂಖಾನ | ಪಿದ್ದಸಿಖೇಂದ್ರದಿವಾಸ ||

---

1. ಜಾಂಬಳ್ಳಿ ದೊಡ್ಡಯ್ಯ; ನಗರವನಂತಗಿರಿಯನಾಳ್ವ ಚೆಲುವಯ್ಯ; ನಂಗ್ಲಿಹಳ್ಳಿಯ ದೊರೆ ವೀರರಾಜಯ್ಯ; ಕಡಲೂರ ಚಿಕ್ಕಯ್ಯ; ಶರಪುರದರಸು ವಿಚಾರಕರ್ತ ವೀರ; ಡೆಂಕಣಿಕೋಟೆ ದೊಡ್ಡಯ್ಯನ ಮಗ; ಕಡಬದರಸರಾಜಯ್ಯ; ಹೆಬ್ಬೂರ ಚೆಲುವರಾಜಯ್ಯ; ಮದ್ದೂರ ಕೃಷ್ಣಯ್ಯ; ಮೂಗೆಡಿಯ ಅರಸ ಅಲಂಗೆದ ನರಸಯ್ಯ; ಚಿಕ್ಕನಾಯಕನಹಳ್ಳಿ ಮುದ್ದರಾಜಯ್ಯ; ಸೂಲಗಿರಿಯ ದೇವರಾಜಯ್ಯ; ಬಳ್ಳಪುರದ ಬೈಚಿಗೌಡನ ಮುರಿಯೊತ್ತಿದ ಬೆಳ್ಳೂರಕೆಂಪರಾಜಯ್ಯ; ಹರದನಹಳ್ಳಿ ಕಾಂತಯ್ಯ. ಇನ್ನು ಕೆಲವರು ನಾಮನಿರ್ದೇಶವಿಲ್ಲದೆ ಹೀಗೆ ಸೂಚಿಸಲ್ಪಟ್ಟಿದ್ದಾರೆ:— ಸಿಂಹಾಸನಪುರಪತಿ; ಫಣಿಪುರವನಾಳ್ವ ವಜೀರ; ಬೇಲೂರ ಗುರಿಕಾರ; ನರಸಿಂಹಪುರದರಸು; ಕಿಕ್ಕೇರಿ ಗುರಿಕಾರ; ಹಾರನಹಳ್ಳಿಯ ಗುರಿಕಾರ; ಅರ್ಕಲಗೂಡನಾಳುವ ದೊರೆ; ದೋರಾಂಬುಧಿಯರಸು; ತುರುಕಬಲವ ಮುರಿಯೊತ್ತಿದ ತುರುಗೆರೆಯರಸು; ದೇವರಾಯದುರ್ಗದ ಪತಿ; ತುಮುಕೂರರಸು; ಚನ್ನಪಟ್ಟಣದರಸು; ಕುಣಿಗಿಲ ದೊರೆ; ಮುದ್ದಗಿರಿಯ ದೊರೆ; ಹೊಸವೂರ ಗುರಿಕಾರ; ಅಳಿಯಪಟದ ಯಳಂದೂರ ದೊರೆ; ಹುಲಿಯೂರದುರ್ಗಪತಿ; ವಿಂಡಕಲ್ಲ ಗುರಿಕಾರ; ಖಾನಖಾನರ ಸೋಲಿಸಿದ ಸತ್ಯಮಂಗಲದ ದೊರೆ; ಕಂದಿಕೆರೆಯ ದೊರೆ; ಹೊನ್ನುವಳ್ಳಿಯ ಗುರಿಕಾರ; ಧಾರಾಪುರದ ದೊರೆ; ತಾಳ್ಯದರಸು; ನಾಮಕಲ್ಲುದೊರೆ; ಪಿರಿಯಪಟ್ಟಣದ ದೊರೆ; ಮುತ್ತೂರರಸು.

ಆಮೇಲೆ ಕವಿ ನಂಜರಾಜನನ್ನು ವಿಶೇಷವಾಗಿ ಸ್ತುತಿಸಿ ನವರಾತ್ರಿಯ ಉತ್ಸವವನ್ನು ವರ್ಣಿಸಿ ಗ್ರಂಥವನ್ನು ಮುಗಿಸುತ್ತಾನೆ.

ತನ್ನ ಗ್ರಂಥವನ್ನು ಹೀಗೆ ವರ್ಣಿಸುತ್ತಾನೆ—

ನೋಡಿದಡೆಯು ನವರಸದಲಂಕಾರ ಕೊಂ | ಡಾಡೆ ರಾಗದ ರಂಜನೆಯು |
ಪಾಡಿ ಕೇಳಿದಡೆ ಕರ್ಣಾಮೃತಪ್ರೌಢಿಯು | ರೂಢಿಯೊಳಿದೆ ಪುಣ್ಯಕಥೆಯು ॥

ಗ್ರಂಥಾವತಾರದಲ್ಲಿ ಈಶ್ವರಸ್ತುತಿಯಿದೆ; ಬಳಿಕ ಕವಿ ವಾಗ್ದೇವಿ, ಗಣೇಶ, ಷಣ್ಮುಖ, ಭೈರವ, ಸರಸ್ವತಿ, ಕಾವೇರಿ, ಗಂಗಾಧರಲಿಂಗ, ವೀರಭದ್ರ, ರಂಗನಾಥ ಇವರುಗಳನ್ನು ಹೊಗಳಿದ್ದಾನೆ. ಗ್ರಂಥಾಂತ್ಯದಲ್ಲಿ ಎಡೆಯೂರ ತೋಂಟದ ಸಿದ್ಧೇಶ್ವರನ ಸ್ತುತಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಆಗೆದು ಬರೆಯುತ್ತೇವೆ—

ನರ್ತನ

ಕಂಗಳೊ ಕಾಮರಂಗಳೊ ನೀಲಾಳ | ಕಂಗಳೊ ಅಳಿಯ ಒಳಗವೋ |
ಹೆಂಗಳರಸಿ ಹೇಮಾಂಗಪ್ರತಿಮೆಯಂತೆ | ರಂಗದೊಳಾಡಿ ಮೆಚ್ಚಿದಳು ॥

ಜಟ್ಟಿಗಳು

ಮಲ್ಲಗಾಸೆಯದಟ್ಟಿಜಲ್ಲಣಗಳನುಟ್ಟು | ಮಲ್ಲಿಗೆವಾಲೆ ಕಂಠದೊಳು |
ಬಲ್ಲಿದ ಭೀಮುಕರಿ ವಜ್ರಮುಷ್ಟಿಯಿಂ | ದಲ್ಲಿ ಮೆರೆದರು ಜಟ್ಟಿಗಳು ॥
ಕೆಡಹಿದವನನೇಲೆ ಜಡಿವೇಱಿ ತೊಡೆಗಳಿಂ | ಮಡಮುರಿದಿಡಿಕಿಱಿದೊತ್ತಿ |
ಹೊಡೆವುಗ್ಗಲಾಗದಂದದಿನಣೆದಣೆವು ಜೊಂ | ಪಡಿವಿಡಿಗಪ್ಪಳಿಸಿದನು ॥
ಉರತಗ್ಗಿ ಬಗ್ಗಿ ಕುಪ್ಪಳಿಸಿ ಮೈಸಿಡಿಯುಬ್ಬಿ | ಭರತಕೋವಿದರಂತೆ ಹೆಣಗಿ |
ಸರಬವರಿಯೊಳು ಪೈಸರಗೋಲ ತಿರುಗಿ ಶ್ರೀ | ಕರದ ಸಾದಕವ ತೋಱಿದರು ॥

ರಾಜನೀತಿ

ಧರಿಸು ಸುಧರ್ಮದ ವಜ್ರಾಂಗಿಜೋಡ ಸ | ತ್ಕರಿಸು ಸದ್ವಿಜರ ಶಾಸ್ತ್ರಗಳ |
ಪರಮಭಕ್ತರ ನೋಯಿಸದೆ ಸದ್ಧರ್ಮದಿ | ಧರಣಿಯಾಳೆಂದ ಭೂಪಾಲ ॥
ದೇವರು ಗುರುವು ಶಾಸ್ತ್ರವು ಶೀಲವುಸವಾಸ | ಈವ ಗುಣವು ಕಾವ ಗುಣವು |
ಇವ ರಾಯನಿಗುಂಟು ಇವ ಕ್ಷತ್ರಧರ್ಮಜ್ಞ | ದೇವರ ಸಮವೆಂಬ ಮಂತ್ರಿ ॥

ದುರ್ಮಂತ್ರಿ

ಅರಸಟ್ಟಿಕಿಲ್ಲದೆ ಧರಣಿಹೆಪ್ಪೊಡೆಯನೆ | ಹೊರೆವರು ತಮ್ಮ ಬಂಧುಗಳ |
ದೊರೆಚಿತ್ತವಿದ್ದಂತೆ ಮಲಿಮೆಮಾಡಿ ಬಿನ್ನೈಸಿ | ಬರೆವರು ಲೆಕ್ಕಮರ್ಮಗಳ ||
ತಮ್ಮಿಂದ ಸತ್ಯಾತ್ಮರಿನ್ನಿಲ್ಲವೆಂಬರು | ಬ್ರಹ್ಮಾಂಡವೆಲ್ಲ ಬಾಧಿಪರು |
ತಮ್ಮೊಳು ತಾವೆ ಪ್ರಭೇದಬಿರಸುಪರು | ನಮ್ಮಲಾಗದು ಮಂತ್ರಿವಚನ ||

ಗೂಢಾರ್ಥದ ದೇವತಾಸ್ತುತಿ.

ತರುಧರನ ತಂದೆತನುಜೆಮನೆಯ ಸಖ | ತರಳನಮ್ಮನ ವರನಣುಗನ |
ಅರಸಿಯಾತ್ಮಜನ ಮಾವನ ಮಗನರಿಪಿದ | ಗುರುವೆ ತೃಣೇಶ ನಮೋ ನಮೋ[1]||

ವೆಂಕಟೇಶ ಸು. 1740

ಈತನು ಹಾಲಾಸ್ಯಮಾಹಾತ್ಮ್ಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಪೌರುಕುತ್ಸಗೋತ್ರದವನು; ಆಪಸ್ತಂಬಸೂತ್ರದವನು; ಬೃಹಚ್ಚರಣಸಂಪ್ರದಾಯದವನು. ಇವನ ಸ್ಥಳ ಗುಮ್ಮಳಾಪುರ. ಈತನ ಪೂರ್ವಿಕರವಿಷಯವಾಗಿಯೂ ಈತನವಿಷಯವಾಗಿಯೂ ಇವನ ಗ್ರಂಥದಿಂದ ಈಯೆಂಕಗಳು ತಿಳಿಯುತ್ತವೆ—

ಇವನ ಪೂರ್ವಿಕರಾದ ಗಿರೀಶಾದಿ ವಿಪ್ರರು 500 ವರ್ಷಗಳಿಂದ ಗುಮ್ಮಳಾಪುರದಲ್ಲಿ ಗ್ರಾಮಭೂಸ್ವಾಸ್ಥ್ಯಗಳನ್ನು ಅನುಭವಿಸಿಕೊಂಡು ಮರ್ಯಾದೆಯಿಂದ ಇದ್ದರು. ಬಳಿಕ ಬೆಂಗಳೂರಲ್ಲಿರುತ್ತಿದ್ದ ಕೆಂಪಕ್ಷನೃಪಾಧೀಶ್ವರ, ನಾಡಪ, ಗಿಡ್ಡಪ, ಕೆಂಪನಾಣಯನೃಪಾಲಾದಿಗಳು ಗ್ರಾಮಭೂಸ್ವಾಸ್ಥ್ಯಗಳನ್ನು ಕೊಟ್ಟು ಕಾಪಾಡಿದರು. ಮತ್ತು ಏಕರಾಜನು (ಎಕ್ಕೋಜಿ) ಇವನ ಮುತ್ತಾತನಿಗೆ ಆಂದೋಳಿಕಾಶ್ವಾದಿ ಸನ್ಮಾನವನ್ನು ಮಾಡಿದನು. ಆಮೇಲೆ ಮಹಿಸೂರು ಸೇನಾನಿ ದೊಡ್ಡಕೃಷ್ಣಾಧೀಶ್ವರನು ಪ್ರೀತಿಮಾಡಿ

---

1. ತರುಧರ = ಇಂದ್ರ; ತಂದೆ = ಸಮುದ್ರ; ತನುಜೆ = ಲಕ್ಷ್ಮಿ; ಮನೆ = ಕಮಲ; ಸಖ = ಸೂರ್ಯ; ತರಳ = ಕರ್ಣ; ಅಮ್ಮ = ಕುಂತಿ; ವರ = ಪಾಂಡು; ಅಣುಗ = ಅರ್ಜುನ: ಅರಸಿ = ಸುಭದ್ರೆ; ಆತ್ಮಜ = ಅಭಿಮನ್ಯು; ಮಾವ = ಸೋದರದಮಾವಕೃಷ್ಣ; ಮಗ = ಕಾಮ. ಅವನನ್ನು ದಹಿಸಿದವನು ಈಶ್ವರ.

ದನು. ಅನಂತರ ವೀರರಾಜೇಂದ್ರನು ಇಷ್ಟಾರ್ಥವನ್ನು ಕೊಟ್ಟನು. (ಮುಂದಕ್ಕೆ ಓಲೆ ಹೋಗಿದೆ). ಕವಿಯ ವಂಶಪರಂಪರೆಯಲ್ಲಿ-ಹಿರಿಯಣಗಿರಿ ದೀಕ್ಷಿತನೆಂಬವನು ಪ್ರಸಿದ್ಧನಾಗಿದ್ದನು. ಇವನ ಮಗ ಗಿರೀಶ; ಇವನ ಮಗ ವೆಂಕಟಸೂರಿ; ಇವನ ಮಗ ಗಿರೀಶ; ಇವನ ಮಗ ತಿಮ್ಮಯಾರ್ಯ; ಇವನ ಮಗ ವೆಂಕಟೇಶ, ಇವನ ಮಗ ತಿಮ್ಮಾರ್ಯ, ಇವನ ಹೆಂಡತಿ ತಿಮ್ಮಾಂಬೆ, ಇವರ ಮಗ ಕವಿವೆಂಕಟೇಶ. ಗುರುಪರಂಪರೆಯಲ್ಲಿ-ದತ್ತಾತ್ರೇಯ ಯೋಗಿಚಂದ್ರ, ಶಿಷ್ಯ ಪರಮಹಂಸ, ಶಿಷ್ಯ ದತ್ತನಿರಂಜನ, ಶಿಷ್ಯ ತಾರಕಯೋಗಿ, ಶಿಷ್ಯ ಸ್ವಾತ್ಮಾಭಿರಾಮ, ಶಿಷ್ಯ ಕವಿಯ ಗುರುವಾದ ಯೋಗಿಚಂದ್ರ. ಈ ಗುರುವಿನ ಅನುಗ್ರಹದಿಂದ ಕವಿ ವೇದಾಗಮಶಾಸ್ತ್ರಕಾವ್ಯಪರಿಶೀಲನವನ್ನು ಮಾಡಿಕೊಂಡು ಪೂರ್ವಾಗತವಾದ ಗುಮ್ಮಳಾಪುರದಲ್ಲಿ ಇದ್ದನು. ಅಮೇಲೆ ಮಹಿಸೂರ ಸೇನಾನಿ ಕಳಲೆ ದೊಡ್ಡರಾಜನ ಪೌತ್ರನೂ ವೀರರಾಜನ ಪುತ್ರನೂ ಆದ ನಂಜರಾಜನ (ಸು. 1740) ಆಶ್ರಿತನಾಗಿ ಅವನ ಆಜ್ಞಾನುಸಾರ ಈ ಗ್ರಂಥವನ್ನು ಬರೆದನು. ಇವನ ಕಾಲವು ಸುಮಾರು 1740 ಆಗಬಹುದು.

ಈ ನಂಜರಾಜನು ಬಹಳ ಪರಾಕ್ರಮಶಾಲಿಯಾಗಿಯೂ ಸ್ವತಃ ಕವಿಯಾಗಿಯೂ ಇದ್ದನೆಂದೂ ಗರಳಪುರದ (ನಂಜನಗೂಡು) ಈಶ್ವರನ ಸೇವಾರ್ಥವಾಗಿ ಗೋಪುರ, ಕೋಟಿ, ಗುಡಿಗಳು ಇವುಗಳನ್ನು ಕಟ್ಟಿಸಿ ಅರುವತ್ತುಮೂವರಾದ ಶಿವಭಕ್ತರ ವಿಗ್ರಹಗಳನ್ನು ಪ್ರತಿಷ್ಠೆಮಾಡಿ ಅವರ ಚರಿತ್ರೆಗಳನ್ನು ಬರೆದನೆಂದೂ ಕವಿ ಹೇಳುತ್ತಾನೆ.

ಇವನ ಗ್ರಂಥ

ಹಾಲಾಸ್ಯಮಾಹಾತ್ಮ್ಯ

ಇದು ಚಂಪೂರೂಪವಾಗಿದೆ. ನಮಗೆ ದೊರೆತ ಪ್ರತಿ ಅಸಮಗ್ರ. ಇದರಲ್ಲಿ ಶಿವನ ಲೀಲೆಗಳು ವರ್ಣಿತವಾಗಿವೆ. ಈ ಕಾವ್ಯದ ಉತ್ಕೃಷ್ಟತೆಯೆನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಸಶಕಾನಂದಿತಸತ್ಕಲೋಕೆ ಸರಸಾಲಂಕಾರೆ ಸಲ್ಲಕ್ಷಣಾ |
ನ್ವಿತೆ ಸಂವಿನ್ಮಹಿತಾಕ್ಷರಾತ್ಮಕಿ ಮಹಾಕಾವ್ಯಜ್ಞವಿದ್ಯಾಧು ॥
ಸ್ತುತೆ ಸದ್ವೃತ್ತಪವಿತ್ರೆ ಚಾರುಚರಣಭ್ರಾಜಿಷ್ಣು ಮತ್ಕಾವ್ಯಭಾ |
ರತಿ ನಿಷ್ಟಂ ಜಕುರಾಸ್ಯವಕ್ತ್ರವನಜಾತಾವಾಸದೊಳ್ ಕ್ರೀಡಿಪಳ್ ॥
ಸ್ಫುರದುಕ್ತಿಪ್ರೌಜ್ವಲಾರ್ಥದ್ಯುತಿಜಿತಕುಜನೋದ್ಯದ್ವಿವಾಂಧಂ ವಿಪಶ್ಚಿ |

ಶ್ರೀವೋಷಾಧ್ಯೋಘಸಂಧಂ ಗತನತಭವಬಂಧಂ ಲಸಚ್ಛಾರದಾಸ್ಯಾಂ ॥
ಬುರುಹಪ್ರಾಜುರ್ಯಗಂಧಂ ಪರಮಶಿವಕಥಾನೇಕಸಂಬಂಧಮುದ್ರೀ ।
ತಿರಸಾಲಂಕಾರಒಂಧಂ ಪ್ರಥಿತಪದನಿಒಂಧಂ ಮದೀಯಪ್ರಬಂಧಂ ॥
ರಸಭಾವಂ ಸೊಗಸಾದುದಚ್ಚರಿ ಜವುತ್ಕಾರಂ ಕಳಾರೀತಿಯೇಂ ।
ಪೊಸತುತ್ಪ್ರೇಕ್ಷೆ ಮನೋಜ್ಞಮುಜ್ವಲಮಲಂಕಾರಂ ನವೀನಾರ್ಥಗ॥
ರ್ಭಸಮಾಸೋಚಿತಕಲ್ಪನಾರಚನೆ ಜೆಲ್ವಾಯ್ತೆಂದತಿಪ್ರೀತಿಯಿಂ ।
ರಸಿಕರ್ ಮೆಚ್ಚಿ ನಿಮಿರ್ಚುವೆಂ ಸುಜನಕರ್ಣಶ್ರಾವ್ಯಮಂ ಕಾವ್ಯಮಂ ॥

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವಿಷ್ಣು, ಬ್ರಹ್ಮ, ಸರಸ್ವತಿ, ಗಣೇಶ, ಶಂಕರಾಚಾರ್ಯ, ಯೋಗಿಚಂದ್ರಗುರು ಇವರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ.

ಇವನು ಆಧುನಿಕಕವಿಯಾಗಿದ್ದರೂ ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಸಮುದ್ರ

ತಿಂಗಳಬಾಲನಂ ಪಡೆದ ತಣ್ಣೊಡಲಿಂದಿರೆಯಿರ್ಪ ತ್ತೆರು ರ ।
ನ್ನಂಗಳನಿಟ್ಟ ಪೆಟ್ಟಿ ಮುಗಿಲ್ಗಳ್ಗಳಿವಟ್ಟಿಗೆ ಕೂರ್ತು ಬಂದ ಬೆ ॥
ಟ್ಟಂಗಳ ಬಿರ್ದಿನಾಗರಮಲವ್ವೊಡೆಯಂ ಮಲಗಿರ್ಪ ಸೆಜ್ಜೆ ಶಂ ।
ಖಂಗಳ ಪೇಟಿ ಪೆರ್ಬಳದಂಗಡಿಯೆಂದೆನಿಸಿರ್ದುದಾಕಡಲ್ ॥

ಸರಸ್ಸು

ಅಂಭೋಜೋತ್ಪಲಸಂಭೃತ । ಬಂಭರಕಳಹಂಸಚಕ್ರಕಾರಂಡರವಾ ।
ರಂಭವಿಜೃಂಭಣಸಂಭ್ರಮ । ಗಂಭೀರಾಸಾರಪೂರಪೂಕಾಸಾಶಂ ॥

ಮೇರು

ಸುಮನೋವಾಹಿನಿಯಿಂ ಪರಿಸ್ಫುರಿಪ ರಂಭಾಮಂಜುಘೋಷಾದಿಸ ।
ತ್ಪ್ರಮದ ಳಿವ್ರಜದಿಂ ಪೊಗಲ್ದಿ ಸುರಸಾಲಶ್ರೇಣಿಯಿಂದಾನಗಂ ॥
ಸುಮನೋವಾಹಿನಿಯಿಂ ಪರಿಸ್ಫುರಿಪ ರಂಭಾಮಂಜುಘೋಷಾದಿಸ ।
ತ್ಪ್ರಮದಾಳಿವ್ರಜದಿಂ ಪೊದಲ್ದಿ ಸುರಸಾಲಶ್ರೇಣಿಯಿಂದೊಪ್ಪುಗುಂ ॥

ಉದ್ಯಾನೆ

ಬಿತ್ತರಂಬಡೆದಿರ್ಪ ಮಾವಿನೊಳೆತ್ತಲುಂ ಮೊಳೆದೋಱಿ ಕೆಂ ।
ಪೊತ್ತಿದಂಕುರಮುಂ ಕದ್ರುಂಕೆ ಸಮತ್ತಕಾಕಲಿಕಾರವಂ ॥
ಬೆತ್ತು ಚಿತ್ತಜಬೀರಮುಂ ಗ್ಪಪುತ್ತುವಿಪುರ್ವಿವೇಬಿನಂ ।
ಮತ್ತಕೋಕಿಲಗಳ್ ವಿರಾಜಿಸಿದತ್ತು ಹಂಜಮರಾವದಿಂ ॥

ನಕ್ಷತ್ರ

ಪ್ರರೂಢಸಂಧ್ಯಾನಟನೋದ್ಭಟಾಂಬಿಕಾ । ವರೋಲ್ಲಸಚ್ಛೀರ್ಷಕಿರದ್ವಿಯಜ್ಞರೀ ।
ಸ್ಫುರತ್ಪೃಷತ್ಸಂತತಿಯೆಂಬಿನಂ ನಭೋಂ । ತರಸ್ಥತಾರಾಗಣವೊಪ್ಪಿತೊಳ್ಪಿನಿಂ ॥

ನಂಜರಾಜನ ವರಾಕ್ಯ

ಧರಣೀಶಾಗ್ರೇಸರಂ ತದ್ವಿಧು ಸುಹೃದಸುಹೃತ್ಸಂಘಮುಂ ಕಾಯೆ ತತ್ತ ।
ತ್ಪುರಿಗಳ್ ಸದ್ವಂತಯುಕ್ತದ್ವಿಜಗಜಮುಖನಾಹೌಘಮುಕ್ತಾತಪತ್ರೋ ॥
ತ್ಕರದಿಂದೀಶಾನಭೂಪಾಂಚಿತಮೆನಿಸಿ ನಿಲಿಂಪೌಘಸಂಸೇವ್ಯಮಾಗು !
ತ್ತುಱು ನಿಚ್ಚಂ ಕೌತಿಕಶ್ರೀಗೆಡೆಯೆನಲಿಹುದಿಂತಿರ್ಪುದಾಶ್ಚರ್ಯಮುಲ್ತೋ ॥

ಗೋಪಾಲರಾಜ ಸು. 1740

ಇವನು ಕಮಲಾಚಲಮಾಹಾತ್ಮ್ಯವನ್ನು ಬರೆದಿದ್ದಾನೆ. ಈತನು ಮೈಸೂರು ಅರಸುಗಳ ಸಮುದಾಯಕ್ಕೆ ಸೇರಿದವನು. ಮೈಸೂರುದೊರೆಯಾದ ಇಮ್ಮಡಿಕೃಷ್ಣರಾಜನ (1734 -- 1766) ಶ್ವಶುರನಾದ ಕತ್ತಿಗೋಪಾಲರಾಜ ಅರಸು ಎಂಬವನೇ ಈತನೆಂದು ತೋರುತ್ತದೆ. ಇವನು ಬೆಟ್ಟದಕೋಟೆಯ ಅರಸುಗಳ ವಂಶಕ್ಕೆ ಸೇರಿದವನು. ಕೆಲವುಕಾಲ ಬೆಂಗಳೂರಲ್ಲಿ ಅಧಿಕಾರಿಯಾಗಿದ್ದನು.

ಇವನ ಗ್ರಂಥ

ಕಮಲಾಚಲಮಾಹಾತ್ಮ್ಯ

ಇದು ಗದ್ಯರೂಪವಾಗಿದೆ; ಅಧ್ಯಾಯ 9; ಇದಕ್ಕೆ 'ಗೋಪಾಲಭೂಪಾಲೋಕ್ತಿವಿಲಾಸ' ಎಂಬ ಹೆಸರೂ ಉಂಟು. ಇದರಲ್ಲಿ ಕಮಲಾಚಲ

ಅಥವಾ ದಕ್ಷಿಣಗೋವರ್ಧನಾಚಲ ಎಂಬ ಹಿಮವಗ್ಗೋವಾಲಸ್ವಾಮಿ ಬೆಟ್ಟದ ಮಾಹಾತ್ಮ್ಯವು ಹೇಳಿದೆ. ಇದು ಭವಿಷ್ಯೋತ್ತರಪುರಾಣೋಕ್ತವಾದುದು ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇಂತು ಶ್ರೀಸಕಲವಿದ್ವಜ್ಜನಮನಃಸಾರಾವಾರ ಪೂರ್ಣಸುಧಾಕರ ಶ್ರೀಗೋವಾಲಭೂಪಾಲೋಕ್ತಿವಿಲಾಸರೂಪಕರ್ನಾಟಭಾಷಾಯಾಂ ಭವಿಷ್ಯೋತ್ತರಪುರಾಣೋಕ್ತ ಕಮಲಾಡಲಮಾಹಾತ್ಮ್ಯಕಥಾಪ್ರಸಂಗೇ.

———

ನಂದಿನಾಥ 1745

ಇವನು ವಲ್ಲೀಕಂಠಾಭರಣವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ—ನಂದಿಯಬೆಟ್ಟಕ್ಕೆ ಕಲಿಕಾಲಚೋಳನು ಬಂದು ದೇವಾಲಯವನ್ನು ಕಟ್ಟಿಸಿದನು; ಅಮೇಲೆ ಬೈಜಭೂಪೇಂದ್ರನ ವಂಶಿಕರು ಪೂಜೆಮಾಡಿ ಆ ಭೋಗನಂದೀಶನಿಂದ ಇಷ್ಟಾರ್ಥವನ್ನು ಪಡೆದರು. ಅಲ್ಲಿ ಪಿನಾಕಿನೀತೀರದಲ್ಲಿ ಪಂಡಿತಾರಾಧ್ಯಚೆತ್ರಾಂಗಕಂಥಾಖ್ಯವರ್ಗವಿರ್ಪುದು. ಆ ಸಿಂಹಾಸನದಲ್ಲಿ ಗುರುಸಿದ್ಧಮಲ್ಲೇಶಕರಜಾತ ಚಿಕ್ಕಣಾಚಾರ್ಯಕರಜಾತ ಬಸವಲಿಂಗಕರಜಾತ ವೀರಭದ್ರೇಶನಿರ್ಪನು. ಅವನ ಹೆಂಡತಿ ಕಾಳಿಕಾಂಬೆ, ಮಗ ಮಲ್ಲಿಕಾರ್ಜುನಕರಜಾತ ನಂದಿನಾಥ. ಇವನೇ ಕವಿ. ಇವನ ವಿದ್ಯಾಗುರು ಪುಟ್ಟವರ್ಯ. ಈ ಗ್ರಂಥವನ್ನು ಕ್ರೋಧನ ಸಂವತ್ಸರದಲ್ಲಿ ಮುಗಿಸಿದಂತೆ ಹೇಳುತ್ತಾನೆ. ಈಕ್ರೋಧನವು 1745 ಆಗಿರಬಹುದೆಂದು ತೋರುತ್ತದೆ.

ಪೂರ್ವಕವಿಗಳಲ್ಲಿ ಸೋಮಾರಾಧ್ಯ, ನಿಜಗುಣೇಂದ್ರ, ಷಡಕ್ಷರದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ವಲ್ಲೀಕಂಠಾಭರಣ

ಇದು ಯಕ್ಷಗಾನದಂತೆ ಕಾಣುತ್ತದೆ; ಸ್ಥಲ 9, ಕಂದವೃತ್ತಪದಗಳ ಗಣನೆ 1610. ಇದರಲ್ಲಿ ಮುಖ್ಯವಾಗಿ ಷಣ್ಮುಖನ ದಿಗ್ವಿಜಯ, ವಲ್ಲೀವರಣಯ ಇವು ವರ್ಣಿತವಾಗಿವೆ. ಈಗ್ರಂಥದ ವಿಷಯವಾಗಿ ಕವಿಹೀಗೆ ಹೇಳುತ್ತಾನೆ—

ಪಶುಪಸೂನು ಪರವಲ್ಲಿಯ ಮು | ನ್ನೊಸಗೆಯಿಂದ ಬೆರೆದಂದವನು |
ರಸೆಯೊಳೆಲ್ಲರಱಿ'ವಂದದೊಳಾಂ | ಕುಶಲನಾಗಿ ಪದಸಾಗಿಸುವೆಂ ||
ಇದು ಗುಹಪದಮಹಿಮಾಮೃತ | ಮಿದು ಸದಮಲಭಕ್ತಿಜ್ಞಾನವಿರತಿಯ ಕಂದಂ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಸ್ವಗುರು ಚೆನ್ನಮಲ್ಲೇಶ, ರೇಣಗ ಮರುಳಾರ್ಯ ಏಕೋರಾಮಿ ವಿಶ್ವನಾಥರು, ಸಿದ್ಧೇಶ್ವರ, ಗಣಪತಿ, ವೀರಭದ್ರ, ಷಣ್ಮುಖ, ಭೃಂಗಿ, ಕಾಲಭೈರವ, ಬಸವ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಕಥೆಯನ್ನು ಸೂತನು ಕೌನಕಾದಿಗಳಿಗೆ ಹೇಳಿದಂತೆ ಕವಿ ಹೇಳುತ್ತಾನೆ. ಕೊನೆಯಲ್ಲಿ ಈ ಗದ್ಯವಿದೆ--

ಇತಿ ಶ್ರೀಮದವಿರಳಾನಂದಪದಪ್ರದಾಯಕ ತೋಂಟದ ಸಿದ್ಧಲಿಂಗೇಶ್ವರವರ ಪ್ರಸಾದದಿಂದುಸಿದ ವಲ್ಲೀಕಂಠಾಭರಣದೊಳ್.

ಇದರಿಂದ ಬಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ತಿಳಿಯದೆ ಸರ್ವರ್ ಹುಡುಕುವ | ನೆಲಮಱಿನಿಕ್ಷೇಪದಂತೆಯಿರ್ದೀನುಫಲಂ |
ಫರೆಯೆಲ್ಲರಱಿಯೆ ಹೊನ್ನಿನ | ಒಪ್ಪತೆಯ ಮಱಿತಿಗಱಿವವೞವೂಲ್ಕೆ ಪ್ರಾಕೃತಮಿದೊಳ್ ||

—ಂ—

ಪಾಯಣ್ಣ 1748

ಈತನು ಅಹಿಂಸಾಚರಿತೆಯೆನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ತಂದೆ ಗುಮ್ಮಟನೆಟ್ಟ, ಗುರು ನಯಸೇನ, ಸ್ಥಳ ಸಂಗೀತಪುರದ ರಸ ಸಂಗಮರಾಯಪುತ್ರ....ದ್ರಭೂಪನ ರಾಜ್ಯದಲ್ಲಿ ಒಪ್ಪುವ ಭಾರಂಗಿ. ಗ್ರಂಥರಚನಾಕಾಲವನ್ನು ತಿಳಿಸುವ ಮುಂದು ಅಸಮಗ್ರವಾದ ಪದ್ಯದಲ್ಲಿ ಪ್ರಭವಸಂವತ್ಸರವು ಉಕ್ತವಾಗಿದೆ. ಈ ಪ್ರಭವವು ಶಕ 1670(1748) ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಅಹಿಂಸಾಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಗ್ರಂಥಸಂಖ್ಯೆ 634. ಇದಕ್ಕೆ ಪಂಚಾಣುವ್ರತಚರಿತೆ ಎಂಬ ಹೆಸರೂ ಉಂಟು. "ಮುಕುರದಂತೆ ಬೆಳಗಲಿ ಎನ್ನಕುಲ" ಎಂದು ಕವಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ.

ನಾರಾಯಣ್ಣ ಎಂಬ ಕವಿಯಿಂದ ರಚಿತವಾದ ಭೀಕನಥಾಖ್ಯಾನ ಎಂಬ 16 ಸಂಧಿಗಳುಳ್ಳ ಒಂದು ಸಾಂಗತ್ಯಗ್ರಂಥವಿದೆ. ಇದೂ ವಿತತ್ಯವಿ ಕೃತವಾಗಿರಬಹುದೋ ವಿನೋ ತಿಳಿಯದು.

—o—

ಬೊಮ್ಮಣ್ಣ 1749

ಈತನು ನಯಸೇನನ ಧರ್ಮಾಮೃತವನ್ನು ಶಕ 1671 ಕುಕ್ಲವರ್ಷ ದಲ್ಲಿ (1749) ಪ್ರತಿಮಾಡಿಸಿದ್ದಾನೆ. ಕೆಳಗಣ ಪದ್ಯದಲ್ಲಿ ತಾನು ಕವಿಯೆಂದೂ ನಾಗೇಂದ್ರನ ಮಗನೆಂದೂ ಹೇಳಿಕೊಂಡಿದ್ದಾನೆ—

ಇಂದ್ರಾನ್ವಯೋದ್ಭವಂ ನಾ | ಗೇಂದ್ರನ ತನುಜಾತನಾದ ಬೊಮ್ಮಣಕವಿ ದೇ |
ವೇಂದ್ರಸುಬ್ಬಿಂದಾರ್ಚಿತಜಿನ | ಚಂದ್ರನ ಜೈತ್ರಾಲಯದೊಳೆ ಬರೆದಂ ಮುದದಿಂ||

—o—

ಪದ್ಮನಾಭ 1750

ಈತನು ರಾಮಚಂದ್ರಚರಿತ್ರದ ಉತ್ತರಭಾಗವನ್ನು, ಎಂದರೆ 17ನೆಯ ಸಂಧಿಯಿಂದ ಮುಂದಕ್ಕೆ, ಬರೆದು ಗ್ರಂಥವನ್ನು ಪೂರ್ತಿಮಾಡಿ ದ್ದಾನೆ. ಇವನು ಜೈನಕವಿ. ಗ್ರಂಥಾಂತ್ಯದಿಂದ ಈಯಂಶಗಳು ತಿಳಿ ಯುತ್ತವೆ—

ಈಗ್ರಂಥದಲ್ಲಿ ಸ್ವಲ್ಪಭಾಗವನ್ನು ಚಂದ್ರಶೇಖರ ಅಥವಾ ಶಂಕರ ಎಂಬ ಕವಿ ಬರೆ ದು ಕಾಲವಾದನು[1]. ಕೆಲವುಕಾಲದನಮೇಲೆ ತೌಳವದೇಶದೊಳಗಣ ಮೂಲಿಕೆಯರಾಜನಾ ದ ಚೆನ್ನರಾಯಸಾವಂತನ ಮತ್ತು ಆತನ ಸೋದರದಮಾವನಾದ ಕುಂದೈಯರಸನ ಇ ಷ್ಟಾನುಸಾರವಾಗಿ ? ಪಾಗ್ವೇಣಿಪುರದ ಪದ್ಮಸೆಟ್ಟಿ ಪದ್ಮಾವತಿ ಇವರ ಮಗನಾದ ಪದ್ಮ ನಾಭನು[2] ಈಗ್ರಂಥವನ್ನು ಪೂರ್ತಿಮಾಡಿದನು. ಮೂಲಿಕೆಗೆ ಒಳಲಂಕೆ, ನೂತನಪುರ,

1. Vol. II, 516. 2, ಪದ್ಮಾವತೀಚರಿತೆಯನ್ನು ಬರೆದ ಪದ್ಮನಾಭನು ಮೂಲಿ ಕೆಯನ್ನೂ ಅದರ ನಾಮಾಂತರಗಳನ್ನೂ ಹೇಳುತ್ತಾನೆ; ಆದರೆ ಬೇರೆ ದೊರೆಯನ್ನು ಹೇಳುವುದರಿಂದ ಏತದ್ಭಿನ್ನನೆಂದು ತೋರುತ್ತದೆ. ಅಲ್ಲದೆ ಅವನು ದೊರೆಯ ಕೋಶಾ ಧ್ಯಕ್ಷನೆಂದು ಹೇಳಿಕೊಳ್ಳುತ್ತಾನೆ.

ಅಯಕಳ ಎಂಬ ಹೆಸರುಗಳೂ ಉಂಟು. ಅಲ್ಲಿಯ ಅನಂತಜಿನಚೈತ್ಯಾಲಯದಲ್ಲಿ ಪ್ರಭಾ ಚಂದ್ರಮುನಿ ಇರುವನು. ಈಚೈತ್ಯಾಲಯಕ್ಕೆ ಸುತ್ತಲೂ 4 ಬಸ್ತಿಗಳುಂಟು. ಅರಮನೆಯಲ್ಲಿ ಚಂದ್ರಜಿನೇಂದ್ರನ ಬಸ್ತಿ ಇರುವುದು; ಅದರಲ್ಲಿ ಪದ್ಮಾವತೀದೇವಿಯ ವಿಗ್ರಹವೂ ಉಂಟು. ಜೆನ್ನರಾಯಸಾವಂತನು ಸಿದ್ಧವಾಂಬೆಯ ಮಗನು ; ಇವನಿಗೆ ಒಳಲಂಕಾ ಪಾಚಾರ್ಯಾಹ ಎಂಬ ಬಿರುದೂ ಹನುಮಕೇತನವೂ ಉಂಟು. ಕವಿ ಪದ್ಮಾವತೀದೇವಿಯ ಚರ ಣಾಬ್ಜಮಧುಪನು; ಅವಳ ಕರುಣದಿಂದ ಗ್ರಂಥವನ್ನು ರಚಿಸಿದನು. ಇವನ ಗುರು ಪಂಡಿತಾರ್ಯ, ಶಿಕ್ಷಕಗುರು ಪ್ರಭಾಚಂದ್ರ, ರಕ್ಷಕ ಜೆನ್ನರಾಜೇಂದ್ರ, ಪ್ರೇಕ್ಷಕ ಕುಂದ್ಮೆ ಯರಸ. ಈಗ್ರಂಥವನ್ನು ಶಕ 1674 ಪ್ರಮೋದವರ್ಷದಲ್ಲಿ – ಎಂದರೆ 1750 ರಲ್ಲಿ – ನೂತ್ನಪುರದ ಅನಂತಜಿನರ ಸನ್ನಿಧಿಯೊಳು ಪೂರೈಸಿದನು.

ಇವನ ಗ್ರಂಥ

ರಾಮಚಂದ್ರಚರಿತ್ರ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 37, ಪದ್ಯ 5268. ಈ ಪದ್ಯ ಗಳಲ್ಲಿ ಮೊದಲು 2151 ಚಂದ್ರಶೇಖರಕವಿಕೃತ, ಉಳಿದುವು ಪದ್ಮನಾಭ ಕವಿಕೃತ. ಇದರಲ್ಲಿ ಜೈನಸಂಪ್ರದಾಯಕ್ಕನುಸಾರವಾಗಿ ರಾಮಾಯಣ ಕಥೆ ಹೇಳಿದೆ. ನಮಗೆ ದೊರೆತ ಪ್ರತಿ 29 ನೆಯ ಸಂಧಿಯಿಂದ ಆರಂಭ ವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಜೆನ್ನರಾಜ

ಜಿನಮತಗಗನಮಂಡಲದೊಳು ಸಮ್ಯಕ್ತ್ವ | ವೆನಿಪ ರಥವನೊಲಿದಡರಿ |
ವಿನುತಬೋಧಾಂಶು ಪಜ್ಜಳಿಸಲಾ ನಡೆವನಾ | ಮನುಜೇಂದ್ರ ದಿವಸೇಂದ್ರನೆನಲು||

ಸುವ್ರತಸ್ತುತಿ

ಕೊರ್ವೆ ಪರ್ವಿದ ಸರ್ವಕರ್ಮಭಟರ ಗರ್ವ |ಪರ್ವತಗಳ ನುಗ್ಗುಗುಟ್ಟಿ |
ನಿರ್ವಾಣಸಾಮ್ರಾಜ್ಯಪಟ್ಟವನಾಳಿದ | ಸರ್ವಜ್ಞ ಸುವ್ರತ ಸಲಹು||

ಸೀತೆಯ ಅಗ್ನಿಪ್ರವೇಶ

ಹುತಭುಕ್ಪ್ರಬಳದಾಹಕಶಕ್ತಿಯನು ಮಹಾ| ಸತಿಯ ವಿಶುದ್ಧಚಾರಿತ್ರ |

ಪ್ರತಿಬಂಧಿಸಿದುದಿಳೆಯೊಳು ಪತಿವ್ರತಗುಣ । ದತಿಶಯಮೇನು ಕೇವಳಮೇ ॥

ರಾವಣನ ತಲೆಗಳು

ವರಜಯತ್ರೀಯೆಂಬ ಯೋಗಿನಿ ರಕ್ತಕಾ । ವರೆಗಳಿಂದತಿಭಕ್ತಿಯಿಂದ ।
ಭರದೊಳಾಕಾತಲಿಂಗನನರ್ಚನಂಗೆಯ್ವ ! ಪರಿಯೊಳು·ಭೀತಿದೋಱಿ'ದುವು ॥

ರಾವಣಸತಿಯರ ಪ್ರಲಾಪ

ಧಾರಿಣಿಪತಿ ನಿನ್ನ ಸತಿಯರ ಪಾದಪ್ರ । ಹಾರಂಗಳಿಂದಲಿ ನಿನ್ನ !
ಚಾರುನಂದನದಶೋಕಾನೋಕಹಂಗಳೊ । ಳಾರಿನ್ನು ತಳಿರನಾಗಿಪರು ॥

ವೈರಾಗ್ಯ

ತನುಧನಪುತ್ರಕಲತ್ರಮಿತಾತ್ರಾಯುರ್ಯ । ವ್ವನರೂಪಸೌಭಾಗ್ಯದೊದವು ।
ಘನದೊಗ್ಡು ಸುರಧನು ಮಿಂಜು ಸಂಧ್ಯಾಭ್ರ ಮಂಜಿನ ಪುಂಜವೆಂತಂತಸ್ಥಿರವು ॥
ಗಿರಿದುರ್ಗ ವನದುರ್ಗ ಜಲದುರ್ಗ ಕರಿರಥ । ತುರಗಪದಾತಿಯಿವೆಲ್ಲಾ ।
ದುರುಳನಂತಕನೊಯ್ವ ಪದದೊಳು ಕಾವುವೆ । ಇರದಿವ ನಂಬುವನೆಗ್ಗ ॥

ಫಲಿಸಿದಧರ್ಮನನುಣಲುಡಲು ನಂಟರು ಬಂಧು । ಗಳು ಸ್ತ್ರೀಯರುಟ್ಟುದಱಿಂದ ।
ಫಲಿಸಿದ ಪಾಪದಿಂ ನಿರಯದೊಳ್ ಜಿಟ್ಟಿ ಕೋ । ಟಲೆವಡುವಂದೊರ್ವನಾತ್ಮ ॥

ದಿನಚರಿಯುಡಿಸಿ ತೊಡಿಸಿ ಮಿಸಿಸಿದ ತನ್ನ । ತನುವೊಡವರದೆನಲುಬ್ಬಿ'ದ ।
ವನಿತಾದಿಗಳುವೊಡಹರೆಯಾರ್ಜಿಸಿದ ವೃ । ಜಿನಪುಣ್ಯವೆರಡೊಡಬಹುವು ॥

ಸಪ್ತಧಾತುಗಳ ಸಮುಹದಿಂ ದುರ್ಗಂಧ । ವ್ಯಾಪ್ತವಾದೀತನುವೆತ್ತ ।
ದೀಪ್ತಚಿನ್ಮಯನಾತ್ಮನಿದವೊಕ್ಕ ವಿಷಯತೋ । ಲುಪ್ತನಾಗಿರುವಂದವೆತ್ತ ॥

ಗೋಪಾಲದಾಸ ಸು. 1750

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ವಿಜಯ ದಾಸನ (ಸು. 1725) ಶಿಷ್ಯನು. ಇವನಿಗೆ ಭಾಗಣದಾಸ ಎಂಬ ಹೆಸರೂ

ಉಂಟು. ಗುರುಗೋಪಾಲದಾಸ, ವರದಗೋಪಾಲದಾಸ ಎಂಬ ಇವನ ಇಬ್ಬರುತಮ್ಮಂದಿರೂ ಜಗನ್ನಾಥದಾಸನೂ ಈತನಲ್ಲಿ ಶಿಷ್ಯವೃತ್ತಿಯಲ್ಲಿದ್ದರು. ಇವನ ಸಳ ವೇಣೀಸೋಮಪುರ. ಇವನ ಕೀರ್ತನೆಗಳಲ್ಲಿ ಗೋಪಾಲವಿಠಲ ಎಂಬ ಅಂಕಿತವು ಉಪಯೋಗಿಸಿದೆ. ಒಂದು ಕೀರ್ತನೆಯನ್ನು ಉದಾಹರಿಸುತ್ತೇವೆ-

ರಾಗ ಕಾಂಬೋದಿ--ಝಂಪೆತಾಳ.

ಪಲ್ಲವಿ ॥ ಏನುಬೇಡಲೊ ನಿನ್ನ ಬಳಿಗೆ ಬಂದು ॥

ಅನುಪಲ್ಲವಿ ॥ ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ॥

ಜನನಿಯುಂ ಕೊಡುಎಂದುಜಗದೀತ ಬೇಡುವೆನೊ | ಜನನಿಯೇನಿತ್ತಳಾಧ್ರುವರಾಯಗೆ |
ಜನಕನಂ ಕೊಡು ಎಂದು ಜಯವಂತ ಬೇಡುವೆನೋ| ಜನಕನೇನಿತ್ತನಾಪ್ರಹ್ಲಾದಗೆ॥1॥
ಬಂಧುಗಳ ಕೊಡು ಎಂದು ಚಂದದಲಿ ಬೇಡುವೆನೊ | ಬಂಧುಗಳೇನಿತ್ತರೋ ಗಜರಾಜಗೆ |
ಅಂದಣವನೇಱುವ ಭಾಗ್ಯವನೆ ಬೇಡುವೆನೊ | ಅಂದಣವನೇಱಿ'ದಾನಹುಹನೇನಾದನೋ ॥2॥
ಬೇಡುವೆನೊ ಒಂದು ಬೇಡತಕ್ಕುದೊ ದೇವ | ನೀಡನೆಂಬುದು ನಿನ್ನ ಮನದೊಳಿತ್ತು |
ಮೂಡಲದ್ರೀತ ಗೋಪಾಲವಿಠಲ | ಬೇಡದಂತೆ ಪರರ ಮಾಡಬ್ಯು ದೊರೆಯೇ ॥3॥

—o—

ವೇಣುಗೋಪಾಲದಾಸ ಸು. 1750

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ವಿಜಯದಾಸನ (ಸು. 1725) ಶಿಷ್ಯನು. ಇವನಿಗೆ ಪಂಗನಾಮದತಿಮ್ಮಣ್ಣ ಎಂಬ ಹೆಸರೂ ಉಂಟು. ಈತನು ಪೂರ್ವಜನ್ಮದಲ್ಲಿ ವೈಕುಂಠದಾಸನಾಗಿ ಹುಟ್ಟಿದ್ದನೆಂದು ಪ್ರತೀತಿ ಇದೆ. ಇವನು ಒಬ್ಬ ಸಾವಾಬನಲ್ಲಿ ಅಧಿಕಾರಿಯಾಗಿದ್ದು ಬೊಕ್ಕಸದ ಹಣವನ್ನು ದೇವಬ್ರಾಹ್ಮಣರಿಗೋಸ್ಕರ ಉಪಯೋಗಿಸಿದುದಕ್ಕಾಗಿ ಸೆರೆಯಲ್ಲಿಡಲ್ಪಟ್ಟು ಸಹಿಸಲಾರದ ಕಷ್ಟಕ್ಕೆ ಗುರಿಯಾಗಿದ್ದಾಗ ದೇವರು ಇವನ ಸಾಲವನ್ನು ತೀರಿಸಿ ಬಿಡುಗಡೆಮಾಡಿದಂತೆ ಹೇಳುತ್ತಾರೆ.

ಇವನ ಕೀರ್ತನೆಗಳಲ್ಲಿ ವೇಣುಗೋಪಾಲವಿಠಲ ಎಂಬ ಅಂಕಿತವಿದೆ. ಒಂದು ಕೀರ್ತನೆಯನ್ನು ತೆಗೆದು ಬರೆಯುತ್ತೇವೆ—

ರಾಗ ಭೈರವಿ—ತ್ರಿಪುಟ ತಾಳ

ಪಲ್ಲವಿ॥ ಇಂದು ಎನಗೆ ಗೋವಿಂದ ನಿನ್ನ ಪಾದಾರವಿಂದವ ತೋಱೊ ಮುಕುಂದನೆ ॥

ಅನುಪಲ್ಲವಿ॥ ಸುಂದರವದನನೆ | ನಂದಗೋಪಿಯಕಂದ | ಮಂದರೋದ್ಧಾರ ಅನಂದ ಇಂದಿರಾರಮಣ ॥

ನೊಂದೆನಯ್ಯ ಭವಬಂಧನದೊಳು ಸಿಲುಕಿ । ಮುಂದೆ ದಾರಿಗಾಣದೆ ಕುಂದಿದೆ ಜಗದೊಳು ।
ಕಂದ ನಾನೆಂದೆನ್ನ ಕುಂದುಗಳೆಣಿಸದೆ । ತಂದೆ ಕಾಯೊ ಎನ್ನ ಕಂದರ್ಪಜನಕನೆ॥1॥

ಧಾರಿಣಿಯೊಳು ಭೂಭಾರಜೀವನನಾಗಿ । ಮೇರೆಯಿಲ್ಲದೆ ಪಾಪಮಾಡಿದೆಜಗದೊಳು ।
ಯಾರು ಕಾಯುವರಿಲ್ಲ ಸೇರಿದೆ ನಿನಗೈಯ್ಯ । ಧೀರವೇಣುಗೋಪಾಲವಿಠಲ ಪಾರ ಗಾಣಿಸೊ ಈಗ ॥2॥

ಮೋಹನದಾಸ ಸು. 1750

ಇವನು ಕೀರ್ತನೆಗಳನ್ನು ಬರೆದಿದ್ದಾನೆ. ಈತನು ಮಾಧ್ವಕವಿ; ವಿಜಯದಾಸನ (ಸು. 1725) ಶಿಷ್ಯನು. ಇವನ ಸ್ಥಳ ಚಿಪ್ಪಗಿರಿ. ಇವನ ಕೀರ್ತನೆಗಳಲ್ಲಿ ಮೋಹನವಿಠಲ ಎಂಬ ಅಂಕಿತವು ದೊರೆಯುತ್ತದೆ. ಒಂದು ಕೀರ್ತನೆಯನ್ನು ಉದ್ಧರಿಸಿ ಬರೆಯುತ್ತೇವೆ—

ರಾಗ ಮುಖಾರಿ—ರುಂಪೆ ತಾಳ

ಪಲ್ಲವಿ ॥ ಏನುಮಾಡಿದರೇನು ಜ್ಞಾನವಿಲ್ಲದೆ ॥

ಅನುಪಲ್ಲವಿ ॥ ಅನೆಗೆ ಮಜ್ಜನವ ಮಾಡಿಸಿದಂತೆ ॥

ವೇದವೋದಿದರೇನು ಶಾಸ್ತ್ರವೋದಿದರೇನು । ವಾದಿಸಿದರೇನು ತರ್ಕವನು ಮಾಡಿ ।
ಪಾದದಲಿ ಗಂಗೆಯ ಪಡೆದ ನಾರಾಯಣ|ನಾದಿಯೆಂದು ಪಂಚಭೇದತಿಳಿಯದಲೆ॥1॥

ಹದ್ದಿನಂದದಲಿ ಬಹುಕಾಲ ಬಾಟಿದರೇನು| ಸದ್ಧರ್ಮವೃತ್ತಿಯನು ಜಯಿಸದುನಿತ್ಯ|
ಮಧ್ವವಕ್ಷಭ ನಮ್ಮ ಮೋಹನವಿಠಲನ ! ಸದ್ಭಕ್ತರಾ ಪಾದವೊದ್ದಿಕೊಂಡಿರದೆ ॥2॥

ಹಯವದನದಾಸ ಸು. 1750

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ವಿಜಯದಾಸನ (ಸು. 1725) ಶಿಷ್ಯನು. ಈತನ ಕೀರ್ತನೆಗಳಲ್ಲಿ ಹಯವದನವಿಠಲ ಎಂಬ ಅಂಕಿತವಿದೆ. ಒಂದು ಕೀರ್ತನೆಯನ್ನು ಉದಾಹರಿಸುತ್ತೇವೆ.

ರಾಗ ಮುಖಾರಿ — ಝಂಪೆತಾಳ

ಪಲ್ಲವಿ || ಸಕಲಸಾಧನವೆನಗೆ ಕೈಸೇರಿತು । ಮುಕುತಿಯಾವಾಗಿಗೆ ಬಾರದಾಧನವು ॥

ಸಂಸಾರದಲಿ ಜ್ಞಾನ ಸತಿಸುತರಲಿ ಭಕ್ತಿ । ಕಂಸಾರಿಪೂಜೆಯಲಿ ವೈರಾಗ್ಯವು ।
ಸಂಶಯದ ಜನರಲ್ಲಿ ಸಖತನವ ಮಾಡುವೆನು । ಹಿಂಸೆಪಡಿಸುವೆನು ಜನಸಂಗಹರಿ
ರಂಗ ॥1॥

ಹೆಂಡತಿಯ ಕೊಂಡೆಯದ ಮಾತುಗಳೆ ಉಪದೇಶ । ಚಂಡಕೋಪವು ಎಂಬ ಅಗ್ನಿ
ಹೋತ್ರ ।
ಪಂಡಿತನು ನಾನಾಗಿ ಅವಿಧೇಯರನುಸೇವಿ । ಕಂಡಕಡೆ ವಾದಿಸುವುದತಿತರ್ಕವಯ್ಯ ॥2॥

ಓದಿದೆ ಯೆಲ್ಲಣ್ಣ ಕಲ್ಲಣ್ಣ ಎನ್ನುತಲಿ । ವೇದವೆಂಬುದು ಎನಗೆ ಪಗಡೆಪಂಜಿ ।
ಸಾಧಿಸಿ ಈಪರಿಯ ಧನವನ್ನು ಕೂಡಿಹಾಕಿ । ನೋದಿಹಯವದನವಿಠಲ ನಿಮ್ಮ
ಮರೆತು ॥3॥

ಸಂಗನಬಸವಪ್ಪ ಸು. 1750

ಇವನು ವೀರಶೈವಸುಧಾನಿಧಿಟೀಕೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ; ನಿರ್ವಾಣಾರ್ಯನ ಮಗನು,....ಮಂತ್ರಿವರ್ಯನ ಮಮ್ಮಗನು. ಈತನ ತಂದೆ ನಿರ್ವಾಣಮಂತ್ರಿ (ಸು. 1725) ಯಾಗಿದ್ದ ಪಕ್ಷದಲ್ಲಿ ಇವನ ಕಾಲವು ಸುಮಾರು 1750 ಆಗಬಹುದು. ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀನಿಖಿಲನಿಗಮಾಗಮಸಾರಪಾರಾವಾರಮಂಥನಮಂಥಾಯಮಾನತೇಷ
ಮುನೀಷಿತೋಷ ಕುಮುನೀಷಿದರ್ಪಬಿಂಬಪ್ರತಿಬಿಂಬಿತ ಹೃದ್ಯಾನವದ್ಯಷಟ್ಸ್ಥಲವಿದ್ಯೈಕೈ

ಭಪವಿಖ್ಯಾತಗುರುಬಸವ....ದೇಶಿಕೇಂದ್ರವಿರಚಿತಸ್ಯ ವೀರಶೈವಸುಧಾನಿಧಿನಾಮಧೇಯಸ್ಯ ಪ್ರಬಂಧಸ್ಯ ಶ್ರೀಮದ್ವೀರಶೈವಮಾರ್ಗಪ್ರವರ್ತಕ ಲಿಂಗಾಂಗಸಾಮರಸ್ಯಯೋಗರಹಸ್ಯಾಭಿ....ಮಂತ್ರಿವರ್ಯಗಳಾರ್ಜಿಸಿರ್ದ ಶ್ರೀಮನ್ನಿರ್ವಾಣಾರ್ಯತನೂಭವ ಸಂಗನಬಸವಪ್ಪನಿರ್ಮಿತ ಕರ್ನಾಟಭಾಷಾಟೀಕಾಯಾಂ.

—o—

ಉದ್ದಾವಸಿದ್ದಲಿಂಗದೇವ ಸು. 1750

ಈತನು ವೀರಶೈವಚಿಂತಾಮಣಿಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಮೂಲಗ್ರಂಥವು ನಿಟ್ಟೂರುನಂಜಯ್ಯನಿಂದ (ಸು. 1725) ರಚಿತವಾದುದರಿಂದ ಇವನ ಕಾಲವು ಸುಮಾರು 1750 ಆಗಿರಬಹುದು.

—o—

ಬಬ್ಬೂರು ರಂಗ ಸು. 1750

ಈತನು ಅಂಬಿಕಾವಿಜಯವನ್ನೂ ಪರುಶುರಾಮರಾಮಾಯಣವನ್ನೂ ಬರೆದಿದ್ದಾನೆ. ಇವನು ಸ್ಮಾರ್ತಬ್ರಾಹ್ಮಣನು; ಕೌನಕಗೋತ್ರದವನು. ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ—ಕಮ್ಮೆಯ ತಿಪ್ಪಣ್ಣ; ಮಗ ರಂಗ; ಮಗ ಮಾವಮಗ; ಮಗ ಚಿಕ್ಕಯ್ಯ; ಮಗ ವೇದಾವತೀತೀರದಲ್ಲಿರುವ ಹಿನ್ನ ಪುರಿಯ (ಹಿರಿಯೂರು) ಕರಣಿಕಾಗ್ರಣಿ ರಂಗ; ಇವನ ಹೆಂಡತಿ ರುಕ್ಮಿಣಿ, ಮಗ ಕವಿ ಬಬ್ಬೂರುರಂಗ. ಇವನ ಸ್ಥಳ ಹಿರಿಯೂರಿಗೆ ಸಮೀಪದಲ್ಲಿರುವ ಬಬ್ಬೂರು. ಆ ಬಬ್ಬೂರು ರಂಗನಾಥನೇ ಈತನ ಕುಲದೈವವು. "ಸುಳ ವಿಗಳ ಕರಮುಕುರ, ಕುಕವಿಗಳೆದೆಗಿಚ್ಚು, ಸಜ್ಜನನಿಕರಮನದಾನಂದನಂ ಜನಚಿತ್ರ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದಾನೆ. ಪೂರ್ವಕವಿಗಳಲ್ಲಿ "ಇಳೆಯ ಕರ್ನಾಟಕಮಹಾಕೃತಿಗಳಿಗೆ ಗುರುವೆಂದೆಂಬ ಬಿರುದನು ತಳೆದು ಭಾರತವನು ವಿವರಿಸಿದ" ಕುಮಾರವ್ಯಾಸ, "ಅವನ ಬಟ'ವಿಡಿದು ತ್ರೀರಾಮಚರಿತವ ಬೆಳಗಿದ" ಕುಮಾರವಾಲ್ಮೀಕಿ ಇವರುಗಳನ್ನು ಸ್ಮರಿಸಿದ್ದಾನೆ. ಅಲ್ಲದೆ ಕುಮಾರವ್ಯಾಸ, ಲಕ್ಷ್ಮೀಶ, ಕುಮಾರವಾಲ್ಮೀಕಿ, ತಾನು

ಈ ನಾಲ್ವರೇ ಕನ್ನಡ ಕವಿಗಳಲ್ಲಿ "ಕೃತಿಸೃಜಿಸುವ ಅತಿದಿಗ್ಗಜರು, ತಮಗಿದಿರಾರು ಧರಣಿಯಲಿ" ಎಂದು ಹೇಳುತ್ತಾನೆ. ಪರರ ಮಾರ್ಗವನ್ನು ಅನುಸರಿಸದೆ ನಿರರ್ಗಳವಾಗಿ ಕವಿತೆಯನ್ನು ಮಾಡುವನೆಂಬಬಿರುದು ತನಗುಂಟೆಂದು

ಅಗ್ಗಳಿಕೆ ಪರರನುಸರಿಸದೊಂ |ದಗ್ಗಳಿಕೆ ಭಾಮಿನಿಯಷಟ್ಪದಿ |
ಮುಗ್ಗಿಸದೆ ಕರಹುಸ್ತಕದಿ ಪದಗಳನು ನಿರ್ಮಿಸುವ ॥
ಉಗ್ಗಡಿಸದಗ್ಗಳಿಕೆ ತನ್ನದ | ನಘ್ಯರ್ಘವಾಕ್ಯದೊಳರ್ಥವಿಕಳತೆ |
ನುಗ್ಗಿ ನಿಲಿಸದ ಬಿರುದು ಬಬ್ಬೂರೀಶಸೇವಕಗೆ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಜೈಮಿನಿಭಾರತವನ್ನು ರಚಿಸಿದ ಲಕ್ಷ್ಮೀಶನನ್ನು (ಸು. 1700) ಸ್ತುತಿಸುವುದರಿಂದ ಈತನು ಸುಮಾರು 1750 ರಲ್ಲಿ ಇದ್ದಿರಬಹುದು.

ಇವನ ಗ್ರಂಥಗಳಲ್ಲಿ

1. ಅಂಬಿಕಾವಿಜಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 47, ಪದ್ಯ 3005[1]. ಇದರಲ್ಲಿ ಆದಿಶಕ್ತಿಯಾದ ದೇವಿ ರಕ್ತಬೀಜಾಸುರನನ್ನು ಸಂಹರಿಸಿದ ಕಥೆಯೂ ಮಾರ್ಕಂಡೇಯಚರಿತವೂ ಹೇಳಿವೆ. ಮೊದಲು ಅತ್ರಿಋಷಿ ನಳರಾಜನ ಶನಿಪೀಡಾನಿವಾರಣಾರ್ಥವಾಗಿ ಋತುಪರ್ಣರಾಯನಿಗೂ ಅಮೇಲೆ ಸೂತನು ಶೌನಕಾದಿಗಳಿಗೂ ಈ ದೇವೀಮಾಹಾತ್ಮ್ಯವನ್ನು ವಿವರಿಸಿದಂತೆ ತಿಳಿಯುತ್ತದೆ. ಗ್ರಂಥಾವತಾರದಲ್ಲಿ ಬಬ್ಬೂರುರಘುವರಸ್ತುತಿ ಇದೆ. ಬಳಿಕ ಕವಿ ಶಿವ, ಪಾರ್ವತಿ, ಸರಸ್ವತಿ, ಗಣೇಶ, ಸೂರ್ಯ, ಹನುಮಂತ, ಷಡ್ಡರ್ಶನಕ್ಕೆ ಕರ್ತನಾದ ವಿದ್ಯಾಶಂಕರ್ಯ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ[1] ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಿದ್ಯೆ

ಚೋರರಿಗೆ ವತವಾಗದಾಳ್ದನು | ಮೀಱಿ'ಕಾಮಿಸಿ ತೆಗೆಯಕೂಡದು |
ಬಾರದೊಡಹುಟ್ಟಿದ ವಿಭಾಗಿಗೆ ದೇಹಕದು ತನಗೆ |
ಭಾರ ಮುನ್ನಲ್ಲಮು ವಿದ್ಯೆ | ಚಾತುಧನಕೆಣೆಗಾಣೆನದಱಿಂ |

1, ಅಚ್ಚಾಗಿರುವ ಪ್ರತಿಯಲ್ಲಿ ಸಂಧಿ 48, ಪದ್ಯ 2946 ಎಂದಿದೆ.

ಧಾರಿಣಿಗೆ ವಿದ್ವಾಂಸರಗ್ಗಳರೆಂದನಾಮುನಿಪ ॥

ಗಾಯಕ

ಕೊರಲುಬೆರಲಿನ ತಾಳ ತಪ್ಪದೆ ! ಶಿರವನಲುಗದೆ ಮೈಯೊಳಾಯಸ ।
ಧರಿಸಿಕೊಳ್ಳದೆ ಸೊಗಸಲಿತು ನಯಲಲ್ಲೆ ಭಾವದಲಿ ॥
ಸರಿಗಮಗಳುಚ್ಚರಿಸುತಲುಗಿನೊ । ಳಿರವ ತಪ್ಪದೆ ರಾಗನಿರ್ಣಯ ।
ವಿರವ ಬಲ್ಲವ ಗೀತಗಾಯಕನರಸ ಕೇಳೆಂದ ॥

ನೀತಿ

ಲಿಯುವರ್ಗಕೆ ಸಿಲುಕಿ ನೆಟ್ಟನೆ । ಮೂಱುಗುಣಗಳಿಗೊಡನೆ ಹೊಂದಿ ವಿ।
ಕಾರದಷ್ಟ ಮಹಾಮದಂಗಳಿಗೊಲಿದು ನಲವಿನಲಿ ॥
ಸಾರಿಪಂಚೇಂದ್ರಿಯಗಳಿಚ್ಛೆಗೆ । ತೋಲಿ' ಸಪ್ತವ್ಯಸನಪಂಕ್ತಿಯ ।
ಬೇರುಬೆರಕೊಂಡಿಹ ದುರಾತ್ಮರಿಗುಂಟೆ ಹರಸೌಖ್ಯ ॥
ಗುಣದಿ ಶರನಿಧಿಯೆನಿಸಿ ಶಾಂತದ । ಭಣತೆಯಲಿ ಶತಿಯೆನಿಸಿ ತುಭಕರ ।
ದೆಣಿಕೆಯಲಿ ಶ್ರೀಗೌರಿಗೆಣೆಯೆಂದೆನಿಸಿ ನಿಜಪತಿಯ ॥
ಮನದೊಳಗೆ ಪರದೈವವೆಂದೇ । ಗಣಿಸುತನವರಶಕ್ತಿಮಾವಗೆ ।
ಜನನಿಯಂತಿರುವವಳೆ ಕುಲವಧು ಧರ್ಮರೂಪೆಂದ ॥

ಆದಿಶಕ್ತಿ

ಅಂಬುಜವು ಮಸುಳಿಸಿದುವಾತಶಿ । ಬಿಂಬವದನೆಯ ವದನಕಾಂತಿಗೆ ।
ತುಂಬಿಗಳು ಚೀಲಿ'ದುವು ಭೃಂಗಾಳಿಕದ ಸುಂದರಕೆ ॥
ಕಂಬುಕಂಠಿಯ ರದನಕುಲಿ ದಾ।ಳಿಂಬ ಬಾಯ್ವಿಡುತಿಹುವು ತೊಡೆಗಳ ।
ಸಂಭ್ರಮಕೆ ಶಿರವಾಗಿ ನಿಂದುವು ಬಾಲಿ ಬನದೊಳಗೆ ॥

ವರ್ಷಾಕಾಲ

ಟೆದಲಿ' ಹಾಯ್ದುವು ಹಂಸ ಮಾನಸ । ನಿಧಿಸರೋವರಕೈದೆ ಕೇಕಿಯು ।
ಕೆದಲಿ'ದುರುಗಲಿ'ಗಳಲಿ ಕುಣಿದುವು ಮುಗಿಲನೀಕ್ಷಿಸುತ ॥
ಉದಿರುತಿಹ ಮುಂಬನಿಯ ಗುಟುಕಿಸಿ । ಯೊದಲಿಸುತಿರ್ದುವು ಚಾತಕವ್ರಜ ।
ಪೃದುಗುತಿರ್ದುವು ಖಗಮೃಗಾವಳಿ ಕೋಣೆಕುತ್ತಲಿಲಿ ॥

ಜಲಕ್ರೀಡೆ

ಮುಟ್ಟುಗಿದುವು ಮತ್ಸ್ಯಗಳು ಕಂಗಳ| ಹೊಳಹಕಾಣುತ ಮನದಿ ಲಜ್ಜಿಸಿ |
ಜಲಜ ಕಂಪಿಸುತಿರ್ದುವಾಸ್ಯಕೆ ಸೋಲ್ತು ಭೀತಿಯಲಿ ||
ತೆಳುವಸುಱಿ ತಿವಳಿಯ ನಿರೀಕ್ಷಿಸಿ | ತೊಲಗಿ ಹಿಮ್ಮೆಟ್ಟಿದುವು ಕಿಱುದೆರೆ |
ಕೊಳನೊಳಗೆ ಖಚರಿಯರು ಸಂದಣಿಸಲ್ಕೆ ನಿಮಿಷದಲಿ ||

2. ಪರಶುರಾಮರಾಮಾಯಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ: ಸಂಧಿ 43, ಪದ್ಯ 1543. ಕವಿ "ಅಂಬಿಕಾವಿಜಯಮಂ ಭೂಮಿನಿಯೊಳಱಿಪಿದೆಂ ಮಗುೞ್ದಂ ವಾರ್ಧಕದ ಷಟ್ಪದದೊಳುಸಿರುವೆಂ" ಎನ್ನುತ್ತಾನೆ. ಇದರಲ್ಲಿ ಪರಶುರಾಮನ ಚರಿತವು ಹೇಳಿದೆ. ಗ್ರಂಥಾವತಾರದಲ್ಲಿ ಬಬ್ಬೂರುವಾಸ ವಸಂತವಾಧವನ ಸ್ತುತಿ ಇದೆ. ಒಳಿಕ ಕವಿ ಬ್ರಹ್ಮ, ಶಿವ, ಪಾರ್ವತಿ, ಗಣೇಶ, ಸರಸ್ವತಿ, ಕಾರ್ತವೀರ್ಯ, ಶೃಂಗೇರಿ ಶಂಕರಾಚಾರ್ಯ, ರೇಣುಕೆ, ಸೂರ್ಯ, ವ್ಯಾಸ, ಆಂಜನೇಯ ಇವರುಗಳನ್ನು ಕ್ರಮವಾಗಿ ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕಾರ್ತವೀರ್ಯನ ಬಾಲ್ಯ

ಕಪ್ಪಾದ ನೆಱಿಸುರುಳ್ಗುರುಳಿನಿಂ ಕೆಂಬವಳ |
ಕೊಪ್ಪಾದ ಚೆಂದುಟಿಯ ಜುಟುಕದಿಂ ಕಿಱುಜೊಲ್ಲು |
ಸುವ್ಪಾಣಿಮುತ್ತಿನಂತಿರ್ಪ ಸಂಪತ್ತಿನಿಂ ಡಾಳಿಸುವ ನಿಡುಗಂಗಳ ||
ಹೆಪ್ಪಾದ ಗಂಭೀರನಾಭಿಯಿಂ ನಳನಳಿಸು |
ತಿವಾರ್ಸುಕರಗಳಿಂ ಬಟ್ಟನುಣ್ದೊಡೆಜಂಘೆ |
ತತ್ಪಾದತಳಿರ್ವೆಜ್ಜೆ ಮೃದುವಿನಿಂದೊಪ್ಪಿದಂ ಬಾಲಕಂ ಕೃತವೀರ್ಯನ ||

ಸ್ತ್ರೀವರ್ಣನೆ

ವೆಲ್ಲರಿಗಳೆಲ್ಲದುಱಿ ಮಲ್ಲಿಗೆಗಳರಳಿಸುತೆ |
ಸಲ್ಲಲಿತಚಂದ್ರನಂ ಮುಖದೊಳಂ ಪೊಳಸುತ್ತೆ |
ಬಿಲ್ಲಱಿಯದಂಬುಗಳ ಬೀಱುತ್ತೆ ಚಿಗುರಿಸುತೆ ಸೌಗಂಧವೃಕ್ಷಂಗಳ ||

ನಲ್ಲೆಯರ್ ತಮತಮಗೆ ನಾಗನಂ ನಡೆಜಡೆಗ ।
ಳಲ್ಲಿಯುಂ ತೋಱುತ್ತೆ ಪಲಬಗೆಯ ಚಿತ್ರಂಗ ।
ಳೆಲ್ಲಮಂ ನೊಸಲಿನೊಳ್ ಕಾಣ್ಬಡಿಸುತಿರುತಿರ್ದ ರಂಗಜನ ನುಂಗುಡಿವೋಲು ॥

ಕೃತವೀರ್ಯನ ಕೀರ್ತಿ

ಹರಿ ಪಯೋಸಾಗರವನಱಿಸಿದಂ ಹಂಸೆಯಂ ।
ಸರಸಿಜೋದ್ಭವನಱಿಯದಿರುತಿಹಂ ಸದ್ಯೋಜ್ಯ ।
ಗಿರಿಯನುಂ ಪುರಹರಂ ಬೆದಕಿದಂ ವಜ್ರಮಂ ನಜ್ರಿಯುಂ ಬಱಿಕಱಿಯದೆ ।
ಬೆಱಗಿನಿಂ ನೋಡಿದಂ ತಾರೆಗಳ್ ಚಂದ್ರನಂ ।
ಕುಱುಪಿಡಿಯಲಾಱದುಱಿ ತೊಟಿಲುತಿರ್ದುವು ಮೇಲೆ ।
ಧರೆಯೊಳುಂ ಕೃತವೀರ್ಯನುರುಕೀರ್ತಿಧವಳಿಮಂ ದಿಕ್ತಟವನುಂ ಪಸರಿಸಿದ ॥

ಭದ್ರನ ಕುಮಾರಿ

ಶಿವನಂತೆ ವನದಂತೆ ಸೋಮಕರಯುಕ್ತದಿಂ ।
ಭುವಿಯಂತೆ ಮಱುದಂತೆ ಸದ್ದ್ವಿಜವಿಲಾಸದಿಂ ।
ರವಿಯಂತೆ ತಳೆರಂತೆ ಶೋಭಿಸುವ ಭಾಯಾರುಣಾಂಕಿತಸ್ತ್ರೀಧಿಯಿಂದೆ ॥
ಕವಿಯಂತೆ ನಿಧಿಯಂತೆ ವಾಣಿಪ್ರಕಾಶದಿಂ ।
ಪವನನಂತಳಿಯಂತೆ ಸೌಗಂಧಮಿಳಿತದಿಂ ।
ದವನಿಪನ ನಂದನೆಯ ಮುದ್ದುಸಿರಿ ಬಾಯ್ದುಱಿಯುತಿರ್ದುದಂತೆಸೆದಿರ್ದುದು ॥

ವಸಂತ

ಪರಪುಟ್ಟಗೆಳದಳಿರ ಗುಟುಕಿಕ್ಕುತಳಿಗಳ್ಗೆ ।
ಬಿರಿಮುಗುಳ ಮಲ್ಲಿಗೆಯ ಮಕರಂದಮಂ ಸಲಿಸು ।
ತರಸಂಜೆಗಂಬುಜದ ತಂಡುಲವನುಣಿಸುತ್ತ ವೋಜೆಯಿಂ ವೃಗರಥಿಕನ ॥
ಕರುಣದಿಂದಿದಿರ್ಗೊಳುತ ತುಹಿನಗಜಮಸ್ತಕ ।
ಸ್ಫುರಿತಮುಕ್ತಾಫಲವನೆಬ್ಬಟ್ಟ ತೊಲವಿನಿಂ ।
ದೊರೆ ವಸಂತನುಮೆಂಬ ಭೋಗಿಜನಸಹಕಾರಿ ಲೋಕಮಂ ಮೋಹಿಸಿದನು ॥

ಕೋನಯ್ಯ ಸು. 1750

ಈತನು ಕೃಷ್ಣಾರ್ಜುನರಸಂಗರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಕಾಶ್ಯಪಗೋತ್ರದವನು; ಹೋತೂರ ಬೆಟ್ಟರಸನ ಮಗನು. ಇವನಿಗೆ ಸರಸಭಾರತಿ ಎಂಬ ಬಿರುದಿದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ವ್ಯಾಸವಾಲ್ಮೀಕಿಶುಕರನ್ನು ಸ್ತುತಿಸಿ ಬಳಿಕ ಕಾಳಿದಾಸಾದಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ—

ಕಾಳಿದಾಸ ಮಯೂರ ವರಕವಿ । ಮೌಳಿಮಣಿ|ಬಾಣಾಂಕ ದಂಡಿ ವಿ ।
ಶಾಲಮತಿ ಮಲುಹಣ ಕುಮಾರವ್ಯಾಸ ಶುಕರೂಪ||
ಲೋಲಗುಣಲಕ್ಷ್ಮೀಶಘನಕವಿ ! ಜಾಲವೃದುಪದಪಲ್ಲವಗಳಿಗೆ ।
ಫಾಲಮುಂ ಚಾಚುತ್ತೆ ಪೇಟುವೆನೀಮಹಾಕೃತಿಯ ||

ಜೈಮಿನಿಭಾರತವನ್ನು ಬರೆದ ಲಕ್ಷ್ಮೀಶನನ್ನು(ಸು. 1700) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನೆಂಬುದು ವ್ಯಕ್ತವಾಗಿಯೇ ಇದೆ; ಸುಮಾರು 1750 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಕೃಷ್ಣಾರ್ಜುನರ ಸಂಗರ

ಇದು ಭಾಮಿನೀಷಟ್ಪದಿಯಲ್ಲಿ! ಬರೆದಿದೆ; ಸಂಧಿ 27, ಪದ್ಯ 1721 ಇದಕ್ಕೆ ಗಯಚರಿತ್ರೆ ಎಂಬ ಹೆಸರೂ ಉಂಟು. "ಗಯನೆಂಬ ಗಂಧರ್ವ ಶಿರೋಮಣಿ ಕೃಷ್ಣರಾಯಂಗೆ ದ್ರೋಹವನೆಸಗಿ ಫಲುಗುಣನ ಮಱೆವೊಗಲು ಹರಿ ಕೊಡಹೇಟಿಲವನೆನು ಕೊಡೆನೆನೆ ಕಾದಿದರು ಹರಿನರರು ದ್ವೈತಕಾನನದಿ; ಪರಮೇಶನಿರ್ವರ ತಿಳುಹಿ ಸಾವುದಲೊಂದುವಾಡಿದನು" ಎಂಬುದೇ ಇದರ ಕಥಾಗರ್ಭ. ಈ ಕಥೆ ಮಹಾಭಾರತದ ವನಪರ್ವದಲ್ಲಿದೆ ಎಂದೂ ಕೃತಿನಾಯಕನು ತಿರುಪತಿವೆಂಕಟಗಮಣನೆಂದೂ ಕೃತಿಯನ್ನು ಆತನಿಗೆ ಅರ್ಪಿಸಿದೆನೆಂದೂ ಕವಿ ಹೇಳುತ್ತಾನೆ ಗ್ರಂಥಾವತಾರದಲ್ಲಿ ತಿರುಪತಿವೆಂಕಟರಮಣದೇವರ ಸ್ತುತಿ ಇದೆ. ಬಳಿಕ ಕವಿ ಈಶ್ವರ, ಬ್ರಹ್ಮ, ಗಣೇಶ, ಲಕ್ಷ್ಮೀ, ಸರಸ್ವತಿ, ಗರುಡ, ಹನುಮಂತ, ಸೂರ್ಯ ಇವರುಗಳನ್ನು

ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಚಂದ್ರೋದಯ

ಬಿರಿದುವಾಕ್ಷಣ ಕುಮುದಚಯ ಎಮಗೆ । ಹೊರೆದುವಮಲಚಕೋರ ಚಂದ್ರಿಕೆ ।
ಹರೆದುದಖಿಳದಿಗಂತವನು ಕರಂಗಿದುವು ಶಶಿಕಾಂತ ॥
ಧರೆ ಗಿರಿವ್ರಜ ಗಗನದುರುಗ । ಹ್ವರ ಮಹಾಂಧತೆಯಡಗಿ ಬೆಳಗುದು ।
ವಿರಹಿಗಳ ಹೃಡೂಟ್ಪಲವೆನೆ ವಿಧು ನಭದಿ ರಾಜಿಸಿದ ॥

ಊಟ

ಅಚ್ಚಸಾಸವೆಯುರೆದು ಮಾಡಿದ । ಪಚ್ಚಡಿಯು ಹರಳುಪ್ಪುಗಾಯ್ಗಳ ।
ಜಿಚ್ಚರದೊಳಬಲೆಯರು ನೀಡುವ ಕಲಸಿದೋಗರವ ॥
ಕಚ್ಚಡಿಯು ಸೀಕರಣೆಪಳಿದ್ಯವ । ನಚ್ಚರಿಯುಲಿ ಯಶೋದೆ ಬಡಿಸಿವ ।
ಳಚ್ಯುತಗೆ ಸವಿಗೊಳಿಸುತಖಿಳಮನೋನುರಾಗದಲಿ ॥

ಸುಭದ್ರೆ

ತಳಿರಡಿಯ ಪೊಂಬಾಳೆದೊಡೆಗಳ । ಎಳಲತೆಯ ವಿಗ್ರಹದ ಕಡುಕೋ ।
ಮಳಶಿರೀಷದ ಕರಯುಗದ ಸರಸೀರುಹಾನನದ ॥
ಲಲಿತಜಂಪಕನಾಸಿಕದ ನೈ । ದಿಲ ಸುನಯನದ್ವಯದಲಾಸೆ ।
ಣ್ಗಳ ಶಿರೋಮಣಿ ವನಿತಧುವಿನಾಕೃತಿಯೊಳೈದಿದಳು ॥

ಪಾಂಡವರನ್ನು ಕುರಿತು ಕೃಷ್ಣನ ಉಕ್ತಿ

ಹೋದ ಮಾತಿಯು ಕರೆಯು ಮನೆಯೊಳ । ಗಾದರಿಸಿ ಕೆಡುವಂತೆ ಕಡೆಗುಣ !
ಬೀದಿಕಲಹವ ಕೊಂಡುಕೊನೆಯುವ ಮರುಳರಂದದಲಿ ॥
ಹಾದಿಗೊಂಡೈದುವ ಗುಣಾಖ್ಯನ । ನಾದರಿಸಿಯನಗಾಗಿ ನಿಜಸುತ ।
ಸೋದರಾದಿಗಳ್ಪ್ರಾಪುದುಚಿತವೆ ಎನುತ ಹರಿಯೆಚ್ಚ ॥

ಮನ್ಮಥನನ್ನು ಕುರಿತು ಕೃಷ್ಣನ ಪರಿಹಾಸೋಕ್ತಿ

ಏಕೆ ಮನೆವನೆಯಲ್ಲಿ ಮಕ್ಕಳು । ಮೇಕೆಕೊರಳಿನ ಮೊಲೆಗಳಂದವಿ ।
ಸಾಕಿದರಿಗಪಯಶವ ತಹ ಸುತರಿದ್ದು ಫಲವೇನು ॥

ಲೋಕ ಮೆಚ್ಚಲು ನಿನ್ನನೋಲು । ದ್ರೋಕಶೌರ್ಯದೊಳರಿಬಲವ ಮುನಿ ।
ದೇಕನಿಮಿಷದಿ ಗೆಲುವ ಸಾಹಸನೊರ್ವ ಸಾಕೆಂದ ॥

———

ಹೆಳವನಕಟ್ಟೆಗಿರಿಯಮ್ಮ ಸು. 1750

ಈಕೆ ಚಂದ್ರಹಾಸನ ಕಥೆ, ಸೀತಾಕಲ್ಯಾಣ, ಉದ್ದಾಳಕನ ಕಥೆ, ಹಾಡುಗಳು ಇವುಗಳನ್ನು ಬರೆದಿದ್ದಾಳೆ. ಇವಳು ಬ್ರಾಹ್ಮಣಕವಿ; ಹೆಳವನಕಟ್ಟೆ ರಂಗನಾಥನ ಭಕ್ತಳು. ಚಂದ್ರಹಾಸನ ಕಥೆಯ ಒಂದು ಪ್ರತಿಯ ಅಂತ್ಯ ಗದ್ಯದಲ್ಲಿ ಶ್ರೀಮತ್ಪರಮಹಂಸಾರೂಢೆ, ನಿತ್ಯನಿರ್ಮಲಪರಮಾನಂದಹೃದಯೆ ಎಂಬ ವಿಶೇಷಣಗಳು ಈಕೆಗೆ ಕೊಟ್ಟಿವೆ. ಲಕ್ಷ್ಮೀಶನ (ಸು. 1700) ಜೈಮಿನಿಭಾರತದಲ್ಲಿ ಹೇಳಿರುವ ಚಂದ್ರಹಾಸನ ಕಥೆಯನ್ನು ತಾನು ಸಾಂಗತ್ಯವಾಗಿ ಬರೆದಂತೆ ಹೇಳುವುದರಿಂದ ಅವನ ಕಾಲಕ್ಕಿಂತ ಈಚೆಯವಳು ಎಂಬುದು ವ್ಯಕ್ತವಾಗುತ್ತದೆ. ಇವಳ ಕಾಲವು ಸುಮಾರು 1750 ಆಗಬಹುದು ಇವಳ ಗ್ರಂಥಗಳಲ್ಲೆಲ್ಲಾ ಹೆಳವನಕಟ್ಟೆ ರಂಗನಾಥನ ಅಂಕಿತವಿದೆ. ಹರಿಹರದ ಸಮೀಪದಲ್ಲಿರುವ ಕೊಮಾರನಹಳ್ಳಿಯಲ್ಲಿ ಈಕೆ ಸುಮಾರು 200 ವರ್ಷಗಳಹಿಂದೆ ಇದ್ದಳೆಂದು ಪ್ರತೀತಿಯಿದೆ.

ಇವಳ ಗ್ರಂಥಗಳಲ್ಲಿ

1 ಚಂದ್ರಹಾಸನಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5, ಪದ್ಯ 422[1]. ಗ್ರಂಥಾವತಾರದಲ್ಲಿ ಹೆಳವನಕಟ್ಟೆ ರಂಗನಾಥನ ಸ್ತುತಿ ಇದೆ. ಬಳಿಕ ಕವಿ ಗಣಪತಿ, ಶೃಂಗೇರಿಯ ಶಾರದೆ, ತನ್ನ ತವರುಮನೆಯ ದೇವರಾದ ಮೈಲಾರ ಇವರುಗಳನ್ನು ಸ್ತುತಿಸಿ ಪತಿಚರಣವನ್ನು ನೆನೆದು ಗ್ರಂಥವನ್ನು ಆರಂಭಿಸಿದ್ದಾಳೆ. ಒಂದು ಪ್ರತಿಯು ಕೂನೆಯಲ್ಲಿ— ಇಂತು ಶ್ರೀಮತ್ಪರಮಹಂಸಾರೂಢೆಗಳಾದ ನಿತ್ಯನಿರ್ಮಲಪರಮಾನಂದಹೃದಯೆಯರಾದ ಶ್ರೀ ಹೆಳವನಕಟ್ಟಿ ರಂಗನಾಥಸ್ವಾಮಿಯ ಕರುಣವುಳ್ಳವರಾದ ಹೆಳವನಕಟ್ಟೆ ಗಿರಿಯಮ್ಮನವರು ನಿರೂಪಿಸಿದ ಚಂದ್ರ

---

1. ಮತ್ತೊಂದು ಪ್ರತಿಯಲ್ಲಿ 431 ಎಂದಿದೆ.

ಹಾಸಕಥಾಮೃತಪ್ರಸಂಗಂ ಸಂಪೂರ್ಣಂ—ಎಂಬ ಗದ್ಯವಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಚಂದ್ರಹಾಸ

ತೊಂಗಲು ಕುರುಳು ತೊಙ್ಙಲಿರೆ ಮೊಳಿವಲ್ಲು | ಕಂಗಳ ಕುಡಿನೋಟವೆಸೆಯೆ ।
ಮುಂಗಳಗಾತ್ರದ ಮುದ್ದುಬಾಲಕನೆಲ್ಲ ! ರಂಗಳದೊಳಗಾಡುತಿಹನು ॥

ಪೌರನಾರಿಯರು ಚಂದ್ರಹಾಸನನ್ನು ಪಾಲಿಸಿದುದು

ವೀಣಾಗಾಯಿಮುರವಿಟ್ಟು ಮನ್ನಿಸಿ ಕೆನೆನೊಸ | ರೋಗರವನ್ನುಣಿಸುವರು ।
ತೂಗುವರು ತೊಟ್ಟಿಲೊಳಗಿಟ್ಟು ತರಳನ | ರಾಗಗಾನದಲಿ ಪಾಡುವರು ॥

ಚಂದ್ರಹಾಸನನ್ನು ನೋಡಿ ವಿಷಯಿಯು ಉಕ್ತಿ

ಇಂದ್ರನೆಂಬೆನೆ ಬಿಳಿಯೂನೆ ಕೆಲದಲ್ಲಿಲ್ಲ | ಚಂದ್ರನೆಂಬೆನೆ ಮೃಗವಿಲ್ಲ ।
ಕುಂದದೆ ಲೋಕಲೋಕವ ತಿರುಗಿದ ರವಿ | ಬಂದಿಳಿದನೊ ಭೂತಳಕೆ ॥

ಜೀಟಿ

ಗಬ್ಬಿನಾಯಿಗಳ ಸನ್ನೆಮಾಡಿ ಬಿಟ್ಟರು | ಅಬ್ಬರದಲಿ ಹೋಗಿ ತುಡುಕಿ ।
ತಬ್ಬಿಬ್ಬುಗೊಳಿಸುತ ತನಕದಿ ಪಿಡಿದರು | ಹೆಬ್ಬುಲಿಕರಡಿಹಂದಿಗಳ ॥

ಸೂರ್ಯೋದಯ

ಕತ್ತಲೆ ಹರಿದುವು ಕಮಲ ಬಾಯ್ದೆರೆದುವು | ಮಿತ್ರನ ಬರವ ಹಾರೈಸಿ ।
ಚಿತ್ತೈಸಿದುವು ತಾರೆಗಳು ಭಾಸ್ಕರ ತಲೆ | ಯೆತ್ತಲು ಪ್ರಭೆ ರಂಜಿಸಿತು ॥

2 ಸೀತಾಕಲ್ಯಾಣ

ಇದು ಹಾಡಿನ ಮಟ್ಟನಲ್ಲಿ ಬರೆದಿದೆ; 87 ಪದಗಳಿವೆ. ಪ್ರತಿಪದವೂ ಜಯಜಯಾ ಎಂದು ಮುಗಿಯುತ್ತದೆ. ಇದರಿಂದ ಒಂದೆರಡು ಪದಗಳನ್ನು ತೆಗೆದು ಬರೆಯುತ್ತೇವೆ—

ತಂಡತಂಡದ ರತ್ನವಡಸಿದರ್ | ದುಂಡುಮುತ್ತಿನಮಣಿ ಬಿಗಿದಿದರ್ |
ತೊಂಡಿಲ ಮುತ್ತೈದೆಯರಳವಡಿಸಿದರು ಕೋ | ದಂಡಪಾಣಿಪತಿಜಾನಕಿಗೆ ॥

ಜಯಜಯಾ ।

ಇಳೆಯ ಜಗಂಗಳನುದರದಲಿ | ಅಳವಡಿಸಿದ ಮಹಾತ್ಮಕನು ।

ಇಳೆಯ ಮಗಳನು ಎತ್ತಲಾಪ್ರದೆ ರಾಮ | ಬಲಿದನೆಂದು ನಕ್ಕರು ಜನರು ||
ಜಯಜಯಾ ||

ಕಲ್ಲೊಳು ಕಾಂತೆಯ ಮಾಡಿದ ಪಾದ | ಬಲ್ಲಿದ ಬಲಿಯ ಒತ್ತಿದ ಪಾದ |
ಮಲ್ಲರ ಮರ್ದಿಸಿ ಮದನಾರಿಯ ಬಿಲ್ಲ | ನಲ್ಲಿ ಮುರಿದ ಪಾದ ತಾರೆಂದಳು ||
ಜಯಜಯಾ ||

3 ಉದ್ದಾಳಿಕನ ಕಥೆ

ಇದೂ ಸಾಂಗತ್ಯದಲ್ಲಿ ಬರೆದಿದೆ; ಪದ್ಯ 447. ಇದರಲ್ಲಿ ಋಷಿಕ ಮೂರನಾದ ಉದ್ದಾಳಿಕನ ಕಥೆ ಹೇಳಿದೆ. ಆರಂಭದಲ್ಲಿ ಗಣಪತಿ, ಸರಸ್ವತಿ ನೀಲಾಚಲದ ಲಿಂಗ ಇವರುಗಳ ಸ್ತುತಿಯಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಚಂದ್ರಾವತಿ

ನಡೆಗೆ ನವಿಲು ನಾಚಿ ತಲೆಯ ತಗ್ಗಿಸಿದುವು | ನುಡಿಗರಗಿಣಿಯು ನಾಚಿದುವು |
ಮಡದಿಯ ಕಡೆಗಣ್ಣಿಗೆ ಮಿಂಚು ನಾಚಿಯೆ | ಅಡಗಿದುವಂಬರದಲ್ಲಿ ||

ಊಟ

ಹಪ್ಪಳಸಂಡಿಗೆ ಹಲವುಶಾಕಂಗಳ | ಸೊಪ್ಪುವ ಪರಮಾನ್ನಘೃತವ |
ಒಪ್ಪದಿ ಸತಿಯರು ಹರಿವಾಣದಲಿ ತಂದು | ಚಪ್ಪರದಲಿ ಬಡಿಸಿದರು ||

4 ಹಾಡುಗಳು

ಇವಳ ಹಾಡುಗಳಲ್ಲಿ ಮಿಂದನ್ನು ತೆಗೆದು ಬರೆಯುತ್ತೇವೆ—

ರಾಗ ತೋಡಿ

ಮನವೆನ್ನ ಮಾತ ಕೇಳದು | ಮಂದಜ್ಞಾನದಿ | ತನುವಿನಾಶೆಯ ಬಿಡಲೊಲ್ಲದು |
ವನಜನಾಭನೆ ನಿಮ್ಮ | ನಾಮದ ಸ್ಮರಣೆಯ | ನೆನೆಯದೆ ಕಂಡಕಡೆಗೆ ಎಳೆಯುತಲಿದೆ ||

ಸಾಧುಸಜ್ಜನರ ಸಂಗವ | ಮಾಡಿ ಪರಗತಿ | ಯಾಧಾರವನು ಮಾಡಲೊಲ್ಲದು |
ಕ್ರೋಧಕುಹಕದುಷ್ಟ | ರೊಡನಾಡಿ ಕಾಲನ | ಬಾಧೆಗೆ ಒಳಗಾಗುವಂತೆ ಮಾಡಿದನೆನ್ನ ||

ಮದಗಜ ಮೈಯವುಳಿದು|ಮುಂದುಗಾಣದೆ| ಕುದುವಿನೊಳಗೆ ಬಿದ್ದಂತಾದೆನು |
ಹೃದಯಕಮಲದೊಳು | ನಿಂದು ರಕ್ಷಿಸು ಎನ್ನ | ಪದುಮಾಕ್ಷ ಹೆಳವನಕಟ್ಟೆ
ರಂಗಯ್ಯ ||

ಕೇಶವ ಸು. 1750

ಇವನು ತಿರುವೇಂಗಡಾಚಾರ್ಯಶತಕ ಎಂಬ ಶತಕಪಂಚಕವನ್ನು ಬರೆದಿದ್ದಾನೆ. ಈತನು ವಾಲ್ಮೀಕಿವಂಶೋತ್ಪನ್ನನು; ಇವನ ತಂದೆ ಗುರು, ಇವನ ಗುರು ತಿರುವೇಂಗಡಾಚಾರ್ಯ. "ಆದಿಕೇಶವಪಾದಪದ್ಮಮಧುಕರ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವನ್ನು ನಿರ್ಧರಿಸುವುದಕ್ಕೆ ಆವ ಆಧಾರವೂ ಇಲ್ಲ. ಆದರೆ ಗ್ರಂಥದಲ್ಲಿಯ ಕೆಲವು ಉಕ್ತಿಗಳನ್ನು ನೋಡಿದರೆ ಜೈಮಿನಿಭಾರತವನ್ನು ಬರೆದ ಲಕ್ಷ್ಮೀಶನಿಗಿಂತ ಈಚೆಯವನು ಎಂದು ತೋರುತ್ತದೆ; ಸುಮಾರು 1750 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ತಿರುವೇಂಗಡಾಚಾರ್ಯ ಶತಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಶತಕಗಳು 5; ಪದ್ಯ 597. ಇದರಲ್ಲಿ ಸದಾಚಾರ್ಯಮಹಿಮೆ, ಪೂರ್ವಾಚಾರ್ಯರ ಉದ್ಭವ, ತತ್ವತ್ರಯ, ಪಂಚಸಂಸ್ಕಾರ, ರಹಸ್ಯತ್ರಯ, ಅರ್ಥಪಂಚಕ, ಅರ್ಚಿರಾದಿ ಮಾರ್ಗ— ಇವೇ ಮೊದಲಾದ ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಸಂಬಂಧಿಸಿದ ವಿಷಯಗಳು ನಿರೂಪಿಸಲ್ಪಟ್ಟವೆ. ಪ್ರತಿಪದ್ಯವೂ ತಿರುವೇಂಗಡಾಚಾರ್ಯಮೌನಿವರ್ಯ ಎಂದು ಮುಗಿಯುತ್ತದೆ. ಕವಿಯ ಗುರುವಾದ ತಿರುವೇಂಗಡಾಚಾರ್ಯನು ಮೇಲುಗೋಟೆಯವನೆಂದೂ ವೆಂಕಟಾಚಾರ್ಯ, ಸಿಂಗಮ್ಮ ಇವರುಗಳ ಪುತ್ರನೆಂದೂ ತಿಳಿಯುತ್ತದೆ. ಪ್ರಥಮಶತಕವು ಈತನ ಸ್ತುತಿರೂಪವಾಗಿದೆ. ತನ್ನ ಗ್ರಂಥವು "ದೂಷಕರಿಗೆದೆಕೂಲೆ, ಶ್ರೀವೈಷ್ಣವರಲೀಲೆ, ಪಾಷಂಡರಿಗೆ ಕಿಚ್ಚು, ಸೂರಿಗಳ ಮೆಚ್ಚು, ಸುಜ್ಞಾನಬುಧಚಿಂತಾಮಣಿ" ಎಂದು ಕವಿ ಹೇಳಿದ್ದಾನೆ

ಗ್ರಂಥಾವತಾರದಲ್ಲಿ ಆದಿಕೇಶವನ ಸ್ತುತಿ ಇದೆ. ಬಳಿಕ ಕವಿ ಅನಂತ, ಗರುಡ, ಪೊಯ್‌ಹೈಯಾರ್, ಪೂದತ್ತಾರ್, ಪೇಯಾಳ್ವಾರ್, ಭಕ್ತಿಸಾರ, ಶತಕೋಪ, ಕುಲಶೇಖರ, ಪೆರಿಯಾಳ್ವಾರ್, ಭಕ್ತಾಂಘ್ರಿರೇಣು, ಪಾಣ, ಪರಕಾಲ, ಮಧುರಕವಿ, ಗೋದಾದೇವಿ, ರಾಮಾನುಜ, ನಂಬಿಳ್ಳೆ, ಕೂರೇಶ, ಎಂಬಾರ್, ತಿರುಕ್ಕಚ್ಚಿನಂಬಿ, ಕುರುಕೇಶ, ಅರುಳಾಳಪ್ಪೆರುಮಾಳ್, ವಡುಹನಂಬಿ, ಭಟ್ಟರ್, ನಂಜೀಯರ್, ಪೆರಿಯವಾಚೀಯರ್, ಪಿಳ್ಳೆಲೋಕಾಚಾರ್ಯ, ಅಂಬುಜಾಕ್ಷ, ರಾಮಮಿಶ್ರ, ತಿರುಕ್ಕೋಟ್ಟಿಯೂರ್ ನಂಬಿ, ಯಾಮುನ, ನಾಥಮುನಿ, ಗೆರಿಯನಂಬಿ ಇವರುಗಳನ್ನೂ; ವ್ಯಾಸ, ನಾರದ, ಸನಂದನ, ಸನಕ ಶುಕಮುನಿ, ವಿಭೀಷಣ, ಪ್ರಹ್ಲಾದ, ಮಾರುತಿ, ಕುಜೇಲ, ಅಂಬರೀಷ, ರುಕ್ಮಾಂಗದ, ವಿದುರ, ಪಾರ್ಥ, ಧ್ರುವ, ಬಲಿ, ಪುಂಡರೀಕ, ಉದ್ಧವ, ವಾಲ್ಮೀಕಿ, ಶೌನಕ, ಪರಾಶರ, ಅಕ್ರೂರ, ಭೀಷ್ಮ ಇವರುಗಳನ್ನೂ ಸ್ಮರಿಸಿದ್ದಾನೆ.

ಶತಕಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇತಿ ಸಮಸ್ತಕಮಲಭವಾಂಡಮಂಡಲಪೂರೀಕೃತಗರ್ಭ ಪ್ರತಿರಹಿತಶ್ರಿಯಃಪತಿ ಪರಮಪದವಾಸ ಆದಿಕೇಶವಪಾದಪದ್ಮಮಕರಂದಮತ್ತಮಧುಕರೋಽನುಮಾನಸ ವಾಲ್ಮೀಕಿವಂಶೋದ್ಭವ ಗುರುಸುತ ಕೇಶವವಿರಚಿತತಿರುವೇಂಗಡಾಚಾರ್ಯಶತಕೇ

ಈ ಗ್ರಂಥವು ವಿಶಿಷ್ಟಾದ್ವೈತಮತವನ್ನು ಲಲಿತವಾಗಿ ಬೋಧಿಸುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಪರುಷನೇ ಬಂದು ಮುಟ್ಟಿದಮೇಲೆ ಕೀಲುಮೇ ।
ಲೆರಡುದಿನಿಸಹುದೆ ಲೋಹವು ಕಾಮಧೇನು ತಾಂ ।
ದೊರೆಗಳಿಗೆ ಕ್ಷೀರ ಬಡವರಿಗೆ ಶೋಣಿತವನೇ ಕಱೆವ ಗೌನೇ ದಿನ್ಯಾಮೃತಂ ॥
ಪಿರಿಯರಿಗೆ ರುಚಿಯು ಪಸುಳಿಗೆ ವಿಷಂತೋಱುವುದೆ ।
ಗುರುಮೂರ್ತಿ ನೀನೊಲಿದಬಳಿಕ ಜ್ಞಾನಿಗಳು ಆಧ ।
ಮರು ಎಂಬಿವೆರಡುಭೇದಗಳುಂಟೆ ತಿರುವೇಂಗಡಾಚಾರ್ಯ ಮೌನಿವರ್ಯಾ ॥
ವಶಪಂಚಸಂಸ್ಕಾರಭೂಷಣವ ತೊಡಿಸಿ ತ ।
ತ್ವರಹಸ್ಯದಂಬರವನುಡಿಸಿ ಕರದೊಳಗೆ ಕೈಂ ।
ಕರಿಯಕೆಂಕಣವ ಕಟ್ಟಿಸಿ ಮಂತ್ರವೆಂಬ ಮಂಗಳಸೂತ್ರಮಂ ಕಟ್ಟಿಸಿ ॥
ಚರಮಾರ್ಥಪಸೆಯಮೇಲ್‌ಕುಳ್ಳಿರಿಸಿ ಬಲಿಕಲಾ ।

ಪರನೆಂಬ ಮುದವಳಿಗನಿಗೆಯಾತ್ಮ ಸತಿಯನಾ |
ದರದಿ ಶೇಷತ್ವಧಾರೆಯನೆರೆದ ತಿರುವೇಂಗಡಾರ್ಯಪಿತನಿರಿಭಯಮದೇಂ ||
ಶೃಂಗಾರವೇ ಸರ್ವರಸಕಾದಿ ಸಂಭಾರ|ಸಂಘಕ್ಕೆ ಮುಖ್ಯವೇ ಲವಣ ಬಲ್ಲಿತ್ತಾಂಬ|
ರಂಗಳೊಳ್ ಬೆಳ್ಪು ನೊದಲಪಿಳಪ್ರಸ್ತುತಕೆ ನೋಡಲ್ ಮೂಲವೇ ತಂಡುಲಂ ||
ಕಂಗಳೇ ಸರ್ವತೇಜಕೆ ಗೊತ್ತು ಅನ್ನಪಾ|ನಂಗಳೇ ಶಕ್ತಿಗಾಧಾರವಾತ್ಮಂಗೆ ದಾ |
ಸ್ಯಂಗೈವುಸೇ ಪ್ರಾಪ್ತವಿದು ಸತ್ಯ ತಿರುವೇಂಗಡಾಚಾರ್ಯಮೌನಿವರ್ಯಾ ||

ತಿಮ್ಮಾಮಾತ್ಯ ಸು. 1750

ಈತನು ರಾಮಾಭ್ಯುದಯಕಥಾಕುಸುಮಮಂಜರಿಯನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ; ಹರಿತಸಗೋತ್ರದವನು; ಆಪಸ್ತಂಬ ಸೂತ್ರದವನು. ಇವನ ಪಿತಾಮಹ ಶೇಷಾರ್ಯ, ತಂದೆ ವೆಂಕಟಾಧಿಪ. ಇವನ ಸ್ಥಳ ಬೆಂಗಳೂರು ತಾಲ್ಲೂಕು ಅಗರವೆಂದು ಹೇಳುತ್ತಾರೆ. ತನ್ನ ಇಷ್ಟದೈವವಾದ ಆನೆಕಲ್ಲುತಾಲ್ಲೂಕು ಸಹದೇವಪುರದ (ಸಾದನಹಳ್ಳಿ) ತಿರುಮಲದೇವರ (ತಿಮ್ಮರಾಯಸ್ವಾಮಿ) ಅಂಕಿತದಿಂದ ಈ ಕಾವ್ಯವನ್ನು ಬರೆದಿದ್ದಾನೆ. ಇವನ ವಂಶಸ್ಥರ ಹೇಳಿಕೆಯಮೇರೆಗೆ ಇವನ ಕಾಲವು ಸುಮಾರು 1750 ಆಗಬಹುದು.

ಇವನ ಗ್ರಂಥ

ರಾಮಾಭ್ಯುದಯಕಥಾಕುಸುಮಮಂಜರಿ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಕಾಂಡ 7, ಸಂಧಿ 78, ಪದ್ಯ 3446. ಇದಕ್ಕೆ ಆನಂದರಾಮಾಯಣ ಎಂಬ ನಾಮಾಂತರವೂ ಉಂಟು. "ಇದು ಇತರರಾಮಾಯಣಗಳಕಥಾಸಾರವನ್ನೆಲ್ಲ ಒಳಕೊಂಡಿರುವುದಲ್ಲದೆ ವರಾಹನೃಸಿಂಹಾವತಾರಗಳ ಮತ್ತು ರಾವಣದಿಗ್ವಿಜಯದ ಕಥೆಯನ್ನು ಸಹ ಬಾಲಕಾಂಡದಲ್ಲಿಯೇ ಸೇರಿಸಿ ಉತ್ತರಕಾಂಡದಲ್ಲಿ ಶ್ರೀರಾಮನ ರಾಜ್ಯಭಾರ ದಿಗ್ವಿಜಯ ಅಶ್ವಮೇಧ ಮೊದಲಾದ ಕಥೆಗಳನ್ನು ಸೇರಿಸಿ ರಚಿಸಲ್ಪಟ್ಟಿದೆ." ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ, ಗಣ

ಪತಿ, ಸರಸ್ವತಿ, ವಾಲ್ಮೀಕಿ, ಆಂಜನೇಯ ಇವರುಗಳನ್ನು ಹೊಗಳಿದ್ದಾನೆ. ಕಾಂಡಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಶ್ರೀಪರಮಕಲ್ಯಾಣಗುಣಗಣಾಭರಣ ಸುರಕುಲಧುರೀಣಮಕುಟಸಂಘಟಿತ ಪರಿಸ್ಫುಟಮಣಿಪ್ರಭಾಭಾಸವಮಾನಚರಣಸರಸೀರುಹ ವೆಂಕಟರಮಣವರಪ್ರಸಾದಲಬ್ಧ ಕವಿತಾವಿಜಕ್ಷಣ ತಿಮ್ಮಯನಾಮಧೇಯಕವಿಪ್ರಗುಂಫಿತಮಪ್ಪ ರಾಮಾಭ್ಯುದಯಕಥಾ ಕುಸುಮಮಂಜರಿಯೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ವಸಂತ

ಆಸಮಯಕಂಕುರಿಸಿದುದು ಮಧು । ಮಾಸ ವನದೇವತೆಯ ವದನವಿ ।
ಕಾಸ ಸುಖಿಸುವ ಕಾಂತಕಾಂತಾಜನಮನೋಲ್ಲಾಸ ॥
ಪೂಸರಳನಭ್ಯಾಸ ಶುಕಪಿಕ । ಭಾಸಮಾನಗಾತ್ರಸ ಸುಮನೋ !
ವಾಸನಾಯತವಾಸಗಳು ದೆಸೆದೆಸೆಯೊಳೆಸಗಿದುವು ॥
ತಿಳಿಗೊಳಂಗಳ ಕಲಕಿ ಕಮಲಾ । ವಳಿಯ ನಡುಗಿಸಿ ಭ್ರಮರಿಕಾಸಂ ।
ಕುಳವ ಕೆದಱಿ ಮರಂದದೋಕುಳಿಯಾಡಿ ಸುಮರಜವ ॥
ಲಲಿತಕರದಿಂ ಚೆಲ್ಲಿ ತರುಗಳ । ತಳಿರ ತುಡುಕುತ ತೊಲಿತೊಬ್ಬಿಲಿ ಸುಟಿ ।
ಸುದುಟಿ ಚೈತ್ರನ ಕಲಭನೆನೆ ವಿಹರಿಸಿತು ತಂಬೆಲರು ॥
ಸಿರಿವನಿಗೆ ಮಧುಪಾನಿಗಳ ಸಂ । ಹರಣೆಯಾದುದು ಸತಸಿಗಳನನು ।
ಸರಿಸಿ ಕುಮುಗಗಳೆಸಗಿದುವು ಜಾತಿಗಳು ಮಸುಳಿದುವು ॥
ಹರುಷದೊಡನೆ ನಿಜಾತಿಗಳಿಗ । ಷ್ಟಾಯು ಪೆಚ್ಚಗೆಯಾಯ್ತು ವಾಧವ ।
ನರಸುತನ ಕಡುಚಿತ್ರವಾದುದು ಬನಬನಂಗಳಲಿ ॥

ಚಂದ್ರ

ಹರಿಯವೊಲು ಕಮಲಾಂಕ ಗಂಗಾ । ಧರನವೊಲು ಶುಚಿವರ್ಣ ಭಾಸಾ ।
ವರನವೊಲು ಪ್ರಜ್ವಲಿತಸಕಲಕಳಾಧುರಂಧರನು ॥
ಪರಮಮೂರ್ತ್ರಯನೆನಲು ಹಿಮ । ಕರನು ಸ್ಥಿತಿಲಯಜನ್ಮಗಳ ವಿ ।
ಸ್ತರಿಸುತಿರ್ದ ಚಕೋರಕಮಲವಿಯೋಗಿಮನಗಳಿಗೆ ॥

ರಾಕ್ಷಸಸಂಹಾರ

ಕೊಳುಗುಳದ ಕಳನೊಳಗೆ ರಕುತದ । ಕೊಳನೊಳುದಿಸಿದ ಶೋಣಪಂಕಜ ।
ದಲರುಗಳು ಹರಿಬಾಣಕುಂಜರಪಾಣಿಪಾಟವದಿ ।
ಇಳೆಯುಟಿ'ದು ತನ್ಮಬಲ ನಿಃಶ್ರಗೆ । ತಿಳುಹಲ್ಕೈದಿದುನೆಂದೆನಲು ಬಾಂ ।
ದಳದೊಳಸುರರ ತಲೆಗಳಾಡಿದುವತಿವಿಚಿತ್ರದಲಿ ॥

ಲಂಕಾದಹನ

ಉರಿ ಮಸಗೆ ಕಂಗೆಟ್ಟು ಗೃಹಸಂ । ಭರಿತಸೋಪಸ್ಕರಗಳೆಲ್ಲವ ।
ಸರಕುಮಾಡಲಿ ಬಿಸುಟು ನೆರೆಹೊರೆಯುವರ ಕೂಗಿಡದೆ ॥
ತರುಣಿಯರ ಬಲಿಸೆಳೆದು ಕಂಕುಳ । ಲಿಟ್ಟುಕಿ ಮಕ್ಕಳ ಹೊದೆದಹೊದಿಕೆಯ ।
ಮಟ್ಟಿದು ಗೋಳಿಟ್ಟೊಡಿದುದು ಮೊರೆಯಿಡುತ ಪೌರಜನ ॥

ಚಿದಾನಂದಾವಧೂತ ಸು. 1750

ಈತನು ಜ್ಞಾನಸಿಂಧು, ಕಾಮವಿಡಂಬನ, ದೇವೀಮಾಹಾತ್ಮ್ಯ, ಬಗಳಾಂಬಾಸ್ತೋತ್ರ, ಚಿದಾನಂದರವಚನ, ಪಂಚೀಕರಣ, ತತ್ವಚಿಂತಾಮಣಿ, ನವಚಕ್ರಕುಲರೇಖಾಲಕ್ಷಣ ಈ ಗ್ರಂಥಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ಇವನ ಗುರು "ಸಿದ್ಧಪರ್ವತವಾಸಿಯೆನಿಸುವ ಸಿದ್ಧಬಳ್ಳಾಮುಖಿಯು ತಾನಾಗಿರ್ದು ತುಂಗಾತೀರವಿಲಸದಯೋಧ್ಯೆಮಧ್ಯದಲಿ ಇರ್ದ" ಚಿದಾನಂದ[1]. ಕವಿ ಈ ಗುರುವಿನ ಅಂಕಿತದಲ್ಲಿ ಕೆಲವು ಗ್ರಂಥಗಳನ್ನು ಬರೆದಿದ್ದಾನೆ. ರಂಗನಾಥನ (ಸು. 1675) ಅನುಭವಾಮೃತವನ್ನು ಬಹಳ ನುಟ್ಟಿಗೆ ಅನುಸರಿಸಿ ಜ್ಞಾನಸಿಂಧುವನ್ನು ಬರೆದಿರುವುದರಿಂದ ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

---

1. ಇಲ್ಲಿ ಹೇಳಿರುವ ಅಯೋಧ್ಯೆ ಆವ ಊರಿಗೆ ಅನ್ವಯಿಸುತ್ತದೆಯೋ ತಿಳಿಯಲಿಲ್ಲ. ಶೃಂಗೇರಿ ಎಂದು ಕೆಲವರು ಊಹಿಸುತ್ತಾರೆ; ಆವ ಆಧಾರದಿಂದಲೋ ತಿಳಿಯದು. ಅಲ್ಲಿಯ ಗುರುಗಳಲ್ಲಿ ಕೆಲವರಿಗೆ ಸಚ್ಚಿದಾನಂದಭಾರತಿ ಎಂಬ ಹೆಸರುಂಟು; ಒರಿಯ ಚಿದಾನಂದ ಎಂಬ ಹೆಸರು ಕಾಣುವುದಿಲ್ಲ.

ಇವನ ಗ್ರಂಥಗಳಲ್ಲಿ

1 ಜ್ಞಾನಸಿಂಧು

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 49, ಪದ್ಯ3621 ಇದರಲ್ಲಿ ಅದ್ವೈತವೇದಾಂತವು ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಶಿವನು ಷಣ್ಮುಖನಿಗೆ ಹೇಳಿದ ಅಧ್ಯಾತ್ಮಬೋಧೆಯನ್ನು ವಿವರಿಸುವುದಾಗಿ ಕವಿ ಹೇಳುತ್ತಾನೆ. ವ್ಯಾಕರಣಕ್ಕೆ ವಿಶೇಷವಾಗಿ ಗಮನವನ್ನು ಕೊಡದೆ ಪಾಮರರಿಗೆ ತಿಳಿವಹಾಗೆ ಬರೆಯುತ್ತೇನೆಂದು ಹೇಳುತ್ತಾನೆ. "ತಾನೆ ತನ್ನನು ತಿಳಿದು ತಾನೇ ತಾನೆಯಾಗಿಯೆ ತನ್ನಯನುಭವ ತುಂಬಿಕೊಂಡಿರಲು ಜ್ಞಾನಸಿಂಧುವು ಎಂಬ ಪೆಸರಾಯ್ತು" ಎಂದೂ ಇದರಲ್ಲಿ "ಸರ್ವಶಾಸ್ತ್ರಾರ್ಥವನು ಪೇಳ್ದೆ ಸರ್ವಗೀತಗಳರ್ಥಸಾರವನಿದಱೊಳುಸಿರಿರ್ದೆಂ" ಎಂದೂ ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಚಿದಾನಂದಗುರುಸ್ತುತಿ ಇದೆ. ಅಧ್ಯಾಯಗಳ ಕೊನೆಯಲ್ಲಿ--ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಶ್ರೀಚಿದಾನಂದ ಗುರುವರ್ಯಚರಣಪದ್ಮದ್ವಿರೇಫ ಶ್ರೀಚಿದಾನಂದಾವಧೂತವಿರಚಿತಜ್ಞಾನಸಿಂಧುಗ್ರಂಥದಲ್ಲಿ—ಎಂಬ ಗದ್ಯವಿದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಘಟಿಸುವನು ಸುಖದುಃಖವೆರಡನು | ತಳರುವನು ಸ್ವರ್ಗಕ್ಕೆ ನರಕಕೆ |
ಇಳೆಗೆ ತಿರುಗುವ ಸುಕೃತದುಷ್ಕೃತಫಲದ ಮುಖದಿಂದ ||
ಒಲ್ಲುವನು ಬಹುಕಾಮ್ಯಬಳಸಿಯೆ | ಸುಳಿವ ನಾನಾಪದಗಳಲಿ ತಾ |
ನುಳಿವುಪಾಯವ ಕಾಣದಲೆ ಇಹ ಜೀವ ಕೇಳೆಂದ ||
ನುಡಿಯುದಾರನು ದುಷ್ಟವಚನವ | ಮಿಡುಕುತಲಿ ಹಿಂಸೆಗಳ ಕಂಡರೆ |
ಯೆಡಗಿ ಮಾತಾಡುತ್ತ ಮೃದುವಾಕ್ಯಗಳ ನುಡಿಯುತ್ತ ||
ಕಡುನಿರಂತರತತ್ವಬೋಧೆಯ | ಸಡಗರವನೆಲ್ಲರಿಗೆ ಹೇಳುತ |
ಪಡುತ ಸಂತಸವಿತಲು ವಾಙ್ಮಯತಪವದುವೆ ಎಂದ ||
ಅಚ್ಚಬೆಳುದಿಂಗಳಿನ ಪ್ರಭೆಗಳ | ಮುಚ್ಚಿಸಿಯೆ ಆನಂದಸುಖವನು |

ಹೆಚ್ಚಿಸಿಯೆ ಚಿದ್ಬಿಂದುಕಳೆಗಳ ಕವಚತೊಡಿಸಿಯೆ ಮೇಣ್ ||
ಎಚ್ಚಲ್ಲನು ಮಱಿಸಿಯೆ ಅವಿದ್ಯೆಯ | ಕೊಚ್ಚಿಸಿಯೆ ಪರಿಪೂರ್ಣಪರವಶ |
ದಚ್ಚರಿಯ ಮಾಟವ್ಪಾತನೇ ಸದ್ಗುರುವು ಕೇಳೆಂದ ||

2 ಪಂಚೀಕರಣ

ಇದರಲ್ಲಿ 15 ವಚನಗಳಿವೆ; ಪ್ರತಿವಚನವೂ ಚಿದಾನಂದಸದ್ಗುರ ಪ್ರಭುವೇ ಎಂದು ಮುಗಿಯುತ್ತದೆ. ಇದರಿಂದ ಒಂದುವಚನವನ್ನು ಉದಾ ಹರಿಸುತ್ತೇವೆ—

ಕೇಳಯ್ಯ ದೇಹ ಬೀಭತ್ಸು ಪೃಥ್ವಿ ಪೃಥ್ವಿಯ ಕೂಡಿತು; ಅಪ್ಪು ಅಪ್ಪ ಕೂಡಿತು; ತೇಜ ತೇಜವ ಕೂಡಿತು; ವಾಯು ವಾಯುವ ಕೂಡಿತು; ಆಕಾಶ ಆಕಾಶವ ಕೂಡಿತು; ಪಂಚಭೂತತತ್ವಂಗಳು ಆಯಾಭೂತತತ್ವಂಗಳಲ್ಲಿ ಕೂಡಿದುವು. ತತ್ವದ ಗುಣಂಗಳು ತತ್ವವ ಹೊಂದಿದುವು. ನೀನು ಅಂಗರಹಿತನು, ನೀನು ನಿರ್ವಿಕಾರನು, ನಿರ್ಮಯಲುಕಣಾ ಚಿದಾನಂದಸದ್ಗುರುವೇ.

ಕೊನೆಯಲ್ಲಿ ಸ್ವಗುರುಸ್ತುತಿರೂಪವಾದ ಈ ಶ್ಲೋಕವಿದೆ—

ಶ್ರೀಮದದ್ವೈತವಾರಾಶಿ ಸಂಭೂತಾತ್ಮಸುಧಾಕರಂ |
ಚಿದಾನಂದಮಹಂ ವಂದೇ ಗುರುದೇವಮಹರ್ನಿಶಂ ||

3 ತತ್ವಚಿಂತಾಮಣಿ

ಇದು ಗದ್ಯರೂಪವಾಗಿದೆ; ಧ್ಯಾನಪರತತ್ವಚಂದ್ರೋದಯ, ವಿಶ್ವವಿ ರಾಟ್ಪುರುಷವಿವರ, ಜೀವೇಶ್ವರೈಕ್ಯವಿಚಾರ ಎಂಬ ವಿಭಾಗಗಳನ್ನು ಒಳ ಕೊಂಡಿದೆ. ಇದರಲ್ಲಿ ಪ್ರಣವನಾದಬಿಂದುಸ್ವರೂಪ, ಮಾಯಾಸ್ವರೂಪ, ಈಶ್ವರಸ್ವರೂಪ, ಆತ್ಮಸ್ವರೂಪ, ಪರಬ್ರಹ್ಮಸ್ವರೂಪ, ಮೋಕ್ಷಸ್ವರೂಪ ಮುಂತಾದ ವಿಷಯಗಳು ನಿರೂಪಿಸಲ್ಪಟ್ಟವೆ ಪ್ರಕರಣಗಳ ಕೊನೆ ಯಲ್ಲಿ—ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಚಿದಾನಂದಾವಧೂತ ವಿರಚಿತ ತತ್ವಚಿಂತಾಮಣಿಯೊಳ್-ಎಂಬಗದ್ಯವಿದೆ.

4 ನವಚಕ್ರಕುಲರೇಖಾಲಕ್ಷಣ

ಇದರಲ್ಲಿ ಶಿವಪಾರ್ವತೀಸಂವಾದರೂಪವಾದ ಶ್ಲೋಕಗಳನ್ನು ಉದಾ

ಹರಿಸಿ ಟೀಕೆಯನ್ನು ಬರೆದು ಗದ್ಯರೂಪವಾಗಿ ವೇದಾಂತವಿಷಯಗಳು ಹೇಳಿವೆ. ಗ್ರಂಥವು ಹೀಗೆ ಆರಂಭಿಸುತ್ತದೆ—

ಪರಮೇಶ್ವರನಂ ಕುಱಿ'ತು ಪಾರ್ವತಿ ಪರಬ್ರಹ್ಮೋಪಲಕ್ಷಣಸ್ವರೂಪವೆನಿಪ ತಾರಸಂಜ್ಞಾರ್ಥರಹಸ್ಯಂಗಳನು ಕೋತಪ್ರತಿಕೋತಮೆನಿಸ ಈ ಪರ್ಯಾಯನಾಮದಿಂ ಶ್ರುತಿಸಮ್ಮತಮಾಗಿ ಪೇೞಲುತಕ್ಕುದೆಂದು ಪ್ರಶ್ನೆಗೆಯ್ಯುತ್ತಿದ್ದಾಳೆ.

5 ದೇವೀಮಾಹಾತ್ಮ್ಯ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 18, ಪದ್ಯ 796; ಸಂಸ್ಕೃತದೇವೀಮಾಹಾತ್ಮ್ಯದ ಭಾಷಾಂತರ. ತನ್ನ ಗುರು ಚಿದಾನಂದನ ಆಜ್ಞೆಯಿಂದ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದಕ್ಕೆ ಹಿಂದೆಯೇ ಜ್ಞಾನಸಿಂಧುವನ್ನು ರಚಿಸಿದಂತೆ ತಿಳಿಯುತ್ತದೆ. ಆರಂಭದಲ್ಲಿ ತುಂಗಭದ್ರಾತೀರದಲ್ಲಿರುವ ಅಯೋಧ್ಯೆಯನ್ನು ಪೊರೆವ ಚಿದಾನಂದಗುರುವಿನ ಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ದೇವಿಯಯುದ್ಧ

ಏಱಿಸಿದಳ್ಳಿ ದೇವಿ ಧನುವನು | ಕಾಱಿಸಿದಳಸುಗಳನು ದೈತ್ಯರ ।
ತೂಱಿ'ದಳು ಕೂರ್ಗಣೆಯ ಗಱಿ'ಗಾಳಿಯಲುಱೆಯದಂಶೆ ॥
ಹಾಱಿದುವು ತಲೆ ಕುದುರೆಗಜಗಳ | ಸೋರಿಗುವ ರಕ್ತದಲಿ ದಿನಪನ |
ಚಾರುಕಿರಣಗಳಡಗಿದುವು ಕತ್ತಲೆಯು ಕವಿಯಿತ್ತು ॥
ಎಲುವು ಬಾಸಿಂಗಗಳು ಕರುಳಿನ | ಒಲೆವ ಸೂಸಕ ತೊಂಡಲವು ಕೇಳ್ |
ಬಲುನೆಣವೆ ತೈಲಗಳು ತಿಳಿರಕುತಗಳೆ ಹುಜ್ಜನವು ॥
ಬಲಿದ ಮಿದುಳವು ಗಂಧಗಳು ತಾಂ | ಬಳಗಕೂಡಿಯೆ ಭೂತವ್ರಾತವು |
ಶೆಲುವಿನಿಂ ಮಾಡಿದುವು ಬಹುಮದುವೆಗಳ ಪೋಕ್ಕಳದಿ ॥

6 ಬಗೆಳಾಂಬಾಸ್ತೋತ್ರ

ಇದರಲ್ಲಿ 101 ಪದಗಳಿವೆ; ಗ್ರಂಥವು ಸಿದ್ಧವರ್ಮತವಾಸಿನಿಯಾದ

ಬಗಳಾಂಬೆಯ ಸ್ತುತಿರೂಪವಾಗಿದೆ. ಪ್ರತಿಪದದಲ್ಲಿಯೂ ಚಿದಾನಂದ ಎಂಬ ಅಂಕಿತವಿದೆ. ಇದರಿಂದ ಕೆಲವು ಪದಗಳನ್ನುತೆಗೆದು ಬರೆಯುತ್ತೇವೆ:

ಏಳಿ'ಸುತ ಹಲಗೆ ಬಿದಿರಿಸುತಕರವಾಳ|ಚೀಳಿ ಕೂಗಲು ನಡುಗೆ ದೈತ್ಯಜನಜಾಲ।
ತೂಳಿ'ದಳು ಸಿಡಿಲಂತೆ ಪರಬಲದೊಳಂಬ|ಧೀರೆಯು ಚಿದಾನಂದರಾಣಿಬಗಳಾಂಬ॥
ಕರವಿಡಿಯೆ ಭಿಕ್ಷುಕನ ನೀನು ತತ್‌ಕ್ಷಣಕೆ | ದೊರೆಯೆನಿಸಿಕೊಂಡನವ ಸಕಲಭು
ವನಕ್ಕೆ ।
ತಿರುಕತನವುಂಟೆ ಪರಬ್ರಹ್ಮ ಪರಶಿವಗೆ|ಗುರುಚಿದಾನಂದ ಬಗಳೆಯು ಒಲಿಯಲವಗೆ॥

7 ಕಾಮವಿಡಂಬನೆ

ಇದರಲ್ಲಿ 110 ಪದಗಳಿವೆ. ಇವಕ್ಕೆ ಹೋಳಿಪದಗಳು ಎಂಬ ಹೆಸರೂ ಉಂಟು. ಆರಂಭದಲ್ಲಿ ಈ ಪಲ್ಲವಿ ಇದೆ---

ದುಮ್ಮಿ ಸಾಲು ಕಾಮನಿಂಗೆ | ದುಮ್ಮಿ ತಜ್ಜನಕನಿಂಗೆ |
ನೆಮ್ಮಿ ಭಜಿಸಿ ನಿಜವನಪ್ರೀತು ಕಾಮಹರನನು ॥

ಈ ಗ್ರಂಥದಿಂದ ಕೆಲವು ಪದಗಳನ್ನು ಉದ್ಧರಿಸಿ ಬರೆಯುತ್ತೇವೆ---

ತೀವಿ ತೋರ್ಪ ಬ್ರಹ್ಮದೊಳಗೆ | ತಾವದೆಲ್ಲಿ ಭೇದಕಿಹುದು |
ಸಾವು ಪುಟ್ಟು ತೋರ್ಕೆ ಮಾಯೆಯಾತ್ಮಗಿಲ್ಲವು ॥
ಆವನಾದಡೇನು ನರನು | ಭಾವಶುದ್ಧಿಯಿರಲು ಶ್ರೇಷ್ಠ |
ಭಾವಿಸುವಡೆ ಜಾತಿನೀತಿಕುಲಗಳಿಲ್ಲವು ॥
ಬೇಡಿದವರಿಗೀಯಲಾಜಿ | ನೋಡಿನೋಡಿ ಹಿಗ್ಗುತಿರುವ |
ಕೂಡಿತನದಿ ಹೆಬ್ಬರು ಕೊಂಬರೆನುತಲಂಜುವ ॥
ಮೂಢನಾಗಿ ದಿಟವ ಮಱೆತು | ಗಾಢಧನದ ತೃಷ್ಣೆಯಿಂದ |
ಕೇಡು ಕಡೆಗೆ ಬಹುದ ತಿಳಿದುತಿಳಿದು ಕೆಡುವನೈ ॥
ನಚ್ಚಿದವರ ಕೊರಳ ಕೊಯ್ದು | ಬೆಚ್ಚಿದವರ ಬೆಸುಗೆಬಿಡಿಸಿ |
ಮೆಚ್ಚಿದಬರ ವೋಸಗೊಳಿಸಿ ಧನವ ಗಳಿ'ಸುತ ॥
ಮಿಂಚಿ ಬರಲು ಸಟೆಯ ನುಡಿದು | ಹಿಂಚಿ ಬದುಕಲೆಳಸಿದವಗೆ |
ಸಂಚುಕಾರಗೊಡದೆ ಬಿಡರು ಯಮನ ದೂತರು ॥

8 ಚಿದಾನಂದರ ವಚನ

ವಚನ ಎಂಬ ಹೆಸರಿದ್ದರೂ ಇವು ಹಾಡುಗಳಾಗಿವೆ. ಒಂದನ್ನು ಉದಾಹರಿಸುತ್ತೇವೆ—

ರಾಗ ಕಾಂಬೋದಿ-ಆದಿತಾಳ

ಪಲ್ಲವಿ॥ ಸಾಧನವೇಕೆ ಸಾಧನವೇಕೆ । ಸುದ್ಗುರುನಾಥನ ಸನ್ನಿಧಿಯಿರಲಿಕೆ ॥
ಯಮನಿಯಮಾಸನವೆಂಬುವು ಏಕೆ । ಕಮಲಾಸನವನು ಬಲಿಯಲದೇಕೆ ।
ಶ್ರಮದಲಿ ವಾಯುವ ಬಿಗಿಯಲದೇಕೆ । ಭ್ರಮಿತದಿ ಬ್ರಹ್ಮವ ಕೂಡಲದೇಕೆ ॥1॥
ನಿತಿಯಾಹಾರವ ಮಾಡಲದೇಕೆ । ಅತಿವೈರಾಗ್ಯವು ದೇಹಕದೇಕೆ ।
ಸತತವು ಕಾಡನು ಸೇರುವುದೇಕೆ । ಮತಿ ತಿಳಿಯದೆ ಓಡಾಡುವುದೇಕೆ॥2॥
ಶರಧಿರೆ ಒಲಿತೆಯ ತೋಡುವುದೇಕೆ । ತರಣಿರೆ ದೀವಿಗೆಗೆಣ್ಣೆಯದೇಕೆ ।
ಗುರುಚಿದಾನಂದನಿರೆ ಯೋಗಗಳೇಕೆ । ಕರಜರಣದಿ ಗುರು ಬಂದಿರಲಿಕ್ಕೆ ॥3॥

ಮಹಾಲಕ್ಷ್ಮೀ ಸು. 1750

ಈಕೆ ಶ್ರೀರಾಮಪಟ್ಟಾಭಿಷೇಕವನ್ನು ಬರೆದಿದ್ದಾಳೆ. ಇವಳು ಬ್ರಾಹ್ಮಣಕವಿ; ಚಾವಡಿರಂಗಭಟ್ಟನ ಮಗಳು. ಇವಳ ಸ್ಥಳ ಪಶ್ಚಿಮಸಮುದ್ರತೀರದಲ್ಲಿ "ಸೈಪಿಗೆಡೆಯಾಗಿ ಕನ್ನಡದ ನುಡಿವೆಣ್ಗೆ ಭರ್ತೃಮಂದಿರವಾಗಿ ಸುಖಕೆ ಬೀಡಾಗಿ" ಮೆರೆವ ಉಡುಪಪುರ (ಉಡುಪಿ) ವೆಂಬ ಕ್ಷೇತ್ರವು. ಚಿಂಗಳದೇವಿಯ ಇಷ್ಟಾನುಸಾರನಾಗಿ ಈ ಗ್ರಂಥವನ್ನು ಬರೆದಂತೆ ಹೇಳತ್ತಾಳೆ. ಪೂರ್ವಕವಿಗಳಲ್ಲಿ ವ್ಯಾಸ, ವಾಲ್ಮೀಕಿ, ಜೈಮಿನಿ ಪಿಂಗಳ, ಭವಭೂತಿ, ಶೂದ್ರಕ, ಕಾಳಿದಾಸ, ಬಾಣ ಈ ಸಂಸ್ಕೃತಕವಿಗಳನ್ನೂ ಚಂದ್ರಭಟ್ಟ, ಕೇಶವ, ನಂದಿ, ವಾಸುದೇವ, ಅಚ್ಯುತ, ಷಡಕ್ಷರಿ, ದಿಗಂಬರವಿಲಾಸ, ರುದ್ರ, ವೆಂಕಟಕೃಷ್ಣ ಈ ಕನ್ನಡ ಕವಿಗಳನ್ನೂ ಸ್ಮರಿಸಿದ್ದಾಳೆ. ಷಡಕ್ಷರಿಯನ್ನು (1655) ಸ್ಮರಿಸುವುದರಿಂದ ಅವನ ಕಾಲಕ್ಕಿಂತ ಈಚೆಯವಳು ಎಂಬುದು ಸ್ಪಷ್ಟವಾಗಿದೆ. ಸುಮಾರು 1750 ರಲ್ಲಿ ಇದ್ದಿರಬಹುದೆಂದು ತೋರುತ್ತದೆ[1].

1. ಕೆಲವರು ಈ ಗ್ರಂಥವನ್ನೂ ಇನ್ನೂ ಕೆಲವು ಗ್ರಂಥಗಳನ್ನೂ ದಕ್ಷಿಣ ಕನ್ನಡಜಿಲ್ಲಾವಿನಲ್ಲಿದ್ದು ಸುಮಾರು 15 ವರ್ಷಗಳ ಹಿಂದೆ ಗತಿಸಿದ ನಂದಳಿಕೆ ಲಕ್ಷ್ಮೀನಾರಾಯಣಪ್ಪನು ರಚಿಸಿ ನಾಮಾಂತರದಿಂದ ಪ್ರಕಟಿಸಿರುವುದಾಗಿ ಹೇಳುತ್ತಾರೆ.

ಇವಳ ಗ್ರಂಥ

ಶ್ರೀರಾಮಪಟ್ಟಾಭಿಷೇಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 5, ಪದ್ಯ 247. ಶ್ರೀರಾಮನು ವಿಭೀಷಣನಿಗೆ ಲಂಕೆಯಲ್ಲಿ ರಾಜ್ಯಾಭಿಷೇಕವನ್ನು ಮಾಡಿ ಪುಷ್ಪಕದಲ್ಲಿ ಪರಿವಾರದೊಡನೆ ನಂದಿಗ್ರಾಮಕ್ಕೆ ಬಂದು ಭರತನಿಗೆ ದರ್ಶನವನ್ನು ಕೊಟ್ಟು ಅವನೊಡನೆ ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾದನು—ಎಂಬುದೇ ಈ ಗ್ರಂಥದ ಕಥಾಸಾರ. ಈ ಕಥೆಯನ್ನು ಆದಿಶೇಷನು ವಾತ್ಸ್ಯಯನನಿಗೆ ಹೇಳಿದಂತೆ ಹೇಳುತ್ತಾಳೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣಪತಿ, ಸರಸ್ವತಿ, ವಿಷ್ಣು, ಆಂಜನೇಯ, ವಾಯು ಇವರುಗಳನ್ನು ಸ್ತುತಿಸಿದ್ದಾಳೆ. ಗ್ರಂಥವು ತಕ್ಕಮಟ್ಟಿಗೆ ಪ್ರೌಢವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ —

ಸಮುದ್ರ

ವಿನಿದಚ್ಚರಿ ಬೀಡಿದಗ್ಗಿ ಕರಿತುರಗಧೂ । ಧೇನುನವರತ್ನಕನ್ಯಾಕಲ್ಪಭರುಹನ ।
ವೀನಪೀಯೂಷವಸ್ತ್ರಾಭರಣಗೇಹನಿಜದೇಹಂಗಳಂ ಮಾಣದೆ ॥
ದಾನವಿತ್ತಾದುದೇನಿಪ್ಪುದೆನುಗೀಯುಲೆಂ। ದಾನೀರದಂಗಳಬ್ಧಿಯನಳ್ಕ ಬೇಡಿದೊಡೆ ।
ತಾನಂಜಿದನೆ ಜೀವನಂಗೊಟ್ಟನೆನೆ ಚಿತ್ರಮುಲ್ಲೆ ಧಾರ್ಮಿಕರ ಚರಿತಂ ॥
ಅಡಿಗಡಿಗೆ ಬರ್ಪ ಬಲ್ದೆರೆಗಳೇ ರೋಗಂಗ ।
ಳೊಡನೇಟ್ವ ಕಲೊಲ್ಲವಾಲೆಯೆ ಬೆದಕೆ ಸಂ ।
ಗಡಿಸರ್ಪ ಸುಖಿಗಳೆ: ರಾಗಂಗಳೇಱಿ'ಟಿ'ಯೆ ಪಿರಿತನಂ ಬಡತನ ವಲಂ ॥
ಬಡಬಾನಲಂ ಚಿಂತೆ ದುಃಖನೆ ಪೊನಲ್ ಬಾಳ್ಕೆ ।
ಗಡ ಗುಳ್ಳೆ ಬೆಳ್ಮೊರೆಯೆ ಸಂತಸಂ ಸುಖಮೆ ಮೇಲ್ ।
ಸಿಡಿವ ಸೀಕರನಿಯೆನಲ್ ಶರಧಿ ಭವಶರಧಿಯುಂ ಪೋಲ್ತೆನೆದುದಚ್ಚರಿಯೆನೆ ॥

ಶ್ರೀರಾಮ

ವಿಸುಧೆಯಂ ಪೊರೆದು ದುಷ್ಟರನಿಕ್ಕಿ ಪೊತ್ತ ಬೆ ।
ಳ್ಚಸದಿಸಕಮೆಲ್ಲದೆ ಕಿರೀಟದೀಧಿತಿಯಲ್ಲ ।

ಮೊಸೆದ ಜಯುರನೆಯ ವೇಖಲೆಯ ಪೊಳೆಪಲ್ಲದಿದು ಕೇಯೂರಕಾಂತಿಯಲ್ಲ ॥
ನಿಸದಂ ಪ್ರತಾಪದತಿಶಯಮಲ್ಲದಿದು ಮೇಲೆ ।
ಎಸುಪ ಮಾಣಿಕದ ಪದಕದ ಶೋಭೆಯಲ್ಲಮೆನೆ ।
ಪಸದನಂ ಪೊಸತೊಂದುಮೂರ್ತಿಯಿಂದೆಸೆಯೆ ಪಟ್ಟಭಿರಾಮಂ ಬಂದನು ॥

ಋಷಿಕೃತರಾಮಸ್ತುತಿ.

ಉಟ್ಟ ಪೀತಾಂಬರದ ನಿಱಿಯ ನುಣ್ಪಿಡಿದ ಪಣೆ ।
ಗಿಟ್ಟ ಪುಂಡ್ರತ್ರಯದ ತುಳಸಿಮಾಲಿಕೆಯೊಡನೆ ।
ತೊಟ್ಟ ನೀವೀತಾಗ್ರದೆಸೆವ ಕೃಷ್ಣಾಜಿನದ ಮೇಲ್ವಾಯ್ದ ಜೆಲ್ವಿನಿಂದ ॥
ಪುಟ್ಟವಾಮನನಾಗಿ ಬೇಡಿ ಭೂಮಿಯನೆರಡು ।
ದಟ್ಟಡಿಯೊಳೊಳಕೊಂಡು ಬಲಿಯಂ ರಸಾತಳಕೆ ।
ವೆಟ್ಟಿ ಪಾಲಿಸಿದೈ ಸುರರ್ಕಳಂ ದನುಜಭೀತರ್ಕಳುಮನಲ್ಕಿಱಿಂದ ॥
ವಿಷಯದುರ್ವಿಷಯಂಗಳೊಳ್ ಬೆರೆಯದೇಕಾಗ್ರ ।
ದೆಸಕಮಂ ತಳೆದು ರಿಪುವರ್ಗರಿಪುವರ್ಗಮಂ ।
ದೆಸೆಗೆಡಿಸಿ ಸಂಗತಸುಹೃತ್ಸುಹೃದರಿಂ ಪರಮಜೀವಸಮಭಾವದಿಂದ ॥
ಪೊಸರಾಜಯೋಗಘನಯೋಗೆರಾಜ್ಯಮನೆ ಸಾ ।
ಧಿಸವೇಳ್ಪುದಬಿಳಸಾಧುಗಳೆಂದು ತಾಯ್ಗೆ ಬೋ ।
ಧಿಸುವ ನೆವದಿಂದಱಿಪಿದೈ ಸಾಂಖ್ಯತತ್ವಮಂ ಮಹಿಯೊಳ್ ಮುನೀಂದ್ರನಾಗಿ ॥
ನೊಂದೆವಳುಕಿದೆವಗಿದೆವಲಿ'ದೆವುಱಿದೆವು ಬೆದೆಯೊ ।
ಳೊಂದಿದೆವು ಕಂದಿದೆವು ಕುಂದಿದೆವು ಬಗೆಗೆಟ್ಟು ।
ಬೆಂದೆವು ಬಿಗುರ್ತೆವಡಿಗಡಿಗೆ ಬಾಯ್ವಾಯ್ದು ಬಿಸುಸುಯ್ದು ಬೈದೆವು ಬಿದಿಯನು ॥
ಒಂದಣದೆ ಬಾಲ್ದಿನ್ನೆಗಮಕಟ ದಾನವಮ ।
ದಾಂಧನುಪಹತಿ ಸಾಕುಸಾಕು ಕಾದ್ಯೆಯೆಮ್ಮ ।
ತಂನೆ ದಯೆಗೆಯ್ವಲಿ'ಪೆನೈ ನಿಜಾಶ್ರಿತನಿಂದಿಗೆ ಕೃತಾರ್ಥರೆವೆಂದರು ॥

ಮುದ್ದಣ್ಣ ಸು. 1750

ಈತನು ರಾಮಾಶ್ವಮೇಧವನ್ನು ಬರೆದಿದ್ದಾನೆ. "ಬೈಗುಂಬೊಟ್ಟು' ನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರಬಲ್ಲಹಂ ಮುದ್ದಣನರಮನೆಯಿಂ ಪೊಱವಮಟ್ಟು" ಎಂಬುದರಿಂದ ಇವನು ಒಬ್ಬ ರಾಜನಲ್ಲಿ ಆಸ್ಥಾನ ಕವಿಯಾಗಿದ್ದಂತೆ ತೋರುತ್ತದೆ. ಈ ಕಥೆಯನ್ನು ತನ್ನ ಹೆಂಡತಿಯಾದ ಮನೋರಮೆಗೆ ಹೇಳಿದಂತೆ ತಿಳಿಯುತ್ತದೆ. ಇಂದು ಕಡೆ ಭೋಜಪ್ರಬಂಧ, ವಿಕ್ರಮವಿಜಯ, ಮಹಾವೀರಚರಿತ ಈ ಪೂರ್ವ ಗ್ರಂಥಗಳ ಹೆಸರು ಪ್ರಸ್ತಾವತ್ವೇನ ಉಕ್ತವಾಗಿದೆ. ಕವಿಯ ಕಾಲವು ಇಂಥದೆಂದು ನಿರ್ಧರಿಸಲು ಆಧಾರವಿಲ್ಲ. ಸುಮಾರು 1750 ರಲ್ಲಿ ! ಇದ್ದಿರಬಹುದೋ ಏನೋ ತಿಳಿಯದು.[1]

ಇವನ ಗ್ರಂಥ

ರಾಮಾಶ್ವಮೇಧ

ಇದು ಗದ್ಯಗ್ರಂಥ; ಹಳಗನ್ನಡದಲ್ಲಿ ಬರೆದಿದೆ; 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದಕ್ಕೆ ಶೇಷರಾಮಾಯಣ ಎಂಬ ಹೆಸರೂ ಉಂಟು. ಇದರಲ್ಲಿ ಪಾದ್ಮಪುರಾಣೋಕ್ತವಾದ ರಾಮಾಶ್ವಮೇಧಕಥೆ ಹೇಳಿದೆ. ಈ ಕಥೆಯನ್ನು ಆದಿಶೇಷನು ವಾತ್ಸ್ಯಾಯನನಿಗೆ ಹೇಳಿದಂತೆ ಆ ಪುರಾಣದಿಂದ ತಿಳಿಯುತ್ತದೆ. ಈ ಗ್ರಂಥವನ್ನು ಅಲ್ಲಲ್ಲಿ ಸಂಸ್ಕೃತಪದಗಳನ್ನು ಸೇರಿಸಿ ತಿರುಳ್ಗನ್ನಡದಲ್ಲಿ ಬರೆವುದಾಗಿ "ಕರ್ಮಣಿಸರದೊಳ್ ಚೆಂಬವಳನುಂ ಕೋದಂತಿರೆ ರಸವೊಸರೆ ಲಕ್ಷಣಂ ಮಿಕ್ಕಿರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ

---

1. ಈ ಗ್ರಂಥವನ್ನೂ ನಂದಳಿಗೆ ಲಕ್ಷ್ಮೀನಾರಣಪ್ಪನು ರಚಿಸಿ ನಾಮಾಂತರದಿಂದ ಪ್ರಕಟಿಸಿರುವುದಾಗಿ ಕೆಲವರು ಹೇಳುತ್ತಾರೆ. 81 ನೆಯ ಪುಟವನ್ನು ನೋಡಿ. ಆದರೆ ಈ ಗ್ರಂಥವನ್ನು ಮುದ್ರಿಸಿದ ಕಾವ್ಯಕಲಾನಿಧಿಸಂಪಾದಕರು ಕೆಲವು ಕಾರಣಗಳನ್ನು ಕೊಟ್ಟು ಹೀಗಿರಲಾರದೆಂದು ಬರೆದಿದ್ದಾರೆ.

ಪೆಟ್ಟಿಯೆ ತಿರುಳ್ಗನ್ನಡದೊಳ್ ಕತೆಯನುಸಿರ್ವೆಂ" ಎಂಬ ಭಾಗದಲ್ಲಿ ಕವಿ ಹೇಳುತ್ತಾನೆ.

ಹಳಗನ್ನಡದ ಗದ್ಯಗ್ರಂಥಗಳು ವಿರಳವಾಗಿವೆ. ರಾಮಾಶ್ವಮೇಧವು ಪ್ರೌಢಗ್ರಂಥವಲ್ಲದಿದ್ದರೂ ಭಾಷಾಜ್ಞಾನಕ್ಕೆ ಬಹಳ ಸಹಕಾರಿಯಾಗಿದೆ ಇದರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ವಸಂತ

ಮಾವುರನೆಳದಳಿರ ರಸಮಂ ಪಿಲಿದು ಕಳಕಂಠನ ಕಂಠನಾಳಕ್ಕೆ ಇಳಿದುಬ್ಬಸ ಮಂ ಕಳೆದು ಕಲನಾದಮಂ ಪೆರ್ಚಿಸಿಯುಂ, ಅರನೇಱಿ'ಲ ದೋರೆವಣ್ಣಂ ತೇದು ನಕ್ಕೆ ಸುತರಗಿಳಿಯು ನಾಲಗೆಯಂ ತೆಳ್ಳನಾಗಿಸಿ ತೊದಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂ ಲೆಪ್ಪಂಬಱ್ಪಿ'ದದಿಮ್ಮೂತ್ತಿಯ ಸುರಯಿಯ ಪೊಸಬಂಡನೊಡಲ್ಗಿತ್ತು ಮಱಿ' ದುಂಬಿಗಳ್ಗೆ ಸಂಪಗೆಯತ್ತಣಿನೊದವಿದ ಶಿರೋಭ್ರಮಣಮನಱಿ'ಯಿಸಿಯುಂ, ಬಸಂತಂ ಬೆಜ್ಜನೆನೆ ಮೈದೋಱಲೊಡಂ; ಅಂದು ಕೋಡುಕೋಡಿಂದೋಡಿ ಮಲಯಮಂ ನುಱಿಗೊಂಡ ಪವನನೀಗಳತ್ತಣಿಂ ಪೊಱಮಟ್ಟು ಮೆಲ್ಲಮೆಲ್ಲನೆಡೆಯೆಡೆಯ| ಬನಬನಮಂ ಪುಗುತಂದು ಹೊಂಚಿ ಮುಂಚಿ ಕೆಳೆಯಂಗೆ ನೆರವಾದನೆನೆ ದಕ್ಷಿಣಾನಿಲಂ ಮಂದಂ ಮಂದಂ ವಹಿಸುತ್ತಿರ್ಪಂ; ಫಲವೃಕ್ಷಂಗಳೆಲ್ಲಂ ಕಾಯ್‌ಕಸುರ್ಗಾಯ್‌ಪಣ್‌ದೋರೆವಣ್‌ತನಿವ ಣ್ಗಳಿಂದೆಸೆಯುಮಿಯುಂ, ಗಿಡುಗಳೆಲ್ಲಂ ತಳಿರ್‌ಚೆಂದಳಿರೆಳದಳಿರೆಲೆಬೆಳ್ಪಿಲಪಸುರೆಲೆಪಣ್ಣೆಲೆಗಳಿಂ ರಂಜಿಸೆಯುಂ, ಪೂವಳ್ಳಿಗಳ್ ನನೆಕೊನೆಮುಗುಳರೆಮುಗುಳ್‌ಬಿರಿಮುಗುಳುಳ್ಳಲರ್ದಪೊ ಸಮಲರ್ಗಳಿಂದೆ ಸೊಗಯಿಸೆಯುಂ ಮನೋಹರಮಾಯ್ತು ಪೊಸಸುಗ್ಗಿ.

ಚೆನ್ನಪ್ಪ ಸು. 1750

ಈತನು ಶಿವಶರಣಲೀಲಾವೃತವನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನ ಸ್ಥಳ ಹಂಪೆಗೆ ದಕ್ಷಿಣದಲ್ಲಿರುವ ನಿಡುಗಲ್ಲು; ಈ ಊರ ಪೇಟೆಯ ಬಸವನಗುಡಿಯಲ್ಲಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇವನ ಗುರು ವಂಚಕವೆಣ್ಣಿಗೆ ಚೆನ್ನಮಲ್ಲಿಕಾರ್ಜುನ.[1] ಪೂರ್ವಕವಿಗಳಲ್ಲಿ ಗುಬ್ಬಿಯಮಲ್ಲಕಾರ್ಯನನ್ನು (1530) ಸ್ಮರಿಸುವುದರಿಂದ ಅವನ ಕಾಲಕ್ಕೆ

ಈಚೆಯವನು ಎಂಬುದು ಸ್ಪಷ್ಟವಾಗಿದೆ. ಸುಮಾರು 200 ವರ್ಷಗಳಿಗೆ ಹಿಂದೆ ಇದ್ದನೆಂದು ಹೇಳುತ್ತಾರೆ. ಇವನ ಕಾಲವು ಸುಮಾರು 1750 ಆಗ ಬಹುದು. ಸುಮಾರು 1825 ರಲ್ಲಿ ಮುಮ್ಮಡಿಕೃಷ್ಣರಾಜನ ಆಳಿಕೆಯಲ್ಲಿ ಹುಟ್ಟಿದ ಸಿರಿಯಾಳಚರಿತ್ರೆ ಎಂಬ ಯಕ್ಷಗಾನವು ಶಿವಶರಣಲೀಲಾಮೃತದ ಆಧಾರದಿಂದ ರಚಿತವಾಯಿತೆಂದು ಆ ಗ್ರಂಥದಲ್ಲಿ ಹೇಳಿದೆ.

ಪೂರ್ವಕವಿಗಳಲ್ಲಿ ಹರೀಶ್ವರ, ರಾಘವಾಂಕ, ಸೋಮನಾಥ, ಪದರಸ, ಭೀಮಕವಿ, ಚಾಮರಸ, ನಿಜಗುಣಶಿವಯೋಗಿ, ಗುಬ್ಬಿಮಲ್ಲಣಾರ್ಯ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಶಿವಶರಣಲೀಲಾಮೃತ

ಇದು ಯಕ್ಷಗಾನದಲ್ಲಿ ಬರೆದಿದೆ; ಸಂಧಿ 11. ಇದರಲ್ಲಿ ಬಸವನ ಮತ್ತು ಅವನ ಕಾಲದಲ್ಲಿದ್ದ ಪುರಾತನರ ಚರಿತವು ಹೇಳಿದೆ. ಗ್ರಂಥದಲ್ಲಿ ಉಕ್ತವಾದ ವಿಷಯವನ್ನು ಕವಿ ಹೀಗೆ ಸೂಚಿಸಿದ್ದಾನೆ—

ಹಿಂದೆ ಕಾಳಗದಲ್ಲಿ ಹೆಚ್ಚು ಕಡಿದಾಡಿ | ಸಂದುಹೋದನರ ಕಥೆ ಸಾಟಿಯಿದಕಲ್ಲ |
ಹಾದರವು ಹುಸಿ ಕಳವು ಅನ್ಯಾಯದಿಂವ|ಕಾದಿ ಸತ್ತವರ ಕಥೆ ಕಾವ್ಯವು ಇದಲ್ಲ |
ಸಂಗನಾ ಶರಣರು ಭಕ್ತಜನರು | ಮಂಗಳಾತ್ಮಕಶಿವನ ಮಹಿಮೆಯಂ ಮೆಱೆದು |
ಮುಂದೆ ಮುಕ್ತಿಯ ಪಡೆದ ಮುದದಿಂದಶಿವನ | ಹೊಂದಿ ಪುಷ್ಪಕವೇಱಿ' ಹೋದ ಮಹಿಮೆಯನು |
ಅಂದಚಂದವು ಪುಟ್ಟಿ ಅತಿಶೊಪ್ಪನಿಟ್ಟು | ಹಾಡಿದಂ ಪೇಳುವ್ವೆ ಶಾಶ್ವತವಾಗಿರೆ ||

ಬ್ರಹ್ಮ ಸು. 1750

ಈತನು ವೈದ್ಯಕಂದವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಬಡಗನಾಡಿನವನು; ಋಗ್ವೇದಿ; ಭಾರದ್ವಾಜಗೋತ್ರದವನು. ಇವನ ಪಿತಾಮಹನು ಹಂಪೆಯ ಕ್ಷೇತ್ರಕ್ಕೆ ಪಶ್ಚಿಮದಲ್ಲಿರುವ ಕೊಟ್ಟೂರುಸೀಮೆಯೊಳಗಣ ಇಟ್ಟಗೆಯ ಕುಲಕರ್ಣ ಸೂರ್ಯರಾಯ, ಇವನ ಹನುಮಪ್ಪದಾಸ,

ತಾಯಿ ಭಾಗಾಂಬೆ, ಇಷ್ಟದೈವ ಭಂಡೆಯರಂಗ, ಚರಕ, ಸುಶ್ರುತ, ವಾಹಟ, ಕಾಶ್ಯಪ ಮುಂತಾದವರ ಗ್ರಂಥಗಳಲ್ಲಿರುವ ಅಂಶಗಳನ್ನು ಸಂಗ್ರಹಿಸಿ ಬರೆದಂತೆ ಕವಿ ಹೇಳುತ್ತಾನೆ. ಇವನ ಕಾಲವು ಸುಮಾರು 1750 ಆಗಿರಬಹುದು.

ಇವನ ಗ್ರಂಥ

ವೈದ್ಯಕಂದ

ಇದರಲ್ಲಿ 616 ಪದ್ಯಗಳಿವೆ. ವೈದ್ಯಶಾಸ್ತ್ರವು ಋಗ್ವೇದಕ್ಕೆ ಉಪವೇದವಾದ ಆಯುರ್ವೇದವೆಂದೂ ಅದನ್ನು ಚೆನ್ನಾಗಿ ಕಲಿತು ಚಿಕಿತ್ಸೆಮಾಡಿದರೆ ದೋಷವಿಲ್ಲವೆಂದೂ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಭಂಡೆಯರಂಗನ ಸ್ತುತಿ ಇದೆ. ಕೊನೆಯಲ್ಲಿ—ಇತಿ ಶ್ರೀಸೂರ್ಯರಾಯವಂಶೋತ್ತಂಸೇನ ಶ್ರೀಮದ್ಭಂಡೆರಂಗಪದಪರಿಚರಣಧುರೀಣಮೊಮ್ಮಯಾಮತ್ಯೇನ ವಿರಚಿತಮಪ್ಪ ವೈದ್ಯಕಂದಪದ—ಎಂದಿದೆ. ಇದರಿಂದ ಬಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ತೊಲೆಹಿಪ್ಪಲಿಯನು ಜುರಿವುದು | ತಿಲತೈಲದಿ ಕಲ್ಲುಸಕ್ಕರೆಯ ಕೂಡಿಸುತಂ |
ಬಲುಹುರುಳಿಯ ಕಟ್ಟಿನೊಳಂ| ಕಲಸುತ ಕೊಡಲೊಡನೆ ಕೆಡುವುದತಿಸಿದಖಾಸಂ॥
ಧೂಪವಕೊಡುವ್ರದಱಿಂದಂ | ಲೇಪನವಭ್ಯಂಗರಕ್ತಮೋಕ್ಷಣದಿಂದಂ |
ವ್ಯಾಪಿಸಿದ ಮೂಲರೋಗಂ | ತಾ ಪರಿಹರವಹುದು ಸಿದ್ಧಬಾಹಟಮತದಿಂ ॥

— — —

ವಿರಕ್ತಷಡಕ್ಷರಯ್ಯ ಸು. 1750

ಈತನು ವಚನಗಳು, ಶಿವಪೂಜಾಪದ್ಧತಿ, ಶಿವಯೋಗಾಷ್ಟಕ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ: ಇವನಿಗೆ ಯರಗಂಬಳಿಸಿದ್ಧಲಿಂಗ ಎಂಬ ಹೆಸರೂ ಇದ್ದಂತೆ ತೋರುತ್ತದೆ. ತನ್ನ ಇಷ್ಟದೇವತೆಯನ್ನು ಉಕ್ಷಪುರವಾಸ ಎಂದು ಸಂಬೋಧಿಸುತ್ತಾನೆ. ಗ್ರಂಥಾಂತ್ಯದಲ್ಲಿ ಧಾರವಾಡದ ಮಠದ ಚೆನ್ನವೃಷಭನನ್ನು ಸ್ಮರಿಸಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ

1 ವಚನಗಳು

ವಚನಗಳು ಎಂಬ ಹೆಸರಿದ್ದರೂ ಈ ಗ್ರಂಥವು ಹಾಡುಗಳಂತಿರುವ ನಾನಾವಿಧ ಷಟ್ಪದಿಗಳಲ್ಲಿ ಬರೆದಿದೆ; ಶಿವಸ್ತುತಿರೂಪವಾಗಿಯೂ ವೇದಾಂತ ಬೋಧಕವಾಗಿಯೂ ಇದೆ. ಷಡಕ್ಷರಯ್ಯ ಎಂಬ ಅಂಕಿತವು ಅಲ್ಲಲ್ಲಿ ದೊರೆಯುತ್ತದೆ. ಈ ಗ್ರಂಥಕ್ಕೆ ಕೈವಲ್ಯಪದ್ಧತಿ ಎಂಬ ಹೆಸರೂ ಇರುವಂತೆ ತೋರುತ್ತದೆ. ಇವನ ಉಕ್ತಿಗಳು ಬಹಳಲಲಿತವಾಗಿಯೂ ಭಕ್ತಿಭರಿತವಾಗಿಯೂ ಇವೆ. ಕೆಲವು ಪದ್ಯಗಳನ್ನು ಉದಾಹರಿಸುತ್ತೇವೆ—

ಎನ್ನ ಕಾಲುಗಳೆರಡು | ಮುನ್ನತದ ಕಂಭವೈ|ಎನ್ನ ಮೊಡಲೇ ನಿನಗೆ ದೇವಾಲಯ |
ಎನ್ನ ತೋಳುಗಳೆರಡು|ಮುನ್ನತದ ಮದನಕೈ|ಎನ್ನ ಶಿರ ಸೌವರ್ಣಕಲಶವಯ್ಯಾ||
ಹಸಿವೃತೃಷೆಗಳಡಸಿ ತನುವ | ಹೊಸೆದು ಹುಸಿಯ ಮಾಡುತಿರಲು |
ಬಿಸಿಲುಕಾಲ ಪತ್ತಿ ಬೆಂಕೆ ನೆತ್ತಿಯಡರಲು ||
ಕುಸಿದು ಕುಗ್ಗಿ ಧರೆಗೆ ಬದ್ದು | ಮನುವನಳಿವ ಸಮಯದಲ್ಲಿ |
ಸಸಿನೆ ಬಿಡದೆ ಶಿವನ ನೆನೆವುದೆಂದಿಗಪ್ಪುದೋ ||
ಕೆಳೆ ತೊಳೆ ಮಡು ದೊಣೆ ಪರಿವಾ ನಿರ್ಝರ | ಗಿರಿ ಗುಹೆ ವನಲತೆ ಪರ್ಬಿದ ಕಾನನ |
ಸರರುಹಕೊಳದೊಳು ದುಮುಕುವ ನದಿತಟದೊಳು ಶಶಿಶಿಲೆಯೊಳಗೆ ||
ಆಳಿಯೊಳು ಪುಳಿನಸ್ಥಳದೊಳು ನಿರ್ಮಳ| ಪರಮಸುಖಸ್ಥಳದೊಳು ಘನಲಿಂಗಕೆ|
ಹರುಷದಿ ಪೂಜೆಯು ಮಾಡುವ ಶಿವಸುಖವೆಂದಿಗೆ ದೊರಕುವುದೋ ||

2 ಶಿವಪೂಜಾಷ್ಟಕ

ಇದರಲ್ಲಿ 9 ಕಂದಗಳಿವೆ. ಒಂದೆರಡನ್ನು ತೆಗೆದು ಬರೆಯುತ್ತೇವೆ—

ಭೃಂಗಂ ಬಳಸದ ತಂಪಿನ | ಶೃಂಗಾರದ ವನಗಳಲ್ಲಿ ವರಕುಸುಮಗಳಿಂ |
ಸಾಂಗಮುವಾಗಿ ಷಡಕ್ಷರ | ಲಿಂಗವನನವರತ ಬಿಡದೆ ಪೂಜಿಪೆನೊಲವಿಂ ||
ಶಶಿಕಾಂತದ ಪಾಸಲಿಯಿಂ | ಹೊಸನವಜ್ರದ ಗುಂಡುಬಂಡೆ ತುಱುಗಿದ ಗಿರಿಯಿಂ |
ದೊಸರುವ ನಿರ್ಝರಜಲದಿಂ | ಶಶಿಕಳೆಯುಂ ಧರಿಸಿದಂಗೆ ಮಜ್ಜನಗೈವೆಂ ||

3 ಶಿವಯೋಗಾಷ್ಟಕ

ಇದರಲ್ಲಿಯೂ 9 ಕಂದಗಳಿವೆ. ಒಂದನ್ನು ಉದಾಹರಿಸುತ್ತೇವೆ—

ತಿಂಗಳ ಗಂಗೆಯ ಸೂಡಿದ | ಮಂಗಳಮಯಭಸಿತಲಸಿತದೊಪ್ಪುತೆ ಮೆಱೆವಾ |
ಅಂಗದ ಜಿಲುವ ಷಡಕ್ಷರಿ | ಲಿಂಗವ ನೆಱೆಯಪ್ಪಿಯಗಲದಾನೆಂದಿಹೆನೋ ||

ಸುಬ್ರಹ್ಮಣ್ಯ ಸು. 1750

ಈತನು ಹನುಮದ್ರಾವಣಾಯಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಇವನ ತಂದೆ ವೆಂಕಾರ್ಯ, ಸ್ಥಳ ಆಡುವಳ್ಳಿ, ಕುಲದೇವತೆ ಮೂಕಾಂಬೆ. "ಮೂಕಾಂಬಾಪಾಂಗಪ್ರಸಾದಸಾಧಿತಸರಸಸಾಹಿತ್ಯಸಾಮ್ರಾಜ್ಯಪ್ರತಿಷ್ಠಿತ ವಿದ್ವಜ್ಜನೋಪಲಾಲನೀಯ ಭೂವಿಬುಧ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಹನುಮದ್ರಾವಣಾಯಣ

ಇದು ಕಂದಗಳಲ್ಲಿ ಬರೆದಿದೆ; ಆಶ್ವಾಸಗಳ ಆದಿಯಲ್ಲಿಮಾತ್ರ ಒಂದೊಂದು ವೃತ್ತವಿದೆ. ಆಶ್ವಾಸಗಳು 15. ಈ ಗ್ರಂಥಕ್ಕೆ ಹನುಮದ್ರಾವಣ ವಿಜಯ ಎಂಬ ಹೆಸರೂ ಇರುವಂತೆ ತೋರುತ್ತದೆ. ಇದರಲ್ಲಿ ರಾವಣಾಯಣ ಕಥೆಯೊಡನೆ ಹನುಮಂತನ ಜನನ, ಪರಾಕ್ರಮ ಮುಂತಾದ ವಿಷಯಗಳು ಹೇಳಿವೆ. ಇದನ್ನು ಸೂತನು ಶೌನಕಾದಿಗಳಿಗೆ ಹೇಳಿದಂತೆ ತಿಳಿಯುತ್ತದೆ. ಗ್ರಂಥಾವತಾರದಲ್ಲಿ ಹನುಮಂತ, ಸುಬ್ರಹ್ಮಣ್ಯ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ಒಂಕೊಳ್ವ ಪೆದೋಱೆಗಳಿಂ | ವಳಯಿಂದಂ ಸುಱಿಗಳಿಂದೆ ಬಿಳ್ಪೊರೆಯಿಂ ಪ |
ಜಳಿಸುವ ಮಣಿಗಣದಿಂ ಮಂ | ಜುಳಕರನಿರ್ಝರಿಸುವುದಿಂ ವಾರ್ಧಿಯದೆಸೆಗುಂ||

ಕೈಕಸೆಯ ಸೌಂದರ್ಯ

ಕಂದದ ಶಿರೀಷಮಾಲೆಯೊ| ಕುಂದದ ಕೋಮಲಿತ ಕಮಲನಾಳವೊ ನೋ ಟಲ್ ।
ಬಂಧುರಕನಕಲತೆಯೊ ಎಂ | ಬಂದದ ನಳಿತೋಳ್ಗಳೆಸೆಗುಮಾಭಾಮಿನಿಯಾ ॥
ದಿವದಂತೆ ತಾರಕಾನ್ವಿತ | ಮಪರತವಿಹಗಾಳಿಯಂತೆ ಪಕ್ಷ್ಮ ಯುತಂ ಮಾ ।
ಧವನಂತೆ ಸಪದ್ಮೋದರ | ಮವಳಕ್ಷಿದ್ವಿತಯಮೊಪ್ಪುಗುಂ ರಮಣೀಯಂ ॥

ವೈರಾಗ್ಯ

ಪಥಿಕರ್ ತಣ್ಣೆಲಿಲಿಹ ಸಂ । ಕ್ಷಿತಿಯೊಳೆ ವಿಶ್ರಮಿಸಿಯೊಡನೆ ಪೋಪಂದದೊಳಂ ।
ಸತಿಪತಿಸುತಪಿತಮಿತ್ರರ್ | ಕತಿಪಯದಿವಮಿರ್ದು ಪೋಪರಿವರವರಾರೋ ॥

ಗೋಪಾಲಾರ್ಯಶಿಷ್ಯ ಸು. 1750

ಈತನು ಜೀವೇಶ್ವರಸಾಂಗತ್ಯ, ತತ್ವದ ಸೊಬಗಿನ ಸೋನೆ, ತತ್ವದ ಪದಗಳು ಇವುಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕನಿ, ತನ್ನ ಗುರುವಾದ ಗೋಪಾಲಾರ್ಯಯತಿಯ ಹೆಸರನ್ನು ತನ್ನ ಗ್ರಂಥಗಳಲ್ಲಿ ಹಲವುಕಡೆ ಹೇಳಿದಾನೆ; ತನ್ನ ಹೆಸರನ್ನು ಮಾತ್ರ ಹೇಳಿಕೊಂಡಿಲ್ಲ. ತತ್ವದ ಸೊಬಗಿನ ಸೋನೆಯಲ್ಲಿರುವ

ಪರಮಹಂಸನ ಗುರುವರ್ಯನ ಕಾಣುತ । ವರಸುಮತಿಯೆಂಬ ಶಿಷ್ಯನು ।
ಹರಣಕೆಱಗಿ ಬಿನ್ನವಿಸಿದನು ತನ್ನಯ | ವರಮತವನು ಭಕ್ತಿಭಾವದಿ ॥

ಎಂಬ ಪದ್ಯದಿಂದ ಈತನ ಹೆಸರು ಸುಮತಿ ಎಂದಿರಬಹುದು ಎಂಬ ಭಾವನೆಗೆ ಅವಕಾಶವಿದೆ. ಆದರೆ ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲ. ಇವನ ಕಾಲವು ಸುಮಾರು 1750 ಆಗಿರಬಹುದು.

ಇವನ ಗ್ರಂಥಗಳೆಲ್ಲಾ ಗುರುಶಿಷ್ಯಸಂವಾದರೂಪವಾಗಿ ಅದ್ವೈತ ವೇದಾಂತವನ್ನು ಬೋಧಿಸುತ್ತವೆ. ಇವುಗಳಲ್ಲಿ

1 ಜೀವೇಶ್ವರಸಾಂಗತ್ಯ

ಪದ್ಯಗಳು 100. ಗ್ರಂಥದ ಆದ್ಯಂತಗಳಲ್ಲಿ ಗೋಪಾಲಾರ್ಯಗುರುವಿನ ಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಪರಪೀಡೆ ಪರಸೇವೆ ಪರವಂಚನೆಗೈದು | ಪರಹಿಂಸೆಗಳನೆಸಗುತ್ತ |
ಪರಧನಕಳುಪಿ ಪಾಮರರಾಗುತಲಿಹ | ಪರಕೆ ಬಾಹಿರರಾಗುವರು ||
ಹರಿಭಕ್ತಸಂಗದಿಂ ಹರಿಕಥೆಗಳ ಕೇಳಿ ! ನಿರುತ ನಿಷ್ಕಾಮಕರ್ಮಗಳ |
ಹರಿಗರ್ಪಿತವಾಗಿ ಮಾಡುತ್ತ ಮನುಜರು | ದುರಿತಗಳನು ದಾಂಟುವರು ||
ಕೆಲರು ಯೋಗಿಗಳು ತಾವೆನ್ನುತ ಭೋಗವ | ನಲವಿನಿಂ ಬಯಸುತಲಿಹರು |
ಕೆಲರು ಶಿಷ್ಯರ ಧನವನು ಕೊಂಡು ಶಾಸ್ತ್ರದ | ನೆಲೆಯ ಕಾಣದೆ ಕೆಡುತಿಹರು ||

2 ತತ್ವದ ಸೊಬಗಿನ ಸೋನೆ

ಇದೂ ಸಾಂಗತ್ಯದಲ್ಲಿ ಬರೆದಿದೆ; ಪದ್ಯ 67. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇನೆ—.

ತನ್ನ ಗತಿಗೆ ವಿರೋಧವ ಮಾಲ್ಪಿ ಕರ್ಮವ | ನನ್ಯಾರ್ಥವೆಂದು ಮಾಡುವರನು |
ಇನ್ನೇನೆನ್ನ ಬಹುದು ಕುರುಡನು ಬಾರಿ | ಯನ್ನು ತೋಱಿಸುವೆನೆಂಬಂತಾಯ್ತು ||
ವಂಧ್ಯಾತನುಜನ ಮದುವೆಗೆ ಸಿಕತದೊ | ಳಿಂದು ತೈಲವ ತೆಗಸುವೆನೆಂಬ |
ಮಂದಮತಿಯನೊಲು ಇಲ್ಲದ ಕರ್ಮವ | ನೆಂದು ಮಾಡುವರನಿನ್ನೇಂಬೆ ||

3 ತತ್ವದಪದಗಳು

ಇವು ಹಾಡುಗಳ ರೂಪವಾಗಿವೆ; ಅಲ್ಲಲ್ಲಿ ಕೆಲವು ಕಂದಗಳೂ ಇವೆ.

ವೆಂಕಟಕವಿ ಸು. 1750

ಇವನು ಕರ್ಣಾಟಕಾಷ್ಟಪದಿಯನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿಯೆಂದು ತೋರುತ್ತದೆ. "ಹೇವಾದ್ರಿವಾಸನ ಪದಪಯೋಜ ದಾಸ" ಎಂದು ಹೇಳಿಕೊಂಡಿದ್ದಾನೆ. "ಸುರಪುರದಲ್ಲಿ ಮೂಜಗದೊಡೆಯ ಗೋಪಾಲಗೊಪ್ಪಿಸಿದನು" ಎಂಬುದರಿಂದ ಇವನ ಸ್ಥಳವು ಸುರಪುರವಾಗಿದ್ದರೂ ಇರಬಹುದು. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಕರ್ಣಾಟಕಾಷ್ಟಪದಿ

ಇದು ಜಯದೇವನ ಗೀತಗೋವಿಂದದ ಭಾಷಾಂತರವು. ಮೂಲದ ವೃತ್ತಗಳು ಷಟ್ಪದಿಗಳಾಗಿಯೂ ಪದಗಳು ಹಾಡುಗಳಾಗಿಯೂ ಪರಿವರ್ತಿಸಲ್ಪಟ್ಟಿವೆ. ಈ ಗ್ರಂಥದಿಂದ ಸ್ವಲ್ಪಭಾಗವನ್ನು ಉದಾಹರಿಸುತ್ತೇವೆ—

ಗಗನದಿ ಮೇಘವು ಮುಸುಕಿರೆ ಭಾಸ್ಕರ । ತೆಗೆದನು ತನ್ನ ಕಿರಣವನು ಕತ್ತಲೆ ।
ಯೊಗೆದುದು ವನದಲಿ ವೃಂದಾವನದಿಂ ಕೃಷ್ಣನ ಗೋಕುಲಕೆ ॥
ತೆಗೆದೊಯ್ಯೆಂದಾನಂದ ನಿರೂಪಿಸೆ । ಸೊಗಸಿಂದಡವಿಗೆ ನಡೆದಳು ರಾಧೆಯು ।
ಮಗುವನು ಕೌಂಕುಳೊಳಿತ್ತಿಕೊಳುತ ಮಡದನ ಕ್ರೀಡಾರ್ಥದಲಿ[1] ॥
ಉರದಲಿಪ್ಪುದು ಹಾರವುರಗನಲ್ಲವು ಕೊರಲೊ ।
ಳಿರುವ ನೈದಿಲಮಾಲೆ ವಿಷವಲ್ಲ ಚಂದನದ ।
ವರಲೇಪನವು ಭಸ್ಮಮಲ್ಲ ಮನ್ಮಥನೆ ನೀ ಹರನೆಂಬ ಭ್ರಾಂತಿಯಿಂದ ॥
ಅರಲಬಾಣಗಳಿಂದ ಹರಣವನು ಕೊಳಬೇಡ ।
ತರುಣಿಯನಗಲ್ದು ಬಲು ವಿರಹದಿಂದಿರ್ದವನ[2] ।
ಬಲ್ಲಿಡೆ ಬಾಧಿಸಿ ನಿನಗೆ ಬರುವುದೇನುಂಟು ನಿಷ್ಕರುಣೆಯಿನಿಸುವುದುಚಿತವೇ 2 ॥
ಧ್ರುವ॥ ರಾಧೆಯು ಕೃಷ್ಣರಾಧೆಯು । ಮಾಧವಾ ನಿನ್ನ ವಿರಹವೇದನೆಯು ॥
ಸ್ತನದತೇಲೊಪ್ಪುವ ಮಣಿಹಾರಗಳು । ತನುವಿನಿಂದತಿಭಾರ ತೆಗೆಯೆನ್ನುವಳು ॥1॥
ಸರಸಕರ್ಪೂರಚಂದನಗಳ ನೋಡಿ । ಉರಿವ ಗರಳವಿದೆಂತೆಂಬಳೀಡಾಡಿ ॥2॥
ಅಂಗೈಯೊಳಗೆ ಮೊಗವಿರಿಸಿ ಕುಳ್ಳಿರಲು।ಅಂಗನೆ ಬಾಲಚಂದಿರನ ವೋಲುವಳು॥3॥
ನಿಸಿದೆಸೆಯೊಳಗೆ ಕಂಬನಿಯು ಜಿಲ್ಲುವಳು।ಬಿಸಜನಾಳವ ಕಿತ್ತಿರ್ದಂತೆ ಕಣ್ಣುಗಳು॥4॥
ನಿಟ್ಟುಸಿರಿಂದುದಿಸುವುದತಿಶಯಗಾಳಿ । ಪುಸರನುರಿಯಂತಿಹುದು ಮಹಾಜ್ವಾಲೆ॥5॥
ಕಣ್ಣಿಗೆ ಜೆಲುವಾದ ತಳಿರಹಾಸಿನೊಳು । ಚೆನ್ನಾದುದಿಂಗಳಸಾಮ್ಯನೆನ್ನುವಳು ॥6॥
ಕರಿಹರಿ ಎನುತಲಿ ಜಪತಮಾಡುವಳು ॥ ಪರಕಿಹಕಿದುವೆ ಸಾಧನನೆನ್ನುವಳು ॥7॥
ಕವಿಗಳರಸ ಜಯದೇವನ ಕೃತಿಯ। ವಿವರಿಸೆನುತ ಹ್ಲೇವಾವಿಸನಿತ್ಮನುತಿಯು3॥8॥

---

1. ಮೇಘೈರ್ಮೇದುರಮಂಬರಂ ಇತ್ಯಾದಿ. 2. ಹ್ಯದಿ ವಿಸಲತಾಹಾರೋ ಇತ್ಯಾದಿ. 3. ರಾಧಿಕಾ ಇತ್ಯಾದಿ.

ಚೆನ್ನರಾಜಪ್ಪ ಸು. 1750

ಈತನು ವೆಂಕಟೇಶ್ವರಶತಕವನ್ನು ಬರೆದಿದ್ದಾನೆ. ಇವನು ಮೈಸೂರು ಅರಸರ ಸಮುದಾಯಕ್ಕೆ ಸೇರಿದವನೆಂದು ತೋರುತ್ತದೆ. ನಮಗೆ ದೊರೆತ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿ "ಮೈಸೂರು ಆನೆಗೊಂದಿ ಅರಸಿನವರು ಚೆನ್ನರಾಜಪ್ಪನವರಿಂದ ವಿರಚಿಸಲ್ಪಟ್ಟ ವೆಂಕಟೇಶ್ವರಶತಕ ಸಂಪೂರ್ಣ" ಎಂದಿದೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ವೆಂಕಟೇಶ್ವರಶತಕ

ಇದು ಭಾವಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 103. ಪ್ರತಿಪದ್ಯವೂ ಪ್ರಾಯಿಕವಾಗಿ "ವೆಂಕಟ ಸಲಹೊ ಎನ್ನನು ನಿತ್ಯಶುಭವಿತ್ತು" ಎಂದು ಮುಗಿಯುತ್ತದೆ. ಭಕ್ತಿನೀತಿವೈರಾಗ್ಯಗಳನ್ನು ಬೋಧಿಸುವ ಗ್ರಂಥ. ಆರಂಭದಲ್ಲಿ ವಿಷ್ಣುಸ್ತುತಿಯೂ ಅನಂತರ ಲಕ್ಷ್ಮೀ ಗರುಡ ಪಂಚಾಯುಧಗಳ ಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹುತ್ತದಲಿ ವಿಷವಿಹುದೊ ಸರ್ಪನ | ವಕ್ತ್ರದಲಿ ವಿಷವಿಹುದೊ ಹೊಲಿಗಣ |
ಪುಶ್ರಮಿತ್ರಕಳತ್ರಬಾಂಧವವರ್ಗದೊಳಗಿಹುದೋ ||
ಎತ್ತಣದು ಭವಬಂಧವೆನ್ನಯ | ಚಿತ್ತದೊಳಗಿಹುದದನು ತೊಲಗಿಸು |
ಮುತ್ತೆ ವೆಂಕಟ ಸಲಹೊ ಎನ್ನನು ನಿತ್ಯಶುಭವಿತ್ತು ||
ಭಜಿಪೆ ಕುಬ್ಜೆಯ ಸಲಹಿದಂಘ್ರಿಯ | ಭಜಿಪೆ ಶಿಲೆಪೆಣ್ಮಾಡಿದಂಘ್ರಿಯ |
ಭಜಿಪೆ ಬಲಿಮುಕುಟಾಗ್ರಭೂಷಣವಾದ ಅಂಘ್ರಿಯನು ||
ತ್ರಿಜಗಪಾವನನೆ ಪುಟ್ಟಿದಂಘ್ರಿಯ | ಭುಜಗಶಯನಲಿ ನಟಿಸಿದಂಘ್ರಿಯ |
ಭಜಿಪೆ ವೆಂಕಟ ನಿಮ್ಮಯಂಘ್ರಿಯ ಸಲಹೊ ಶುಭವಿತ್ತು ||
ಮುಗುಳುನಗೆಗಳು ಮುದ್ದುನುಡಿಗಳು | ಚಿಗುರುಚೆಂದುಟಿ ಸೋಗೆಗಂಗಳು |
ಬಿಗುಹುಡೋಲಿದ ಬಟ್ಟಬಲ್ಮೊಲೆಪೊಗರುಜವ್ವನದ ||

ಸೊಗಸುದೇಹದ ಚಂದ್ರಮುಖಿಯರ । ತಗಲಿ ಕೆಟ್ಟೆನು ನಿನ್ನ ಭಜಿಸದೆ ।
ನಿಗಮಸನ್ನುತ ಸಲಹೊ ಎನ್ನನು ನಿತ್ಯಶುಭವಿತ್ತು ॥

ರಾಮಸೂರಿ ಸು. 1750

ಇಂದ್ರಕೀಲಚೌಪದ ಎಂಬ ಗ್ರಂಥದ ಕೊನೆಯಲ್ಲಿರುವ

ಶಂಭುಷಟ್ಪದ ರಾಮಸೂರಿಗೊಲಿದವನು । ಚಿಂತಿಸುವರಭಿಮತವನಿತ್ತು ಸಲಹುವನು ।
ಸಂಚರಿಸಿ ಗುಣಮೂಲಿಕೆಗಳೊಳಗೆ ಮೆಚ್ಚಿಯುವನು । ಚಿಂತೆಯಿಲ್ಲದತೆಳಿದಿ ಜನರ ಸಲಹುವನು ॥

ಎಂಬ ಪದ್ಯದಿಂದ ಈ ಗ್ರಂಥವನ್ನು ಬರೆದವನು ರಾಮಸೂರಿ ಎಂದು ತೋರುತ್ತದೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಇಂದ್ರಕೀಲಚೌಪದ

ಪದ್ಯ 80. "ಭಾರತಕಥೆಯೊಳು ಹರ ನರರಿಗೆ ವರವನಿತ್ತಾ ಚರಿತೆಯು ವಿರಚಿಪೆಂ" ಎಂದು ಕವಿ ಹೇಳುತ್ತಾನೆ. ಆರಂಭದಲ್ಲಿ ಶಿವ, ಗಣೇಶ, ವಿಷ್ಣು, ಪಾರ್ವತಿ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ಸೂಕರನ ದಂಡಿಪುದು ಲೇಸೆಂದು ನಿಂದು। ತಾ ಕರದಿ ಬಿಲ್ಲ ಜೀವಡೆದಂಬ ಪಿಡಿದು।
ತಾಕುವಂತೆಸೆಯೆ ಹಾ ಎನುತ ಹರಿತಂದು । ಈ ಕಿರೀಟಿಯಮುಂದೆ ಹರಣವನು ಕಳೆದು ॥

ಬಿದ್ದಿರುವ ಬೇಟೆಯೆಡೆ ಶಿವನು ನಡೆತಂದು। ಬಿದ್ದುದೆಮ್ಮಂಬಿನಲಿ ತೆಗೆಯಿರೆನಲಂದು।
ಬಿದ್ದುದೆನ್ನಿಂದ ನೀನಾರು ಸಾರೆಂದು । ಉದ್ದುರುಟಿನಿಂದ ಜಟೆದನು ವಿಜಯು ನಂದು ॥

ಜಕ್ಕಣಾವಮಾತ್ಯ ಸು. 1750

ಈತನು ಶಂಕರಾಚಾರ್ಯಕೃತಸೌಂದರ್ಯಲಹರಿಗೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ಎಂದು ತೋರುತ್ತದೆ. ಇವನ ತಂದೆ ವಿಟ್ಠಲ. "ಶ್ರೀಚಕ್ರಾಂಬುಜಭೃಂಗ, ರಾಜವಿದ್ಯಾಸರೋವೀಚೀಖೇ ಲನಹಂಸ, ಕನ್ನಡಕವಿ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು. ಇವನು ಬರೆದ ಟೀಕೆಗೆ ಪಟ್ಟಿಕ್ಕದೀಪಿಕೆ ಎಂದು ಹೆಸರು.

ಚಂದ್ರಭೀಮಕವಿ ಸು. 1750

ಈತನು ಮದಕೇರಿರಾಜೇಂದ್ರದಂಡಕವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಈ ಗ್ರಂಥವು ಕಾಮುಕೇತಿವಂಶದವನಾದ ಮದಕೇರಿನಾಯಕ ಎಂಬ ಚಿತ್ರದುರ್ಗದ ಪಾಳೆಯಗಾರನ ಸ್ತುತಿರೂಪವಾಗಿದೆ. ಕೆಳಗೆ ಉದಾಹರಿಸಿರುವ ಭಾಗದಿಂದ ಮದಕೇರಿ ನಾಯಕನು ಕಸ್ತೂರಿರಂಗಪ್ಪನಾಯಕನ ಮಗನೆಂದು ತಿಳಿಯುತ್ತದೆ. ಚಿತ್ರದುರ್ಗದ ಪಾಳೆಯಗಾರರ ಚರಿತದಿಂದ ಈತನು ಶಕ 1697 ಯುವ ದಲ್ಲಿ, ಎಂದರೆ 1755 ರಲ್ಲಿ, ಪಟ್ಟಕ್ಕೆ ಬಂದಂತೆ ತಿಳಿವುದರಿಂದ ಕವಿ ಯ ಕಾಲವು ಸುಮಾರು 1750 ಆಗಬಹುದು.

ಇವನ ಗ್ರಂಥ

ಮದಕೇರಿ ರಾಜೇಂದ್ರ ದಂಡಕ

ಇದರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ಕಾಮಗೇತ್ಯನ್ವಯಾಂಭೋಧಿರಾಕಾಸುಧಾಧಾಮಕಸ್ತೂರಿರಂಗೇಂದ್ರರಂಜನ ಸುತ್ರಾಮಪುತ್ರಾ...ಸದಾಶ್ರೀಮಹಾವೀರ ಮದಕೇರಿರಾಜೇಂದ್ರಚಂದ್ರಾ ||

ಚೆನ್ನಬಸವಶಿವಯೋಗಿ ಸು. 1750

ಈತನು ಆಚರಣೆಯತ್ರಿಪದಿಯನ್ನು ಬರೆದಿದ್ದಾನೆ. ಇವನು ವೀರ

ತೈವಳವಿ; ಸುಮಾರು 1750 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಅಚರಣೆಯ ತ್ರಿಪದಿ

ಪದ್ಯ 58. ಪ್ರತಿಪದ್ಯವೂ ಶಿವಯೋಗ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಜಡೆಮುಡಿಗಳ ತಾಳ್ದು । ಮಡದಿಯರ ಕಾಲಡಿಯೊಳ್ ।
ಬಿಡುಬಿಡನೆ ಹೊರಳಿ ಕಪಿಯೂಟನಾಡುವ ।
ಜಡರಿಗೆಲ್ಲಿಯದೊ ಶಿವಯೋಗ ॥
ಮುಂದೆ ಶರಣನು ಮಾಡಿ । ಹಿಂದೆ ನಿಂದಿಸುತೆ ಮನ।
ಬಂದ್ಹಂತೆ ನಕೆದು ಶಾಸ್ತ್ರವನು ವಿಮಾಲಿಪ ।
ಹಂದಿಗೆಲ್ಲಿಯದೊ ಶಿವಯೋಗ ॥
ಆಡುವುದೆಲ್ಲವಸತ್ಯ । ಮಾಡುವುದೆಲ್ಲವು ಕುಟಿಲ ।
ನೋಡುವುದೆಲ್ಲ ದುರ್ನೋಟವಿಂತಪ್ಪ ।
ಮೂಢಗೆಲ್ಲಿಯದೊ ಶಿವಯೋಗ ॥

———

ಅಪ್ರಮೇಯಶಾಸ್ತ್ರಿ , ಸು. 1750

ಈತನು ಜಯದೇವನಗೀತಗೋವಿಂದಕೆ ಶೃಂಗಾರಪ್ರಕಾಶಿಕೆ ಎಂಬ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ, ಅಪ್ಪಾಜಿಭಟ್ಟಾರಕನ ಮಗನು, ಮೆಳೂರು ಅಪ್ರಮೇಯದೇವರ ಭಕ್ತನು. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇನೆ. ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮದ್ಭಕ್ತಿವರ್ಧನವಿಮಾನಸ್ಥಿತಾರವಿಂದವಲ್ಲಿಕಾಪತೇರಪ್ರಮೇಯಸ್ವಾಮಿನಃ ಪಾದಾರವಿಂದಾರ್ಚಕೇನ ಅಪ್ಪಾಜಿಭಟ್ಟಾರಕಪುತ್ರೇಣ ಅಪ್ರಮೇಯಶಾಸ್ತ್ರಿಣಾ ವಿರಚಿತಗೀತಗೋವಿಂದಟೀಕಾಯಾಂ ಶೃಂಗಾರಪ್ರಕಾಶಿಕಾಯಾಂ.

ತರಳಚರಪತಿ ಸು. 1750

ಇವನು ಗಂಗಾಗೌರೀಸಂವಾದವನ್ನು ಬರೆದಿದ್ದಾನೆ. ಈತನು ವೀರ ಶೈವಕವಿ; ಶಿವಗಂಗೆಯ ಹಿರಿಯಸಿಂಹಾಸನದ ಶಂಗಮೇಶ್ವರನ ಕರಕಮಲಸಂಜಾತನು ಎಂದು ಹೇಳಿಕೊಂಡಿದ್ದಾನೆ ಇವನು ಸುಮಾರು 1750 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಗಂಗಾಗೌರೀಸಂವಾದ

ಇದು ಸಾಂಗತ್ಯದಲ್ಲಿ ಬರೆದಿದೆ; ಅಧ್ಯಾಯ 11, ಪದ್ಯ 1321.

———

ಅವಧೂತಶಿವಯೋಗಿ ಸು. 1750

ಈತನು ಕೈವಲ್ಯಾನ್ವಯಸಾರವನ್ನು ಬರೆದಿದ್ದಾನೆ. ಇವನು ಬಾಹ್ಮಣ ಕವಿ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಕೈವಲ್ಯಾನ್ವಯಸಾರ

ಇದು ಗದ್ಯರೂಪವಾಗಿದೆ; ಪ್ರಕರಣ 20; ಅದ್ವೈತವೇದಾಂತವನ್ನು ಬೋಧಿಸುತ್ತದೆ. ಇದಕ್ಕೆ ಆನಂದಕಲ್ಲೋಲ ಎಂಬ ಹೆಸರೂ ಉಂಟು. ಪ್ರಕರಣಗಳ ಕೊನೆಯಲ್ಲಿ—ಇತಿ ಶ್ರೀ ಕೈವಲ್ಯಾನ್ವಯಪ್ರವರ್ತಕ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪರಶಿವಪಾದಯುಗಳಕಮಲಿನೀರಾಜಹಂಸಾವಧೂತಶಿವಯೋಗೀಂದ್ರವಿರಚಿತೇ—ಎಂದಿದೆ.

———

ಬೇಟಿರಾಯ ಸು. 1750

ಈತನು ಮಾರ್ಕಂಡೇಯಪುರಾಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಇವನ ತಂದೆ ದಾಸದೇವ, ಸ್ಥಳ ತುರುಗೆರೆ (ತುರುವೇಕೆರೆ) ತುರುಗೆರೆಯ ಬೇಟೆರಾಯನ ಅಂಕಿತದಲ್ಲಿ

ತನ್ನ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು.

ಇವನ ಗ್ರಂಥ

ಮಾರ್ಕಂಡೇಯಪುರಾಣ

ಇದು ಭೂಮಿನೀಪಟ್ಟದಿಯಲ್ಲಿ ಬರೆದಿದೆ; ಸಂಧಿ 26, ಪದ್ಯ 1081; ಜ್ಯೋತಿಷಗ್ರಂಥ. ಇದರಲ್ಲಿ ಮೃಕಂಡುಮುನಿ ಮಾರ್ಕಂಡೇಯನಿಗೆ ಬೋಧಿಸಿದ ಜ್ಯೋತಿಶ್ಶಾಸ್ತ್ರವು ನಿರೂಪಿಸಿದೆ. ಇದನ್ನು ಕವಿ ತನ್ನ ಮಗನಿಗೆ ಹೇಳುತ್ತಾನೆ. ಇದರಲ್ಲಿ ಗ್ರಹಭಾವಲಕ್ಷಣ, ಜಾತಕನಿರ್ಣಯ, ಆಯುರ್ಯೋಗ, ಲಗ್ನಭಾವಫಲವೇ ಮುಂತಾದ 12 ಭಾವಫಲಗಳು, ಗ್ರಹದಶಾಫಲ ಮೊದಲಾದ ವಿಷಯಗಳು ಹೇಳಿವೆ. ಗ್ರಂಥಾವತಾರದಲ್ಲಿ ಗಣೇಶಸ್ತುತಿ ಇದೆ. ಬಳಿಕ ಕವಿ ಈಶ್ವರ, ಪಾರ್ವತಿ, ವಿಷ್ಣು, ಲಕ್ಷ್ಮಿ, ಬ್ರಹ್ಮ, ಸರಸ್ವತಿ, ಸೂರ್ಯ, ಷಣ್ಮುಖ, ವೀರೇಶ, ನಂದಿ, ದಿಕ್ಪಾಲರು, ಹರಕವಿಗಳು, ಹರಿಕವಿಗಳು ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಕಂದ ಕೇಳಾದಿತ್ಯಚಂದ್ರಮ । ರಂದದಿಂದಿರುತಿರುವ ರಾಶಿಗೆ ।
ಬಂದರಾದರೆ ರಾಹುಕೇತುಗಳೊಂದುಪಾವಕ್ಕೆ ॥
ಸಂದಿಸಲು ತಾ ಪರ್ವಕಾಲವು । ಕುಂದವೇ ಮೋಕ್ಷ ಗ್ರಹಣವೆನಿಸುವು
ದೆಂದು ಪೇಳಿದನಾಮೃಕಂಡುಮುನೀಶನೊಲವಿನಲಿ ॥
ಸೋಮನಂದನನಮಲದಶೆಯೊಳು । ಭೀಮಬಲರಾಹುವಿನ ಭುಕ್ತಿಗೆ ।
ನೇಮವೆನಿಸಿದ ಮಾಸತ್ರಿಂಶದ್ದಿವಸ ಹದಿನೆಂಟು ॥
ರಾಮಣೀಯಕಕೇಂದ್ರಕೋಣಸು । ನಾಮವಿಡಿದಿರೆ ಷಷ್ಠಸ್ವೋಚ್ಚದೊ ।
ಳಾಮಹಾಶುಭಯೋಗಕಾರಕರೊಡನೆ ಕೂಡಿರಲು ॥
ಭೂಮಿಪನ ಸನ್ಮಾನಸಂಪದ । ಕಾಮಿತಾರ್ಥದ ಸಿದ್ಧಿ ಧರ್ಮವು ।
ರಾಮಣೀಯಕಕೀರ್ತಿ ದೇವಾದಿಗಳ ದರ್ಶನವು ॥
ನೇಮನಿಷ್ಠೆಗಳವಗೆ ಪುಣ್ಯಸು । ನಾಮತೀರ್ಥಸ್ನಾನ ಹಯ.ಗಜ ।

ಕೋಮಲದ ಯಾನಾದಿಸಂಪದ ವಿವಿಧವಿಭವಗಳು ||

ಚಂದ್ರಗುಪ್ತಕವಿ ಸು. 1750

ಈತನು ಬೇತಾಳಪಂಚವಿಂಶತಿಯನ್ನು ಬರೆದಿದ್ದಾನೆ. ಇವನ ವಿಷಯವಾಗಿ ಗ್ರಂಥದಿಂದ ಏನೂ ತಿಳಿವುದಿಲ್ಲ. ಇವನು ಸುಮಾರು 1750ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಬೇತಾಳಪಂಚವಿಂಶತಿ

ಇದು ಕಂದವಚನಗಳಲ್ಲಿದೆ ಎಂಬಂಶವು

ಕಂದವಚನಂಗಳಿಂದಂ | ಕುಂದದೆಯೊಂದೊಂದು ಶ್ಲೋಕವಂ ಕಡೆಯೊಳಗಂ ।
ಸಂಧಿಸಿ ನಿರ್ಮಳವೆನಿಸಿಯೆ | ಸೌಂದರದಿಂ ಪೇಳ್ದ ಡಂದ್ರಗುಪ್ತಕವೀಂದ್ರಂ ||

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ.

ಗ್ರಂಥಾಂತ್ಯದಲ್ಲಿ ಈ ವಾಕ್ಯವಿದೆ—

ಇತಿ ಶ್ರೀಉಮಾಮಹೇಶ್ವರಸಂವಾದೇ ಡಂದ್ರಗುಪ್ತಕವಿರಚಿತವುಪ್ಪ ವಚನ ಶ್ಲೋಕಛಂದಸ್ಸಲಕ್ಷಣವುಪ್ಪ ಬೇತಾಳಪಂಚವಿಂಶತಿಕಥಾ ಸಮಾಪ್ತಾ.

ರಾಮ ಸು. 1750

ಈತನು ಪದ್ಮಾವತಿಯ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಜೈನಕವಿ. ಮೂಲಿಕೆಯ ಪುರವನಾಳ್ವ ದೊರೆಯ ಇಷ್ಟಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇವನ ಕಾಲವು ಸುಮಾರು 1750 ಆಗಿರಬಹುದು ಎಂದು ತೋರುತ್ತದೆ.

ಇವನ ಗ್ರಂಥದಲ್ಲಿ ಜಿನದತ್ತರಾಯನು ಪದ್ಮಾವತೀದೇವಿಯನ್ನು ತಂದ ಕಥೆ ಹೇಳಿದೆ. ಆರಂಭದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ.

ತಿಪ್ಪಯಾರ್ಯ ಸು. 1750

ಈತನು ಹನುಮದ್ವಿಲಾಸವೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ವಿಶ್ವಾಮಿತ್ರಗೋತ್ರದವನು; ಯಜುಶ್ಶಾಖಾಧ್ಯಾಯಿ; ಉಲುಚುಕಮ್ಮೆನಂಶದವನು. ಇವನ ಪಿತಾಮಹನು ಕಂಠೀರವಾರ್ಯ, ತಂದೆ ರಂಗ, ತಾಯಿ ಗಿರಿಯಂಬಿಕೆ, ಗುರು ಚಿಂದ್ರರಸ, ಸ್ಥಳ ನೊತನಾವರಣ (ಹೊಸಕೋಟೆ). ತನ್ನ ಗ್ರಂಥವನ್ನು ನವಸಾಲಪುರೀ (ಹೊಸಕೋಟೆ) ಖಾದ್ರಿ ನರಸಿಂಹದೇವರಿಗೆ ಅಂಕಿತವಾಡಿ ಬರೆದಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು. ಈ ಯಕ್ಷಗಾನದಲ್ಲಿ ಆಂಜನೇಯನ ಮಹಿಮೆ ವರ್ಣಿತವಾಗಿದೆ.

ಪದ್ಮರಾಜ ಸು. 1750

ಈತನು ವಿಜಯಕುಮಾರನಕಥೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಮೈಸೂರೊಳ್ ಶಾಂತಿಗುಣದಿಂ ಕೀರ್ತಿಯಾಂತ ದಾತೃತ್ವಯುತ ಶಾಂತಪಂಡಿತನು; ಗುರು ವಾದವಾದೀಶ್ವರ ವಾದಿಪಿತಾಮಹ ಅಕಲಂಕಮುನಿ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ. ಗ್ರಂಥಾವತಾರದಲ್ಲಿ ಶಾಂತಿಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ.

ವಂಜಯ್ಯ ಸು. 1750

ಇವನು ಕಪೋತವಾಕ್ಯವೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ರಾಜವಂಶಕ್ಕೆ ಸೇರಿದವನಂತೆ ಕಾಣುತ್ತಾನೆ. ಇವನ ಪರಂಪರೆ ಹೀಗೆ ಹೇಳಿದೆ—ಬಾಗಿಳಿಕೆಂಪಗೌಪಾಲ, ಮಗ ವೀರಭೂಪತಿ, ಮಗ ಅಹವವಿಜಯ ಲಿಂಗರಾಜೇಂದ್ರ, ಮಗ ಕವಿನಂಜಯ್ಯ. ಇವನು ಸುಮಾ

ರು 1750 ರಲ್ಲಿ ಇದ್ದಿರಬಹುದು. ಇವನ ಯಕ್ಷಗಾನದಲ್ಲಿ ರಾಮನು ಸುಗ್ರೀವನಿಗೆ ಹೇಳಿದ ಕಪೋತದ ಕಥೆ ವಿವರಿಸಿದೆ.

ಗಂಗ ಸು. 1750

ಈತನು ಗಿರಿಜಾಕಲ್ಯಾಣವೆಂಬ ಯಕ್ಷಗಾನವನ್ನು ಬರೆದಿದ್ದಾನೆ ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ; ಶಾಂಡಿಲ್ಯಗೋತ್ರದವನು ಕಾತ್ಯಾಯನಸೂತ್ರದವನು. ಇವನ ತಂದೆ ಗೋಪಯ, ತಾಯಿ ಪಾರ್ವತಮ್ಮ, ಸ್ಥಳ ಕಕುದದ್ರಿಪುರ (ಶಿವಗಂಗ). ತನ್ನ ಗ್ರಂಥವನ್ನು ಗಂಗೇಶನಿಗೆ (ಗಂಗಾಧರೇಶ್ವರ) ಒಪ್ಪಿಸಿದಂತೆ ಹೇಳುತ್ತಾನೆ. ಇವನ ಕಾಲವು ಸುಮಾರು 1750 ಆಗಿರಬಹುದು. ಸೂತನು ಪರೀಕ್ಷಿತನಿಗೆ ಹೇಳಿದ ಗಿರಿಜಾಕಲ್ಯಾಣದ ಕಥೆಯನ್ನು ತಾನು ಯಕ್ಷಗಾನವಾಗಿ ರಚಿಸಿದಂತೆ ಹೇಳುತ್ತಾನೆ.

ಸಾಮಿಕವಿ ಸು. 1750

ಈತನು ಬಿಳಿಯಕ್ಕಲ್ಲ ರಂಗಸ್ವಾಮಿಯ ಪಾರಿಜಾತಪ್ರಸಂಗವನ್ನು ಬರೆದಿದ್ದಾನೆ. ಇವನು ದೇವನೂರು ವಾಮನಾಚಾರ್ಯನ ಶಿಷ್ಯನು. ಈ ಗ್ರಂಥವನ್ನು ಮಾಧವನಹಳ್ಳಿ ವೆಂಕಟಯ್ಯನ ಮಗ ರಾಜಪಯ್ಯನಿಗಾಗಿ ರಚಿಸಿದಂತೆ ಹೇಳುತ್ತಾನೆ. ಇವನು ಸುಮಾರು 1750 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ಗ್ರಂಥವು ಯಕ್ಷಗಾನರೂಪವಾಗಿದೆ.

ಸಾಂಬಯ್ಯ ಸು. 1750

ಇವನು ಕರಿಯಭಂಟನಕಥೆ, ಸಾರಂಗಧರನಕಥೆ ಎಂಬ ಯಕ್ಷಗಾನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿಯೆಂದು ತೋರುತ್ತದೆ. ಇವನ ತಂದೆ ಬೊಂಬೆಯಾಟದ ಸಿದ್ದಯ್ಯ (ಸು 1725), ತಾಯಿ ಯಲ್ಲಮ್ಮ, ಅಣ್ಣ ಮೋಹನಕವಿ ಎಂಬ ಬಿರುದಾಂತ ಸಾಂಬಯ್ಯ. ಈತನ ಕಾಲವು ಸುಮಾರು 1750 ಆಗಿರಬಹುದು. ಸಾರಂಗಧರನ ಕಥೆ

ಯ ವಿಷಯದಲ್ಲಿ "ಶಂಭುಲಿಂಗನಿಗೆ ಅಂಕಿತವಾಗಿ ರತ್ನಾಂಗಿಯ ಕುವರ ಶಂಕರವರವುಳ್ಳ ಸಾರಂಗಧರನ ಕಥೆಯನು ಯಕ್ಷಗಾನನಂ ಮಾಡಿ ಹೇಳ್ವೆಂ" ಎನ್ನುತ್ತಾನೆ.

ತಿಮ್ಮರಾಜಗೌಡ ಸು. 1750

ಇವನು ಸ್ತ್ರೀವೈದ್ಯವನ್ನು ಬರೆದಿದ್ದಾನೆ; ಸುಮಾರು 1750 ರಲ್ಲಿ ಇದ್ದಿರಬಹುದು. ಇವನ ಗ್ರಂಥವು ಸಣ್ಣದು (5 ಓಲೆಗಳಿವೆ); ವಾಕ್ಯರೂಪವಾಗಿದೆ.

ಕಾಶೀರಾಮ ಸು. 1750

ಈತನು ಮಲ್ಲಿಕಾರ್ಜುನಚರಿತೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ; ಭಾರದ್ವಾಜ ಗೋತ್ರದವನು; ನಂಜರಾಮನ ಪೌತ್ರನು; ಲಕ್ಷ್ಮಣದಾಸ ಕಮಲಾಂಬೆಯರ ಪುತ್ರನು; ವಿಮಲಾರ್ಯನ ಶಿಷ್ಯನು. ಮೋಹನಕವಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು. ಇವನ ಗ್ರಂಥದಲ್ಲಿ ಕುರುಗಲ್ಲುವಾಸ ಮಲ್ಲೇಶ್ವರದೇವರ ಅಂಕಿತವಿದೆ. ಪೂರ್ವಕವಿಗಳಲ್ಲಿ ಬಾಣ, ಮಯೂರ, ಭೀಮ, ಕಾಳಿದಾಸ, ಕೆರೆಯಪದ್ಮರಸ, ಶಂಕರಾಚಾರ್ಯ ಇವರುಗಳನ್ನು ಸ್ಮರಿಸಿದ್ದಾನೆ.

ಎಚ್ಚರಿಕೆಮುಕ್ತಣ್ಣ ಸು. 1750

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1750 ರಲ್ಲಿ ಇದ್ದಿರಬಹುದು. ಇವನ ವಚನಗಳಲ್ಲಿ ಕುರಂಗೇಶ್ವರ ಎಂಬ ಅಂಕಿತವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ-

ನಾಲ್ಕು ಜಾವಕ್ಕೆ ಒಂದುಜಾವ ವ್ಯಾಪಾರಕೃಷಿಗೆ ಸಂದಿತ್ತು; ಮತ್ತೊಂದು ಜಾವ ನಿದ್ರೆ ಸ್ವಪ್ನ ಕಳವಳ ನಾನಾ ಅವಸ್ಥೆಯಲ್ಲಿ ಹೋಯಿತ್ತು; ಮತ್ತೊಂದುಜಾವ ಅಂಗನೆಯರ ಸರಸಸಲ್ಲಾಪ ತಕ್ಕೈ ಜುಂಬನ ಮೊದಲಾದ ಸಂಭೋಗಸುಖಂಗಳಲ್ಲಿ ಹೋಯಿತ್ತು; ಇನ್ನೊಂದುಜಾವವಿದೆ. ನೀವು ನೀವು ಬಂದ ಬಟ್ಟೆಯ ತಿಳಿದು ಮುಂದಣ ಅಗುಹೋಗನಱಿದು ನಿತ್ಯನೇಮವ ವಿಸ್ತರಿಸಿಕೊಂಡು ನಿಮ್ಮ ಶಿವಾರ್ಚನೆಯ ಕ್ರಿಯೆ ಪ್ರಣವದ ಪಥವನಱಿದು ಭಾವದ ಬಲಿಕೆ ವಿರಕ್ತಿಯ ಬಿಡುಗಡೆ ಸದ್ಭಕ್ತಿಯಮುಕ್ತಿ ಇಂತೀಕೃತ್ಯದ ಕಟ್ಟ ತಪ್ಪದಿರಿ. ಅರುಣೋದಯಕ್ಕೆ ಒಡಲಾಗದ ಮುನ್ನವೆ ಖಗಪಶು ಮೃಗನರಕುಲದುಲುಹಿಂಗೆ ಮುನ್ನವೆ ಧ್ಯಾನಾರೂಢರಾಗಿ ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಿ[೨].

ಹರಿದಾಸ ಸು. 1750

ಇವನು ಮೂಲಬಲರಾವಣಾಯಣ, ಸಂಕ್ಷೇಪಭಾಗವತ ಈ ಗ್ರಂಥಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ರಥೀತರಗೋತ್ರದವನು; ಆಶ್ವಲಾಯನ ಸೂತ್ರದವನು ಇವನ ಪಿತಾಮಹನು "ಧಾರಿಣಿಗೆ ಪಶ್ಚಿಮಹಿತಂಬರ । ಚಾರುಉತ್ತಮನಾಮಪೀರೂರ್ । ತೀರವಾಸದೊಳಪ್ಪ ಸದ್ವಿಪ್ರ" ಚೆನ್ನಪ್ಪ; ತಂದೆ ನಂಜವಾರ್ಯ; ತಾಯಿ ವೆಂಕಮ್ಮ; ಅಣ್ಣ "ಧರೆಯೊಳುತ್ತಮಕೋಯಮಠ್ಯ । ರಿರುವೆಸುಂಕದಣನುಭಾಗನು" ಹಿರಿಯ ಚೆನ್ನಪ್ಪಯ್ಯ; ಮನೆತನ ಕೋಳಾಲ. ವ್ಯಾಸಕೃಷ್ಣರ ವಾದಪದ್ಮಭೃಂಗ, ವ್ಯಾಸರಾಯಮಠದ ಶಿಷ್ಯ ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು.

ಇವನ ಗ್ರಂಥಗಳಲ್ಲಿ

1 ಮೂಲಬಲರಾವಣಾಯಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 13, ಪದ್ಯ 726. ಇದರಲ್ಲಿ ರಾವಣಕುಂಭಕರ್ಣರ ಮೂಲಬಲವನ್ನು ಶ್ರೀರಾಮನು ಸಂಹರಿಸಿದ ಕಥೆ ಹೇಳಿದೆ. ಸಂಧಿಗಳ ಅಂತ್ಯದಲ್ಲಿ ನರಸಿಂಹನ ಅಂಕಿತವಿದೆ.

ಗ್ರಂಥಾವತಾರದಲ್ಲಿ ರಾಮಸ್ತುತಿ ಇದೆ; ಅನಂತರ ಕವಿ ಗಣಪತಿ, ಸರಸ್ವತಿ, ಶ್ರೀರಂಗಪಟ್ಟಣದ ನಂಜುಂಡೇಶ್ವರ, ಭೀಮ, ಮಧ್ವಾಚಾರ್ಯ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಬಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ರಾವಣನ ರಣಾವಲೋಕನ

ಗಂಡುಗಲಿಯಸುರೇಂದ್ರ ಬಂದನು । ಹಿಂಡಿನಮರರ ಗಂಡ ಬಂದನು ।
ಚಂಡವಿಕ್ರಮ ಬಂದನಿದೆಯೆನೆ ಹೊಗಳುವ ಕಹಳೆಗಳು ॥
ಕಂಡರಾಗಭ್ರದಲಿ ನಿರ್ಜರ । ತಂಡ ಕಂಗೆಡುತೋಡಿದುವು ಸನು ।
ದಂಡಿಯಲಿ ರಥದೊಳಗೆ ಕುಳಿತವ ರಣವ ನೋಡಿದನು ॥

ರಾವಣನನ್ನು ಕುರಿತು ಮಂಡೋದರಿಯು ಉಕ್ತಿ

ಕರುಣವಾರಿಧಿರಾಮನಾತನ । ಚರಣನೇ ಗತಿಯೆಂದು ಪೋಗಿಯೆ ।
ಶರಣುಹೊಕ್ಕಾ ಜನಕಸುತೆ ಯನು ಕೊಟ್ಟು ವಿನಯದಲಿ ॥
ಇರುತಿರಲು ಮನ್ನಿಸುವ ನಾಕ್ಷ । ತ್ಪರಮಪುರುಷನು ವಿಷ್ಣುವಾತನ ।
ಮಾಯೆಯು ಹೊಗು ಮಾಯೆಯು ಹೊಗು ಕೃಪೆಯೊಳು ಸಲಹುವನು ರಾಮ ॥

2 ಸಂಕ್ಷೇಪ ಭಾಗವತ

ಇದೂ ಭಾಮಿನೀ ಷಟ್ಪದಿಯಲ್ಲಿ ಬರೆದಿದೆ; ಪದ್ಯ 53, "ಆತ್ಮಾರಾಮನು ಬರೆದಿರುವ ಕನ್ನಡ ಷಟ್ಪದಿಯ ಸಂಕ್ಷೇಪವನು ನಾನು ಹೇಳುವೆನು" ಎಂದು ಕವಿ ಹೇಳುತ್ತಾನೆ. ಆರಂಭದಲ್ಲಿ ವಿಷ್ಣುಸ್ತುತಿ ಇದೆ; ಬಳಿಕ ಕವಿ ಗಣೇಶ, ಸರಸ್ವತಿ, ಈಶ್ವರ, ಮಧ್ವಾಚಾರ್ಯ ಇವರುಗಳನ್ನು ಹೊಗಳಿದ್ದಾನೆ ಈ ಗ್ರಂಥದಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ—

ದಿವ್ಯಮಂಗಳವಿಗ್ರಹನ ಶುಭ । ಭವ್ಯಚರಿತನ ಭಾಗವತಜನ ।
ಸೇವ್ಯಚರಣಸರೋಜಮಹಿಮನ ಜಗವ ಸಲಹುವನ ॥
ಅವ್ಯಯನನವತಾರಮಾಯಾ । ನವ್ಯಸತಿಪತಿ ನಾರಸಿಂಹನ ।
ಕಾವ್ಯವಿದು ರಂಜಿಪುದು ಸಂಕ್ಷೇಪಾಖ್ಯಭಾಗವತ ॥

ಗುರುಸಿದ್ದಪ್ಪ ಸು. 1750

ಈತನು ಮಾದೇಶ್ವರ ಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಇವನ ತಂದೆ ಹಲಗೂರು ಅಕ್ಕಸಾಲೆ ದೇವಪಣ್ಣ, ಗುರು ವಾಟಾಳಮಠದ ಯತಿ ಬಸವಲಿಂಗ, ಸ್ಥಳ ‘ಸತ್ಯಮಂಗಲದ ಭೂಪತಿಯ ಸಿಂಹಾಸನ ಗುತ್ತಾಲತ್ತೂರ ಒತ್ತಿನಲಿ ಎಸೆವ ಮಿಣ್ಣಿ’. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ. ಪೂರ್ವ ಕವಿಗಳಲ್ಲಿ ಬಾಣ, ಉದ್ಭಟ, ಮಯೂರ, ಕಾಳಿದಾಸ, ರಾಘವಾಂಕ, ಹರೀಶ್ವರ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಮಾದೇಶ್ವರಸಾಂಗತ್ಯ.

ಸಂಧಿ 3, ಪದ್ಯ 363. ಇದರಲ್ಲಿ ಕನ್ನಡ ದೇಶದ ಕಾವೇರೀ ತೀರದಲ್ಲಿಯ ಪೊನ್ನಾಚಿ ಬೆಟ್ಟದ ಬಳಿ ಇರುವ ನಡುಮಲೆಯ ಮಾದೇಶ್ವರದೇವರ ವೈಭವವು ವರ್ಣಿತವಾಗಿದೆ. ತನ್ನ ಗಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ನಾನುಸಿರಿದ ನುಡಿ ಪಾಲು ಮಾವಿನಹಣ್ಣು | ಜೇನುಸಕ್ಕರೆ ಸವಿದಂತೆ |
ಮಾನಿನಿಯರ ಕುಡಿನೋಟದಂತೆಸೆವುದು | ಭಾನುಪ್ರಕಾಶದಂತಿಹುದು ||
ಕಸ್ತೂರಿ ಪುನಗು ಜವಾದಿಯಗಿಲುಗಂಧ | ವಿಸ್ತರಿಸುವ ಪರಿಯಂತೆ |
ಉತ್ತಮ ಸವಿನುಡಿಯಂತೆ ಈ ಕಥೆಯ ನು | ಚಿತ್ತರಿಸುವೆನಥಿಯಲಿ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ; ಒಳಿಕ ಕವಿ ಪಾರ್ವತಿ, ಗಂಗೆ, ಗಣೇಶ, ವೀರಭದ್ರ, ಸರಸ್ವತಿ, ಬಸವ, ಚೆನ್ನಬಸವ, ಶೂಲದ ಬ್ರಹ್ಮಯ್ಯನೇ ಮೊದಲಾದ ಪುರಾತನರು, ಸ್ವಗುರು ಬಸವಲಿಂಗ ಇವರುಗಳನ್ನು ಹೊಗಳಿದ್ದಾನೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಗೊಲ್ಲರು

ಕಂಬಳಿ ಕೊಡಲಿ ಕಾಲಿಗೆ ಎಕ್ಕಡವ ಮೆಟ್ಟಿ | ಸಂಭ್ರಮದಲಿ ಕೋಲುವಿಡಿದು |
ಸಂಬಳ ಮೂಟೆ ಹೊನ್ನಿನ ಜೀತಕಾಱರು | ಇಂಬಿನೊಳ್ ತುಡುವ ಕಾದಿಹರು ||

ತುರುವುಂದೆ

ಬಟ್ಟಗಡಸು ಕೆಂದ ಹುರಿಗ ಕಾರಿಯು ಬೆಳ್ಳಿ | ನೆಟ್ಟಕೊಂದಿನ ಕಾರಿ ಜಾಲೆ |
ದಿಟ್ಟಿಸಿ ನೋಡುವ ಪಸುಗಳು ಎಸೆದುವು | ಪಟ್ಟಿಯು ಸೀರೆಯುಂದದಲಿ ||

ಸ್ತ್ರೀಯರು

ತಳಿರಡಿ ನುಣ್ಪೊಡೆ ಸೆಳೆನಡು ನಳಿತೋಳು | ಕಳಸಕುಚದ ಬಾಲೆಯರು |
ಬಲಿಲುಮುಡಿಯ ಬಟ್ಟಮೊಗ ತೆಳುಗಲ್ಲದ | ನಳಿನಾಕ್ಷಿಯೆರು ನಡೆದರು ||

ಊಟ

ಗುಳ್ಳದಹಣ್ಣು ಮಾವಿನಕಾಯಿ ನಿಂಬೆಯು | ಅಲ್ಲ ಹೇರಿಳೆಯ ಹಣ್ಣುಗಳು |
ಕಲ್ಲಿಡೆ ನೂಗಳಿ ಕಲಿಲೆಯುಪ್ಪಿನಕಾಯ | ಲಿಲ್ಲದೆಯೆಡೆನೂಡಿದರು ||

ಯೋಗಾನಂದ ಸು. 1750

ಈತನು ವಿರೂಪಾಕ್ಷ ಶತಕ, ಬಸವ ಶತಕ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿಯೆಂದು ತೋರುತ್ತದೆ. ಇವನ ತಂದೆ ತರಿಮೇಲಪುರಾಧಿಪತಿ ಚೆನ್ನರಾಜ, ಅಣ್ಣ ಬಸವರಾಜ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ[1]

1 ವಿರೂಪಾಕ್ಷ ಶತಕ

ಇದರಲ್ಲಿ 103 ಕಂದಗಳಿವೆ; ಪ್ರತಿ ಕಂದವೂ "ವಿರೂಪಾಕ್ಷಲಿಂಗ ಕರುಣಾಪಾಂಗಾ" ಎಂದು ಮುಗಿಯುತ್ತದೆ, ಗ್ರಂಥವು ವೇದಾಂತಬೋಧಕವಾಗಿದೆ. ಆರಂಭದಲ್ಲಿ ವಿರೂಪಾಕ್ಷಲಿಂಗಸ್ತುತಿ ಇದೆ; ಅಂತ್ಯದಲ್ಲಿ ಈ ಗದ್ಯವಿದೆ —

ಇದು ವಿಶ್ವಸೃಷ್ಟಿಸಹಸ್ರಾಕ್ಷಾದ್ಯಖಿಲಸುಮನಶ್ಶೇಖರಾಲಂಕಾರಮಕುಟಮಣಿ ಘೃಷ್ಟಿನಿಕರಂಜಿತಚಾರುಚರಣಾಂಭೋರುಹ ಶ್ರೀಹೇಮಕೂಟಭೂಧರಪರಿವೃಢವಿರೂಪಾಕ್ಷಘೃಣಾಲಬ್ಧಾತ್ಮವಿದ್ಯಾಪ್ರವೀಣ ಮಾನಸಾಬ್ಜವಂಶೋದ್ಭವ ತರಿಮೇಲಪುರಾ

---

1 ಇವನು ತೆಲುಗಿನಲ್ಲಿ ಮಾನಸಶತಕ ಎಂಬ ಗ್ರಂಥವನ್ನೂ ಬರೆದಿದ್ದಾನೆ.

ಧಿಪತಿ ಚೆನ್ನರಾಜಗಭೋ೯ದಿತ ಬಸವರಾಜಾವರಜ ಯೋಗಾನಂದಾಹ್ವಯರಚಿತ ವಿರೂ
ಪಾಕ್ಷಶತಕಂ

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಒರೆಯುತ್ತೇವೆ--

ಸಿರಿಯೆಂಬ ಸನ್ನಿಪಾತಕ | ಸಿರಕೇಱಿದ ತೆಱಿದಿ ಬಿಟ್ಟಿತು ಶಿವತಿವ ಎನದೇ |
ಇರುತಿರುವನಾವನವನೇ | ಖರನೈ ವಿರುಪಾಕ್ಷಲಿಂಗ ಕರುಣಾಪಾಂಗಾ ||
ವನಧಿಯ ಜಲದಲಿ ನದಿಜೇ | ವನವದು ಕಲೆತಿನ್ನು ಭೇದವಡೆಯದೆಯಿಹವೋಲ |
ಮನವಿದು ನಿನ್ನಲಿ ಬೆರೆಯಲಿ | ಘನನೇ ವಿರುಪಾಕ್ಷಲಿಂಗ ಕರುಣಾಪಾಂಗಾ ||
ಭುವಿಯೊಳು ಸದ್ಗುರುಕೃಪೆಯಿಂ | ಭವವನು ಪರಿಹರಿಪ ಮಾರ್ಗ ಪಡೆಯದ
ಮನುಜರ್ |
ಶವಕಿಂದಲು ಕಡೆ ನೋಡಲ್ | ಕವಿನುತ ವಿರುಪಾಕ್ಷಲಿಂಗ ಕರುಣಾಪಾಂಗಾ ||

2 ಬಸವ ಶತಕ

ಇದರಲ್ಲಿ 110 ಪದಗಳಿವೆ; ಪ್ರತಿಪದವೂ ,,ಪರಮಗುರುವೆ ಸಲಹು ಬಸವ ಪ್ರಭುವೇ" ಎಂದು ಮುಗಿಯುತ್ತದೆ. ಗ್ರಂಥವು ಗುರುಶಿಷ್ಯ ಸಂವಾದರೂಪವಾಗಿ ವೇದಾಂತವನ್ನು ಬೋಧಿಸುತ್ತದೆ. ಆರಂಭದಲ್ಲಿ ಶಿವನ ಆಜ್ಞೆಯಿಂದ ಭೂಮಿಯಲ್ಲಿ ಅವತರಿಸಿದ ಬಸವನ ಸ್ತುತಿ ಇದೆ ಇದರಿಂದ ಬಂದೆರಡು ಪದಗಳನ್ನು ಉದಾಹರಿಸುತ್ತೇವೆ—

ಉರ್ವಿಯಲ್ಲಿ ಜನಿಸಿ ಉತ್ತಮರನು ಸೇರಿ | ಸತ್ಕಥೆಗಳ ಕೇಳಿ ಸಾಧುಗಳಲಿ |
ಭಕ್ತಿಯಿಶದೆ ನಿಮ್ಮಪದಕೆ ಬಾಹಿರನಾದೆ|ಪರಮಗುರುವೆ ಸಲಹು ಬಸವಪ್ರಭುವೇ||
ಬಲವು ಇದ್ದು ತನಗೆ ಪರರು ಮಾಡುವ ಕ್ರೋಧ | ಗಳನು ಸೈರಿಸುವುದೇ ಕಂದ
ಇದನು |
ವರತಿತಿಕ್ಷೆಯೆಂದು ಒರೆವರಾರ್ಯರು ಎಂಬ|ಪರಮಗುರುವೆ ಸಲಹು ಬಸವಪ್ರಭುವೇ||

ನಿಶ್ಚಿಂತಾತ್ಮ ಸು. 1750

ಇವನು ವೀರಭದ್ರಲೀಲಾವಿಜಯವನ್ನು ಬರೆದಿದ್ದಾನೆ. ಈತನು ವೀರಶೈವಕವಿ. "ವೀರಶೈವದ ತಿರುಳ ಗುಣದ ಸಂಪನ್ನ, ಮಹಾಯತೀ

ಶ್ವರ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ವೀರಭದ್ರಲೀಲಾವಿಜಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 9, ಪದ್ಯ 800. ದಧೀಚಿಮುನಿ ಸೂತನಿಗೆ ಲಕ್ಷಗ್ರಂಥವಾಗಿ ಹೇಳಿದುದನ್ನು ಸಂಗ್ರಹಿಸಿ ಕವಿ ಕನ್ನಡದಲ್ಲಿ ಬರೆದಂತೆ ಹೇಳುತ್ತಾನೆ. ಆರಂಭದಲ್ಲಿ ಶಿವ ಸ್ತುತಿ ಇದೆ. ಬಳಿಕ ಕವಿ ವೀರಭದ್ರ, ಪಾರ್ವತಿ ಇವರುಗಳನ್ನು ಹೊಗಳಿದ್ದಾನೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಶ್ರೀ ಸೋಮೇಶ್ವರಪಾದಾರವಿಂದಮಧುಮತ್ತ ಮಧುಕರಾಯಮಾಣ ಮಹಾಯತೀಶ್ವರ ನಿಷ್ಕಿಂಕಾತ್ಮ ವಿರಚಿತ ವೀರಭದ್ರವಿಜಯಂ.

ಈ ಗ್ರಂಥದಿಂದ ಇಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ವೀರಭದ್ರ

ವೀರತೆಯ ಪೊಗಲುವಡೆ ರುದ್ರನೆ | ಸಾರಿಯಾಗಿಯೆ ಪೇಳ್ವರಲ್ಲದೆ |
ವೀರಭದ್ರನ ಸಕಲಭೀಷಣರೌದ್ರದುನ್ನತಿಗೆ ||
ಆರ ಪ್ರತಿಯಿಡಬಹುದು ಜಗದೊಳು | ವೀರನಪ್ರತಿವೀರಭದ್ರಗೆ |
ವೀರಭದ್ರನೆ ಸರಿಯುದಲ್ಲದೆ ಬೇಱೆ ಕಾಣೆಂದ ||

ವೀರಭದ್ರನ ಖಡ್ಗ

ಸಿಡಿಲ ಶಿಕ್ಷೆಯ ಕೊಟ್ಟು ಕಡೆಯಲಿ | ಪಿಡಿದು ಕಾಳಾಹಿಯ ಪಡೆಯೆಮೇ |
ಲಿಡಿದು ಯನುದಂಡದಲಿ ಘಟ್ಟಿಸಿ ವಿಷದ ನೀರೂಡಿ ||
ಪಿಡಿದು ರವಿಮಂಡಲದ ಸಾಣೆಯಿ | ಕ್ಕಿಸಿದನು ಈ ಕಾಲಾಗ್ನಿರುದ್ರಗೆ |
ಪಿಡಿಯೆ ಕೊಟ್ಟನೊ ಎಂಬವೊಲು ಮೆಱೆದುದು ವೀರಖಡ್ಗ ||

ನಿರಂಜನಾರ್ಯ ಸು. 1750

ಇವನು ನಂಜುಂಡಶತಕ, ನಿಷ್ಕಾಮವಚನ ಇವುಗಳನ್ನು ಬರೆದಿದ್ದಾನೆ. ಗಗನಾರ್ಯರ ತತ್ವಗಳು ಎಂಬ ಹಾಡುಗಳನ್ನೂ ಇವನೇ ಬರೆದಿರಬಹುದು. ಈತನು ಬ್ರಾಹ್ಮಣ ಕವಿಯೆಂದು ತೋರುತ್ತದೆ. ಇವನ ಗುರು ಗಗನಾನಂದ. ಕವಿಯ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ

1 ನಂಜುಂಡಶತಕ

ಇದು ಕಂದದಲ್ಲಿ ಬರೆದಿದೆ. ಪ್ರತಿ ಕಂದವೂ "ಗುರುನಂಜುಂಡಾ" ಎಂದು ಮುಗಿಯುತ್ತದೆ. ಇದಕ್ಕೆ ನೀತಿಶಾಸ್ತ್ರ ಎಂಬ ಹೆಸರೂ ಉಂಟು. ಅಂತ್ಯದಲ್ಲಿ ಈ ಗದ್ಯವಿದೆ—

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಗಗನಾನಂದಗುರುವರ್ಯಚರಣಾರವಿಂದಮಕರಂದಲುಬ್ಧ ಭೃಂಗಾಯಮಾನ ನಿರಂಜನವಿರಚಿತಮಪ್ಪ ನೀತಿಶಾಸ್ತ್ರವೆಂಬ ನಂಜುಂಡಶತಕಂ.

ಈ ಗ್ರಂಥದಿಂದ ಬಂದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ:

ಪಶ್ಚಿಮದಿ ರವಿಯು ಮೂಡಲಿ | ಕಿಚ್ಚಿನ ಉರಿಯೊಳಗೆ ಕಮಲವರಳಲಿ ಮತ್ತಂ |
ಸಚ್ಚರಿತ ತಪ್ಪಿ ನುಡಿಯನು | ನಿಚ್ಚಲುಮಿದು ಸತ್ಯ ಕಂಡ್ಯ ಗುರುನಂಜುಂಡಾ ||

ಎರಿಯೆ ನೀರನು ಕುಡಿಯಲು | ಮಾರಿಯೆ ಮನೆ ಮನೆಯೆ ಮುಱಿಯೆ ಕಾಡಿನ ಅನಲಂ ||
ಭೋರೆಂದು ಸುತ್ತಿ ಬೀಯಲು | ಪಾರಿಪರಾರಿಲ್ಲ ಕಂಡ್ಯ ಗುರುನಂಜುಂಡಾ ||

2 ನಿಷ್ಕಾಮವಚನ

ಇದರಲ್ಲಿ 129 ಹಾಡುಗಳಿವೆ.

3 ಗಗನಾರ್ಯರ ತತ್ವಗಳು.

ಇದರಲ್ಲಿ ವೇದಾಂತಬೋಧಕವಾದ ಹಾಡುಗಳಿವೆ. ಒಂದೊಂದರಲ್ಲಿಯೂ ಗಗನಾರ್ಯ ಎಂಬ ಅಂಕಿತವು ಬರುತ್ತದೆ. ಕೆಲವು ಹಾಡು

ಗಳು ಗಗನಾರ್ಯನ ಸ್ತುತಿರೂಪವಾಗಿರುವುದರಿಂದ ಈತನ ಶಿಷ್ಯನಾದ ನಿರಂಜನಾರ್ಯನೇ ಈ ಹಾಡುಗಳನ್ನು ಬರೆದಿರಬೇಕೆಂದು ತೋರುತ್ತದೆ. ಒಂದು ಹಾಡನ್ನು ಉದಾಹರಿಸುತ್ತೇವೆ —

ಪಲ್ಲವಿ|| ಒಹುಕಷ್ಟಪಟ್ಟೆ ನಾ ಭವದಿ | ಸಾಕಿನ್ನಹಹ ನಾನೈಕ್ಯವಾಗುವೆ ನಿಮ್ಮಪದದಿ||

ಹಲವು ಜನ್ಮಗಳಲ್ಲಿ ತಂದು ಹಿಂದೆ ! ಹಲವು ದುಷ್ಕರ್ಮಫಲದಿಂದೆ ನಾನೊಂದು|
ಫಲಕಾಮತೃಷ್ಣೆಯಿಂ ಬೆಂದು | ಹಲವು ಕೆಲಕಾಲ ಸ್ವರ್ಗಮರ್ತ್ಯದೊಳಿಟ್ಟು
ದಂದು ||1||

ಕ್ಲೇಶಪಂಜಕದಿ ಬಿಳ್ಳಾಗಿ | ಆಷ್ಟಪಾಶದ ಲತೆಯು ಬಂಧನಕೊಳಗಾಗಿ |
ಈಷಣತ್ರಯದಾಸೆಗಾಗಿ | ಮೂಱುವಾಸನೆಗಳಲಿ ತೊಡಕಿದೆನಾಗಿ ||2||

ಒಲ್ಲೆನಾನಿನ್ನು ಜನ್ಮಗಳ | ಒಲ್ಲೆನೊಲ್ಲೆನಾನಿಹಪರಭೋಗಸೌಖ್ಯಗಳ |
ಒಲ್ಲೆನಾ ನಾನಾವಿಷಯಗಳ ಎನ್ನ | ಸೊಲ್ಲನಾಲಿಸೊ ಗಗನಾರ್ಯ ಸುಶೀಲ ||3||

? ನೈರಕ್ಷರಸುಕೃಷ್ಣ ಸು. 1750

ಇವನು ಭಗವದ್ಗೀತೆಯನ್ನು ಬರೆದಿದ್ದಾನೆ. ಈತನು ಮಾಧ್ವ ಕವಿ. ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಪ್ರತಿ ಸಂಧಿಯ ಕೊನೆಯಲ್ಲಿಯೂ ಬರುವ —

ಈಮಹೀವಂಡಲದಿ ದಿವಿಜೋ | ದ್ದಾಮ ಯಾದವಕೃಷ್ಣಪಾರ್ಥರ |
ಪ್ರೇಮಸಂವಾದಾಖ್ಯಗೀತಾಶಾಸನಾರ್ಥವನು ||
ಭೀಮ ತನ್ನರಮನೆಯ ಬಾಣಸಿ | ನಾನು ನೈರಕ್ಷರಸುಕುಕ್ಷಿಗೆ |
ನೇಮದಿಂದೊರೆದಿದ್ದ ಗುರು ಶ್ರೀವಾಸವಿಟ್ಠಲನಾ ||

ಎಂಬ ಪದ್ಯದಿಂದ ಕವಿಯು ಹೆಸರು ಮೇಲೆ ಕೊಟ್ಟಿರುವಂತೆ ಇರಬಹುದೋ ಎಂಬ ಊಹೆಗೆ ಅವಕಾಶವಿದೆ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಭಗವದ್ಗೀತೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 17, ಪದ್ಯ 629. ಭಗವದ್ಗೀತೆಯ ಪ್ರತಿ ಶ್ಲೋಕವನ್ನೂ ಬರೆದು ಅದರಡಿಯಲ್ಲಿ ಶ್ಲೋಕಕ್ಕೆ ಒಂದರಂತೆಯೂ, ಕೆಲವ್ರಕಡೆ ಎರಡು, ಮೂರು, ನಾಲ್ಕು ಈರೀತಿಯಾಗಿಯೂ ಕನ್ನಡಷಟ್ಪದಿಗಳನ್ನು ಬರೆದಿದ್ದಾನೆ. "ಭೀಮಹನುಮನೆ ಮಧ್ವನಾಮದ । ಲೀಮಹಿಯೊಳವತರಿಸಿ ಸುಜನ| ಪ್ರೇಮಿ ಗೀತಾಭಾಷ್ಯ ತಾತ್ಪರ್ಯವನು ವಿರಚಿಸಿದ ॥ "ಎಂಬುದರಿಂದ ಮಧ್ವಭಾಷ್ಯವನ್ನನುಸರಿಸಿ ಕವಿ ಗೀತಾರ್ಥವನ್ನು ವಿವರಿಸಿರುವಂತೆ ತಿಳಿಯುತ್ತದೆ. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿಯಿದೆ.

ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಕೊಡಲಿಬೇಹುದು ದೇಶಕಾಲಗ । ಳಿಡೆಯಲಿತು ಸತ್ಪಾತ್ರರುಗಳಲಿ ।
ತಡವ ಮಾಡದೆ ದಾನಗಳ । ನೆಂದಾವವಸ್ತುವನು ॥
ಋಡಿತೆಯಲಿಯುಪಕಾರವೆಣಿಸದೆ । ಸಡಗರದಲಿತರರಿಗೆ ನೀಡಲು ।
ಪೊಡವಿಯೊಳು ತದ್ದಾನ ಸಾತ್ವಿಕವೆನಿಸಿಕೊಂಬುದೆಲೈ ॥[1]

? ವಿಟ್ಠಲ 1751

ಈತನು ವರದವಿಟ್ಠಲದಾವಮಾಯಣವನ್ನು ಬರೆದಿದ್ದಾನೆ. ಗ್ರಂಥದಲ್ಲಿ ಕವಿಯ ಹೆಸರು ಹೇಳಿಲ್ಲ. ಆದರೂ ಕೆಲವು ಸಂದರ್ಭಗಳಿಂದ ಅವನ ಹೆಸರು ವರದವಿಟ್ಠಲ ಅಥವಾ ವಿಟ್ಠಲ ಎಂದಿರಬಹುದೆಂದು ತೋರುತ್ತದೆ. ಇವನು ಬ್ರಾಹ್ಮಣಕವಿ. "ವಾಲಗಳ್ಳಿಯ ವರದವಿಟ್ಠಲ ಪಾಲಿಸುಗೆ ಮತಿಯ" ಎಂದು ವಾಲಗಳ್ಳಿಯ ದೇವರನ್ನು ಸ್ತುತಿಸುವುದರಿಂದ

---

1. ದಾತವ್ಯಮಿತಿ ಯದ್ದಾನಂ ದೀಯತೇ�ऽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ । ತದ್ದಾನಂ ಸಾತ್ವಿಕಂ ಸ್ಮೃತಂ ॥

ಕವಿ ಆವೂರಿನವನಾಗಿರಬಹುದು. ಈ ಗ್ರಂಥವನ್ನು ಶಕ 1674ನೆಯ ಭಾವ ವರ್ಷದಲ್ಲಿ-ಎಂದರೆ 1751 ರಲ್ಲಿ, ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

ವರದವಿಟ್ಠಲ ರಾಮಾಯಣ

ಇದು ಭೂಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 56, ಪದ್ಯ 3382. ಇದರಲ್ಲಿ ರಾಮಾಯಣಕಥೆ ಬಂದು ವಿಫವಾಗಿ ಹೇಳಿದೆ.

ಕಥಾಸಾರ—ಕೋಸಲದೇಶದ ಕುಶಲನೃಪನ ಮಗಳನ್ನು ದಶರಥನಿಗೆ ನಿಶ್ಚಯಿಸಿರಲು, ರಾವಣನು ಅವಳನ್ನು ಅಪಹರಿಸಿ ಸಮುದ್ರದಲ್ಲಿ ಇಟ್ಟಿದ್ದನು. ಆದರೂ ದೈವಯೋಗದಿಂದ ದಶರಥನಿಗೂ ಅವಳಿಗೂ ಸಮಾಗಮವಾಗಿ ಮದುವೆಯಾಯ್ತು. ರಾವಣನ ಮಗನಾದ ಮೂಲಕಾಸುರನು ನಾರದನಿಂದ ಚೋದಿತನಾಗಿ ವಿಭೀಷಣನನ್ನು ಜಯಿಸಿ ಅಯೋಧ್ಯೆಗೆ ಹೋಗಿ ರಾಮಲಕ್ಷ್ಮಣರನ್ನೂ ಜಯಿಸಿ ರಾಮಪುತ್ರನಾದ ಕುಶನಿಂದ ಸಂಹರಿಸಲ್ಪಟ್ಟನು.

ಗ್ರಂಥಾವತಾರದಲ್ಲಿ ವರದವಿಟ್ಠಲಸ್ತುತಿ ಇದೆ. ಬಳಿಕ ಕವಿ ಮಧುಕೇಶ್ವರ, ದುರ್ಗಿ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸೀತಾವಿಯೋಗ

ಅಳಿವು ತಲೆಕೆಳಗಾಯ್ತು ಧೈರ್ಯದ । ಹೊಳಿ'ಗೆ ತಪ್ಪಿತು ಕರಣ ಕದಡಿತು ।
ತೊಳಲಿದ ಮತಿ ಗತವಾಯ್ತು ಮಾಯಾಪಾಶ ಬಿಗುಹೇಱಿ' ॥
ಮುಳಿಗಿದನು ಎಗೆ ತನ್ನ ಮಱೆತನು|ಹೊಳಿ'ಗೆ ಬಲಿದುದು ಮೂರ್ಛೆಯೋಗದ
ಲಜೆಯದಿರ್ದನು ರಾಮ ಮಾನವರಳವೆ ವಿಧಿವಿಹಿತ ॥

ಅಶೋಕವನಭಂಗ

ಹಿರಿಯರನು ಕರೆವಂತೆ ಬನ್ನಿಯ । ನರೆಯ ಹೊತ್ತವರಂತೆ ಮುತ್ತುವ ।
ಹರನ ವಾಹನದಂತೆ ನಂದಿಯ ಮುರನ ಕಪಿ ಕಿತ್ತ॥
ಶರಣಿಯರ ಕಿವಿಯಂತೆ ಹಾಲೆಯ । ಹರಿಯ ಹಣೆಯುಂತೆಸೆವ ತಿಲಕದ ।
ಕರ ಬಡವನೆನಿಸಿರ್ಪ ತಾಳಿ'ಯ ಮರನ ಕಪಿ ಕಿತ್ತ॥

ರಾಮಯುದ್ಧ

ನಡುಗಿ ಹಿವದಲಿ ಮಿಂದು ಪಾವಕ | ನೊಡಲ ತುಂಬಿಸಿ ಜಪತಪಂಗಳ |
ಝಡಿತೆಯಲಿ ಬೇಸತ್ತು ಸ್ವರ್ಗದ ಸತಿಯರಂ? ಸರವಾ ||
ಹಡೆಯಲರಿಯರು ಜಪತಪಂಗಳ | ತೊಡರು ಹೊದ್ದದ ಪಾಪಿದೈತ್ಯರು |
ಮಡಿದು ಸ್ವರ್ಗವ ಸೂಳೆಗೊಂಡರು ರಾಮಬಾಣದಲಿ ||

ಊಟ

ಶಾರವೆಂಬುವಿರಂತೆ ಧರಳದ | ನೀರುಸೋಕದ ತನಿಯ ನೊಸರನು |
ವಾರಿಜಾಪ್ಸಿಯರೈದೆ ಬಡಿಸಿತು ಕಣ್ಣ ಕೋಪೈಸೆ ||
ಚಾರುಮೊಣಸಿನಕರೆಯ ಸತಿಯರು | ಕಾರಫಲಗಳ ಮೂಡಲಂಗಳ |
ಕಾರವಲ್ಲಿಯ ನೆಲ್ಲಿಹೇರೀಳೆಗಳ ಬಡಿಸಿದರು ||

ವಿಷ್ಣುಸ್ತುತಿ

ಹರಿಯು ನೇದ[illegible] ಹುಯೊಳಿರ್ದನ | ಹರಿಯು ಜರಣದಿ ಮೆಟ್ಟಿ ಬಿಟ್ಟನ |
ಹರಿಯು ಕೊಂದನ ಹರಿಯು ಕಾಯ್ದನ ಹರಿಯ ಕಟ್ಟಿದನ ||
ಹರಿಯು ಮಗಳನು ಕೂಡಿದಾತನ | ಹರಿಯನೇಲೊಲಿಗಿರ್ಪ ದೇವನ |
ಜರಣಕೆಲಿಗುವೆ ವರದವಿಟ್ಠಲ ಸಲಹುಗನವರತ ||
ಮೃಗವ ಧರಿಸಿಹ ಹಗೆಯು ವೈರಿಯು | ಪೆಗಲಮೇಲ ಸಂಜರಿಸುತಿರ್ಪನ |
ಮಗಗೆ ಮುನಿದನ ಪುರವ ನೆಗಹಿದನನುಜ ಮಃ[illegible]ವೊಗಲು ||
ಬಗೆಯದವನನು ಕೊಲಲು ಬಿಡಿಸಿದ | ನೊಗುಮಿಗೆಯ ಪದವಿಗಳನಿತ್ತಿಹ |
ನಗಲದೆನ್ನನು ವರದವಿಟ್ಠಲ ಸಲಹುಗನವರತ ||

ಶಾಂತಿಕೀರ್ತಿ. 1755

ಇವನು ದೇವಸೇನನ ಆರಾಧನಾಸಾರಕ್ಕೆ ಟೀಕೆಯನ್ನು ಬರದಿದ್ದಾನೆ. ಈತನು ಜೈನಕವಿ. ತನ್ನ ಟೀಕೆಯನ್ನು ಶಕ 1677ರಲ್ಲಿ, ಎಂದರೆ 1755 ರಲ್ಲಿ ಬರೆದಂತೆ ಹೇಳುತ್ತಾನೆ.

ವರಾಹತಿಮ್ಮಪ್ಪ. 1759

ಈ ಅಂಕಿತವುಳ್ಳ ಅನೇಕ ಕೀರ್ತನೆಗಳು ದೊರೆಯುತ್ತವೆ. ಇದೇ ಕವಿಯ ಹೆಸರಾಗಿರಬಹುದು. ಈತನು ಮಾಧ್ವಕವಿ. ಇವನ ಒಂದು ಕೀರ್ತನೆಯಲ್ಲಿ-ದೇಶವು ನವಾಬದೇವನ ಸ್ವಾಧೀನವಾಯಿತು, ಶಿವಭಕ್ತರು ವೇಣುಪುರದಿಂದ ಓಡಿದರು-- ಎಂದು ಹೇಳಿ ಪ್ರಮಾಥಿವರ್ಷವನ್ನೂ ಹೇಳಿರುವುದರಿಂದ ಈ ನವಾಬನು ಹೈದರಾಗಿರಬೇಕು, ಪ್ರಮಾಥಿವರ್ಷವು ಕ್ರಿಸ್ತಶಕ 1759 ಆಗಿರಬೇಕು ಎಂದು ಮೆ॥ ಕಿಟ್ಟಲ್ ಬರೆದಿದ್ದಾರೆ[1]. ವೇಣುಪುರದ (ಬಿದನೂರು) ಅರಸರ ರಾಜ್ಯವು 1763ರಲ್ಲಿ ಕೊನೆಗಂಡಿತು. ಆದರೆ ಈ ಕೀರ್ತನೆಯಲ್ಲಿ ಒಬ್ಬ ವಿಬುಧೇಂದ್ರ ಯತಿಯ ಹೆಸರೂ ಹೇಳಿದೆ. ಈ ಹೆಸರಿನ ಒಬ್ಬ ಗುರು ಸುಮಾರು 1500ರಲ್ಲಿ ನಂಜನಗೂಡು ರಾಘವೇಂದ್ರ ಸ್ವಾಮಿ ಮಠವನ್ನು ಸ್ಥಾಪಿಸಿದಂತೆ ತಿಳಿಯುತ್ತದೆ. ಕವಿ ಹೇಳುವ ಗುರು ಈತನಲ್ಲವೆಂದು ತೋರುತ್ತದೆ. ಈ ಕವಿಯು ಬಾದು ಕೀರ್ತನೆಯನ್ನು ತೆಗೆದು ಬರೆಯುತ್ತೇವೆ--

ರಾಗ ತೋಡಿ--ರೂಪಕತಾಳ

ಪಲ್ಲವಿ॥ ಒಲ್ಲದೊಲು ಸಲ್ಲದೈ ಬಿಲ್ಲ ಮಾತುಗಳು |
ಸ್ಥಿರವಾಯುಷ್ಕೀರ್ತಿಯೆಲ್ಲರೊಳು ಕೇಳಿ ||

ಅರಸು ಸಣ್ಣವನೆಂದು ಸರಸವಾಡಲು ಸಲ್ಲ | ಕರಸಿ ಕೇಳದ ಮಾತನಾಡಸಲ್ಲ |
ಪರಸತಿಯ ಮನೆಯೊಳಗೆ ಇರಿಸಿಕೊಂಡಿರಸಲ್ಲ | ಬೆರಸಿ ಬಹ ಪಾತಕವನಳಿಸು
ವರೆಸಲ್ಲ ||1||

ಹಗಲುಗಳ್ಳನ ಕೈಯ ಜಗಳವಾಡಲು ಸಲ್ಲ|ಹಗೆಯೊಡನೆ ಸ್ನೇಹವನು ಮಾಡಸಲ್ಲ|
ಜಗಳಗಂಟಿಕ್ಕುವನ ಬೊಗಸೆಯೊಳಗೆ ನಗೆಯಿಲ್ಲ | ಅಗಲಿಪೋಗುವೆನೆಂಬ ಮಗನ
ಸೊಗಸಿಲ್ಲ ||2||

---

1. *Nagavarma's Prosody*, Introduction, 71.

ಹರಿಯು ಮುನಿದರೆ ಮಾ ಱಯೊಳಿರಿಸಿಕೊಂಬವರಿಲ್ಲ । ಹರಿಯೊಲಿದ ನರನೊಳಗೆ
ಗೆಲುವ ಪಥಿಯಿಲ್ಲ
ಸಿರಿಯರಸ ವರಹತಿಮ್ಮಪ್ಪನಿರವನು ಬಲ್ಲ । ನರನು ಹರಿದೂಷಕರ ಸರಿಯೊಳಗೆ ।
ನಿಲ್ಲ ॥3॥

ವಿಠಲದಾಸ. ಸು. 1760

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಅಭಿನವಪುರಂದರದಾಸ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1760 ಆಗಿರಬಹುದು.

ಸುರಾಲ. 1761

ಈತನು ಪದ್ಮಾವತೀಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಈ ಗ್ರಂಥವನ್ನು ಪುತ್ತಿಕಾಪುರದ ಚಂದ್ರಶೇಖರ ಚಿಕ್ಕ ರಾಯಬಾಟನ ರಾಣಿವಾಸದ ಚೆನ್ನಮ್ಮದೇವಿಯ ಇಷ್ಟಾನುಸಾರವಾಗಿ 1761 ರಲ್ಲಿ ಬರೆದಂತೆ ಹೇಳುತ್ತಾನೆ ಎಂದು ಮೈ॥ ರೈಸ್ ಬರೆದಿದ್ದಾರೆ.

ಇವನ ಗ್ರಂಥ

ಪದ್ಮಾವತೀಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 12, ಪದ್ಯ 1671. ಇದರಲ್ಲಿ ಪದ್ಮಾವತಿಯೆಂಬ ಯಕ್ಷಿಯ ಕಥೆ ಹೇಳಿದೆ.

ಶಂಕರಕವಿ. 1763

ಈತನು ಚೋಳಬಸವಚರಿತ್ರೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಕೋಳೂರರಾಮೇಶ್ವರನ ಅನುಗ್ರಹದಿಂದ ಈ ಗ್ರಂಥವನ್ನು ಬರೆದಂತೆ ಹೇಳುವುದರಿಂದ ಇವನ ಸ್ಥಳವು ಕೋಳೂರಾಗಿರಬಹುದು ಎಂದು ತೋರುತ್ತದೆ. ಈ ಗ್ರಂಥವನ್ನು ಶಕ 1685 ನೆಯ

ಸ್ವಭಾವವಿನಲ್ಲಿ--ಎಂದರೆ 1763ರಲ್ಲಿ-ರಚಿಸಿದಂತೆ ಹೇಳುತ್ತಾನೆ. ಪ್ರಭು ಲಿಂಗಲೀಲೆಯನ್ನು ಬರೆದ ಚಾಮರಸನ ವಿಷಯವಾಗಿಯೂ ಭಾರತವನ್ನು ಬರೆದ ಕುಮಾರವ್ಯಾಸನ ವಿಷಯವಾಗಿಯೂ ಕವಿ ಕೆಲವು ಹೊಸ ಅಂಕಗಳನ್ನು ಹೇಳಿದ್ದಾನೆ ಇವುಗಳನ್ನು ಇವನ ಗ್ರಂಥವಿಮರ್ಶನಾವ ಸರದಲ್ಲಿ ವಿವರಿಸುತ್ತೇವೆ.

ಪೂರ್ವಕವಿಗಳಲ್ಲಿ ಕಾಳಿದಾಸ, ಬಾಣ, ಮಯೂರ, ಭೋಜ, ಪಂಚ್ಚರಿಕೆಸೋವ, ಹರಿಯರಸ, ಚಾವರಸ, ರಾಘವ, ಕೆರೆಯಪದ್ಮರಸ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಚೆನ್ನಬಸವಚರಿತ್ರೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 13, ಪದ್ಯ 755. ಇದರಲ್ಲಿ ವಾಂಡವ್ಯಪುರದ ದೊರೆಯಾದ ಮಹಾದೇವನು ಕಾವಲಲ್ಲಿ ಇಟ್ಟಿದ್ದ 6000 ಜಂಗಮರನ್ನು ಬಸವನು ವೈಶ್ಯವೇಷದಿಂದ ಹೋಗಿ ಕದ್ದು ಹಸುಬೆಯಲ್ಲಿ ತುಂಬಿಕೊಂಡು ಬಂದ ಕಥೆ ಹೇಳಿದೆ. ಈ ಕಥೆಯನ್ನು ಮೊದಲು ಹಂಪೆಯ ಹರಿಹರಶಿವಾಚಾರ್ಯನು ಚಾವರಸನಿಗೆ ಹೇಳಿದುದಾಗಿ ಕವಿ ತಿಳಿಸುತ್ತಾನೆ. ಚಾವರಸನ ಕಥೆಯೂ ಸ್ವಲ್ಪವು ಟ್ಟಿಗೆ ಈ ಗ್ರಂಥದಲ್ಲಿ ಉಕ್ತವಾಗಿದೆ.

ಚಾವರಸನು ಹರಿಹರನನ್ನು ಕುರಿತು—ನಾನು ಹುಟ್ಟಿದ ಊರು ಗದಗು; ನನ್ನ ತಂಗಿಯನ್ನು ಕುಮಾರವ್ಯಾಸನಿಗೆ ಕೊಟ್ಟಿದೆ. ನಮ್ಮಿಬ್ಬರನ್ನೂ ದೇವರಾಯನು ಕರೆಸಿ ಭಾರತವನ್ನು ಕನ್ನಡಿಸು ಎನಲು ನಾನು ಪೂರ್ವಾರ್ಧವನ್ನೂ ಅವನು ಉತ್ತರಾರ್ಧವನ್ನೂ ಮಾಡಿದೆವು. ವಿದ್ವಾಂಸರು ಪರೀಕ್ಷಿಸುತ್ತಿರಲು ನನ್ನ ಪುಸ್ತಕವನ್ನು ಹಿಸುಕಿದೆನು. ರುಧಿರ ಕರೆಯಿತು ; ಈ ಭಾಗವನ್ನು ಮೆಚ್ಚಿ ಕುಮಾರವ್ಯಾಸನ ಭಾಗವನ್ನು ವಿಸ್ವಾರಗೈದರು ಅವನು ಖತಿಗೊಂಡು ತನಗೆ ದೊರೆಯಿಂದ ಮನ್ನಣೆಯಾಗುವುದಿಲ್ಲ ಕಾಶಿಗೆ ಹೊರಟು ಹೋಗುವೆನು ಎಂದು ಹೆಂಡತಿಗೆ ಹೇಳಲು ಅವಳು ಹೆದರಿ ಅಣ್ಣನಮನೆಗೆ ಹೋಗಿ ಪೂರ್ವಭಾಗದ ಪುಸ್ತಕವನ್ನು ಒಯ್ದು ದಹಿಸಿ ಗಂಡನನ್ನು ಸಮಾಧಾನಪಡಿಸಿದಳು.

ಈ ದುಃಖಕ್ಕಾಗಿ ನಾನು ಎಲ್ಲವನ್ನೂ ತ್ಯಜಿಸಿ ಯತಿಯಾಗಿ ಕ್ಷೇತ್ರಯಾತ್ರೆಮಾಡಿಕೊಂಡು ಇಲ್ಲಿಗೆ ಬಂದೆನು; ಉಪದೇಶವನ್ನು ಕೊಟ್ಟು ಕಾಪಾಡು–ಎಂದನು. ಹರಿಹರನು ನರ ಸ್ತುತಿಮಾಡಿದೆ, ಇದು ದೋಷ; ಶಿವಶರಣರ ಸ್ತುತಿಸು ಎನಲು, ನನಗೆ ಅವರ ಮಹಿಮೆ ತಿಳಿಯದು ಎನಲು, ಜೋರಬಸವನ ಮಹಿಮೆಯನ್ನು ರಾಘವಭೀಮಲಕ್ಕಣಾಮಾತ್ಯರುಗಳ ಇದಿರಿಗೆ ಹೇಳುತ್ತಾನೆ. ಚಾಮರಸನು ಪ್ರಭುಲಿಂಗಲೀಲೆಯನ್ನು ಬರೆದು ದೇವರಾಯನ ಸಭೆಯಲ್ಲಿ ಓದಲು ವಿದ್ವಾಂಸರೆಲ್ಲಾ ಮೆಚ್ಚಿದರು; ದೊರೆ ಆನೆಯಮೇಲೆ ನೆರೆವಣಿಗೆ ಮಾಡಿಸಿದನು. ಭಾರತವನ್ನು ಸಂಪೂರ್ಣಮಾಡಿದ ಕುಮಾರವ್ಯಾಸನಿಗೆ ಹೊನ್ನಿನಭಿಷೇಕಮಾಡುವುದಾಗಿ ದೊರೆ ನಿಶ್ಚಯಿಸಿದ್ದನು. ಚಾಮರಸನು ಅದು ಸತ್ಕವಿ ಪ್ರಬಂಧ ಅಗಕೇಕೆ ಮಾಡಬೇಕು ಎಂದು ತನ್ನ ಗ್ರಂಥವನ್ನು ಪ್ರಶಂಸಿಸಿ ಇದು ಸತ್ಕವಿಯರ ಕಥೆಯಲ್ಲ, ಸಾಯದ ಪುಣ್ಯಪುರುಷರ ಚರಿತೆ ಎನ್ನಲು ದೊರೆ ನಿಜವೆಂದು ತಿಳಿದು ಭಾರತವನ್ನು ನಿಸ್ಸಾರಗೈದು ಕನಕಸ್ನಾನವಂ ಪರಿಹರಿಸಿ ಚಾಮರಸನಿಂದ ವೀರಶೈವ ದೀಕ್ಷೆಯನ್ನು ಪಡೆದನು.

ಇಲ್ಲಿ ಹೇಳಿರುವ ದೇವರಾಯನು 1419 ರಿಂದ 1446 ರವರೆಗೆ ಆಳಿದ ವಿಜಯನಗರದ ದೊರೆ. ಕುಮಾರವ್ಯಾಸನೂ ಚಾಮರಸನೂ ಸಮಕಾಲದವರು ಎಂಬ ಕಥೆ ಗುರುರಾಜಚರಿತ್ರದಲ್ಲಿಯೂ (ಸು.1650) ಹೇಳಿರುವ ಸಂಗತಿಯನ್ನು ಚಾಮರಸನ ಚರಿತ್ರದಲ್ಲಿ ತಿಳಿಸಿದ್ದೇವೆ. ಪರಂತು ಈ ಕವಿ ಹರೀಶ್ವರನನ್ನೂ (ಸು. 1165) ಚಾಮರಸನನ್ನೂ (ಸು. 1430) ಸಮಕಾಲದವರನ್ನಾಗಿ ಮಾಡಿರುವುದು ಭ್ರಾಂತಿಯೇ ಸರಿ.

ಗ್ರಂಥಾವತಾರದಲ್ಲಿ ಕೋಳೂರ ರಾಮೇಶ್ವರಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ನಂದಿ, ಭೃಂಗಿ, ಷಣ್ಮುಖ ಇವರನ್ನು ಸ್ತುತಿಸಿ ಆಮೇಲೆ ಬಸವನೇ ಮೊದಲಾದ ಪುರಾತನರನ್ನು[1] ಸ್ಮರಿಸಿದ್ದಾನೆ. ಪ್ರಭುಲಿಂಗಲೀಲೆಯ ಕಥಾಗರ್ಭವನ್ನು ಹೀಗೆ ತಿಳಿಸಿದ್ದಾನೆ—

---

1. ಬಸವ, ಚೆನ್ನಬಸವ, ಮಡಿವಾಳ, ಅಪ್ಪಣ್ಣ, ಕಿನ್ನರ. ಹೊನ್ನಿತಂದೆ, ಬಾಹುರಸ, ಕಲಕೇತ, ಕಕ್ಕಯ್ಯ ಚಿಕ್ಕಯ್ಯ. ನಾಗಾಂಬೆ, ನೀಲಾಂಬಿಕೆ, ಪ್ರಭುದೇವ·

ಕರವೂರ ನಿರಹಂಕಾರಸುಜ್ಞಾನಿಗಳಿಗೆ ನಿರ್ಮಾಯನೆಂಬ ಗಣನಾಥನು ಪ್ರಭು ನಾಮದಿಂದ ಮಗನಾಗಿ ಹುಟ್ಟಿ ಪದ್ಮಿನಿಯೆಂಬ ಹೆಂಡತಿಯೊಡನೆ ರಾಜ್ಯವಾಳುತ್ತಿದ್ದನು. ಗುರುಗುಹೇಶನ ಉಪದೇಶದಿಂದ ವಿರಕ್ತನಾಗಲು ಪಾರ್ವತಿ ಇವನನ್ನು ಅನುರಕ್ತನನ್ನಾಗಿ ಮಾಡಬೇಕೆಂದು ತಾಮಸದಳೆಯನ್ನು ಕಳುಹಿ ಅದು ಬನವಾಸಿಯ ಮಮಕಾರಮೋಹಿನಿಗಳಿಗೆ ಮಾಯೆ ಎಂಬ ಮಗಳಾಗಿ ಹುಟ್ಟಿತು. ಮಧುಕನಾಥನ ಆಲಯದಲ್ಲಿ ಮದ್ದಳೆಯನ್ನು ಬಾರಿಸುತ್ತಿದ್ದ ಇವನನ್ನು ನೋಡಿ ಮಾಯೆ ಮನಸೋತಳು. ಇವನು ವಶವಾಗದೆ ದೇಶಸಂಚಾರಮಾಡಿ ಗೊಗ್ಗಯ್ಯನಿಂದ ಸಮಾಧಿಯತೆಗೆಯಿಸಿ ಅನಿಮಿಷನ ಲಿಂಗವ ತಳೆದು ಅವನಿಗೆ ಮುಕ್ತಿಯಿತ್ತು ಮುಕ್ತಾಯಕ್ಕನ ದುಃಖವನ್ನು ಬಿಡಿಸಿ ಸೊನ್ನಲಾಪುರದ ಸಿದ್ಧರಾಮನಿಗೆ ಉಪದೇಶಮಾಡಿ ಕಲ್ಯಾಣಕ್ಕೆ ಹೋಗಿ ಮರುಳಶಂಕರನಿಗೆ ಐಕ್ಯವನಿತ್ತು ಬಸವನ ಇಷ್ಟವ ಸಲಿಸಿ ಮಹಾದೇವಿಯು ಮುಕ್ತಳಂಮಾಡಿ ಗೋರಕ್ಷನಿಗೆ ಜ್ಞಾನವನಿತ್ತಿಹಿದನು.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಶಿವನು ಉಣ್ಣದಿರಲು ಕರಿಕಾಲಚಕ್ರೇಳನ ಉಕ್ತಿ

ಉಪ್ಪು ಸಾಲದೊ ಕಾರ ಬಹಳವೋ ಒಗ್ಗರಣೆ ।
ತಪ್ಪಿದುವೊ ಕಾಯಿಗಳು ಬೇಯಲಿಲ್ಲವೊ ಸಾಱು ।
ಸಪ್ಪಗಾದುದೊ ಹುಳಿಯು ಪಾಯಸವು ಪಾಕವಿಲ್ಲವೊ ಭಕ್ಷ್ಯಕರಿಯಾದುವೋ ॥
ಒಪ್ಪದಿಂ ಚಲಿಸರೋ ಪರಮಾನ್ನದಕ್ಕಿಯನು ।
ತುಪ್ಪ ಕಡುಗಾದುದೋ ಕ್ಷೀರ ನೀರ್ಬೇರೆದುವೋ ।
ಕಪ್ಪುಗೊರಳನು ಉಣದೆ ಮುಳಿದಕಾರಣವೇನು ಗುಡಿಯದಿರಲಾನುಱುವೆನೇ ॥

ಯುದ್ಧ

ನಿಬ್ಬರದಿ ನಿಸ್ಸಾಳವಬ್ಬರದಿ ಕಹಳೆಗಳು ।
ಬೊಬ್ಬಿಱಿವ ಪಟುಭಟರು ಅಭ್ರಕ್ಕೆ ನೆಗೆವಶ್ವ ।
ವುಬ್ಬಿ ತೇಗರ್ದಡಣದಿಂ ಮೊಬ್ಬಿಡಿದ ಕಯವೊತ್ತೊತ್ತೆ ಕಾಲ್ದೊಳೆಧಾಬ್ಧಿ ॥
ಹಬ್ಬಿ ಧ್ರುವಮಂಡಲವ ಮುಸುಕಿತ್ತು ಸಂಗ್ರಾಮ ।
ದಬ್ಬರಕೆ ಧರಣಿ ತಲ್ಲಣಿಸಿತ್ತು ದಿಗ್ದಂತಿ ।

ಶಬ್ಬಿಬ್ಬುಗೊಂಡಾದಿಶೇಷಶಿರ ಕುಸಿದು ಕೂರ್ಮನ-ಬೆನ್ನುಬಿರಿದುದಾಗ ॥

ಶಿವರಾಮ ಸು. 1765

ಈತನು ಶಿವಭಕ್ತಿಸಾರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಶ್ರೀವತ್ಸಗೋತ್ರದವನು; ಶಿವಗಂಗಾಮಠದ ಅಭಿನವಗಂಗಾಧರ ಭಾರತಿಯ ಶಿಷ್ಯನು 'ಧರೆಯೊಳಧಿಕವೆನಿಪ್ಪ ನರ್ತನ । ಪುರದೊಡೆಯ ಸೋಮೇಶಲಿಂಗನ । ಸಿರಿಪದದ್ವಯಸೇವಕರಸೇವಕ' ಎಂದು ಹೇಳಿಕೊಂಡಿರುವುದರಿಂದ ನರ್ತನಪುರವು ಇವನ ಊರಾಗಿರಬಹುದು. ಶಿವಗಂಗಾಮಠದ ಪಟ್ಟಕ್ಕೆ ಅಭಿನವಗಂಗಾಧರಭಾರತಿ 1765 ರಲ್ಲಿ ಬಂದುದಾಗಿ ತಿಳಿವುದರಿಂದ ಕವಿಯ ಕಾಲವೂ ಸುಮಾರು ಅದೇ ಆಗಿರಬಹುದು.

ಇವನ ಗ್ರಂಥ

ಶಿವಭಕ್ತಿಸಾರ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 108. ಪ್ರತಿಪದ್ಯವೂ 'ರಕ್ಷಿಸು ನಮ್ಮನನವರತ' ಎಂದು ಮುಗಿಯುತ್ತದೆ. ಇದು ಶಿವಸ್ತುತಿರೂಪವಾದ ಗ್ರಂಥ; ಭಕ್ತಿರಸಪ್ರಧಾನವಾಗಿದೆ. ಆರಂಭದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಸರಸ್ವತಿ, ಕಾಲಭೈರವ, ನಂದಿ, ವೀರಭದ್ರ, ಷಣ್ಮುಖ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸುಧೆಯ ರುಚಿಯನು ಸುರರು ಚಂದ್ರಮ । ನುದಿಸುವುದನು ಚಕೋರಸಂತತಿ ।
ಪದುಮವನವನು ಹಂಸೆಗಳು ಪುರುಷನನು ಕುಲವನಿತೆ ॥
ನಿಧಿಯನಾರ್ತನು ಬಯಸುವಂದದಿ । ಹೃದಯದೊಳು ನಾ ನಿಮ್ಮ ನೆನೆವೆನು ।
ಮದನರಿಪು ಮೈದೋರಿ' ರಕ್ಷಿಸು ನಮ್ಮನನವರತ ॥
ಘೋರತರಸಂಸಾರಪಾರಾ । ವಾರದೊಳು ಬಿದ್ದೀಡಿತಾಟಿತ ।
ಕ್ರೂರಕಾಮಕ್ರೋಧಜಲಚರದುಷ್ಟಬಲಕೆ ಸಿಲುಕಿ ॥

ಪಾರಗಾಣದೆ ತೊಟ್ಟಿಲಿ ಒಟಿಲುವೆ | ಮೂರಹರ ಮಂದಾಕಿನೀಧರ |
ಆರು ಗತಿಯೈ ಶಿವನೆ ರಕ್ಷಿಸು ನಮ್ಮನನವರತ ||

ನಾರಸಿಂಹ 1768

ಈತನು ಅನುಭವಶಿಖಾಮಣಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ ಎಂದು ತೋರುತ್ತದೆ. ಇವನ ತಂದೆ ಕ್ರತುಪುರದ(ಗದಗು) ಪರಗಣಿಗೆ ಸೇರಿದ ಕುರುತುಕೋಟೆಯ ಕರಣಿಕ ಲಕ್ಷ್ಮೀಶ; ಗುರು ಗೌತಮುಗೋತ್ರದ ಬೋಧಾಯನ ಸೂತ್ರದ ಯಜುಶ್ಶಾಖೆಯ ಪೆದ್ದರಸ; ಪುರೋಹಿತ ಜಾಡರಹೆಬ್ಬಳ್ಳಿಯ ಬೊಮ್ಮಭಟ್ಟ ವಿದ್ಯಾಗುರು ಮಯೂರ ಪುರದ ಗೋವಿಂದಸಾಂಬ-ಇವನು ಕವಿಯ ಸೋದರದವಮಾವನೆಂದು ತೋರುತ್ತದೆ.ಇವನೇ ಕವಿಗೆ ಕವಿತ್ವದ ಹಾದಿಯನ್ನು ತೋರಿಸಿದವನು ಎಂದು ಹೇಳಿದೆ. ತನ್ನ ಗ್ರಂಥವನ್ನು ಸರ್ವಧಾರಿಸಂವತ್ಸರದ ಶ್ರಾವಣಶುದ್ಧ ಪಾಡ್ಯದಲ್ಲಿ ಆರಂಭಿಸಿ ಭಾದ್ರಪದ ಬಹುಳ ಪಂಚಮಿಯ ದಿನ ಮುಗಿಸಿದಂತೆ ಹೇಳುತ್ತಾನೆ ಈ ಸರ್ವಧಾರಿವರ್ಷವು 1768 ಆಗಿರಬಹುದೆಂದು ತೋರುತ್ತದೆ. ತನ್ನ ಗ್ರಂಥವನ್ನು ಹಂಪೆಯವಿರೂಪಾಕ್ಷನ ಅಂಕಿತದಲ್ಲಿ ಬರೆದಿದ್ದಾನೆ.

ಇವನ ಹೆಸರು ರಾಮಚಂದ್ರ ಎಂದು ಮೆ|| ಕಿಟ್ಟಲ್, ಮೆ|| ರೈಸ್ ಇವರಿಬ್ಬರೂ ಭ್ರಮಿಸಿದ್ದಾರೆ. ಗ್ರಂಥದ ಆದಿಭಾಗದಲ್ಲಿ ಲಕ್ಷ್ಮಿಯನ್ನು ಸ್ತುತಿಸುವಾಗ ಕವಿ "ಮೂಱುಯೋಜನ ಬಂದು...ಕುರುತುಕೋಟೆಯಪುರದ ಕಾರಣಿಕ ಲಕ್ಷ್ಮೀಶನಾತ್ಮಜನಾರಸಿಂಹನ ಗೃಹದಿ ನಿಂತ ಕುಕ್ಕನೂರ ಲಕ್ಷ್ಮಿ" ಎಂಬ ಪದ್ಯಭಾಗದಲ್ಲಿ ತನ್ನ ಹೆಸರನ್ನು ಹೇಳಿರುವುದಲ್ಲದೆ

ಪರಗಣಿಕ್ರತುಪುರದ ಪಳ್ಳಿಯು ! ಕುರುತುಕೋಟೆಯ ಕಾರಣೀಕರು |
ಹರಿಯ ಹತ್ತವತಾರದೊಳು ಏಟಿನುಜನಾಮಂಗೆ ||
ಪರಮಮೋಹದ ಪುತ್ರನೆನಿಸುವ | ಹರಿಯ ವೇದವತಾರನಾಮೆನ |
ಗಿರಲು ಧರೆಯೊಳು ರಚಿಸಿದೆನು ಅನುಭವಶಿಖಾಮಣಿಯ ||

ಎಂಬ ಪದ್ಯದಲ್ಲಿ ತನ್ನ ತಂದೆಯು ಹೆಸರು ವಿಷ್ಣುವಿನ ಏಳನೆಯ ಅವತಾರವಾದ ರಾಮನ ತಮ್ಮನಾದ ಲಕ್ಷ್ಮಣನದು ಎಂದೂ ತನ್ನ ಹೆಸರು ವಿಷ್ಣುವಿನ ನಾಲ್ಕನೆಯ ಅವತಾರವಾದ ನಾರಸಿಂಹನದು ಎಂದೂ ಗೂಢವಾಗಿ ತಿಳಿಸಿದ್ದಾನೆ.

ಇವನ ಗ್ರಂಥ

ಅನುಭವ ಶಿಖಾಮಣಿ

ಇದು ಭೂಮಿಸಿ, ವಾರ್ಧಕ, ಶರ ಈ ಷಟ್ಪದಿಗಳಲ್ಲಿ ಬರೆದಿದೆ, ಸಂಧಿ 24, ಪದ್ಯ 1029. ಇದರಲ್ಲಿ ಕಾಂತಾವತೀಪುರದ ಉತ್ತಮೋತ್ತಮರಾಯನಿಗೆ ಸತ್ಯಶಿವಯೋಗೀಂದ್ರನು ಹೇಳಿದ ಕಾಶ್ಮೀರದೇಶದ ರತ್ನಗಿರಿ ಪಟ್ಟಣದ ಅರಸು ಗಂಭೀರರಾಯನ ಕಥೆ ಹೇಳಿದೆ. ಈ ಗಂಭೀರರಾಯನು ತನ್ನ ದೀಕ್ಷಾಗುರು ಗೌತಮನ ಉಪದೇಶದಿಂದ ಹರ ಪೂಜೆಯು ಮಾಡಿ ತನ್ನ ಪುರಸಹಿತ ಕೈಲಾಸಕ್ಕೆ ಹೋದಂತೆ ಹೇಳಿದೆ. ಅಲ್ಲಲ್ಲಿ ಶಿವಶರಣರ ಕಥೆಗಳೂ ಹೇಳಿವೆ. ಮೊದಲು ಈ ಕಾವ್ಯವನ್ನು ಹಂಪೆಯ ಹರಿಹರಾತ್ಮಜ ರಾಘವಾಂಕನು ಶರಪಟ್ಪದಿಯಲ್ಲಿ ಬರೆದಿದ್ದಂತೆಯೂ ಆದನ್ನು ನೋಡಿ ಕವಿ ಅದರರ್ಥವನರಿತು ಭೂಮಿನಿ, ವಾರ್ಧಕ, ಶರ ಈ ಮೂರು ಷಟ್ಪದಿಗಳಲ್ಲಿ ಬರೆದಂತೆಯೂ ಹೇಳುತ್ತಾನೆ. ಈ ಗ್ರಂಥಕ್ಕೆ ಈ ಹೆಸರು ಬರುವುದಕ್ಕೆ ಕಾರಣವನ್ನು ಹೀಗೆ ಹೇಳಿದ್ದಾನೆ—

ಸಕಲಶಾಸ್ತ್ರಪುರಾಣದೊಳಗಿಹ | ಸಕಲಸಾರವು ಇದಕಾರಣ |
ಸಕಲ ಅನುಭವಕೆಲ್ಲ ಇದು ತಲೆಮಣಿಯು ಎನಿಸಿಹುದು ||

ಗ್ರಂಥಾವತಾರದಲ್ಲಿ ಮೂರುತಲೆಯುಳ್ಳದೇವತೆಯ ಸ್ತುತಿಯಿದೆ; ಬಳಿಕ ಸರಸ್ವತಿ, ಬ್ರಹ್ಮ, ವಿಷ್ಣು, ಕುಕ್ಕನೂರು ಲಕ್ಷ್ಮಿ, ರೇಣುಕೆ, ಹಂಪೆಯ ವಿರೂಪಾಕ್ಷ, ಪಾರ್ವತಿ, ಮಲ್ಲಿಕಾರ್ಜುನಪಂಡಿತಾರಾಧ್ಯ, ಓಂನವಾಚಾರ್ಯ ಬಸವ, ಶೃಂಗೇರಿ ಶಂಕರಾಚಾರ್ಯ ಇವರುಗಳ ಸ್ತುತಿಯಿದೆ, ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಉರಿಯು ಕರ್ಪುರ ಮುಟ್ಟಿ ತೇಜವು । ಪರುಷ ಲೋಹವ ಮುಟ್ಟಿ ತೇಜವು ।
ಅರಸು ಆಳಿಗೆ ಒಲಿಯೆ ತೇಜವು ಹರನೆ ನೀನೊಲಿಯೆ ॥
ಸುರಗಣವುನೊಡಲಾಗಿ ಋಷಿಗಳು । ಕರುಣದಲಿ ಪಿಡಿದೆತ್ತಿಕೊಳ್ಳರೆ ।
ಗುರು ನಿನಗೆ ಸರಿಯಾದ ದೈವಿಲ್ಲೆಂಡ ಭೂವಾಲ ॥

ಶಾಲ್ಯದ ಕೃಷ್ಣರಾಜ 1748

ಈತನು ಅಕ್ಷರಾದಿ ನಿಘಂಟು, ಅಧ್ಯಾತ್ಮರಾಮಾಯಣದ ಉತ್ತರ ಕಾಂಡ, ಅನುಭವರಸಾಯನ, ಅಪ್ರಸ್ತುತಪ್ರಶಂಸಾಶತಕ ಅಥವಾ ಪ್ರಾಣೇಶ್ವರಶತಕ, ಜ್ಞಾನಮಾರ್ಗಸರೋವರ, ಟೀಕಿನ ಕೀರ್ತನೆ, ಧರ್ಮಗುಪ್ತಚರಿತೆ, ನಳನಾಟಕ, ನಿಜದೀಪಿಕಾರತ್ನ, ನಿರ್ಣಯ ಶಿಖಾಮಣಿ, ಬಾಹಟದ ಟೀಕೆ, ಭಕ್ತಿಮಾರ್ಗಸರೋವರ, ಮೋಕ್ಷಲಕ್ಷ್ಮೀಮಂದಿರ, ಯಯಾತಿಕಾವ್ಯ, ವಿವೇಕಾಭರಣ, ವ್ರತಚರ್ಯೆ, ಷಟ್ಪ್ರತ್ಯಯ, ಸದಾಶಿವಶತಕ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಮೈಸೂರು ಅರಸುಗಳ ಸಮುದಾಯಕ್ಕೆ ಸೇರಿದವನು. ಇವನಿಗೆ ಶಾಲ್ಯದ ಅರಸು ಎಂಬ ಸಂಗ್ರಹವಾದ ನಾಮವೂ ಉಂಟು. ಈತನು ಆಂಧ್ರ, ಕನ್ನಡ, ಸಂಸ್ಕೃತ ಈ ಮೂರು ಭಾಷೆಗಳಲ್ಲಿಯೂ ಗ್ರಂಥಗಳನ್ನು ಬರೆದಿದ್ದಾನೆ. ಮೇಲೆ ಹೇಳಿರುವ ಗ್ರಂಥಗಳಲ್ಲಿ ಕೆಲವು ಸಂಸ್ಕೃತವಾಗಿರಬಹುದು. ಧರ್ಮಗುಪ್ತಚರಿತೆಯನ್ನು 1748 ರಲ್ಲಿ ರಚಿಸಿದಂತೆ ತಿಳಿಯುತ್ತದೆ ಈತನ ಪ್ರಾಣೇಶ್ವರಶತಕದ ಅಂತ್ಯದಲ್ಲಿ ಆ ಗ್ರಂಥವು ಕಲಿ 4870ರಲ್ಲಿ-ಎಂದರೆ 1769 ರಲ್ಲಿ-ಹುಟ್ಟಿದಂತೆ ಹೇಳಿದೆ. ನಿಜದೀಪಿಕಾರತ್ನವನ್ನು ಕಲಿ4871ಕ್ಕೆ ಸರಿಯಾದ ವಿರೋಧಿಯಲ್ಲಿ (1769) ಆರಂಭಿಸಿ ವಿಕೃತಿಯಲ್ಲಿ (1770) ಮುಗಿಸಿದಂತೆ ಆ ಗ್ರಂಥದಿಂದ ತಿಳಿಯುತ್ತದೆ ವಿವೇಕಾಭರಣವನ್ನು ಕಲಿ 4875 ಧಾತುವಿನಲ್ಲಿ (1774)[1] ರಚಿಸಿದಂತೆ ಕವಿ ಹೇಳುತ್ತಾನೆ ಅಲ್ಲದೆ ಈತನು ಕವಿ ವಿಟ್ಠಲನ

1. ಕಲಿ 4875 ಧಾತುವಾಗುವುದಿಲ್ಲ; ವಿಜಯಸಂವತ್ಸರವಾಗುತ್ತದೆ.

(ಸು. 1600) ಅಮರಕೋಶ ಟೀಕೆಯನ್ನು ಮನ್ಮಥಸಂವತ್ಸರದಲ್ಲಿ ಪ್ರತಿ ಮಾಡಿದಂತೆ ಆ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿರುವ

ವಿಟ್ಠಲವಿದ್ವನ್ಮಿರ್ಮಿತಟೀಕಾ ಲಿಖಿತಾಮರಾಖ್ಯಕೋಶಸ್ಯ |
ಕೃಷ್ಣಕ್ಷಿತಿಪತಿನೇಯಂ ಮನ್ಮಥಸಂವತ್ಸರೇ ಶಿವಂ ಸಭಸಿ ||

ಎಂಬ ಪದ್ಯದಿಂದ ತಿಳಿಯುತ್ತದೆ ಈ ಮನ್ಮಥವರ್ಷವು 1775 ಆಗಿರಬೇಕು.

ಇವನ ಗ್ರಂಥಗಳಲ್ಲಿ

1. ವಿವೇಕಾಭರಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 18, ಪದ್ಯ 999. ಶ್ರೀರಂಗಪಟ್ಟಣದಲ್ಲಿದ್ದ ತ್ರಿಯಂಬಕಗುರುವಿನ ಬಳಿಗೆ ಹೋಗಿ ನರಸಾರ್ಯನು ತತ್ವದ ಸಾರಾಸಾರಗಳನ್ನು ಕೇಳಲು, ಅವನು ನರಸಾರ್ಯನಿಗೆ ನಿಗಮಾರ್ಥಗಳನ್ನು ಉಪದೇಶಿಸಿದನು. ನರಸಾರ್ಯನು ಆ ಉಪದೇಶದ ಸಾರವನ್ನು ಜ್ಞಾನಸರ್ವಸ್ವ ಎಂಬ ಹೆಸರಿಟ್ಟು ಒಂದು ಸಂಸ್ಕೃತಗ್ರಂಥವಾಗಿ ರಚಿಸಿ ಅದನ್ನು ಕನ್ನಡಿಸುವಂತೆ ಕವಿಗೆ ಹೇಳಲು ಅತನು ಈ ಗ್ರಂಥರೂಪವಾಗಿ ಕನ್ನಡಿಸಿದನು. ಇದರ ಪ್ರಯೋಜನವನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ—

ತಿಳಿವು ನೆಲೆಗೊಳುವಂತೆ ಶಾಸ್ತ್ರದ| ಬಳಕೆ ತಲೆದೋರದಂತೆ ಸಂಗಡ |
ದಳವಿ ಪಸರಿಸದಂತೆ ವಿಶ್ವಾಸಂ ಘಟಿಸುವಂತೆ ||
ಲಲಿತಪದಗೌರವದ ದರ್ಪಣ | ಫಲಕವಿದ ನಾಶಿಸೆನು ಮೋಹದ |
ಒಳಗೆ ತನ್ನಂ ನೋಡ್ವರಿಗೆ ಕಾಣಿಪುದು ನಿಜಭಾವಂ ||

ಗ್ರಂಥಾವತಾರದಲ್ಲಿ ಸದಾಶಿವಸ್ತುತಿ ಇದೆ. ಬಳಿಕ ಕವಿ ವಾಸುದೇವ, ಬ್ರಹ್ಮ, ಚಂದ್ರ, ವಾತೂಲದೇವ, ಸೂರ್ಯ, ಅಗ್ನಿ, ಇಂದ್ರ ಮುಂತಾದವರನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ...

ಸಾತ್ವಿಕತೆ

ಕಡಿನೊಡಗಲುವುದುಂಟೆ ತೇಯ್ದ ಲ್ಕಡಗುವುದೆ ದಾವಾನಲಂ ಬಂ ।
ದಡಸಲೋಡುವುದೇ ಸುಗಂಧಂ ನೋಣದಕೆ ಸಹಜಂ ॥
ಎಡರಿನಲಿ ಹಿಂಗುವುದೆ ವಾಸನೆ । ಯಡಸಲಿನೊಂದಾಗುವುದೆ ಬೆಂ ।
ಬಿಡದ ದುಸ್ಸಂಗದಲಿ ಮಾಜುವುದುಂಟೆ ಸಾತ್ವಿಕತೆ ॥

ಇಂದ್ರಿಯಜಯ

ಹುಲಿಯನೀಡಾಡಿದವರುಂಟು ಕಗ್ಗ । ತ್ತಲೆಯೊಳಗೆ ಸಂಚರಿಸಿದವರುಂ ।
ಬುಲಿವ ಮದದಾನೆಯನು ಹೊಡೆದವರುಂಟು ಮನದೊಳಗೆ ॥
ನಳಿನನಾಭನ ಮಗನ ಬಾಣಾ । ವಳಿಗೆಯೆದೆಯುಂ ಜಾಚಿ ಪೆಟ್ಟಿಂ ।
ಗಳುಕದನವಂ ಕಾಣೆ ದೇವಾಸುರರ ಕಟಕದಲಿ ॥

ಹೆಂಡತಿಯರ ಕೋಟಲೆ

ಬೆಲ್ಲದಚ್ಚುಗಳಿಲ್ಲ ತುಪ್ಪದ । ಕಲ್ಲನುಡಕೆಗಳಿಲ್ಲ ತೀರಿತು ।
ನೆಲ್ಲು ಬಿಸಿದುಟ್ಟಿರುವ ಸೀರೆಗೆ ಹಜಿಕು ಕಾಣಿಸಿತು ॥
ಅಲ್ಲಿಗಲ್ಲಿಗೆ ಕಾಸು ನಡೆಯುವೆ । ನಿಲ್ಲುವುದೆ ವೆಚ್ಚಂಗಕ್ಕಿದ ।
ರೊಳ್ಳೆಯವರೀ ನೆರೆಹೊರೆಗೆ ಒಲಿಕಿಕ್ಕದಿರಲಲ್ಲ ॥
ನೆರೆಯಸರಯರ ನೋಡಿ ಒಣ್ಣಂದಿ । ಕೊಜಿತೆಯೇ ಚಿನ್ನದಲಿ ಕುಂದೇ ।
ಹೊಜಿಗೆ ಕಳಸಿಬ್ಬಾಡುಪೊಡನೊಳಗುಂಬ ಭೋಜನದಿ ॥
ಕರಗಕರಗದ ಬೆಣ್ಣೆ ಚಿಲಿವಾ । ಲರೆಗಡೆದ ಪೊಸರುಚ್ಚುಪಳಿಸ ।
ಕ್ಕರೆ ಬಳಿಯ ಸಣ್ಣಕ್ಕಿ ಸಾಣಂಗಿಯ ನೆರೆದ ಜೇಳೆ ॥
ಬದುಕಿದೊಡೆ ಮೇಣವರಕಿಲಿಯಂ । ಒದುಕಬೇಕಲ್ಲದಿರೆ ಕೈಲಾ ।
ಗದ ಪುರುಷನಂ ಕೂಡಿಕೊಂಡೀತನೆಸೊಳಿಯುವುದಕೆ ॥
ಬಿದಿರುಮೆಳೆಯಲ್ಲಿರುವ ದೇವಾಂ । ಗದ ಮಿಗಂಗಳ ಬಾಯ ಲೇಸಂ ।
ದಿದಿರ ಗರಕಿಯರಲ್ಲಿ ಹೆಂಡತಿ ಪೇಯುನಳು ಕೂಡೆ ॥

2. ಷಟ್ಪದಿ

ಇದು ಛಂದಶ್ಶಾಸ್ತ್ರಕ್ಕೆ ಸೇರಿದ ಒಂದು ಭಾಗ. ಇದರ ಅಂಶ್ಯ ಎಲ್ಲಿ ಸಾ ಪದ್ಯವಿದೆ—

ಷಟ್ಪ್ರತ್ಯಯರೀತಿಯನಚ | ಲೇಟ್ಪ್ರಮುಖಂ ಕೃಷ್ಣನಾಮಕಂ ಸೇಱ್ದಂ ನೀ |
ವಿಟ್ಪ್ರಜುರರಾಧ್ಯರೊಪ್ಪಲ್ | ವಿಟ್ಪ್ರಭುವಂತಿರ್ಪರೊಲಿದು ಬೆಳುಗನ್ನಡದಿಂ ॥

3. ಸದಾಶಿವಶತಕ

ಇದರಲ್ಲಿ 101 ವೃತ್ತಗಳಿವೆ; ಪ್ರತಿವೃತ್ತವೂ "ಸದಾಶಿವ" ಎಂದು ಮುಗಿಯುತ್ತದೆ. ಈ ಪದ್ಯಗಳು ಪ್ರಾಯಿಕವಾಗಿ ವೇದಾಂತವನ್ನು ಬೋಧಿಸುತ್ತವೆ. ಗ್ರಂಥಾಂತ್ಯದಲ್ಲಿರುವ ಒಂದು ಕಂದ ಪದ್ಯದಲ್ಲಿ "ಬಿಂದು ಗಗನಾಂಗ ವೇದಾಬ್ಧಿ ಕಲಿಯೊಳ್ ವಿರೋಧಿ" ಎಂದು ಕಾಲವನ್ನು ಸೂಚಿಸಿದೆ. ಆದರೆ ಕಲಿ 4800 ವಿರೋಧಿಯಾಗುವುದಿಲ್ಲ, ಬಹುಧಾನ್ಯವಾಗುತ್ತದೆ (1698). ಕಲಿ 4811 ವಿರೋಧಿಯಾಗುತ್ತದೆ (1709). ಹಿಂದೆ ಹೇಳಿದ ಕಾಲಕ್ಕೂ ಇದಕ್ಕೂ ಬಹಳ ಅಂತರವಿರುವುದರಿಂದ ಕಲಿ 4870 ಅಥವಾ 4871 (1769) ಅಭಿಪ್ರೇತವಾದ ಕಾಲವೆಂದು ತೋರುತ್ತದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ತಂದೆಯೊಳಲ್ಲದೇ ಮಱಿಕವಿಶಾಸನೊಳಲ್ಲದೆ ಬಾಱ್ಕೆ ಗಂಡನೊಳ್ |
ಪೊಂದದೆ ಕಾಮವೃತ್ತಿ ಕಡೆಗಾಣದೆ ಬಣ್ಣಗಳಾಣೆಕಾಱನೊಳ್ ॥
ನಿಂದಿಹ ಮಟ್ಟವಾವೆಡೆಯೊಳೀಕ್ಷಿಸಲಪ್ಪುದು ನಿನ್ನ ಬಿಟ್ಟು ವೋ |
ಸ್ಪಂದಳೆಯಲ್ಕದಾವೆಡೆ ಭವಾಬ್ಧಿಲಯಾನಿಲನೇ ಸದಾಶಿವಾ ॥
ಅರಿಮುಗುಳಾದ ಮಲ್ಲಿಗೆಯ ಕಂಡದ ಬಿಟ್ಟು ಶಿರೀಷಜಾಲದೊಳ್ |
ಪರಿಪರಿದಾಡಿದಂತೆ ಮಱಿ'ದುಂಬಿ ಶರನ್ಮೃಗಲಕ್ಷ್ಮಗಾರ ವಿ ॥
ಸ್ಫುರಿಸುವ ಯುಷ್ಮದೀಯಚರಿತಾಮೃತವುಂ ಕಡೆಗೊತ್ತಿ ಘೋರಸಂ |
ಸರಾದ ಸೌಖ್ಯವಂ ನೆಸೆನ ಚಿತ್ತವ ನೋಡಿವಿರೊಳ್ ಸದಾಶಿವಾ ॥

4. ಅಪ್ರಸ್ತುತಪ್ರಶಂಸಾಶತಕ ಅಥವಾ ಪ್ರಾಣೇಶ್ವರಶತಕ.

ಇದರಲ್ಲಿ 102 ವೃತ್ತಗಳಿವೆ; ಪ್ರತಿವೃತ್ತವೂ "ಪ್ರಾಣೇಶ್ವರ" ಎಂದು ಮುಗಿಯುತ್ತದೆ. ಈ ಪದ್ಯಗಳು ಅನ್ಯೋಕ್ತಿರೂಪವಾಗಿ ನೀತಿಯನ್ನೂ ವೇದಾಂತವನ್ನೂ ಬೋಧಿಸುತ್ತವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಫುಲ್ಲಾಂಭೋರುಹಕೈರವಪ್ರತತಿಗಳ್ ಮಲ್ಲೀಮತಲ್ಲೀಕನ ।
ದ್ವಲ್ಲೀವಲ್ಲರಿಗಳ್ ಭ್ರಮದ್ಭ್ರಮರಿಗಳ್ ಸಂತಾಪಮುಂ ತೀತಮುಂ ॥
ಎಲ್ಲಾಕಾಲದಿ ಸೈಸಿ ನಿನ್ನ ಬರವಂ ಹಾರೈಸಿ ಸಪ್ರಾಣಮಾ ।
ಗಿಲ್ಲಿರ್ಪನ್ನೆಗಮೇಂ ವಸಂತ ತಡೆವೈ ನೋಡೆನ್ನ ಪ್ರಾಣೇಶ್ವರಾ ॥
ಸುರಪಾಲಾರುಣಪಲ್ಲವಾನುಭವದಿಂದಂ ಸೊಕ್ಕಿ ಬಂಧೂಕವ ।
ಲ್ಲರಿಯಂ ನೋಡುತೆ ಮಲ್ಲಿಕಾಲತೆಯೊಳುದ್ಯತ್ಪಂಜನುದ್ಧಾನಮಂ ॥
ಮೆಱೆಯುತ್ತಿರ್ಪ ನನಪ್ರಿಯಂಗೊಡನೈಕ್ಯಂಸಾರ್ಚಿ ಪಬ್ಮಾಸನಂ ।
ಕರಟವ್ಯೂಹಮನೇಕೆ ಪುಟ್ಟಿಸಿದನಿಲ್ಲೀನುಂಟು ಪ್ರಾಣೇಶ್ವರಾ ॥

5 ಟೀಕಿನ ಕೀರ್ತನೆ.

ಇದರಲ್ಲಿ ವೇದಾಂತಬೋಧಕವಾದ ಪದಗಳೂ ಅವುಗಳ ವ್ಯಾಖ್ಯಾನವೂ ಇವೆ ಅಲ್ಲಲ್ಲಿ ಸಂಸ್ಕೃತಶ್ಲೋಕಗಳು ಅನುವಾದವೂ ಉಪಲಬ್ಧವಿವೆ ಈ ಗ್ರಂಥದಿಂದ ಒಂದು ಪದವನ್ನು ತೆಗೆದು ಬರೆಯುತ್ತೇವೆ—

ಮನವೆಂಬ ಹಾಲಿಗುಪರತಿಯೆಂಬ ಹೆಪ್ಪನಿಕ್ಕಿ ಸವೀನದಧಿಯಾಗೆ ಪಿರಿಯರುಸಿರ್ದ ।
ವಿನಯೋಕ್ತಿಯೆಂಬ ಮಂತಿಂ ಕಡೆದು ಸಹಜಮಾದನುಭೂತಿಯೆಂಬ ಬೆಣ್ಣೆಯೊಳು
ತೆಗೆದು

ತನಗೆ ತಾನನ್ಯನಲ್ಲದಹಾಗಿರುವ ಭಾವವನು ಪಿಡಿದು ಕಾಸಿ ತುಪ್ಪವನುಗೈದು ।
ನಿನಗುಣಿಸಲಿಚ್ಛೆಯಂ ತಾಳ್ದೆ ಗೌಣ ಚಿದ್ಘನವೆನಿಸುವೀಶಾನನಿಗೆ ದೇವದೇವ ॥

6 ನಿಜದೀಪಿಕಾರತ್ನ

ಇದು ಹಾಡು. ವಚನ, ಸಾಂಗತ್ಯ ಇವುಗಳನ್ನು ಒಳಕೊಂಡಿದೆ; ಪದ್ಧತಿ 25; ವೇದಾಂತವನ್ನು ಬೋಧಿಸುವ ಗ್ರಂಥ. ಆರಂಭದಲ್ಲಿ ದಕ್ಷಿಣಾಮೂರ್ತಿಸ್ತುತಿ ಇದೆ. ಪದ್ಧತಿಗಳ ಕೊನೆಯಲ್ಲಿ—ಇತಿ ಶ್ರೀಮತ್ಸಮಸ್ತತತ್ವತಾತ್ಪರ್ಯವಿಚಾರವಾರೀಣ ಶಾಲ್ಯಕ್ಷ್ಮಿತಿಪಾಲಕೃಷ್ಣಪ್ರಭುವಿರಚಿತಮಾದ ನಿಜದೀಪಿಕಾರತ್ನಗ್ರಂಥದೊಳ್—ಎಂಬ ಗದ್ಯವೂ, ಗ್ರಂಥಾಂತ್ಯದಲ್ಲಿ

ಇದು ಗೌರೀಶಟೀಪ್ಪಿಶಂಗಿಮಜಟಾಫೋರಾಟವೀಬಂಭ್ರಮ ।
ತ್ರಿದಶೋತ್ತುಂಗಕರಂಗಿಣೀಸಲಿಲಕಲ್ಯುತ್ಪಾದ್ಯಧೀರುದ್ರೀಸೋದರಂ ॥

ಪದಕಾವ್ಯಂ ಕವಿಗಳ್ ವಿಚಾರಿಪುದಿದಂ ಸೌಭ್ಯಮುಂ ಮಿಕ್ಕಲೋ ।
ಕದ ವಾಕ್ಯಂಗಳವೋಲ್ ನಿರೀಕ್ಷಿಸದೆ ಧೀಮತ್ಕಾವನಾದೃಷ್ಟಿಯಿಂ ॥

ಎಂಬ ಪದ್ಯವೂ ಇವೆ. ಇವರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ತರತರದಿ ಜಲಧರನಿಕರವೊತ್ತರಿಸಲು ಪು । ಷ್ಕರಕಂಬಿಗಾದೊಡಂ ಬರುವುದೇ ವಿಕೃತಿ ॥

ಕಾವಳದ ಹಗ್ಗದಲಿ ಕಲ್ಪಿಸಿದ ಸಟೆಯಾಪ|ಹಾವು ಕಚ್ಚಿದರಾರು ಸಾವರ್ಕೆ ಜಗದಿ ॥
ಹಾಲು ಸಂಸ್ಕಾರದಿಂದಾಗಿ ಘೃತರೂಪಾವ । ಮೇಲೆ ಪೂರ್ವಾಕೃತಿಯು ತಾಳ್ವ ಮೊಸರಹುದೇ ॥

ದಗ್ಧಪಟವೆಂದಿನಂದಡಿ ತೋಱಿಲಿಳೆಯುಲಿ ವಿ । ದಗ್ಧರಾರದನುಟ್ಟು ತಳ್ಕಿದರು ಹಿಮಮಂ ॥

ಕನಸಿನೊಳು ಬಂದ ಕಾಮಿನಿಯು ಸಂಸಾರದಿಂ । ತನುರಂ ಪಡೆದಿರ್ಪ ಮನುಜರಾರುಂಟು ॥

7 ಅನುಭವರಸಾಯನ

ಇದು ಪ್ರಾಯಿಕವಾಗಿ ಗದ್ಯದಲ್ಲಿ ಬರೆದಿದೆ; ಅಲ್ಲಲ್ಲಿ ಒಂದೊಂದು ಕಂದವಿದೆ; ಕೊನೆಯಲ್ಲಿ ಮಾತ್ರ 120 ಸಾಂಗತ್ಯಗಳಿವೆ. ಗ್ರಂಥವು ಗುರುಶಿಷ್ಯಸಂವಾದರೂಪವಾಗಿ ಅದ್ವೈತ ವೇದಾಂತವನ್ನು ಬೋಧಿಸುತ್ತದೆ. ಇದು "ಸ್ಥಿರಮಮತಾಹಂತಾತರುಪರಶು" ಎಂದು ಕವಿ ಹೇಳುತ್ತಾನೆ. ಅನುಲಜನಮುಕ್ತ್ಯರ್ಥಂ ಇದನ್ನು ಬರೆದಂತೆ ಈ ಕಂದದಲ್ಲಿ ಹೇಳಿದೆ—

ಅನುಭವರಸಾಯನಾಂಕನ । ಜನಕೃತಿಯುಂ ಕೃಷ್ಣಭೂಮಿಪಂ ರಚಿಸಿ ಜಗ ।
ಜ್ಜನಕಗೆ ಗೌರೀವರನಿಗೆ । ವಿನಯದಿನರ್ಪಿಸಿದನಮಲಜನಮುಕ್ತ್ಯರ್ಥಂ ॥

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದುಬರೆಯುತ್ತೇವೆ.

ಮುಕ್ತಿಯೆಂಬುದು ವಸ್ತುವಲ್ಲ ವಸ್ತುವಿನೊಳ । ಗಿರುತಿಹ ಗುಣಗಣವಲ್ಲ ।
ಮುಕ್ತಿಯೊಡೆದೊಡಹುದು ತಮೋಗುಣವಾತ್ಮನಿ । ಗೆರಡೆಂಬ ಭೇದಕ್ಕೆ ಜನಕ ॥

ಈ ಮಹಾನೆಯ ಕಾರ್ಯವಾದ ದೇಹೇಂದ್ರಿಯ | ಸ್ತೋಮವಿದಕೆ ಸ್ಥಾಪಕವು |
ಯಾಮಿನಿಯಿಂದ ಕತ್ತಲೆ ಕತ್ತಲೆಯು ಸು | ಸ್ತೋಮದಿಂ ನಿಶಿಯೆಸೆವಂತೆ ॥

8 ಭಕ್ತಿಮಾರ್ಗಸರೋವರ

ಇದರಲ್ಲಿ ಶಿವಸ್ತುತಿರೂಪವಾದ 86ಕೀರ್ತನೆಗಳಿವೆ. ಅಲ್ಲಲ್ಲಿ ಕೆಲವು ಕಂದಗಳೂ ವಚನಗಳೂ ಇವೆ. ಈ ಗ್ರಂಥದಿಂದ ಒಂದು ಕೀರ್ತನೆಯ ಭಾಗವನ್ನು ಉದಾಹರಿಸುತ್ತೇವೆ—

ರಾಗ ಗೌರಿ

ಪಲ್ಲವಿ॥ ನಿಜಗೆ ನಿಲುವುದಲ್ಲದೆ ಸಜೆಗೆ ನಿಲುಕಡೆಯುಂಟೆ | ನೋಡಿ |
ಸುಜನರಾದವರಾಲಿಸಿ ಸೂಕ್ಷ್ಮದೃಷ್ಟಿಯಿಂ ॥
ಹಗ್ಗವ ಹಗ್ಗವೆಂದಱಿವೆ ಕಡೆಗೆ ನಿಲುವುದೋ | ಮತ್ತಾ |
ಹಗ್ಗವ ಹಾವೇಂದಱಿವೆ ನಿಂತುಬರುವುದೋ |
ಬಗ್ಗಿ ನೋಡಿ ಕಾವಳ ಹರಿದು ಬಯಲಲ್ಲಿದ್ದಾಗ | ಮೇಣಾ |
ಹಗ್ಗವ ಕಂಡವರು ನೋಡಿ ಹಾವೆಂದೆನದಾಗ ॥1॥
ಸ್ಥಾಣುವ ಸ್ಥಾಣುವೆಂದಱಿವೆ ಕಡೆಗೆ ನಿಲುವುದೋ | ಮತ್ತಾ
ಸ್ಥಾಣುವ ಚೋರನೆಂದಱಿವೆ ನಿಂತುಬರುವುದೋ |
ಪ್ರಾಣಿಸದೆ ಜಲಿಸದೆ ಸಮೀಪವಾದಾಗ | ಮೇಣಾ |
ಸ್ಥಾಣುವ ತುಱುವಿಂಡು ಬಂದು ತನುವೊಱಸಿದಾಗ ॥2॥
ಗುರುಶಾಸ್ತ್ರಮುಖಗಳಿಂದ ತಿಳಿದ ತಿಳಿವಿಗೆ | ಮತ್ತೀ |
ಕರಣದೋಷದಿಂದ ಬಂದ ಭೇದಬುದ್ಧಿಗೆ |
ಸ್ಥಿರತೆಯುಂಟು ಚರತೆಯಿಲ್ಲವೆಂಬ ತತ್ವವ | ಗೌರೀ |
ವರನ ದಯೆಯಿಂದ ಪಡೆದು ಸುಖಿಸು ಮಾನವಾ ॥3॥

9 ಜ್ಞಾನಮಾರ್ಗ ಸರೋವರ.

ಇದರಲ್ಲಿಯೂ 86 ಕೀರ್ತನೆಗಳಿವೆ.

10 ಧರ್ಮಗುಪ್ತಚರಿತೆ.

ಇದು ಯಕ್ಷಗಾನರೂಪವಾಗಿದೆ. ಸ್ಕಂದಪುರಾಣದ ಬ್ರಹ್ಮೋತ್ತರಕಾಂಡದಲ್ಲಿ ಶನಿಪ್ರಶಂಸಾವಸರದಲ್ಲಿ ಉಕ್ತವಾದ ಧರ್ಮಗುಪ್ತರಾ

ಯನ ಕಥೆಯನ್ನು ಕವಿ ಹೀಗೆ ಬರೆದಿದ್ದಾನೆ ಈ ಗ್ರಂಥವು ಪಾಕೃತ ಜನ ಹೃದಯಾನಂದಾರ್ಥವಾಗಿ ರಚಿತವಾದಂತೆ ಹೇಳಿದೆ.

ಇವನ ಇತರ ಗ್ರಂಥಗಳು ನಮಗೆ ದೊರೆತಿಲ್ಲ

ವೆಂಕಾವಮಾತ್ಯ ಸು. 1770.

ಈತನು ರಾಮಾಯಣ, ಇಂದಿರಾಭ್ಯುದಯ, ಹನುಮದ್ವಿಲಾಸ ಈ ಗ್ರಂಥಗಳನ್ನು ಬರೆದಿದ್ದಾನೆ[1]. ಇವನು ಬ್ರಾಹ್ಮಣಕವಿ. ಇವನ ತಂದೆ ರಾಮಪುರೀ ಹಂಪೆಯಾವಮಾತ್ಯ, ತಾಯಿ ವಾಬಾಂಬೆ. ರಾಮಾಯಣದ ಕೊನೆಯ ಗದ್ಯದಲ್ಲಿ ತಾನು ಆಂಜನೇಯನ ವರಪ್ರಸಾದದಿಂದ ಸರಸ ಸಾಹಿತ್ಯಸಾಮ್ರಾಜ್ಯವನ್ನು ಪಡೆದವನೆಂದೂ ಚತುರ್ವಿಧ ಕವಿತಾವಿಶಾರದನೆಂದೂ ಗಾಂಧರ್ವಕಳಾವಿದನೆಂದೂ ಹೇಳಿಕೊಂಡಿದ್ದಾನೆ. ಇವನ ಅಲಂಕಾರಮಣಿದರ್ಪಣದಲ್ಲಿ ಇವನಿಗೆ ಷಡ್ದರ್ಶನೀವಲ್ಲಭ, ಘಟಿಕಾಪ್ರಬಂಧ ರಚನಾವಿದಗ್ಧ ಎಂಬವಿಶೇಷಣಗಳು ಹೇಳಿವೆ[2]. ಇವನು ಹೈದರಲ್ಲಿಖಾನನಲ್ಲಿ ಮಂತ್ರಿಯಾಗಿದ್ದಂತೆ ತಿಳಿವುದರಿಂದ ಇವನ ಕಾಲವು ಸುಮಾರು 1770 ಆಗಬಹುದು.

ಪೂರ್ವಕವಿಗಳಲ್ಲಿ ಭಾಸ, ಬಾಣ, ಮಯೂರ, ದಂಡಿ, ಕಾಳಿದಾಸ ಈ ಸಂಸ್ಕೃತ ಕವಿಗಳನ್ನೂ ಹರೀಶ್ವರ, ರುದ್ರಭಟ್ಟ ಈ ಕನ್ನಡ ಕವಿಗಳನ್ನೂ ಸ್ಮರಿಸಿದ್ದಾನೆ.

---

1. ಇವನು ಬರೆದಿರುವ ಅಲಂಕಾರಮಣಿದರ್ಪಣವೆಂಬ ಸಂಸ್ಕೃತಗ್ರಂಥದ ಈ ಪದ್ಯದಲ್ಲಿ ಸ್ವರಚಿತವಾದ ಕೆಲವು ಗ್ರಂಥಗಳ ಹೆಸರನ್ನು ಹೇಳಿದ್ದಾನೆ—

ಯೋಸೌ ಕಾಮವಿಲಾಸಭಾಣಮಪಿ ವಾ ಮೂಹೇಂದ್ರಕಂ ತಡ್ಡಿಮಂ |
ವ್ಯಾಯೋಗಂ ಖರದರ್ಪಘಾತನಕಥಂ ಕಾವ್ಯಂ ಹನೂಮಜ್ಜಯಂ ||
ತತ್ಕ್ಷ್ಮಾಂಭರಿಭೈಕ್ಷವಪ್ರಹಸನಂ ಕರ್ಣಾಟರಾಮಾಯಣಂ |
ಕಿಂಚೇಮಾಂ ಚಿದಭೇದಕಲ್ಪಲತಿಕಾಂ ಕೃತ್ವಾ ಬುಧೈರ್ಗೀಯತೇ ||

2 ತನ್ನ ಸುಧಾಲಹರಿಯೆಂಬ ಚಂಪೂಗ್ರಂಥದಲ್ಲಿ ತನ್ನ ವಿಷಯವಾಗಿ ಹೀಗೆ ಹೇಳಿಕೊಂಡಿದ್ದಾನೆ—

ಯಃ ಶ್ರೀರಾಮಪುರೀವರಾಮೃತಕಲಾಧಿಕ್ಕಾರಿ ಕಾರುಣ್ಯದೃ |
ಕ್ಸಂಕ್ರಾಂತಾಖಿಲ ಶಾಸ್ತ್ರಭೂಷಣಮಣಿಃ ಸಾಹಿತ್ಯಲೀಲಾಖನಿಃ ||

ಇವನ ಗ್ರಂಥಗಳಲ್ಲಿ

1. ರಾಮಾಯಣ

. ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 195, ಪದ್ಯ 9865. ನಮಗೆ ದೊರೆತ ಪ್ರತಿಯಲ್ಲಿ ಗ್ರಂಥದ ಆದಿಭಾಗವಿರಲಿಲ್ಲ. ಈ ಕಥೆಯನ್ನು ಶಿವನು ಪಾರ್ವತಿಗೆ ಹೇಳಿದಂತೆಯೂ ಆಮೇಲೆ ಸೂತನು ಋಷಿಗಳಿಗೆ ಹೇಳಿದಂತೆಯೂ ತಿಳಿಯುತ್ತದೆ ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ರಾಮಚಂದ್ರಪಾದಾರವಿಂದವಂದನಪವನನಂದನವರಪ್ರಸಾದಾಸಾದಿತಸರ ಸಸಾಹಿತ್ಯಸಾಮ್ರಾಜ್ಯಸರ್ವಂಕಷ ಚತುರ್ವಿಧಕವಿತಾಪರಿಶೀಲನಾತ್ಮನಿಷ್ಠಾಗರಿಷ್ಠಗಾಂಧರ್ವಕಳಾವಿದ ವಿದ್ವಜ್ಜನೋಪಲಾಲನೀಯ ರಾಮಪುರೀಪಂಪೆಯೂರಾಮಾತ್ಯತನೂಭವ ವೆಂಕಾಹ್ವಯವಿರಚಿತಮಾದ ಶ್ರೀಗುದ್ರಾಮಾಯಣಮಹಾಪ್ರಬಂಧದಲ್ಲಿ.

ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹೇಮಂತವರ್ಣನೆ.

ಅಂಬರಕೆ ಕಳುಪಿ ಸಸಿಬಿಂಬಮಂ ಜಡೆಯೊಳಿರು ।
ವಂಬುಜಾನನೆಯು ನೀರಧಿಗಟ್ಟಿ ಪುಲಿದೊವಲಿ ।
ನಂಬರವ ಪೊದೆದು ಕಾಂತಾಲಿಂಗನಂಗೈದು ಕೆದಱುತಿಂಗಳಗಂಗಳ ॥
ಬೆಂಬಿಡದೆ ವಟನೆಟಿಲ ಸಾರಲೆಲರುಣಿವೆದೆಯ ।
ನಂಬರಂಗೈದು ನಿಜಪಕ್ಕಗಳನಾಳಿದನ ।
ನಂಬುಧಿಯ ತಾಣಗೈದಿಟ್ಟ ಜಿಮಭೂಪಾಲನುಪಟಳಕ್ಕಳ್ಳಿ ಭಯದಿ ॥

ಶರದೃತು

ಜಕ್ಕವಕ್ಕಿಗಳಿಂಗಹಸ್ಕರೋಪಾಸನೆಯ ।
ಮಿಕ್ಕು ಜೀವಂಜೀವತತಿಗೆ ಚಾಂದ್ರಾಯಣವ ।
ಸೊಕ್ಕುಮೌನವ ಬಕಂಗಳಿಗೆ ಹಂಸೀಗಣಕೆ ತೀರ್ಥಯಾತ್ರಾನಿಯಮನಮುಂ ॥
ಎಕ್ಕತುಳನದಿನದಗಳಿಗೆ ಗುಹಾವಾಸವ।
ನ್ನಿಕ್ಕಱಿಂದು ದೇಶಗೈಯಲ್ ಶರದೆಳ್ಯೇಗಿ ॥
ಕಕ್ಕುಲಿತೆಯಿಂ ಪಿಡಿದುವಾಸಮಯದೊಳು ಘನಾಪಾಯಕೃಶೈನ ಚಾತಕಂ ॥

ವನ

ಅಳಿಕುಳಧ್ವಾನದಿಂ ಕಳಕಂಠಗಾನದಿಂ ।

ಕಲಹಂಸಯಾನದಿಂ ಕುಸುಮರಸಸಾರದಿಂ ।
ಕಲಿತಶುಕನಾದದಿಂದೆಸೆವ ಪ್ರತಾನಸನ್ಮಂಟಪಸ್ಥಾನದಿಂ ॥
ಲಲಿತಸುಮಗಂಪಿನಿಂ ಫಳರಸದ ಬಿಣ್ಪಿನಿಂ ।
ಬಲುನೆಟಿಲ ತಣ್ಪಿನಿಂ ಬಣ್ಣ ಗಿಳಿಯಿಂಪಿನಿಂ ।
ಮಲಯಪವಮಾನಂಗೆ ನಿಳಯದಂತಾವನಂ ಘನಮನೋಹರವಾದುದು ॥

ಶಾಲಿವನ

ಮೊಳೆಯುತ್ತ ಕರಲಾಗಿ ಮತ್ತೆ ನೀರೇಱುತಂ ।
ಒಳಗಂಗಳಗಲುತಂ ನಳನಳಿಸಿ ಬೆಳೆಯುತಂ ।
ಒಳಗೊಳಗೆ ಪೊಡೆಯಾಂತು ಪೊಱಪೊಣ್ಮೆ ಪಾಲ್ದುಂಬಿ ಪಾಲ್ದುಂಬಿಗಳ ಕರೆಯುತ ॥
ಗಿಳಿಗಳೊಳ್ ಕೆಳೆಯಾಗಿ ಬೆಳೆದೇನು ವಾರ್ಧಿಕ್ಯ ।
ಮುಱಿಯದಾದುದೆನುತ್ತೆ ಬಳುಕಿ ಶಾಲೀವನಂ ।
ತಲೆವಾಗಿತೆಂಬಂತೆ ಪಣ್ದೆನೆಗಳಾಂತೆಸೆವುವಲ್ಲಲ್ಲಿ ಸಂತಸದಲಿ ॥

ಚಿತ್ರಕೂಟ

ಹರಿಯಚ್ಪಿನವಿಧಿಯು ಗದ್ದುಗೆ ಲಕುಮಿಯಿಕ್ಕೆ ಭೂ ।
ಸ್ಮರನ ಮೈತ್ರತೆ ಮನಸ್ಸಂಭವನ ತೋಮರಂ ।
ಪರಮೆಗಳ ಭೋಜನದಶಾಲೆ ಸೌಭ್ಯದಾಗಾರಮಾಗಿರಲು ಮಗುಳು ॥
ತರುಣಿಯರ ಮುಖಶರ್ವರೀನಾಥನಿಂದೆ ತಾ ।
ವರೆಯಾದೆವೆಂದು ಮಱುಗುತ್ತವಿರಲದ್ರಿಮಣಿ ।
ತರಣಿಯಿಂ ವಿಕಸನಂಗೈಸಿದುದೊ ಎನಲಬ್ಜಸಂಕುಲಂ ಶೋಭಿಸಿದುದು ॥

ಸಂಧ್ಯಾರಾಗ

ಸ್ಮರನ ವಿಜಯೋತ್ಸವದ ರತುನದ ಪತಾಕೆಯಿದೊ ।
ವರುಣಸೌಧಸ್ಥಗಿತಪದ್ಮರಾಗದ ಕೆಂಪೊ ।
ಹರನ ಜಟೆಗಳ ಕಾಂತಿ ಪರಕಲಿಸಿ ತೋಱುವುದೊ ಕೆಂಗಣ್ಗೊನೆಯ ಕಾಂತಿಯೊ ॥
ತರಣಿಯೈತಹ ಮಾರ್ಗರತುನಸೋಪಾನಂಗ ।
ಳುರುಕಾಂತಿ ಪಸರಿಸಿತೊ ಎನಲು ಸಂಧ್ಯಾರಾಗ ।
ಕರಮೆಸೆದುದಂಬರದಮಣಿ ಸರಿಯಲೊಡನೆ ಬರುವರುಣದೇಹಜ್ಞನಿಸ್ಸೊಲು ॥

2. ರವಾಭ್ಯುದಯ

ಇದು ಚಂಪೂರೂಪವಾಗಿದೆ. ಇದರಲ್ಲಿ ಲಕ್ಷ್ಮೀದೇವಿಯು ಅವತ್ತ

ರಾದಿ ವಿಷಯಗಳು ಹೇಳಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ.—

ಅಮಂದರಸಬಂಧುರಭ್ರಮಿತಚಿತ್ತಪುಷ್ಪಂಧಯುಂ ।
ಕ್ರಮಕ್ರಮವುಪೋಷಿತಪ್ರಜುರಭಾವಭಾವಾಲಯಂ ॥
ಚಮತ್ಕೃತಿಕೃತೀಶ್ವರಸ್ಪಹೃದಯಾಳಿನೋದೋದಯಂ ।
ರಮಾಭ್ಯುದಯಮುಂ ರಮಾಭ್ಯುದಯಮಂ ನತಗೀಯದೇ ॥
ಕಾವ್ಯಾಲಂಕರಣಗತಿ । ಸೇವ್ಯಂ ದುರ್ಬೋಧಕುಕವಿಜನಕವಿಭಾವ್ಯಂ ।
ಭವ್ಯಂ ರಸಿಕಗಣಂ ಸಂ । ಸ್ತವ್ಯಂ ಮತ್ಕಾವ್ಯಮವನಿಯೊಳ್ ವಾಸ್ತವ್ಯಂ ॥

ಗ್ರಂಥಾವತಾರದಲ್ಲಿ ರಾಮಸ್ತುತಿ ಇದೆ. ಬಳಿಕ ಕವಿ ಸೀತೆ, ಆಂಜನೇಯ, ಈಶ್ವರ, ಪಾರ್ವತಿ, ಗಣೇಶ, ಸರಸ್ವತಿ, ವಾಲ್ಮೀಕಿ, ವ್ಯಾಸ ಇವರುಗಳನ್ನು ಸ್ತುತಿಸಿದ್ದಾನೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ನಿಖಿಲಬ್ರಹ್ಮಾಂಡಕಬ್ರಹ್ಮಮಕುಟಮಣಿಗಣಪ್ರಭಾಪಟಲನೀರಾಜಿತಶ್ರೀರಾಮಚಂದ್ರಪಾದಾರವಿಂದನಿಷ್ಯಂದಮರಂದಾಸ್ವಾದನತುಂದಿಲೇಂದಿಂದಿರಾಯಮಾಣಮಾನಸ ಜಗತ್ಪ್ರಾಣನಂದನಕಾರುಣ್ಯಕಟಾಕ್ಷಲಬ್ಧಸಾಹಿತ್ಯಸಾಮ್ರಾಜ್ಯಸರ್ವಂಕಷ ಚತುರ್ವಿಧಕವಿತಾಪರಿಶೀಲನಾತ್ಮನಿಷ್ಕಾಗರಿಷ್ಠ ಗಾಂಧರ್ವಕಲಾಧುರಂಧರ ನಿಸ್ಸಹಾಯಪ್ರಬಂಧನಿರ್ಮಾಣಚಾತುರೀಧುರೀಣೋಪಲಾಲಿತ ಶ್ರೀರಾಮಪುರೀಹಂಪೆಯಾಮಾತ್ಯತನೂಭವ ವೆಂಕಯಾಮಾತ್ಯವಿರಚಿತ ರಮಾಭ್ಯುದಯಮಹಾಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕೋತಿಯ ಮರಿಗಳು

ಪಿಡಿದಂಗಾರಮನೈದೆ ಪಣ್ಣೆನುತಲುಂ ಕೈಜಾರ್ದೆ ಬೀಜುತ್ತಲುಂ ।
ಕೊಡಪುತ್ತಂ ಕರವಾಲದಂಡಗಳುಮುಂ ವೈಕಾರದಿಂ ಪಲ್ಗಳಂ ॥
ಬಿಡುತಂ ನರ್ತನಗೈದು ಮೌನಿಗಣಕಂ ಹಾಸ್ಯಂಗಳಂ ತೋರುತಂ ।
ದೆಡೆಯಾಡುತ್ತಿಹ ಕೇಶವೋತ್ಕಗಳೇಂ ತಪ್ಪಲ್ಗಳೊಳ್ ತೋಪುವೋ ॥

ಯುದ್ಧ

ಘಾಣಂಘಾಣಣಣಣ್ಣಘಾನಕಮಹಾಭೇರೀರವವ್ಯಾಪ್ತಿಯಿಂ।
ಕ್ಷ್ಮೋಣೀಮಂಡಲದಿಗ್ವಿಭಾಗಕುಧರಶ್ರೇಣೀಗೃಹಾರಂಭಿಗ ॥
ಕ್ಷ್ಮೋಣೋದ್ಭೋಜನೆಗೈಸುತಂ ಕ್ಷಿತರಜಸ್ಸಾಂದ್ರಾಂಧ್ಯಮುಂ ಬೀಱಿ ಗ ।
ರ್ವಾಣಾರಿ ಪೃಥನಾನಸೇನೆ ನಡೆದತ್ತೇನೆಂಬೆನಾಟೋಪಮಂ॥

ಘಟಿತಾನ್ಯೋನ್ಯಾಗ್ರಭಾಗಪ್ರಕಟಿತರಟನೋದ್ಘಾಟನಾಘಾತಿತಾಸಿ।
ಸ್ಫುಟಿತೋದ್ಯದ್ವರ್ಮಮರ್ಮಪ್ರಸೃತಶಿಖಿಕಣಂ ಜುರ್ಜಲನ್ಯೋನ್ಯದಿಂದಂ॥
ಸ್ಫುಟಶೈಲಾಘಾತವೃಕ್ಷಪ್ರಹರಣಶಕುಂತಾಭಿಘಾತಂಗಳಿಂ ದೃ।
ಕ್ಕಟುವಾದತ್ತಾಜಿರಂಗಂ ವಿಕಟಪಟಪಟಾತತ್ಕಾರಘೋಷಾನುಷಂಗಂ॥

ಹನುಮದ್ವಿಲಾಸವು ಷಟ್ಪದಿಯಲ್ಲಿ ಬರೆದಿರುವಂತೆ ತಿಳಿಯುತ್ತದೆ.

ಸಿಂಗರಾಚಾರ್ಯ ಸು. 1770

ಈತನು ಶ್ರೀರಂಗವಮಾಹಾತ್ಮ್ಯವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ; ಮೈಸೂರು ರಾಜನಾದ ಬೆಟ್ಟದ ಚಾಮರಾಜನಿಗೆ ಉಪಾಧ್ಯಾಯನಾಗಿದ್ದಂತೆ ಹೇಳುತ್ತಾನೆ. ಈ ರಾಜನು 1770 ರಿಂದ 1776ರವರೆಗೆ ಆಳಿದ ಬೆಟ್ಟದ ಚಾಮರಾಜನೆಂದು ತೋರುತ್ತದೆ. ರಾಜ ಬಡೆಯರ ತಮ್ಮನಾದ ಒಬ್ಬ ಬೆಟ್ಟದಚಾಮರಾಜನು ಸುಮಾರು1600ರಲ್ಲಿದ್ದನು. ಕವಿ ಈತನ ಉಪಾಧ್ಯಾಯನಾಗಿದ್ದಿರಬಹುದು ಎಂಬ ಸಂದೇಹಕ್ಕೆ ಅವಕಾಶವುಂಟು. ಆದರೆ ಇವನ ಬಂಧವನ್ನು ನೋಡಿದರೆ ಇವನು ಅಷ್ಟುಹಿಂದಣವನಲ್ಲ ಎಂದು ಹೇಳಬಹುದಾಗಿದೆ. ಅಲ್ಲದೆ ತನ್ನಕಾಲಕ್ಕೆ ಹಿಂದೆ ಪದ್ಯರೂಪವಾದ ಶ್ರೀರಂಗವಮಾಹಾತ್ಮ್ಯವು ಇದ್ದಂತೆ

ಕಬ್ಬಿಗರಾ ಪದ್ಯನುನುಂ | ಡುಬ್ಬಸವಿಂ ದೂಱಿ' ಪಟ್ಟಿ'ಯರೆನ್ನೀಕೃತಿಯುಂ|
ಕಬ್ಬಿಗಿನ ರಸಿಕಮನುಜರ್ | ಪರ್ಬಿದ ಮುದದಿಂದೆ ಸವಿಯುರೇ ಸಕ್ಕರೆಯಂ॥

ಎಂಬ ಪದ್ಯದಲ್ಲಿ ಸೂಚಿಸುವುದರಿಂದ ಒಂದುನೇಳೆ ಮಲ್ಲಿಕಾರ್ಜುನನು (1678)ಬರೆದಿರುವ ಚಂಪೂರೂಪವಾದ ಶ್ರೀರಂಗವಮಾಹಾತ್ಮ್ಯಕ್ಕೆ ಈ ಮಾತು ಅನ್ವಯಿಸಬಹುದು. ಹಾಗಿದ್ದಪಕ್ಷದಲ್ಲಿ ಈಸೂಚನೆಯಮೇಲೆ ಕವಿಗೆ ಹೇಳಿರುವ ಕಾಲವನ್ನು ದೃಢೀಕರಿಸುತ್ತದೆ.

ಇವನ ಗ್ರಂಥ

ಶ್ರೀರಂಗವಮಾಹಾತ್ಮ್ಯ

ಇದು ಗದ್ಯರೂಪವಾಗಿದೆ;10 ಅಧ್ಯಾಯಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಶ್ರೀರಂಗಕ್ಷೇತ್ರದ ಮಾಹಾತ್ಮ್ಯವು ಹೇಳಿದೆ. ಇದರ ಮೂಲವು ಬ್ರಹ್ಮಾಂಡಪುರಾಣದಲ್ಲಿ ಮಹೇಶ್ವರನಾರದಸಂವಾದರೂಪವಾಗಿದೆ. ಗ್ರಂ

ಥಾದಿಯುಲ್ಲಿ 3 ಪದ್ಯಗಳಿವೆ; ಅಂತ್ಯದಲ್ಲಿ ಈ ಗದ್ಯವಿದೆ—

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಯದುಕುಲಪಯಃ ಪಾರಾವಾರಕಲಾನಿಧಿ ಬಿರುದೆಂತೆಂಬರಗಂಡ ಲೋಕೈಕವೀರ ಶ್ರೀನರಪತಿ ಬಿಟ್ಟದಚಾಮ ಮಹಾರಾಯನ ಉಪಾಧ್ಯಾಯ ಸಿಂಗರಾಚಾರ್ಯವಿರಚಿತಮಪ್ಪ ಶ್ರೀರಂಗಮಾಹಾತ್ಮ್ಯ॥ ದೊಳ್.

ಈಗ್ರಂಥದಿಂದ ಆದಿಭಾಗದಲ್ಲಿರುವ ಕವಿವಿಷಯಕವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಭೂಭೃದ್ವರ್ಯಕದಂಬವಂದಿತಪದದ್ವಂದ್ವಾರವಿಂದೋಲ್ಲಸ।
ಚ್ಛ್ರೀಭೃದ್ಬಿಟ್ಟದಚಾಮಭೂಪನ ಮಹದ್ವಂಶಾವತೀಸಂಶ್ರಿತಂ॥
ಸಭ್ಯಂ ಸಂಪ್ರತಿ ಸಿಂಗರಾರ್ಯಕವಿರಾಡಧ್ಯಾಪಕಂ ಕನ್ನಡ।
ಶ್ರೀಭಾಷಾತತಿಯಿಂ ಬುಧಂ ರಚಿಸಿದಂ ಶ್ರೀರಂಗಮಾಹಾತ್ಮ್ಯಮುಂ॥

———

ಮಹಮೂರ್ತಿ 1772

ಈತನು ಅಷ್ಟಾವರಣತಿಲಕವನ್ನು ಬರೆದಿದ್ದಾನೆ. ಇವನು ವೀರ ಶೈವಕವಿ. ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ:-ಪೊಡವಿಡಿಯ ಹುಚ್ಚಯ್ಯ, ಮಗ ಗುರುಸಿದ್ಧ, ಮಗ ಕರಿವೀರಯ್ಯ, ಮಗ ವೈಯಪ್ಪ, ಮಗ ಕವಿ ಮಹಮೂರ್ತಿ. ಇವನಿಗೆ ಗುರುವಯ್ಯ, ಪರಮಯ್ಯ, ಕರಿವೀರಯ್ಯ ಎಂಬ ಮೂವರು ತಮ್ಮಂದಿರಿದ್ದರು. ಇವನ ಗುರು ಗುರುಸಿದ್ಧ. ಇವನು ಕೃಷ್ಣತೀರದಲ್ಲಿರುವ ನಾಕಪುರದೊಳಗೆ ನಿಷ್ಠೆಗಳು ಕಟ್ಟಿಸಿ ಕೊಟ್ಟ ಮಠದಲ್ಲಿ ವಾಸವಾಡಿಕೊಂಡಿದ್ದಂತೆ ಹೇಳುತ್ತಾನೆ. ಈ ಗ್ರಂಥವನ್ನು ಶಕ 1695 ನೆಯ ನಂದನದಲ್ಲಿ, ಎಂದರೆ 1772 ರಲ್ಲಿ, ರಚಿಸಿದಂತೆ ಹೇಳಿದೆ.

ಪೂರ್ವಕವಿಗಳನ್ನು ಈಪದ್ಯಭಾಗದಲ್ಲಿಹೇಳಿದ್ದಾನೆ.—

ವರಕಾಳಿದಾಸಗೆ ಮಯೂರ ಮಲುಹಣಗೆ ಪಾ |
ಲ್ಕುರಿಕೆಸೋಮೇಶ್ವರಗೆ ಗುಬ್ಬಿಯಾಮಲ್ಲಣಾ |
ರ್ಯರಿಗೆ ನಿಜಗುಣದೇವನಿಗೆ ಭೀಮಕವಿಗಳಡಿದಾವರೆಗೆ ನತನಪ್ಪೆನು ॥

ಇವನ ಗ್ರಂಥ

ಅಷ್ಟಾವರಣತಿಲಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 11, ಪದ್ಯ 1336. ಇದರಲ್ಲಿ ಅಷ್ಟಾವರಣಗಳ, ಎಂದರೆ ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಪಂಚಾಕ್ಷರಿ ಪಾದೋದಕ ಪ್ರಸಾದ ಇವುಗಳ, ಮಹಿಮೆ ನಿರೂಪಿಸಿದೆ. ಅಲ್ಲಲ್ಲಿ ಜೈನರಿಗೂ ವೀರಶೈವರಿಗೂ ನಡೆದ ವಾದಗಳೂ ಕೆಲವರು ರಾಜರುಗಳ ಆಳಿಕೆಯ ವಿಷಯಗಳೂ ಹೇಳವೆ. ಈ ಗ್ರಂಥವು ಚೆನ್ನಬಸವೇಶ್ವರನು ನೀಲಮ್ಮನಿಗೆ ಹೇಳಿದ ಶರಣರ ಉನ್ನತಕಥೆ, ಎಂದೂ "ನವಿಲೆಪುರದರಸ ದೇವರಾಜಂಗೆ ಅವನ ಸತಿ ಮಧುವಾನುಣಿಪೇಳಿದ ಕಾವ್ಯ" ಎಂದೂ ಕವಿ ಹೇಳುತ್ತಾನೆ. ಇದಕ್ಕೆ ದೇವರಾಜ ಕಾವ್ಯ ಎಂಬ ಹೆಸರೂ ಇರುವಂತೆ ತೋರುತ್ತದೆ.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಒಳಕ ಕವಿ ಪಾರ್ವತಿ, ಗಂಗಾದೇವಿ, ಷಣ್ಮುಖ, ಗಣೇಶ, ವೀರೇಶ, ಬಸವ, ಚೆನ್ನಬಸವ. ನೀಲಮ್ಮ, ಪ್ರಭುದೇವ. ಅಮುರಗುಂಡದ ಮಲ್ಲಿಕಾರ್ಜುನ, ಸುಗ್ಗಲದೇವಿ, ಆದಯ್ಯ, ಸ್ವಗುರು ಗುರುಸಿದ್ಧ, ಅನ್ನದಾನೇಶ, ಮಡಿವಾಳ, ಸಿದ್ಧರಾಮ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದಾಹರಿಸಿ ಬರೆಯುತ್ತೇವೆ—

ಸ್ತ್ರೀಯರು

ಒಲ್ಲದವನಲಿ'ಸುವರ್ ಒಲಿದವನನ ಬ'ಸುವರ್ |
ಇಲ್ಲೆಯಿಂದಲಿ'ಯದನಕೂಡೆ ಮಾತಾಡುವರ್ |
ಕಲ್ಲೆದೆಯು ಕರಗಿಪರ್ ಸ್ವಪ್ನದಲಿವೊದಲಾಗಿ ಕಲೆಸಿಲೆಯು ತೋಜ್ಞಾತಿಶರು ||
ತೃಣಂಗೊಳಿಸುವರ್ ತಮ್ಮ ಜಲಗೆಲಿಸುವರ್ |
ಬಲ್ಲತನದೋಜಿವರ್ ಕುಲ್ಲಕುಹಕದಿ ನಿಲಯ: |
ದಲೊಬ್ಬನಡಗಿಸುತ ಹೊಜ್ಜಿಗೊಬ್ಬಸಿಟ್ಟಿಹರು ಒಲ್ಲೆನೊಲ್ಲೆನು ಧರಣಿವಾ||
ಸತಿಯಿಂದ ಸತ್ಕೀರ್ತಿ ಸತಿಯಿಂದಲಪಕೀರ್ತಿ |
ಸತಿಯಿಂದಧೋಗತಿಯು ಸತಿಯಿಂದ ಸನ್ಮತಿಯು|
ಸತಿಯಿಂದಲಾಪೇಕ್ಷೆ ಸತಿಯಿಂದ ಸನ್ಮೋಕ್ಷ ಸತಿಯು ಮೋಹದ ಸಂಕಲೆ||
ಸತಿಯಿಂದ ಕಾರ್ಪಣ್ಯ ಸತಿಯಿಂದಲತಿಪುಣ್ಯ |

ಸತಿಯಿಂದ ಮುಂವರ್ಗ ಸತಿಯಿಂದ ಸಂಸ್ವರ್ಗ।
ಸತಿಯಿಲ್ಲದವಗೆ ಇಹಪರಲೋಕದಲ್ಲಿ ಸದ್ಗತಿಯಿಲ್ಲ ಕೇಳವನಿಪಾ॥
ಇಂದುಮುಂಡ ವೆಲ್ಲಿ ರಾಹುವಿಹ ಸ್ಥಳವೆಲ್ಲಿ।
ಬಂದು ತದ್ಗ್ರಾಸಮಂ ಮಾಡುವ ಪರಾಕ್ರಮವ।
ಹೊಂದಿದುರ್ ಸತತಮುಂ ತುಡುಕದಲೆ ಸುಮ್ಮನಿಹನೇನುಕಾರಣವೆಂದಡೆ॥
ಮುಂದಗಮನೆಯು ಚಂದ್ರಸಾದೃಶ್ಯಮುಖದೊಳಗೆ।
ಸುಂದರದ ನಾಸಿಕವ ಕಾಣುತಲಿ ಭಗಪನಿಹ।
ನೆಂದಜ್ರಿದು ಬೈತಲೆಯ ವೇಣಿಸಹಭುಜಗಭಯಗೊಂಡು ತುಡುಕದಲಿರ್ಪನು॥

— — —

ವರದೇಂದ್ರ 1774

ಈತನು ತಂತ್ರಸಾರವನ್ನು ಬರೆದಿದ್ದಾನೆ. ಇವನು ಮಾಧ್ವಕವಿ. ನಂಜನಗೂಡು ರಾಘವೇಂದ್ರಮಠದಲ್ಲಿ ಸ್ವಾಮಿಯಾಗಿದ್ದನು. ಇವನ ಗುರು ವಸುಧೇಂದ್ರ. ಈತನ ಕಾಲವು 1774 ಎಂದು ಬಂದು ಶಾಸನ ದಿಂದ[1] ತಿಳಿಯುತ್ತದೆ

ಇವನ ಗ್ರಂಥ

ತಂತ್ರಸಾರ

ಇದು ಹಾಡಿನರೂಪವಾಗಿದೆ; ಪದ 29. ನರಸಿಂಹಭಾಗವತನ ಮಗನಾದ ಜಗನ್ನಾಥದಾಸನ ಪಾರ್ಥಸಾನುಸಾರವಾಗಿ ಈಗ್ರಂಥವನ್ನು ವಸುಧೇಂದ್ರನ ಕೃಪೆಯಿಂದ ರಚಿಸಿದಂತೆ ಕವಿ ಹೇಳುತ್ತಾನೆ. ಇದು ಮೂಲರಾಮನು ಬ್ರಹ್ಮನಿಗೆ ಉಪದೇಶಮಾಡಿದ ಮಹಾಮಂತ್ರದ ಮರ್ಮ ಎಂದು ಹೇಳಿದೆ. ಇದರಿಂದ ಬಂದುಪದವನ್ನು ತೆಗೆದು ಬರೆಯುತ್ತೇನೆ:

ಪಲ್ಲವಿ॥ ಪಾಹಿ ಪಂಕೇರುಹೇಕ್ಷಣ ಸರ್ವಕಾಮದ।
ಪಾಹಿ ಪದ್ಮಾಲಯಾನಿಕೇತನ ಸದಾ॥
ಆವ ಸರ್ವೋತ್ತಮನು ಆವಾವ ಗುಣಗಳಿಗೆ। ಆವಾವ ಶಬ್ದವಾಚ್ಯನು ಕರುಣದಿ।
ಈವಿಚಾರವನು ಪೇಳಿಸಿನಲು ನಸುನಗುತ ರಾ।ಜೀವಸಂಭವಗಾಗಳೇಕೆಂದಿ ನುಡಿದ॥
ವನಜಸಂಭವ ಕೇಳು ನಾನೆ ಸರ್ವೋತ್ತಮನು। ಎನಗನಂತಾನಂತಮಂಗಳಗುಣ।
ಪ್ರಣವವಾಚ್ಯನು ನಾನುಳಿದವರ್ಗೋಪೇತ। ಪ್ರಣವವಿಚಾರವನುಪೇಳ್ವೆನಿನಗೆ॥

1. *Mysor Archaeological Report* for 1917, para. 151.

ಜಗನ್ನಾಥದಾಸ ಸು. 1775

ಈತನು ಹರಿಕಥಾಮೃತಸಾರ, ಕೀರ್ತನೆಗಳು, ತತ್ತ್ವಸಾರವೆಂಬ ಗ್ರಂಥಗಳನ್ನು ಬರೆದಿದ್ದಾನೆ ಇವನು ಮಾಧ್ವಕವಿ; ಗೋಪಾಲದಾಸನ (ಸು. 1750) ಶಿಷ್ಯನು. ಇವನ ತಂದೆ ನರಸಿಂಹಾರ್ಯ. ಈತನಿಗೆ ಜಗನ್ನಾಥರಾಯ ಎಂಬ ಹೆಸರೂ ಉಂಟು. ದಾಸಕೂಟದವರನ್ನು ನಿಂದಿಸಿದುದರಿಂದ ಈತನಿಗೆ ಹೃದ್ರೋಗವು ಕಂಡು ವಿಜಯರಾಯನ ಅಜ್ಞೆಯನುಸಾರವಾಗಿ ಗೋಪಾಲದಾಸನಿಂದ ಪರಿಹಾರವಾದಂತೆ ಹೇಳುತ್ತಾರೆ. ಇವನ ಸ್ಥಳ ಮಾನವಿ. ನರದೇಂದ್ರನ (1774) ಸಮಕಾಲದವನೆಂದು ಅವನ ಚರಿತ್ರದಿಂದ ತಿಳಿಯುತ್ತದೆ.

ಇವನ ಗ್ರಂಥಗಳಲ್ಲಿ

ಹರಿಕಥಾಮೃತಸಾರ

ಇದು ಭೂಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 33, ಪದ್ಯ 953. ಈಗ್ರಂಥವು ವಿಷ್ಣುಸ್ತುತಿರೂಪವಾಗಿಯೂ ದ್ವೈತವೇದಾಂತಬೋಧಕವಾಗಿಯೂ ಇದೆ. ಆರಂಭದಲ್ಲಿ ಶ್ರೀಪಾದರಾಯ, ವ್ಯಾಸರಾಯ ಪುರಂದರದಾಸ, ವಿಜಯದಾಸ ಇವರುಗಳನ್ನು ಸ್ತುತಿಸುವ ಸಂಸ್ಕೃತಶ್ಲೋಕಗಳಿವೆ. ಅನಂತರ ಕವಿ ನರಸಿಂಹ, ಲಕ್ಷ್ಮಿ ಬ್ರಹ್ಮ, ವಾಯು ಸರಸ್ವತಿ, ಮಾರುತಪತ್ನಿ ಬಾದರಾಯಣ, ಮಧ್ವಾಚಾರ್ಯ, ಶಿವ ಇವರುಗಳನ್ನು ಸ್ತುತಿಸಿ ಗ್ರಂಥವನ್ನು ಆರಂಭಿಸಿದ್ದಾನೆ. ಈಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಜನನಿಯನು ಕಾಣದಿಹ ಬಾಲಕ | ನೆನೆದು ಹಂಬಲಿಪಂತೆ ಕತ್ತಲೆ|
ಮನೆಯೊಳಡಗಿದ್ದವನ ನೋಡುತ ಸಗುತ ಹರುಷದಲಿ||
ತನಯನಂ ಬಿಗಿದಪ್ಪಿ ಕಂಸಿಪ | ಕನಲಿಕೆಯು ಕಳೆವಂತೆ ಮಧುರೂ|
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು||
ಕಂಡ ನೀರೊಳು ಮುಳುಗಿ ದೇಹವ | ದಂಡಿಸಿದ ಫಲವೇನು ದಂಡಕ |
ಮಂಡಲಂಗಳ ಧರಿಸಿ ಯತಿಯೆಂದೆನಿಸಿ ಫಲವೇನು ||
ಲಂಡಜಾಧಿಪನಂಸಗವೆ ಪದ್ಮ | ಪುಂಡರೀಕಾಕ್ಷಿ ವನಜವಕ್ತ್ರನೆಂಬಿ|
ಬಂಡುಣಿಯವೋಲಿರಿಸಿ ಸುಖಬಡದಿಪ್ಪ ಮಾನವನು||

---

1. 136 ನೆಯ ಪುಟವನ್ನು ನೋಡಿ.

ಕೀರ್ತನೆಗಳು

ಈತನ ಕೀರ್ತನೆಗಳಲ್ಲಿ ಜಗನ್ನಾಥವಿಠಲ ಎಂಬ ಅಂಕಿತವಿದೆ. ಒಂದು ಕೀರ್ತನೆಯನ್ನು ಉದಾಹರಿಸುತ್ತೇವೆ—

ರಾಗ ಕಾಪಿ. ಆದಿತಾಳ.

ಪಲ್ಲವಿ|| ರಂಗ ನಿನ್ನ ಕೊಂಡಾಡುವ ಮುಂಗಳಾತ್ಮರ । ಸಂಗಸುಖವಿತ್ತು ಕಾಯೊ
ಕರುಣಾಸಾಗರ||

ಅಜಿಯರೊ ನಿನ್ನಲ್ಲದೆ ಮತ್ತನ್ಯದೇವರ। ನುಡಿಯರೊ ನೀಮಾಡಿದನಿತ್ಯೋಪಕಾರ।
ತೊಜಿಯರೊ ನಿನ್ನಂಘ್ರಿಸೇವೆ ಪ್ರತಿವಾಸರ । ಬೆರೆಯರೊ ಪರತತ್ವವಲ್ಲದ
ಇತರವಿಚಾರ||[1]||

ಕಂಕಕಂಡಲ್ಲಿ ವಿಶ್ವರೂಪನ ಕಾಂಬರೊ । ಉಂಡು ಉಣಿಸಿದ್ದು ನಿನ್ನ
ಯಜ್ಞವೆಂಬರೊ।
ಬಂಡುಣಿಯುಂದದಿ ನಾವಾಪೃತನ ಸವಿವರೊ । ಹೆಂಡರು ಮಕ್ಕಳು
ನಿನ್ನ ದಾಸರೆಂಬರೋ ||[2]||

ನಗುವರೊ ರೋದಿಸುವರೊ ನಾಟ್ಯವಾಡುವರೊ । ಬಗೆಯರೊ ಬಕತನಭಾಗ್ಯ
ಭಾಗವತರು।
ತೆಗೆಯರೊ ನಿನ್ನಲ್ಲಿ ಮನವನೊಮ್ಮೆಗಾದರು । ಜಗನ್ನಾಥವಿಠಲ ನಿನ್ನವರೆನು
ಧನ್ಯರೋ ||[3]||

ಈತನ ತತ್ವಸುವ್ವಾಲಿ ಹಾಡಿನ ರೂಪವಾಗಿದೆ ; ಇದರಲ್ಲಿ 400 ಚರಣಗಳಿವೆ.

ಗುರುಗೋಪಾಲದಾಸ ಸು. 1775

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಗೋಪಾಲದಾಸನ(ಸು. 1750) ಶಿಷ್ಯನು. ಇವನ ಕೀರ್ತನೆಗಳಲ್ಲಿ ಗುರು ಗೋಪಾಲವಿಠಲ ಎಂಬ ಅಂಕಿತವಿದೆ. ಒಂದನ್ನು ಉದಾಹರಿಸುತ್ತೇವೆ—

ರಾಗ ಪಂತುವರಾಳಿ. ಅಟತಾಳ.

||ಪಲ್ಲವಿ|| ಸಾರ್ಥಕ ಇದ್ದುದಕೆ||
ಅನಂತಲ್ಲ || ಸಿರಿಪಾರ್ಥಸಖನ ಗುಣಕೀರ್ತನೆಮಾಡಲು||

ಎಂಟೆಂಟೆರಡುನಾಲ್ಕು ನಾಡಿಯಲಿ | ಎಂಟೆಂಟೆರಡು ರೂಪದಲಿ|
ಎಂಟೆಂಟೆರಡು ಮೂಱಾಯ್ದು ವ್ಯಂಜನದಿ | ಎಂಟೆಂಟೆಂಟು ಮತ್ತೆಂಟು ಸ್ವರ
ತಿಳಿ ||1||

ಎಂಟೆಂಟೆರಡು ಕೇಸರದಳವಾ | ಜಿಂಟುಕಮಲಕರ್ಣಿಕೆಯಲಿ|
ಎಂಟೆಂಟಾಱುನಾಲ್ಕುಸ್ತಂಭರಥ | ಮಂಟಪದೊಳಗಿಹ ವೆಂಕಟನ ನೋಡು ||2||
ಎಂಟುಭುಜಗಳಲಿ ಎಂಟುಆಯುಧಪಿಡಿ | ದೆಂಟು ದಳಗಳಲಿ ತಿರುಗುತಲಿ |
ಎಂಟುವಿಧವಿ ಪ್ರೇರಣೆಪಡಿಸುವ ನನ್ನ ' ನಂಟತಂದೆ ಗುರುಗೋಪಾಲವಿಠಲನ
ತಿಳಿ ||3||

ವರದಗೋಪಾಲದಾಸ ಸು. 1775

ಇವನು ಕೀರ್ತನೆಗಳನ್ನು ಬರೆದಿದ್ದಾನೆ. ಈತನು ಮಾಧ್ವಕವಿ, ಗೋಪಾಲದಾಸನ (ಸು. 1750) ಶಿಷ್ಯನು. ಇವನ ಕೀರ್ತನೆಗಳಲ್ಲಿ ವರದ ಗೋಪಾಲವಿಠಲ ಎಂಬ ಅಂಕಿತವು ದೊರೆಯುತ್ತದೆ. ಬಂದನ್ನು ತೆಗೆದು ಬರೆಯುತ್ತೇವೆ—

ಪಲ್ಲವಿ|| ರಾಮನಾಮವ ಭಜಿಸಿದವರಿಗುಂಟೆ ಭವಬಂಧನ ||
ಅನುಪಲ್ಲವಿ|| ಕಾಮುಹರನ ಸತಿಯು ಸದಾ ನೇಮದಿಂದ ಭಜಿಸಿದ ಶ್ರೀ||
ಶಿವನು ಧನ್ಯನಾದ ಪೌನಿ | ಯುವತಿ ಪಾವನೆಯಾದಳು |
ರವಿಸುತನು ಪದವಿಪಡೆದ | ಧ್ರುವನು ದಿವಿಜನೆನಿಸಿದ ಶ್ರೀ ||1||
ಳುವರಪ್ರಹ್ಲಾದರ್ಪೊಪದಿ | ವರವಿಭೀಷಣರೆಲ್ಲರು |
ವರದಗೋಪಾಲವಿಠಲನಾಮ | ದುಚ್ಚರಿಸಲಾನಂದಕ ಶ್ರೀ ||2||

ವ್ಯಾಸವಿಠಲದಾಸ ಸು. 1775

ಈತನು ಕೀರ್ತನೆಗಳನ್ನು ಬರೆದಿದ್ದಾನೆ ಇವನು ಮಾಧ್ವಕವಿ; ವೇಣುಗೋಪಾಲದಾಸನ (ಸು. 1750) ಶಿಷ್ಯನು ಇವನಿಗೆ ಕಲ್ಲೂರ ಸುಬ್ಬಣ್ಣ ಎಂಬ ಹೆಸರೂ ಉಂಟು ಈತನ ಕೀರ್ತನೆಗಳಲ್ಲಿ ವ್ಯಾಸ ವಿಠಲ ಎಂಬ ಅಂಕಿತವಿದೆ. ಬಂದನ್ನು ಉದಾಹರಿಸುತ್ತೇವೆ—

ಪಲ್ಲವಿ| ಸತ್ಯಸಂಕಲ್ಪ ಸ್ವತಂತ್ರ ಸರ್ವೇಶ ಸರ್ವೋತ್ತಮನೆ ಸಾರ್ವಭೌಮ ||

ಅನುಪಲ್ಲವಿ॥ ಭೃತ್ಯನಿಗೆ ಒಂದ ಪಾಪಭಯಂಗಳ ಕಳೆದು | ನಿತ್ಯಪಲಿ
ಕಾವ ಸ್ವಾಮಿಪ್ರೇಮಿ॥
ಎನ್ನೆಂಥ ಪಾಪಿಷ್ಠ ಇನ್ನಿಲ್ಲ ಭವದೊಳಗೆ | ನಿನ್ನಂಥ ಕರುಣಿಯಿಲ್ಲ |
ಚೆನ್ನಗುರು ವಿಜಯರಾಯನ ಪೊಂದಿದವನೆಂದು | ಮನ್ನಿಸಿ ಸಲಹಬೇಕೋ |
ಘನಸಂಸಾರದೊಳು ? ಭವನೆಂಬವಾಟವಿಯ | ನಿನ್ನಸ್ಮೃತಿಯಿಂದು ಇರಲಿ |
ಸನ್ಮತಾಂಗಿರಮಣ ವ್ಯಾಸವಿಠಲಮುಖ್ಯ | ಮುನಿಗೊಲಿದ ಶುಭಸಿದ್ಧಾಸನ ಶ್ರೀಶ ॥1॥

ಲಕ್ಷ್ಮಣಪಂಡಿತ ಸು. 1775

ಈತನು ಅಕಾರಾದಿ ನಿಘಂಟುವನ್ನು ಬರೆದಿದ್ದಾನೆ. ಇವನು ಜೈನ ಕವಿ; ಸುಮಾರು 1775 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ

ಈನಿಘಂಟುವಿನಲ್ಲಿ ಸಂಸ್ಕೃತಶಬ್ದಗಳಿಗೆ—ಮುಖ್ಯವಾಗಿ ವೈದ್ಯ ಶಬ್ದಗಳಿಗೆ—ಕನ್ನಡದ ಪರ್ಯಾಯನಾಮಗಳು ಹೇಳಿವೆ.

ಪರಮದೇವ 1777.

ಈತನು ತುರಂಗಭಾರತ, ತತ್ವಚೌಪದ, ನಾರಾಯಣಾಕ್ಷರಮಾಲೆ ಕಾಸ್ತ್ರೋತ್ರ ಇವುಗಳನ್ನು ಬರೆದಿದ್ದಾನೆ.

ಇವನು ಹವ್ಯಕಬ್ರಾಹ್ಮಣನು; ಇವನ ತಂದೆ ಶಂಕರನಾರಾಯಣ ಜನ್ಮಸ್ಥಳ ದಕ್ಷಿಣಕನ್ನಡಜಿಲ್ಲೆಯ ಹನ್ನರವಮಾಗಣಿಯಲ್ಲಿರುವ ಸುಳಗೋಡು. ಇವನ ಮನೆತನದವರು ತೋಟವನೆಬೇಸಾಯಗಾರರಾಗಿದ್ದರು. ಇವನು ಬಹಳ ಬಡವನು. ಸಾಲದಿಂದ ಸ್ವತ್ತೆಲ್ಲಾ ಹೋಗಿ ಹೆಂಡರುಮಕ್ಕಳೊಡನೆ ಇಕ್ಕೇರಿಶಿವಾಗರದಪ್ರಾಂತಕ್ಕೆ ಬಂದು ಇಕ್ಕೇರಿ ಅಘೋರೇಶ್ವರನ ಬಳಿ ಚಿಪ್ಪಳಿಯಲ್ಲಿ ಹುಡುಗರಿಗೆ ಬಿದುಬರಹಕಲಿಸುತ್ತಿದ್ದನು. ಕ್ಷೇಮಿಗೆಸವುಹು ಎಂಬ ಊರಿನಲ್ಲಿ ಹೊಸದಾಗಿ ಪ್ರತಿಷ್ಠೆಮಾಡಿದ ಗಣಪತಿಯ ಪ್ರಾಜೆಗೆ ಇವನನ್ನು ನೇಮಿಸಿದರು. ಇಲ್ಲಿಯೇ ಇವನ ಕವಿತೆ ಪ್ರಾರಂಭವಾಯಿತು. ಲಕ್ಷ್ಮೀನಾರಾಯಣ ಎಂಬುವನು ಇವನಿಗೆ ಪೋಷಕನಾಗಿದ್ದನು. ಸೋಗದವಜನರು ಇವನನ್ನು ಗೌರವದಿಂದ ಕಾಣುತ್ತಿದ್ದರು. ತನ್ನ ಪುರಾಣವಿಷಯತನ್ನು ಮುಂದಾಗಿ ಇಷ್ಟಮಿತ್ರರಿಗೆ ತಿಳಿಸಿ

ಅವರೊಡನೆ ವಾತಾಡುತ್ತ ಸತ್ತನೆಂದು ಹೇಳುತ್ತಾರೆ. ತುರಂಗಭಾರತ ವನ್ನು ಶಕ 1700 ಹೇವಿಳಂಬಿಯುಲ್ಲಿ - ಎಂದರೆ 1777 ರಲ್ಲಿ-ಬರೆದಂತೆ ಹೇಳುತ್ತಾನೆ. ಈ ಗ್ರಂಥವನ್ನು ಕೋಣೆ ಲಕ್ಷ್ಮೀರಮಣದೇವರ ಅಂಕಿತದಲ್ಲಿ ಬರೆದಿದ್ದಾನೆ.

ಇವನ ಗ್ರಂಥಗಳಲ್ಲಿ

ತುರಂಗಭಾರತ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ: ಸಂಧಿ ೯೬,ಪದ್ಯ 4720. "ಭಾರತದ ಜಲಧಿಯೊಳು ಪೇಳ್ದ ವೃತ್ತಾಂತವನೆ ಸಂಕ್ಷೇಪದೊಳಗೆ ಬಿತ್ತರಿಸುವೆನು ತಿಳಿವಂತೆ" ಎಂದು ಹೇಳುತ್ತಾನೆ. ಗ್ರಂಥಾವತಾರದಲ್ಲಿ ಗಣೇಶಸ್ತುತಿ ಇದೆ. ಬಳಿಕ ಕವಿ ಸರಸ್ವತಿ, ಶಿವ, ವಿಷ್ಣು, ಬ್ರಹ್ಮ, ಇವರುಗಳನ್ನು ಸ್ಮರಿಸಿ ಶುಕಜ್ಞಾನಕವ್ಯಾಸಾದಿಮುನಿಗಳಿಗೆ ವಂದಿಸಿ ಗ್ರಂಥವನ್ನು ಆರಂಭಿಸಿದ್ದಾನೆ ಈ ಗ್ರಂಥದಿಂದ ಕೆಲವುಪದ್ಯಗಳನ್ನು ತೆಗೆದ ಬರೆಯುತ್ತೇವೆ—

ಹಸ್ತಿನಾವತಿ.

ಊರೊಳಗೆ ಮನೆಮನೆಯು ಚಾಗಿಲೆಳೆ ಮೆಱೆವ ಶೃಂ ।
ಗಾರಗಳ ಬಾಜಿಗಳ ತೋರಣಗಳೆಂದ ವಿ ।
ಸ್ತಾರದೊಳ್ ಪರಿವ ಕಾಲಾಳು ಮೇಲಾಳುಗಳ ಸಂದಣಿಯು ಸರಭ್ರಮಿಪಿನಿಳೆ ॥
ಭೂರಿಮಣಿ ಕೇಳ್ ಬಣ್ಣಿಸಲ್ಕರಿದು ಬೀದಿಯೊಳ್ ।
ತೇರುಗಳ ವಾಜಿಗಳ ಸ್ವಾರಿಗಳ ಮೊಱೆವ ಸಂ ।
ಚಾರಿಗಳ ಗಜಗಳ ಸಮೂಹಗಳ ಜವಗಳ ವಿಲಾಸಗಳ ಕಳಕಳಂಗಳ್ ॥

ಭೀಮಜರಾಸಂಧರ ಮಲ್ಲಯುದ್ಧ

ಬಿಡಿಸಿಕೊಂಬರು ಲಾಗುವೇಗದಿಂ ಬಿನ್ನಣದಿ ।
ತೊಡರಿಕೊಂಬರು ಮತ್ತೆ ಪರಿತಂದು ಭೂತ್ಕರಿಸಿ ।
ಮೃಡುಹಿನಿಂ ಝಾಡಿಸುತ ಮೈಮೈಗೆ ಮೈಗೊಟ್ಟು ಚಿಮ್ಮಿದರು ಝಡಿತಿಯಿಂದ ॥
ನಡಿಸಿಡಿಗೆ ಮೂದಲಿಸಿ ಬೈಬೈದು ಬೊಬ್ಬಿರಿಸಿ ।
ತಡವರಿಸಿ ತೊಡೆತೊಡೆಗಳಿಂದವುಕಿ ಬಿಗಿಬಿಗಿದು ।
ಪಿಡಿಪಿಡಿದು ಕೈದುಸುಕಿ ಕಾದಿದರು ಜಾಱಿದರು ಮಿಱಿದರು ಸಂಗರದೊಳು ॥

ವಿಷ್ಣು

ಎಸಳುಗಂಗಳ ಪೊಂಗು ಶೋಭೆಯಿಂ ರಂಜಿಸುವ |
ಮಿಸುಪ ತುಟ್ಟುಗೆವೆ ವಕ್ತ್ರಭೂಲತೆಯ ನೊಸಲ ಕ |
? ತ್ತುರಿತಿಲಕವೆಸೆವ ಬಟಿಲುವ ಕುಟಿಲಕುಂತಳದಲಸುರಾರಂಜಿಸಿದನು ||
ದೆಸೆಗೆಸೆವ ಪರಿಮಳದ ಮೇಳದಿಂ ಸಂಭ್ರಮಿಸಿ |
ಕುಸುಮರಾಜಿಯನಾಂತ ಶಿರಮುಡಿಗೆಯಳಿಕುಲಂ |
ದಿಸೆದಿಸೆಗೆ ಝೇಂಕರಿಸೆ ರಂಜಿ ದ ನವರತ ಕೇವಣದ ಮಣಿಮಕುಟದಿಂ ||

ತತ್ಸಂಬಂಧ

ಇದೇ ಇವನು ಬರೆದ ಪ್ರಥಮಗ್ರಂಥವೆಂದೂ ಇದರಲ್ಲಿ ಅದ್ವೈತ ವೇದಾಂತಬೋಧಕವಾದ 54ಪದ್ಯಗಳಿವೆ ಎಂದೂ ತಿಳಿಯುತ್ತದೆ.

ಇವನ ಅಷ್ಟಕಾಲಿಕಾಸ್ತೋತ್ರವು ನಮಗೆ ದೊರೆತಿಲ್ಲ.

ಅನಂತಕವಿ ಸು. 1780

ಇವನು ಬೆಳ್ಗೊಳದಗೊಮ್ಮಟೇಶ್ವರಚರಿತೆಯನ್ನು ಬರೆದಿದ್ದಾನೆ. ಈತನು ಜೈನಕವಿ. ಸುಮಾರು 1673 ಯಲ್ಲಿ ಕಟ್ಟಿದ ಚೆನ್ನಣ್ಣನ ಬಸ್ತಿಯನ್ನು[1] ವರ್ಣಿಸುವುದರಿಂದಲೂ, ಶಕ 1600ನೆಯ ನಳನವರ್ಷದ ಫಾಲ್ಗುಣದಲ್ಲಿ (1677) ಚಿಕ್ಕದೇವರಾಜನ ಮಂತ್ರಿಯಾದ ವಿಶಾಲಾಕ್ಷಪಂಡಿತನು ಗೊಮ್ಮಟೇಶ್ವರನಿಗೆ ಅಭಿಷೇಕವನ್ನು ಮಾಡಿಸಿದಂತೆಯೂ ಶಕ 1701 ನೆಯ ದುರ್ಮುಖಿವರ್ಷದ ಫಾಲ್ಗುಣದಲ್ಲಿ (1777) ಗೊಮ್ಮಟೇಶ್ವರನಿಗೆ ಮಹಾಪೂಜೆ ನಡೆದಂತೆಯೂ ಹೇಳುವುದರಿಂದಲೂ ಕವಿ ಈವರ್ಷಗಳಿಗೆ ಈಚೆಯವನು ಎಂಬುದು ವ್ಯಕ್ತವಾಗಿದೆ. ಸುಮಾರು 1780ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಬೆಳ್ಗೊಳದ ಗೊಮ್ಮಟೇಶ್ವರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 6ಸಂಧಿಗಳೂ 7ನೆಯದರಲ್ಲಿ 240 ಪದ್ಯಗಳೂ ಇವೆ. ಇದರಲ್ಲಿ ಗೊಮ್ಮಟೇಶ್ವರನ ಚರಿತೆ ಹೇಳಿದೆ. ಅಲ್ಲದೆ ಶ್ರವಣಬೆಳ್ಗೊಳಕ್ಕೂ ಕೆಲವರು ಜೈನಗುರುಗಳಿಗೂ ಸಂಬಂಧಿಸಿದ ಕೆಲವು ಅಂಶಗಳೂ ಹೇಳಿವೆ :

1. *Mysore Archaeological Report* for 1909, para 106.

ಕಲಿಯುಗದ ೬೦೦ನೆಯ ಮಹಾದಲ್ಲಿ ಗೊಮ್ಮಟೇಶ್ವರನ ಪ್ರತಿಷ್ಠೆಯಾದಂತೆಯೂ ಚಾಮುಂಡರಾಜನು ಹಿಂದಣ ವಿಗ್ರಹವನ್ನೇ ಶಿಲ್ಪಿಗಳಿಂದ ತಿದ್ದಿಸಿದಂತೆಯೂ

ಕಲ್ಯಬ್ದಷಟ್ಶತವಿನುತವಿಭವಜೈತ್ರ | ದಲ್ಲಿಯ ಶುಕ್ಲಪಂಚಮಿಯ |
ಮಲ್ಲಿಯ ರವಿವಾರ ಕುಂಭಲಗ್ನದಿ ಜಿನ | ವಲ್ಲಭಗಾಯ್ತು ಪ್ರತಿಷ್ಠೆ ॥
ಕಡೆಯಾಣಿಬೊಂಬೆಗೆ ಕವಿದಿರ್ದ ದೂಳಿಯ | ಕೊಡಪಿಸಿ ಪೊಳಪಿಕ್ಕಿದಂತೆ |
ಕಡಸಿ ಸಿಲ್ಪಿಗಳಿಂದವೊಪ್ಪವಿಕ್ಕಿಸೆ ಕಾಂತಿ | ಮಡುಗಟ್ಟಿ ನಿಂದವೊಲಾಯ್ತು ॥

ಎಂಬ ಪದ್ಯಗಳಲ್ಲಿ ಕವಿ ಹೇಳುತ್ತಾನೆ ಬಸದನೆಷ್ಟಿಯ ಮಗನಾದ ಅಣ್ಣಯ್ಯನು ಟಂಕಸಾಲೆ ಮುಂತಾದ ಅಧಿಕಾರವನ್ನು ಹೊಂದಿ ಚಿಕ್ಕದೇವರಾಜನ ಪ್ರೀತಿಗೆ ಪಾತ್ರನಾಗಿದ್ದು ಆತನಿಂದ ಬೆಳ್ಗೊಳದಲ್ಲಿ ಕಲ್ಯಾಣಿಯನ್ನು ಕಟ್ಟಿಸಿದಂತೆಯೂ, ಆ ಅಣ್ಣಯ್ಯನ ಬೀಗನಾದ ಪುಟ್ಟಯ್ಯನು ಪಾರ್ಶ್ವನಾಥಬಸ್ತಿಯಮುಂದಣ ಮಾನಸ್ತಂಭವನ್ನೂ ಚಂದ್ರಗಿರಿಯ ಪಾಕಾರವನ್ನೂ ಕಟ್ಟಿಸಿದಂತೆಯೂ ಈ ಗ್ರಂಥವಿಂದ ತಿಳಿಯುತ್ತದೆ. ನ್ಯಾಯಕುಮುದಚಂದ್ರೋದಯವೇ ಮುಂತಾದ ಗ್ರಂಥಗಳನ್ನು ಬರೆದ ಪ್ರಭಾಚಂದ್ರನು ಶ್ರವಣಬೆಳ್ಗೊಳದಲ್ಲಿ ಯತಿಯಾಗಿದ್ದಂತೆಯೂ ಅಭಯಚಂದ್ರನು ಶಶಕಪುರದಲ್ಲಿ ಸಳನಿಗೆ ಗುರುವಾಗಿದ್ದಂತೆಯೂ ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಗೊಮ್ಮಟೇಶ್ವರಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಶೀಲಸಾಗರಋಷಿ, ಯತಿಪಂಡಿತಾರ್ಯ ಇವರುಗಳನ್ನು ಹೊಗಳಿದ್ದಾನೆ ಈ ಗ್ರಂಥದಿಂದ ಕೆಲವುಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹಲಸು.

ಕೇಳಿದೊಂದೊಂದ ಕೊಡುವ ಕಲ್ಪವೃಕ್ಷದ | ಜಾಳದ ನಗುವಂದದೊಳು |
ಮೂಲಾಗ್ರನರಿಗೆಡೆಯಿಡದೆ ತುಂಬಿಹ ಫಲ | ದೋಳಿಯುಂ ಮೆಱೆದುವು ಪನಸು ॥

ತೆಂಗು

ಸಲಹಿದರನು ಮಱೆಯುಮಲುಬಾರದೆಂಬುದ | ಕಲಿಸುವಂದದಿ ಜೆಂದೆಂಗು |
ತಲೆಯೊಳಗಮೃತಕೊಡವ ಪೊತ್ತೊಡೆಯನ | ನಿಲುಕಿ ನೋಪ್ಪಂತೊಪ್ಪಿಹುವು ॥

ಜಿತೇಂದ್ರಿಯರು

ಹರಿಯ ವಕ್ಷವ ಮೆಟ್ಟಿ ಬ್ರಹ್ಮನ ಮೊಗವೇಱಿ' | ಹರನ ಜಟಾಜೂಟನಡರ್ದು
ಅರಿವೆನ್ನಿನಾಡಿಯನಬಲಾಜೈವಕ್ಕೆ | ಎಱಗದಿಹಗೆ ಪಾಸಟಿಯೇ ॥

ಮರ್ತ್ಯಲೋಕವ ಮಂಕುಗೊಳಿಸಿ ಪಾತಾಳವ । ತೊತ್ತುಬಿನುಬಿ'ದು ಸ್ವರ್ಗವನು।
ಹತ್ತಿ ಆಳೋಡಾಡಿಪರಾವನಿತಾಜನ । ದತ್ತ ನೋಡದಗಾರು ಸಾಮ್ಯ ॥
ಮನಿಸುತ ಲೋಕವ ತೇತ್ತೈತ್ತೈಯೆನೆ । ಕುಣಿಸಿ ಸೀಲವ ಪಜಿವಡಿಸಿ ।
ಮುನಿಜನವಘ ಮೂರ್ಛೆಗೊಳಿಸಿ ಮಾಯವ ಮಾಪ್ಪಿ । ವನಿತೆಯಗ್ಗಳಸ
ದಗ್ಗಳಿಯೇ ।

ವೆಂಕಟದಾಸ[1] ಸು. 1780

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಸು ಮಾರು 1780 ರಲ್ಲಿ ಇದ್ದಿರಬಹುದು.

ಮಾನವಮಧುರದಾಸ ಸು. 1780.

ಈತನು ಜಲಕ್ರೀಡೆ, ರಾಸಕ್ರೀಡೆ, ಸುದಾಮುಕಥೆ ಇವುಗಳನ್ನೂ ಕೀರ್ತನೆಗಳನ್ನೂ ಬರೆದಿದ್ದಾನೆ ಇವನು ಮಾಧ್ವಕವಿ; "ಪೆರಿಯಕೊಳ ವಾಸದ ವರದರಾಜನ ದಾಸ" ಎಂದು ಈ ನುಡಿಯಲ್ಲಿ ಹೇಳಿಕೊಂಡಿದ್ದಾನೆ:

ಪೆರಿಯಕೊಳವಾಸದ ವರದರಾಜನ ದಾಸ ಪೇಳಿ'ದನೀಕಥೆಕೇಳಿರೆಲ್ಲ ।
ಸುರವರ ಶ್ರೀಕೃಷ್ಣ ಸರ್ವರಿಗೊಲಿವನು ಕರುಣಿಸಿ ಕೈವಿಡಿದು ಸಲಹುವನು ॥

ಇವನು ಸುಮಾರು1780ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಜ್ಞಾನಭೋಗ ವೆಂಕಟರಮಣಯ್ಯ. ಸು. 1790.

ಈತನು ಮೈಸೂರುರಾಜಧರ್ಮಚರಿತ್ರೆಯನ್ನು ಬರೆದಿದ್ದಾನೆ. ಇವನು ಸ್ಮಾರ್ತಬ್ರಾಹ್ಮಣನು. ತನ್ನ ವಂಶಾವಳಿಯನ್ನು ಹೀಗೆ ಹೇಳಿದ್ದಾನೆ— ಶ್ರೀರಂಗಪಟ್ಟಣದ ಜ್ಞಾನಭೋಗ ತಿಮ್ಮಪ್ಪಯ್ಯ; ಮಗ ನಂಜಪ್ಪಯ್ಯ; ಮಗ ಯಾಲಕ್ಕಯ್ಯ; ಮಗ ವೆಂಕಟೇಶಯ್ಯ; ಮಗ ಗ್ರಂಥಕರ್ತ ವೆಂಕಟರಮಣಯ್ಯ. ದೊಡ್ಡಸವಾಬಸ (ಹೈದರ) ಕಾಲದಲ್ಲಿದ್ದ ಚಾಮರಾಜಒಡೆಯರ ಆಡಳಿತಕಾಲದವರೆಗೆ (1776-1796) ಚರಿತ್ರೆಯನ್ನು ಬರೆದಿರುವುದರಿಂದ ಕವಿಯ ಕಾಲವು ಸುಮಾರು 1790 ಆಗಿರಬಹುದು.

ಇವನ ಗ್ರಂಥ

---

1. *Indian Antiquary*, II, 308.

ಮೈಸೂರುರಾಜರಚರಿತ್ರೆ

ಇದು ಗದ್ಯರೂಪವಾಗಿದೆ. ಪೂರ್ವದಲ್ಲಿ ಸಂಚಿತವಾದ ಮೈಸೂರು ದೊರೆಗಳ ಪರಂಪರೆಯನ್ನು ವಿವರಿಸಿ ಬರೆದ ಪೂರ್ವಲೇಖನದ ಆಧಾರದಿಂದ ತನ್ನ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ.

ಪದ್ಮರಾಜ. 1792.

ಈತನು ಪೂಜ್ಯಪಾದಚರಿತೆಯನ್ನು ಒರೆದಿದ್ದಾನೆ. ಇವನು ಜೈನ ಕವಿ, ಶ್ರೀವತ್ಸಗೋತ್ರದವನು. ತನ್ನ ವಂಶದ ವಿಷಯವಾಗಿ ಹೀಗೆ ಬರೆದಿದ್ದಾನೆ:—

ಗಿರಿಪುರದಲ್ಲಿ ಕರಣಿಕೋತ್ತಮನಾದ ಬೊಮ್ಮಣ್ಣನೆಂಬ ಬ್ರಾಹ್ಮಣನಿದ್ದನು. ಅವನಿಗೆ ಸಾತಪ್ಪ, ಹುಚ್ಚಬೊಮ್ಮರಸ, ದೇವರಸ, ಬೊಮ್ಮರಸ ಎಂದು ನಾಲ್ವರು ಮಕ್ಕಳು. ಕವಿತಾವಿಶಾರದನಾದ ಬೊಮ್ಮರಸನ ಮಗ ವಿಜಯಪ್ಪ; ಇವನ ಮಗ ಬೊಮ್ಮರಸ; ಇವನ ಮಗ ವಿಜಯ; ಇವನ ಮಗ ದೇವಯ್ಯ; ಇವನ ಮಗ ಆರ್ಯಪ. ಈ ಆರ್ಯಪನು ಹುಟ್ಟಿದ ಗಳಿಗೆ ನಕ್ಷತ್ರಕ್ಕೆ ಕಾವ್ಯಶಬ್ದಜಿನೇಂದ್ರಪ್ರತಿಷ್ಠಾದಿರೂಪ್ಯಪ ನಕ್ಷತ್ರವಿದ್ದನು. ಇವನ ಮಗ ವಿಜಯಪ್ಪ, ಕಮ್ಮಂವಿರು ದೇವರಸ, ಬೊಮ್ಮರಸ, ದೇವಚಂದ್ರ. ದೇವಚಂದ್ರನ ಮಗ ದೇವಪ್ಪ, ಇವನ ಕಂಡತಿ ಕಸುಮಮ್ಮ, ಮಕ್ಕಳು ಚಂದಯ್ಯ, ಪದ್ಮರಾಜ. ಈ ಪದ್ಮರಾಜನೇ ಗ್ರಂಥಕರ್ತ.

ಪದ್ಮರಾಜನು ಹೇಳುತ್ತಿರಲು ದೇವಚಂಗ್ರನು ಸಹ ಕಾವ್ಯವ ಪೇಳಿದನು ಎಂಬುದರಿಂದ ಇವರಿಬ್ಬರೂ ಸೇರಿ ಗ್ರಂಥವನ್ನು ಬರೆದಂತೆ ತೋರುತ್ತದೆ. ಈ ದೇವಚಂದ್ರನು ರಾಜಾವಳೀಕಥೆಯನ್ನು ಬರೆದವನು. ಪದ್ಮರಾಜನು ಇವನ ಅಣ್ಣನು. ಈ ಗ್ರಂಥವನ್ನು ಶಕ 1714 ಪರೀಧಾವಿಯುಲ್ಲಿ, ಎಂದರೆ 1792ರಲ್ಲಿ, ರಚಿಸಿದಂತೆ ಹೇಳಿದೆ.

ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಜನ್ನುಗ, ಸುಮನೋಬಾಣ ಇವರುಗಳನು ಕವಿ ಸ್ಮರಿಸಿದ್ದಾನೆ.

ಇವನ ಗ್ರಂಥ

ಪೂಜ್ಯಪಾದಚರಿತೆ

ಇದು ಸಾಂಗತ್ಯದಲ್ಲಿ ಬರದಿದೆ; ಸಂಧಿ 15, ಪದ್ಯ 1932. ಅಲ್ಲಲ್ಲಿ ಕೆಲವು ವೃತ್ತಗಳೂ ಕಂದಗಳೂ ಇವೆ. ಇದರಲ್ಲಿ ಪೂಜ್ಯಪಾದಮುನಿಯ ಚರಿತ್ರವು ಹೇಳಿದೆ. ಅಲ್ಲದೆ ಲೋಕಾಕಾರ, ಶ್ರುತಾವತರಣ ಮುಂತಾದ ಜಿನಮತಪ್ರಕ್ರಿಯೆಗಳೂ ಉಕ್ತವಾಗಿವೆ. ಗ್ರಂಥಾವತಾರದಲ್ಲಿ ವಿಜಯಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ವೃಷಭಸೇನಾದಿಗಣಧರರು, ಜ್ವಾಲಾಮಾಲಿನಿ, ಪದ್ಮಾವತಿ, ದಶಪೂರ್ವಧರರು ಏಕಾದಶಾಂಗಧಾರಿಗಳು, ಕಪಿಪರಮೇಷ್ಠಿ ಸಮಂತಭದ್ರ, ಸಿದ್ಧಸೇನ ಜಿನಸೇನ, ಗುಣಭದ್ರ, ಗೋವರ್ಧನ, ದೇವಕೀರ್ತಿ, ಅಕಳಂಕ, ವಿದ್ಯಾನಂದ, ಭಟ್ಟಾಕಳಂಕ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ —

ಪೂಜ್ಯಪಾದ

ಹೊಂಬಣ್ಣದಂತೆ ಪೊಳೆವ ಕಾಂತಿ ಮೈಯೊಳು । ತುಂಬಿದ ಲಾವಣ್ಯರಸವು ।
ಬಂಬಿಸಿ ರತ್ನಾಭರಣವಿರಲು ನೋಡು । ವೆಂಬಂತೆ ಸೊಬಗುದೋಱಿದನು ॥
ಕನಕ ಕಲ್ಲೊಳು ಕಾಷ್ಠದೊಳಗಗ್ನಿ ಪಾಲೊಳು । ಮಿನುಗುವಘೃತವು ಕಾಣ್ಬಂತೆ ।
ತನುವಿನೊಳಗೆ ಪರಮಾತ್ಮರೂಪನು ಕಂಡು । ಘನಸುಖದೊಳು ಮುಟ್ಟುಗಿದನು ॥
ಮುಂಗೆ ಹೆಚ್ಚದ ಬಾಸಗೆ ತಗ್ಗದ ಮಹಾ । ಜಲನಿಧಿಯಂದದಿ ಮುನಿಪ ।
ಹಲವೊಡೆ ಕೂಗದೊಡೊಂದೆ ಆಗಿರ್ದನ । ಗ್ಗಳಿಕೆಯನೆಂತು ಬಣ್ಣಿಪೆನು ॥

ಆಶೆ

ಒಡಪಸಿಗುಣಬಾಗೆ ತೊಡಿಗೆಯ ಚಿಂತೆಯು । ತೊಡಲಾಗೆ ಧನಕನಕಗಳ ।
ಪಡೆಯೆ ಮಾಡಿಯು ಮಡದಿಯಾಗೆ ಮಕ್ಕಳ । ಹಡೆವ ಚಿಂತೆಯು ಒಂದವುದು ॥
ಮಕ್ಕಳಾಗಲು ಹೊನ್ನಕಟ್ಟುವ ಚಿಂತೆಯು । ಅಕ್ಕಟ ನೂರುಸಾಸಿರವು ।
ದಿಕ್ಕಟಿಸಿಂ ಕೋಟಿ ಒಂದಾಗಮಿಗ್ನಿಗೆ । ಯಿಕ್ಕಿದಿಂಧನದಂತೆ ಚಿಂತೆ ॥

ಕೋಪ

ಉಗ್ರವಿಷವಮಸ್ಯ ಕೋಪವೆಂಬಾಕೂರ । ವ್ಯಾಪ್ತಿಯನನೆಯಟ್ಟಿದನರು ।
ಅಪ್ರಧಾನ ಮುಕ್ತಿಗೈದುವರು ಕರ್ಮಂಗಳ । ನಿಗ್ರಹಮಾಟ್ಟುದೇನರಿದೇ ॥

ದೇವಚಂದ್ರ 1770—1841

ಈತನು ರಾಮಕಥಾವತಾರ, ರಾಜಾವಳೀಕಥೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ರಾಜಾವಳೀಕಥೆಯಲ್ಲಿ "ಪೂಜ್ಯಪಾದ ಚರಿತೆ, ಸುಮೇರುಶತಕ, ಯಕ್ಷಗಾನ ರಾಮಕಥಾವತಾರ, ಭಕ್ತಿಸಾರ ಶತಕತ್ರಯ, ಶಾಸ್ತ್ರಸಾರ ಲಘುವೃತ್ತಿ, ಪ್ರವಚನಸಿದ್ಧಾಂತ, ದ್ರವ್ಯ ಸಂಗ್ರಹ, ದ್ವಾದಶಾನುಪ್ರೇಕ್ಷೆಕ ಥೆ ಸಹಿತ, ಧ್ಯಾನಸಾಮ್ರಾಜ್ಯ, ಅಧ್ಯಾತ್ಮ ನಿಚಾರಾದಿಯಂ ಕರ್ನಾಟಕಸಂಸ್ಕೃತ ಬಾಲನುಡಿಯಿಂ ವಿರಚಿಸಿದೆಂ" ಎಂದು ಹೇಳುವುದರಿಂದ ಈ ಗ್ರಂಥಗಳನ್ನೂ ಈತನು ಬರೆದಿರುವಂತೆ ತಿಳಿಯುತ್ತದೆ ಇವುಗಳಲ್ಲಿ ಮೊದಲು ಹೇಳಿರುವ ನಾಲ್ಕು ಗ್ರಂಥಗಳೂ ಉಳಿದುವುಗಳಲ್ಲಿ ಒಂದೆರಡೂ ಕನ್ನಡದಲ್ಲಿಗುವಂತೆ ತೋರುತ್ತದೆ.

ಇವನು ಜೈನಕವಿ. ಇವನ ಸ್ಥಳ ಕನಕಗಿರಿ (ಮಲೆಯೂರು). ಮಲೆಯೂರ ಪಾರ್ಶ್ವನಾಥನೇ ಇವನ ಕುಲದೈವವು. ಈತನ ವಿಷಯವಾಗಿ ರಾಜಾವಳೀಕಥೆಯಿಂದ ಈಯಂಶಗಳು ತಿಳಿಯುತ್ತವೆ:—

ಇವನ ತಾತ ದೇವಚಂದ್ರ, ತಂದೆ ದೇವಯ್ಯ, ತಾಯಿ ಕುಸುಮಾಜಮ್ಮ, ಅಣ್ಣಂದಿರು ಚಂದಪಾರ್ಶ್ವಪದ್ಮರಾಜರು. ಈ ಪದ್ಮರಾಜನು ಅನೇಕಗ್ರಂಥಗಳನ್ನು ಬರೆದಿರುವಂತೆ ಹೇಳಿದೆ. ಕವಿ 1770 ರಲ್ಲಿ ಹುಟ್ಟಿದನು. 14 ನೆಯ ವರ್ಷದಿಂದ ಕರಣಿಕಾಗ್ರಗಣ್ಯನೆನಿಸಿ ಕನವರನ್ನು ಮಾಡಲಾರಂಭಿಸಿದನು. ಇವನ ಪ್ರಥಮಗ್ರಂಥವಾದ ಪೂಜ್ಯಪಾದಚರಿತ್ರೆ 1792 ರಲ್ಲಿ ರಚಿತವಾಯಿತು[1]. ರಾಮಕಥಾವತಾರವನ್ನು 1797 ರಲ್ಲಿ ಆರುತಿಂಗಳೊಳಗೆ ಮಾಡಿದನು. 1804 ರಲ್ಲಿ ಸೀಮೆ ಸೈಮಾಸಿಯಂ ಮಾಡಲು ಮಕಂಜಿ ಸರದಾರಂ ಲಕ್ಷ್ಮಣರಾಯಂನೆರಸು ಕನಕಗಿರಿಗೆ ಬಂದು ಕವಿಯನ್ನು ಸ್ಥಳಪುರಾಣಮುಂಟೆ ಎಂದು ಕೇಳಲು ಅವನು ತಾನು ಮಾಡಿದ ಪೂಜ್ಯಪಾದ ಚರಿತ್ರೆಯನ್ನು ಓದಿ ಹೇಳಿದಾಗ ಅವನನ್ನು ಬಿಡದೆ ಕಮರಹಳ್ಳಿಯಲ್ಲಿ ಒಡ್ಡಿದ್ದ ಗೂಡಾರದ ಒಳಿಗೆ ಕರೆದುಕೊಂಡುಹೋಗಿ ಪೂರ್ವದ ಕೆಲವು ಪ್ರಸಂಗಗಳನ್ನು ಮೂರುರಾತ್ರಿ ಚೆನ್ನಾಗಿ ಅಲಿಸಿ ಕಳಿಲೆ, ಮಹಿಸೂರು, ಪಟ್ಟಣ, ಇಲಿವಾಲ, ನಾಗವಾಲದವರೆಗೆ ಎರಡುತಿಂಗಳ ಪರ್ಯಂತ ಬಿಡದೆ ದಿನ ಒಂದಕ್ಕೆ ಗ್ರಾಸಕ್ಕೆ ಒಂದುಹಣಮುಂ ಕೊಡುತ್ತ ರಾತ್ರಿಕಾಲದೊಳು ಪೂರ್ವದ ಪ್ರಸಂಗಳು ಜಾತಿಭೇದಗಳು ಮೊದಲಾದ ವಿವರಗಳ

1. 145ನೆಯ ಪುಟವನ್ನು ನೋಡಿ

2 Colin Mackenzie who conducted the survey of Mysore

ನೆಲ್ಲವಂ ಕೇಳುತ್ತ ರಾಜ್ಯಸೀಮೆಗಳನಳೆದು ವಿಂಗಡಿಸುತ್ತ ಗ್ರಾಮಾದಿಗ್ರಾಮಂಗಳಂ ನಕ್ಷೆಯಂ ಬರೆಯಿಸಿ ಜಾತಿಕೋಮುವಾರು ಕುಳ, ಮನೆ, ಜನ, ಜೀನದನ ಮೊದ ಲಾದುವಂ ಜಮಾಬಂದಿ ಮುಂತಾದುವಂ ಬರೆಯಿಸಿಕೊಂಡು ಅವನನ್ನು ಬಿಡದೆ ಬಗೆ ಗಾಳಿಗೊಯ್ಯಬೇಕೆಂದಿರಲು, ಅವನು ಬಹುವಿಧವಾಗಿ ಹೇಳಿಕೊಂಡುದರಿಂದಲೂ ಅವನ ಧರ್ಮೋಪಾಧ್ಯಾಯರು ಬಂದುದರಿಂದಲೂ ಪೂರ್ವಪಾದಚರಿತೆಯನ್ನು ತೆಗೆದುಕೊಂಡು ಅವನು ಹೇಳಿದ್ದ ಪೂರ್ವದ ವೃತ್ತಾಂತಗಳಂ ಕಾಗದದವಹಿಯೊಳು ಬರೆಯಿಸಿಕೊಂಡು ಈ ಕರ್ನಾಟದೇಶದೊಳು ನಡೆದ ಪ್ರಪಂಚಗಳನೆಲ್ಲ ಕ್ರೋಡೀಕರಿಸಿ ಬರೆದು ನಾವಿದ್ದಲ್ಲಿಗೆ ತೆಗೆದುಕೊಂಡು ತಿಂಗಳೊಳಗೆ ಒಂದರೆ ಭಾರಿ ಸಂಬಳವನ್ನು ಮಾಡಿಸಿಕೊಡುತ್ತೇವೆಂದು ಹೇಳಿ ಲಕ್ಷ್ಮಣರಾಯನ ಮೂಲಕ ೫೫ ಕುಂಪಣಿ ರೂಪಾಯಿಯನ್ನು ಕೊಡಿಸಿ ಅಪ್ಪಣೆಕೊಡಿಸಿ ಕಳುಹಿಸಿಕೊಟ್ಟನು. ಅಂದುಮೊದಲಾಗಿ ಕವಿ ಈ ಕಥಾಸಂಗ್ರಹವನ್ನು ಮಾಡುತ್ತಿದ್ದುದರದಾರಂ ಬಹುದೂರಂ ಪೋದುದರಿಂದ ಒಪ್ಪಿಸುವುದಕ್ಕಿಲ್ಲವಾಯಿತ.

ಈ ರಾಜಾವಳೀಕಥೆಯನ್ನು ಮೈಸೂರು ಪೊರಿ ಮುಮ್ಮಡಿಕೃಷ್ಣರಾಜಒಡೆಯರ ಆಶ್ರಿತನಾದ ವೈದ್ಯಸೂರಿಪಂಡಿತನ ಪ್ರೋತ್ಸಾಹದಿಂದ ವ್ಯೋಮರ್ತುಶೈಲಶಶಿಸಂಖ್ಯಾಕ ವಾದ ಶಕವರ್ಷದಲ್ಲಿ (1760), ಎಂದರೆ 1838 ರಲ್ಲಿ ಬರೆದನು. ಇವನಿಂದ ರಚಿತ ವಾದ ಗ್ರಂಥಗಳನ್ನು ಅನುಷ್ಟುಪ್ಛಂದದೊಳ್ ಗಣಿಸಿದರೆ ೫೫೦೦೦ ಗ್ರಂಥವಾಗು ತ್ತದೆ. ರಾಜಾವಳೀಕಥೆಯನ್ನು ಮುಮ್ಮಡಿಕೃಷ್ಣರಾಜಒಡೆಯರಿಗೆ ಒಪ್ಪಿಸಲು ಮೂರು ನಾಲ್ಕು ವರ್ಷದಿಂದ ಕೂಡಿಬರಲಿಲ್ಲ. 1841 ರಲ್ಲಿ ಚಾಮರಾಜಮಹಿಷಿ ದೇವೀರಾಂ ಈ ರಾಜಾವಳೀಕಥೆಯ ಸಾರಸೆಲ್ಲಮುಂ ಮೊದಲಿಂ ಕಡೆವರಂ ಚೆನ್ನಾಗಿ ಲಾಲಿ ಸಂತೋಷಿಸಿ ಕವಿಗೆ ಅತಿಶಯವಾದ ವಸ್ತ್ರತಾಂಬೂಲಾದಿಗಳನಿತ್ತು ಮನ್ನಿಸಿ ಮುಮ್ಮಡಿ ಶೂರರಾಜರ ಪರಂಪರೆಯಂ ಸಂಗ್ರಹಿಸಿ ಬರೆಸಿಕೊಡ್ಡಿಸುವುದೆಂದು ಆಜ್ಞಾಪಿಸಲು ಕವಿ ಹಾಗೆಯೇ ಬರೆದು ಒಪ್ಪಿಸಿದನು.

ಇವನ ಗ್ರಂಥಗಳಲ್ಲಿ—

1 ರಾಜಾವಳೀಕಥೆ.

ಇದು ಗದ್ಯಾಯಿಕವಾಗಿ ಗದ್ಯರೂಪವಾಗಿದೆ; ಅಲ್ಲಲ್ಲಿ ಕೆಲವು ಶ್ಲೋಕಗಳೂ ಪದ್ಯಗಳೂ ದೊರೆಯುತ್ತವೆ; ಅಧಿಕಾರ 11 ಇದರಲ್ಲಿ ಜೈನ ಮತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ, ಅನೇಕರಾಜರ ಚರಿತ್ರೆ

ಗಳೂ ಕೆಲವರು ಕವಿಗಳ ವಿಷಯಗಳೂ ಹೇಳಿವೆ. ಹೀಗೆ ಅನೇಕ ವಿಷಯಗಳನ್ನು ಒಳಕೊಂಡಿರುವುದರಿಂದ ಈ ಗ್ರಂಥವು ಬಹಳ ಉಪಕಾರಕವಾಗಿದೆ. ಜೈನಕವಿಗಳ ಚರಿತ್ರವನ್ನು ಬರೆವಾಗ ಹಲವುಕಡೆ ಈ ಗ್ರಂಥದಿಂದ ನಮ್ಮ ಕವಿಚರಿತೆಯಲ್ಲಿ ಕೆಲವು ಅಂಶಗಳನ್ನು ಅನುವಾದ ಮಾಡಿದ್ದೇವೆ. ಮೈಸೂರುರಾಜರ ವಂಶಾವಳಿಯೂ ಈ ಗ್ರಂಥದಲ್ಲಿ ಸಂಗ್ರಹವಾಗಿ ಹೇಳಿದೆ. ಈ ಗ್ರಂಥದ ಭಾಷೆಯ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ—

ಹಲಿಗನ್ನಡ ಬೆಳುಗನ್ನಡ | ವೊಳುಗನ್ನಡ ಮಿಶ್ರಗನ್ನಡಂ ಕಬ್ಬದೊಳಂ !
ತಿಳಿದೆಲ್ಲ ಮಿಶ್ರಮಾಗಿಯು | ಮಿಳಿಗಱಿವಂದದೊಳೆ ಪೇಳ್ದ ರಾಜಾವಳಿಯಂ ||
ಹಲಿಗನ್ನಡ ಬೆಳುಗನ್ನಡ | ವೊಳುಗನ್ನಡವಚ್ಚಗನ್ನಡಂ ಪೊಸತೆಂಬುದು |
ತಿಳುಗನ್ನಡಮಿಶ್ರದಿನಿದ | ನಿಳೆಯೊಳ್ ಸತ್ಪುರುಷರೊ ದಿ ಕೇಳ್ವುದು ಸತತಂ ||

ಗ್ರಂಥಾವತಾರದಲ್ಲಿ ಜೈನಸ್ತುತಿ ಇದೆ. ಅಧಿಕಾರಗಳ ಅಂತ್ಯದಲ್ಲಿ—

ಇತಿ ಸತ್ಯಪ್ರಜನಕಾಲಪ್ರವತರ್ಧನಕಸಕಾಜಲಶ್ರೀಜಿನಾರಾಧಕ ಮಲೆಯೂರ ದೇವಚಂದ್ರಪಂಡಿತವಿರಚಿತ ರಾಜಾವಳೀಕಥಾಸಾರದೊಳ್—

ಎಂಬ ಗದ್ಯವಿದೆ.

ಈ ಗ್ರಂಥದಿಂದ ಸ್ವಲ್ಪಭಾಗವನ್ನು ಉದ್ಧರಿಸಿ ಬರೆಯುತ್ತೇವೆ.—

ಮುಮ್ಮಡಿ ಕೃಷ್ಣರಾಜನ ವರ್ಣನೆ.

ನನ್ನಿಯ ನಲ್ಲ, ಪ್ರಸಿವರ ಬೊಜಗ, ಮುದ್ದುಗರ ಮೊದಲಿಗ, ಬಲ್ಲಿದರ ಬಲ್ಲಹ, ವೀರರ ವೀರ, ಸಿತಗರ ಮಿಂಡ, ಬಿರುದೆಂತೆಂಬರ ಗಂಡನೆಂದು ನಾಡುಬೀಡುರಾಜ್ಯದ ಜನಂಗಳೆಲ್ಲವೊಂದೆಕೊರಲೊಳ್ ಕೊನೆದಾಡುತ್ತಮಿರೆ; ಪ್ರಜಾನುರಾಗದ ನೊದಲು, ರಾಮಚಂದ್ರಂಗೆ ಬದಲು, ವೀರದ ಮೊಳಿ, ಬಿನ್ನಣದ ಬೆಳೆ, ದಯೆಯ ಸೊಂಪು, ದಾಕ್ಷಿಣ್ಯದ ಪೆಂಪು, ನಯದ ಕೂಪು, ನನ್ನಿಯಾವುರ್, ಚದುರ ಬಲ್ಪು, ಚಾಣ್ಮೆಯ ತೋವುರ್, ಜಯದ ಮೋಡಿ, ಜಸದ ಗಾಡಿ, ದಾನದ ಪೂಣ್ಕೆ, ಧರ್ಮದ ಕಾಣ್ಕೆ, ತಿಳಿವಿನ ಮೆಱ್ಚು, ಧೀರತೆಯ ಪೆಱ್ಚು, ಒಸಗೆಯುಬ್ಬು, ಓಜೆಯು ಕೊಬ್ಬು, ಸಿರಿಯು ಕೂಟ, ಸಂಭ್ರಮದಾಟಮೆಂದಾರಾಜನಂ ಬಲ್ಲರ್ ಬಗೆದು ಪೇೞ್ವರ್. ದುರ್ನಯತಮಕ್ಕೆ ಸೂರ್ಯನುಂ ಕುಲಕುಮುದಕ್ಕೆ ಚಂದ್ರನುಂ, ದಾಸಧರ್ಮೋತ್ಸವಕ್ಕೆ ಮಂಗಳನುಂ, ತತ್ತ್ವಾರ್ಥದೊಳ್

ಬುಧನುಂ ಸುಗುಣಂಗಳೊಳ್ ಗುರುವುಂ, ಸರಸಕವಿತೆಯೊಳ್ ಕವಿಯುಂ, ನಿಷ್ಕಾರ್ಯದೊಳ್ ಮುಂತನುಂ, ಅರಾತಿಗಳೊಳ್ ರಾಹುವುಂ, ಧರ್ಮಕೀರ್ತಿಯೊಳ್ ಕೇತುವೆನಿಸಿ ಸುಜಸದಾರಿದ್ರ್ಯವಿದಾನಗಣನೆನಿಸಿದ ಶ್ರೀ ಕೃಷ್ಣರಾಜವಂಶಾರಾಜಂ ಸಕಲಶಸ್ತ್ರ ಶಾಸ್ತ್ರವಾಹನಾರೋಹಣಾದಿಗಳೊಳಗ್ಗಳನೆನಿಸಿ ದಿಕ್ಕುನಾರಸಂತೆ ಬಳಿದಂ

2. ರಾಮಕಥಾವತಾರ

ಇದು ಚಂಪೂರೂಪವಾಗಿದೆ; ಆಶ್ವಾಸ 16; ಗ್ರಂಥಸಂಖ್ಯೆ 6800 ಇದರಲ್ಲಿ ನಾಗಚಂದ್ರನ ರಾಮಚಂದ್ರಚರಿತಪುರಾಣದೊಳಗೆ ಹೇಳಿರುವ ಕಥೆಯೇ ಸ್ವಲ್ಪವಿಸ್ತಾರವಾಗಿ ವರ್ಣಿತವಾಗಿದೆ. ಆ ಗ್ರಂಥದಿಂದ ಅನೇಕಪದ್ಯಗಳೂ ಅನುವಾದಮಾಡಲ್ಪಟ್ಟಿವೆ ತನ್ನ ಗ್ರಂಥದ ವಿಷಯವಾಗಿ ಕವಿ ಹೀಗೆ ಹೇಳಿಕೊಂಡಿದ್ದಾನೆ—

ಈ ರಾಮಕಥೆಯುಂ ಮುನ್ನ ಆದಿದೇವನ ಸಮವಸರಣದೊಳ್ ಆದಿಚಕ್ರಿಯು ಪ್ರಭರತೇಶ್ವರಂಗಂ ಪುರುಪರಮೇಶ್ವರಂ ವ್ಯಕ್ತಮಧುರಶಾಬ್ದನವ್ಯದಿವ್ಯಭಾಷೆಯಿಂ ನಿರೂಪಿಸಿದುದು ಪರಂಪರಾತೀರ್ಥಸಂತಾನದಿಂ ಬರೆ ಪಶ್ಚಿಮತೀರ್ಥಂಕರರಪ್ಪ ಶ್ರೀವೀರವರ್ಧಮಾನಸ್ವಾಮಿ ಸರ್ವಭಾಷಾಸ್ವಭಾವದಿಂ ಶ್ರೇಣಿಕಮಹಾಮಂಡಲೇಶ್ವರಂಗಱಿಯೆ ಪೇೞ್ದುದುಂ, ಅದು ಅನುಕ್ರಮದಿಂ ಗುರುಪರಂಪರೆಯಿಂ ವ್ಯಕ್ತಮಾಗುತ್ತುಂ ಬರೆ, ಕೊಂಗಿ ಭಟ್ಟಾರಕರುಂ ನಂದಿಮುನಿವರರುಂ ಕನಿಪರನೇಮಿಗಳುಂ ರವಿಷೇಣಾರ್ಯರುಂ ವೀರಸೇನಸಿದ್ಧಸೇನರುಂ ಪದ್ಮನಂದೀಶರುಂ ಗುಣಭದ್ರರುಂ ಸಕಲಕೀರ್ತಿಗಳೆಂದಿವರಾವಿಯಾಗಿ ಪೇೞ್ದುದಂ ಚಾಮುಂಡರಾಯ, ನಾಗಚಂದ್ರ, ವಾಸುಪೂಜ್ಯಸಿದ್ಧಾಂತಿ, ಕುಮುದೇಂದು, ನಯಸೇನರಾದಿಯಾಗಿ ಪೇೞ್ದ ಪುರಾಣದೊಳಂ ರಾಮಚರಿತ್ರದೊಳಂ ಕುಮುದೇಂದುರಾಮಾಯಣದೊಳಂ ಪುಣ್ಯಾಸ್ರವಕಥಾಸಾರದೊಳಂ ರಾಮಕಥಾಸಾರಮಂ ತೆಗೆದು ಅಭಿನವಪಂಪಕವಿಯ ಕವಿತ್ವಮುಂ ಮುಂದುಮಾಡಿ ಕರ್ಣಾಟಕಭಾಷಾವಾಕ್ಯರಚನೆಯಿಂದಲ್ಲಲ್ಲಿದ್ದ ಕಥಾಸಂದರ್ಭಮಂ ಅದಿಂತಾ ರಾಮಕಥಾವತಾರಮೆಂದು ಬರೆದಂ.

ಗ್ರಂಥಾಂತ್ಯದಲ್ಲಿ—

ಮುನಿಪತಿಪರಂಪರೆಯಿಂ ಬಂದ ಈ ಕಥನಮಂ ಶ್ರೀಮೂಲಸಂಘ ಬಲಾತ್ಕಾರಗಣ ಶ್ರೀಮಾಘನಂದಿ ಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯ ಶ್ರೀವಾದಿಕುಮುದಚಂದ್ರಪಂಡಿತ ದೇವಮಂಚಿಕರಾಮಾಯಣಕ್ಕೆ ಸನ್ಮಾನವಾಗಿ ಅಭಿನವಪಂಪಂ ರಚಿಸಿದ ರಾಮಚರಿತ್ರದೊಳ್ ಹುಲವೆಡೆಯುಳ್ಳಿ ತೋಱುವ ವಂಶಯುಂಗಳುಂ ನಿರಾವಿಸಲು ಜಿನಸೇನಾರ್ಯಶಿಷ್ಯರ್ ಗುಣಭದ್ರಸ್ವಾಮಿ ಮೊದಲಾಗೆ ಪೇೞ್ದ

ತ್ರಿಷಷ್ಟಿಲಕ್ಷಣಮಹಾಪುರಾಣದೊಳಿರ್ದ ಕಥೆಯನೆ ಪ್ರಮಾಣದೊಳು ತೆಗೆದು ಅದಕ್ಕೆ ಸಕಲಜೈನಶಾಸ್ತ್ರಕಥೆಗಳಂ ಸಂಬಂಧಿಸಿ ಈ ಕಥಾಪ್ರಪಂಚಮನೊರೆದೆಂ—ಎಂದು ಹೇಳುತ್ತಾನೆ.

ಆರಂಭದಲ್ಲಿ ಮುನಿಸುವ್ರತಸ್ತುತಿಯಿದೆ. ಬಳಿಕ ಕವಿ ಸಿದ್ಧಾಗಳು, ಸರಸ್ವತಿ, ಗಣಧರರು ಜ್ವಾಲಾಮಾಲಿನಿ, ಪದ್ಮಾವತಿ ಇವರುಗಳನ್ನು ಸ್ತುತಿಸಿದ್ದಾನೆ ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ.—

ಇದು ಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರ ಚರಣನಖಕಿರಣಚಂದ್ರಿಕಾಚಕೋರ ಶ್ರೀಮದಭಿನವಪಂಪವಿರಚಿತ ರಾಮಚರಿತ್ರಪುರಾಣಮಂ ಸಂಬಂಧಿಸಿದ ರಾಮಕಥಾವತಾರದೊಳ್

ಈ ಗ್ರಂಥದಿಂದ ಬಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸರಸ್ವತೀಸ್ತುತಿ.

ಕೃಪಾಣಿಯ ಭವ್ಯತತಿಗೆ ಕ | ಲ್ಯಾಣಿಯೆ ಕೈವಲ್ಯಮಾರ್ಗಕಿಕ್ಕಿದ ಗುಣಿಸಿ |
ಶ್ರೇಣಿಯೆ ಭವಾಬ್ಧಿತರಣಿ ನ | ದ್ರೋಣಿಯೆ ನೆಲಸಿರ್ಕೆ ವಾಣಿ ಮನ್ಮುಖದಿಳಿಗಂ ||

ಸ್ವವಿಷಯ.

ಶ್ರೀಮದ್ಭಮ್ಮನಗಾಲಯಸ್ಥಿತವರ ಶ್ರೀಪಾರ್ಶ್ವತೀರ್ಥೇಶ್ವರ |
ಸ್ವಾಮಿ ಶ್ರೀಪದಪದ್ಮಯುಗ್ಮಮಧುಪಂ ಶ್ರೀಜೈನವಿಪ್ರಾನ್ವಯಂ ||
ಶ್ರೀಮದ್ಭವ್ಯಜನಪ್ರಿಯಂ ವಿವಿಧವಿದ್ಯಾಕೌಶಲಂ ಸದ್ಗುಣೋ |
ದ್ದಾಮಂ ದೇವತನೂಭವಂ ಬರೆದನೀ ಶ್ರೀರಾಮಸತ್ಕಾವ್ಯಮಂ ||

ಇವನ ಇತರ ಗ್ರಂಥಗಳು ನಮಗೆ ದೊರೆತಿಲ್ಲ.

ಶ್ರೀದವಿಠಲದಾಸ ಸು. 1800

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಜಗನ್ನಾಥದಾಸನ (ಸು. 1775) ಶಿಷ್ಯನೆಂದು ಹೇಳುತ್ತಾರೆ. ಈತನ ಕೀರ್ತನೆಗಳಲ್ಲಿ ಶ್ರೀದವಿಠಲ ಎಂಬ ಅಂಕಿತವಿದೆ. ಒಂದನ್ನು ಉದಾಹರಿಸುತ್ತೇವೆ—

ರಾಗ ಖೇಹಾಗು. ಆದಿತಾಳ.

ಪಲ್ಲವಿ|| ಅವನೇ ಧನ್ಯನೆಲೋ | ಜಗದೊಳಗವನೇ ಧನ್ಯನೆಲೋ ||
ಆತ ಪರಿಯಲೆಂದಾದರು ತನ್ನಯ | ಭಾವಶುದ್ಧಿಲಿ ಭಗವತ್ಪರನಾದಪನೆ ಧನ್ಯ
ನೆಲೋ || 1 ||
ಆತ್ಮೇತರಸಂಪ್ರತಿಯೊಳಿದ್ದು | ಸ್ವಾತ್ಮಲಾಭಸಿದ್ಧಿಯ ಸಾಧಿಸಿಕೊಂಡನನೆ
ಧನ್ಯನೆಲೋ || 2 ||
ಶ್ರೀಪತಿವಿಠಲನ ಸಾಕ್ಷಾತ್ಕರಿಸಿ | ಸಾಧುಸೇವ್ಯಹಿತ್ಸುಖನುಭವನಾದಂಥನನೆ
ಧನ್ಯನೆಲೋ || 3 ||

ಶ್ರೀಪತಿದಾಸ ಸು. 1800.

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಜಗನ್ನಾಥದಾಸನ (ಸು. 1775) ಶಿಷ್ಯನೆಂದು ಪ್ರತೀತಿಯಿದೆ. ಇವನ ಕೀರ್ತನೆಗಳಲ್ಲಿ ಶ್ರೀಪತಿವಿಠಲ ಎಂಬ ಅಂಕಿತವು ದೊರೆಯುತ್ತದೆ. ಒಂದನ್ನು ತೆಗೆದು ಬರೆಯುತ್ತೇವೆ—

ರಾಗ-ಶಂಕರಾಭರಣ. ಆದಿತಾಳ.

ಪಲ್ಲವಿ|| ವೆಂಕಟೇಶ ಘನಸಂಕಟಪರಿಹರಿಸೋ ||
ಅನುಪಲ್ಲ || ನಿನ್ನವರವನೆನಿಸೊ ಪಂಕಜಾಕ್ಷ ಅಕಳಂಕನುಹಿಮಹರಿಯೆಅಕ್ರಿಕರಿಗೆ
ದೊರೆಯೇ ||
ನಾನಾಜನ್ಮಗಳಲ್ಲಿ ದೊಬ್ಬಲಿ ಒಂದೆ | ನೀನೇ ಗತಿಯೆಂದೆ ||
ಜ್ಞಾನಾಜ್ಞಾನಕೃತಾಖಿಳದುಷ್ಕರ್ಮ | ಅದರಂತೆ ಸುಕರ್ಮ |
ನಾನಾಬಗೆಯಲ್ಲಿ ಇರುತಿರುತನುಭವಿಸಿ | ದುರ್ವಿಷಯವ ಬಯಸಿ |
ಹೀನವೃತ್ತಿಯಲಿ ಚರಿಸಿ ದಿನವ ಕಳೆದೆ | ಈಬಗೆಯಿಂದುಬಾದೆ || 1 ||
ಪಾಪಾತ್ಮಕ ನಾನಾದವೇನು ಹೇಳಲೋ | ಪಾಪವ ನೀ ಹೇಳಲೋ |
ಶ್ರೀಪದ್ಮ ಭವಪ್ರಮುಖನಿರ್ಜರೇಶ | ನಾ ನಿನ್ನ ದಾಸ |
ನೀ ಪಾಲಿಸದಿರೆ ಗತಿಯೆನಗೆಲ್ಲಿ ಸುಂಗೆ | ಕಾರುಣ್ಯಾಗಿತಂಗೆ |
ಶ್ರೀಪತಿವಿಠಲ ಕರವ ಪಿಡಿಯೊ ಬೇಗ | ನೀನುದ್ಧರಿಸೀಗ|| 2 ||

ಮಧ್ವದಾಸ ಸು. 1800

ಈತನು ಕೀರ್ತನೆಗಳನ್ನೂ ಅಭಿಮನ್ಯುಕಾಳಗವನ್ನೂ ಬರೆದಿದ್ದಾನೆ. ಚಿತ್ರಸೇನಕಾಳಗವನ್ನೂ ಬರೆದಿರುವಂತೆ ತೋರುತ್ತದೆ. ಇವನು ಮಾಧ್ವಕವಿ. ಪುರಂದರದಾಸನನ್ನು ಸ್ತುತಿಸಿದ್ದಾನೆ. ಇವನ ಸ್ಥಳ ಕುಡುಮಪುರ (?ಉಡುಪಿ). ಇವನು ಸುಮಾರು 1800ರಲ್ಲಿ ಇದ್ದಿರಬಹುದು. ಕೀರ್ತನೆಗಳು ಹೊರತು ಇವನ ಉಳಿದ ಗ್ರಂಥಗಳು ಯಾವುವೂ ಲಭ್ಯವಾಗಿಲ್ಲ.

ದಾಸರಪದಗಳಲ್ಲಿ ಅಂಕಿತಗಳು

ಇನ್ನು ಕೆಲವು ದಾಸರ ಪದಗಳಲ್ಲಿ ದೇವವಿಠಲ, ವಾಸುದೇವವಿಠಲ, ಸಿರಿವರವಿಠಲ, ಅಚಲಾನಂದವಿಠಲ, ಲಕ್ಷ್ಮೀಪತಿ, ಅಚ್ಯುತ, ರಾಮಮೂರುತಿ, ಮೂಡಲಗಿರಿತಿಮ್ಮಪ್ಪ ಇವೇ ಮೊದಲಾದ ಅಂಕಿತಗಳು ದೊರೆಯುತ್ತದೆ. ಇವುಗಳನ್ನು ಉಪಯೋಗಿಸಿರುವ ಕವಿಗಳಾರೋ ಆವ ಕಾಲದಲ್ಲದ್ದಾರೋ ತಿಳಿಯದು.

ನಾರಸಿಂಹ ಸು. 1800

ಈತನು ವೆಂಕಾಮಾತ್ಯನ (ಸು. 1770) ರಾಮಾಯಣವನ್ನು ಪ್ರತಿಪಾದಿಸಿ ಕೊನೆಯಲ್ಲಿ ಸ್ವಂತವಾಗಿ 6 ಪದ್ಯಗಳನ್ನು ರಚಿಸಿದ್ದಾನೆ; ಕವಿಯಾಗಿರಬಹುದೆಂದು ತೋರುತ್ತದೆ. ಇವನು ಬ್ರಾಹ್ಮಣನು ಭಾರದ್ವಾಜಗೋತ್ರದವನು. ಇವನ ತಂದೆ ಹರಿಯಪ್ಪ. ಬರಗೀಪುರದ [ನಾರಸಿಂಹಪದಭಜಕ ಎಂದು ಹೇಳುವುದರಿಂದ ಬರಗೀಪುರವು ಇವನ ಸ್ಥಳವಾಗಿರಬಹುದೆಂದು ತೋರುತ್ತದೆ. ಇವನ ಕಾಲವು ಸುಮಾರು 1800 ಆಗಿರಬಹುದು. ಇವನ ಪದ್ಯಗಳಲ್ಲಿ ಎರಡನ್ನು ಉದಾಹರಿಸುತ್ತೇವೆ —

ಧರೆಯೊಳು ಭರದ್ವಾಜಗೋತ್ರಸಂಭವನಾದ |
ಬರಗೀಪುರದ ನಾರಸಿಂಹಪದಭಜಕನಹ |
ಹರಿಯೆಪ್ಪನಾತ್ಮಸಂಭವನಾಗಿ ನರಸಿಂಹ ಬರೆದ ಶ್ರೀರಾಮಚರಿತೆ ||

ತರಣಿಚಂದ್ರಮರಿರ್ಪ ಪರಿಯಂತ ವೆಂಕಭೂ ।
ಪರನೇಕಛತ್ರದಿಂ ಧರೆಯ ಪಾಲಿಸಲೆನುತ ।
ಸ್ಮರಿಸುತಿಹನನವರತ ಭಜಕಸುರತರುರಾಮಚಂದ್ರನ ದಯಾಸಾಂದ್ರನಾ ॥
ಇದುವೆ ಶ್ರೀರಾಮಪದಭಜಕನ ಸುವಾಕ್ಯ ಮ ।
ತ್ಕಿದು ಪವನನಂದನನ ವರದ ಕನ್ನಡದ ನುಡಿ ।
ಯಿದು ರಾಮಪುರದರಸನಂಘ್ರಿಸಾರಸಭೃಂಗನೆನಿಪನ ಸುಕಾವ್ಯರಚನೆ ॥
ಇದು ಸಕಲರಾಮಚರಿತಾಮೃತದ ತವರುಮನೆ ।
ಮುದದಿಂದ ಬರೆದೋದಿ ಕೇಳಿದ ಮಹೀಜನರ ।
ಪದುಳದಿಂದಿಹಪರದಿ ಭೋಗಮೋಕ್ಷವನಿತ್ತು ಪೊರೆಂ ಶ್ರೀರಘುನಾಥನು ॥

ಬ್ರಹ್ಮನಾಂಕ ಸು. 1800

ಈತನು ಜಿನಭಾರತ, ಕಂದರ್ಪಕೊರವಂಜಿ ಇವುಗಳನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಪಿತಾಮಹನು ಚಂದ್ರನಾಥ, ತಂದೆ ಚಂದಣ್ಣ, ತಾಯಿ ಪೊಂಬುಜೆ, ಸಹೋದರರು, ಚಂದ್ರನಾಥ, ಬ್ರಹ್ಮ, ಪದ್ಮ. ಇವನ ಪೂರ್ವಿಕರು ತುಂಗಭದ್ರಾಸವಿೀಪದಲ್ಲಿರುವ ಹುಲಿಗೆಯಲ್ಲಿದ್ದರೆಂದೂ ಇಕ್ಷ್ವಾಕುವಂಶದವರೆಂದೂ ಹೇಳುತ್ತಾನೆ. ಇವನ ಸ್ಥಳ ತೋಪಿನಕೆರೆ. ಮುಂಗರಸನ (1508) ಗ್ರಂಥದ ಆಧಾರದ ಮೇಲೆ ಜಿನ ಭಾರತವನ್ನು ಬರೆದಂತೆ ಹೇಳುತ್ತಾನೆ. ಇವನ ಕಾಲವು ಸುಮಾರು 1800 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥಗಳಲ್ಲಿ

ಜಿನಭಾರತ.

ಇದು ಭಾವಿಸೀಷಟ್ಪದಿಯಲ್ಲಿ ಬರೆದಿದೆ; ಸಂಧಿ 84, ಪದ್ಯ 4628. ಇದಕ್ಕೆ ಪಾಂಡವಕೌರವರ ಚರಿತ್ರೆ ಎಂಬ ಹೆಸರೂ ಉಂಟು. ಇದರಲ್ಲಿ ಜೈನಸಂಪ್ರದಾಯಾನುಸಾರವಾಗಿ ಭಾರತಕಥೆ ಹೇಳಿದೆ. ಗ್ರಂಥಾವತಾರದಲ್ಲಿ ತೋಪಿನಕೆರೆಸ್ತುತಿ ಇದೆ. ಬಳಿಕ ಕವಿ ಸಿದ್ಧಿಗಳು, ಸರಸ್ವತಿ,

ಜ್ವಾಲಾಮಾಲಿನಿ, ಪದ್ಮಾವತಿ, ಬ್ರಹ್ಮದೇವ ಇವರುಗಳನ್ನು ಸ್ತುತಿಸಿದ್ದಾನೆ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಚಂದ್ರೋದಯ

ಕಮಲಿನಿಯು ಕಣ್ಮುಚ್ಚಿ ಶೋಕವ । ನವರುತಿರಲದ ಕಂಡು ಪಕ್ಕನೆ ।
ಕುಮುದಿನಿಯು ನಗೆನೆರೆತಬುದ ಶೋಕಕರಗಿನೊಳು ॥
ಕ್ರಮದಿನೊತ್ತಿದ ಮುದ್ದೆಯೆನೆ ಮು । ಳುಳಿ ಭ್ರಮರ ಕಮಲವಿ ನೆಲಸಿ ಶೋಭಿಪು ।
ದಮಲಜಾಂದ್ರೋದಯದ ಕಾಲದೊಳರಸ ಕೇಳೆಂದ ॥

ಚಾಮರವೀಜನ.

ಇತ್ತರದಿ ಧಾಳಿಸುವ ಚಾಮರ । ಚಿತ್ತಜನ ಬೇಳುವೆಯು ಭಸ್ಮವ ।
ಸೊತ್ತಿ ಜೆಲ್ಲುವತಿಲಿ ಕ್ಷೀರಾಣವದ ತೆರೆಗದಿರು ॥
ಒತ್ತಿ ಒರುವಂದದಲಿ ಪಾಣಿಯ । ನೆತ್ತಿ ಬೀಸುವ ಕರವು ನಾಳದ ।
ಬಿತ್ತರದಿ ರಂಜಿಸುವವಳೆಡೆಯಾಳಿರನ್ನೆಯರ ॥

ಅರ್ಜುನಪರಿಹಾಸ.

ಉಟ್ಟ ಧೋತ್ರವ ಸಡಿಲಿಸುತ ಕಟಿ । ಗಿಟ್ಟ ಸೂತ್ರವ ಹಲ್ಲಿದು ತಿಳಿಯುನು ।
ನೆಟ್ಟನೆಟ್ಟನೆ ನೀವಿ ಧೋಜನಮಾಡುವಂತಲ್ಲ ॥
ದುಷ್ಟಕಾಳೋರಗನತೆಜಿವನು । ಕೊಟ್ಟ ಘೂರ್ಣಿಪ ಬಿಲ್ಲಿನಾತುರ ।
ಹುಟ್ಟಿದುದು ಚೆನ್ನಾಯಿತೆಂದರು ನಗುತ ಕೆಲದಲ್ಲಿ ॥

ಇವನ ಕಂದರ್ಪಕೊರವಂಜಿ ನಮಗೆ ದೊರೆತಿಲ್ಲ. ಬ್ರಹ್ಮಯ್ಯರಚಿತವಾದ ವ್ಯಾದಶಾನುಪ್ರಶ್ನೆ ಎಂಬ ವೃತ್ತರೂಪವಾದ ಒಂದು ಸಣ್ಣ ಗ್ರಂಥವಿದೆ. ಇದೂ ಏತತ್ಕವಿಕೃತವಾಗಿರಬಹುದೋ ಏನೋ ತಿಳಿಯದು.

ಲಕ್ಷ್ಮಣಶಾಸ್ತ್ರಿ ಸು. 1800

ಈತನು ಅಮರಸಿಂಹಕೃತ ನಾಮಲಿಂಗಾನುಶಾಸನಕ್ಕೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕ ; ಸುಮಾರು 1800ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ರಾಮಕೃಷ್ಣ ಸು. 1800

ಈತನು ಭಗವದ್ಗೀತೆಗೆ ಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ಸುಮಾರು 1800 ರಲ್ಲಿ ಇದ್ದಿರಬಹುದು. ಶಂಕರಭಾಷ್ಯವನ್ನು ಅನುಸರಿಸಿ ಈ ಟೀಕೆಯನ್ನು ಬರೆದಂತೆ ಹೇಳುತ್ತಾನೆ. ಆರಂಭದ ಈ ಪದ್ಯವಿದೆ —

ಹೇರಂಬಶಾರದಾಗುರು | ಸಾರಪದದ್ವಯಕೆ ನಮಿಸಿ ಗೀತಾಟೀಕೆಯ |
ಶ್ರೀರಾಮಕೃಷ್ಣವಿಬುಧಂ | ಶ್ರೀರಮಣಂ ಕೊಟ್ಟ ಬೋಧನಂ ವಿರಚಿಸುಗೆಂ ॥

ರಂಗಾಚಾರ್ಯ ಸು. 1800

ಇವನು ಪ್ರಹ್ಲಾದಚರಿತ್ರೆಯೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ಶ್ರೀವೈಷ್ಣವಕವಿ. ಭಾರದ್ವಾಜಗೋತ್ರದವನು; ಆಪಸ್ತಂಬಸೂತ್ರದವನು. ಇವನ ತಂದೆ ಲಕ್ಷ್ಮಣಾರ್ಯ, ತಾಯಿ ವೆಂಕಟಾಂಬೆ, ಸ್ಥಳ ಮುಳ್ಳೂರು. ವೀರವೈಷ್ಣವ ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1800 ಆಗಿರಬಹುದೆಂದು ತೋರುತ್ತದೆ.

ನಿಜಲಿಂಗಾರಾಧ್ಯ ಸು. 1800

ಈತನು ನಿಜಲಿಂಗಶತಕವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತುಂಗಭದ್ರಾತೀರದಲ್ಲಿರುವ ಶ್ರೀಶೈಲಪುರದ ನಿಜಲಿಂಗೇಶ್ವರನ ಅಂಕಿತದಲ್ಲಿ ಈ ಗ್ರಂಥವನ್ನು ಬರೆದಿರುವುದರಿಂದ ಬಹುಶಃ ಆ ಸ್ಥಳದವನಾಗಿರಬಹುದು. ಇವನ ಕಾಲವು ಸುಮಾರು 1800 ಆಗಿರಬಹುದೆಂದು ಊಹಿಸುತ್ತೇನೆ.

ಇವನ ಗ್ರಂಥ

ನಿಜಲಿಂಗಶತಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 100. ಪ್ರತಿಪದ್ಯವೂ "ನಿಜಲಿಂಗ ಭವಭಂಗ ಶರಣಜನಭಕ್ತಿಸಂಗ" ಎಂದು ಮುಗಿಯುತ್ತದೆ. ಗ್ರಂಥವು ಶಿವಸ್ತುತಿರೂಪವಾಗಿಯೂ ನೀತಿವೈರಾಗ್ಯಬೋಧಕವಾಗಿಯೂ ಇದೆ. ಆರಂಭದಲ್ಲಿ ಶಿವ, ಪಾರ್ವತಿ, ವೀರಭದ್ರ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಮುಂದೆರಡು ಪದ್ಯಗಳನ್ನು ಕೆಳಗೆ ಬರೆಯುತ್ತೇವೆ —

ಸರಿಯಿಲ್ಲದರಕೂಡೆ ವಾದಿಸುವನತಿಮೂರ್ಖ ।
ಗುರುಹಿರಿಯರುಸಿದ್ದ ವಾಕ್ಯವ ವಿಶ್ವಾಸವನು ಮೂರ್ಖ ।
ಗರುವತನವನು ತಳೆದು ಹನ್ನೆರಡನ ಮೂರ್ಖ ಗಾಡಿಕಾತಿಯರೊಳವನು ॥
ನೆಚ್ಚಿ ನಂಬಿ ನಿಜವೆಂದು ಮರುಳುಗೊಂಬನ ಮೂರ್ಖ ।
ಕರುಣನಿಧಿ ಭಕ್ತವತ್ಸಲ ನಿಮ್ಮ ನಾಮವನು ।
ಸ್ಮರಿಸದವ ಕಡುಮೂರ್ಖ ನಿಜಲಿಂಗ ಭವಭಂಗ ಶರಣಾನಭಕ್ತಿಸಂಗ ॥
ಸಂಗೀತಸವಿಯು ಬಧಿರನಿಗೆ ತೋಚ್ಚುವುದುಂಟೆ ।
ಕಂಗುರುಡನಿಗೆ ಕನ್ನಡಿಯ ಹಂಬಲಿಕೆಯುಂಟೆ ।
ರಂಗುವಾಣಿಕ ಥಳಥಳಿಸುತಿರೆ ಪ್ಲವಂಗಗದಚ್ಚಾಂಗದ ಪರೀಕ್ಷೆಯುಂಟೇ ॥
ಕಂಗೊಳಿಸುವಿನಿಗೋಲ ರುಚಿಯು ಜೋಡನಿಗುಂಟೆ ।
ಲಿಂಗಾತ್ಮಕ ನಿಮ್ಮ ದಿವ್ಯನಾಮವ ತಿಳಿಯ ।
ಲಿಂಗ ಭವಪಡಲುಂಟೆ ನಿಜಲಿಂಗ ಭವಭಂಗ ಶರಣಾನಭಕ್ತಿಸಂಗ ॥

ಕಸ್ತೂರಿಸಿದ್ಧ ಸು. 1800

ಇವನು ಚೋರಕಥೆಯೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ವೀರಶೈವಕವಿ. ಇವನ ತಂದೆ ವಿರೂಪಾಕ್ಷಕರಜಾತನಾದ ಕಸ್ತೂರಿನಾಗಣ್ಣ, ತಾಯಿ ಗರುವಮ್ಮ. "ಜೋಳೇಶನೆಂದೆಂಬ ಕರ್ತುವಿನ ಕೃಪೆಯಿಂದ ಪೇಳ್ದಂ" ಎನ್ನುತ್ತಾನೆ. ಇವನ ಕಾಲವು ಸುಮಾರು 1800 ಆಗಿರಬಹುದು. ಇವನ ಗ್ರಂಥಕ್ಕೆ ಚಿತ್ರಶೇಖರಸೋಪಶೇಖರಕಥೆ ಎಂಬ ಹೆಸರೂ ಉಂಟು. ಇದರಲ್ಲಿ "ಉತ್ತಮವಜ್ರಮುಕುಟರಾಯಸಿರ್ವರು ಪುತ್ರರು ಚೋರರಾದ" ಕಥೆ ಹೇಳಿದೆ.

ಯಾದವ ಸು. 1800

ಇವನು ಕಲಾವತೀಪರಿಣಯವನ್ನು ಬರೆದಿದ್ದಾನೆ. ಬ್ರಾಹ್ಮಣಕವಿಯೆಂದು ತೋರುತ್ತದೆ; ಮುಕುಂದಭಕ್ತನೆಂದೂ ಉಭಯಕವಿತಾವಿಚಕ್ಷಣನೆಂದೂ ಹೇಳಿಕೊಂಡಿದ್ದಾನೆ. ಇವನ ವಿಷಯವಾಗಿ ನಮಗೆ ಇನ್ನೇನೂ ತಿಳಿಯದು. ಇವನು ಸುಮಾರು 1800 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಕಲಾವತೀ ಪರಿಣಯ

ಇದು ಗದ್ಯರೂಪವಾಗಿದೆ ; ಪ್ರಾಯಿಕವಾಗಿ ಹಳಗನ್ನಡಸರಣಿಯಲ್ಲಿ ಬರೆದಿದೆ ; ೨ ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದು ಕಲ್ಪಿತಕಥೆಯೆಂದು ತೋರುತ್ತದೆ. ಸೌವೀರದೇಶದ ಲೀಲಾವತಿಯ ದೊರೆಯಾದ ಬೃಹದ್ರಥನು ಸೌರಾಷ್ಟ್ರದೇಶದ ಇರಾವತಿಯ ದೊರೆಯಾದ ಕುವಲಯಾಪೀಡನ ಕುವರಿ ಕಲಾವತಿಯನ್ನು ಮದುವೆಯಾಗಿ ಮನಸ್ತಾಪದಿಂದ ಅಗಲಿ ಪುತ್ರನಾದ ಕುಂಡಲಶ್ರವನಿಂದ ಪರಾಜಿತನಾಗಿ ಪುನಃ ಕಲಾವತಿಯನ್ನು ಸೇರಿ ಸುಖದಿಂದ ರಾಜ್ಯವಾಳಿದನು—ಎಂಬುದೇ ಕಥಾಸಾರ. ಗ್ರಂಥವು "ಅತಿರುಚಿರವಾಗವೃತವರ್ಷದಿಂ ಪದಕಯ್ಯಾಪಾಕರೀತಿಗಳಿಂ ಧ್ವನಿರಸಾಲಂಕಾರನೀತಿಗಳಿಂದಭಿನವಪ್ರೌಢ ಸಂವಿಧಾನಂಗಳಿಂ ರುಚಿರತರವಾಗಿದೆ' ಎಂದು ಕವಿ ಹೇಳುತ್ತಾನೆ. ಇದನ್ನು 5ಮಾತ್ರೆಯ ಗಣಗಳುಳ್ಳ ವ್ಯಾಸವಿಲ್ಲದ ರಗಳೆಯ ರೂಪವಾಗಿ ಮೊದಲಿಂದ ಕೊನೆಯವರೆಗೂ ಬರೆದಿರುವಂತೆ ತೋರುತ್ತದೆ.

ಈತನ ಬಂಧವು ನಿರರ್ಗಳವಾಗಿಯೂ ಹೃದಯಂಗಮವಾಗಿಯೂ ಇದೆ. ಈ ಗ್ರಂಥದಿಂದ ಸ್ವಲ್ಪಭಾಗವನ್ನು ಉದ್ಧರಿಸಿ ಬರೆಯುತ್ತೇವೆ:

ಕಲಾವತಿಯ ಸೌಂದರ್ಯ

ನಾಳ್ಮೊಗನು ನಿಖಿಲತೇಜಸ್ಸಾರವನ್ನು ಸಂ | ಗ್ರಹಗೈದು ಈನಾರಿ ಸಾಕಾರ
ವನ್ನಂಪಿ |
ಡೊದಲಾಗಿ ಮಂಡೆಪರಯಂತವೂ ರಚಿಸಿ ಮುಗಿ | ಯಲ್ ಒಬ್ಬಿಕ ತದಭಾವ
ರೂಪಮಾಗಿರುವ ಘನ|
ತಿಮಿರಗಳ ಸಾರಮಂ ಸಂಗ್ರಹಿಸಿ ಚಿಕ್ಕಗಮಂ | ರಚಿಸಿದನೊ ಎಂಬಂತೆ
ಮುಖಕಮೀ ಸೌಂದರ್ಯ |
ಮಧುಪಾನಲೋಭದಿಂದಾಪ್ತಿಡಿಗಳಿಟ್ಟಣಿಸಿ | ಕವಿದಿರುವುದೀನೊ ಎಂಬಂದದಲ
ಕೋಪಾತಿಶಯ |
ಳ ಮಾಲಕೇಶಗಳಿಂದ ಬಾಲಚಂ | ದಿಗಮಂತೆ ಪೊಳೆಯುತಿಪ ಫಣೆಯಲ್ಲಿ
ರಚಿಸಿಗುಪ |

ಕಸ್ತೂರಿಯ ತಿಲಕದಿಂ ಶ್ರುತಿಸಕ್ತರಾಗಿರುವ | ವಿಮಲರ ಸಮುದ್ಗತಿಗೆ
ಎಡರನಾಚರಿಸುವುದೆ |
ವಕ್ರಾತ್ಮರಾಗಿರುವ ಮಲಿನಸ್ವಭಾವರಿಗೆ | ಯುಕ್ತಮೆಂಬರ್ಥಮಂ ಸೂಚಿಸು
ತ್ತಿರುವಂತೆ |
ಶೋಭಿಸುವ ಪ್ರಬುದ್ಧರ ಯುಗಳದಿಂ ಮನಸಿಜನ | ವಿಜಯಕೇತನದಂತೆ
ಕಮಲಗಳ ನಿಂದಿಸುವ |
ದೀಪ್ತತರಮಾಗಿರುವ ನಯನನ್ಯೆದಿಲೆಗಳಿಂ | ವಿಪುಲಸಂಧ್ಯಾರಾಗರುಚಿಕ
ಕನಿಯಂತಿರುವ |
ಅಧರರುಚಿಕವರ್ದಿಂ ಪೊಳೆವನೂಗುತಿಯಿಂದ | ಕಮನೀಯವಾಗಿರುವ
ತಿಲಕಸುಮದಂತಿರುವ |
ಚೆಲುವನಾಸಿಕದಿಂದ ಬಿಂಬಫಲಮಂ ಪೋ'ವ | ಅಧರಪ್ರವಾಳದಿಂ ದಾಡಿ
ಮದಬೀಜದಂ |
ತಿರುವ ದಂತಗಳಿಂದ ಕಪ್ಪುರದಕಡಿಗೆಯು | ತೀಡಿದಿಂದಲೊಪ್ಪುತಿಹ
ತಾಂಬೂಲರಸಭರಿತ |
ವದನದಿಂ ದಿವ್ಯಭೂಷಣಕಲಿತಕರ್ಣಾಢ್ಯ | ಲಂಬಿಮಣಿಕಸಕಮಯುತಾಟಂಕ
ಯುಗ್ಮರುಚಿ |
ಕವಚಿತಗಳಾಗಿರುವ ಕೈಪಿಡಿಸು ಸೋಲಿಸುವ | ಕಡಪುಗಳಯುಗಳದಿಂ
ರಮಣೀಯವಾಗಿರುವ |
ರಮಣೀಯವಾಸನವನ್ನು ಲೀಲಾವತೀಪತಿಯು | ನೋಡಿದನು.

ಕಪ್ಪಿನಿ ಸು. 1800

ಇವನು ನಂಜುಂಡಶತಕವನ್ನು ಬರೆದಿದ್ದಾನೆ. ಈತನು ವೀರಶೈವ ಕವಿ ಎಂದು ತೋರುತ್ತದೆ; ಸುಮಾರು 1800 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ತನ್ನಗ್ರಂಥವನ್ನು ನಂಜನಗೂಡು ನಂಜುಂಡೇಶ್ವರನ ಅಂಕಿತದಲ್ಲಿ ಬರೆದಿದ್ದಾನೆ.

ಇವನ ಗ್ರಂಥ

ನಂಜುಂಡಶತಕ

ಇದು ಕಂದದಲ್ಲಿ ಬರೆದಿದೆ ; ಪದ್ಯ 103; ನೀತಿಬೋಧಕವಾದ ಗ್ರಂಥ. "ಸಂಸ್ಕೃತಶ್ಲೋಕಂಗಳ ಪರಿವುಳದಲರುಗಳ ಕಂದಪದ್ಯಾಂತರದೊಳ್ ಸರಗಟ್ಟುವೆ ಸುಜನರ ಕಿವಿದುಂಬುಗೆ" ಎಂಬುದರಿಂದ ಸಂಸ್ಕೃತ ಶ್ಲೋಕಗಳನ್ನು ಕವಿ ಕನ್ನಡಕ್ಕೆ ಪರಿವರ್ತಿಸಿದಂತೆ ತಿಳಿಯುತ್ತದೆ. ಪ್ರತಿಪದ್ಯವೂ 'ನಂಜುಂಡಲಿಂಗ ನತಜನಸಂಗಾ' ಎಂದು ಮುಗಿಯುತ್ತದೆ ತನ್ನ ಗ್ರಂಥವು "ಮಾತಿನ ಸುಧೆ ತುಂಬಿದ ಕೊಡ, ನೀತಿಯುಮಾಫಲದ ಸಾರ, ಸಂಸಾರಾಬ್ಧಿಗೆ ಸೇತುವೆ" ಎಂದು ಕವಿ ಹೇಳುತ್ತಾನೆ. ಆರಂಭದಲ್ಲಿ ಗಣಪತಿ, ಸರಸ್ವತಿ, ವಿಷ್ಣು ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಬಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ರಣಮುಖದೊಳು ವಿಪಕ್ಷಕ್ಕೆ | ಮಣಿಯದೆ ನಿಲೆ ಧೈರ್ಯವಲ್ಲ ಕಾಮಿನಿಯರ ಕಂ|
ಗೊನೆಯಲಗಿಗಳುಕದಿರಲದು | ಘನವೈ ನಂಜುಂಡಲಿಂಗ ನತಜನಸಂಗಾ ||
ಗಂಡನ ಗಣಿಸದ ತೊಂಡತಿ | ಪುಂಡಾಟದ ಕಲಿತ ಮಗನು ತಸ್ಕರವೃತ್ಯಂ |
ಜಂಡಿಯುಮಾಡುವ ಸೊಸೆ ಪಗೆ | ಕಂಡಾ ನಂಜುಂಡಲಿಂಗ ನತಜನಸಂಗಾ ||

ವಿಶೇಷ ಸು. 1800.

ಈತನು ಶ್ರೀನಿವಾಸಕಲ್ಯಾಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ; ವೈಷ್ಣವನೆಂದು ತೋರುತ್ತದೆ. ಇವನ ಗುರು ವಿರಿ ವೆಂಕಟಾಚಾರ್ಯ ತಂದೆ ವಿರಿಕೃಷ್ಣಾರ್ಯ, ತಾಯಿ ರುಕ್ಮಿಣಿ. ಇವನು ಸುಮಾರು 1800 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಶ್ರೀನಿವಾಸಕಲ್ಯಾಣ.

ಇದು ಯಕ್ಷಗಾನರೂಪವಾಗಿದೆ. "ಭವಿಷ್ಯೋತ್ತರಪುರಾಣದಲಿ ಪೇಟ್ದಿರುವುದನನುಕರಿಸಿ ಪೇಳ್ವೆ" ಎಂದು ಕವಿ ಹೇಳುತ್ತಾನೆ. ತನ್ನ ವಿಷಯವನ್ನು ಈ ಶ್ಲೋಕದಲ್ಲಿ ಹೇಳಿದ್ದಾನೆ—

ರುಕ್ಮಿಣ್ಯಾಮೇರೀಕೃಷ್ಣಾರ್ಯಸಂಭವೇನ ಯಥಾಮತಿ |
ಶ್ರೀಶ್ರೀನಿವಾಸಕಲ್ಯಾಣಂ ಫಣಿಪೇನ[1] ಪ್ರಕಾಶ್ಯತೇ ||

---

1. ಫಟಿಪ = ಶೇಷ.

ಚೆನ್ನವೀರಗಾಡ ಸು. 1800.

ಈತನು ಕಾಮನ ಯೋಗಪದಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸೂಗೂರಪ್ಪನ ಶಿಷ್ಯನು. ಸುಮಾರು 1800 ರಲ್ಲಿ ಇದ್ದಿರಬಹುದು.

ಇವನ ಗ್ರಂಥ.

ಕಾಮನ ಯೋಗಪದಗಳು.

ಪದಸಂಖ್ಯೆ 157. ಒಂದೆರಡು ಪದಗಳನ್ನು ಉದಾಹರಿಸುತ್ತೇವೆ:

ಮಜವೆಯೆಂಬ ಮೋಹಿನಿಯ । ಪರಮತತ್ವದಿಂದಲಬದು ।
ತಿರುಗಿ ಬಾರದಂತೆ ಜಗದಿ । ಅಜಾಮಹಿನಿಂದಾಡಿರೋ ॥
ಹೀನಪಷಯಗಳನು ಕೆಡಿಸಿ । ಜ್ಞಾನವಾಗಳವನ್ನು ಪಿಡಿದು ।
ಭಾನುಕೋಟಿಪ್ರಭೆಯೊಳಗೆ ಸು । ಜ್ಞಾನದಿಂದಲಾಡಿರೋ ॥

ಶಿವಯೋಗೀಶ್ವರ ಸು. 1800.

ಇವನು ವೀರಶೈವ ಷಟ್ಸ್ಥಲಸಿದ್ಧಾಂತಸಾರವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಚೆನ್ನವೀರಸ್ವಾಮಿಯ ಶಿಷ್ಯನು; ಸುಮಾರು 1800 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ವೀರಶೈವಷಟ್ಸ್ಥಲಸಿದ್ಧಾಂತಸಾರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪ್ರಕರಣ 3, ಪದ್ಯ 121. ಇದರಲ್ಲಿ ಅಷ್ಟಾವರಣ, ಪಂಚಾಚಾರ ಮುಂತಾದ ವಿಷಯಗಳು ಹೇಳವೆ. ಆರಂಭದಲ್ಲಿ ಗುರುಸ್ತುತಿ ಇದೆ. ಇದರಿಂದ ಒಂದ ಪದ್ಯವನ್ನು ಉದ ರಿಸಿ ಬರೆಯುತ್ತೇವೆ—

ಹೆಪ್ಪಿನೊಳು ಹಾಲಡಗಿದಂತೆಯೊಂದಾನೊಂದು ।
ನೆಪ್ಪಿನೊಳಗಲ್ವುಮಜವೆಗಳಡಗಿದಂತೆ ಕ ।
ಣ್ಣಪ್ಪಿನೊಳು ಸೂರ್ಯಚಂದ್ರಾಗ್ನಿಪ್ರಕಾಶಂಗಳಡಗಿ ಕಾಣಿಸುವಂದದಿ ॥

ಮುಪ್ಪಿನೊಳು ಬಾಲ್ಯಯೌವನವಡಗಿದಂತಿರದೆ ।
ಯಪಿತಮುಮವಧಾನಮುಖ್ಯಕ್ರಿಯೆಗಳನೆಲ್ಲ ।
ನಿಷ್ಪತಿಯನೈದಿ ನಿಜವಾದ ಸದ್ಭಕ್ತರಿಗೆ ಭಾವಲಿಂಗಾಚಾರವು

ವೆಂಕ ಸು. 1800.

ಈತನು ಪಾರ್ವತಿಯ ಕೊರವಂಜಿಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಇವನ ಪಿತಾಮಹನು ತಿರುಮಲಯ್ಯ, ತಂದೆ ವೆಂಕಟೇಶಯ್ಯ. ಸ್ಥಳ ವೆಳೆಯಕೋಟೆ. ಸರಸಕವಿ ಎಂದು ಹೇಳಿಕೊಂಡಿದ್ದಾನೆ; ಸುಮಾರು 1800 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ಗ್ರಂಥವು ಹೀಗೆ ಆರಂಭಿಸುತ್ತದೆ—

ನಿಜಾಂಕಿತನಾದ ದಶರಥರಾಯನ ಕುಮಾರನಾದ ರಾಮಚಂದ್ರನ ಚರಿತ್ರೆಯ ಕೈಲಾಸವಾಸಿಯಾದಂಥ ಪಾರ್ವತೀದೇವಿ ಕೌಸಲ್ಯಾದೇವಿಗೆ ಹೇಳ್ದಿ ಕೊರವಂಜಿ ಕಟ್ಟಿಯ ಯಕ್ಷಗಾನಕ್ಕೆ ಕಥಾಪ್ರಾರಂಭವದೆಂತೆನೆ.

ಭಾಳಾಕ್ಷ ಸು. 1800

ಇವನು ಕರಿಯಬಂಟನಕಥೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನ ತಂದೆ ಕೆಂಪಣ್ಣಗೌಡ, ತಾಯಿ ಹಲಗಮ್ಮ. ಇವನು ಸುಮಾರು 1800ರಲ್ಲಿ ಇದ್ದಿರಬಹುದು. "ಕನ್ನಡಜಾಣರ ಕರ್ಣಕಿಂಪೆನಿಸುವ ವರ್ಣಕಕೃತಿಯನು ಬಿನ್ನಣದಿಂದೊರೆವೆ" ಎಂದು ಹೇಳುತ್ತಾನೆ.

ಬಸವಲಿಂಗ ಸು 1800

ಈತನು ಸೌಮಿನೀಕಥೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕುಂದಗೊಳ್ಳದ ಮಡಿವಳನ ಮಗನು. ಇವನ ಕಾಲವು ಸುಮಾರು 1800 ಆಗಿರಬಹುದು. ಇವನ ಗ್ರಂಥದಲ್ಲಿ ಸೌಮಿನಿ ಎಂಬ

ದೊಷ್ಟ ಸ್ತ್ರೀ ಗೋಕರ್ಣಕ್ಕೆ ಹೋಗಿ ಸದ್ಗತಿಯನ್ನು ಪಡೆದ ಕಥೆ ಹೇಳಿದೆ.

ಶಾಲಿಚೆನ್ನಬಸವ ಸು. 1800.

ಈತನು ವೀರಸಂಗಯ್ಯದುಂದುಮೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ಸ್ಥಳ ಧಾರವಾಡ. ಇವನು ಸುಮಾರು 1800 ರಲ್ಲಿ ಇದ್ದಿರಬಹುದು.

ಹತ್ತೊಂಬತ್ತನೆಯ ಶತಮಾನದ ಕವಿಗಳು

ರಾಮಕೃಷ್ಣಶಾಸ್ತ್ರಿ ಸು. 1808

ಈತನು ಭುವನಪ್ರದೀಪಿಕೆ ಎಂಬ ಸ್ವರಚಿತವಾದ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಸಿಂಹಾಸನಪುರಿಯ (ಹಾಸನ) ರಾಮಪಂಡಿತನ ಮಗನು. ಈ ಗ್ರಂಥವನ್ನು ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜನ ಸಂತೋಷಾರ್ಥವಾಗಿ 1808 ರಲ್ಲಿ ಆರಂಭಿಸಿದಂತೆಯೂ ಟೀಕೆಯನ್ನು 1815 ರಲ್ಲಿ ಮುಗಿಸಿದಂತೆಯೂ ಹೇಳುತ್ತಾನೆ. ಇವನ ಗ್ರಂಥಕ್ಕೆ ಕೃಷ್ಣರಾಜಗುಣರತ್ನಮಾಲೆ ಎಂಬ ಹೆಸರೂ ಉಂಟು. ಇದರಲ್ಲಿ ಬ್ರಹ್ಮಾಂಡಸೃಷ್ಟಿ, ಕಾಲಪ್ರಮಾಣ, ಮನ್ವಾದಿಗಳು, ಭೂಗೋಳ, ಖಗೋಳ, ಮೈಸೂರು ರಾಜರ ಪರಂಪರೆ, ಮುಮ್ಮಡಿ ಕೃಷ್ಣರಾಜ ಗುಣಕಥನ, ಪುರಾಣಗಳು, ವರ್ಣಾಶ್ರಮ ಧರ್ಮಗಳು ಮುಂತಾದ ಹಲವು ವಿಷಯಗಳು ಹೇಳಿವೆ. ಗ್ರಂಥವು 10 ಪಟಲಗಳಾಗಿ ಭಾಗಿಸಲ್ಪಟ್ಟಿದೆ.

ಚಂದ್ರಸಾಗರವರ್ಣಿ. ಸು. 1810.

ಈತನು ಕದಂಬಪುರಾಣ, ಚಂದನೆಯಕಥೆ, ಜಿನಭಕ್ತಿಸಾರ, ಜಿನಮುನಿ, ಪರಶುರಾಮಭಾರತ, ಪುರಾಣಸ್ತೋತ್ರ, ಬೆಟ್ಟವರ್ಧನಚರಿತ್ರೆ, ಬ್ರಹ್ಮಕತಕೋಕ, ಭವ್ಯಾವೃತ, ಮುಲ್ಲಾಶಾಸ್ತ್ರ, ಜಿನರಾಮಾಯಣ, ರುದ್ರಯಜ್ಞಗಾನ, ವಾಸುದೇವಪಾರಿಜಾತ, ಕಬ್ಬಾರ್ಥಮಂಜರಿ, ಸ್ಮರಕೊರವಂಜಿ, ಹಿಮಶೀತಳನ ಕಥೆ, ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಜೈನಕವಿ; ಸೇನಗಣದವನು; ಇವನ ಗುರು ಲಕ್ಷ್ಮೀಸೇನ, ಸ್ಥಳ ತೋವಿನಕೆರೆ. ಕೆಲವು ಗ್ರಂಥಗಳನ್ನು ಶ್ರವಣಬೆಳ್ಗೊಳಕ್ಕೆ ಉತ್ತರದಲ್ಲಿರುವ ಧರ್ಮಾಖ್ಯಪುರದ ಪೇಟೆಯ ಚಂದ್ರಪ್ರಭನ ಅನುಗ್ರಹದಿಂದ ಬರೆದಂತೆ ಹೇಳುತ್ತಾನೆ. ಈತನ ಜಿನಮುನಿ ಎಂಬ ಗ್ರಂಥದಲ್ಲಿ

ಇವನು ಗೃಹಸ್ಥನಾಗಿದ್ದಾಗ ಸ್ಮರಕೊರನಂಜಿ, ನಾಗಕುಮಾರಷಟ್ಪದಿ ಬ್ರಹ್ಮಶತಕೋಶ, ಭಾರತ ಈ ನಾಲ್ಕು ಗ್ರಂಥಗಳನ್ನೂ ದೀಕ್ಷೆಯಾದ ಬಳಿಕ ರುದ್ರಯಕ್ಷಗಾನ, ಮುಲ್ಲಾಶಾಸ್ತ್ರ, ಪರಶುರಾಮಭಾರತ. ಭವಾವ್ಯತ, ಚಂದನೆಯ ಯಕ್ಷಗಾನ ಈ ಐದು ಕಾವ್ಯಗಳನ್ನೂ ಬರೆದಂತೆ ಹೇಳಿದೆ. ಇದರಿಂದ ಪರಶುರಾಮಭಾರತವಲ್ಲದೆ ಬೇರೆ ಒಂದು ಭಾರತವನ್ನೂ ಇವನು ಬರೆದಿರುವಂತೆ ತೋರುತ್ತದೆ. ಪರಶುರಾಮ ಭಾರತವನ್ನು 1810 ರಲ್ಲಿಯೂ ಜಿನಮುನಿಯನ್ನು 1814 ರಲ್ಲಿಯೂ ಬರೆದಂತೆ ಕವಿ ಹೇಳುತ್ತಾನೆ.

ಇವನ ಗ್ರಂಥಗಳಲ್ಲಿ

1. ಜಿನಮುನಿ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಸಂಧಿ 50, ಪದ್ಯ 2551. ಇದರಲ್ಲಿ ನಾಗಕುಮಾರನೆಂಬ ಮಹಾಮಂಡಲೇಶ್ವರನ ಚರಿತೆ ಹೇಳಿದೆ ನಾಗದತ್ತನು ಪಂಚಮಿಯ ಉಪವಾಸದ ಮಹಿಮೆಯಿಂದ ಸ್ವರ್ಗದಲ್ಲಿ ಹುಟ್ಟಿ ಅಲ್ಲಿಂದ ಬಂದು ನಾಗಕುಮಾರನಾಗಿ ಭೂಮಿಯಲ್ಲಿ ಜನಿಸಿ ಸಕಲೈಶ್ವರ್ಯವನ್ನೂ ಅನುಭವಿಸಿ ಅಂತ್ಯದಲ್ಲಿ ವ್ರತಿಯಾಗಿ ಅಪವರ್ಗ ಸುಖವನ್ನು ಪಡೆದನು—ಎಂಬುದೇ ಕಥಾಗರ್ಭ. ಈ ಗ್ರಂಥವನ್ನು ವೇಣುಪುರಿಯ ಶ್ರಾವಕರ ಪ್ರಾರ್ಥನಾನುಸಾರವಾಗಿ ಕವಿ ಧರ್ಮಪುರಿಯ ಬಸದಿಯಲ್ಲಿ ಬರೆದಂತೆ ಹೇಳುತ್ತಾನೆ. ಮೇಲೆ ಹೇಳಿದ ನಾಗಕುಮಾರಷಟ್ಪದಿ ಎಂಬುದು ಈ ಗ್ರಂಥವೇ ಆಗಿರಬೇಕು. ಆರಂಭದಲ್ಲಿ ಚಂದ್ರಪ್ರಭಸ್ತುತಿ ಇದೆ. ಆಮೇಲೆ ಕವಿ ನೇಮಿ, ಸಿದ್ಧಾದಿಗಳು, ಸರಸ್ವತಿ, ಗಣಧರರು, ಪೂಜ್ಯಪಾದ ಇವರುಗಳನ್ನು ಕ್ರಮವಾಗಿ ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ನಾಡು

ಬಿಡುವಿಡದೆ ತೋಪ್ರುತಿಹ ಸರಸಿಗಳ ಸರಿಸಗಳ ।
ಕಡೆಗಾಣದೊತ್ತರಿಪ ತೊಲ್ಲಿಯಿಂದ ಕೆಲ್ಲಿಯಿಂದ ।
ನುಡಿಗಗೋಚರವಾದ ಖಗದಿಂದ ಮಿಗದಿಂದ ಮಣಮಯಾಚಲಗಳಿಂದ ॥

ಎಡೆಬಿಡದೆ ಶೋಭಿಸುವ ಬೇಡಗಳ ನಾಡುಗಳ |
ತೊಡಗಿದಾರಂಭಮಗಳ ಸೊಂಪಿನಿಂದಿಂಪಿನಿಂ |
ಕಡುಗುತಿಹ ಸ್ವರ್ಣಮಯದಿಳೆಯಿಂದ ಕಳೆಯಿಂದಲಾನಾಡ ಸರಿ ಮೆಱೆಯುದು ||

ಸೂರ್ಯಾಸ್ತ.

ವಾರುಣೀಸಂಗದಿಂದುರುತೇಜಮಂ ನೀಗಿ |
ದೂರ್ಪಗೀಡಾಗಿ ಪೋದವನಧಿಕಶೂರತ್ವ |
ಸಾರಿದರ್ಕನಾಗಲಾಸ್ಯವ ನೋಡೆನೆಂದು ಶತಪತ್ರಗಳ್ ಕಣ್ಮುಚ್ಚಲುಂ
ಆರಜನಿರಾಜನನುಚರರಂತೆ ಭೃಮರ ಝೇಂ |
ಕಾರದಾನಂದದಿಂ ಪದತ್ಯಂಗನೆಯುತ ವೈ |
ಸಾರಿದುವು ಊಜಿದುವು ಮುತ್ತಿದುವು ಸುತ್ತಿದುವು ಒತ್ತುವೊತ್ತಿಲಿ ಕೂಳಿತುವು ||

2 ಜಿನಭಕ್ತಿಸಾರ

ಇದು ಭೂಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 108. ಪ್ರತಿಪದ್ಯವೂ "ರಕ್ಷಿಸನವರತ" ಎಂದು ಮುಗಿಯುತ್ತದೆ. ಇದು ಧರ್ಮಾಖ್ಯಪುರದ ಚಂದ್ರಪ್ರಭನ ವರದಿಂದ ಲಕ್ಷ್ಮೀಸೇನರ ಭಕ್ತಿಯಲಿ ವಿರಚಿಸಿದ ಕಾವ್ಯ ಎಂದು ಕವಿ ಹೇಳುತ್ತಾನೆ. ಆರಂಭದಲ್ಲಿ ಚಂದ್ರನಾಥಸ್ತುತಿ ಇದೆ ಇದರಿಂದ ಐದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹಲವುಜನ್ಮದಿ ಗೈದ ಆಘಸಂ | ಚಲಿಸುವುದು ನಿರ್ಮಳದಿಯೊಂದಿನ |
ಸಲವಿನಲಿ ಭಜಿಸಿದರೆ ನಿಮ್ಮಯ ಸ್ತೋತ್ರಮಾಲೆಗಳ ||
ಒಲಿಸಬಹುದಪವರ್ಗನಾರಿಯ | ಗೆಲ್ಲುಬಹುದಾವಾವ ಗತಿಗಳ |
ನಿಲಿಸಿದರೆ ನಿಮ್ಮಲ್ಲಿ ಮನವನು ರಕ್ಷಿಸನವರತ ||
ಜೀವನಕೆ ಹಿತವೆಲ್ಲ ಪುಣ್ಯದ | ಭಾವ ಪರಪೀಡನೆಯೆ ಪಾಪಕೆ |
ತಾವದೆಂಬುದನಱಿದು ತೊಱೆವನುಚಿತದ ಕಾರ್ಯಗಳ ||
ಭಾವಿಸೊಳ್ಪಿತ ಸರ್ವಜನಸಂ | ಜೀವನೆನಿಸಲು ನಿನಗೆ ಸದ್ಗತಿ |
ಯಾವನಾಜಿನದೇವ ರಕ್ಷಿಸಲಿಮ್ಮನನವರತ ||

3 ಭವ್ಯಾಮೃತ

ಇದು 110 ಕಂದಗಳನ್ನು ಒಳಕೊಂಡಿದೆ; ಇದರಲ್ಲಿ ಆತ್ಮವಿಚಾರವು ಹೇಳಿದೆ. ಆದಿಯಲ್ಲಿ ಜಿನಸ್ತುತಿ ಇದೆ. 107 ನೆಯ ಪದ್ಯ

ದಲ್ಲಿ ಗೊಮ್ಮಟಸಾರವೂ ಪ್ರಾಭೃತವೂ ಪರಮಾರ್ಥದ ತಂದೆತಾಯಿಗಳೆಂದು ನಂಬಿ ನೇಮಿನಾಥ್ವರನ ಪಾದವನ್ನು ನೆನೆದು ಈ ಗ್ರಂಥವನ್ನು ಬರೆದುದಾಗಿ ಕವಿ ಹೇಳುತ್ತಾನೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ತನುಬೀಜಾತ್ಮನು ಬೀಜಂ | ದನವರತಂ ನಡೆವ ನುಡಿವ ಸಡಗರದೆಡೆಯೊಳ್ |
ಮನದೊಳ್ ಚಿಂತಿಸುವಾತನ | ಘನತರಕರ್ಮಗಳಿಗೆಲ್ಲ ನಿರ್ಜರೆಯಕ್ಕುಂ ||
ನಿರಘನ ರುಚಿವಡೆದವನಿಗೆ | ಪರಿಗ್ರಹಾದಿಗಳ ತೊಡರಿನೀಂ ತಡೆದಪುದೇ |
ಧರೆಯೊಳು ಮದವೆದ್ದಾನೆಯ | ನೆರೆದಿಪ ಕಡ್ಡಿಗಳ ಬೇಲಿಯೇಂ ತಡೆದಪುದೇ ||

4. ಪರಶುರಾಮಭಾರತ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 24, ಪದ್ಯ 1369. ಇದರಲ್ಲಿ 18 ನೆಯ ತೀರ್ಥಂಕರನಾದ ಅರಜಿನನ ಅಂತರಾಳ ಕಾಲದಲ್ಲಿದ್ದ ಸುಭೌಮಪರಶುರಾಮರ ಕಥೆ ಹೇಳಿದೆ: ಪರಶುರಾಮನು ಸಹಸ್ರಬಾಹುವನ್ನು ಸೋಲಿಸಿ ಕ್ಷತ್ರಿಯರನ್ನು 21ಸಾರಿ ಸಂಹರಿಸಿ ಕೊನೆಗೆ ಸುಭೌಮರಾಜನಿಂದ ಹತನಾದನೆಂದು ಹೇಳಿದೆ. ಗುಬ್ಬಿಪುರದಲ್ಲಿ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಈ ಗ್ರಂಥವು "ಕರಸಜನರಿಗೆ ಕುಶಲತತ್ವದ ನೆರವಿ ಸದ್ಭವ್ಯರಿಗೆ ಮಿಥ್ಯದ ತೊಲಿವಿ ವಿರತರಿಗರ ಸುಗಳಿಗಿದು ವೀರಮಂತ್ರ" ಎಂದು ಹೇಳಿದ್ದಾನೆ. ಆರಂಭದಲ್ಲಿ ಚಂದ್ರ ಪ್ರಭಸ್ತುತಿ ಇದೆ. ಆಮೇಲೆ ಕವಿ ಸುಪಾರ್ಶ್ವ, ಅರ, ಸಿದ್ಧಾಂಬಿಗಳು, ಸರಸ್ವತಿ, ಗಣಧರರು, ಯಕ್ಷರು ಇವರುಗಳನ್ನು ಸ್ತುತಿಸಿದ್ದಾನೆ. ಇದರಿಂದ ಬಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಸೂರ್ಯೋದಯ.

ತೆರಳುತಿಹ ತಮವರಳುವಬ್ಜಿನಿ | ಕೊಱಗುತಿಹ ಕುಮುದಾಳಿ ಚಿಂತೆಯ |
ಕರೆವಜಾತಿಜಕೋರವಿಟರೆದೆಹಾಱಿನೊಡರಿಸುತ ||
ಅರುಣಕಿರಣದ ಜವನಿಕೆಯ ಮಱೆ | ಗರೆದು ಒಹ ದಿನಕರನ ಬಿಂಬದ |
ಭರವನಱಿದುಲಿಯುತ್ತಿಹುವು ಕಲರವದ ಖಗನಿಕರ ||

5. ಕದಂಬಪುರಾಣ.

ಇದೂ ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 199, ಕೆಲವು ಸಾಂಗತ್ಯಗಳೂ ಇವೆ. ಇದರಲ್ಲಿ ಹಲವು ವಿಷಯಗಳು ಕವಿಗೆ ತೋರಿ

ದಂತೆ ಸಂಗ್ರಹವಾಗಿ ಹೇಳಿವೆ. ಈ ಕಾರಣದಿಂದಲೇ ಇದಕ್ಕೆ ಕದಂಬ ಪುರಾಣ ಎಂದು ಹೆಸರಿಟ್ಟಂತೆ ಕಾಣುತ್ತದೆ. ಕವಿ ಬೆಟ್ಟವರ್ಧನಚರಿತೆ, ಮುಲ್ಲಾಶಾಸ್ತ್ರ ಎಂಬ ಗ್ರಂಥಗಳನ್ನು ಬರೆದಂತೆ ಇದರಲ್ಲಿ ಹೇಳಿದೆ ಪ್ರತಿಪಾದಿತವಾದ ವಿಷಯಗಳು, ಬೌದ್ಧಮತವಾದುದು; ಯಜ್ಞಾರಂಭವಾದುದು. ರಾಮಾನುಜಮತವಾದುದು, ಕೃಷ್ಣನಿಗೆ ದೇವತ್ವವಾದುದು, ಮುಲ್ಲಾಶಾಸ್ತ್ರವಾದುದು. ಶ್ವೇತಾಂಬರರಾದುದು, ಲಿಂಗಧಾರಣೆಮಾಡಿದ್ದು, ಕೋಮಟಿಗರು ವೈಶ್ಯರಾದುದು, ಪಣಕಟ್ಟು ಮಾಡಿದುದು, ರಾಜಪುತ್ರರಾದುದು, ಹೆಗ್ಗಾಣಿಗರಾದುದು ಇತ್ಯಾದಿ. ಅಲ್ಲದೆ ಹಿಮಶೀತಳ, ವಿಕ್ರಮರಾಯ, ಶಾಲಿವಾಹನ, ಭೋಜ, ಕೂನಪಾಂಡ್ಯ, ಹೊಯ್ಸಳರಾಯ, ಬಿಜ್ಜಳ, ಬಲ್ಲಾಳ, ಬೆಟ್ಟವರ್ಧನ, ಚಾಮುಂಡರಾಯ ಇವರುಗಳ ವಿಷಯವಾಗಿಯೂ ಕವಿ ತನಗೆ ತೋರಿದ ಒಂದೆರಡು ಮಾತುಗಳನ್ನು ಹೇಳಿದ್ದಾನೆ. ಆರಂಭದಲ್ಲಿ ಜಿನಸ್ತುತಿಯೂ, ಸರ್ವಜ್ಞಸ್ತುತಿಯೂ ಇವೆ. 1755 ನೆಯ ಜಯವರ್ಷದಲ್ಲಿ (1834) ಕೊಡಗು ಶೈವವಾಯ್ತು ಎಂದು ಕವಿ ಹೇಳುತ್ತಾನೆ ಈ ಗ್ರಂಥದಲ್ಲಿ ಅನುವಾದನಾಡಲಿಕ್ಕೆ ಯೋಗ್ಯವಾದ ಪದ್ಯಗಳು ನಮಗೆ ದೊರೆಯಲಿಲ್ಲ.

೧ ಪುರಾಣ ಸ್ತೋತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 51. ಇದರೊಳಗೆ ಜಿನರ ಮಾತಾಪಿತೃ ಜನನ ಪುರ ವರ್ಣ ಯಕ್ಷ ಲಾಂಛನ ಕರ್ಮಕ್ಷಯಾವನಿ ಪಂಚಕಲ್ಯಾಣಗಳು ಹೇಳಿವೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ರತ್ನಪುರಿಯಲಿ ಭಾನುನಂದಿನೃಪ ಶುಭದೇವಿ |
ಪತ್ನಿಗುದಿಸಿದ ಕನಕವರ್ಣನಿಕ್ಷ್ವಾಕುಕುಲ |
ರತ್ನ ನಾಲ್ವತ್ತೈದುಬಿಲ್ಲಿಡಿಯ ವಜ್ರಾಂಕ ದಶಲಕ್ಷವರುಷವೆನಿಪ ||
ನೂತ್ನದಾಯುಷ್ಯ ಕಿನ್ನರಯಕ್ಷ ಯಕ್ಷಿಕುಲ |
ರಕ್ಷೆ ಮಾನಸಿಯಿಂದ ಸಮ್ಮೇದಗಿರಿಯಲ್ಲಿ ||
ನೂತ್ನಕರ್ಮವ ಗೆಲಿದ ಧರ್ಮತೀರ್ಥಂಕರಿಂಗೆ ನಾನರ್ಥಿಗ್ಯೈಪೆ ಸಿರುತ ||

7 ಮುಲ್ಲಾ ಶಾಸ್ತ್ರ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಆಶ್ವಾಸ 8, ಪದ್ಯ 400. ಇದರಲ್ಲಿ ಇಂದ್ರನು ಜೇಕೊಬ್ಬನಿಗೆ ಗಣಾಧಿಪತಿಪದವಿಯನ್ನು ಕೊಡಲು ಪಾರ್ಶ್ವಭಟ್ಟಾರಕನು ಕೋಪಗೊಂಡು ಮುಲ್ಲಶಾಸ್ತ್ರವನ್ನು ಕಲ್ಪಿಸಿ ಪ್ರಚಾರಮಾಡಿದ ಸಂಗತಿ ಹೇಳಿದೆ. ಈ ಗ್ರಂಥವನ್ನು ಕವಿ ತೋವಿನ ಕೆರೆಯ ಬಸದಿಯಲ್ಲಿ ಬರೆದಂತೆ ಹೇಳಿಕೊಂಡಿದ್ದಾನೆ. ಆರಂಭದಲ್ಲಿ ಚಂದ್ರನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧಾಂತಿಗಳು, ಸರಸ್ವತಿ, ವೃಷಭಸೇನಾದಿ ಗೌತಮಾಂತ ಋಷಿಗಳು, ವ್ಯಾಸ, ಪೂಜ್ಯಪಾದ, ಯಕ್ಷಯಕ್ಷಿಯರು ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ —

ಬಸದಿಯೆಂಬುದಕಾಗ ಪ್ರತಿಕರ | ಹೆಸರವಾಣಿ ಮುಸೂತಿಯೆಂದವ |
ನುಸುರಿದನು ಪಾಕೃತದಿ ನೋಕ್ಷಕೆ ನೊಪ್ಪುಹೆಂದೆಂಬ ॥
ಹೆಸರಿಡಲು ಅದನೀಗಲಾಪುರ | ಕೊಸೆದು ಇಟ್ಟನು ವೊಪ್ಪುನೆಸುತಲಿ |
ಅಸಮಸಾಹಸ ಪಾರ್ಶ್ವಭಟ್ಟಾರಕನು ಕೇಳೆಂದ ॥
ಅನ್ನವನು ಪರುನೆಂದು ದೇವರು | ಗನ್ನನೈನೇದ್ಯವನು ಮಾಡುವ |
ದಿನ್ನು ಅನುಚಿತವೀಗ ಪುರಿಮುರಿಯೆಂದು ಅದಲಕ್ಕಿ ॥
ಯನ್ನು ಶರ್ಕರೆಸಹಿತ ದೇವರಿ | ಗನ್ನವಾಡಿರಿ ಜುಮ್ಮೆರಾತ್ರಿಯೊ |
ಳೆನ್ನುತಲಿ ಬೆಸನಿತ್ತ ಸರ್ವರಿಗರಸ ಅಮುಲ್ಲಾ ॥
ಮುಲ್ಲಹೆಂಬಂಕಿತವ ತನ್ನೊಳ | ಗಲ್ಲವೆಂಬಂಕಿತವ ದೇವರೊ |
ಳೆಲ್ಲವಪಸವ್ಯದೊಳು ಮಾಡಿದ ಮುಸಲಮಾನಧನು ॥

8 ಜಿನಶತಾಷ್ಟಕ

ಇದೂ ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನವಮಂ ದೊರೆತ ಅಸಮಗ್ರಪ್ರತಿಯಲ್ಲಿ 74 ಆಶ್ವಾಸಗಳೂ (ಪದ್ಯ 4309) 75 ನೆಯ ಆಶ್ವಾಸದಲ್ಲಿ ಕೆಲವು ಪದ್ಯಗಳೂ ಇವೆ. ಗ್ರಂಥವು ಸಾಮಾನ್ಯವಾಗಿದೆ; ಕವಿತಾಚಮತ್ಕಾರವೇನೂ ಕಾಣುವುದಿಲ್ಲ.

9 ಹಿಮಶೀತಳಪ ಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 87. ಇದಕ್ಕೆ ಅಕಳಂಕ ಚರಿತೆ ಎಂಬ ಹೆಸರೂ ಉಂಟು. ಇದರಲ್ಲಿ ಅಕಳಂಕನೆಂಬ ಜೈನಗುರು

ಹಿಮಶೀತಳರಾಜನ ಸಭೆಯಲ್ಲಿ ಬೌದ್ಧರನ್ನು ವಾದದಲ್ಲಿ ಸೋಲಿಸಿ ಅವರನ್ನು ಧೇಕಭ್ರಷ್ಟರನ್ನಾಗಿ ಮಾಡಿ ಸಿಂಹಳದ್ವೀಪಕ್ಕೆ ಕಳುಹಿಸಿದ ಕಥೆ ಹೇಳಿದೆ. ಇದರಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ—

ಷಣ್ಮತಗಳ ಸಮನಾಗಿ ರಕ್ಷಣೆಗೈಯು। ತುಣ್ಮಿಸದಡಗಿಸದೊರ್ವ |
ರಮ್ಮನೋರಾಗದಿ ಹಿಮಶೀತಳೇಶ ಮ | ಹನ್ಮನುತೆಯೊಳಾಳುತಿರ್ದ ॥

10 ಬೆಟ್ಟವರ್ಧನ ಚರಿತೆ.

ಇದೂ ಸಾಂಗತ್ಯದಲ್ಲಿ ಬರೆದಿದೆ; ಪದ್ಯ 121. ಇದರಲ್ಲಿ ರಾಮಾನುಜ ಗುರು ತೊಣ್ಣೂರಲ್ಲಿ ಬೆಟ್ಟವರ್ಧನ ರಾಜನನ್ನು ವೈಷ್ಣವನನ್ನಾಗಿ ಮಾಡಿದ್ದೇ ಮುಂತಾದ ವಿಷಯಗಳು ಹೇಳಿವೆ.

ಆರಂಭದಲ್ಲಿ ಚಂದ್ರಪ್ರಭ, ಸರಸ್ವತಿ ಇವರುಗಳ ಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಈ ಮುನಿಗಳು ಎನ್ನ ಹಸ್ತದಿ ಭಿಕ್ಷವ | ಪ್ರೇಮಿಸದಿರಲು ಬಿಟ್ಟವರ |
ರಾಮಾನುಜಾಚಾರ್ಯಶಿಷ್ಯನಾಗುವೆನೆಂದು | ನೇಮವನಿಟ್ಟ ಭೂಭುಜನು ॥
ನಾಮಧಾರಿಗಳಿಗೆ ಗುರುಗಳು ಶಿಕ್ಷೆಗೆ | ನೀಮಿಹುದೆಂದುಲಿದಿನ್ನು |
ರಾಮಾನುಜಾಚಾರ್ಯರು ಎಲ್ಲಕೆ ಕುಲ | ಸ್ವಾಮಿಗಳೆಂದು ನೇಮಿಸಿದ ॥

ಶ್ರೀನಿವಾಸಕವಿ ಸು. 1812

ಈತನು ಕೃಷ್ಣನೃಪಜಯೋತ್ಕರ್ಷವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಮೈಸೂರು ದೊರೆಯಾದ ಮುಮ್ಮಡಿಕೃಷ್ಣರಾಜನ ಆಶ್ರಿತನು. ಇವನಿಗೆ ಕವಿಸಾರ್ವಭೌಮ ಎಂಬ ಬಿರುದುಂಟು ಈ ಗ್ರಂಥವನ್ನು 1812 ರಲ್ಲಿ ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ.

ಕೃಷ್ಣನೃಪಜಯೋತ್ಕರ್ಷ.

ಇದರಲ್ಲಿ 8 ಪದ್ಯಗಳೂ 6 ಗದ್ಯಗಳೂ ಇವೆ. ಇದು ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾದ ಗ್ರಂಥ. ವಿರಾಮಭೇದದಿಂದ ಸಂಸ್ಕೃ

ತರೂಪವಾಗಿಯೂ ಕರ್ಣಾಟರೂಪವಾಗಿಯೂ ಇರುವಂತೆ ಕವಿ ಬಹಳ ಚಮತ್ಕಾರದಿಂದ ಈ ಗ್ರಂಥವನ್ನು ರಚಿಸಿದ್ದಾನೆ[1]. ಇದರಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ—

ಭೂವಲ್ಲಿ । ರಣದಲಿ । ನಿಯತ । ಶಕ್ರಸಮಶ್ರೇಯ । ಆಳಿದ । ಮಹಾವೀರ್ಯ । ಕೃಷ್ಣನೃಪೇಂದ್ರಫಲಿಸು । ಕೃಪ । ಜಯಾಹರ್ಮದ್ವಿನುತಿಲಕ್ಷ್ಮಿಸು । ರಸಿಕವರ್ಯ ॥ ಅವಧಾರಿಸುಮಹನೀಯ । ಮಹಿವಾಢ್ಯ । ಮಹಸ್ವಿ । ಮಹಿಸೂರವಮಹೀಪತಿ । ಮಹಾವಂಶಜನು । ಶ್ರೇಯಸ್ವಿಸರ್ವಾಧಿಕಪ್ರಭಾವಕನು । ಕಪೋಲನಾಸಿಕಾದ್ಯವಯವಸೌಂದರ್ಯಶೋಭಿತನು । ಧರಾಧಿಕಾರಯೋಗ್ಯಮಿತಗಂಭೀರಭಾಷಣನು । ದ್ರುಹಿಣಸೃಷ್ಟವಿಶಿಷ್ಟಜಗಜಲಿ । ಕಾಂತಿಕಾಂತಗತಿಲಕಸನುನು । ವ್ಯವಸ್ಥಿತಶಮದಮನು । ವಿಹಿತಧರ್ಮನಿಷ್ಠನು । ಶ್ರೇಷ್ಠಸಭಾಸನಾತ್ಮನ್ಯನು । ಪರವೋಹಪರಬಲವಿಜಯಕೃಪಾದಿಮನೋಹರಗುಣಪ್ರವರ್ಧನು । ಶ್ರುತಿಪರಿಶೀಲನಾಢ್ಯಸ್ಥೂರುಕಾಯಾಂಗದವಿಭಾವನೋಚಿತಶುಚಿತರಲಸದಾಜ್ಯನು । ಸಾರಫಲದಾತನು । ಶಾಂತವಿಶಿಷ್ಟನು । ತೋಷಿತದೇವಬ್ರಾಹ್ಮಣವ್ರಜೋಪಚಾರಫಲದಿಂದದ್ರವ್ಯಬುದ್ಧಿಸಂಪನ್ನನು । ಪ್ರಣಯರಸನಾವಿದನು । ಜಾಯಮಾನವಿಪಕ್ಷಗಳಪ್ರಹಾರಕರಣೋದಾತ್ತಮಧೀರನು । ದಾಸದಶಾಧ್ಯುಷಿತರಾಜರಾಜೇಂದ್ರನುನಂತೋಷಗುಣನಿಧಿಭೂತದಯಾಢ್ಯ । ಗೋಪಾಲನೆ । ಕ್ಷಣಕ್ಷಣಕೃತವಿಷಯಕ । ಬಹುಚಾತುರ್ಯಗಾರ । ಕಲಿಯುಗಾವತೀರ್ಣಪ್ರತ್ಯಕ್ಷನಯ । ಸದೋಧನೀ । ಧರ್ಮಪಣವಂತನು । ಸಾಮ್ರಾಜ್ಯಧುರಂಧರನು ॥

ನಿತ್ಯಜಯಾನ್ವಿತರಣವಿಧಿಯೋಗೋ । ವಿಬುಧರ । ತೋರುತ । ನಿಜ । ವನಮಾಲೀ । ಕೀರ್ತಿಶುಚೀಕೃತದಿಕ್ತಟನಾಗೋ । ವಿಪುಳಮಹಿಮ । ನೀ । ಹಿತಮತಿಶಾಲೀ ।

---

1 ರೇಖಾಕ್ಷಿತಸು ವಿರಾಮೈಃ ಪ್ರಭವತಿ ಕರ್ಣಾಟವಾಙ್ಮಯಂ ಪತ್ರಂ ।
ಸಂಸ್ಕೃತಕೃತಿಸ್ತು ಸಿಧ್ಯತಿ ಲಾಕ್ಷಾಂಕನಿದರ್ಶಿತೈಃ ಪದವಿಭಾಗೈಃ ॥
ಕೃಷ್ಣಜಯೋತ್ಕರ್ಷಾಖ್ಯಾ ಸಂಸ್ಕೃತಕರ್ಣಾಟವಾಗ್ದ್ವಯಶ್ಲಿಷ್ಟಾ ।
ಅನ್ಯಾದೃಶೀ ಕೃತಿರಿಯಂ ಸತ್ಪ್ರೀತ್ಯೈ ಶ್ರೀನಿವಾಸರಚಿತಾಸ್ತು ॥

ನೃಪಸಭೆಯಲ್ಲಿಕ । ಭೂಷಣವಾಗಿಯು । ಜಗದವಪೋಷಿತ । ಸಕಲದ್ವಿಜನು ।
ಶ್ರೀಕೃಷ್ಣವಿಭೋ । ಮಯಿಸಪರಿಪತೇ । ಪ್ರೇಮಭರಿತ । ನಿರು। ಪದನುಮುಚಿತನು।

ಮುಮ್ಮಡಿಕೃಷ್ಣರಾಜ 1794-1868

ಈತನು ನಮಗೆ ತಿಳಿದಮಟ್ಟಿಗೆ (1) ಅಖಂಡಕಾವೇರೀಮಾಹಾತ್ಮ್ಯ (2) ಅಧ್ಯಾತ್ಮರಾಮಾಯಣ, (3) ಅರ್ಕಪುಷ್ಕರಿಣೀಮಾಹಾತ್ಮ್ಯ, (4) ಉತ್ತರಗೀತೆ, (5) ಉತ್ತರರಾಮಚರಿತಕಥೆ, (6) ಉಷಾಪರಿಣಯ, (7) ಕಾದಂಬರಿ, (8) ಕಾಶೀಖಂಡ, (9) ಕೃಷ್ಣಕಥಾರತ್ನಾಕರ, (10) ಕೃಷ್ಣಕಥಾಸಾರಸಂಗ್ರಹ, (11) ಗಯಚರಿತೆ, (12) ಚುಂಚನಕಟ್ಟೆಯಮಾಹಾತ್ಮ್ಯ, (13) ಜಾತಕಸಾರಪೂರ್ವಜ್ಯೋತೀಕೆ, (14) ಜೈಮಿನಿಭಾರತದ ಆಶ್ವಮೇಧಿಕಪರ್ವದಟೀಕೆ, (15) ತುಲಾಕಾವೇರೀಮಾಹಾತ್ಮ್ಯ, (16) ದಶಕುಮಾರಕಥಾಕಲಾಸಿದ್ಧಿ, (17) ದೇವೀಭಾಗವತತಾತ್ಪರ್ಯಟೀಕೆ, (18) ದೇವೀಮಾಹಾತ್ಮ್ಯಸಪ್ತಶತಿ, (19) ದೇವೀಸಾಯುಜ್ಯದಸ್ತೋತ್ರಮಾಲಿಕೆ, (20) ನಂಜುಂಡಶತಕ, (21) ನಳೋಪಾಖ್ಯಾನ, (22) ಪಂಚತಂತ್ರ, (23) ಬತ್ತೀಸಪುತ್ತಳಿಕಥೆ, (24) ಬೇತಾಳಪಂಚವಿಂಶತಿ, (25) ಭಕ್ತವಿಲಾಸದಪರ್ಣ, (26) ಭಗವದ್ಗೀತೆ, (27) ಭರತಸಾರಸಂಗ್ರಹಟೀಕೆ, (28) ಭಾಗವತ, (29) ಭಾಷಾಕಥೆ, (30) ಭಾರತ, (31) ಮಾಳವಿಕಾಗ್ನಿಮಿತ್ರೀಯ, (32) ಯಾದವಗಿರಿಮಾಹಾತ್ಮ್ಯ, (33) ರತ್ನಾವಳಿ ಅಥವಾ ವತ್ಸರಾಜನ ಕಥೆ (34) ರಾಮಕಥಾಕಲ್ಪವೃಕ್ಷ, (35) ರಾಮಾಯಣಟೀಕೆ, (36) ರಾಮಾಯಣ ತಾತ್ಪರ್ಯದೀಪಿಕಾಟೀಕೆ, (37) ಲಲಿತೋಪಾಖ್ಯಾನ, (38) ಲೈಂಗಪುರಾಣ, (39) ವಿಕ್ರಮೋರ್ವಶೀಯ, (40) ಶಂಕರಸಂಹಿತೆ, (41) ಶಕುಂತಲೋಪಾಖ್ಯಾನ, (42) ಶನೈಶ್ಚರಕಥೆ, (43) ಶುಕಸಪ್ತತಿ (44) ಶ್ರೀಶೈಲಮಾಹಾತ್ಮ್ಯ (45) ಸೌಗಂಧಿಕಾಪರಿಣಯ (ಪದ್ಯ), (46) ಸೌಗಂಧಿಕಾಪರಿಣಯ (ಗದ್ಯ), (47) ಹರಿವಂಶ (48) ಹರಿಶ್ಚಂದ್ರೋಪಾಖ್ಯಾನ, (49) ಹಾಡುಗಳು (50) ಹಾಲಾಸ್ಯಮಾಹಾತ್ಮ್ಯ — ಈ ಗ್ರಂಥಗಳನ್ನು ಬರೆದಿದ್ದಾನೆ.

ಈತನು ಮೈಸೂರುಸಂಸ್ಥಾನದ ಮಹಾರಾಜರಲ್ಲಿ ಒಬ್ಬನು. ಇವನ ತಂದೆ ಚಾಮರಾಜ, ತಾಯಿ ಕೆಂಪನಂಜಾಂಬೆ. ಇವನು 1794 ರಲ್ಲಿ ಜನಿಸಿ, 1799 ರಿಂದ 1868 ರ ವರೆಗೆ ರಾಜ್ಯವಾಳಿ, 1868 ರಲ್ಲಿ ಗತಿಸಿದನು. ಮಹಾರಾಜನಾಗಿದ್ದರೂ ವಿದ್ವದ್ಪೋಷಿಯಲ್ಲಿ ವಿಶೇಷವಾಗಿ ಕಾಲವನ್ನು ಕಳೆದು ಸಂಸ್ಕೃತದಲ್ಲಿರುವ ಪುರಾಣೇತಿಹಾಸಕಾವ್ಯನಾಟಕಾದಿಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿಯೂ ನೂತನಗ್ರಂಥಗಳನ್ನು ರಚಿಸಿಯೂ ಕನ್ನಡಿಗರಿಗೆ ಮಹೋಪಕಾರವನ್ನು ಮಾಡಿದ್ದಾನೆ. ಕನ್ನಡ, ಸಂಸ್ಕೃತ ಈ ಎರಡು ಭಾಷೆಗಳಲ್ಲಿಯೂ ಈತನಿಗೆ ವಿಶೇಷವಾದ ಪಾಂಡಿತ್ಯವುಂಟು. ದಾತೃತ್ವ, ವಿದ್ವತ್ಪಕ್ಷಪಾತ ಎಂಬ ಗುಣಗಳಿಗೆ ಈತನು ತವರುಮನೆಯಾಗಿದ್ದನು. ವಿದ್ವತ್ಪ್ರಭುವಾಗಿ ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹಕನಾಗಿದ್ದುದು ಮಾತ್ರವಲ್ಲದೆ ಧರ್ಮೈಕಪರಾಯಣನಾಗಿ ಎಲ್ಲಾ ಮತಗಳಿಗೂ ದೇವಾಲಯಗಳಿಗೂ ದಾನಗಳನ್ನುಮಾಡಿ ತನ್ನ ಉದಾರಾಶಯವನ್ನು ಪ್ರಕಟಿಸಿರುವನು. ಈ ಗ್ರಂಥಗಳಲ್ಲಿ ಹಲವನ್ನು ಆಸ್ಥಾನಪಂಡಿತರುಗಳಿಗೆ ಸೂಚನೆಗಳನ್ನು ಕೊಟ್ಟು ಬರಿಸಿರಬಹುದು. ಕೆಲವು ಗ್ರಂಥಗಳ ರಚನಾಕಾಲವನ್ನು ಮಾತ್ರ ಹೇಳಿದ್ದಾನೆ. ಶಕ 1738 ರಲ್ಲಿ (1815) ದೇವೀಮಾಹಾತ್ಮ್ಯವನ್ನೂ, ಶಕ 1742 ರಲ್ಲಿ (1820) ಜೈಮಿನಿಭಾರತದ ಆಶ್ವಮೇಧಿಕಪರ್ವಟೀಕೆ, ಹರಿಶ್ಚಂದ್ರೋಪಾಖ್ಯಾನ, ಶಂಕರಸಂಹಿತೆ, ಶುಕಸಪ್ತತಿ ಇವುಗಳನ್ನೂ, ಶಕ 1745 ರಲ್ಲಿ (1823) ಲಲಿತೋಪಾಖ್ಯಾನವನ್ನೂ, ಶಕ 1769 ರಲ್ಲಿ (1847) ಮಾಳವಿಕಾಗ್ನಿಮಿತ್ರೀಯ, ಶಕುಂತಲೋಪಾಖ್ಯಾನ, ಇವುಗಳನ್ನೂ, ಶಕ 1770 ರಲ್ಲಿ (1848) ನಂಜುಂಡಶತಕವನ್ನೂ, ಶಕ 1771 ರಲ್ಲಿ (1849) ಸಂಖ್ಯಾತರತ್ನಮಾಲಾಟೀಕೆಯನ್ನೂ, ಶಕ 1787 ರಲ್ಲಿ (1864) ಕೃಷ್ಣಕಥಾರತ್ನಾಕರವನ್ನೂ, ಶಕ 1790 ರಲ್ಲಿ (1867) ರಾಮಾಯಣಟೀಕೆಯನ್ನೂ ಬರೆಪಂತೆ ಆ ಗ್ರಂಥಗಳಿಂದ ತಿಳಿಯುತ್ತದೆ.

ಸ್ವಯಂವೃತಕವಿತಾವಧೂರತ್ನ, ಉಭಯಕವಿತಾಲಕ್ಷಣವಿಚಕ್ಷಣ ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥಗಳು ಪ್ರಾಯಿಕವಾಗಿ ಗದ್ಯರೂಪವಾಗಿವೆ; ಎರಡು ಮೂರುಮಾತ್ರ ಪದ್ಯರೂಪವಾಗಿವೆ. ಹೆಸರುಗಳಿಂದಲೇ ಆಯಾಗ್ರಂಥ

ಗಳಲ್ಲಿ ಪ್ರತಿಪಾದಿತವಾದ ವಿಷಯಗಳು ವ್ಯಕ್ತವಾಗುತ್ತವೆ. ಕೆಲವುಗ್ರಂಥಗಳ ವಿಷಯವಾಗಿ ಮಾತ್ರ ಸ್ವಲ್ಪ ಅಂಶಗಳನ್ನು ಕೆಳಗೆ ತಿಳಿಸುತ್ತೇವೆ—

1 ಶಕುಂತಲೋಪಾಖ್ಯಾನ

ಇದಕ್ಕೆ ಶಾಕುಂತಲನಾಟಕ ನವೀನ ಟೀಕೆಯೆಂಬ ಹೆಸರೂ ಉಂಟು. ಈ ನಾಟಕದೊಡನೆ ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರೀಯ ಎಂಬುವುಗಳನ್ನೂ ಸೇರಿಸಿ ಕಾಳಿದಾಸನ ಈ ನಾಟಕತ್ರಯಕ್ಕೂ ಟೀಕೆಯನ್ನು ಬರೆದು ಒಟ್ಟುಗ್ರಂಥಕ್ಕೆ ಕೃಷ್ಣರಾಜವಾಣೀವಿಲಾಸ ರತ್ನಾಕರ ಎಂಬ ಹೆಸರನ್ನು ಕೊಟ್ಟಿದ್ದಾನೆ. ಪ್ರತಿನಾಟಕವೂ 4 ಕಲ್ಲೋಲಗಳಾಗಿಯೂ ಪ್ರತಿಕಲ್ಲೋಲವೂ 4 ತರಂಗಗಳಾಗಿಯೂ ವಿಭಾಗಿಸಲ್ಪಟ್ಟಿದೆ. ನಾಟಕಗಳ ಕೊನೆಯಲ್ಲಿ ಈ ಗದ್ಯವಿದೆ—

ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡಶೌರ್ಯ ಪರಿಮಂಡಿತಭಂಡನೋದ್ದಂಡಾರಿನ ಂಡ ಕಂಡಮಿಲದೋರ್ದಂಡಪಾಂಡಿತ್ಯ ಪಾಂಡುರುಚಿ ಖಂಡಡೀಡೀರಪುಂಡರೀಕರಿಪಾಂಡುರಯಶಃಪಿಂಡಿಲಬ್ರಹ್ಮಾಂಡಭಾಂಡೋದ್ಭಟಕಾಲ ಕೂಟಪ್ರತಿಭಟಕಟುಕಪಟಪಟುನಿಶಾಟ ಕೂಟಪಾಟನಲಂಪಟ ನಿಟಿಲಪುಟಘಟಿತವಿಕಟ ಕೃಪೀಟಯೋನಿಕಟಿಲಮೋಹಾಂಧಕಾರಚ್ಛಟಾವಿಘಟನಪಟುನಟನ್ಮಹಾನಟನುಕುಟತಟ ಪರ್ಯಟತ್ತಟಿನೀತಟಾಂತರಂಗರಿಂಗದಭಂಗೋತ್ತುಂಗತರಂಗಸಂಗರಭಂಗದಂಭ್ರಮೋಜ್ಜೃಂ ಭಮಾಣಗಂಭೀರವಾಗ್ಗುಂಭಸಂಭಾವಿತ ಗರನಗರವರನಿಲಯಜಂದ್ರಜೂಡಡರಣಾರ ವಿಂದಸೇವಾಮಂದನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜ ಶ್ರೀ ಚಾಮರಾಜೇಂದ್ರಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಕೆಂಪನಂಜಮಾಂಬಾ ಗರ್ಭಕ್ಷೀರಪಾರಾವಾರರಾಕಾಸುಧಾಕರಾಯಮಾನ ಶಂಖಚಕ್ರಮಕರಮತ್ಸ್ಯಶರಭ ಸಾಳ್ವಗಂಡಭೇರುಂಡಧರಣೀವರಾಹಪಸುಮುದ್ಗಡಕಂಠೀರವಾದ್ಯನೇಕಬಿರುದಾಂಕಿತ ಬಿರುದೆಂತೆಂಬರಗಂಡ ಪ್ರತಾಪಮಾರ್ತಂಡ ಶ್ರೀಚಾಮುಂಡಿಕಾವರಪ್ರಸಾದಲಬ್ಧಸಹೀ ಶ್ವರಮಹಾಸಂಸ್ಥಾನಮಧ್ಯವಿದ್ಯೋತಮಾನಹೃದ್ಯಾನವದ್ಯಾಲಕ್ಷ್ಮಾಗತದಿವ್ಯರತ್ನ ಸಿಂಹಾಸನಾರೂಢೋಭಯಕವಿತಾಲಕ್ಷಣವಿಚಕ್ಷಣ ಶ್ರೀಕೃಷ್ಣರಾಜಕಂಠೀರವರು ಲೋ ಕೋಪಕಾರಾರ್ಥವಾಗಿ ಸರಸಜನಾನಂದಕರವಾಗಿ ಸವಿಸಭರಿತವಾಗಿ ಕರ್ನಾಟಕ ಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರದೊಳ್.

2 ವತ್ಸರಾಜನ ಕಥೆ.

ಇದರಲ್ಲಿ ರತ್ನಾವಳೀನಾಟಕದ ಕಥೆ ವಿಸ್ತಾರವಾಗಿ ಹೇಳಿದೆ. ಇದಕ್ಕೆ ಕೃಷ್ಣರಾಜಸೂಕ್ತಿಮುಕ್ತಾವಳಿ ಎಂದು ನಾಮಾಂತರವು. ಗ್ರಂಥವು 70 ಗುಚ್ಛಗಳಾಗಿ ಭಾಗಿಸಲ್ಪಟ್ಟಿದೆ. ಗ್ರಂಥಾಂತ್ಯದಲ್ಲಿ ಈ ಪದ್ಯವಿದೆ:—

ಚಾಮುಕ್ಷ್ಮಿತಿಪತಿಸುತ ಸು | ತ್ರಾನೂಧಿಕ ಕೆಂಪನಂಜಮಾಂಬಾಸುತನು ।
ದ್ದಾಮ ಶ್ರೀಕೃಷ್ಣೇಂದ್ರಂ | ಭೂಮೀಶ್ವರವತ್ಸರಾಜಕಥೆಯುಂ ಪೇಳ್ದಂ ॥

3 ರಾಮಕಥಾಕಲ್ಪವೃಕ್ಷ

ಇದಕ್ಕೆ ಸಾರಸಂಗ್ರಹಶ್ರೀರಾಮಕಥಾಕಲ್ಪವೃಕ್ಷ ಎಂಬುದು ಪೂರ್ಣವಾದ ಹೆಸರು. ಇದು 4 ಸ್ತಬಕಗಳಾಗಿ ಭಾಗಿಸಲ್ಪಟ್ಟಿದೆ. ಶ್ರೀಮದ್ರಾಮಾಯಣ, ವಿಷ್ಣುಪುರಾಣ, ಪಾದ್ಮಪುರಾಣ, ಕೂರ್ಮಪುರಾಣ, ಅಧ್ಯಾತ್ಮರಾಮಾಯಣ, ಶಿವಧರ್ಮೋತ್ತರ, ವಿಷ್ಣುಧರ್ಮೋತ್ತರ, ಜೈಮಿನ್ಯಾದಿಗ್ರಂಥಗಳಲ್ಲಿರುವ ಅನೇಕವಿಧವಾದ ರಾಮಕಥೆಗಳನ್ನು ಪರಿಶೋಧನೆಮಾಡಿ ಸಾರವನ್ನು ಸಂಗ್ರಹಿಸಿ ಲೋಕೋಪಕಾರಾರ್ಥವಾಗಿ ಈ ಗ್ರಂಥವನ್ನು ರಚಿಸಿದಂತೆ ಕವಿ ಹೇಳುತ್ತಾನೆ.

4 ಕೃಷ್ಣಕಥಾರತ್ನಾಕರ

ಇದು 12 ತರಂಗಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಕವಿ ಭಾಗವತದಶಮಸ್ಕಂಧ, ವಿಷ್ಣುಪುರಾಣ, ಹರಿವಂಶ, ಭಾರತಾದ್ಯನೇಕ ಗ್ರಂಥಗಳನ್ನು ಪರಿಶೋಧನೆಗೈದು ಸಾರವನ್ನು ಸಂಗ್ರಹಿಸಿದ್ದಾನೆ.

5 ರಾಮಾಯಣತಾತ್ಪರ್ಯದೀಪಿಕಾಟೀಕೆ

ಇದರ "ಶ್ರೀಮದ್ರಾಮಾಯಣದೊಳ್ ಆಯಾಸ್ಥಳದಲ್ಲಿ ವಾಲ್ಮೀಕಿಮುನೀಶ್ವರನಿಂದ ಗೂಢವಾಗಿ ಸೂಚಿಸಲ್ಪಟ್ಟ ಆಯಾ ತಾತ್ಪರ್ಯಂಗಳಂ ಸ್ಪಷ್ಟವಾಗಿ ನಿರೂಪಿಸಿರುವ ಶ್ರೀ ರಾಮಾಯಣತಾತ್ಪರ್ಯದೀಪಿಕೆಯಂ ಕರ್ನಾಟಭಾಷೆಯಿಂದ ವಿವರಿಸಿದೆ. ಅಲ್ಲದೆ ಶ್ರೀರಾಮಾವತಾರದಲ್ಲಿ ಜನನವಂ ಮೊದಲುಗೊಂಡು ಆಯಾಕಾಲದಲ್ಲಿ ನಡೆದ ವ್ಯಾಪಾರಂಗಳಿಗೆ ಕಾಲನಿರ್ಣಯವಂ ವಿಶೇಷವಾಗಿ ವಿಸ್ತರಿಸಿ ಪೂರ್ವಕರಾದ ಗ್ರಂಥಕಾರರ್ಕಳ್ ಪೇಳ್ದಿರುವ ದೀಪಿಕೆ, ರಾಮಾಯಣಸಂಗ್ರಹದೀಪಿಕೆ, ರಾಮಾಯಣತಾತ್ಪರ್ಯವಿರೋಧ

ಭಂಜಿನಿ, ವರಶುರಾಮೀಯ ಮೊದಲಾದ ಪ್ರಾಚೀನ ಗ್ರಂಥಂಗಳಂ ಚೆನ್ನಾಗಿ ಪರಿಶೋಧಿಸಿ ಕರ್ಣಾಟಕಭಾಷೆಯಿಂದ ವಿವರಿಸಿದೆ."

6 ಸಂಖ್ಯಾರತ್ನಮಾಲಾ ಟೀಕೆ

ಇದರಲ್ಲಿ 1 ರಿಂದ 120 ರ ವರೆಗೆ ಸಂಖ್ಯಾನಾಮಾವಳಿ ಆಲ್ಲಲ್ಲಿ ಕನ್ನಡದ ಅರ್ಥದೊಡನೆ ಹೇಳಿದೆ.

7 ಭಾಗವತ

ಭಾಗವತಪುರಾಣಕ್ಕೆ ಶ್ರೀಧರೀಯ ವ್ಯಾಖ್ಯಾನಾನುಸಾರವಾಗಿ ಬುಧ ಜನಸಮ್ಮತಿಯಿಂದ ರಚಿಸಿದ ಕೃಷ್ಣರಾಜವಾಣೀವಿಲಾಸವೆಂಬ ಕರ್ಣಾಟಕಭಾಷಾ ಟೀಕೆ.

8 ಸೌಗಂಧಿಕಾಪರಿಣಯ

ಈ ಗ್ರಂಥವನ್ನು ಕವಿ ಪದ್ಯರೂಪವಾಗಿಯೂ ಗದ್ಯರೂಪವಾಗಿಯೂ ರಚಿಸಿದ್ದಾನೆ. ಪದ್ಯಗ್ರಂಥವು ಭೂಮಿನೀಸಟ್ಪದಿಯಲ್ಲಿ ಬರೆದಿದೆ; ಸಂಧಿ 100, ಪದ್ಯ 6040. ಗದ್ಯಗ್ರಂಥವು 36 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದಕ್ಕೆ ಸಂಕ್ಷೇಪಸೌಗಂಧಿಕಾಪರಿಣಯ ಎಂಬ ಹೆಸರೂ ಇರುವಂತೆ ತೋರುತ್ತದೆ "ಇಂದ್ರನು ದೂರ್ವಾಸಮುನಿಯ ಶಾಪದಿಂದ ರತ್ನ ಪುರಿಯ ರಾಜನಾದ ಸುಚರಿತ್ರನಿಗೂ ಅವನ ರಾಣಿ ಗುಣವತಿಗೂ ಸುಗಂಧ ರಾಯನೆಂಬ ಹೆಸರಿನಿಂದ ಮಗನಾಗಿ ಹುಟ್ಟಿ ಸೌಗಂಧಿಕೆಯಾಗಿ ಹುಟ್ಟಿದ ಕಚೇದೇವಿಯನ್ನು ಮದುವೆಯಾಗಿ ಕೊನೆಗೆ ತನ್ನ ಪದವಿಯನ್ನು ಹೊಂದುತ್ತಾನೆ"—ಇದೇ ಕಥಾಗರ್ಭ. ಪದ್ಯಗ್ರಂಥದ ಆರಂಭದಲ್ಲಿ ಚಾಮುಂಡಿಕೆ, ನಂಜುಡೇಶ್ವರ ಇವರುಗಳ ಸ್ತುತಿ ಇದೆ. ಈ ಕಥೆಯನ್ನೇ ಸಂಗ್ರಹವಾಗಿ ಕವಿಯ ಆಜ್ಞಾನುಸಾರ ದೇವಲಾಪುರದ ನಂಜುಂಡನು ಸಾಂಗತ್ಯದಲ್ಲಿ ಬರೆದಿದ್ದಾನೆ.

9 ದೇವೀಮಾಹಾತ್ಮ್ಯ

ಇದರಲ್ಲಿ ಮಾರ್ಕಂಡೇಯಪುರಾಣದೊಳಗೆ ಪ್ರಸಿದ್ಧವಾಗಿ ದೇವೀಮಾಹಾತ್ಮ್ಯಪ್ರಕಾಶಕವಾದ ಸಪ್ತಶತಿಯೆಂಬ ಮಹಾಮಂತ್ರಾರ್ಥವು ವಿವರಿಸಿದೆ.

10 ಶಂಕರಸಂಹಿತೆ

ಇದು ಸ್ಕಾಂದಪುರಾಣಾಂತರ್ಗತವಾದ ಶಂಕರಸಂಹಿತೆಯ ವಿವರಣೆ; ಸಂಭವ, ಅಸುರ, ವೀರವಾಹೇಂದ್ರ, ಯುದ್ಧ, ದೇವ, ಯಕ್ಷ, ಉಪದೇಶ ಎಂಬ 7 ಕಾಂಡಗಳಾಗಿ ಭಾಗಿಸಲ್ಪಟ್ಟಿದೆ.

11 ಭರತಸಾರಸಂಗ್ರಹ ಟೀಕೆ

ಇದರಲ್ಲಿ ಸಂಗೀತ, ನಾಟ್ಯ ಮುಂತಾದ ವಿಷಯಗಳು ಹೇಳಿವೆ. ಅನೇಕ ಪೂರ್ವಗ್ರಂಥಗಳನ್ನು ನೋಡಿ ಸಾರವನ್ನು ಸಂಗ್ರಹಿಸಿ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ[1]

12 ಹರಿಶ್ಚಂದ್ರೋಪಾಖ್ಯಾನ

ಭಾರತದ ಅರಣ್ಯಪರ್ವದಲ್ಲಿರುವ ಹರಿಶ್ಚಂದ್ರೋಪಾಖ್ಯಾನಕ್ಕೆ ಸಕಲವ್ಯಾಖ್ಯಾನಾನುಸಾರವಾಗಿ ಬುಧಜನಸಮ್ಮತಿಯಿಂದ ರಚಿಸಿದ ಕರ್ನಾಟಕ ಭಾಷಾವ್ಯಾಖ್ಯಾನ.

13 ಅಧ್ಯಾತ್ಮರಾಮಾಯಣ

ಬ್ರಹ್ಮಾಂಡಪುರಾಣದಲ್ಲಿ ಉಮಾಮಹೇಶ್ವರಸಂವಾದರೂಪವಾದ ಅಧ್ಯಾತ್ಮರಾಮಾಯಣದ ವಿವರಣ ಆರಂಭದಲ್ಲಿ ಮೈಸೂರುರಾಜರ ಚರಿತ್ರೆ ಸಂಗ್ರಹವಾಗಿ ಹೇಳಿದೆ.

"ಹೀಗೆ ಪ್ರಸಿದ್ಧವಾದ ಶಕ್ತಿಯುಳ್ಳ ಶ್ರೀಕೃಷ್ಣರಾಜಒಡೆಯರವರು ಅಧ್ಯಾತ್ಮರಾಮಾಯಣವು ಸರ್ವರಿಗೂ ಆನಂದವನ್ನುಂಟುಮಾಡುವುದು, ಸಕಲಪುಣ್ಯಫಲಂಗಳನ್ನು ಕೊಡುವುದು ಎಂದು ನಿಜಬುದ್ಧಿಯಿಂದ ಆಲೋಚಿಸಿ ಮನೋಹರವಾದ ಕನ್ನಡಭಾಷೆಯಿಂದ ಶೃಂಗಾರರಸ ಮುಂತಾದ ನವರಸಗಳಿಂದ ತುಂಬಿರುವ ಸದ್ಯುಕ್ತಿಗಳಿಂದ ತೆರೆಗಳಿಂದೆಸೆಯುವ ನದಿಯೋನಾದಿಯುಳ್ಳಿರುವ ಟೀಕೆಯನ್ನು ಪದ್ಮಜ್ಞಜನಸಮೂಹಕ್ಕೆ ಸಂತೋಷವನ್ನುಂಟುಮಾಡುವುದಕ್ಕೋಸ್ಕರ ರಚಿಸುವರು."

ಕೊನೆಯಲ್ಲಿ ಇದೇ ತಾತ್ಪರ್ಯವನ್ನು ಒಳಕೊಂಡ ಒಂದುಸಂಸ್ಕೃತ ಶ್ಲೋಕವೂ[2] ಇದೆ. ಕಾಂಡ 7, ಸರ್ಗ 65; ಗ್ರಂಥಸಂಖ್ಯೆ 8500.

---

1 ಪೂರ್ವೈರ್ಭರತಾಚಾರ್ಯೈರ್ಯದುಕ್ತಂ ಗ್ರಂಥಕೋಟಿಷು ।
ತೇಷಾಂ ಸಾರಂ ಸಮುದ್ಧೃತ್ಯ ಸಂಕ್ಷೇಪೇಣ ಕರೋಮ್ಯಹಂ ॥

2 ಅಮುನಾ ಕಿಲ ಲೋಕರಂಜನಾರ್ಥಂ ನಯನಾನಂದಕರೇಣ ಕೃಷ್ಣನಾಮ್ನಾ ।
ಯದುನಾಥವರೇಣ ನಿರ್ಮಿತೇಯಂ ವರಕರ್ನಾಟಕಭಾಷಯಾಪ್ಯ ಟೀಮುತ್ ॥

14 ಭಾವಮಾಕಥೆ

ಇದು ಯಕ್ಷಗಾನ; ಇದರಲ್ಲಿ ಪಾರಿಜಾತಾಪಹರಣದ ಕಥೆ ಹೇಳಿದೆ. ಈ ಅಂಕವು ಈ ಪದ್ಯದಿಂದ ವ್ಯಕ್ತವಾಗುತ್ತದೆ.—

ಶ್ರೀವತ್ಸಕೃಷ್ಣನ್ಯಪಾಲಂ | ಶ್ರೀಮನು ರಚಿಸಿದ ಮಧುರವಾಕ್ಯಗಳಿಂದಂ |
ಭೂಮಿಜನರೆಲ್ಲ ಕೇಳಿಂ | ಕೋಮಲಪುಮಳಸುಪಾರಿಜಾತದ ಕಥೆಯಂ ||

15 ನಂಜುಂಡಶತಕ

ಇದರಲ್ಲಿ 100 ಕಂದಗಳಿವೆ; ಪ್ರತಿಕಂದವೂ "ಶ್ರೀನಂಜುಂಡ" ಎಂದು ಮುಗಿಯುತ್ತದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ಸಿರಿಯಿಂದಂ ಯೌವನದು | ಬ್ಬರದಿಂದಂ ದುಷ್ಟಜನರ ಸಹವಾಸಗಳಿಂ |
ಪರಮಾತ್ಮನೆ ನಿನ್ನಯ ಪದ | ಸರಸಿಜಮಂ ಭಜಿಸಲಿಲ್ಲ ಶ್ರೀ ನಂಜುಂಡಾ ||
ಗಿಳಿಕೋಗಿಲೆಬಳಗಗಳಿಂ | ದೊಳಪೊಕ್ಕಿದಿರಾಗಿ ಪೂವಿನಂಬುಗಳಿಂದಂ |
ಘಳಿಲನೆ ಪೊಡೆದನಂಗಜನಂ | ನಳಿನಾಪ್ತ ಸಹಸ್ರನಂದ ಶ್ರೀ ನಂಜುಂಡಾ ||

16 ಭಾರತ

ಇದು ಮಹಾಭಾರತದ ಕನ್ನಡಟೀಕೆ. ಇದಕ್ಕೆ ಕೃಷ್ಣರಾಜ ವಾಣೀವಿಲಾಸ ಎಂದು ಹೆಸರು. ಇದನ್ನು ಶಕ 1742 (1820) ರಲ್ಲಿ ಆರಂಭಿಸಿದಂತೆ ತಿಳಿಯುತ್ತದೆ. ಆರಂಭದಲ್ಲಿ ನಂಜುಂಡೇಶ್ವರ, ಚಂದ್ರ ಇವರ ಸ್ತುತಿ ಇದೆ. ಬಳಿಕ ಟೀಕೆ ಹೀಗೆ ಆರಂಭಿಸುತ್ತದೆ:—

ಶ್ರೀಮತ್ಸಮಸ್ತಭೂಮಂಡಲಮಂಡನಾಯಮಾನ ನಿಖಿಲದೇಶಾವತಂಸಕರ್ಣಾಟಕಜನಪದಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರಮಹಾಸಂಸ್ಥಾನಮಧ್ಯದೀಪ್ಯಮಾನನಾನಾವಿಕಲಕಲಾನಿಧಿಕುಲಕ್ರಮಾಗತ ರಾಜಕ್ಷಿತಿಪಾಲಪ್ರಮುಖನಿಖಿಲರಾಜಾಧಿರಾಜಮಹಾರಾಜಪಕ್ರವರ್ತಿಮಂಡಲಾನುಭೂತದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜರಾಜಪರಮೇಶ್ವರ ಪ್ರೌಢಪ್ರತಾಪಾಪ್ತಪ್ರಸಿದ್ಧಿಯುವೀತನವರ್ತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪರಿಪಾಲನಾದಿನಾನಾವತಾರಸಿದ್ಧ ಶಂಖಚಕ್ರಾಂಕುಶಕುಠಾರವಜ್ರಕುಕ್ಷಿಸ್ಥಿರಭುಜಾಳ್ವಗಂಡಘೋರುಂಡಧರಣೀವರಾಹಹನುಮದ್ಗರುಡ ಕಂಠೀರವಾದ್ಯನೇಕವಿರುದಾಂಕಿತ ಶ್ರೀಮತ್ಕಾವೇರಿರಾಜಮಹೀವಾಲ ಧನುರ್ವಿದ್ಯೇಕಪಂನಂಜಾಂಬಾಗರ್ಭಸುಧಾಂಬುಧಿರಾಕಾಸುಧಾಕರಕಲಾಮಯಾವತಾರ ಶ್ರೀಮತ್ಕಾವೇರಿಕಾಂಬಾವರಪ್ರ

ಸಾಮೋದ್ಭವರಾದ ಅತ್ರೇಯಸಗೋತ್ರಆಶ್ವಲಾಯನಸೂತ್ರಋಕ್ಶಾಖಾಮತೀಗ
ಳಾದ ಶ್ರೀಮನ್ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜಒಡೆಯರವರು ಲೋಕಪ್ರಸಿದ್ಧ
ವಾದ ಶ್ರೀಮನ್ಮಹಾಭಾರತವನ್ನು ಬುಧಜನಸಮ್ಮತಿಯಿಂದ ಕರ್ಣಾಟಕಭಾಷಾನವ
ರಜನಿಯುಳ್ಳ ಶ್ರೀಮತ್ಕೃಷ್ಣರಾಜವಾಣೀವಿಲಾಸನೆಂಬ ಅಂಕಿತದಿಂದ ಪುನರಿಸುವುದ
ರಲ್ಲಿ ಆದಿಪರ್ವವನ್ನು ಮುಗಿಸಿರುವರೆಂತೆನೆ.

ಈ ರಾಜನು ಬರೆದಿರುವ ಇನ್ನೂ ಅನೇಕಗ್ರಂಥಗಳಲ್ಲಿ ಇವನ ಬಿರುದಾವಳಿ ಈ ರೀತಿಯಾಗಿಯೇ ಹೇಳಿದೆ. ಭಾರತವಲ್ಲದೆ ಇನ್ನೂ ಹಲವುಗ್ರಂಥಗಳಿಗೆ ಕೃಷ್ಣರಾಜವಾಣೀವಿಲಾಸ ಎಂಬ ಅಂಕಿತವಿದೆ.

17 ಹಾಡುಗಳು

ವೈರಾಗ್ಯದ ಜಾವಡಿಗಳು, ಅನುಭವಪಂಚರತ್ನ ಎಂಬ ಏತತ್ಕವಿ ಕೃತವಾದ್ಯಕೆಲವು ಹಾಡುಗಳು ದೊರೆಯುತ್ತವೆ. ಇವುಗಳಲ್ಲೆಲ್ಲಾ ಚಾಮುಂ ಡಿಯ ಅಂಕಿತವಿದೆ. ಒಂದೆರಡನ್ನು ಉದಾಹರಿಸುತ್ತೇವೆ—

ರಾಗ ಭೈರವಿ.

ಪಲ್ಲವಿ|| ನೂಡಿಮೂಡಿ ಮೂಢನಾದೆ|ಅಡಿಮೂಡಿ ದುಷ್ಪರೊಡನೆ |
ಚಾಡಿನೂ ತಿಳಿಯದೆ|ಕೂಡಿ ಮುನ್ನ ಕಾರ್ಯಗಳ ನಾ ||
ಧನವ ಒಳ್ಳೆ'ದೆ ಸೂರೆಮಾಡಿ | ಮನಸಿನಲ್ಲಿ ಮಾನರತಿಯ |
ಕನಸಿನಲ್ಲು ನೆನಸಿನೆನಸಿ | ತನುವೆಲ್ಲ ಬಸಲಿಸುತ ನಾ ||1||
ಬಂಧುಜನರು ಒಯಸಿದ.ದನು | ತಂದುಕೊಟ್ಟು ಕಪಕದಿಂದ |
ಒಂಧದೊಳಗೆ ಸಿಲುಕಿ ಒಡುಕಿ | ಹಿಂದುಮುಂದು ತಿಳಯದೆ ನಾ ||2||
ನೇಮಗಳನು ತ್ಯಜಿಸಿ ಹರನ | ನಾಮಭಜನೆಮಾಡಲಿಲ್ಲ |
ಕಾಮಮೋಹಲೋಭದಿಂದ | ಚಾಮುಂಡಿಯನು ಸ್ಮರಿಸದೆ ನಾ ||3||

ಅನುಭವಪಂಚರತ್ನದಲ್ಲಿ ಒಂದು

ರೂಪುಯನ್ವನವು ಧನದ ಬಲುಸಿರಿಯೆರಡು ನೆಜು'ಯುತಿರೆ |
ಕೂಡುನರುಪಚಾರಗಳ ಹಲವುಬಗೆಯೂಗಿ ಮಾಡ್ವರು |
ಸ್ತ್ರೀಸುತರು ಸರ್ವರೂ ಅದು ಕಲುಮೆ ಹೇಸಿಕೊಂಬುವರು |
ಮಾನಿನೀಮಣಿ ಕೇಳು ವಿಧಿಬಲವ ತಪ್ಪಿಸಲರಿಯರು |
ಪೊಮ್ಮ ಬರೆದ ಲಿಪಿಯಂತೆ ಕಡೆಗೆ ಆಗುವುದು ಕೇಳ್ ಸುಮ್ಮನಿರೆ |

ಮೂಱುದಿನದ ಬಾಳುಗೆ ವರ್ಣನವರು ಹಮ್ಮನ್ಮಾಡಿ ಫಲವೇನು |
ತಿನನಾಗೆ ತಾನು ಮಾಡಿದ ಪುಣ್ಯದಂತನುಭವಿಸುವನು | ಶ್ರೀ ಚಾಮುಂಡಿ
ದಯದಿ ||

ಚಾರುಕೀರ್ತಿ ಪಂಡಿತ. 1815.

ಈತನು ಭವ್ಯಜನಚಿಂತಾಮಣಿಯನ್ನು ಬರೆದಿದ್ದಾನೆ. ಇವನು ಜೈನಕವಿ; ಶ್ರವಣಬೆಳ್ಗೊಳದ ಮಠದ ಸ್ವಾಮಿಯಾಗಿದ್ದಂತೆ ತೋರುತ್ತದೆ ಈ ಗ್ರಂಥವನ್ನು ಶಕ 1737 ನೆಯ ಯುವ ವರ್ಷದಲ್ಲಿ-ಎಂದರೆ 1815 ರಲ್ಲಿ-ರಚಿಸಿದಂತೆ ಹೇಳುತ್ತಾನೆ.

ಇವನ ಗ್ರಂಥ:—

ಭವ್ಯಜನಚಿಂತಾಮಣಿ

ಇದು ಚಂಪೂರೂಪವಾಗಿದೆ; ಆಶ್ವಾಸ 10. ಇದರಲ್ಲಿ "ಜಿನಾರ್ಚನೆಯೊಳೊಂದೊಂದಱಿಂ ಸುಖಮನ್ಪೈದಿದರ ಕಥೆಯಂ ಪೇಳ್ವೆಂ" ಎಂದು ಕವಿ ಹೇಳುತ್ತಾನೆ. ಬೆಳ್ಗೊಳದ ಬಾಹುಬಲಿಸನ್ನಿಧಿಯಲ್ಲಿ ಗ್ರಂಥವು ಪೂರ್ಣವಾದಂತೆ ತಿಳಿಯುತ್ತದೆ. ಗ್ರಂಥದ ಕೊನೆಯಲ್ಲಿ ಚಂದ್ರಸಾಗರ ವರ್ಣಿ ಇದನ್ನು 1815 ರಲ್ಲಿ ಶ್ರವಣಬೆಳ್ಗೊಳದ ಮಠಕ್ಕಾಗಿ ಪ್ರತಿಮಾಡಿದಂತೆ ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಅನಂತರ ಸಿದ್ಧಾದಿಗಳು, ಗೊಮ್ಮಟ, ಸರಸ್ವತಿ ಇವರುಗಳ ಸ್ತುತಿಯೂ ಇವೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ.—

ಇದು ನಿನಮದಮರೇಂದ್ರ ಮಕುಟತಟಘಟಿತಮಣಿಗಣಕಿರಣ ಪೂಲಾಪ್ಯ ಬಂಧ ಶ್ರೀಮದ್ಭಗವಚ್ಚಾರುಚರಣಾರವಿಂದದ್ವಂದ್ವವಂದಿತ ಮತ್ತಮಧುಕರಾಯಮಾನ ಶ್ರೀಮಚ್ಚಾರುಕೀರ್ತಿಪಂಡಿತಾಚಾರ್ಯವರ್ಯವಿರಚಿತವಪ್ಪ ಭವ್ಯಜನಚಿಂತಾಮಣಿಯೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಕೆಗೆದು ಬರೆಯುತ್ತೇವೆ —

ಪಲ್ಲವಪುರ

ಬೆಳೆಯಿಂದ ಕಬ್ಬಿನಿಂದ ಕೊಳದಿಂದ ಸಕಲಾ | ಸಲಿನಾಕರಗಳಿಂದ ಶೋಭಿ
ಸುತಲಿರಲಾ |
ಕೆಳೆಗೊಂಡು ತೀವ್ರತರಲಾದೇಶದಗಲಾ | ಹೊಳವಾಗಿ ಕನ್ನಡಿಯಸಿಟ್ಟಂತೆ
ಯಿರಲಾ ||

ಲೋಕಕೆಯತಿಶಯಸಿಂಗರ | ಕಾಕರವಾಗಿಪುವ ದೇಶಲಕ್ಷ್ಮಿಯ ಮುಖವೆಂ ।
ಬಾಕರವಿಂ ಪಲ್ಲವಪುರ | ಶ್ರೀಕಾಂತೆಯು ನಿಳಯವೆನಲು ರಾಜಿಸುತಿಪುದು ॥

ವ್ರತ

ಪಿಡಿಯಲ್ಬಾರದುವ್ರತಗಳ । ನಡಸುವ ಶಕ್ತಿಯನು ನೋಡಿಪಿಡಿವುದು ವಿಘ್ನಗ॥
ಳಡಸಲ್ ಬಿಡಬಾರದು ಅದೆ । ಧೃಢತಪವಧಿಗವುದನೇಮಸಂಮ್ಯಕ್ತ್ವಗಳು ॥

ಗುರುಪ್ರಾರ್ಥನೆ

ಆಹಿ'ಯದಜ್ಞಾನದೊಳು ಹೇಯವನು ಮಾಡಿ ।
ನರಳುತಿಹೆ ನಾ ಗೈದ ಪಾಪ ಕೈಗೂಡಿ|
ಪರಿಹರಿಸು ಅರಿವಿತ್ರರೇಕದೊಳು ನೋಡಿ |
ಪರಿಸುತಿಹ ಪರಮಗುರುವೆನ ಗೆದಯವಾಡಿ ॥

ಶಾಂತರಾಜ ಪಂಡಿತ. 1820

ಈತನು ಲಕ್ಷ್ಮೀದೇವಿಗೆ ಹೊನ್ನುಡಿಸುವ ಹಾಡುಗಳನ್ನು ಬರೆದಿದ್ದಾನೆ. ಇವನು ಜೈನಕವಿ. ಸಂಸ್ಕೃತದಲ್ಲಿ 'ಸರಸಜನಚಿಂತಾಮಣಿ' ಎಂಬ ದೊಡ್ಡ ಕಾವ್ಯವನ್ನು ಬರೆದಿದ್ದಾನೆ. ಇದು 1820ರಲ್ಲಿ ರಚಿತವಾಯಿತು. ಈ ಗ್ರಂಥದಿಂದ ಕವಿಯವಿಷಯವಾಗಿ ಈ ಅಂಶಗಳು ತಿಳಿಯುತ್ತವೆ.—ಇವನ ತಂದೆ ಪದ್ಮಪಂಡಿತ, ತಾಯಿ ಕೆಂಪದೇವಮ್ಮ, ಹೆಂಡತಿ ಚೆಲುವಮ್ಮ, ಶ್ವಶುರ ಬ್ರಹ್ಮದೇವ, ಮಾತುಲ ದೊಡ್ಡಯ್ಯ; ಬಿರುದುಗಳು ಅಸಾಧಾರಣಕಲಿಯುಗ ಪ್ರಥನುದಾಕ್ಷಿಣಾತ್ಯ ಕವಿಚಕ್ರವರ್ತಿ, ಮಹಾಕವಿ ಧರ್ಮಚಕ್ರವರ್ತಿ. ಶ್ರವಣಬೆಳ್ಗೊಳದ ಚಾರುಕೀರ್ತಿಪಂಡಿತನು ಈತನಿಗೆ ಕೊಡುತ್ತಿದ್ದ ವರ್ಷಾಶನವನ್ನು ಮೈಸೂರುದೇವರಾಜನು ತಾನೇ ಕೊಡುವುದಾಗಿ ಒಪ್ಪಿಕೊಂಡಂತೆ ತಿಳಿಯುತ್ತದೆ. ಈ ಹಾಡುಗಳ ಅಂತ್ಯದಲ್ಲಿ ಮೈಸೂರುರಾಜನಾದ ಮುಮ್ಮಡಿ ಕೃಷ್ಣರಾಜನಿಗೆ ಮಂಗಳವಾಗಲಿ ಎಂದಿರುವುದರಿಂದ ಈತನು ಆ ದೊರೆಯ ಆಶ್ರಿತನಾಗಿದ್ದಿರಬಹುದು[1].

1. ಈತ ಶಕ 1684 ಸ್ವಭಾನುವಿನಲ್ಲಿ (1763) ಹುಟ್ಟಿದಂತೆ ತಿಳಿಯುತ್ತದೆ. ಅಲ್ಲದೆ ಇವನು 1789ರಲ್ಲಿ ಶಾಕಟಾಯನಪ್ರಕ್ರಿಯಾಸಂಗ್ರಹವನ್ನೂ 1804 ರಲ್ಲಿ ಲೋಕವಿಭಾಗವನ್ನೂ 1808ರಲ್ಲಿ ವೃತ್ತರತ್ನಾಕರವ್ಯಾಖ್ಯೆಯನ್ನೂ ಪ್ರತಿಮಾಡಿದಂತೆ ನಮಗೆ ಹೊರತ ಆ ಗ್ರಂಥಗಳ ಪ್ರತಿಗಳಿಂದ ತಿಳಿಯುತ್ತದೆ: ನುತ್ತು ತೆರಕಣಾಂಬಿಯ ಸೇವಿಚಂದ್ರನು ಕವಿಗೋಸ್ಕರ 1804ರಲ್ಲಿ ಜೈನೇಂದ್ರವ್ಯಾಕರಣ ಪ್ರಕ್ರಿಯಾವತಾರವನ್ನೂ 1807 ರಲ್ಲಿ ಉತ್ತರಪುರಾಣವನ್ನೂ ಪ್ರತಿಮಾಡಿದಂತೆ ನಮಗೆ ಹೊರತ ಆ ಗ್ರಂಥಗಳ ಪ್ರತಿಗಳಿಂದ ತಿಳಿದು ಬರುತ್ತದೆ

ಇವನ ಗ್ರಂಥ--

ಲಕ್ಷ್ಮೀದೇವಿಗೆ ಹೂವುಮುಡಿಸುವ ಹಾಡುಗಳು

ಇದರಿಂದ ಒಂದೆರಡುನುಡಿಗಳನ್ನು ತೆಗೆದು ಬರೆಯುತ್ತೇವೆ.—

ಇಂಪುಗಾರ್ತಿಯರಿಂದಗಾರ್ತಿಯರಾಣ್ಮೆಗೆ |
ಕಂಪುಗಾರ್ತಿಯರ್ ಜಾಣೆಯರ ಮನದಾಣ್ಮೆಗೆ ||
ಸೊಂಪುಗಾರ್ತಿಯರ್ ಬಿಂಕಗಾರ್ತಿಯರಾಣ್ಮೆಗೆ |
ಸಂಪಿಗೆಯ ಹೂವ ಮುಡಿಸಿದರು ||
ಸೋಜಿಗವಾಂತ ಶ್ರೀ ಕವಿಚಕ್ರವರ್ತಿಯು |
ಓಜೆಯುಂ ಕವಿತ್ವಕಲಿಕಾಗ್ರೇಸರನು |
ತೇಜೋಯುತಶಾಂತರಾಜಪಂಡಿತನು ಪ |
ರಾಜಿತ ಲಕ್ಷ್ಮೀದೇವಿಗೆ ನುತಿಸುಂಬ |
ಜಾಜಿಯುವ್ವೂಮಾಲೆಯ ಮುಡಿಸಿದನು ||

ವೆಂಕಟರಮಣಶಾಸ್ತ್ರಿ. 1823

ಈತನು (1) ಅಮರುಕಟೀಕೆ, (2) ಕಸಿತ್ರಯೋದಶೀವ್ರತ, (3) ಅಮಾಸೋಮವಾರವ್ರತ, (4) ಧನುರ್ಮಾಸ ಮಹಿಮೆ (5) ಗಜಗೌರೀ ವ್ರತ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಬ್ರಾಹ್ಮಣ ಕವಿ ಇವನ ಸ್ಥಳ ದೇವನಾಪುರ ಅಥವಾ ದೇವಾಂಡಹಳ್ಳಿ; ಇವನ ತಾಯಿ ವೆಂಕಟಮ್ಮ. 'ಸಕಲವಿದ್ಯಾವಿಲಾಸ ಚತುರ, ಸಾಹಿತ್ಯಾಲಂಕಾರಧುರೀಣ' ಎಂದು ತನ್ನನ್ನು ವಿಶೇಷಿಸಿ ಹೇಳಿ ಕೊಂಡಿದ್ದಾನೆ. ಇವನು ಮೈಸೂರುರಾಜನಾದ ಮುಮ್ಮಡಿಕೃಷ್ಣರಾಜನ ಆಶ್ರಿತನು. ಇವನ ಗ್ರಂಥಗಳಲ್ಲಿ (2) ಮತ್ತು (3) 1823ರಲ್ಲಿಯೂ (4) 1839 ರಲ್ಲಿಯೂ, (1) 1842 ರಲ್ಲಿಯೂ, ವಿರಚಿತವಾದವೆಂದು, ಆ ಗ್ರಂಥಗಳಿಂದ ತಿಳಿಯುತ್ತದೆ.

ಇವನ ಗ್ರಂಥಗಳಲ್ಲಿ

1. ಅಮರುಕ ಟೀಕೆ.

ಇದು ಅಮರುಕಶತಕಕ್ಕೆ ಕರ್ಣಾಟಕವ್ಯಾಖ್ಯಾನ; "ನವ್ಯ ಕರ್ಣಾಟಭಾಷಾ ಪ್ರಕಟಿತ ಶೃಂಗಾರದೀಪಿಕಾಸರ್ವಸಂಗ್ರಹ" ಎಂದು ಕವಿ ಹೇಳುತ್ತಾನೆ.

2 ಶನಿತ್ರಯೋದಶೀ ವ್ರತ

ಆರಂಭದಲ್ಲಿ "ಸ್ವಭಾನುವರ್ಷದಲ್ಲಿ (1823) ದೇವಾಂಡಹಳ್ಳಿ ವೆಂಕಟರಾಮಶಾಸ್ತ್ರಿ ಕನ್ನಡಿಸಿ ಒಪ್ಪಿಸಿದ ಶನಿತ್ರಯೋದಶೀ ವ್ರತ" ಎಂದಿದೆ. ಅದರೆ ಅಂತ್ಯದಲ್ಲಿ "ಕೃಷ್ಣರಾಜ ಕೃತಕರ್ಣಾಟಕ ವಚನ ರಚನಾಭಿಧಾನವಾದ ಸ್ಕಾಂದಪುರಾಣಸ್ಥ ಶನಿತ್ರಯೋದಶೀಕಲ್ಪವೆಂಬ ಕೇದಾರಖಂಡದ ಅಧ್ಯಾಯಾರ್ಥ" ಎಂದಿದೆ 75 ಶ್ಲೋಕಗಳಿಗೆ ಕನ್ನಡಟೀಕೆ.

3. ಅಮಾಸೋಮವಾರ ವ್ರತ

ಆರಂಭದಲ್ಲಿ "ಲಕ್ಷ್ಮಮ್ಮಣ್ಣಿಯವರಿಗಾಗಿ ದೇವಾಂಡಹಳ್ಳಿ ವೆಂಕಟರಾಮಶಾಸ್ತ್ರಿ ಕನ್ನಡಿಸಿದುದು" ಎಂದಿದೆ. ಅಂತ್ಯದಲ್ಲಿ "ಕೃಷ್ಣರಾಜರು ಕೃಷ್ಣರಾಜವಾಣೀವಿಲಾಸ ಎಂದು ಬುಧಜನಪ್ರೀತಿಗೋಸ್ಕರ ವಿಸ್ತರಿಸಿದ ಕರ್ಣಾಟಕ ಭಾಷಾವ್ಯಾಖ್ಯಾನವಾದ ಭವಿಷ್ಯಪುರಾಣದ ಅಮಾಸೋಮವಾರವ್ರತ" ಎಂದಿದೆ. ಶ್ಲೋಕಗಳಿಗೆ ಕನ್ನಡಟೀಕೆ.

4. ಧನುರ್ಮಾಸ ಮಹಿಮೆ

ಇದು ಭವಿಷ್ಯೋತ್ತರ ಪುರಾಣಾಂತರ್ಗತವಾದುದು. ಅಂತ್ಯದಲ್ಲಿ "ವಿಕಾರಿ ಸಂವತ್ಸರದಲ್ಲಿ (1839) ಮಹಾಮಾತುಶ್ರೀಯವರ ಸನ್ನಿಧಿಗೆ ದೇವಾಂಡಹಳ್ಳಿ ವೆಂಕಟರಾಮಶಾಸ್ತ್ರಿ ಒಪ್ಪಿಸಿದುದು" ಎಂದಿದೆ. ಆರಂಭದಲ್ಲಿ ಕವಿ ತನ್ನ ತಾಯಿ ವೆಂಕಟದೇವಿಯ ಹೆಸರನ್ನು ಹೇಳಿದ್ದಾನೆ.[1]

ಕೆಂಪುನಾರಾಯಣ. 1823

ಈತನು ಮುದ್ರಾಮಂಜೂಷವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಹೊಯಿಸಣಿಗಕುಲದವನು; ಮೈಸೂರುದೊರೆಯಾದ ಮುಮ್ಮಡಿಕೃಷ್ಣರಾಜನ ಆಶ್ರಿತನಾಗಿದ್ದನು. ಈ ಗ್ರಂಥವನ್ನು ಶಕ 1745 ರಲ್ಲಿ, ಎಂದರೆ 1823 ರಲ್ಲಿ, ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

ಮುದ್ರಾಮಂಜೂಷ

ಇದು ಮುದ್ರಾರಾಕ್ಷಸವೆಂಬ ಸಂಸ್ಕೃತನಾಟಕಕ್ಕೆ ಗದ್ಯರೂಪ

---

1 ಶ್ರೀಮದ್ವೆಂಕಟದೇವ್ಯಾಶ್ಚ ಸುತಃ ಪ್ರಾಕೃತಭಾಷಯಾ
ಚಾಪಮಾಸಮಹಿಮ್ನೋಽಸ್ಯ ಟೀಕಾಂ ವಿತನುತೇ ಮುದಾ ||

ವಾದ ಭಾಷಾಂತರವು; ಆಶ್ವಾ 18. ಇದರಲ್ಲಿ ಚಾಣಕ್ಯನ ಸಹಾಯದಿಂದ ಚ. ನ್ರಗುಪ್ತನಿಗೆ ನಂದರಾಜ್ಯವ್ಯಾಪ್ತಿಯಾದ ಕಥೆ ಹೇಳಿದೆ. ಆರಂಭದಲ್ಲಿ ಚಾಮುಂಡಿಕಾಸ್ತುತಿ ಇದೆ. ಅಂತ್ಯದಲ್ಲಿ ಮುನ್ಮುತಿಕೃಷ್ಣರಾಜನ ಆಶೀರ್ವಾದರೂಪವಾದ ಈ ಶ್ಲೋಕವಿದೆ—

ಚಿರಂ ಜೀವತು ಚಾಮುಂಡೀಕನೂಜಃ ಕೃಷ್ಣಭೂಮಿಪಃ |
ಯತ್ಕಟಾಕ್ಷಾಂಕುರಸ್ತೋಮಃ ಕವಿಕಲ್ಪದ್ರುಮಾಯತೇ ||

ವೆಂಕಕವಿ. 1825

ಈತನು 1825 ರಲ್ಲಿ ನಾರಸಿಂಹನ (1768) ಅನುಭವಶಿಖಾಮಣಿಯನ್ನು ಪ್ರತಿಮಾಡಿದಂತೆ ಹೇಳಿ ಕೆಲವುಪದ್ಯಗಳನ್ನು ಮಾಡಿದ್ದಾನೆ. ವೆಂಕಕವೀಂದ್ರ ಎಂದು ಹೇಳಿಕೊಂಡಿರುವುದರಿಂದಕವಿಯಾಗಿದ್ದಿರಬಹುದು. ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಇವನು ಬ್ರಾಹ್ಮಣ ಕವಿ; ತುಗ್ಗಲಿಯಪುರದ ಕರಣಿಕ ಎಂದು ಹೇಳಿಕೊಂಡಿದ್ದಾನೆ. ಇವನ ಸ್ಥಳ ವಾಲ್ಮೂರಪುರ. ಇವನ ಪದ್ಯಗಳಲ್ಲಿ ಬಂದನ್ನು ತೆಗೆದು ಬರೆಯುತ್ತೇವೆ—

ಬರೆದ ಕಾವ್ಯದಿ ಹಸ್ತದೋಷದಿ | ಇರಲು ತಿದ್ದುವುದೆಲ್ಲ ಬುಧತತಿ |
ಮುಳ್ಳಿಯು ಪಲ್ಲವಿಭೇದದಾಗಿರೆ ಶುದ್ಧಗೊಳಿಸುವುದು ||
ಪರಮಯೋಗಾಭ್ಯಾಸವಶದಲಿ | ನಿರುತ ಧ್ಯಾನಾನಂದಮಯದಿಂ |
ದರುವ ಹೊನ್ನೇಸಿತಲದಾಸನು ಕರುಣದಿಂ ಪೊರೆವ ||

ವೆಂಕಟೇಶಭಟ್ಟ 1830

ಈತನು ವಿಠೋಬಚರಿತೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಇವನ ಸ್ಥಳ ಕುಂದಾಪುರ. ಈ ಗ್ರಂಥವನ್ನು 1830 ರಲ್ಲಿ ಬರೆದಂತೆ ತಿಳಿಯುತ್ತದೆ.

ಇವನ ಗ್ರಂಥ

ವಿಠೋಬಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 70 ಇದಕ್ಕೆ ವಿಠಲಚರಿತೆ ಎಂಬ ಹೆಸರೂ ಉಂಟು. ಇದರಲ್ಲಿ ದ್ರವ್ಯಾಪೇಕ್ಷೆಯಿಂದ ಬಲಿಕೊಡ

ಸುಬ್ರಹ್ಮಣ್ಯ ಸು. 1830.

ಇವನು ತಾರಾಶಶಾಂಕನಾಟಕವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ಬಾಡಾಲವಂಶದವನು; ನಾರಾಯಣಾರ್ಯನ ಮಗನು. ಇವನ ಸ್ಥಳ ಅಣುಪ್ರಸ್ಥಪುರ, ಎಂದರೆ ಚಿಕ್ಕಒಳ್ಳಾಪುರ. ಇವನು ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜನ ಆಶ್ರಿತನು. ಅತನ ಆಜ್ಞೆಯಿಂದ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇವನ ಕಾಲವು ಸುಮಾರು 1830 ಆಗಬಹುದು.

ಇವನ ಗ್ರಂಥ

ತಾರಾಶಶಾಂಕನಾಟಕ

ಇದು ಯಕ್ಷಗಾನರೂಪವಾಗಿದೆ; ಶೃಂಗಾರರಸಪೂರ ಎಂದು ಕವಿ ಹೇಳುತ್ತಾನೆ. ಅಂತ್ಯದಲ್ಲಿ ಶ್ರೀ ಕೃಷ್ಣರಾಜೇಂದ್ರನ ಆಜ್ಞಾನುಸಾರದಿಂ ಅಣುಪ್ರಸ್ಥಪುರ ವಾಸ ಬಾಡಾಲವಂಶಪ್ರಕಾಶ ನಾರಾಯಣಾರ್ಯಸುತ ಸುಬ್ರಹ್ಮಣ್ಯವಿರಚಿತ ಶೃಂಗಾರ ರಸಪೂರ ತಾರಾಶಶಾಂಕನಾಟಕಂ ಎಂದಿದೆ.

ಸೋಬಾನೆ ರಂಗದಾಸ ಸು. 1830.

ಇವನು ಕೃಷ್ಣರಾಜಡೋಳೋತ್ಸವಚರಿತೆಯನ್ನು ಬರೆದಿದ್ದಾನೆ. ಈತನು "ಕೃಷ್ಣರಾಜಚರಣಕಮಲಸೇವಾಧುರೀಣ" ಎಂದು ಹೇಳಿಕೊಂಡಿರುವುದರಿಂದ ಮೈಸೂರು ದೊರೆಯಾದ ಮುಮ್ಮಡಿಕೃಷ್ಣರಾಜನ ಆಶ್ರಿತನೆಂಬುದು ವ್ಯಕ್ತವಾಗುತ್ತದೆ.

ಇವನ ಗ್ರಂಥ

ಕೃಷ್ಣರಾಜಡೋಳೋತ್ಸವಚರಿತೆ

ಇದರಲ್ಲಿ ಹಾಡುಗಳೂ ಷಟ್ಪದಿಗಳೂ ಇವೆ. ಮೂಗಡಿಯ ರಂಗನಾಥದೇವರು ಚರಣಕಟಾಕ್ಷದಿಂದ ಈ ಗ್ರಂಥವನ್ನು ರಚಿಸಿದಂತೆ ಕವಿ ಹೇಳುತ್ತಾನೆ.

ಗುರುಕೃಷ್ಣ ಸು. 1830

ಇವನು ತತ್ವದಕೀರ್ತನೆಗಳು, ಕೃಷ್ಣಸ್ವಾಮಿಯ ದಾನಕೊಟ್ಟ ಪದ, ಕೃಷ್ಣಬಾಲಲೀಲೆ ಇವುಗಳನ್ನು ಬರೆದಿದ್ದಾನೆ. ಇವನ ಗ್ರಂಥಗಳ ಕೊನೆಯಲ್ಲಿ ಮೈಸೂರು ರಾಜನಾದ ಮುಮ್ಮಡಿಕೃಷ್ಣರಾಜನಿಗೆ ಮಂಗಳವಾಗಲಿ ಎಂದಿರುವುದರಿಂದ ಇವನು ಆ ರಾಜನ ಕಾಲದಲ್ಲಿ ಇದ್ದಿರಬೇಕು.

ಇವನ ಹಾಡುಗಳಲ್ಲಿ ಗುರುಕೃಷ್ಣ ಎಂಬ ಅಂಕಿತವು ಅಲ್ಲಲ್ಲಿ ದೊರೆಯುತ್ತದೆ. ಅಲ್ಲದೆ

ಗುರುಕೃಷ್ಣ ಬೋಧೆಯನ್ನು ಬೋಧಿಸೆ । ಗುರುಕೃಷ್ಣಶಿಷ್ಯನಿಗೆ ।
ಗುರುಕೃಷ್ಣನಂಕಿತದಲಿ ಗ್ರಂಥವ । ಗುರುಕೃಷ್ಣನಾಗಿಯೆ ಮಾಡಿದನಿಂತು ॥

ಎಂಬ ಪದದಿಂದ ಈತನ ಗುರು ಗುರುಕೃಷ್ಣ ಎಂದು ತಿಳಿವುದಲ್ಲದೆ ಈತನ ಹೆಸರೂ ಗುರುಕೃಷ್ಣ ಎಂದಿರಬಹುದು ಎಂದು ತೋರುತ್ತದೆ. ಈತನು ಬ್ರಾಹ್ಮಣಕವಿ.

ಇವನ ಗ್ರಂಥಗಳಲ್ಲಿ

1. ತತ್ವದಕೀರ್ತನೆಗಳು.

ಈ ಹಾಡುಗಳ ಸಂಖ್ಯೆ 1000 ಕ್ಕೆ ಮೇಲೆ ಇದೆ. ಪ್ರತಿಹಾಡೂ 'ಗುರುಕೃಷ್ಣ' ಎಂದು ಮುಗಿಯುತ್ತದೆ. ಅಂತ್ಯಭಾಗದಲ್ಲಿರುವ

ಗುರುಕೃಷ್ಣಬೋಧೆಗೆ ಬರುವ ತತ್ವಗಳನ್ನು । ಒರೆವೆ ಮುನ್ನೂರಿಪ್ಪತ್ತು
ಗುರುಕೃಷ್ಣ ।
ಪರಿಪರಿಯಲಿ ಓವೆ ವರಜ್ಞಾನವಿಂದುವೆ । ಸಿರಿಕೃಷ್ಣಾಡೆ ರಾಗದಿ ಗುರುಕೃಷ್ಣ ॥

ಎಂಬ ಹಾಡಿನಿಂದ 360 ತತ್ವಗಳನ್ನು ಹೇಳಿರುವಂತೆಯೂ ಚಿದಾನಂದಾವಧೂತನ ಜ್ಞಾನಸಿಂಧುವನ್ನು ಅನುಸರಿಸಿರುವಂತೆಯೂ ತಿಳಿಯುತ್ತದೆ.

2. ಕೃಷ್ಣಸ್ವಾಮಿಯ ದಾನಕೊಟ್ಟ ಪದ.

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 157. ಇದರಲ್ಲಿ ಹೇಳಿರುವ ಕಥೆ ಈ ಪದ್ಯದಲ್ಲಿ ಸೂಚಿತವಾಗಿದೆ—

ಸತ್ಯಭಾಮಾದೇವಿ ಚಿತ್ತವಲ್ಲಭನ ತಾ । ನಥಿಯಿಂದೆಸಲಿರು ನಾರದಗೆ ।
ಮತ್ತೆ ದಾನವನಿತ್ತ ಸತ್ಕಥೆಗಳನ್ನು । ವಿಸ್ತಾರವಾಗಿ ಪೇಳುವೆನು ॥

ಆದಿಯಲ್ಲಿ ಗುರುಕೃಷ್ಣನ ಸ್ತುತಿಯಿದೆ.

3. ಕೃಷ್ಣಬಾಲಲೀಲೆ.

ಇದು ಭಾಗವತಪುರಾಣಾರ್ಥವಿವರಣರೂಪವಾಗಿದೆ; ಚೌಪದದಲ್ಲಿ ಬರೆದಿದೆ. ಅಲ್ಲಲ್ಲಿ ತಿರುಪತಿವೆಂಕಟರಮಣಸ್ತುತಿ ಇದೆ. ಆರಂಭದಲ್ಲಿ ಈ ಪದ್ಯವಿದೆ—

ಮೂಲವ್ಯಾಖ್ಯಾನಗಳ ಮುಖ್ಯತಾತ್ಪರ್ಯಗಳು ।
ಈ ಲಲಿತಭಾಷೆಯೊಳಗೆಜ್ಜಿಕ ಸಲಿಸಲು ।
ಬಾಲಕನ ಮುಖದಲ್ಲಿ ಬರುವುದೆಂತಿದು ಕೃಷ್ಣ ।
ತಾ ಲಭಿಸಿಕೊಡಲಾಗಿ ತಡೆ ಎದುದ್ಭವಿಸಿದುದು ॥

ಗಣಗಳವಲಿ'ೂಳಗಿಲ್ಲ ಗುರುಕೃಷ್ಣಕಥೆಯೂಗ ।
ಗುಣಯುಕ್ತದಿಂ ಜೋಡುಗೊಡಿಯೂ ಇಲ್ಲವು ॥

ಮಹಲಿಂಗರಂಗನ ಅನುಭವಾಮೃತದ ಪದ್ಯಗಳಿಗೆ ಹಾಡಿನ ರೂಪವಾದ ಒಂದು ವ್ಯಾಖ್ಯಾನವು ದೊರೆಯುತ್ತದೆ. ಅದೂ ಏತಕ್ಕ ವಿಕೃತವಾಗಿರಬಹುದೆಂದು ತೋರುತ್ತದೆ.

ಶ್ರೀನಿವಾಸ ಸು. 1830

ಈತನು ಕೃಷ್ಣರಾಜ ವರ್ಷವರ್ಧಂತೀ ಶತಕವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ, ಶಾಂಡಿಲ್ಯಗೋತ್ರದವನು ; ಇವನ ತಂದೆ ನಾರಾಯಣನು, ಸ್ಥಳ ಗೋಕರ್ಣ. ಮುಮ್ಮಡಿ ಕೃಷ್ಣರಾಜನ ವರ್ಷವರ್ಧಂತಿಯ ಮಹೋತ್ಸವವನ್ನು ನೋಡಲು ಪತ್ನೀಪುತ್ರರೊಡನೆ ಗೋಕರ್ಣದಿಂದ ಮೈಸೂರಿಗೆ ಬಂದು ಅಲ್ಲಿ ತಾನು ಕಂಡ ಮಹೋತ್ಸವದ ವಿಭವಗಳನ್ನು ಈ ಗ್ರಂಥರೂಪವಾಗಿ ರಚಿಸಿದ್ದಾನೆ. ಇವನ ಕಾಲವು ಸುಮಾರು 1830 ಆಗಿರಬಹುದು.

ಇವನ ಗ್ರಂಥ

ಕೃಷ್ಣರಾಜವರ್ಷವರ್ಧಂತೀ ಶತಕ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಸಂಧಿ 3, ಪದ್ಯ 101. ಇದರಲ್ಲಿ ಮುಮ್ಮಡಿ ಕೃಷ್ಣರಾಜನ ವರ್ಷವರ್ಧಂತೀಮಹೋತ್ಸವವು ವರ್ಣಿತವಾಗಿದೆ. ಗ್ರಂಥಾವತಾರದಲ್ಲಿ ಲಕ್ಷ್ಮಿ, ಚಾಮುಂಡಿ ಇವರುಗಳ ಸ್ತುತಿ ಇದೆ. ಕವಿ ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳನ್ನು ತನ್ನ ಹೆಂಡತಿಗೆ ಹೇಳುತ್ತಾನೆ.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:

ಚಾಮುಂಡಿಬೆಟ್ಟ

ಶುಕಶಾರಿಕಾನಿವಹಮಧುಮಧುರವಚನದಿಂ ।
ಪಿಕಪುಂಜಪರಿಷತಿತಪಂಚಮಸ್ವರದಿಂದ ।
ಸುಕಲಷಟ್ಪದರಣಗಳ ಸಂಗೀತರಾಗದಿಂ ಸೋಗೆಗಳ ಶಬ್ದದಿಂದ ॥
ಸುಕಪೋತಸಂತತಿಯ ಹೂಂಕಾರದಿಂದಲುಂ ।
ಸಕಲಸಿರಿಯಿಂದೆಸೆವ ಕೃಷ್ಣನೃಪನಿಲಯದಂ ।
ತಕಳಂಕಚಾಮುಂಡಿಗಿರಿವರವು ಸಲೆ ವಿರಾಜಿಸುತಿಪ್ಪುದೇವೇಟ್ಟನು ॥

ಚಾಮರ

ಸುರರು ಪೂಮಳೆಗಳಂ ಕೃಷ್ಣರಾಜೋತ್ತಮನ ।
ವರಶಿರೋಭಾಗದೊಳ್ ಪರಮಸಂತೋಷದಿಂ ।
ಸುರಿಯಲವು ಮುಕುಟನೊಳ್ ಬಿದ್ದಿರಡುಪಾಲಾಗಿ ವ್ಯಜನಗಳ ಗಾಳಿಯಿಂದ ॥
ಪರಿದು ಮೇಲ್ಬಾಗಕ್ಕೆ ಪೋಪುವೆಂಬಂತೆ ವರ ।
ತರುಣಿಯರ್ ಕರಗಳಂ ಧಾಳಿಸುತ್ತಿರುವ ಸಿತ ।
ಚದಚಾಮರದ್ವಯಂ ಶೋಭಿಸುವುದೀಗಲಿದ ಬೇಗದಿಂ ಕಾಂತೆ ನೋಡು ॥

ಗೇರಸೊಪ್ಪೆ ಶಾಂತಯ್ಯ ಸು. 1830

ಈತನು ಏಕಾದಶೀಪ್ರಸಂಗ, ಕರ್ಣಪರ್ವ, ಜರಾಸಂಧನಕಾಳಗ, ದ್ರೌಣಪರ್ವ, ಭೀಷ್ಮಪರ್ವ, ರಾವಣದಿಗ್ವಿಜಯ, ಲವಣಸಂಹಾರ, ಸೀತಾಕಲ್ಯಾಣ, ಸೀತಾವಿಯೋಗ, ಸುಭದ್ರಾಕಲ್ಯಾಣ, ಸುರಥಸುಧನ್ವರ ಕಾಳಗ, ಇವೇ ಮುಂತಾದ ಪ್ರಸಂಗಗಳನ್ನು ಅಥವಾ ಯಕ್ಷಗಾನಗಳನ್ನು ಬರೆದಿದ್ದಾನೆ. ಇವನು ಸಾರಸ್ವತ ಬ್ರಾಹ್ಮಣನು; ಮಂಗಳೂರುಜಿಲ್ಲಾ, ಹೊನ್ನಾವರದಲ್ಲಿ ಪ್ರಿನ್ಸಿಪಲ್ ಸದರ್ ಅಮೀನನಾಗಿದ್ದನು. ಇವನ ಗ್ರಂಥಗಳಲ್ಲಿ ಪ್ರತಿಪಾದಿತವಾದ ವಿಷಯಗಳು ಅವುಗಳ ಹೆಸರುಗಳಿಂದಲೇ ವ್ಯಕ್ತವಾಗುತ್ತವೆ.

ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ ಸು. 1830

ಈತನು ಹಳಗನ್ನಡನುಡಿಗನ್ನಡ, ಹೊಸಗನ್ನಡನುಡಿಗನ್ನಡ, ಶಬ್ದ ಮಂಜರಿ, ಧಾತುಮಂಜರಿ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು

ಶ್ರೀ ವೈಷ್ಣವಕವಿ ; ಮದರಾಸ್ ಸದರ್ ಅದಾಲತ್ ಕೋರ್ಟಿನಲ್ಲಿ ವಕೀಲನಾಗಿದ್ದನು. ಹೊಸಗನ್ನಡನುಡಿಗನ್ನಡಿಯನ್ನು ಶಕ 1761 ಕ್ಕೆ (1838) ಹಿಂದೆಯೇ ಬರೆದಂತೆಯೂ ಆ ವರ್ಷ ಒಬ್ಬ ಸರದಾರನ ಸಹಾಯದಿಂದ ಮುಂದ್ರಿಸಿದಂತೆಯೂ ಹೇಳುತ್ತಾನೆ.

ಈ ಗ್ರಂಥದ ಆರಂಭದಲ್ಲಿ ಈ ಪದ್ಯವಿದೆ:—

ಶ್ರೀರಮಣನ ಪದಕಮಲವ | ನಿರದಿಂ ಸಾಷ್ಟಾಂಗಮೆಱಗಿ ಕೃಷ್ಣಾಚಾರ್ಯಂ |
ಶ್ರೀರಂಗಪುರನಿಕೇತಂ | ಬರೆದನು ಹೊಸಗನ್ನಡನುಡಿಗನ್ನಡಿಯೊಲವಿಂ ॥

ತಮ್ಮಯಕವಿ 1834.

ಈತನು ರಾಜವಂಶರತ್ನಪ್ರಭೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ; ಹರಿತಸಗೋತ್ರದವನು ; ಆಶ್ವಲಾಯನಸೂತ್ರದವನು ; ಋಗ್ವೇದಿ. ಇವನ ಪಿತಾಮಹನು ವೆಂಕಟರಮಣಶಾಸ್ತ್ರಿ ತಂದೆ ವೆಂಕಟನಾರಾಯಣಶಾಸ್ತ್ರಿ, ಸ್ಥಳ ಸಿಂಹಾಸನ ನಗರಿ (ಹಾಸನ). ಈತನು ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜನಲ್ಲಿ ಸನ್ಮುಖ ಕವಿಸತ್ಯನಾಗಿದ್ದನು. ಇವನಿಗೆ ವೆಂಕಟಕೃಷ್ಣ ಎಂಬ ಹೆಸರೂ ಉಂಟು. ಈ ಗ್ರಂಥವನ್ನು ದೊರೆಯ ಆಜ್ಞಾನುಸಾರವಾಗಿ 1834 ರಲ್ಲಿ ಬರೆದು ಒಪ್ಪಿಸಿದಂತೆಯೂ ದೊರೆಯಿಂದ ವಿಶೇಷವಾಗಿ ಮರ್ಯಾದೆಯನ್ನು ಪಡೆದಂತೆಯೂ ತಿಳಿಯುತ್ತದೆ. ಹೋಸಲಕವಿತಿಲಕ ಎಂದು ಕವಿ ಹೇಳಿಕೊಂಡಿದ್ದಾನೆ.

ಪೂರ್ವಕವಿಗಳಲ್ಲಿ ಕಾಳಿದಾಸ, ಮಯೂರ, ಭವಭೂತಿ, ದಂಡಿ, ಸುಬಂಧು, ಬಾಣ, ಹರ್ಷ, ಬಿಲ್ಹಣ, ಭಟ್ಟಿ, ಹರದತ್ತ, ನೀಲಕಂಠ, ರುದ್ರಭಟ್ಟ ಹರೇಶ್ವರ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ರಾಜವಂಶ ರತ್ನಪ್ರಭೆ

ಇದು ಚಂಪೂರೂಪವಾಗಿದೆ; ರುಚಿಪ್ರಚಾರ ಎಂಬ ಐದು ವಿಭಾಗಗಳನ್ನು ಒಳಕೊಂಡಿದೆ; ಅಲ್ಲಲ್ಲಿ ಕೆಲವು ಸೀಸಪದ್ಯಗಳೂ ಇವೆ. ಮುಮ್ಮಡಿಕೃಷ್ಣರಾಜನು "ನಮ್ಮ ವಂಶಕ್ರಮವ ಬರೆ" ಎಂದು ಆಜ್ಞಾಪಿಸಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದರಲ್ಲಿ ರಾಜನೃಪನಿಂದ ಮೈಸೂರುರಾಜರ ಪರಂಪರೆಯೂ ಮುಮ್ಮಡಿಕೃಷ್ಣರಾಜನು ಮಾಡಿದ

ಧರ್ಮಕಾರ್ಯಗಳೂ ರಚಿಸಿದ ಗ್ರಂಥಗಳೂ ಹೇಳಿವೆ. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಚಾಮುಂಡಿ, ಶಿವ, ಪಾರ್ವತಿ, ಸರಸ್ವತಿ, ಗುರುಶಂಕರಾರ್ಯ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ರಾಜನ್ಯಪಸ್ತುತಿ.

ಆರಾಜಕ್ಪ್ರಿಪಾಲಖಡ್ಗನಿಹತಾರಾತ್ಯಾದಿವಿಶ್ವಂಭರಾ !
ಭಾರಾಸಕ್ತನೃಪೌಘರೋಷದಳಿತಪ್ರಾಭಾಕರೋನ್ಮಂಡಲ ॥
ಸ್ಫಾರಾನಲ್ಪಮಹಾಕ್ಷಕ್ಷರದಸ್ಯಗ್ಭಾರಪ್ರವಾಹಂಗಳಾ ।
ತಾರಾಮಾರ್ಗವನೈದಿ ಕಾಣಿಸೆ ಜನರ್ ತಾಂ ಸಂಜೆಗೆಂಪೆಸ್ಸುವರ್ ॥

ವಸಾರ್ಕಕಾಲ

ಕಲಶಾಂಭೋನಿಧಿಮಧ್ಯಸುಂದರಸಿತಾಕಾರಾತಿವಿಸ್ತಾರಭೂ ।
ವಲಯಾಂತರ್ಲಸಮಾನಮಂದಿರವಸದ್ವ್ಯಾತಾಶನೇಂದ್ರಾಂಗಕಂ ॥
ಡಲಪರ್ಯಂಕಶಯಾನನಾಧವನಿರಾಡಾನಂದನಿದ್ರಾಪ್ರದಂ ।
ವಲಭಿಚ್ಛಾಪವಿಭಾಸುರಂ ಪೊಳೆದುದಾವರ್ಷರ್ತು ವಾತ್ಯೌಘದಿಂ ॥

———

ಮಾವನೂರು ಚೆನ್ನಬಸವ. 1840.

ಈತನು ಶರಣಬಸವಚರಿತೆಯನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನ ಪಿತಾಮಹನು ಶಿವಲಿಂಗದೇವ, ತಂದೆ ಅಯ್ಯಪ್ಪ, ತಾಯಿ ಬಸವಮ್ಮ, ಗುರು ಮಲೆಯಶಾಂತೇಶ, ಸ್ಥಳ ಸಗರದೇಶದ ಮಾವನೂರು‡ ಈಗ್ರಂಥವನ್ನು ಕರ್ಣಾಟದೇಶದಲ್ಲಿಯ ಎಳಮೇಲಿಪುರದ ಭಕ್ತರ ಇಷ್ಟಾನುಸಾರವಾಗಿ ಶಕ ೧೭೬೨ ನೆಯ ಶಾರ್ವರಿ ವರ್ಷದಲ್ಲಿ—ಎಂದರೆ 1840 ರಲ್ಲಿ ಬರೆದಂತೆ ಕವಿ ಹೇಳುತ್ತಾನೆ. ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ಪರಮಶಿವಕವಿ ಕಾಳಿದಾಸಂ | ಗರುವ ಬಾಣ ಮಯೂರ ಮುಲುಹಣ
ಕೆರೆಯಪದ್ಮರಸಯ್ಯನುದ್ಭಟ ಪಂಡಿತಾರಾಧ್ಯ ॥
ಹರಿಹರೇಶ್ವರ ರಾಘವಾಂಕನ ಸಿರಿಪತಿಸುಪಂಡಿತರ ಹೃತ್ಸರ ।
ಸರುಹದೊಳು ಧ್ಯಾನಿಸುತ ಕೃತಿಯಂ ಪೇಟಿಲನುಗ್ಗೆದೆ ॥

‡ ಇದು ನಿಜಾಂ ಇಲಾಖಾ ಆಂದೆಲಿ ತಾಲ್ಲೂಕಿನಲ್ಲಿರುವಂತೆ ತಿಳಿಯುತ್ತದೆ.

ಇವನ ಗ್ರಂಥ

ಶರಣಬಸವ ಚರಿತೆ

ಇದು ಭೂಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 15, ಪದ್ಯ 1010. ಇದರಲ್ಲಿ ಶರಣಬಸವ ಎಂಬ ಶಿವಭಕ್ತನ ಚರಿತವು ಹೇಳಿದೆ. ಕಥಾಗರ್ಭವು ಈ ಪದ್ಯದಲ್ಲಿ ಸೂಚಿತವಾಗಿದೆ —

ಹರನ ಬೆಸವನು ಕೈಕೊಳುತ್ತೀ । ಧರಣಿಯೊಳಗಿಹ ಪುಸ್ಪಕರಡಿಗೆ ।
ಪುರದೊಳಿಹ ಸಾಲೋಕ್ಯವಂಶದಿ ಜನಿಸಿ ಮಹಿಮೆಯನು ॥
ಮೆಱೆದು ತಚ್ಛಿವನಾಜ್ಞೆಯೊಳು ಕಲ । ಬುರಗಿಪುರಕಂ ಒಂದು ಗೋಪ್ಯದೊ ।
ಳಿರದೆ ಶಿವನೊಳಗೈಕ್ಯವಾದನು ಶರಣಬಸವಣ್ಣ ॥

ಕಥಾನಾಯಕನು ನಿಜಾಂಇಲಾಖಾ ಆಂದೆಲಿತಾಲ್ಲೂಕು ಅರಳು ಗುಂಡಿಗೆ ಎಂಬ ಗ್ರಾಮದಲ್ಲಿ 1746 ರಲ್ಲಿ ಜನಿಸಿ ಕಲಬುರಗಿಯಲ್ಲಿ 1822 ರಲ್ಲಿ ಬಯಲಾದಂತೆ ಹೇಳುತ್ತಾರೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣಪತಿ, ಸುಬ್ರಹ್ಮಣ್ಯ, ವೀರೇಶ, ಬಸವ, ಚೆನ್ನಬಸವ, ಸಿದ್ಧರಾಮ, ದೇವಚಾರ್ಯ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಐದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ: —

ಭೃಂಗಿ

ಕೊಂಕಿಸುತ್ತೆದೆ ಝುಂಕಿಸುತ ಮೈ । ಡೊಂಕಿಸುತ ಕಾಲ್ಕೈಯ ಗದಗದ ।
ನಂಕಿಸುತ ಗಹಗಹಿಸಿ ನಗುತಂ ಬೆದಱಿಯಂಜಿಸುತ ॥
ಟೊಂಕದೊಳು ಕೈಯಿಟ್ಟು ಮುಂದಕೆ । ಭೃಂಕನಾನನದಿರುಹಿ ಜೇಷ್ಟಿಸಿ ।
ಬಿಂಕದಿಂ ನರ್ತಿಸಿದನಾಭೃಂಗೀಶ ಹರುಷದಲಿ ॥

ದಾನ

ಕೆಱಿಯು ತುಂಬಿದಬಱಿಕ ಕೋಡಿಗ । ಳಿರದಿರಲು ಕೆಱಿಯೊಡೆದು ಜಲ ತಾಂ ।
ಹರಿದು ಹೋಗುವುದದಕೆ ಕೋಡಿಯು ಬಿಡುವುದೇ ಸಹಜ ॥
ವರಧನವ ಘಟಿಸಿದವ ಧರ್ಮಗ । ಳಱಿಯದಿರಲರಸಗ್ನಿ ಜೋರರೊ ।
ಳಿರದೆ ಕೆಡುವುದು ಧರ್ಮದಿಂ ಸತ್ಕೀರ್ತಿಪುಣ್ಯಗಳು ॥

ಊಟ

ಕೆಲರು ಹೊಟ್ಟೆಯ ಮುಱಿದುತೊಳುತಂ । ಕೆಲರು ನೆಟ್ಟನೆ ನಿಗುರುತುಣ್ಣುತ ।
ಕೆಲರು ಮೋರೆಯ ಮುಱಿಯುತಂ ಹೊಟ್ಟೆಯನು ಝುಲ್ಲಿಸುತ ॥

ಕೆಲಕೆಲರು ಕಾಲ್ಗಳನು ಚಾಚುತ । ಕೆಲರು ಡರ್ರನೆ ತೇಗುತಂ ತಾಂ ।
ಕೆಲರು ವುಟ್ಟುದ ಸಡಿಲಿಸುತಲುಣುತಿರ್ದರೇನೆಂಬೆ ॥

ಮುದ್ದಗಿರಿ ನಂಜಪ್ಪ ಸು. 1840.

ಈತನು ಕೃಷ್ಣರಾಜೇಂದ್ರವಿಲಾಸವನ್ನು ಬರೆದಿದ್ದಾನೆ. ಇವನು ವೀರಶೈವಕವಿ ಎಂದು ತೋರುತ್ತದೆ. ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜನ ಆಶ್ರಿತನು. ಅತನನ್ನು ಸ್ತುತಿಸಿ ಈ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲವು ಸುಮಾರು 1840 ಆಗಿರಬಹುದು. 'ಆಂಧ್ರಕರ್ಣಾಟಕಕವಿತಾವಿಶಾರದ' ಎಂದು ತನ್ನನ್ನು ವಿಶೇಷಿಸಿ ಹೇಳಿ ಕೊಂಡಿದ್ದಾನೆ.

ಇವನ ಗ್ರಂಥ

ಕೃಷ್ಣರಾಜೇಂದ್ರವಿಲಾಸ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪ್ರಕರಣ 6. ಕೃಷ್ಣರಾಜ ಯಶೋವರ್ಣನಾತ್ಮಕವಾದ ಗ್ರಂಥವು.

ಸೀತಾರಾಮಸೂರಿ ಸು. 1840.

ಈತನು ಸಹಸ್ರಾಯುಕಥೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; "ಕೃಷ್ಣರಾಜಮುದೇ ಕಥಿತಾ" ಎಂದು ಹೇಳುವುದರಿಂದ ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜನ ಆಶ್ರಿತನಾಗಿದ್ದಂತೆ ತೋರುತ್ತದೆ. ಇವನ ಕಾಲವು ಸುಮಾರು 1840 ಇಗಿರಬಹುದು.

ಇವನ ಗ್ರಂಥ

ಸಹಸ್ರಾಯುಕಥೆ.

ಇದು ಬ್ರಹ್ಮಾಂಡೋಪಪುರಾಣದ ಉತ್ತರಭಾಗದಲ್ಲಿರುವ ಲಲಿತೋಪಾಖ್ಯಾನದ ಪೂರ್ವಖಂಡದಲ್ಲಿಯ ಹಯಗ್ರೀವಾಗಸ್ತ್ಯಸಂವಾದರೂಪವಾದ 24 ಅಧ್ಯಾಯಗಳ ಕರ್ಣಾಟಕ ಟೀಕೆ.

ಸುಬ್ರಹ್ಮಣ್ಯ. ಸು. 1840.

ಇವನು ಶಂಬರಾಸುರನ ಕಾಳಗವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ಇವನ ತಂದೆ ಪೌರಾಣಕುಲಜಾತ ದೇವಜ್ಞ ವಿಟ್ಠಲ, ತಾಯಿ, ಗೌರಿ. ಈತನ

ಕಾಲವು ಸುಮಾರು 1840 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಶಂಬರಾಸುರನ ಕಾಳಗ.

ಇದು ಯಕ್ಷಗಾನರೂಪವಾಗಿದೆ; ಪದ 335. ಇದರಲ್ಲಿ "ಪರಮಶುಕ ಮುನಿ ಪರೀಕ್ಷಿತನ್ನ ಪಾಲಗೆ ಪೇಟ್ಟಿ ವರಮಹಾಭಾಗವತಪ್ರಕಾರದೊಳ್ ಸ್ಮರ ಜನಿಸಿ ರತಿಯ ಕೈಪಿಡಿದ ಸಂಗತಿ" ಹೇಳಿದೆ.

ರಾಮ ಬ್ರಹ್ಮಾನಂದರು (1) ಸು 1840

ಈತನು ಭಕ್ತಿಸುಧಾರಸವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಬ್ರಹ್ಮಸಮಾಜಸ್ಥಾಪನಾಚಾರ್ಯ ಸದ್ಬ್ರಹ್ಮೋಪಾಸನಾಚಾರ್ಯ ಪರಮಹಂಸಪರಿವ್ರಾಜ ರಾಮಮೋಹನಾಚಾರ್ಯನ ಶಿಷ್ಯನು. ಇವನ ಕಾಲವು ಸುಮಾರು 1840 ಆಗಬಹುದು.

ಇವನ ಗ್ರಂಥ.

ಭಕ್ತಿಸುಧಾಸರ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 125. ಇದು "ನಿತ್ಯಾನಿತ್ಯಕಾರ್ಯಕಾರಣವೆನಿಪ ಜಗಜ್ಜೀವಪರಮಪಚಾರಸಾರ" ಎಂದು ಕವಿ ಹೇಳುತ್ತಾನೆ. ಪ್ರತಿಪದ್ಯವೂ "ಪಾಲಿಸು ಭುವನಸಂಕುಲವ" ಎಂದು ಮುಗಿಯುತ್ತದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಮನವ ನಿಲ್ಲಿಸಲೇನು ಫಲ ನೆಲೆ | ತನುವ ನಿಲ್ಲಿಸಲೇನು ಫಲ ಸಂ |
ಜನಿಸಿ ತೋಱುವ ವಚನಗಳನುಲಿದೇನು ಫಲ ತಮಗೆ |
ಅನವರತ ನಿನ್ನೊಳಗೆ ಭಕ್ತಿಯ | ನನುಕರಿಸದಿರಲೇನು ಫಲ ನಿಜ |
ವೆನಿಸುವಜಲಾನಂದ ಪಾಲಿಸು | ಭುವನಸಂಕುಲವಾ ||
ಅಂಧಕಗೆ ಕನ್ನಡಿಯ ಪಂಬಲ | ನಿಂದಕಗೆ ಸದ್ಧರ್ಮನೀತಿಯು |
ಕುಂದುಕೊಱತೆಗಳಿದ್ದವಗೆ ಸುಕ್ಷೇಮಪರಿಣಾಮ ||
ಚಂದದಿಂದೊಪ್ಪುವುವೆ ಸತ್ಯವ | ನಿಂದು ಪಿಡಿದಾತಂಗೆ ದುಃಖಿತ |
ರಂಗ ತೋಱುವುದುಂಟೆ ಪಾಲಿಸು ಭುವನಸಂಕುಲವಾ |

ದೇವಲಾಪುರದ ನಂಜುಂಡ. 1841

ಈತನ (1) ಅಪರಾಧಸ್ತೋತ್ರ, (2) ಕೃಷ್ಣರಾಜಪಟ್ಟಾಭಿಷೇಕ ವರ್ಣನೆ, (3) ಕೃಷ್ಣರಾಜಭಕ್ತಿಸಾರ, (4) ಕೃಷ್ಣರಾಜ ಭಕ್ತಿಗೀತಾವಳಿ, (5) ಕೃಷ್ಣರಾಜ

ಶೃಂಗಾರಶತಕ, (6) ಕೃಷ್ಣರಾಜೇಂದ್ರವೃತ್ತರತ್ನಾವಳೀ ಟೀಕೆ, (7) ಕೃಷ್ಣೇಂದ್ರಗೀತೆ, (8) ತಿಲ್ಲಾಂಬಿಕಾಶತಕ, (9) ಲಿಂಗಸ್ತುತಿ, (10) ಶಂಕರಾಷ್ಟಕ, (11) ಶೈಲಜಾಧವಸ್ತೋತ್ರ, (12) ಸಮುದ್ರಮಥನಕಥೆ, (13) ಸೌಗಂಧಿಕಾಪರಿಣಯ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ; ಇವನ ತಂದೆ ವೀರಭದ್ರನು, ತಾಯಿ ನಂಜಮಾಂಬೆ, ಸ್ಥಳ ದೇವಲಾಪುರ, ಇಷ್ಟದೇವತೆ ನಂಜುಂಡೇಶ್ವರ. ಇವನು ಮೈಸೂರು ಮುಮ್ಮಡಿಕೃಷ್ಣರಾಜನ ಆಶ್ರಿತನಾಗಿದ್ದನು. ಆ ದೊರೆಯ ಸ್ತುತಿರೂಪವಾದ ಅನೇಕಗ್ರಂಥಗಳನ್ನು ಬರೆದಿದ್ದಾನೆ. "ಜಂಘಯಿಕವಿತೆಯೊಳು ಚತುರ" ಎಂದು ಹೇಳಿಕೊಂಡಿದ್ದಾನೆ. ಕೃಷ್ಣರಾಜಶೃಂಗಾರಶತಕವನ್ನು 1811 ರಲ್ಲಿಯೂ ಕೃಷ್ಣರಾಜಭಕ್ತಿಸಾರವನ್ನು 1808 ರಲ್ಲಿಯೂ ಬರೆದಂತೆ ಆ ಗ್ರಂಥಗಳಿಂದ ತಿಳಿಯುತ್ತದೆ. ಇವನ ಗ್ರಂಥಗಳಲ್ಲಿ ಕೆಲವು ಷಟ್ಪದೀರೂಪವಾಗಿಯೂ ಕೆಲವು ಸಾಂಗತ್ಯದಲ್ಲಿಯೂ ಕೆಲವು ವೃತ್ತದಲ್ಲಿಯೂ ಕೆಲವು ಕಂದದಲ್ಲಿಯೂ ಕೆಲವು ಹಾಡಿನ ರೂಪವಾಗಿಯೂ ರಚಿಸಲ್ಪಟ್ಟಿವೆ. ಸಮುದ್ರಮಥನಕಥೆ ಯಕ್ಷಗಾನದಲ್ಲಿದೆ.

1. ಸೌಗಂಧಿಕಾಪರಿಣಯ

ಇದು ಸಾಂಗತ್ಯದಲ್ಲಿ ಬರೆದಿದೆ: ಸಂಧಿ 11, ಪದ 726. ಈ ಗ್ರಂಥವು ಮುಮ್ಮಡಿಕೃಷ್ಣರಾಜನು ರಚಿಸಿರುವ ಸೌಗಂಧಿಕಾಪರಿಣಯದ ಕಥೆಯ ಸಂಗ್ರಹವೆಂದೂ ಅದೊಂದರ ಆಧ್ಯಾನುಸಾರವಾಗಿ ರಚಿತವಾಯಿತೆಂದೂ ಕವಿ ಹೇಳುತ್ತಾನೆ. ಇಂದ್ರನು ದೂರ್ವಾಸ ಮುನಿಯ ಶಾಪದಿಂದ ರತ್ನಪುರಿಯ ರಾಜನಾದ ಸುಚರಿತ್ರನಿಗೂ ಗುಣವತಿಗೂ ಸುಗಂಧರಾಯನೆಂಬ ಮಗನಾಗಿ ಹುಟ್ಟಿ ಸೌಗಂಧಿಕೆಯಾಗಿ ಹುಟ್ಟಿದ ಶಚಿಯನ್ನು ಮದುವೆಯಾಗಿ ಕೊನೆಗೆ ತನ್ನ ಪದವಿಯನ್ನು ಹೊಂದುತ್ತಾನೆ—ಎಂಬುದೇ ಕಥಾಸಾರ. ಗ್ರಂಥಾವತಾರದಲ್ಲಿ ಗರಳಪುರಿಯ ನಂಜುಂಡ, ಚಾಮುಂಡಿ, ಗಣೇಶ, ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡುಪದ್ಯಗಳನ್ನು ದ್ಧರಿಸಿ ಬರೆಯುತ್ತೇವೆ:—

ನಕ್ಷತ್ರ.

ಪರಮೇಶ್ವರಿ ನಾಭ್ಯಾಕಾಶ ದಿಂದ | ಒಲವ ಮಲ್ಲಿಗೆ ಪೊಗ್ಗುಗಳ |
ಪರಿಯೊಳು ಗಗನಾಂತರದಿ ಪಣ್ಣೆಲ್ಲನ | ತೊರೆದೊಳೊಪ್ಪಿದುವು ತಾರೆಗಳು ||

ಜೆಕ್ಕಿಂಗಳು

ಹಾಲ ಜೆಲ್ಲೆಯ ಚಂದದೊಂದು ಪ್ರಸ್ಫಾಣನ | ಜೇಳುವೆ ಬೂದಿಯತೆಜದಿ |
ಮೂಜಿ ಲೋಕವ ತುಂಬಿ ತುಳುಕುತ ತೋಜಿತು | ಮೇಲಾದ ಬೆಳದಿಂಗಳಾಗ ||

2. ಕೃಷ್ಣರಾಜಭಕ್ತಿಸಾರ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 108. ಪ್ರತಿಪದ್ಯವೂ 'ಕೃಷ್ಣೇಂದ್ರ ರಕ್ಷಿಸು ನಮ್ಮನನವರತ' ಎಂದು ಮುಗಿಯುತ್ತದೆ. ಇದು ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾಗಿದೆ: ಇದಕ್ಕೆ ಕೃಷ್ಣೇಂದ್ರಭಕ್ತಿಸಾರಾಷ್ಟೋತ್ತರಶತಕ ಎಂಬ ಹೆಸರೂ ಉಂಟು. ಇದರಲ್ಲಿ ಕೃಷ್ಣರಾಜನು ಗ್ರಹಣದರ್ಪಣ, ಸಂಖ್ಯಾರತ್ನಕೋಶ, ಶ್ರೀತತ್ವನಿಧಿ ಮೊದಲಾದ ಗ್ರಂಥಗಳನ್ನು ರಚಿಸಿದುದು, ಉಡುಪಿಯ ಕೃಷ್ಣನಿಗೆ ಪಚ್ಚೆಮುತ್ತಿನ ಮಾಲೆಯನ್ನೂ ಅಮೃತವಾಹಿನೀರಥದ್ರನಿಗೆ ರಜತಕವಚವನ್ನೂ ಸಮರ್ಪಿಸಿದುದು, ಗುಡಿಗೋಪುರಗಳನ್ನು ಕಟ್ಟಿಸಿದುದು ಇವೇ ಮೊದಲಾದ ವಿಷಯಗಳು ಹೇಳಿವೆ. "ನಲಪಿನೊಳೆಯನು ಬುದ್ಧಿ ವಿದ್ಯೆಯ ಕಲಿಸಿರುವ ಗುರು ಅನ್ನಪ್ರದನು ನೀನು ನಿನ್ನ ಸುಗುಣಾವಳಿಯ ವರ್ಣಿಸೆ ಎನ್ನ ಜನ್ಮಕೆ ಫಲವಿದು" ಎಂದು ಈ ದೊರೆಯವಿಷಯವಾಗಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶಿವ, ಪಾರ್ವತಿ, ಗಣೇಶ, ವೀರಭದ್ರ, ಷಣ್ಮುಖ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಎರಡೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಶೂರ ಕೇಳ್ಮೈ ದೇವಗಂಗೆಯ | ತೀರದಲ್ಲಾಕಲ್ಪವೃಕ್ಷವು |
ಭೂರಿತಪವನು ಗೈದು ನಿನ್ನಯ ಪುಣ್ಯವಾಗುರಿಸಿ ||
ಪೀಜುತಿಯುದಿಷ್ಟಾರ್ಥವೆಲ್ಲವ | ಯಾರ ಕೈಗಿಂತಪುದು ಶಕ್ತಿಯು |
ತೋಜೆಸೈ ಕೃಷ್ಣೇಂದ್ರ ರಕ್ಷಿಸು ನಮ್ಮನನವರತ ||
ಎಲುವನಿತ್ತ ದಧೀಚಿ ಮಾಂಸವ | ಬಲದೊಳಿತ್ತನು ಶಿಬಿಯು ಜಮರ್ಮ |
ಕಲಿತಕವಚವನಿತ್ತ ಕರ್ಣನು ಬಲಯು ಜೇಡಲ್ಕೆ ||
ನೆಲವನಿತ್ತನು ನಿನ್ನೊಳಂತು | ಜ್ವಲಸುರತ್ನಾಭರಣವಿತ್ತಿಪ |
ಜೆಲುವರಾರ್ ಕೃಷ್ಣೇಂದ್ರ ರಕ್ಷಿಸು ನಮ್ಮನನವರತ ||

3. ಕೃಷ್ಣೇಂದ್ರಗೀತೆ.

ಇದರಲ್ಲಿ 32 ಪದಗಳಿವೆ. ಒಂದನ್ನು ತೆಗೆದು ಬರೆಯುತ್ತೇವೆ:—

ಬಗಸುಗಣ್ಣಿನಾ ಸೊಗಸುಗಾಜಿನೇ | ತಗಲಿ ಬರಪಾ ತಾಳಲಾಱೆನು |
ನಗೆಯ ತೋಱದೇ ನಾಚಿಸುತ್ತಿಪೆ | ಮುಗಿಪೆ ಕೈಗಳಾ ತೋದದಿಂದಲೆ ||

4. ಶೈಲಜಾಧವಸ್ತೋತ್ರ.

ಇದು ಶಿವಸ್ತುತಿರೂಪವಾಗಿದೆ; ವೃತ್ತ 33. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಮಂಡಿತವುಂಡರೀಕನಯನೋಜ್ವಲಬಾಣ ಪರೇಶ ಮೇರುಕೋ ।
ದಂಡ ಪಿಜಂಡಮಧ್ಯನಿಜಡೀಕೃತಲೋಕ ಗಿರೀಶ ದುಃಖಮಂ ॥
ಖಂಡಿಸಿ ಭೋಗಮೋಕ್ಷಸುಖಪೀಯುವುದೆನ್ನತೆ ಭಕ್ತಿಯಿಂದ ನಂ ।
ಜುಂಡನು ನಿನ್ನ ಭವ್ಯನುತಿಯನ್ನೆಸಗಿರ್ಪನು ಶೈಲಜಾಧವಾ ॥

5 ಶಂಕರಾಷ್ಟಕ.

ಇದರಲ್ಲಿ ತೂಣಕವೃತ್ತಗಳು 8 ಇವೆ. ಒಂದು ವೃತ್ತವನ್ನು ತೆಗೆದು ಬರೆಯುತ್ತೇವೆ :—

ನಿನ್ನ ನಾಮವನ್ನು ಪೇಳಿ' ಧನ್ಯನಾಗಲೊಲ್ಲದೆ ।
ಹೊನ್ನುಹೆಣ್ಣುಮಣ್ಣೆನಾಸೆಯನ್ನು ತಾಳಿ ನಿಲ್ಲದೆ ॥
ಕುನ್ನಿಯಂತೆ ಸುತ್ತಿ ಸೌಖ್ಯವನ್ನು ಪೊಂದಲಿಲ್ಲದೆ ।
ಬನ್ನವಾಂತು ಮೂಢನಾದೆಯೆನ್ನ ಕಾಯೊ ಶಂಕರಾ ॥

6 ಲಿಂಗಸ್ತುತಿ.

ಇದರಲ್ಲಿ 27 ಪದ್ಯಗಳಿವೆ. ಒಂದು ಪದ್ಯವನ್ನು ತೆಗೆದುಬರೆಯುತ್ತೇವೆ:

ಎನ್ನಯ ಮನದಲಿ ನೆಲಸಿಹ ಲಿಂಗಂ । ಎನ್ನಯ ಪಾಪವ ಖಂಡಿಪ ಲಿಂಗಂ ।
ಎನ್ನಯ ಶ್ರೀಗುರುಶಂಕರಲಿಂಗಂ । ಜಯಜಯ ಶಂಭೋ ಶಂಕರಲಿಂಗಂ ॥

7. ಕೃಷ್ಣರಾಜಪಟ್ಟಾಭಿಷೇಕವರ್ಣನೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ಮುಮ್ಮಡಿಕೃಷ್ಣರಾಜನ ಷಷ್ಟಿತಮವತ್ಸರ ಪಟ್ಟಾಭಿಷೇಕಮಹೋತ್ಸವವು ವರ್ಣಿಸಿದೆ.

8. ಕೃಷ್ಣರಾಜ ಭೋಗಾವಳಿ.

ಇದರಲ್ಲಿ 27 ಪದಗಳಿವೆ. ಒಂದು ಪದವನ್ನು ತೆಗೆದು ಬರೆಯುತ್ತೇವೆ :—

ಮಾರನ ಮಾಹಿದ ಜೆಲುವನು ಧರೆಯೊಳು । ಬೀಜುವನೀದೊರೆಯು । ಜೆಲುವನು
ನಾರಿಯ ಜಗವಂಪೊರೆಯಲು ನಲಿಯುತ । ತೋಜುವನಾಹರಿಯು । ಧರೆಯೊಳು॥

9. ಶಿವಾರ್ಧಸ್ತೋತ್ರ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 127; ಶಿವಸ್ತುತಿರೂಪವಾಗಿದೆ. ಮುಮ್ಮಡಿಕೃಷ್ಣರಾಜನ ಅನುಗ್ರಹವು ತಪ್ಪಿದಮೇಲೆ ಈ ಗ್ರಂಥವನ್ನು ಬರೆದುದಾಗಿ ಪ್ರತೀತಿ ಇದೆ.

10. ಕೃಷ್ಣರಾಜಶೃಂಗಾರಶತಕ.

ಇದರಲ್ಲಿ 101 ಕಂದಗಳಿವೆ; ಅಲ್ಲಲ್ಲಿ ಗದ್ಯಭಾಗವೂ ಇದೆ. ಕೃಷ್ಣರಾ

ಜನು ಗಜಾರೂಢನಾಗಿ ಬೀದಿಯಲ್ಲಿ ಬರುವಾಗ ಅವನನ್ನು ನೋಡಿದ ಪುರಸುಂದರಿಯರ ಮನೋವೃತ್ತಿಗಳನ್ನು ವಿವರಿಸುವುದಾಗಿ ಕವಿ ಹೇಳುತ್ತಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ನಾರಿಯೆ ಭುವನಕ್ಕಿವ ಜಂ । ಭಾರಿಯೊ ಭುಜಯುಗ್ಮದಿಂದಮವನಿಯೊಳಿಹ ದೈ ।
ತ್ಯಾರಿಯೊ ನೇತ್ರದ್ವಯದ ಪು । ರಾರಿಯೊ ಶ್ರೀಕೃಷ್ಣರಾಜನಾವವನಮ್ಮಾ ॥
ಪಿಡಿನಡೆಯಿಂ ನಿಡುಜಡೆಯಿಂ । ಬಡನಡುವಂ ಬಳ್ಕುವಂತೆ ಭಾರಸ್ತನಗಳ್ ।
ಜಡಿಯುತ್ತಿರೆ ಜಗದೊಡೆಯನ । ಸಡಗರದಿಂ ನೋಱಿಪ್ಪೆಳೊರ್ವ ಚದುರೆಯು
ಬೆಡಗಿಂ ॥
ಸ್ಮರನಿಂ ಪೆರ್ಚಿದ ಕುಸುಮಾ । ಕರನಿಂ ವಿರಹಾಗ್ನಿ ಹೆಚ್ಚಿ ಕಂದಿ ಪಿಮಾನೀ ।
ಕರನಿಂ ಮಱುಗುವೆನು ಶಿವಂ । ಕರ ನೀಂ ಶ್ರೀ ಕೃಷ್ಣರಾಜ ಕರುಣದಿ ಸಲಹೈ ॥

———

ರಂಗಶಾಸ್ತ್ರಿ. 1849.

ಈತನು ನರಸಿಂಹಪುರಾಣಸ್ಥವಾದ ಪ್ರಹ್ಲಾದಚರಿತ್ರೆಗೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ; ಶ್ರೀರಂಗಪಟ್ಟಣದವನು. ಶಕ 1770 ನೆಯ ಕೀಲಕದಲ್ಲಿ (1849) ಈ ಟೀಕೆಯನ್ನು ಬರೆದಂತೆ ಹೇಳುತ್ತಾನೆ. ಇವನ ಟೀಕೆಗೆ ವಿದ್ವತ್ಪ್ರತೋಷಿಣಿ ಎಂದು ಹೆಸರು. ಅಧ್ಯಾಯ 2.

———

ಲಿಂಗ. ಸು. 1850.

ಇವನು ಮಕರಾಂಕಸೇನಕಥೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ವೀರಶೈವಕವಿ ಎಂದು ತೋರುತ್ತದೆ. ಇವನ ಕಾಲವು ಸುಮಾರು 1850 ಆಗಿರಬಹುದು. ನಂಜಪುರಿಜೆನ್ನಕೇಶವ, ರಾಘವೇಂದ್ರಗುರುಮೂರ್ತಿ ಇವರುಗಳನ್ನು ಸ್ತುತಿಸಿದ್ದಾನೆ. ಪೂರ್ವಕವಿಗಳಲ್ಲಿ ರಾಘವಾಂಕ, ಹರಿಹರ, ಹಂಪ, ನಾಗವರ್ಮ ಇವರುಗಳನ್ನು ಸ್ಮರಿಸಿದ್ದಾನೆ. ತನ್ನ ಗ್ರಂಥದ ವಿಷಯವಾಗಿ ಹೀಗೆ ಹೇಳುತ್ತಾನೆ :—

ವನಿತೆಯ ಸವಿನುಡಿಗಿಂದಂ । ಘನವಾಗಿಹುದಮೃತಸಾರ ಲಿಂಗನ ಕೃತಿಯೊಳ್ ॥

ಅಳಿಯಲಿಂಗರಾಜನೂ ಇದೇ ಹೆಸರಿನ ಒಂದು ಯಕ್ಷಗಾನವನ್ನು ಬರೆದಿದ್ದಾನೆ. ಈ ಕವಿ ತದ್ಭಿನ್ನನೆಂದು ತೋರುತ್ತದೆ.

———

ಅಪರಾಳತಮ್ಮಣ್ಣ. ಸು. 1850.

ಈತನು ಕೃಷ್ಣಪಾರಿಜಾತ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನ ಸ್ಥಳ ರಾಯಿಚೂರು. ಇವನು ಸುಮಾರು 1850 ರಲ್ಲಿ ಇದ್ದಿರಬಹುದು.

ಆರ್ಯಾಚಾರ್ಯ. ಸು. 1850.

ಈತನು ಲಘು ಅಧ್ಯಾತ್ಮಮಾಲೆಯನ್ನು ಬರೆದಿದ್ದಾನೆ. ಇವನು ಮಾಧ್ವ ಕವಿ; ಸುಮಾರು 1850 ರಲ್ಲಿ ಇದ್ದಿರಬಹುದು. ಇವನ ಗ್ರಂಥವು ದ್ವೈತಸಿದ್ಧಾಂತವನ್ನು ಸಂಗ್ರಹವಾಗಿ ಹೊಗಳುತ್ತದೆ.

ನಂದಪ್ಪ. ಸು. 1850.

ಈತನು ಪ್ರಭುಚರಿತ್ರೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಗುರು ಚೆನ್ನಮಲ್ಲಿಕಾರ್ಜುನ, ಸ್ಥಳ ಹೊನಕೋಟೆ. ಇವನು ಸುಮಾರು 1850 ರಲ್ಲಿ ಇದ್ದಿರಬಹುದು. ಇವನ ಗ್ರಂಥದಲ್ಲಿ ಪ್ರಭುದೇವನ ಚರಿತೆ ಹೇಳಿದೆ.

ವೇದಾಂತರಾಘವಾಚಾರ್ಯ. 1851.

ಈತನು ಶಾಲ್ವದ ಕೃಷ್ಣರಾಜನ (1769) ನಿಜದೀಪಿಕಾರತ್ನಕ್ಕೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ; ಮುಮ್ಮಡಿಕೃಷ್ಣರಾಜನ ಆಸ್ಥಾನವಿದ್ವಾಂಸನೆಂದೂ ಸಂಸ್ಕೃತಾಂಧ್ರಕರ್ನಾಟಕಕವಿತಾವಿಶಾರದನೆಂದೂ ತಿರುಮಲಸೋಮಯಾಜಿಯ ಮಗನೆಂದೂ ಹೇಳಿಕೊಂಡಿದ್ದಾನೆ. ಈ ಟೀಕೆಯನ್ನು 1851 ರಲ್ಲಿ ಬರೆದಂತೆ ಹೇಳುತ್ತಾನೆ.

ಮಾನವಿ ವೀರಪ್ಪ. 1851.

ಈತನು ಕಥಾಸಾಗರವನ್ನು ಒರೆದಿದ್ದಾನೆ. ಇವನು ವೀರಶೈವಕವಿ ಎಂದು ತೋರುತ್ತದೆ. ಇವನ ಸ್ಥಳ ಮುಚ್ಚಳ್ಳಿ. ಈ ಗ್ರಂಥವನ್ನು 1851 ರಲ್ಲಿ ಬರೆದಂತೆ ಹೇಳುತ್ತಾನೆ. ಇದರಲ್ಲಿ 40 ಕಥೆಗಳು ಬೇಕಿವೆ.

ಆಳಿಯ ಲಿಂಗರಾಜ (1823–1874).

ಈತನು ನಮಗೆ ತಿಳಿದಮಟ್ಟಿಗೆ (1) ಅಂಗದಸಂಧಾನ, (2) ಇಂದ್ರಕೀಲ,

(3) ಕುಶಲವರ ಕಥೆ, (4) ಕೃಷ್ಣಬಾಲಲೀಲೆ, (5) ಕೃಷ್ಣಾರ್ಜುನರ ಕಾಳಗ, (6) ಗಯಚರಿತ್ರೆ, (7) ಗಿರಿಜಾಕಲ್ಯಾಣ, (8) ಚಂದ್ರಾವಳೀಕಥೆ, (9) ಚಂದ್ರಾವಳಿಯ ಜೋಗಿಹಾಡು, (10) ಚಿಕ್ಕ ಪಟ್ಟಾಭಿಷೇಕ, (11) ಚೂಡಾಮಣಿ, (12) ಜಲಂಧರಕಾಳಗ, (13) ತಾರಕವಧೆ, (14) ದ್ರೌಪದೀಸ್ವಯಂವರ, (15) ನರಪತಿಚರಿತ, (16) ನಳಕೂಬರವಿಲಾಸ, (17) ನಳಚರಿತ್ರೆ, (18) ಪಂಜರಶಂಕರಲೀಲೆ, (19) ಪಾರಿಜಾತಾಪಹರಣ, (20) ಪುತ್ರಕಾಮೇಷ್ಟಿ, (21) ಪ್ರಭಾವತಿ ಪರಿಣಯ, (22) ಬಭ್ರುವಾಹನಕಾಳಗ, (23) ಬಾಲಲೀಲೆ, (24) ಮಕರಧ್ವಜನ ಕಥೆ, (25) ಮದಾಲಸಾಪರಿಣಯ, (26) ಮಹಾಲಿಂಗರಚರಿತ್ರೆ, (27) ಶ್ವೇತಾರಣ್ಯಕಥೆ, (28) ಮೋಡಿನಾಟಕ, (29) ರಾಮೋದಯಕಥೆ, (30) ರುಕ್ಮಾಂಗದಚರಿತ್ರೆ, (31) ಲಾವಣಿಗಳು, (32) ವನವಾಸರಾಮಾಯಣ, (33) ವಾಲಿಸುಗ್ರೀವರ ಕಾಳಗ, (34) ವಿರಾಟಪರ್ವ, (35) ವೀರಭದ್ರಪ್ರಲಯ, (36) ಶೃಂಗಾರರೂಪೋದಾಹರಣಪದ, (37) ಸೀತಾಕಲ್ಯಾಣ, (38) ಸೀತಾಪಹಾರ, (39) ಸೀತಾನ್ವೇಷಣೆ, (40) ಸುಧನ್ವನ ಕಾಳಗ, (41) ಸೇತುಬಂಧ, (42) ಸ್ವಯಮಂತಕೋಪಾಖ್ಯಾನ—ಈ ಗ್ರಂಥಗಳನ್ನು ಬರೆದಿದ್ದಾನೆ. ಇವಲ್ಲದೆ (43) ಶಿವಭಕ್ತಿರತ್ನಾಕರ, (44) ಮಹಾಲಿಂಗನಕ್ಷತ್ರಮಾಲಿಕೆ, (45) ಶ್ರೀಕಂಠನಕ್ಷತ್ರಮಾಲಿಕೆ, (46) ವೀರೇಶತಾರಾವಳಿ, (47) ಲಂಕಾದಹನ ಎಂಬ ಗ್ರಂಥಗಳನ್ನೂ ಬರೆದಿದ್ದಾನೆ ಎಂದು ಕೆಲವರು ಹೇಳುತ್ತಾರೆ.

ಇವನು ಮೈಸೂರು ಅರಸುಗಳ ಸಮುದಾಯಕ್ಕೆ ಸೇರಿದವನು. ಇವನ ತಂದೆ ಲಿಂಗರಾಜ, ತಾಯಿ ಕೆಂಪಮ್ಮಣ್ಣಿಯವರು, ಗುರು ವೇದಾಂತಾಚಾರ್ಯವಂಶೋದ್ಭವನಾದ ಚನುವೀರದೇಶಿಕ. ಇವನು ಶಕ 1745 ಸ್ವಭಾನುವರ್ಷದಲ್ಲಿ (1823) ಹುಟ್ಟಿದನು; ಶಕ 1796 ಭಾವದಲ್ಲಿ (1874) ಗತಿಸಿದನು. ಈತನು ಬಾಲ್ಯದಿಂದ ಮೈಸೂರುದೊರೆಯಾದ ಮುಮ್ಮಡಿಕೃಷ್ಣರಾಜನ (1799-1868) ಪೋಷಣೆಯಲ್ಲಿದ್ದು ವಿದ್ವಾಂಸನಾದನು. ಆ ದೊರೆ ಇವನಿಗೆ ದೊಡ್ಡಪುಟ್ಟತಾಯಮ್ಮಣ್ಣಿ, ಚಿಕ್ಕಪುಟ್ಟತಾಯಮ್ಮಣ್ಣಿ ಎಂಬ ಇಬ್ಬರು ಕನ್ಯೆಯರನ್ನು ಮದುವೆಮಾಡಿ ಅಸದಿಮಿತವಾದ ಧನಕನಕಾದಿಗಳನ್ನು ಕೊಟ್ಟನು. ಈ ಕಾರಣದಿಂದ ಇವನಿಗೆ ಅಳಿಯಲಿಂಗರಾಜ ಎಂಬ ಹೆಸರು ಬಂದಿತು. ಐಶ್ವರ್ಯವಂತನಾಗಿದ್ದರೂ ಈತನು ಸರ್ವಕಾಲದಲ್ಲಿಯೂ ವಿದ್ವಜ್ಜನ ಸಹವಾಸ, ಪಂಡಿತಪ್ರಮಾಣ, ಗ್ರಂಥರಚನೆ ಇವುಗಳಲ್ಲಿಯೇ ಆಸಕ್ತನಾಗಿದ್ದು ಸಂಸ್ಕೃತಕರ್ಣಾಟಭಾಷೆಗಳಲ್ಲಿ ಉದ್ದಾಮಪಾಂಡಿತ್ಯವನ್ನು ಪಡೆದು ಆಕಾಲದ ಕರ್ಣಾಟಕವಿಗಳಲ್ಲಿ ಅಗ್ರೇಸರನೆನಿಸಿಕೊಂಡಿದ್ದನು. ಸಂಗೀತವೇ ಮೊದಲಾದ ಕಲೆ

ಗಳಲ್ಲಿಯೂ ನಿಪುಣನೆನಿಸಿಕೊಂಡಿದ್ದನು. ಈತನ ಸಭೆಯಲ್ಲಿ ಯಾವಾಗಲೂ ದೊಡ್ಡ ವಿದ್ವಾಂಸರು ಸೇರಿ ನಾನಾವಿಧಗ್ರಂಥಗಳನ್ನು ಅವಲೋಕಿಸಿ ಅರ್ಥಾನುವಾದಮಾಡುತ್ತ ಇದ್ದುದರಿಂದ ಇವನ ಸಾಧಾರಣಸೇವಕರೂ ಕೂಡ ವ್ಯಾಯಿಕವಾಗಿ ಕವಿತಾಶಕ್ತಿಯನ್ನು ಪಡೆದಿದ್ದರು. ದಾತೃತ್ವ, ವಿದ್ವತ್ಪಕ್ಷಪಾತ ಇವುಗಳಲ್ಲಿ ಈತನು ಬಹಳ ಹೆಸರುವಾಸಿಯನ್ನು ಹೊಂದಿದ್ದನು. ದೊರೆಯ ಸಭೆಯಲ್ಲಿ ಇವನಿಗೆ ಉಭಯಕವಿತಾವಿಶಾರದ ಎಂಬ ಬಿರುದು ಪ್ರಾಪ್ತವಾಯಿತು. ಕೆಲವು ಗ್ರಂಥಗಳ ಆರಂಭದಲ್ಲಿ ಮುಮ್ಮಡಿಕೃಷ್ಣರಾಜ, ಅವನ ಮಹಿಷಿ ಲಿಂಗಾಂಬೆ ಇವರುಗಳನ್ನು ವಂದಿಸಿದ್ದಾನೆ.

ಚಂಪು, ಸಾಂಗತ್ಯ, ಷಟ್ಪದಿ, ಯಕ್ಷಗಾನ, ಶತಕ, ಹಾಡು, ಲಾವಣಿ ಇವೇ ಮೊದಲಾದ ರೂಪದಲ್ಲಿರುವ ಇವನ ಗ್ರಂಥಗಳು ಈತನ ಸರ್ವತೋಮುಖವಾದ ಕವಿತಾಶಕ್ತಿಯನ್ನು ಸೂಚಿಸುತ್ತವೆ. ಕೆಲವುಗ್ರಂಥಗಳ ರಚನಾಕಾಲವನ್ನು ವಿಶೇಷವಾಗಿ ಕಲಿವರ್ಷದಲ್ಲಿಯೂ ಒಂದೆರಡುಕಡೆ ಶಕವರ್ಷದಲ್ಲಿಯೂ ಹೇಳಿದ್ದಾನೆ. ಶಕ 1775ರಲ್ಲಿ (1852) ಮದಾಲಸಾಪರಿಣಯ, ಸ್ಯಮಂತಕೋಪಾಖ್ಯಾನ ಇವುಗಳನ್ನೂ, ಶಕ 1783ರಲ್ಲಿ (1860) ಜಲಂಧರಕಾಳಗವನ್ನೂ, ಕಲಿ 4953ರಲ್ಲಿ (1851) ನಳಕೂಬರವಿಲಾಸವೆಂಬ ಯಕ್ಷಗಾನವನ್ನೂ, ಕಲಿ 4962 ರಲ್ಲಿ (1861) ಗಿರಿಜಾಕಲ್ಯಾಣವನ್ನೂ, ಕಲಿ 4964 ರಲ್ಲಿ (1862) ದ್ರೌಪದೀಸ್ವಯಂವರವನ್ನೂ, ಕಲಿ 4966 ರಲ್ಲಿ(1864) ಚಂದ್ರಾವಳೀಕಥೆಯನ್ನೂ,ಕಲಿ 4967 ರಲ್ಲಿ(1865) ಕುಶಲವರ ಕಥೆ, ಸುಧನ್ವನ ಕಾಳಗ ಇವುಗಳನ್ನೂ, ಕಲಿ 4968 ರಲ್ಲಿ (1866) ವಿರಾಟಪರ್ವ, ಇಂದ್ರಕೀಲ ಕೃಷ್ಣಬಾಲಲೀಲೆ, ಬಭ್ರುವಾಹನಕಾಳಗ, ಸೀತಾಪಹಾರ ಇವುಗಳನ್ನೂ, ಕಲಿ 4969 ರಲ್ಲಿ (1867) ಪಾರಿಜಾತಾಪಹರಣ, ಮೋಡಿನಾಟಕ, ನರಪತಿಜರಿತ ಇವುಗಳನ್ನೂ ಬರೆದಂತೆ ಆ ಗ್ರಂಥಗಳಿಂದ ತಿಳಿಯುತ್ತದೆ.

ಪೂರ್ವಕವಿಗಳಲ್ಲಿ ರಾಘವಾಂಕ, ಹರಿಹರ, ದೇವೇಶ್ವರ, ಹಂಪ, ನಾಗವರ್ಮ ಇವರುಗಳನ್ನು ಸ್ಮರಿಸಿದ್ದಾನೆ.

"ಶ್ರೀ ಕೃಷ್ಣನೃಪತಿಳಕಜಾಮಾತೃತಾಭಾಗ್ಯಸಾಕಲ್ಯನಿಧಿ, ಶ್ರೀ ಕಾಳಿಕಾರಮಣ ನಿರುಪಮಕೃಪಾಲಬ್ಧ ವಿದ್ಯಾವಿನೋದವಿಕಸಿತ, ಅಧ್ಯಾತ್ಮಭೂವನಿತಾನರ್ತನರಂಗಭೂತಚರಿತ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ತನ್ನ ಕವಿತಾತಾತ್ಪರ್ಯವನ್ನು ಪ್ರಭಾವತೀಪರಿಣಯದ ಈ ಪದ್ಯಗಳಲ್ಲಿ ಹೀಗೆ ಹೇಳಿಕೊಂಡಿದ್ದಾನೆ:—

ಇನಿದೊಸರ್ವ ತನಿಮಾಪಿನೊಳ್ಪಣ್ಣ ರಸದಿ ಜಿಲು ।
ಕೆನೆವಾಲನೆಱೆದುಸಿರದಚ್ಚವುಡಿಯನ್ನುದುರ ।
ನನುವಱಿದು ಕಾಶ್ಮೀರದೊಡವೆರಸಿ ಪಳುಕುಸಕ್ಕರೆನುಚ್ಚ ಸಾರ್ಚಿ ನುಣ್ಪಿಂ ॥
ಇನಿಯುಳಿಸಿವಾಯ್ಗೆಱೆಯುತಾರಸಾಯನನು ಗ ।
ಳ್ಕನೆ ಮುಕ್ಕುಳಿಸುತವಳು ಮಗುಟೀಯೆ ನಪದು ಮು ।
ಮ್ಮನೆ ನಲಿವ ಮನದನ್ನನೊಳ್ಸೊಗದೊಲೆನ್ನ ಕೃತಿ ರಸಿಕರಂ ಮರುಳಿಸಗದೇ ॥
ಇದು ಪೊಸತು ರೀತಿ ಭಾಪಿದುವೆ ರಸವೃತ್ತಿ ಮ ।
ತ್ತಿದಿದಲಂಕೃತಿ ಚಾತುರೀ ಮಾಧುರೀಪದಮು ।
ದಿದುವೆ ಮರ್ಮು ಸರಸೋಕ್ತಿಯತ್ಯುಕ್ತಿಯಚ್ಚರಿಯಿದಿದು ಮನೋಗಮಭಾವದ ॥
ಪದಪಿದುವೆ ಭಲರೆ ಲಸದರ್ಥಗೌರವಮಿದಂ ।
ತಿದು ನವರಸಾಧಾರಸಾರಕೃತಿಯೆಂದು ಕೋ
ವಿದರೊಲ್ದು ವೆಚ್ಚೆಯೊಚ್ಚತಮಾಂ ಸಿಮುರ್ಚಿದೆಂ ಸುಶ್ರಾವ್ಯಮುಂ ಕಾವ್ಯಮುಂ ॥

ಇವನ ಗ್ರಂಥಗಳಲ್ಲಿ ಗಯಚರಿತ್ರೆ, ನಳಕೂಬರವಿಲಾಸ ಇವೆರಡೂ ಚಂಪೂರೂಪವಾಗಿಯೂ ಯಕ್ಷಗಾನರೂಪವಾಗಿಯೂ ಇವೆ; ಗುಬ್ಬಾಕಲ್ಯಾಣವನ್ನು ಸಾಂಗತ್ಯದಲ್ಲಿಯೂ ಯಕ್ಷಗಾನರೂಪವಾಗಿಯೂ ಬರೆದಿದ್ದಾನೆ; ನರಪತಿಚರಿತವು ಅಲಂಕಾರಗ್ರಂಥ; ಪ್ರಭಾವತೀಪರಿಣಯವು ವಾರ್ಧಕಷಟ್ಪದಿಯಲ್ಲಿದೆ; ವೀರಭದ್ರಶತಕವು ವೃತ್ತರೂಪವಾಗಿಯೂ ಮಹಾಲಿಂಗಶತಕವು ಕಂದರೂಪವಾಗಿಯೂ ಇವೆ; ಹಾಡುಗಳನ್ನೂ ಲಾವಣಿಗಳನ್ನೂ ಬಿಟ್ಟರೆ ಉಳಿದುವುಗಳೆಲ್ಲಾ ಪ್ರಾಯಿಕವಾಗಿ ಯಕ್ಷಗಾನಗಳಾಗಿವೆ. ಇವುಗಳಲ್ಲಿ ಪ್ರತಿಪಾದಿತವಾದ ಪುರಾಣಕಥೆಗಳು ಹೆಸರುಗಳಿಂದಲೇ ವ್ಯಕ್ತವಾಗುತ್ತವೆ. ಕೆಲವು ಮುಖ್ಯವಾದ ಗ್ರಂಥಗಳನ್ನು ಮಾತ್ರ ಕೆಳಗೆ ವಿವರಿಸುತ್ತೇವೆ.

1. ನರಪತಿಚರಿತ.

ಇದು ಚಂಪೂರೂಪವಾಗಿದೆ; ಸೀಲಕೆ, ಶಬ್ದಾಲಂಕಾರ, ಅರ್ಥಾಲಂಕಾರ ಎಂಬ ಮೂರಾಸಗಳನ್ನು ಒಳಕೊಂಡಿದೆ ಈ ಗ್ರಂಥವನ್ನು ತನ್ನ ಪತ್ನಿಯರಿಗೋಸ್ಕರ ಬರೆದಂತೆ ಕವಿ ಹೇಳುತ್ತಾನೆ. ಲಕ್ಷಣಪದ್ಯಗಳು ಪತ್ನಿಯರನ್ನು ಸಂಬೋಧಿಸಿ ಹೇಳಲ್ಪಟ್ಟಿವೆ. ಉದಾಹರಣಪದ್ಯಗಳೆಲ್ಲಾ ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾಗಿವೆ. ಈ ದೊರೆ ಸಭೆಯಲ್ಲಿ ಈ ಗ್ರಂಥವನ್ನು ಓದಿಸಿ ಕೇಳಿ ಸಂತೋಷ

ಪಟ್ಟ ಕವಿಗೆ ಉಭಯಕವಿತಾವಿಶಾರದ ಎಂಬ ಬಿರುದನ್ನು ಕೊಟ್ಟಂತೆ ಪ್ರತೀತಿ ಇದೆ. ಗ್ರಂಥಾವತಾರದಲ್ಲಿ ವೀರೇಶ್ವರಸ್ತುತಿ ಇದೆ ಬಳಿಕ ಕವಿ ಈಶ್ವರ, ಪಾರ್ವತಿ, ಗಣೇಶ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಉಲ್ಲಾಸಗಳ ಅಂತ್ಯದಲ್ಲಿ ಈ ಗದ್ಯವಿದೆ :—

ಇದು ವಿನಮದಖಿಲಸುರಾಸುರಸ್ತೋಮಮಸ್ತಕತಲವಿನ್ಯಸ್ತಪ್ರಶಸ್ತಕೋಟೀರಕೋಟೀತಟಘಟಿತಮಣಿಗಣಕಿರಣಪಟಲಪಾಟಲಿತಚರಣಪುಂಡರೀಕ ಶ್ರೀವೀರಭದ್ರ ಕರುಣಾಕಟಾಕ್ಷಸಮಾಸಾದಿತಾನಿತರಸಾಧಾರಣಸಾರಸ್ವತೋದಯಕಮನೀಯ-ನಪ್ಪ ನಿಖಿಲಸರಸಕವಿಕುಲತಿಲಕ ಶ್ರೀ ಲಿಂಗರಾಜವಿರಚಿತಮಾದ ನರಪತಿಚರಿತಮೆಂಬಲಂ ಕಾರಶಾಸ್ತ್ರದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಮಹಿಶೂರಪುರ.

ಉತ್ಯುಚ್ಚಸೌಧಶಿಖರಪ್ರತಿಬದ್ಧರತ್ನ । ಪ್ರತ್ಯಗ್ರಕಾಂತಿಚಯಕರ್ಬುರರಾಜಮಾರ್ಗಂ ।
ಸತ್ಯೈಕತಾನಮವನೀಸುರಭಾಗಧೇಯಂ । ನಿತ್ಯಂ ಪುರಂ ಮೆಱೆವುದೀಮಹಿಶೂರನಾಮಂ ॥

ಪರಿಕರಾಂಕುರಾಲಂಕಾರ.

ಧರಣಿಪಕೃಷ್ಣೇಂದ್ರನ ಸುಂ । ದರತೆಯನಾಲಿಸುತೆ ಕಂಡು ಕನಸಿನೊಳವನಂ ।
ಧರಿಸಿತ್ತು ದೃಕ್ಫಲಮನಿ । ತೆಱದಿಂ ಚಕ್ಷುಶ್ಚಾಪೋಂಗನಾನಿಕುರುಂಬಂ ॥

ನಿಂದಾಸ್ತುತ್ಯಲಂಕಾರ.

ಪತರ ಸಾಸಂ ಕೃಷ್ಣ । ಕ್ಷ್ಮಾತರುಣೀರಮಣ ಪೇೞ ನೀನೆಜ್ಜೊಡೆ ಬ ।
ಲ್ಯಾತಾಶುಗಮೊಂದಂ ರಿವು । ಜಾತಂ ಬಿಡುತಿಹುದು ನೋಡ ನಂಚಾಶುಗಮಂ ॥

ವಿಭಾವನಾಲಂಕಾರ.

ರಿಪುವನಿತಾಜನಾಶ್ರುಜಲಧಾರೆಯಿ-ನಾಗಿಹ ಮೇಘಕಾಲದೊಳ್ ।
ನೃಪವರ ಕೃಷ್ಣರಾಜ ತವ ಕೀರ್ತಿಮರಾಳ ವಿರೂಢಹರ್ಷದಿಂ ॥
ದಪಗತಶಂಕೆಯಿಂ ತೊಱಿಲ್ಗುಮೆಲ್ಲ ಜಗತ್ತಿನೊಳಂ ಪ್ರತಾಪಸ ।
ತ್ಪ್ರಪನನುಮಾಗಳುಂ ಬೆಳಗುತಿರ್ಪನುದೀಕ್ಷಿಸೆ ಚಿತ್ರಮಲ್ತೆಪೇೞ್ ॥

2. ಪ್ರಭಾವತೀಪರಿಣಯ.

ಇದು ಷಾರ್ದಕಷಟ್ಪದಿಯಲ್ಲಿ ಬರೆದಿದೆ; ದೊಡ್ಡ ಗ್ರಂಥ. ಇದರಲ್ಲಿ "ಹರಿವಂಶದೊಳಗೆ ರಂಜಿಪ ರುಕ್ಮಿಣೀಕುಮಾರನು ದನುಜಸುತೆಯ ಪ್ರಭಾವತಿಯನೊಲಿಸಿ ಪರಿಣಯವಾದ" ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಈಶ್ವರ, ಪಾರ್ವತಿ, ಗಣೇಶ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ :—.

ಸಮುದ್ರ.

ಸಿರಿಯ ಪೊಸ ತವರೂರು ಪವಳರನ್ನದ ಪಾರು |
ಸುರರೈಸಿರಿಯ ನಾಡು ಹರಿಯಿರುವ ಮಣಿಬೀಡು |
ಅರಸಂಜೆಗಳ ಗೊತ್ತು ಬಾಡಬನ ಸವಿದುತ್ತು ಮುತ್ತುಸಸಿಗಿದುವೆ ಬಿತ್ತು ||
ಪೆಪ್ಪೆಗೆ ಪುಟ್ಟಿದ ನೆಲೆಯು ತಿರೆವೆಣ್ಣ ಮೇಖಲೆಯು |
ವರುಣಗಿರ್ವಾಗರಂ ನೀರ್ದೇರಿನೋಗರಂ |
ಮಜ್ಜೆವೊಕ್ಕ ಗಿರಿಯ ಬೈತಿಡುವೊಡಲ್ ತಾನೆನುತ್ತಿಂಗಡಲ್ ಕಂಗೊಂಡುದು||

3. ನಳಕೂಬರವಿಲಾಸ (ಚಂಪು)

ಆರಂಭದಲ್ಲಿ ವೀರಭದ್ರಸ್ತುತಿ ಇದೆ. ಕಥಾಗರ್ಭವನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ—

ನಳಕೂಬರನಸುಗೆಯ ಶರ | ದಳತೆಗೆ ಮೈಯಿಕ್ಕಿ ಸೊಕ್ಕಿ ಮನದನ್ನಳ ಕೋ |
ಮಳಲೀಲಾಚಾಳವ ನೆನೆ | ದಲಿದ ಪರಿಯನ್ನು ಪೇಟ್ವೆನಿಳೆ ಮೆಚ್ಚುವವೋಲ್ ||

ಈ ಗ್ರಂಥದಿಂದ ನಳಕೂಬರನ ವಿರಹಸೂಚಕವಾದ ಒಂದು ಪದ್ಯವನ್ನು ಉದಾಹರಿಸುತ್ತೇವೆ :—

ಕಾಂತೆಯ ಏಧುಮುಖಜಳದಳ | ಕಾಂತೆಯ ನಿಜಲಲಿತವಿಲಸಿತಾಪಹೃತವಿಟ |
ಸ್ವಾಂತೆಯ ಕಾಣದೆ ಕುಂದಸು | ದಂತೆಯ ತಾಂ ಕಂತುಕುಂತಪತಿಗೆಡೆಯಾದಂ ||

1. ವೀರಭದ್ರಶತಕ.

ಇದರಲ್ಲಿ 101 ವೃತ್ತಗಳಿವೆ; ಪ್ರತಿವೃತ್ತವೂ "ಶ್ರೀ ವೀರಭದ್ರೇಶ್ವರಾ" ಎಂದು ಮುಗಿಯುತ್ತದೆ. ಪೂರ್ವಕವಿಗಳಲ್ಲಿ ವಾಲ್ಮೀಕಿ, ಭೋಜ, ಕಾಳಿದಾಸ, ಬಿಲ್ಹಣ ಇವರುಗಳನ್ನು ಸ್ಮರಿಸಿದ್ದಾನೆ. ಕೆಲವೆಡೆಗಳಲ್ಲಿ ಸೋಮೇಶ್ವರಶತಕವನ್ನು ಅನುಸರಿಸಿರುವಂತೆ ತೋರುತ್ತದೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಸಾಲ್ವಿಡಿದು ಮೇಲ್ವಾಯ್ವ ನಾಲ್ದೋಳ ಬೆಟ್ಟುವಗೆಯ ಸಾರದೆಯಾ
ಣ್ಮರ್ ಮುಂಕೊಂಡ ಮೊಗ್ಗರಂಗೊಂಡು ಮೊಟ್ಟುವ ಬೊಪ್ಪೆಯರ್ಕಳ ತಲೆಯ
ಟ್ಟಾಳೆಯೊಳೊಪ್ಪಿ ಮಿಱುಗುವ ರನ್ನವೆಳಗನೊಳಕೊಂಡು ತನ್ನ ಕಳೆಯಿಂ ನೇಸಱಿ
ಕೆಂಗದಿರ್ಗಳಂ ಕಂದಿಸಿ ಬಾಂಬೊಪ್ಪೆಯೊಳ್ ಬೆಳೆದ ಕೆಂದಾವರೆಬಿ-ದದಂದವಂ
ನಂದಿಸಿ ಮೈಮೆವಿಡಿದ ತನ್ನಡಿದಾವರೆಯಂ ಎಡೆವಿಡದೆ ನನ್ನಿವಪೆದಡಿಗಡಿಗೆ ಸಡ
ಗರಂಬಡೆದೊಡನೊಡನೊಡಲುಬ್ಬಿ ನಿಡಿದುಂ ಜಾನಿಸುತ್ತೆತ್ತೆತ್ತಲುಂ ಜಸಂಬೆತ್ತ
ಕಿತ್ತಡಿಯರ್ಗ ತೆತ್ತಿಗನಪ್ಪ ಮಿಡನ ಕಡುಸಿರಿವಡೆದ ಕಡೆಗಣ್ಣ ಕುಡಿವೆಳಗ ಜೊನ್ನ
ವಲದಿಂ ಪೆಂಪುವೆತ್ತ ಕಬ್ಬದೇಟ್ಗಿಯಂ ಪಡೆದು ಮೂಜಗಂಗಳೊಳ್, ಸೋಜೆ
ಗಂಗುಡುವ ಪತ್ತರಕಿತ್ತಿಮೊತ್ತವಂ ಗೊಂಟುಗಳೊಳಂಟಿಸಿ ಜಪ್ಪನ್ನದೇಶದರಸುಗ
ಳೊಪ್ಪದಿಂದೊಪ್ಪಿಪ ಕಪ್ಪವನೊಪ್ಪುಗೊಳುತ್ತ ಮಹಿಸೂರೊಳುದ್ದವಾದ ಗದ್ದುಗೆ
ಯೊಳ್ ವಂಡಿಸಿ ಮನ್ನೆಯಗಂಡರ ಗಂಡನಾದ ಕೃಷ್ಣರಾಜಂಗೆ ಕೂರ್ಮೆಯಳಿಯ
ನಾಗಿ ದೊಡ್ಡಲಿಂಗರಾಜನ ಮಡದಿ ಕೆಂಪದೇವಾಂಬೆಯ ಗಬ್ಬಪಾಲ್ಗಡಲೆ
ಪುಣ್ಣಮೆತಣ್ಗದಿರನಾಗಿ ಸಿರಿನುಡಿವೆಣ್ಗೊಡವೆರೆದ ಲಿಂಗರಾಜನುಸಿರಿದ ವೀರಭದ್ರ
ಶತಕಂ ಸಂಪೂರ್ಣಂ.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ನರಿಯಂ ಕೊಲ್ವೊಡೆ ದಿವ್ಯಬಾಣತತಿಯಂ ಸಂಧಾನಮಂ ಗೆಯ್ವುದೇ ।
ಕುಱಿಯಂ ಸೀಳ್ವೊಡೆ ವಜ್ರಸಾರಧನುವಂ ಕೈಗೊಳ್ವುದೇಂ ಚಂದಮೇ ॥
ಸರಿಯಂ ಪೊಂದದ ದಕ್ಷನಂ ವಿಮಥಿಸಲ್ ಕ್ಷುಭ್ಯದ್ದಿಶಾಪಾಲಳೇ ।
ಕರಗೂಪಂ ಮಿಗೆ ತಾಳ್ವರೇ ಭರದಿ ನೀಂ ಶ್ರೀವೀರಭದ್ರೇಶ್ವರಾ ॥
ಸುರಚಾಪಪ್ರಭೆಯಂತೆ ಮೇಘವಿಲಸದ್ವಿದ್ಯುಲ್ಲತಾರೋಚಿಯಂ ।
ತರುನಿದ್ರಾಗತಹೇಮದಂತೆ ಜಲದಿಂಬಬ್ಬೀಟಿ ಬಲ್ಗಳ್ಳಿಯಾ ॥
ಕರದಂತಸ್ಥಿರವನ್ನು ಪೊಂದುತಿರುವೀಸ್ತ್ರೀಚಿತ್ತವಂ ನಂಬಿ ಕಾ ।
ತರಿಸಲ್ಯಾತನ ಬಾಟಿಲು ಗಾಳಿಯ ಸೂಡರ್ ಶ್ರೀವೀರಭದ್ರೇಶ್ವರಾ ॥

೫. ಮಹಲಿಂಗಶತಕ

ಇದು ನೀತಿಬೋಧಕವಾಗಿದೆ. ಪ್ರತಿಪದ್ಯವೂ ಮಹಲಿಂಗ ಎಂದು ಮುಗಿ
ಯುತ್ತದೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಬಾಣಸಿಗ

ಶುಚಿ ನಿರ್ಮಲಮನನಾಪ್ತನು । ರುಚಿಗಳ ಒಲ್ಲವನು ಸೂಪಶಾಸ್ತ್ರಜ್ಞನು ತಾ ।
ನಹಪಲಮನನಾಗಿರುವವ । ನುಚಿತದ ಬಾಣಸಿಗನೆನಿಪನೈ ಮಹಲಿಂಗಾ ॥

6. ಗಿರಿಜಾಕಲ್ಯಾಣ

ಇದು ಸಾಂಗತ್ಯದಲ್ಲಿ ಬರೆದಿದೆ ; ಅಧ್ಯಾಯ 6, ಪದ್ಯ 493.

7. ಪುತ್ರಕಾಮೇಷ್ಟಿ

ಇದು ಯಕ್ಷಗಾನರೂಪವಾಗಿದೆ. ಇದರಲ್ಲಿ

ವರವಾಲ್ಮೀಕಿತಪೋಧನ । ವಿರಚಿತರಾಮಾಯಣಾಬ್ಧಿಮಥನೋದ್ಗತಬಂ।
ಧುರರಾಮಕಥಾಮೃತವ । ನ್ನೆಱೆವೆನು ಬುಧಗ್ಗೆ ಯಕ್ಷಗಾನದೊಳಲೆಯಿಂ ॥

ಎಂದು ಕವಿ ಹೇಳುತ್ತಾನೆ.

8. ಕೃಷ್ಣಾರ್ಜುನರ ಕಾಳಗ

ಇದೂ ಯಕ್ಷಗಾನವೇ. ಇದರಲ್ಲಿ

ಮಱೆವೊಕ್ಕ ಗಯನ ಸಲಹಲು । ಹರಿಯೊಳ್ ಧುರವೆಸಗಿ ಜಲದಿ ಜಯವಂ
ಪಡೆದಾ ।
ನರನ ರಿಪುವಿಘಿನವೈಶ್ವಾ । ನರನ ಚರಿತ್ರವನು ಜಗಮುಘೇ ಎನೆ ಪೇಪ್ಪೆಂ ॥

ಎಂದು ಕವಿ ಹೇಳುತ್ತಾನೆ.

ವೆಂಕಟರಮಣಯ್ಯ. 1857.

ಈತನು ಗಯೋಪಾಖ್ಯಾನವನ್ನು ಬರೆದಿದ್ದಾನೆ ಇವನು ಬ್ರಾಹ್ಮಣಕವಿ ಹರಿತಸಗೋತ್ರದವನು ; ಉಲಿಚನಾಡು ನರಸಯ್ಯನ ಮಗನು. ಇವನ ಸ್ಥಳ ಕೃಷ್ಣಗಿರಿ. " ಸಂಸ್ಕೃತಾಂಧ್ರಕರ್ಣಾಟಭಾಷೆಗಳಲ್ಲಿ ಸರಳಕವಿಸಾರ್ವಭೌಮನೆನಿಸಿ ಬಹುಗ್ರಂಥಕರ್ತೃವಾದ ಪೆನ್ನೆಕ್ ಶಿರಸ್ತೇದಾರ್ " ಎಂದು ಹೇಳಿಕೊಂಡಿದ್ದಾನೆ. ತೆಲುಗಿನಲ್ಲಿ ಅಧ್ಯಾತ್ಮರಾಮಾಯಣವನ್ನು ಬರೆದಿರುವಂತೆ ತಿಳಿಯುತ್ತದೆ. ಗಯೋಪಾಖ್ಯಾನವನ್ನು 1857 ರಲ್ಲಿ ರಚಿಸಿದಂತೆ ಹೇಳುತ್ತಾನೆ.

ಇವನ ಗ್ರಂಥ

ಗಯೋಪಾಖ್ಯಾನ

ಇದು ಚಂಪೂಗ್ರಂಥ ; ಸಂಧಿ 28, ಗದ್ಯ ಪದ್ಯ 1141 ; ಕೆಲವು ಷಟ್ಪದಿಗಳೂ ಇವೆ. ಇದರಲ್ಲಿ ಗಯನೆಂಬ ಗಂಧರ್ವನಿಗೆ ಅಭಯವನ್ನು ಕೊಟ್ಟ

ಪಾರ್ಥನೊಡನೆ ಕೃಷ್ಣನು ಹಾದಿದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ರಾಮನ ಸ್ತುತಿ ಇದೆ. ಬಳಿಕ ಕವಿ ಸೀತೆ, ಶಿವ, ಪಾರ್ವತಿ, ಬ್ರಹ್ಮ, ಸರಸ್ವತಿ, ಗಣಪತಿ, ವ್ಯಾಸ, ವಾಲ್ಮೀಕಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ದ್ವಾರಕಾಪಟ್ಟಣ

ಪರಿಲಸಚ್ಛಂದೋನುವರ್ತಿ ಸದ್ವೃತ್ತಭಾ ।
ಸ್ವರಮಾಗಿಯರ್ಥವಿಸ್ತಾರಮುಂ ತೋಱುತ ।
ಕ್ಷರಪದಂ ತಾನಾಗಿ ಪ್ರಾಸಶೋಭಿತಮಾಗಿ ಯತಿಗಣಾರಾಧ್ಯಮಾಗಿ ॥
ಗುರುಮಾತ್ರೆಗಳ ಕೂಡಿ ಸಂಧಿಸದ್ವಿಗ್ರಹ ।
ಸ್ಫುರಿತಾಶಯಪ್ರದಾಭಿಖ್ಯೆಯಿಂದೊಪ್ಪಿತಾ ।
ಪುರವರಂ ಪ್ರೌಢಕವಿರಚಿತಸತ್ಕೃತಿಯಂತೆ ವಿಬುಧಜಯಸೇವ್ಯಮಾಗಿ ॥
ವಾಜಿಗಳಾತ್ಮವೇಗವಿಭವಾಸಹದುಸ್ಸಹವಾತಸಂಘದ ।
ತ್ತಾಜಿಗಳದ್ಭುತಪ್ಲವಭವಾಶುಗಧಾವಿತಘೋರವಾರಿಮು ॥
ಗಾಜಿಗಳನ್ಯಸೈನಿಕನಿಕಾಯಸುಖಾಸ್ಪದದೇವರಾಜ್ಯಸಂ ।
ಯೋಜಿಗಳೆಂತು ತತ್ಪುರದೊಳೊಪ್ಪುವುವಪ್ರತಿಮಪ್ರಭಾವದಿಂ ॥
ಧರೆಯೊಳ್ ಕೌಶಿಕನಾಮಮಂ ಕೊಳದೆ ಮಾತಂಗಾಶ್ರಯಂ ತಾನೆ ಆ
ಗಿರದೇ ಪುಣ್ಯಜನಾರಿಯೆಂದೆನಿಸದೇಯೆಂದುಂ ಸುರಾವೋದದಿಂ ॥
ಪರಿತುಷ್ಟಾತ್ಮಕನಾಗಿ ಶೋಭಿಸದೆ ಶುಂಭದ್ಭೋತ್ರನಿರ್ಭೇದಿಯಾ ।
ಗಿರದೇ ವರ್ತಿಸಲಾಪುರೀನೃಪಜನಗ್ಗಿರ್ಇಂದ್ರಂ ಸಮಂ ಭಾಸಿಸಲ್ ॥

ನಂಜಯ್ಯ. ಸು 1860.

ಈತನು ತ್ರಿಪುರದಹನ, ರಾಧಾವಿಲಾಸ, ಸೋಮಶೇಖರ ಚಿತ್ರಶೇಖರಕಥೆ ಇವುಗಳನ್ನು ಬರೆದಿರುವಂತೆ ತೋರುತ್ತದೆ. ಇವನು ಗಟ್ಟದ ಕೆಳಗಣಿಂದ ಬಂದು ಅಳಿಯಲಿಂಗರಾಜನ (1823—1874) ಆಶ್ರಿತನಾಗಿದ್ದಂತೆ ತಿಳಿಯುತ್ತದೆ. ಇವನ ಗ್ರಂಥಗಳಲ್ಲಿ ಇವನ ಹೆಸರು ಕಂಠೋಕ್ತವಾಗಿ ಹೇಳಿಲ್ಲ. ಆದರೂ ಮಂಜುನಾಥ ಎಂಬ ಅಂಕಿತದಿಂದ ಏತತ್ಕೃತವೆಂದು ಊಹಿಸಬಹುದಾಗಿ ಪೂರ್ವಿಕರು ಹೇಳುತ್ತಾರೆ. ಇವನ ಗ್ರಂಥಗಳೆಲ್ಲಾ ಯಕ್ಷಗಾನರೂಪವಾಗಿವೆ. ತ್ರಿಪುರದಹನದ ಆರಂಭದಲ್ಲಿ ಈ ಕಂದವಿದೆ:—

ಸ್ಮರಹಗಲೀಲಾಚರಿತೆಯ । ಧರೆಯೊಳ್ ವಿಸ್ತರಿಪೆನೆಂಬ ಕೌತುಕದಿಂದಂ ।
ವಿರಚಿಸುವೆ ಯಕ್ಷಗಾನದಿ । ದುರಿತಾಪಹಮಪ್ಪ ತ್ರಿಪುರವಿಜಯದ ಕಥೆಯಂ ॥

ಸೋಮಶೇಖರಚಿತ್ರಶೇಖರಕಥೆಯಲ್ಲಿ ಲಿಂಗರಾಜನ ಕೃಪೆಯಿಂದ ಆ ಗ್ರಂಥವನ್ನು ಬರೆದಂತೆ " ಕವಿತಾಸತಿಯಂ ನಟಿಸುವ । ದಿವಿಜೇಂದ್ರನ ಪೋಲ್ವ ಲಿಂಗ ಭೂಪನ ಪದಪ । ಲ್ಲವಕರುಣದಿನುಸಿರ್ವೆಂ " ಎಂಬ ಪದ್ಯಭಾಗದಲ್ಲಿ ಹೇಳಿದ್ದಾನೆ. ಈ ಗ್ರಂಥದ ಆದಿಯಲ್ಲಿ ಈ ಪದ್ಯವಿದೆ:—

ಶ್ರೀರಮಣಪ್ರಿಯಮಿತ್ರಂ । ವಾರಣವರಚರ್ಮವಸ್ತ್ರಸಂವೃತಗಾತ್ರಂ ।
ಭೂರಿಸುರಸ್ತುತಿಪಾತ್ರಂ । ಕೋರಿದನೊಲಿದೀಗೆ ಮಂಜುನಾಥಂ ದಯದಿಂ ॥

ನ್ಯಾಪತಿ ಲಕ್ಷ್ಮೀ ನರಸಿಂಹ. ಸು. 1860.

ಈತನು ರಾಮಕಥಾರಂಜನವನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಕೌಂಡಿನ್ಯಗೋತ್ರದವನು; ತಲ್ಪಗಿರಿರಂಗವಿಟ್ಠಲನ ಭಕ್ತನು. ಇವನ ತಂದೆ ಸುಬ್ಬಣ್ಣ; ತಾಯಿ ಲಕ್ಷ್ಮೀವಾಂಬೆ. ಇವನ ಗ್ರಂಥದ ಸುಂದರಕಾಂಡವು 1867 ರಲ್ಲಿ ಮುದ್ರಿತವಾಗಿದೆ.

ಇವನ ಗ್ರಂಥ

ರಾಮಕಥಾರಂಜನ.

ಇದರಲ್ಲಿ ಸುಂದರಕಾಂಡವು ಮಾತ್ರ ಅಚ್ಚಾಗಿದೆ; ಸರ್ಗ 68. ಗ್ರಂಥವು ವೃತ್ತ, ಗೀತಿ, ಸೀಸಪದ್ಯ, ಕಂದ ಇವುಗಳಲ್ಲಿ ಬರೆದಿದೆ. ಕನ್ನಡ ಕವಿತೆಯಾಗಿದ್ದರೂ ತೆಲುಗಿನ ವಾಸನೆ ವಿಶೇಷವಾಗಿ ಕಾಣುತ್ತದೆ. ಇದರಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ:—

ಹರಿವರನದ್ರಿರಾಜನಿಭನಾಗ ಸುವೇಗಯುತ್ತ ಮಹೇಂದ್ರಭೂ ।
ಧರಶಿಖರಾಗ್ರದಲ್ಲಿ ವಿವಿಧಕ್ಷ್ಮಿತಿಜಾಕುಲದಲ್ಲಿ ಶೈಲನಿ ॥
ರ್ಝರಿಯೊಳು ಭಿನ್ನಪಕ್ಷಗಿರಿಸಾಟಿನಿಪಾತವ ಕೂಡಿ ಸೇರಿದ್ದ ।
ಹರಿವರರಾ ಅರೋಗಿನ ಮಹಾತ್ಮನ ಪ್ರೀತಿಯು ಕೂಡೆ ನೋಡಿದರ್ ॥

ನಂಜುಂಡಶಿವಯೋಗಿ. ಸು 1860.

ಈತನು ಅಟವೀಶ್ವರ ಗೀತಾಮಂಜರಿಯನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನ ಗುರು ಅಟವೀಶ್ವರ, ಸ್ಥಳ ಮತಕೂರು. ಇವನು ಸುಮಾರು 1860 ರಲ್ಲಿ ಇದ್ದಿರಬಹುದು. ಇವನ ಗ್ರಂಥದಲ್ಲಿ ಸ್ವಗುರುಸ್ತುತಿರೂಪವಾದ ಹಾಡುಗಳಿವೆ; ಅಲ್ಲಲ್ಲಿ ಕೆಲವು ಕಂದವೃತ್ತಗಳೂ ಇವೆ.

ವೀರೇಶ್ವರಶಾಸ್ತ್ರಿ. ಸು. 1860.

ಈತನು ಸ್ವಕೃತ ವೀರಶೈವಾನ್ವಯಚಂದ್ರಿಕೆಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಗುರು ಚಿನ್ನಬಸವ, ಸ್ಥಳ ಗುಬ್ಬಿ. ಇವನು ಸುಮಾರು 1860 ರಲ್ಲಿ ಇದ್ದಿರಬಹುದು.

ಹಿರಣ್ಯಗರ್ಭ. ಸು 1860.

ಈತನು ಸರಸ್ವತೀಪ್ರಬಂಧವನ್ನೂ ವಿಶ್ವಕೃತಿಪರೀಕ್ಷಣವನ್ನೂ ಬರೆದಿದ್ದಾನೆ. ಇವನು ಜೈನಕವಿ; ಇವನಿಗೆ ರಾಜರಾಜ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನು ಧಾರ್ವಾಡ ಪ್ರಾಂತದಲ್ಲಿ ಇದ್ದನು. ಪೂರ್ವಕವಿಗಳಲ್ಲಿ ನೇಮಿಚಂದ್ರ, ಅಗ್ಗಳ, ಹೊನ್ನ, ಗುಣವರ್ಮ, ನಾಗವರ್ಮ, ಪಂಪ, ಕೇಶವ, ಸುಧುರ ಇವರು ಗಳನ್ನು ಸ್ಮರಿಸುತ್ತಾನೆ. ವಿಶ್ವಕೃತಿಪರೀಕ್ಷಣವನ್ನು 1873 ರಲ್ಲಿ ಬರೆದಂತೆ ತಿಳಿಯುತ್ತದೆ.

ಇವನ ಗ್ರಂಥಗಳಲ್ಲಿ

1 ಸರಸ್ವತೀ ಪ್ರಬಂಧ.

ಇದು ಚಂಪೂರೂಪವಾಗಿದೆ. ನಮಗೆ ದೊರೆತ ಪ್ರತಿ ಅಸಮಗ್ರ; ಗ್ರಂಥವು 12 ಆಶ್ವಾಸಗಳುಳ್ಳದು ಎಂದು ಹೇಳುತ್ತಾರೆ. "ಕೃತಿ ಲೀಲಾವತಿ ವಲ್ಲಭಂ ಚತುರತಾಚಾತುರ್ಮುಖಂ ಶ್ರೀಸರಸ್ವತಿದೇವೀಕಥೆಯೆಂಬ ಪೂರ್ವಕಥೆಯಂ ಚಂಪೂನಿಬಂಧತ್ವದಿಂ" ರಚಿಸುವೆನು ಎಂದು ಕವಿ ಹೇಳುತ್ತಾನೆ. ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಮೃದುಮಧುರೋಕ್ತಿಯಿಂ ಸರಸದಿಂ ರಸದಿಂ ಸ್ವಭಾವದೇಚ್ಛೆಯಿಂ |
ವಿದಿತವಿಧಕ್ತಿಯುಕ್ತಪದದಿಂ ಪದದಿಂವು ನಿವಿಘ್ನವರ್ತದಿಂ ||

ಸದಮಲಲಕ್ಷಣಾಕ್ಷಗಳಿಂ ಗಳದಿಂ ಜಡುರೈಕವೃತ್ತಿಯಿಂ |
ವಿದಿತವಿವರ್ಣದಿಂದೆಸೆಗುವಾಕೃತಿ ಧೀಕೃತಿ ರಾಜರಾಜನಾ ||

ನವರಸಮಾಸ್ಯದೊಳ್ ತೊಳಪ ತಂಬುಲದ ದ್ರವವಾಗೆ ಭಾವಮು |
ಕ್ಕುವ ನಗೆಯಾಗೆ ಛಂದಮಿದು ಚೆಲ್ವಿಕೆಯಾಗೆ ವಿಜಾತಿವೃತ್ತಮು ||
ಣ್ಮುವ ಮೊಲೆಯಾಗೆ ವೃತ್ತಿ ಕಡೆಗಣ್ಣುಡಿಸೋಬಮುಮಾಗೆ ಮಕ್ಕೃತಿ |
ಪ್ರವಿದಿತನರ್ತಕೀ ಸುಜನಚಿತ್ತನುನೊಯ್ಯನೆ ಸೂಜೆಗೊಳ್ಳಲೇ ||

ಗ್ರಂಥಾವತಾರದಲ್ಲಿ ಪದ್ಮಪ್ರಭಸ್ತುತಿ ಇದೆ. ಬಳಿಕ ಕವಿ ಸಿದ್ಧ, ವೃಷಭಸೇನ, ಗೌತಮ, ಸರಸ್ವತಿ, ಸಮಂತಭದ್ರ, ಪೂಜ್ಯಪಾದ, ಅಕಳಂಕ ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ವಿದಿತಾರ್ಹತ್ಪದವಿದ್ಯಾನಿಸರ್ಗವಿರಹಿತಕವಿದ್ವಜ್ಜನಾಖರ್ವಗರ್ವಕುರಂಗ ಸಂಗನಿರ್ಧೂತಶಶಾಂಕೂಲ ಹಿರಣ್ಯಗರ್ಭಕವಿತೆಯೋವಣ ವಿರಚಿತ ಸರಸ್ವತೀಪ್ರಭಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಆಕಳು.

ಜಲಮಂ ಕುಡಿದಾಡುವ ಸಂ | ಜಲಗಳ ಕಂಬಳದ ಸೆಳೆಯ ಕೊಂಬಿನ ಬಲ್ಗೆ |
ಚ್ಚಲದ ಪಲಶೆಜದಬಣ್ಣದ | ಎಳದುಜಿಗಳ ಬಳಗಮೆಸೆದುದಾವೊಪೆಮಳಲೊಳ್||

ಕೊಳ.

ಇದು ನಿಚ್ಚಂ ತನ್ನ ಲಚ್ಚಂ ವಟತರುವೆನಿಪೀವಾಂಛೆಯಿಂ ಚಂದ್ರಮಂ ಸೂ |
ಸಿದಪಂ ಪೀಯೂಷಮಂ ತಾನಿರುಳೊಳದುವೆ ತಚ್ಛೈಲಸಂಸರ್ಗದಿಂ ಮೂ ||
ಣಿದೆ ಸಾರ್ತಂದಚ್ಛಪದ್ಮಾಕರವರವಿಪುಲವ್ಯಾಂತಮಂ ತೀವಿತಂತ |
ಲ್ಲದೊಡೆಂತುಂ ತುಂಬಿ ತುಳ್ಕಾಡುಗುಮೆ ವಿಧುವಿಗಂ ಗ್ರಾವಕಿನ್ನಾವ ನೇಸಂ ||

ನೇಮಿಚಂದ್ರ

ವಿನಮಿತವಾದಿವಾರಣಮೃಗಾಶನನಾನತಭೂವಿವಾರಹೃ |
ದ್ವನಜದಿನೇಶ್ವರಂ ಶ್ರುತಕರಸ್ಥಿತನರ್ತಸಮಂಗವಕ್ತ್ರನ ||
ಹರನ ಮತನಾರ್ಥಿವದ್ವನಸುಧಾಕರನಾದಿಕವೀಂದ್ರಮಲ್ಲನೆಂ |
ದೆನಿಸುವ ನೇಮಿಚಂದ್ರನ ಪದಾಂಬುಜಕಾನತನಪ್ಪೆ ಚಿತ್ತದೊಳ್ ||

ವಿಶ್ವಪ್ರಕೃತಿ ಪರೀಕ್ಷಣ.

ಇದು ಗದ್ಯಗ್ರಂಥ. ಇದರಲ್ಲಿ ನೇಮಿಚಂದ್ರ, ಅಗ್ಗಳ ಇವರ ಗ್ರಂಥಗಳ ಪರಾಮರ್ಶವೂ ಅನುವಾದವೂ ಇವೆ ನೇಮಿಚಂದ್ರನ ಕಾಲವಾದಮೇಲೆ ಕೇಶಿರಾಜನು ಶಬ್ದಮಣಿದರ್ಪಣದ ಪೀಠಿಕಾಭಾಗದಲ್ಲಿ ಹೇಳುವ ಹತ್ತುಕವಿಗಳು ಇದ್ದರು ಎಂದು ಕವಿ ಅಭಿಪ್ರಾಯಪಡುತ್ತಾನೆ.

ಕಮಲಶಂಖಿಕ 1886.

ಈತನು ರತ್ನಕರಂಡಕಕ್ಕೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಕಾಶ್ಯಪ ಗೋತ್ರದವನು; ಬೊಮ್ಮಣ್ಣನ ಮಗನು. ಇವನ ಸ್ಥಳ ಶ್ವೇತಪುರ. ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜನ ಆಶ್ರಿತನಾದ ಸೂರಿಪಂಡಿತನ ಶಿಷ್ಯನಾನು ಸಾರವಾಗಿ ಈ ಟೀಕೆಯನ್ನು 1866ರಲ್ಲಿ ಬರೆದಂತೆ ಹೇಳುತ್ತಾನೆ. ಮೂಲಗ್ರಂಥ ಸಮಂತಭದ್ರಕೃತ. ಟೀಕೆಗೆ ಬಾಲಬೋಧಿನಿ ಎಂದು ಹೆಸರು.

ಮಹಾದೇವ. 1870.

ಇವನು ಮಹಾಲಿಂಗೇಂದ್ರವಿಜಯವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಇವನ ತಂದೆ ಹರಮತೋತ್ಕರ್ಷಸಿದ್ಧಾಂತಮಂ ನೆಗಳಿ ಪೊಂದುರುಶೀಲ ಮುಳ್ಳಸೋಮೇಶವಾಪೇಶ್ವರ ಗುರು ಅಸಿಪುರೀಪತಿಯಪ್ಪ ಶಿವಲಿಂಗದೇಶಿಕ. ಈ ಗ್ರಂಥವನ್ನು ಶಕ 1792ನೆಯ ಪ್ರಮೋದವರ್ಷದಲ್ಲಿ (1870) ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ಭೀಮನಂ ಕುಕವಿಕುಲಭೀಮನಂ ಪಾಲ್ಕುರಿಕೆ | ಸೋಮನಂ ಶಿವಕವಿಮನಃಪಯೋ
ಬುಧಿಸಮು |
ತ್ತೋಮನಂ ಸೋಮವಿಧೃತಾಗಮಸಪುಣಶಂಕರಾರ್ಚ್ಯನಂ ಸ್ಯೈನಂ ॥
ಕಾಮಹರಪದಹೃದಯಪದ್ಮನಂ ಪದ್ಮನಂ| ಶ್ರೀಮಹಿತಭೋಜನಂ ಕವಿಕೇಶಿರಾಜನಂ |
ನೇಮದಿಂದೆಂದಿಗಿ ಬಣ್ಣಿಸಿ ಕೃತ್ಯಕೊಳ್ಪುಮಂ ಬೇಡುವೆಂ ಭಕ್ತಿಯಿಂದಂ ॥

ಈ ಕವಿಗಳಲ್ಲದೆ ಹರೀಶ್ವರ, ಷಡಕ್ಷರದೇವ ಇವರುಗಳನ್ನೂ ಬೇರೆ ಕಡೆ ಸ್ಮರಿಸಿದ್ದಾನೆ.

ಇವನ ಗ್ರಂಥ

ಮಹಾಲಿಂಗೇಂದ್ರ ವಿಜಯ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಸಂಧಿ 32. ಪದ್ಯ 2061 ಇದರಲ್ಲಿ ಚಿನ್ಮೂಲಗಿರಿ(ಚಿತ್ರದುರ್ಗ) ಸದನ ಮಹಾಲಿಂಗೇಶ್ವರನ ಚರಿತ್ರವು ಹೇಳಿದೆ. ಬಸವ, ಚೆನ್ನಬಸವ, ಪ್ರಭುದೇವ, ಸಿದ್ಧರಾಮ, ತೋಂಟದ ಸಿದ್ಧಲಿಂಗ ಇವರುಗಳ ಚರಿತ್ರವು ಕಾವ್ಯರೂಪವಾಗಿ ರಚಿತವಾಗಿರುವಂತೆ ಈ ಗುರುವಿನ ಚರಿತ್ರವನ್ನು ತಾನು ಬರೆವುದಾಗಿ ಕವಿ ಹೇಳುತ್ತಾನೆ. ಈ ಗುರು "ಪುರಾಣವನ್ನು ಹೇಳಿ ದುಃಖವನ್ನು ನೀಗು" ಎಂದು ಹೇಳಲು ತಾನು ಬರೆದಂತೆ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರ, ಭೃಂಗಿ ಇವರುಗಳನ್ನೂ ಬಸವ ಮುಂತಾದವರನ್ನೂ[1], ಹೊಗಳಿದ್ದಾನೆ. ಸಂಧಿಗಳ ಕೊನೆಯಲ್ಲಿ

ಇದು ನಿಖಿಲಸದ್ಭಕ್ತಪಾದಪಂಕಜರೇಣು | ವಿದಿತಭಸಿತತ್ರಿಪುಂಡ್ರಾಂಕಿತಾಳಿಕಮಹ |
ತ್ಪದಮಹಾಸಿದ್ಧೇಶ್ವರೀಶಶಿವಲಿಂಗದೇಶೀಕೋತ್ತಮಾಯೂಸಾಗರಕಣಾ ॥
ಭ್ಯುದಿತಮತಿ ಸತ್ಕೃತಿ ಮಹಾದೇವಸುಪ್ರಣೀ | ತದ ಮಹಾಲಿಂಗೇಂದ್ರವಿಜಯಂ ॥

ಎಂದಿದೆ.

---

1. ಬಸವ, ಚೆನ್ನಬಸವ, ಅಲ್ಲಮ, ಶಿವಲಿಂಗಗುರು, ಮುರಿಗೇಂದ್ರಷಟ್ಸ್ಥಲಷಟ್ಪ ಬದ್ಧಮಹಾಲಿಂಗ, ತೋಂಟದಾರ್ಯ, ರೇಣುಕ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವೇಶ್ವರ, ಸಿದ್ಧರಾಮ.

ಗಂಗಾಧರಕವಿವಾಳೇಶ್ವರ. ಸು. 1870.

ಈತನು ಕವಿತಾಪದ್ಧತಿ, ಕಾದಂಬರೀಕಥೆ, ಶಬ್ದಮಂಜರಿ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಧಾರವಾಡ ವಾಸ್ತವ್ಯನು. ಈತನ ಕವಿತಾ ಪದ್ಧತಿ ಛಂದಸ್ಸನ್ನು ಬೋಧಿಸುತ್ತದೆ. ಇದರ ಆರಂಭದಲ್ಲಿ ಈ ಪದ್ಯವಿದೆ. —

ಲಕ್ಷಣದಿ ಪದವನುಸಿದೊಡೆ | ರಂಜಿಪುದಾಕೃತಿಯು ಪೇಟ್ದ ಕವಿಯಂ ಸತತಂ |
ಲಕ್ಷಣದಪ್ಪಿದೊಡಾಕೃತಿ | ಭಿಕ್ಷನ ಬೇಡಿಪುದು ಜಗದೊಳಿದು ಸಿದ್ಧಾಂತಂ ||

ಶ್ರೀನಿವಾಸ. 1871

ಈತನು ಅಚ್ಯುತಾವತಾರವಿಲಾಸವನ್ನು ಬರೆದಿದ್ದಾನೆ. ಇವನು ಶ್ರೀ ವೈಷ್ಣವಕ; ಇವನ ತಂದೆ ತಿರುನಾರಾಯಣಾಚಾರ್ಯ, ತಾಯಿ ಸಿಂಗಾರಮ್ಮ; ಗುರು ಶ್ರೀನಿವಾಸಬ್ರಹ್ಮತಂತ್ರಪರಕಾಲಯತಿ, ಸ್ಥಳ ಗೊರೂರು. ಈಗ್ರಂಥವನ್ನು 1871ರಲ್ಲಿ ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

ಅಚ್ಯುತಾವತಾರ ವಿಲಾಸ.

ಇದು ಸಾಟ್ಪದಿಯಲ್ಲಿ ಬರೆದಿದೆ; ಸಂಧಿ 31, ಪದ್ಯ 1750. ಇದರಲ್ಲಿ ಶ್ರೀರಂಗ, ಕಾಂಚಿ, ತಿರುಪತಿ, ಮೇಲುಗೋಟೆ ಈ ಪುಣ್ಯ ಕ್ಷೇತ್ರಗಳ ವೈಭವವು ಹೇಳಿದೆ; ಮೈಸೂರು ಮುಂತಾದ ಸ್ಥಳಗಳ ವರ್ಣನೆಯೂ ಇದೆ. ಇದರಿಂದ ಒಂದು ಪದ್ಯವನ್ನುಉದಾಹರಿಸುತ್ತೇನೆ:—

ತೆಂಗು.

ಒಕ್ಕತನದಲಿ ತನಗೆ ತಕ್ಕಷ್ಟು ನೀರ್ಗಳ |
ನ್ನಕ್ಕಜದಿ ಪೊಯ್ದು ಪರಿಪಾಲಿಸಿದವರಿವರೆಂದು |
ಸಕ್ಕರೆಗೆ ಸದೃಶಮಾದೆಳನೀರುಗಳ ತಮ್ಮ ತಲೆಯೊಳಗೆ ಪೊತ್ತುಕೊಂಡು ||
ಉಕ್ಕಿದತಿಹರುಷದಿಂ ನಿಜಜೀವವಿರುವನಕ |

ಕಕ್ಕು ಲಿತೆಒಡದೆ ಕೊಡುತಿರ್ಪ ಕೆಂದೆಂಗುಗಳ್ |
ಸೊಕ್ಕಿನಿಂ ಬೆಳೆದಿರ್ಪುವಿಲ್ಲಿ ಕೃಕಮುಂ ವಿಜೆಯದಿಗುತಿರ್ಪ ವನುಜರಂತೆ ||

ಈತನು ಮುದ್ರಾರಾಕ್ಷಸಕಥೆಯನ್ನೂ ಬರೆದಂತೆ ತೋರುತ್ತದೆ. ಇದು ಗದ್ಯಗ್ರಂಥ; ಅಶ್ವಾಸ 11

———

ವೆಂಕಟವರದಾಚಾರ್ಯ. ಸು. 1875

ಈತನು ತಪತೀಪರಿಣಯನಾಟಕವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ; ಇವನ ಸ್ಥಳ ಸರಗೂರು.

ಇವನ ಗ್ರಂಥ

ತಪತೀಪರಿಣಯ ನಾಟಕ.

ಭಾರತದ ಆದಿಪರ್ವದಲ್ಲಿರುವ ಈ ಕಥೆಯನ್ನು ನಾಟಕರೂಪವಾಗಿ ಬರೆದಿದ್ದಾನೆ. ಆರಂಭದಲ್ಲಿ ಮೈಸೂರು ಚಾಮರಾಜೇಂದ್ರ ಒಡೆಯರ ಶ್ಲೇಷಾರ್ಥನೆ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ಕೆಗೆದು ಬರೆಯುತ್ತೇನೆ.—

ವಸಂತ.

ಪರಿಹೃತಪಿಕಾಳಿಚಿಂತಂ | ಸ್ಫುರಿತಲತಾಂತಂ ವಿಯೋಗಿಜನಹೃತ್ಕುಂತಂ |
ಪರಿಶೋಭಿತಂ ವಸಂತಂ | ಸುರಭಿತಹರಿದಂತಮಂಗಜೋತ್ಸವಕಾಂತಂ ||

———

ಪದ್ಮನಾಭ ಮಹಾರಾಜ. ಸು. 1880

ಈತನು ನಿಗಮಸಾರಾಮೃತ, ದಾಸಬೋಧೆ ಇವುಗಳನ್ನು ಬರೆದಿದ್ದಾನೆ. ಇವನು ತಾಳಿಕೋಟೆ ರಾಜನಾಗಿದ್ದು ಸನ್ಯಾಸಿಯಾದಂತೆ ತಿಳಿಯುತ್ತದೆ. ಇವನನ್ನು "ಶ್ರೀಮದ್ವೈತ ಸಚ್ಚಿದಾನಂದೇಂದ್ರ ಅತ್ಯಾಶ್ರಮಿ" ಎಂದು ಸಶೇಷಿಸಿ ಹೇಳಿದೆ. ಇವನ ಕಾಲವು ಸುಮಾರು 1880 ಆಗಿರಬಹುದು. ಇವನ ಗ್ರಂಥಗಳು ಗದ್ಯರೂಪವಾಗಿ ಗುರುಶಿಷ್ಯಸಂವಾದರೂಪವಾಗಿಯೂ ಅದ್ವೈತವೇದಾಂತಬೋಧಕವಾಗಿಯೂ ಇವೆ.

———

ಭೂಮೀಶಕವಿ. 1883

ಇವನು ದಶಾವತಾರಸ್ತೋತ್ರವನ್ನು ಬರೆದಿದ್ದಾನೆ. ಈತನು ಧಾರವಾಡ ಪ್ರಾಂತದವನು. ಇವನ ಗ್ರಂಥಕ್ಕೆ ಹರಿಲೀಲಾಮೃತಸಾರ ಎಂಬ ಹೆಸರೂ ಉಂಟು. ಇದನ್ನು ಶಕ 1806 ಸ್ವಭಾನುವಿನಲ್ಲಿ ಬರೆದಂತೆ ತಿಳಿಯುತ್ತದೆ. ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 145. ಆರಂಭದಲ್ಲಿ ವಿಷ್ಣು, ಶಿವ, ಗಣಪತಿ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ—

ಮೊಗವ ನೋಡಲು ಸೋವನಂದದಿ | ಸೊಗಯಿಸಿಹ ತವ ನಾಸಿಕವು ಸಂ |
ಪಗೆಯ ವೂವಿಂಗಿಮ್ಮಡಿಸಿ ಶೋಭಿಸಿಹು ರದನಗಳು ॥

ಝಗಿಪ ರತ್ನಗಳಾಳಿಯಂದದಿ | ಸೊಗಯಿಸಲು ನಗಧರನೆ ಸುರವೈ |
ರಿಗಳು ಜೋಜಿಗಬಟ್ಟು ನೆಲಸಿದರೀಕ್ಷಿಸ ಲಸ್ಮ ॥

ಬಸವಕವಿ. 1887.

ಈತನು ಸಿದ್ಧಲಿಂಗಕಾವ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಗುರು "ಗುರುಮಲ್ಲಿನಾಥದೇಶ" ನಾದ ಚೆನ್ನಬಸವ. ಈ ಗ್ರಂಥವನ್ನು ಶಕ 1809 ಸರ್ವಜಿತುವಿನಲ್ಲಿ-ಎಂದರೆ 1887 ರಲ್ಲಿ, ರಚಿಸಿದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಕೆರೆಯಪದ್ಮರಸ ಮಳಯಾಂಬಿಕೆ, ಹರಿಹರ, ಪಾಲ್ಕುರಿಕೆ ಸೋಮ, ಪಂಡಿತಾರಾಧ್ಯ, ಕಾಳಿದಾಸ, ಭೀಮರಸ, ಚಾಮರಸ, ರಾಘವಾಂಕ, ಬಾಣ, ಕೇಶೀರಾಜ, ಮಂಚಣ್ಣ, ಮಗ್ಗೆ ಮಾಯಿದೇವ, ಶಂಕರ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಸಿದ್ಧಲಿಂಗ ಕಾವ್ಯ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 16, ಪದ್ಯ 438. ಇದರಲ್ಲಿ ಕಂಥೆಯಸಿದ್ಧಲಿಂಗನ ಚರಿತವೂ ಸೂಳೆಯಕೆರೆಯನ್ನು ಕಟ್ಟಿಸಿದ ವೃತ್ತಾಂತವೂ ಹೇಳಿವೆ.

ಕಥಾಸಾರ—ಕರ್ಣಾಟಕದೇಶದೊಳಗೆ ಸ್ವರ್ಗಾವತಿಯೆಂಬ ಪಟ್ಟಣದಲ್ಲಿ ವಿಕ್ರಮರಾಜನೂ ಅವನ ಹೆಂಡತಿ ಸೂತನೆಯೂ ಇದ್ದರು. ಬಹುಕುಟುಂಬಿಯಾಗಿ

ಮಲ್ಲಯ್ಯನೆಂಬ ಒಬ್ಬ ತಿವಭಕ್ತನು ರಾಜನಲ್ಲಿ "ನಾನು ಬಡವನು; ನನ್ನ ಮಕ್ಕಳಲ್ಲಿ ಒಬ್ಬನನ್ನು ನೀನು ತೆಗೆದುಕೊಂಡು ನನ್ನ ಬಡತನವನ್ನು ಪರಿಹರಿಸಬೇಕು" ಎಂದು ಬೇಡಿಕೊಳ್ಳಲು, ರಾಜನು ಒಬ್ಬ ಮಗನನ್ನು ಸಾಕಿಕೊಂಡು ರಾಣುವೆರಾಯನೆಂದು ಹೆಸರಿಟ್ಟು ಯುವರಾಜಪದವಿಯನ್ನು ಕೊಟ್ಟನು. ನೂತನೆ ತನಗೆ ಮಕ್ಕಳಿಲ್ಲವೆಂದು ಕೊರಗುತ್ತಿರಲು ರಾಜನು ತನ್ನ ಪಟ್ಟಣದ ದೇವರಾದ ಸಿದ್ಧಲಿಂಗನನ್ನು ಭಜಿಸಿದುದರಿಂದ ಅವಳಿಗೆ ಪಾರ್ವತಿಯು ಅವತಾರವಾದ ಶಾಂತವ್ವೆಯೆಂಬ ಮಗಳು ಹುಟ್ಟಿದಳು. ಹರಿದ್ರಾನದೀತೀರದಲ್ಲಿಯ ಸೂರಗಿರಿಯಲ್ಲಿ ಹುತ್ತದೊಳಗೆ ಒಂದು ಲಿಂಗವಿದ್ದುದನ್ನು ತಿಳಿದು ರಾಜನು ಆ ಲಿಂಗನನ್ನು ಸ್ತುತಿಸಲು ಸಾಕ್ಷಿ ಕಂಠೆಯು ಸಿದ್ಧೇಶ್ವರನಾಮದಿಂದ ಉದ್ಭವಿಸಿದನು. ಅವನಿಗೆ ರಾಜನು ಮಗಳನ್ನು ಕೊಟ್ಟು ಮದುವೆಮಾಡಿ, ಆತನಿಂದ ಸೂರಗಿರಿಲಿಂಗದ ಮಹಿಮೆಯನ್ನು ತಿಳಿದು ಆ ಪ್ರಾಂತದಲ್ಲಿ ಪಟ್ಟಣವನ್ನೂ ಕೆರೆಯನ್ನೂ ಕಟ್ಟಿಸಬೇಕೆಂದು ನಿಶ್ಚಯಿಸಿ ಆನೆಯುಕೆರೆಯೆಂಬ ಪಟ್ಟಣವನ್ನೂ ಒಂದು ಕೆರೆಯನ್ನೂ ನಿರ್ಮಿಸಿದನು. ಕಂಠೆಯು ಸಿದ್ಧೇಶ್ವರನು ಮಣಿಭದ್ರೆಯೆಂಬ ಸಖಿಗೆ ವಾಗ್ದಾನ ಮಾಡಿದ್ದಂತೆ ಆ ಕೆರೆಗೆ ರಾಜನು ಸೂಳೆಯು ಕೆರೆ ಎಂಬ ಹೆಸರನ್ನಿಟ್ಟನು. ಬಳಿಕ ಸಿದ್ಧೇಶ್ವರನು ಶಾಂತವ್ವೆಯೊಡನೆ ಕೈಲಾಸಕ್ಕೆ ಹೋದನು. ಕೆಲವು ಕಾಲವಾದ ಮೇಲೆ ವಿಕ್ರಮರಾಜನು ರಾಣುವೆರಾಯನಿಗೆ ರಾಜ್ಯವನ್ನು ಒಪ್ಪಿಸಿ ನೂತನೆಯೊಡನೆ ಕೈಲಾಸಕ್ಕೆ ಹೋದನು.

ಗ್ರಂಥಾವತಾರದಲ್ಲಿ ವೇಶ್ಯಾಪುರಾಕೇಶ್ವರನ (ಸೂಳೆಯುಕೆರೆಯ ಸಿದ್ಧಲಿಂಗನ) ಸ್ತುತಿ ಇದೆ. ಆಮೇಲೆ ಕವಿ ಪ್ರೌಢದೇವರಾಯ, ಗಣೇಶ, ವೀರಭದ್ರ, ಸುಬ್ರಹ್ಮಣ್ಯ, ನಂದಿ, ಭೃಂಗಿ ಇವರುಗಳನ್ನು ಸ್ಮರಿಸಿ, ಬಳಿಕ ಬಸವನೇ ಮೊದಲಾದ ತಿಪ್ಪತ್ತಾರು ಶರಣರನ್ನು [1]ಸ್ತುತಿಸಿದ್ದಾನೆ.

ಈ ಗ್ರಂಥವು ಅತಿನವೀನವಾದುದು. ಈಗಲೂ ತಿಂಥಿ ವಿಷಯಗಳನ್ನು ಕುರಿತು ಪದ್ಯಗ್ರಂಥವನ್ನು ರಚಿಸುವವರಿದ್ದಾರೆ ಎಂಬುದಕ್ಕೆ ಇದು ನಿದರ್ಶನವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ: —

---

1. ಬಸವ, ಚೆನ್ನಬಸವ, ಸಿದ್ಧರಾಮ, ಮಾದೇವಿಯಕ್ಕ, ಅಕ್ಕನಾಗಮ್ಮ, ಮಾದಿರಾಜ, ಮರುಳು ಶಂಕರ, ಮೇದಾರಕೇತಯ್ಯ, ಮಡಿವಾಳ ಮಾಚಯ್ಯ, ಗಣದಾಸಿ, ಕರಿಕಾಲಚೋಳ, ಕಾಚಿರಾಜ, ಉರಗರಾಯಣ್ಣ, ಕಿನ್ನರಿಯ ಬೊಮ್ಮ, ಮಂಚಣ್ಣ, ನಿರಪಳ್ಳಯ್ಯ ನುಲಿಯ ಚಂದಯ್ಯ, ಉರಿಲಿಂಗ ಪೆದ್ದಯ್ಯ, ಅಮುಗಿದೇವಯ್ಯ.

ಕರ್ಣಾಟಕದೇಶ.

ಧುರವೈರಿಸಖನಂತೆ ಧನವಾಲರಾಗಿಯುಂ|
ಹರಿದಶ್ವನಂತೆಸೆವ ಕೀರ್ತಿಯುತರಾಗಿಯುಂ |
ಮುರವೈರಿಸುತನಂತೆ ಜೆಲ್ವುಳ್ಳರಾಗಿಯುಂ ಬೃಂದಾರಕೇಂದ್ರನಂತೆ ॥
ಮೆಹೆವತ್ಪಭೋಗದೊಳ್ ಸಂಯುಕ್ತರಾಗಿಯುಂ |
ಶರಧಿಸುತನಂತಧಿಕಶಾಂತಿಯುತರಾಗಿಯುಂ |
ಸುದಧಿಪನಂತೆ ಬಹುಗಂಭೀರರಾಗಿಯುಂ ಜನರೆಸೆದರಾನಾಡೊಳು ॥

ಸೂಳೆಯರು.

ಮೈಗಂಪಿಗಂದೆಱಗಿ ಬರುವಳಿಯ ನಿಕರನುಂ |
ಬೇಗದಿಂದಾಳಿಯರ ಕೈಗಳಿಂ ಸೋವಿಸುತ |
ಲಾಗ ನಡೆಗಂ ಸೋತು ಬರುವಂಜೆವಿಂಡುಗಳ ನೂಪುರಧ್ವನಿಗಳಿಂದ ॥
ಅಗಾಗ ಬೆದಱಿಸುತ್ತುಕ್ತಿಗಂ ಮನಸೋಲುವ |
ವಾಕ್ಯಿಯ ತೊಲಗಿಸುತ್ತಂಗಜನ ಪಡೆಯಂತೆ |
ರಾಗದಿಂದೊಪ್ಪಿದರ್ ವಾರನಾಸೀವಿತತಿ ಭೂವಾಲನೋಲಗದೊಳು ॥

ಈಶ್ವರಸ್ತುತಿ.

ಕುವನಶುಚಿಪವನಸಖವಿಭುಪವನಸ ಪುರುಷಕನು |
ಜವನಹರ ಜಡಜಸುತಜಡಜದೃಗವುರನಿಕರ |
ದಿವಿಜಪತಿನುತ ಭುಜಗಧರ ಕುಧರಗೃಹ ಗಗನಕಜ ಗರಳಧರ ಪರತರ ॥
ಧವಳತನು ಪವನಸಖನಯನ ಕಲುಷಜಯಗಿರಿ |
ಪವಿ ಮದನತನುವಿನಶಿವಿ ಧನಪಸಖ ಪಗವು |
ಕವಿನುತನೆ ವೇಶ್ಯಾಕಟಾಕೇಶ ಗುರುಸಿದ್ಧಲಿಂಗ ವಿಗೆ ಸಲಹೆಮ್ಮನು ॥

ಮಗನಿಗೆ ಏಕ್ಕಯರಾಯನ ಬುದ್ಧಿವಾದ.

ಒಡವರಂ ಕೆಡಿಸುವರು ದುಷ್ಕೃತ್ಯವಾಡದಿರು |
ಗಡಿದುರ್ಗಕಾಣ್ಯದೊಳಗೆಜ್ಜಜಿಂ ಮಹಿಯಾದಿರ |
ನಡೆಯದಿಗು ದುರ್ಮಾರ್ಗಮಂ ಪರರ ನಾರಿಯರ ನೋಡದಿರು ದುರ್ಗುಣದಲಿ ॥

ಬಿಡದೆ ಮಱೆಯೊಕ್ಕರಂ ಕಾವಾಡು ರಿಪುನೃಪರ!
ಕಡಿದಿಕ್ಕು ಲೋಕದ ಜನಂಗಳ್ಗೆ ನಿಷ್ಠುರ।
ದೊಡೆಯನೆಂದೆನಿಸದಿರು ಮಗನೆ ರಾಣುವೆಂಬಯ ಸುಗುಣದಿಂ ನಡೆಯೆಂದನು॥

ಇತರ ಕವಿಗಳು ಮತ್ತು ಗ್ರಂಥಕರ್ತರು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇನ್ನೂ ಅನೇಕರು ಗ್ರಂಥರಚನೆಯನ್ನು ಮಾಡಿದ್ದಾರೆ. ಆದರೆ ಇವರ ಚರಿತವನ್ನೆಲ್ಲಾ ಇದುವರೆಗೂ ಬರೆದಂತೆ ವಿವರವಾಗಿ ಬರೆಯಲು ಸಾಧ್ಯವಿಲ್ಲ ಇದಲ್ಲದೆ ಇವರುಗಳಲ್ಲಿ ನಿಜವಾಗಿಯೂ ಕವಿಗಳು ಎಂದು ಹೇಳಿಸಿಕೊಳ್ಳುವುದಕ್ಕೆ ಯೋಗ್ಯರಾದವರು ಕೆಲವರೇ ಆಗಿರುತ್ತಾರೆ. ಉಳಿದವರಲ್ಲಿ ಕೆಲವರು ಸಂಸ್ಕೃತ, ಬಂಗಾಳಿ, ತೆಲುಗು, ಇಂಗ್ಲಿಷ್ ಈ ಭಾಷೆಗಳಲ್ಲಿರುವ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಇನ್ನು ಕೆಲವರು ಸಣ್ಣ ಕಾವ್ಯಗಳನ್ನೂ ಯಕ್ಷಗಾನಗಳನ್ನೂ ಹಾಡುಗಳನ್ನೂ ಬರೆದಿದ್ದಾರೆ. ಮತ್ತೆ ಕೆಲವರು ಪಾಠಶಾಲೆಗಳಿಗೆ ಉಪಯೋಗವಾಗುವಂತೆ ಪುಸ್ತಕಗಳನ್ನು ರಚಿಸಿದ್ದಾರೆ. ಜೀವಂತರಾದ ಗ್ರಂಥಕರ್ತರ ಹೆಸರನ್ನು ನಾವು ಎತ್ತುವುದಿಲ್ಲ. ಸ್ವಲ್ಪಕಾಲಕ್ಕೆ ಹಿಂದೆ ಗತಿಸಿದವರ ಚರಿತ್ರೆಯನ್ನು ಲಂಬಿಸಿ ಬರೆವುದು ನಮ್ಮ ಉದ್ದೇಶವಲ್ಲವಾದುದರಿಂದ ಅಂಥವರ ವಿಷಯವನ್ನೂ ಗ್ರಂಥಗಳನ್ನೂ ನಮಗೆ ತಿಳಿದಮಟ್ಟಿಗೆ ಬಹಳ ಸಂಕ್ಷೇಪವಾಗಿ ತಿಳಿಸುತ್ತೇವೆ.

ಬಸವಪ್ಪ ಶಾಸ್ತ್ರಿ.

ಈತನು ವೀರಶೈವ ಕವಿ; ಮೈಸೂರು ಅರಮನೆಯಲ್ಲಿ ಆಸ್ಥಾನ ಕವಿಯಾಗಿದ್ದನು. ಪುಸ್ತಕ ವಾಚನದಲ್ಲಿ ಈತನ ಪಾಂಡಿತ್ಯವು ಅದ್ವಿತೀಯವಾಗಿದ್ದಿತು; ಕವಿತೆಯೂ ಮಾನ್ಯವಾದುದು.

ಗ್ರಂಥಗಳು — ಸಾವಿತ್ರೀಚರಿತ್ರೆ (ಷಟ್ಪದಿ), ಭರ್ತೃಹರಿ ಸುಭಾಷಿತ (ವೃತ್ತ), ನೀತಿಸಾರಸಂಗ್ರಹ (ಕಂದ), ದಮಯಂತೀಸ್ವಯಂವರ (ಚಂಪು); ಶಾಕುಂತಳ, ಚಂಡಕೌಶಿಕ, ಉತ್ತರರಾಮಚರಿತ, ಶೂರಸೇನಚರಿತ್ರೆ. ಕೊನೆಯ ನಾಲ್ಕೂ ನಾಟಕಗಳು; ಇವುಗಳಲ್ಲಿ ಶೂರಸೇನಚರಿತ್ರೆ "ಒಥೆಲ್ಲೊ" ಎಂಬ

ಇಂಗ್ಲಿಷ್ ನಾಟಕದ ಪರಿವರ್ತನ. ರೇಣುಕಾರ್ಯವಿಜಯ ಎಂಬ ಚಂಪೂಗ್ರಂಥವನ್ನೂ ಬರೆದಂತೆ ತಿಳಿಯುತ್ತದೆ.

ಎಸ್. ಜಿ. ನರಸಿಂಹಾಚಾರ್ಯ.

ಈತನು ಶ್ರೀವೈಷ್ಣವ ಕವಿ; ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಟ್ರಾನ್ಸ್‌ಲೇಟರ್ (ಪರಿವರ್ತಕ) ಎಂಬ ಕೆಲಸದಲ್ಲಿ ಇದ್ದನು. ಕಾವ್ಯಮಂಜರಿ ಎಂಬ ಮಾಸಿಕ ಪತ್ರಿಕೆಗೆ ಸಂಪಾದಕನಾಗಿದ್ದು ಹಲವು ಉತ್ತಮ ಕನ್ನಡ ಗ್ರಂಥಗಳನ್ನು ಪ್ರಚಾರಕ್ಕೆ ತಂದನು. ಕರ್ಣಾಟಕ ಕವಿಚರಿತೆಯ ಪ್ರಥಮಸಂಪುಟದ ರಚನೆಗೆ ಸಹಾಯಕನಾಗಿದ್ದನು. ಕವಿತೆ ಲಲಿತವಾದುದು.

ಗ್ರಂಥಗಳು—ಅಜನೃಪಚರಿತೆ, ದಿಲೀಪಚರಿತೆ: ಇವೆರಡೂ ರಘುವಂಶದ ಭಾಗಗಳ ಷಟ್ಪದೀರೂಪವಾದ ಪರಿವರ್ತನ; ಪ್ರೋಷಿತ ಪ್ರಿಯಾ ಸಮಾಗಮ (ಕಂದ), ಲಲ್ಲೆವುದ್ದೀಕ್-ಅದ್ಭುತದೀಪ, ಈಸೋಪನ ನೀತಿಕಥೆಗಳು, ಗಲಿವರನ ದೇಶಸಂಚಾರ, ಭಾರತವೀರಚರಿತ, ಗಯ್ಯಾಳಿಯನ್ನು ಸಾಧುಮಾಡುವಿಕೆ.

ನಂಜನಗೂಡು ಅನಂತನಾರಾಯಣ ಶಾಸ್ತ್ರಿ.

ಈತನು ಸ್ಮಾರ್ತಕವಿ; ಮೈಸೂರು ನಗರನಿವಾಸಿಯಾಗಿದ್ದನು. ಕವಿತೆ ಸರಳವಾದುದು.

ಗ್ರಂಥಗಳು — ನಾಗಾನಂದನಾಟಕ, ಕರ್ಪೂರಮಂಜರೀ ಪರಿಣಯ ನಾಟಕ, ಸತ್ಯವತೀ ಚರಿತೆ.

ಅಂಬಳೆ ಲಕ್ಷ್ಮೀನರಸಿಂಹ ಶಾಸ್ತ್ರಿ

ಈತನು ಸ್ಮಾರ್ತಕವಿ; ಮೈಸೂರು ವೆಸ್ಲ್ಯನ್ ಮಿಷನ್ ಪಾಠಶಾಲೆಯಲ್ಲಿ ಬಹಳ ದಿವಸ ಉಪಾಧ್ಯಾಯನಾಗಿದ್ದನು. ತೆಲುಗಿನಲ್ಲಿಯೂ ಕವನಶಕ್ತಿಯುಂಟು.

ಗ್ರಂಥಗಳು—ಸುಪುತ್ರಿಶತಕ, ಭಾನುಶತಕ, ವಿದುರನೀತಿ: ಇವು ಮೂರೂ ಕಂದದಲ್ಲಿ ಬರೆದಿವೆ; ಕರ್ಣಾಟಕ ಚಂದ್ರಾಲೋಕ.

ನಂದಳಿಗ ಲಕ್ಷ್ಮೀನಾರಣಪ್ಪ.

ಈತನು ಸ್ಮಾರ್ತಕವಿ; ಇವನ ತಂದೆ ಪಾಠಾಳಿ ತಮ್ಮಯ್ಯ, ತಾಯಿ ಮಹಾಲಕ್ಷ್ಮಿ, ಸ್ಥಳ ಉಡುಪಿ ತಾಲ್ಲೂಕು ನಂದಳಿಗೆ. ಇವನನ್ನು ಬಾಲ್ಯದಲ್ಲಿ ಮನೆಯವರು ಮುದ್ದಣ್ಣನೆಂದು ಕರೆಯುತ್ತಿದ್ದರು ಈತನು ಉಡುಪಿಯಲ್ಲಿ ಕಸರತ್ತನ್ನು ಕಲಿಸುವ ಉಪಾಧ್ಯಾಯನಾಗಿದ್ದನು. ಶ್ರೀರಾಮಪಟ್ಟಾಭಿಷೇಕವನ್ನು ತಾಯಿಯ ಹೆಸರಿನಲ್ಲಿಯೂ ರಾಮಾಶ್ವಮೇಧವನ್ನು ತನ್ನ ಬಾಲ್ಯದ ಹೆಸರಿನಲ್ಲಿಯೂ ಬರೆದಿದ್ದಾನೆ. ಅದ್ಭುತರಾಮಾಯಣದ ಕವಿಯ ಕೈಬರಹದ ಪ್ರತಿಯ ಮುಖ ಪತ್ರದಲ್ಲಿ "ನಂದಳಿಗೆ ಲಕ್ಷ್ಮೀನಾರಾಯಣನಿಂದ ವಿರಚಿತಮಾದುದು" ಎಂದಿರುವುದರಿಂದ ಇದೂ ಏತತ್ಕೃತವೇ. ಈ ಮೂರು ಗ್ರಂಥಗಳನ್ನೂ ತನ್ನವೆಂದು ಹೇಳಿದರೆ ಅಚ್ಚು ಹಾಕುವರೋ ಇಲ್ಲವೋ ಎಂಬ ಶಂಕೆಯಿಂದ ಪೂರ್ವಗ್ರಂಥಗಳೆಂದು ಹೇಳಿ ಕಾವ್ಯಮಂಜರೀಸಂಪಾದಕರಿಗೆ ಕಳುಹಿಸಿಕೊಟ್ಟನು. ಅವು ಮುದ್ರಿತವಾದುವು. ಅನೇಕ ಜನಗಳಿಗೆ ಪೂರ್ವಗ್ರಂಥಗಳೆಂಬ ಭ್ರಾಂತಿ ಈಗಲೂ ಇದೆ. ನಾವೂ ಈ ಭ್ರಾಂತಿಗೊಳಗಾಗಿ ಇವುಗಳಿಗೆ ಸುಮಾರು 1750 ಎಂಬ ಕಾಲವನ್ನು ಕೊಟ್ಟೆವು. ಈಚೆಗೆ ವಿಚಾರಮಾಡಿದುದರಲ್ಲಿ ನಿಜಾಂಶವು ಹೊರಪಟ್ಟಿತು. ಆಧುನಿಕನಾದರೂ ಈತನ ಬಂಧವು ಶ್ಲಾಘ್ಯವಾಗಿದೆ.

ಇತರ ಗ್ರಂಥಗಳು — ಕುಮಾರ ವಿಜಯ, ರತ್ನಾವಳೀ ಕಲ್ಯಾಣ: ಇವೆರಡೂ ಯಕ್ಷಗಾನಗಳು; ಭಗವದ್ಗೀತೆ (ಭಾ.ಷ.), ರಾಮಾಯಣ (ವಾ.ಷ.), ಕಾಮಶಾಸ್ತ್ರ.

ಸಿ. ಆರ್. ಚೆಲ್ಲಮ್ಮ.

ಈಕೆ ಬ್ರಾಹ್ಮಣ ಕವಿ; ಮೈಸೂರು ಮಹಾರಾಣಿ ಬಾಲಿಕಾಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಳು.

ಗ್ರಂಥಗಳು—ರುಕ್ಮಿಣೀಪರಿಣಯ, ಪಾರಿಜಾತಾಪಹರಣ, ರಾಜಕಲಾನಿಧಿ, ವೈರಾಗ್ಯಮಂಜರಿ, ದ್ವಾದಶಮಂಜರೀ ಸ್ತೋತ್ರ, ಗೀತಿಕಾಲಹರಿ.

ಗೊರೂರು ನರಸಿಂಹಾಚಾರ್ಯ.

ಇವನು ಶ್ರೀವೈಷ್ಣವ ಕವಿ. ಇವನ ಸ್ಥಳ ಹಾಸನದ ಸಮೀಪದಲ್ಲಿರುವ ಗೊರೂರು.

ಗ್ರಂಥಗಳು—ಕನ್ನಡ ವಿಶ್ವಗುಣಾದರ್ಶ, ಕನ್ನಡ ಭರ್ತೃಹರಿ, ಕಾವೇರೀ ಪುರಾಣ, ಕೃಷ್ಣಚರಿತಾಮೃತ, ನೃಹರಿಬಿನ್ನಪ, ಕಥಾಮಂಜರಿ

ವೀರನಗರೆ ಪುಟ್ಟಣ್ಣ.

ಈತನು ವೀರಶೈವ ಕವಿ; ಇವನ ಸ್ಥಳ ಮೈಸೂರು. ಮೈಸೂರು ತೋಷೀಖಾನೆ ಬೀಗನಂಜಪ್ಪಾಜಿಯ ಮಮ್ಮಗ ಸಿದ್ದರಾಜ ಅರಸಿನ ಆಶ್ರಿತನಾಗಿದ್ದಂತೆ ತಿಳಿಯುತ್ತದೆ.

ಗ್ರಂಥಗಳು—ಅಂಕನಾಥೇಶಭಕ್ತಿವಿಜಯ (ಷ), ಚಾಮರಾಜೇಂದ್ರ ಶತಕ (ಕಂದ), ದುಶ್ಶಾಸನ ನಾಟಕ, ಗರುಡಹನುಮದ್ವಿಲಾಸ, ದ್ರೌಪದೀಸ್ವಯಂವರ, ಧ್ರುವಚರಿತ್ರೆ, ನಳಚರಿತ್ರೆ, ಸೇತಾವತೀಕಥೆ, ಪಂಚವಟೀರಾಮಾಯಣ, ರತಿಕಲ್ಯಾಣ, ಶನಿದೇವರ ಮಾಹಾತ್ಮ್ಯ. ಸಾನಂದಗಣೇಶನ ಕಥೆ, ವಿನೋದರಸ ಮಂಜರಿ, ಅರ್ಜುನ ಜೋಗಿ ಹಾಡುಗಳು, ದೇವರ ಜಾತ್ರೆಯ ಪದಗಳು, ಬಾಲಿಕಾ ಗೀತರತ್ನಾವಳಿ, ಗಿರಿಜಾಕಲ್ಯಾಣ ನಾಟಕ, ಹರಿಶ್ಚಂದ್ರ ನಾಟಕ, ತುರಾಲಾವಣಿ, ವಿವೇಕವಿಜಯ.

ನಂಜನಗೂಡು ಸುಬ್ಬಶಾಸ್ತ್ರಿ.

ಈತನು ಸ್ಮಾರ್ತಕವಿ; ಇವನ ಸ್ಥಳ ಮೈಸೂರು.

ಗ್ರಂಥಗಳು—ಸೀತಾಚರಿತ್ರೆ, ಉತ್ತರ ಸೀತಾಚರಿತ್ರೆ: ಎರಡೂ ಷಟ್ಪದಿಯಲ್ಲಿ ಬರೆದಿವೆ.

ಧೋಂಡೋ ನರಸಿಂಹ ಮುಳಬಾಗಿಲು.

ಇವನು ಬ್ರಾಹ್ಮಣ ಕವಿ: ಧಾರವಾಡದ ಶಿಕ್ಷಕಶಿಕ್ಷಣಾಲಯದಲ್ಲಿ ಬಹುಕಾಲ ಉಪಾಧ್ಯಾಯನಾಗಿದ್ದನು. ಈತನ ಸ್ಥಳ ಕೋಲಾರದ ಜಿಲ್ಲಾ ಮುಳಬಾಗಿಲು.

ಗ್ರಂಥಗಳು— ಹಿತೋಪದೇಶ (ಚಂಪು), ಉತ್ತರರಾಮಚರಿತ ನಾಟಕ, ಮಾಳವಿಕಾಗ್ನಿಮಿತ್ರ, ಮೃಚ್ಛಕಟಿಕೆ, ವೇಣೀಸಂಹಾರ, ಛಂದಸ್ಸಾರ, ಕನ್ನಡ ಕೈಪಿಡಿ, ನುಡಿಗಟ್ಟು.

ಗರಣಿ ಕೃಷ್ಣಾಚಾರ್ಯ.

ಈತನು ಮಾಧ್ವಕವಿ; ಮದರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಹಳ ದಿವಸ ಕನ್ನಡ ಪಂಡಿತನಾಗಿದ್ದನು. ಇವನ ಸ್ಥಳ ಮದ್ದಗಿರಿ ತಾಲ್ಲೂಕು ಗರಣಿ.

ಗ್ರಂಥಗಳು —ಮೃಚ್ಛಕಟಿಕೆ, ನಾಗಾನಂದ ನಾಟಕ ಕಥೆ, ನೀತಿಶತಕ, ದೀರ್ಘಾಯುಸ್ಸೂತ್ರ.

ಜಯರಾಯಾಚಾರ್ಯ.

ಈತನು ಮಾಧ್ವಕವಿ; ಮೈಸೂರು ಮಹಾರಾಣಿ ಬಾಲಿಕಾಪಾಠಶಾಲೆಯಲ್ಲಿ ಉಪಾಧ್ಯಾಯನಾಗಿದ್ದನು.

ಗ್ರಂಥಗಳು—ಚಂಡಕೌಶಿಕನಾಟಕ, ಮದಾಲಸಾ ಪರಿಣಯ, ರಾಮವರ್ಮ ಲೀಲಾವತೀ ಚರಿತ್ರೆ, ವೇಣೀಸಂಹಾರ ನಾಟಕ, ಮಹಾಬಧಿರಪ್ರಹಸನ, ಕರ್ಣಾಟಕ ಭಾಷಾಕರ, ವಾಕಶಾಸ್ತ್ರ.

ಶಾಂತಕವಿ.

ಈತನು ಮಾಧ್ವಕವಿ; ಇವನಿಗೆ ಬಾಳಾಚಾರ್ಯ ಸಕ್ಕರಿ ಎಂಬ ಹೆಸರೂ ಉಂಟು. ಇವನು ಸುಮಾರು 70 ಗ್ರಂಥಗಳನ್ನು ಬರೆದಿದ್ದಾನೆ. ಇವುಗಳೆಲ್ಲಾ ವ್ಯಾಯಿಕವಾಗಿ ಯಕ್ಷಗಾನಗಳು.

ಗ್ರಂಥಗಳು—ಮೇಘದೂತ (ಷ), ವಿರಹತರಂಗ (ಷ), ಶ್ರೀ ವಿದ್ಯಾರಣ್ಯರ ಚರಿತ್ರೆ (ಹಾಡು), ಉಷಾಹರಣ ನಾಟಕ, ಕೀಚಕವಧೆ, ಗಜೇಂದ್ರಮೋಕ್ಷ, ಗಿರಿಜಾಕಲ್ಯಾಣ, ಚಂದ್ರಾವಳೀಚರಿತ್ರೆ, ಬಾಣಾಸುರನಾಟಕ, ಮನೋರಮ ನಾಟಕ, ವತ್ಸಲಾಹರಣ, ಸಿರಿಯಾಳಸತ್ವಪರೀಕ್ಷೆ, ಸೀತಾರಣ್ಯಪ್ರವೇಶ, ಸುಂದೋಪಸುಂದವಧೆ, ನಾಟಕಪದ ಸಂಗ್ರಹ, ಶೃಂಗಾರಪದ ಸಂಗ್ರಹ, ದುಂದುಮೆ ಪದ, ಕೃಷ್ಣಮೋಹಿನೀ ದುಂದುಮೆ, ಮೌನೇಶ್ವರನ ಬಾಲಲೀಲೆ—ಇತ್ಯಾದಿ.

ಮಹಾಂತದೇಶಿಕ.

ಈತನು ವೀರಶೈವ ಕವಿ; ಬೆಂಗಳೂರು ತಿಪ್ಪಸೆಟ್ಟಿ ಮಠದ ಗುರುಸಿದ್ಧ ಸ್ವಾಮಿಯ ಕರಜಾತನು.

ಗ್ರಂಥಗಳು—ರಾಜೇಶ್ವರ ಶತಕ, ವೇಣುಗೋಪಾಲ ಶತಕ, ರೇಣುಕಾರ್ಯ ಸ್ತೋತ್ರ, ಅಂಬಾಸ್ತೋತ್ರ, ಸಿರಿಯಾಳನ ಚರಿತ್ರೆ, ಸತ್ಯಹರಿಶ್ಚಂದ್ರಮಹಾರಾಯನ ಚರಿತ್ರೆ, ಗಂಗಾಧರ ಸ್ತೋತ್ರ, ಗಣಾಷ್ಟಕ, ನಿರಾಳಗುರುಸ್ತೋತ್ರ.

ಬಾಗಲೂರು ರಾಮಸ್ವಾಮಿ.

ಇವನು ಸ್ಮಾರ್ತಕವಿ; ಇವನ ಸ್ಥಳ ದೇವನಹಳ್ಳಿ ತಾಲ್ಲೂಕು ಬಾಗಲೂರು.

ಗ್ರಂಥ— ವಾಸಿಷ್ಠರಾಮಾಯಣ (54 ಸರ್ಗ); ಕಂದ, ವೃತ್ತ, ಷಟ್ಪದಿ, ಗೀತ, ವಚನ ಎಲ್ಲವನ್ನೂ ಒಳಕೊಂಡಿದೆ.

ಎಣ್ಣೆಮಡಿ ವೆಂಕಟರವಣಯ್ಯ.

ಈತನು (ಸಾರಸ್ವತ) ಬ್ರಾಹ್ಮಣ ಕವಿ; ಇವನ ಸ್ಥಳ ಉತ್ತರಕನ್ನಡ ಜಿಲ್ಲಾ ಕುಮ್ಟ. ಗ್ರಂಥ—ರುಕ್ಮಿಣೀ ಸ್ವಯಂವರ.

ಎಂ. ಶ್ರೀನಿವಾಸಯ್ಯಂಗಾರ್.

ಈತನು ಶ್ರೀವೈಷ್ಣವ ಕವಿ; ಮಾಲೂರು ಮಾಡಭೂಷಿ ಶೇಷಾದ್ರಿ ಅಯ್ಯಂಗಾರ್ರ ಮಗ.

ಗ್ರಂಥ—ರುಕ್ಮಿಣೀಪರಿಣಯ (ಚಂಪು); ಷಟ್ಪದಿಗಳೂ ಇವೆ. ಬಮ್ಮೇರ ಪೋತನ ಆಂಧ್ರಭಾಗವತದ ಈ ಭಾಗವನ್ನು ಪರಿವರ್ತಿಸಿ ವಿಸ್ತರಿಸಿದ್ದಾನೆ.

ವೀರವಪ್ಪಾರಾಧ್ಯ.

ಇವನು ವೀರಶೈವ ಕವಿ; ಮಾಲೂರು ತಾಲ್ಲೂಕು ಅರಸಿನಗುಂಟೆ ಹೊಸ ಮಠದ ಅಧ್ಯಕ್ಷನಾಗಿದ್ದನು. ಗ್ರಂಥ —ಆಟವೀಶಭಜನಾಮೃತ (ಶರಷಟ್ಪದಿ).

ಭೀಮಾಜಿ ಶ್ರೀನಿವಾಸ ಅಡಬಡ್ಡಿ.

ಇವನು ಬ್ರಾಹ್ಮಣ ಕವಿ; ಧಾರವಾಡ ಪ್ರಾಂತದವನು.

ಗ್ರಂಥಗಳು—ಪೆಣ್ಣಡೆಗನ್ನಡಿ (ನಾನಾಪದ್ಯ), ನೀತಿದರ್ಪಣ (ಕಂದ).

ವೆಂಕಟಾಚಲಯ್ಯ.

ಈತನು ಸ್ಮಾರ್ತ ಕವಿ; ದೇವನಹಳ್ಳಿ ತಾಲ್ಲೂಕು ಕುಂದಾಣದಲ್ಲಿ ಉಪಾಧ್ಯಾಯನಾಗಿದ್ದನು. ಗ್ರಂಥ—ಕಲಿಧರ್ಮಶತಕ (ಕಂದ).

ನಂಜುಂಡಾಚಾರ್ಯ.

ಈತನು ಅಕ್ಕಸಾಲೆ; ಇವನ ಸ್ಥಳ ರಾಮನಾಥಪುರ.

ಗ್ರಂಥ—ತ್ರಿಮೂರ್ತ್ಯಾತ್ಮಕಚರಿತ್ರೆ(ಷ); (ವಿಶ್ವಕರ್ಮಪುರಾಣಾಂತರ್ಗತ).

ಸರಗೂರು ವೆಂಕಟವರದಾಚಾರ್ಯ.

ಈತನು ಶ್ರೀವೈಷ್ಣವ ಕವಿ; ಇವನ ಸ್ಥಳ ಚಾಮರಾಜನಗರದ ತಾಲ್ಲೂಕು ಸರಗೂರು.

ಗ್ರಂಥಗಳು—ತಪತೀಪರಿಣಯ ನಾಟಕ, ವ್ಯಾಘ್ರಾಚಲ ಮಾಹಾತ್ಮ್ಯ, ರಾಧಾಕೃಷ್ಣವಿಲಾಸ, ಗೊಪಿಕಾಗೀತೆ, ಶ್ರೀನಿವಾಸಸಂಕೀರ್ತನ.

ಬಿ. ವೆಂಕಟಾಚಾರ್ಯ.

ಈತನು ಶ್ರೀವೈಷ್ಣವನು; ಮೈಸೂರು ಸರ್ಕಾರದಲ್ಲಿ ಮುನ್ಸಿಫ್ ಕೆಲಸದಲ್ಲಿದ್ದನು. ಬಂಗಾಳಿ ಭಾಷೆಯ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕನ್ನಡ ಸಾಹಿತ್ಯವನ್ನು ವೃದ್ಧಿಗೊಳಿಸಿದನು. ಈತನ ಗ್ರಂಥಗಳ ಸಂಖ್ಯೆ ಸುಮಾರು 50 ರ ವರೆಗೆ ಇರಬಹುದು.

ಗ್ರಂಥಗಳು—ಅಹಲ್ಯಾಬಾಯಿ, ಅಡವಿಯಹುಡುಗಿ, ಅತ್ತಿಗೆ, ಅಂತಃಪುರದ ರಹಸ್ಯ, ಯವನಯಾಮಿನೀವಿನೋದಗಳು (ಅರೇಬಿಯನ್ ನೈಟ್ಸ್), ಆನಂದಮಠ, ಇಂದಿರಾ, ಕಪಾಲಕುಂಡಲಾ, ಕಮಲಾಕಾಂತ, ಚಂದ್ರಶೇಖರ, ದುರ್ಗೇಶನಂದಿನಿ, ದೇವಿ ಚೌಧುರಾಣಿ, ನೀರದೆ, ಪರಿಮಳಾ, ಭಾರತಮಹಿಳೆಯರು, ಭ್ರಾಂತಿವಿಲಾಸ, ಮಾಧವೀಲತಾ, ಮಾಲತಿ, ಮೃಣ್ಮಯಿ, ಯುಗಳಾಂಗುರೀಯ, ರಜನಿ, ರಮಾಬಾಯಿ, ರಾಜಸಿಂಹ, ರಾಧಾರಾಣಿ, ವಿಷವೃಕ್ಷ, ಶರಣಾಗತ, ಶಾಕುಂತಲಕಥೆ, ಸೀತಾರಾಮ, ಸೀತಾವನವಾಸಕಥೆ, ಕೃಷ್ಣಕಾಂತನ ಉಯಿಲು, ಲೋಕೈಕ ಚತುರನ ಕಥೆ, ರಾಮೇಶ್ವರನ ಅದೃಷ್ಟ, ರಾಜಸ್ಥಾನದ ಕಥೆಗಳು, ರಾಸೆಲಾಸ, ಪ್ರಾಚೀನ ಮತ್ತು ನವೀನ ಸ್ತ್ರೀಪುರುಷರು, ಭಗವಚ್ಛಾಸ್ತ್ರಭಾಸ್ಕರ—ಇತ್ಯಾದಿ.

ಕುಂಡಲಗಿರಿಯೋಬಾರ್ಯ.

ಈತನು ಮಾಧ್ವನು; ಮೈಸೂರು ಶಿಕ್ಷಕಶಿಕ್ಷಣಾಲಯದಲ್ಲಿ ಉಪಾಧ್ಯಾಯನಾಗಿದ್ದನು.

ಗ್ರಂಥಗಳು—ಜೀವಂಧರಚರಿತೆ, ಧರ್ಮಶರ್ಮಾಭ್ಯುದಯ, ಹರ್ಷಚರಿತೆ, ಶಬ್ದಾನುಶಾಸನಪ್ರಕಾಶಿಕೆ.

ವೆಂಕಟರಂಗೋಕಟ್ಟಿ.

ಈತನು ಬ್ರಾಹ್ಮಣನು; ಧಾರವಾಡದ ಶಿಕ್ಷಕಶಿಕ್ಷಣಾಲಯದಲ್ಲಿ ಅಧ್ಯಕ್ಷನಾಗಿದ್ದನು.

ಗ್ರಂಥಗಳು—ಬಥೋಲ್ಡನ ಕಥೆ, ಆರುಬೆರಲಿನ ಕುರುಹು, ಜ್ಯೋತಿಶ್ಶಾಸ್ತ್ರ, ಕರ್ನಾಟಕದ ಗೆಜೆಟಿಯರ್, ಪ್ರಾಕೃತಿಕ ಭೂಗೋಳಶಾಸ್ತ್ರ, ಕನ್ನಡ ಲಘು ವ್ಯಾಕರಣ, ವಿಧವೆಗಳ ಮುಂಡನ ಅನಾಚಾರ, ಉಪನ್ಯಾಸವಿದ್ಯೆ, ಅರೇಬಿಯನ್ ನೈಟ್ಸ್ ಕಥೆಗಳು.

ಎಂ. ಬಿ. ಶ್ರೀನಿವಾಸಯ್ಯಂಗಾರ್, ಎಂ. ಎ.

ಈತನು ಶ್ರೀವೈಷ್ಣವನು; ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಟಾನ್ಸ್‌ಲೇಟರಾಗಿಯೂ (ಪರಿವರ್ತಕ) ಉಪಾಧ್ಯಾಯನಾಗಿಯೂ ಇದ್ದನು. ಇವನ ಸ್ಥಳ ಮೈಸೂರು.

ಗ್ರಂಥಗಳು—ಜಯಸಿಂಹರಾಜಚರಿತೆ, ಹೇಮರಾಜನಿಲಾಸ, ನೀತಿಚಿಂತಾಮಣಿ, ಹಿಂದೂಚರಿತ್ರಸಂಗ್ರಹ, ಹಿಂದೂದೇಶದ ನಾಗರಿಕ (Citizen of India), ನಿತ್ಯಾನುಸಂಧಾನ ಟೀಕೆ (ತಮಿಳು ಗ್ರಂಥಗಳಿಗೆ ಕನ್ನಡ ಟೀಕೆ).

ಬಿ. ಸೋಮನಾಥಯ್ಯ.

ಈತನು ಸ್ಮಾರ್ತನು; ಇವನ ಸ್ಥಳ ತುಮಕೂರು ತಾಲ್ಲೂಕು ಬೆಳ್ಳಾವೆ.

ಗ್ರಂಥಗಳು— ರಾಜಶೇಖರಚರಿತೆ, ಶ್ರೀರಂಗಪಟ್ಟಣದ ಚರಿತೆ, ವಿಜ್ಞಾನದೀಪಿಕೆ.

ವೆಂಕಟೇಶ ಶಾಸ್ತ್ರಿ

ಈತನು ಸ್ಮಾರ್ತನು; ಇವನ ಸ್ವಗ್ರಾಮ ನೆಲಮಂಗಲದ ತಾಲ್ಲೂಕು ಸೊಂಡೆಕೊಪ್ಪ.

ಗ್ರಂಥಗಳು—ಕೃಷ್ಣಬೋಧಾಮೃತ, ಹನ್ನೆರಡುರಾಜರ ಕಥೆ (ನರನಾರಾಯಣ ಸಂವಾದರೂಪ), ದ್ವಾದಶಮಂಜರಿಕಾಸ್ತೋತ್ರ ಟೀಕೆ, ಪುಷ್ಪಸೌರಭಕಥೆ.

ಶಿವರುದ್ರಸೋಮಪ್ಪ ಕುಲಕರ್ಣಿ.

ಈತನು ವೀರಶೈವನು; ಧಾರವಾಡಪ್ರಾಂತದವನು; ಕನ್ನಡ ಶಾಲಾಧ್ಯಾಪಕನಾಗಿದ್ದನು.

ಗ್ರಂಥಗಳು—ನನ್ನತಾಯಿ, ನಾಡನೆಲೆಕಾರ, ಜೀವಿಗರ ಚಿಂತಾಮಣಿ, ಹಿತೋಪದೇಶ (ಉತ್ತರಾರ್ಧ), ಭೂಮಂಡಲಬೋಧಿನಿ.

ಧಾರಾಪುರದ ತಿಮ್ಮಪ್ಪದಾಸ.

ಈತನು ಮಾಧ್ವಕವಿ; ಹರಿಕಥೆ ಮಾಡುತ್ತಿದ್ದನು.

ಗ್ರಂಥಗಳು—ಲಾಕ್ಷಾಗೃಹದಹನ, ಬಕಾಸುರವಧೆ, ಗಾಲವಚರಿತ್ರೆ: ಇವು ಯಕ್ಷಗಾನಗಳು; ಮೂರುವರೆವಜ್ರದ ಕಥೆ. ಸುಭದ್ರಾಪರಿಣಯ, ಸುರಥ ಸುಧನ್ವರ ಕಾಳಗ ಎಂಬ ಯಕ್ಷಗಾನಗಳನ್ನೂ ಬರೆದಿರುವಂತೆ ತೋರುತ್ತದೆ.

ಸಿದ್ಧರಾಮ ಶಿವಯೋಗಿ.

ಇವನು ವೀರಶೈವಕವಿ; ತಾಂಡೂರು ಹೊಸಪೇಟೆ ನಿಜಮಠಕ್ಕೆ ಸೇರಿದವನು.

ಗ್ರಂಥ—ಚೆನ್ನಬಸವಾಭ್ಯುದಯ (ಷ).

ದಕ್ಷಿಣಾಮೂರ್ತಿಶಾಸ್ತ್ರಿ.

ಈತನು ಸ್ಮಾರ್ತನು; ಮೈಸೂರು ವಾಚ್ಯಕೋಶಾಲಯದಲ್ಲಿ ಪಂಡಿತನಾಗಿದ್ದನು.

ಗ್ರಂಥಗಳು—ಅಲ್ಲಾವುದ್ದೀನ ಅದ್ಭುತದೀಪ, ಶಬ್ದಭಾಸ್ಕರ, ರಾಜಶೇಖರ ವಿಲಾಸ ಟೀಕೆ, ಶಂಕರವಿಜಯ ವ್ಯಾಖ್ಯಾನ.

ಇಡಗೂರು ರುದ್ರಕವಿ.

ಈತನು ವೀರಶೈವಕವಿ. ಗ್ರಂಥಗಳು — ಶಿವನಾಟಕ, ಮಾರ್ಕಂಡೇಯ ಚರಿತೆ, ಮೀನಾಕ್ಷೀಕಲ್ಯಾಣ.

ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ.

ಈತನು ಸ್ಮಾರ್ತನು; ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪಂಡಿತನಾಗಿದ್ದನು.

ಗ್ರಂಥಗಳು—ಚಾರುದರ್ವೀಷ್ ಕಥೆ, ಶಕುನಸಂಗ್ರಹ, ಜೈಮಿನಿಭಾರತದ ಟೀಕೆ, ಭಾಗವತ ಟೀಕೆ, ಬೃಹಜ್ಜಾತಕ ಟೀಕೆ, ಅಷ್ಟಗನ್ನಡ ರಾಮಾಯಣ (ಷ) ಅಸಮಗ್ರ.

ದೇವಶಿಖಾಮಣಿ ಶ್ರೀನಿವಾಸಯ್ಯಂಗಾರ್.

ಈತನು ಶ್ರೀವೈಷ್ಣವ ಕವಿ; ಹಿರೋಡೆ ಸಬಡಿವಿಜನ್ ಕಚೇರಿಯಲ್ಲಿ ಕೆಲಸದಲ್ಲಿದ್ದನು.

ಗ್ರಂಥಗಳು—ಪ್ರಜೋಧಚಂದ್ರೋದಯ, ಕಿರಾತಾರ್ಜುನೀಯ ಕಥೆ, ಗಿರಿಜಾಕಲ್ಯಾಣಕಥೆ, ಧ್ರುವೋಪಾಖ್ಯಾನ, ನಳಚರಿತ್ರೆ, ಪ್ರಹ್ಲಾದಚರಿತ್ರೆ, ವನಮಾಲಿವಿಲಾಸಕಥೆ, ಮುಕುಂದಮಾಲೆ.

ಚಂದ್ರಶೇಖರಶಾಸ್ತ್ರಿ.

ಈತನು ಸ್ಮಾರ್ತಕವಿ; ಬೆಂಗಳೂರು ದಿವಾನ್ ಕಚೇರಿಯಲ್ಲಿ ಕೆಲಸದಲ್ಲಿದ್ದನು.

ಗ್ರಂಥಗಳು—ದ್ರೌಪದೀ ವಸ್ತ್ರಾಪಹರಣ, ಮನುಚರಿತ್ರೆ, ಮಂದಾರವಲ್ಲೀ ಪರಿಣಯ.

ಎ. ಆನಂದರಾಯ.

ಈತನು ಮಾಧ್ವನು; ಮೈಸೂರು ಸರಕಾರದಲ್ಲಿ ಅಸಿಸ್ಟೆಂಟ್ ಕಮಿಷನರ್ ಕೆಲಸದಲ್ಲಿದ್ದನು.

ಗ್ರಂಥ — ಪಾಂಚಾಲೀಪರಿಣಯ ನಾಟಕ (Merchant of Venice).

ಗೋಡಪಲ್ಲಿ ರಾಮಶಾಸ್ತ್ರಿ.

ಈತನು ಸ್ಮಾರ್ತಕವಿ. ಗ್ರಂಥಗಳು—ಚಂಡಕೌಶಿಕ ನಾಟಕ, ಚಂಡೀ ಮದಮರ್ದನ ನಾಟಕ, ತಾರಾಶಶಾಂಕವಿಜಯ, ಜೋರಕಥೆ, ಕುಮಾರರಾಮನ ನಾಟಕ.

ಲೋಕನಾಥಕವಿ.

ಈತನು ಸ್ಮಾರ್ತಕವಿ; ಇವನ ಸ್ಥಳ ಶ್ರೀನಿವಾಸಪುರ.

ಗ್ರಂಥಗಳು—ದಶಕುಮಾರಚರಿತೆ, ಧ್ರುವಚರಿತ್ರೆ, ವೈದ್ಯಶತಶ್ಲೋಕೀ ಟೀಕೆ, ಸನತ್ಕುಮಾರಗೃಹವಾಸ್ತುದರ್ಪಣಟೀಕೆ.

ವೋಟಗಾನಹಳ್ಳಿ ಶಂಕರಶಾಸ್ತ್ರಿ.

ಈತನು ಸ್ಮಾರ್ತಕವಿ. ಗ್ರಂಥ—ಇಂದ್ರಸಭಾನಾಟಕ.

ನಕಲಿ ಶಾಮರಾಯ.

ಈತನು ಬ್ರಾಹ್ಮಣಕವಿ; ಇವನ ಸ್ಥಳ ಬೆಂಗಳೂರು. ಗ್ರಂಥ—ಧರ್ಮಪಾಲಚರಿತೆ (ನಾಟಕ).

ಬಳ್ಳಾರಿ ರಾಮಭಟ್ಟ.

ಈತನು ಸ್ಮಾರ್ತನು. ಗ್ರಂಥ—ಕೃಷ್ಣಚರಿತ್ರೆ.

ವೆಂಕಟಾಚಲಪಂಡಿತ.

ಈತನು ಸ್ಮಾರ್ತಕವಿ; ಕೊಳ್ಳೆಗಾಲಂ ಪಾಳ್ಯದ ಕೊಂಡಾಪಂಡಿತರ ಮಗನು. ಗ್ರಂಥ—ಮಂದಾರೋಜ್ವಲಾಪರಿಣಯ ನಾಟಕ (ಗುಲೇಬಕಾವಲಿ).

ಕ. ಅನಂತರಾಮಯ್ಯ.

ಈತನು ಸ್ಮಾರ್ತಕವಿ. ಗ್ರಂಥಗಳು—ಅಜಾಮಿಳಚರಿತೆ, ಪ್ರಹ್ಲಾದಚರಿತೆ.

ಯಜಮಾನ ಸಿದ್ಧಲಿಂಗಪ್ಪ.

ಈತನು ವೀರಶೈವಕವಿ; ಇವನ ಸ್ಥಳ ಬೇಲೂರು.

ಗ್ರಂಥ—ಕರಿಯಬಂಟನಕಥೆ.

ಸುಬ್ಬಯ್ಯ.

ಈತನು ಬ್ರಾಹ್ಮಣಕವಿ ; ವಿಟ್ಠಲಗೌರಿಯರ ಪುತ್ರ.

ಗ್ರಂಥಗಳು—ರಾವಣೋದ್ಭವ, ರುಕ್ಮಿಣೀಸ್ವಯಂವರ.

ಸಾಗ್ಗರೆ ಶ್ರೀಕಂಠಶಾಸ್ತ್ರಿ.

ಈತನು ಸ್ಮಾರ್ತಕವಿ. ಗ್ರಂಥ— ಕರ್ಣಾಟಕಮಾಳವಿಕಾಗ್ನಿಮಿತ್ರ.

ಗಿರಿಭಟ್ಟರ ತಮ್ಮಯ್ಯ.

ಈತನು ಸ್ಮಾರ್ತಕವಿ. ಗ್ರಂಥಗಳು—ದ್ರೌಪದೀಸ್ವಯಂವರ, ಸುಧನ್ವ ಚರಿತ್ರೆ. ಅಷ್ಟೋತ್ತರಶತಮಂಗಳಗೀತಾವಳಿಯನ್ನೂ ಬರೆದಿರುವಂತೆ ತೋರುತ್ತದೆ.

ಉಪ್ಪಾಭಟ್ಟ

ಇವನು ಸ್ಮಾರ್ತಕವಿ ; ಇವನ ಸ್ಥಳ ಗುಬ್ಬಿ ತಾಲ್ಲೂಕು ದಂಡಿನ ಸಿವರ.

ಗ್ರಂಥ—ಮಾರ್ಕಂಡೇಯನಾಟಕ.

ಭಾಗವತ ಕರಿಯಪ್ಪ.

ಇವನು ಬ್ರಾಹ್ಮಣಕವಿ ; ಇವನ ಸ್ಥಳ ತಿಪಟೂರು ತಾಲ್ಲೂಕು ಬೊಮ್ಮಲಾಪುರ. ಗ್ರಂಥ—ನರಕಾಸುರನ ಕಾಳಗ.

ವೆಂಕಟಾದ್ರಿ ಶಾಮರಾಯ.

ಈತನು ಬ್ರಾಹ್ಮಣನು ; ಕೊಡಗು ಪ್ರಾಂತದವನು. ಕೆಲವು ಯಕ್ಷಗಾನಗಳನ್ನೂ ಹಾಡುಗಳನ್ನೂ ಬರೆದಿರುವಂತೆ ಹೇಳುತ್ತಾರೆ.

ಶೇಷಗಿರಿರಾವ್ ತುರಮರಿ.

ಈತನು ಬ್ರಾಹ್ಮಣಕವಿ ; ಧಾರವಾಡ ಪ್ರಾಂತದವನು.

ಗ್ರಂಥ—ಶಾಕುಂತಲನಾಟಕ.

ಶಿವಪ್ಪಶಾಸ್ತ್ರಿ.

ಈತನು ವೀರಶೈವಕವಿ. ಗ್ರಂಥಗಳು—ಶಿವಯೋಗರಹಸ್ಯ, ವೀರಶೈವಾಮೃತಪುರಾಣ ಟೀಕೆ, ದ್ರೌಪದೀಸ್ವಯಂವರ ನಾಟಕ, ಪ್ರಭಾವತೀದರ್ಬಾರು ನಾಟಕ, ಮನೋವಿಜಯ ಟೀಕೆ, ಲಟವೀಶಗೀತಾಮಂಜರಿ.

ವೆಂಕಟನರಸಯ್ಯ.

ಈತನು ಬ್ರಾಹ್ಮಣಕವಿ; ಮೈಸೂರು ಮದನವಿಲಾಸತೊಟ್ಟಿ ಕಟ್ಟಿಗೆ ದಫೇ ದಾರನಾಗಿದ್ದನು.

ಗ್ರಂಥ—ಹನುಮದ್ವಿಲಾಸ.

ವೆಂಕಟರಮಣಭಟ್ಟ.

ಈತನು ಬ್ರಾಹ್ಮಣನು; ಅಪ್ಪಣ್ಣಭಟ್ಟನ ಮಗನು. ಇವನ ಸ್ಥಳ ಉಡುಪಿ.

ಗ್ರಂಥ—ಇಂದ್ರವಿಜಯ.

ದ್ರಾವಿಡ ವೆಂಕಟಕವಿ.

ಈತನು ಬ್ರಾಹ್ಮಣಕವಿ. ಗ್ರಂಥಗಳು—ಮೈರಾವಣನ ಕಾಳಗ, ರಾವಣ ದಿಗ್ವಿಜಯ.

ಎಂ. ಬಿ. ರಾಮರಾಯ.

ಈತನು ಬ್ರಾಹ್ಮಣಕವಿ; ಸದಾಶಿವರಾಯನ ಪೌತ್ರನು.

ಗ್ರಂಥ—ಚಾರುಶೀಲೆಯಚರಿತ್ರೆ (ನಾಟಕ).

ಹೇಮರೆಡ್ಡಿ.

ಮಾಲೂರು ಲಕ್ಷ್ಮಣರೆಡ್ಡಿಯ ಮಗನು. ಗ್ರಂಥ—ಪ್ರಹ್ಲಾದಚರಿತೆ.

ತಂಬಿನಕಟ್ಟೆ ಗುರುರಾಯಾಚಾರ್ಯ.

ಈತನು ಮಾಧ್ವಕವಿ. ಗ್ರಂಥ— ಚಿತ್ರಕೇತುಚರಿತೆ; (ಭಾಗವತಾಂತರ್ಗತ).

ಕೇಷರಾಮಯ್ಯ.

ಈತನು ಬ್ರಾಹ್ಮಣಕವಿ; ಇವನ ಸ್ಥಳ ಹಯವರ (ಹೆಗ್ಗುಂದ).

ಗ್ರಂಥ—ನೀಲಧ್ವಜನಕಾಳಗ.

ಮುಂಜಯ್ಯಸಾಸ.

ಈತನು ಬ್ರಾಹ್ಮಣಕವಿ; ಉಡುಪಿಯಕಡೆಯವನು.

ಗ್ರಂಥ—ಚಿತ್ರವಿಚಿತ್ರರಕಾಳಗ.

ವಿಷ್ಣುಕವಿ.

ಈತನು ಬ್ರಾಹ್ಮಣಕವಿ; ರಾಮನ ಮಗನು. **ಗ್ರಂಥಗಳು**—ಇಂದ್ರ ಕೀಲ, ಉತ್ತರಗೋಗ್ರಹಣ, **ಬಾಣಾಸುರನ** ಕಾಳಗ, ಶ್ರೀನಿವಾಸಕಲ್ಯಾಣ.

ಅನಂತರಾಮಯ್ಯಂಗಾರ್.

ಈತನು ಶ್ರೀವೈಷ್ಣವಕವಿ. **ಗ್ರಂಥ**—ಕೃಷ್ಣಪಾರಿಜಾತ.

ಭಾಸ್ಕರಕವಿ.

ಈತನು ಬ್ರಾಹ್ಮಣಕವಿ. **ಗ್ರಂಥ**—ಚಂದ್ರಾವಳೀಕಥೆ.

ಸೂರ್ಯನಾರಾಯಣಪ್ಪ.

ಈತನು ಬ್ರಾಹ್ಮಣಕವಿ. **ಗ್ರಂಥ**—ಜಾನಕೀಪರಿಣಯ.

ಕೃಷ್ಣಜಿ ಬಾಪೂರಾವ್.

ಈತನು ಬ್ರಾಹ್ಮಣಕವಿ; ಧಾರವಾಡ ಪ್ರಾಂತದವನು.

ಗ್ರಂಥ—ದ್ರೌಪದೀಸ್ವಯಂವರ.

ಗುಂಡೋಕೃಷ್ಣ ಚುರುಮುರಿ.

ಈತನು ಬ್ರಾಹ್ಮಣಕವಿ; ಧಾರವಾಡ ಪ್ರಾಂತದವನು

ಗ್ರಂಥ—ರಾಘವೇಂದ್ರರಾವ್ ನಾಟಕ.

ಶ್ರೀನಿವಾಸಕವಿ.

ಇವನು ಬ್ರಾಹ್ಮಣಕವಿ. **ಗ್ರಂಥ**—ಸುಮತಿಶತಕ (ಕಂದ).

ಶಂಕರಕವಿ.

ಈತನು ಬ್ರಾಹ್ಮಣಕವಿ. **ಗ್ರಂಥ**—ಗಿರಿಜಾಕಲ್ಯಾಣನಾಟಕ.

ಎಂ. ವೀರಮುದ್ದಯ್ಯ

ಈತನು ವೀರಶೈವಕವಿ; ಮೈಸೂರು ಬಿ. ಪುಟ್ಟಣ್ಣನ ಮಗನು.

ಗ್ರಂಥಗಳು—ಸಿರಿಯಾಳಚರಿತ್ರೆ (ಲಾವಣಿ), ಕೃಷ್ಣರಾಜಪಟ್ಟಾಭಿಷೇಕದ ಲಾವಣಿ.

ಶಿವನಂಜೇಗೌಡ.

ಈತನು ವೀರಶೈವನು ; ಹಳೇಬೀಡು ಪಟೇಲನಾಗಿದ್ದನು.

ಗ್ರಂಥ—ಹಳೇಬೀಡು ಪುರಾತನಚರಿತೆ.

ಉಪ್ಪತ್ತನಾರಾಯಣಶಾಸ್ತ್ರಿ.

ಈತನು ಸ್ಮಾರ್ತನು. **ಗ್ರಂಥಗಳು**—ಧರ್ಮಸಾಮ್ರಾಜ್ಯ, ಧರ್ಮಪದ, ಬೌದ್ಧಾವತಾರ, ವ್ಯಾಘ್ರೀಜಲತಕ.

ಎಚ್. ಅಪ್ಪಣ್ಣಸೆಟ್ಟಿ.

ಈತನು ವೈಶ್ಯನು. **ಗ್ರಂಥ**—ಹೈದರ್‌ನಾಮೆ.

ನರಸಿಂಹವೌರಾಣಿಕ.

ಈತನು ಸ್ಮಾರ್ತನು ; ಇವನಿಗೆ ಗುಂಡಶಾಸ್ತ್ರಿ ಎಂಬ ಹೆಸರೂ ಉಂಟು

ಗ್ರಂಥ—ಪೌರುಷಪ್ರಕಾಶ.

ಎಸ್. ಶ್ರೀನಿವಾಸರಾಯ ಬಿ. ಎ.

ಈತನು ಸ್ಮಾರ್ತನು ; ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉಪಾಧ್ಯಾಯನಾಗಿದ್ದನು. **ಗ್ರಂಥ**—ನಾಟಕಕಥಾರತ್ನಮಾಲೆ.

ಕೆರೂರು ವಾಸುದೇವಾಚಾರ್ಯ

ಈತನು ಬ್ರಾಹ್ಮಣನು ; ಧಾರವಾಡ ಪ್ರಾಂತದವನು.

ಗ್ರಂಥಗಳು—ಇಂದಿರಾ, ಯದುಮಹಾರಾಜ, ನಳದಮಯಂತಿ, ಔರಂಗಜೇಬ.

ಎಲ್. ಜಯರಾಯ ಬಿ. ಎ.

ಈತನು ಮಾಧ್ವನು ; ಇವನ ಸ್ಥಳ ಮೈಸೂರು.

ಗ್ರಂಥ—ಪೀಟರಿನ ಚರಿತ್ರೆ.

ಬಿ. ನರಸಿಂಹಯ್ಯ.

ಇವನು ಸೂತಕುಲದವನು ; ಬೆಂಗಳೂರು ಸೆಂಟ್ರಲ್ ಬುಕ್‌ಡಿಪೋಯಲ್ಲಿ ಕೆಲಸದಲ್ಲಿದ್ದನು.

ಗ್ರಂಥ—ಶ್ರೀಸೂತಪುರಾಣ.

ಸೋ. ಕೃಷ್ಣಶಾಸ್ತ್ರಿ.

ಈತನು ಸ್ಮಾರ್ತನು. **ಗ್ರಂಥ**—ಜಗನ್ಮೋಹಿನೀರತ್ನಕಲಾವಿಲಾಸ

ಕಂ. ಟಿ. ಶ್ರೀನಿವಾಸರಾಯ.

ಈತನು ಬ್ರಾಹ್ಮಣನು. **ಗ್ರಂಥ**—ಶತಕಂಠರಾಮಾಯಣ.

ಕೆ ರಾಘವಾಚಾರ್ಯ.

ಈತನು ಬ್ರಾಹ್ಮಣನು. **ಗ್ರಂಥ**—ಪದ್ಮಿನೀಚರಿತ್ರೆ

ಸೀತಾರಾಮಸಿಂಗ್.

ಈತನು ಮರಾಠಿಯವನು; ಗಂಜಾಂ ಕೃಷ್ಣಸಿಂಗನ ಮಗನು.

ಗ್ರಂಥ—ಶ್ರೀರಂಗಮಾಹಾತ್ಮ್ಯ.

ಪಾಂಡುರಂಗಯ್ಯ

ಈತನು ಬ್ರಾಹ್ಮಣನು; ಗುಬ್ಬಿ ತಾಲ್ಲೂಕು ಬಿದರೆಯಲ್ಲಿ ಉಪಾಧ್ಯಾಯನಾಗಿದ್ದನು.

ಗ್ರಂಥ—ಹರಿಹರನಾಮಾಮೃತಸಾರಸಂಗ್ರಹ.

ನಾಡಕರ್ಣಿ ಅಣ್ಣಪ್ಪಯ್ಯ.

ಈತನು ಸಾರಸ್ವತ ಬ್ರಾಹ್ಮಣನು; ಉತ್ತರಕನ್ನಡ ಪ್ರಾಂತದವನು. ಇವನು ಯಕ್ಷಗಾನಗಳನ್ನೂ ಹಾಡುಗಳನ್ನೂ ಬರೆದಿರುವುದಾಗಿ ಹೇಳುತ್ತಾರೆ. ಇವನಿಗೆ ಶೇಫ್ಸುಕವಿ ಎಂಬ ಬಿರುದುಂಟು.

ಶಾಂತಿಬಾಯಿ.

ಇವಳು ಬ್ರಾಹ್ಮಣಿತಿ; ಉತ್ತರಕನ್ನಡ ಪ್ರಾಂತದವಳು; ಹಾಡುಗಳನ್ನು ಬರೆದಿದ್ದಾಳೆ.

ಶಾಮರಾವ್ ವಿಠಲಕಾಯಕಿಣಿ.

ಈತನು ಸಾರಸ್ವತ ಬ್ರಾಹ್ಮಣನು; ಉತ್ತರಕನ್ನಡ ಪ್ರಾಂತದವನು; ಮುಂಬಯಿ ಹೈಕೋರ್ಟು ವಕೀಲನಾಗಿದ್ದನು

ಗ್ರಂಥ—ಕರ್ನಾಟಕ ವಿಶ್ವಗುಣಾದರ್ಶ. ಸಮುದ್ರಯಾನ ವಿಧವಾ ವಿವಾಹಗಳ ವಿಷಯವಾಗಿಯೂ ಬರೆದಿದ್ದಾನೆ.

ಶೇಷೋಜನಾರ್ದನ ಕೊಣ್ಣೂರ ಬಿ. ಎ.

ಈತನು ಬ್ರಾಹ್ಮಣನು; ಧಾರವಾಡ ಪ್ರಾಂತದವನು. **ಗ್ರಂಥ**—ಕೇಡು ತಂದ ಉಂಗರ (ಶಾಕುಂತಲ).

ಚೆನ್ನಬಸವಪ್ಪ ಬಸವಲಿಂಗಪ್ಪ.

ಈತನು ವೀರಶೈವನು; ಧಾರವಾಡ ಪ್ರಾಂತದವನು

ಗ್ರಂಥ—ನಗದವರನ್ನು ನಗಿಸುವ ಕಥೆ (Comedy of Errors).

ವೆಂಕಟಸುಬ್ಬಮ್ಮ.

ಇವಳು ಶೂದ್ರಳು; ಕೊಡಗುಪ್ರಾಂತದವಳು; ಹಾಡುಗಳನ್ನು ಬರೆದಿದ್ದಾಳೆ.

ಸಜೀವ ರಾಮಕೃಷ್ಣಯ್ಯ

ಈತನು ಸಾರಸ್ವತ ಬ್ರಾಹ್ಮಣನು; ಮಂಗಳೂರು ಸೆಂಟ್ ಜೇವಿಯರ್ ಕಾಲೇಜಿನಲ್ಲಿ ಕನ್ನಡ ಪಂಡಿತನಾಗಿದ್ದನು. ಇವನು ಕೆಲವು ಗ್ರಂಥಗಳನ್ನು ಬರೆದಿದ್ದಾನೆಂದು ಹೇಳುತ್ತಾರೆ

ಬೋಳಾರ ರಾಮಕೃಷ್ಣಯ್ಯ.

ಈತನು ಸಾರಸ್ವತ ಬ್ರಾಹ್ಮಣನು; ಮಂಗಳೂರು ಪ್ರಾಂತದವನು. ಇವನು ಕೆಲವು ಗ್ರಂಥಗಳನ್ನು ಬರೆದಿರುವುದಾಗಿ ಹೇಳುತ್ತಾರೆ.

ಎಚ್. ನಾರಾಯಣರಾಯ ಬಿ. ಎ. ಬಿ. ಎಲ್.

ಈತನು ಸಾರಸ್ವತ ಬ್ರಾಹ್ಮಣನು; ಮದರಾಸಿನಲ್ಲಿ ವಕೀಲನಾಗಿದ್ದು ಬಳಿಕ ಮುಂಬಯಿಯಲ್ಲಿ ವಾಸವಾಗಿದ್ದನು. ಗ್ರಂಥಗಳು—ಲಿಂಗ್ಲ್ಕವಿತಾವಳಿ, ಬ್ರಾಹ್ಮ ಗೀತಾ, ಕನ್ನಡದ ಕಥಾನಕ, ಇಂಗ್ಲಿಷ್ ಕನ್ನಡಕೋಶ.

ಟಿ. ಸುಬ್ಬರಾಯಶಾಸ್ತ್ರಿ.

ಈತನು ಸ್ಮಾರ್ತನು; ಇವನ ಸ್ಥಳ ಬೆಂಗಳೂರು **ಗ್ರಂಥ**—ರಾಮಾಯಣ ಟೀಕೆ (ಭಾವಸಿರೂಪಣ).

ರಂಗಬಲಿದದಾಸ

ಈತನು ಮಾಧ್ವನು; ಕೀರ್ತನೆಗಳನ್ನು ಬರೆದಿದ್ದಾನೆ.

ರಾಯವೇಲೂರು ಶತಕೋಪದಾಸ.

ಇವನು ಬ್ರಾಹ್ಮಣನು ; ಕೀರ್ತನೆಗಳನ್ನು ಬರೆದಿದ್ದಾನೆ.

ಆರ್. ರಘುನಾಥರಾಯ ಬಿ. ಎ.

ಈತನು ಮಾಧ್ವನು ; ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೈಸ್ಕೂಲ್ ಹೆಡ್ಮಾಸ್ಟರಾಗಿದ್ದನು. ಗ್ರಂಥಗಳು—ಕರ್ಣಾಟಕವ್ಯಾಕರಣೋಪನ್ಯಾಸಮಂಜರಿ, ಪ್ರೌಢಾವಿವಾಹ, ಸನಾತನಧರ್ಮದೀಪಿಕೆ.

ನರಸಿಂಗರಾಯ

ಈತನು ಬ್ರಾಹ್ಮಣನು ; ಮಂಗಳೂರು ಪ್ರಾಂತದವನು. ಗ್ರಂಥ—ಕಿಸಂವಾರ್ ಗ್ಯಾಸರಿ ಎಂಬ ಕೋಶ.

ಟಿ. ವ್ಯಾಸರಾಯ

ಈತನು ಮಾಧ್ವನು. ಗ್ರಂಥ—ವಾಗಟಿಗಳು.

ಎಲ್. ಸುಬ್ಬರಾಯ

ಈತನು ಬ್ರಾಹ್ಮಣನು ; ಇವನ ಸ್ಥಳ ಮೈಸೂರು. ಗ್ರಂಥ—ವನಸ್ಪತಿಶಾಸ್ತ್ರ.

ಎಚ್. ನರಸಿಂಹಯ್ಯಂಗಾರ್

ಈತನು ಶ್ರೀವೈಷ್ಣವನು ; ಮೈಸೂರು ಸರಕಾರದಲ್ಲಿ ಪಶುಚಿಕಿತ್ಸೆಯ ಅಧಿಕಾರದಲ್ಲಿದ್ದನು. ಗ್ರಂಥಗಳು—ಆರೋಗ್ಯಶಾಸ್ತ್ರ, ಪಶುವೈದ್ಯಸಂಗ್ರಹ.

ಜಿ. ಜಿ. ನೊರೋನ

ಈತನು ಕ್ರೈಸ್ತನು. ಗ್ರಂಥ — ಆಪಾಯದಲ್ಲಿನ ಉಪಾಯಸಂಗ್ರಹ (Ambulance Lectures).

ಆರೋಗ್ಯಂಪಿಳ್ಳೆ

ಈತನು ಕ್ರೈಸ್ತನು. ಗ್ರಂಥ—ಆರೋಗ್ಯಸೂತ್ರಸಂಗ್ರಹ.

ಜಿ. ಬಸವಪ್ಪಸೆಟ್ಟಿ

ಈತನು ಕ್ರೈಸ್ತನು. ಗ್ರಂಥ—ಇಂಗ್ಲಿಷ್ ವೈದ್ಯಪ್ರಕಾಶಿಕೆ.

ಹೊಸ ಪಂಡಿತ ಭೀಮರಾಯ

ಈತನು ಬ್ರಾಹ್ಮಣನು; ಇವನ ಸ್ಥಳ ಮೈಸೂರು. ಗ್ರಂಥಗಳು—ವೈದ್ಯ ಸಂಗ್ರಹ, ನಾಡೀಪ್ರಕರಣ.

ಪಾಂಡುರಂಗ ಚಿಂತಾಮಣಿ ಹೇಟಳರ

ಈತನು ಬ್ರಾಹ್ಮಣನು; ಧಾರವಾಡ ಪ್ರಾಂತದವನು. ಗ್ರಂಥ— ಶಬ್ದ ವ್ಯುತ್ಪತ್ತಿ.

ಮೈಸೂರು ವೇದಾಂತ ಶಿವರಾಮಶಾಸ್ತ್ರಿ

ಈತನು ಸ್ಮಾರ್ತನು. ಗ್ರಂಥಗಳು—ವೇದಾಂತಮುಕ್ತಿಮಾರ್ಗಪ್ರದೀಪಿಕೆ, ಬ್ರಹ್ಮಾನಂದಬೋಧೆ (ಷ), ಶಂಕರಾನಂದತತ್ವ.

ಎಚ್. ವಿ ನಂಜುಂಡಯ್ಯ ಎಂ. ಎ. ಎಂ. ಎಲ್.

ಈತನು ಸ್ಮಾರ್ತನು; ಮೈಸೂರು ಸರಕಾರದಲ್ಲಿ ಕೌನ್ಸಿಲರಾಗಿದ್ದನು.
ಗ್ರಂಥಗಳು—ವ್ಯವಹಾರದೀಪಿಕೆ, ಲೇಖ್ಯಬೋಧಿನಿ, ಅರ್ಥಶಾಸ್ತ್ರ.

ಬಾಪು ಸುಬ್ಬರಾಯ ಬಿ. ಎ.

ಈತನು ಮಾಧ್ವನು; ಕರ್ಣಾಟಕ ಗ್ರಂಥಮಾಲೆಯ ಸಂಪಾದಕನಾಗಿದ್ದನು.
ಗ್ರಂಥಗಳು—ಜಂಡವಮಾರುತ, ನಿರ್ಭಾಗ್ಯಮುರಾದ್.

ಎಂ. ಸೂರ್ಯನಾರಾಯಣರಾಯ

ಈತನು ಸ್ಮಾರ್ತನು; ಮೈಸೂರು ಸರಕಾರದಲ್ಲಿ ಡೆಪ್ಯುಟಿ ಕಮಿಷನರಾಗಿದ್ದನು. **ಗ್ರಂಥ**—ಸ್ತ್ರೀಧರ್ಮನೀತಿ.

ಕೃಷ್ಣಮನಾಯುಡು

ಈತನು ನಾಯುಡು; ಮೈಸೂರು ಸರಕಾರದಲ್ಲಿ ದೊಡ್ಡ ಅಧಿಕಾರದಲ್ಲಿದ್ದನು.
ಗ್ರಂಥ—ಹಿಂದೂಸ್ತ್ರೀ ಪುನರ್ವಿವಾಹ.

ಎಸ್. ಆರ್. ಕರಿಬಸವಶಾಸ್ತ್ರಿ

ಈತನು ವೀರಶೈವನು; ಇವನ ಸ್ಥಳ ಮೈಸೂರು. **ಗ್ರಂಥಗಳು**—ಬಸವರಾಜವಿಜಯ, ಚೆನ್ನಬಸವೇಶವಿಜಯ, ಪಂಡಿತಾರಾಧ್ಯಚರಿತೆ.

ವಿರೂಪಾಕ್ಷಪಂಡಿತ

ಈತನು ವೀರಶೈವಕವಿ; ಹೈದರಾಬಾದು ಪ್ರಾಂತದವನು. **ಗ್ರಂಥ**—ಅಲಂದೆಯ ಶರಣುಬಸವಪುರಾಣ (ಷ)

ಅರಮನೆ ಮರಿಸೆಟ್ಟಿ

ಈತನು ವೀರಶೈವನು; ಇವನ ಸ್ಥಳ ಮೈಸೂರು. ಗ್ರಂಥಗಳು—ವೈದ್ಯಸಂಗ್ರಹ, ನೀತಿಸಾರ.

ಆರ್. ವೆಂಕಟಸುಬ್ಬರಾಯ ಬಿ. ಎ. ಬಿ. ಎಲ್.

ಈತನು ಮಾಧ್ವನು; ಮದರಾಸಿನಲ್ಲಿ ಹೈಕೋರ್ಟು ವಕೀಲನಾಗಿದ್ದನು. **ಗ್ರಂಥ**—ಹಿಂದೂ ಲಾ.

ವೇಲುಗೋಟೆ ರಾಜಮ್ಮ

ಈಕೆ ಮಾಧ್ವಳು. ಗ್ರಂಥಗಳು—ದೂರ್ವಾಸಚರಿತ್ರೆ, ಅನಂತಪದ್ಮನಾಭಕಥೆ (ಹಾಡು).

ಹಾಡಿನ ರಂಗಮ್ಮ

ಈಕೆ ಮಾಧ್ವಳು; ಇವಳ ಸ್ಥಳ ನಂಜನಗೂಡು; ಹಾಡುಗಳನ್ನು ಬರೆದಿದ್ದಾಳೆ.

ವೆಂಕಟಲಕ್ಷ್ಮಮ್ಮ

ಈಕೆ ಶ್ರೀವೈಷ್ಣವಳು; ಇವಳ ಸ್ಥಳ ಎಣ್ಣೆಹೊಳೆ ಕೊಪ್ಪಲು. **ಗ್ರಂಥ**—ಕೃಷ್ಣಪಾರಿಜಾತ.

ಆರನುನೆ ನಾಟಕದ ಸುಬ್ಬರಾಯ

ಈತನು ಸ್ಮಾರ್ತನು; ಇವನ ಸ್ಥಳ ಮೈಸೂರು. ಗ್ರಂಥಗಳು—ವಲೀಮುಖವಿಲಾಸ ನಾಟಕ, ಪ್ರಚ್ಛಾವತೀಪರಿಣಯ, ಯುವರಾಜಕಲ್ಯಾಣ.

ಶಾನುಭೋಗ್ಯ

ಈತನು ಬ್ರಾಹ್ಮಣಕವಿ. **ಗ್ರಂಥ**—ಯೋಗರತ್ನಾಕರ (ಷ).

ಶ್ರೀನಿವಾಸಕವಿ

ಈತನು ಬ್ರಾಹ್ಮಣಕವಿ; ಇವನ ಸ್ಥಳ ತಿರುಮೇಕೆರೆ. ಗ್ರಂಥ—ಹಿಂದೂ ದೇಶದಚರಿತ್ರನಿರ್ವಚನಪದ್ಯಕಾವ್ಯ.

ಗುರುಲಿಂಗಸ್ವಾಮಿ

ಈತನು ವೀರಶೈವನು; ಧಾರವಾಡದ ಎರಡೆತ್ತಿನಮಠದ ಸ್ವಾಮಿಯಾಗಿದ್ದನು. ಗ್ರಂಥ—ಲಿಂಗಾಯತಮತೋತ್ಪತ್ತಿನಿರ್ಣಯ.

ಬಸವಣ್ಣಕವಿ

ಈತನು ವೀರಶೈವನು ಗ್ರಂಥ—ನಯನಜನ ಕಥೆ (ಪದಗಳು) ನಯನಜನೆಂಬವನು ಒಬ್ಬ ವೀರಶೈವಶರಣನು

ಆರಮನೆಯ ಹೂವಿನ ಶಿವಲಿಂಗದೇವ

ಈತನು ವೀರಶೈವನು; ಬೆಟ್ಟದಪುರದ ಮಠದ ಚಿಕವೀರದೇಶಿಕನ ಕರಜಾತನು. ಇವನ ಸ್ಥಳ ಮೈಸೂರು. ಗ್ರಂಥ—ಹರಿಣೀಹರಣೋದ್ಧರಣ (ಶಿವರಾತ್ರಿಯ ಕಥೆ).

ಅಯ್ಯಸ್ವ

ಈತನು ಬ್ರಾಹ್ಮಣನು. ಗ್ರಂಥ—ಚಿದಾನಂದಾವಧೂತರ ಬಾಲಲೀಲೆ (ಪದಗಳು).

ತಂಬಳಬೀಡು ಪರ್ವತಯ್ಯ

ಈತನು ವೀರಶೈವಕವಿ; ಇವನ ಸ್ಥಳ ಆದವಾನಿ. ಗ್ರಂಥ—ಖೈರೂಪಳಿ ವೀರಭದ್ರಶತಕ (ಷ).

ತಿ. ಸ ಬಚ್ಚಾಶಾಸ್ತ್ರಿ

ಈತನು ಬ್ರಾಹ್ಮಣನು. ಗ್ರಂಥ—ಕ್ಷತ್ರಿಯಪುರಾಣಟೀಕೆ.

ಎಳಂದೂರು ಅಣ್ಣಾಜಿರಾಯ

ಈತನು ಮಾಧ್ವನು. ಗ್ರಂಥಗಳು—ಭ್ರಾಂತಿವಿಲಾಸ, ಇಂದ್ರಸಭೆ, ಹಾಡುಗಳು.

ರಾಜಾವಾರ್ ಸೂಲಿಬೆಲೆ ಡಿ. ಕಾಮರಾಯ

ಈತನು ಸ್ಮಾರ್ತನು. ಗ್ರಂಥಗಳು—ಚಂದ್ರಹಾಸನಾಟಕ, ಪ್ರಭಾವತೀ ದರ್ಬಾರ್ ನಾಟಕ, ಚಿತ್ರಭೋಗಕಮಲಾವತೀನಾಟಕ, ನಳನಾಟಕ, ಸತ್ಯವರ್ಮ ಚರಿತ್ರನಾಟಕ, ಆನಂದಸುಂದರೀಕಥೆ.

ವಿಶ್ವೇಶ್ವರಾನಂದಸರಸ್ವತಿ

ಈತನು ಬ್ರಾಹ್ಮಣನು; ಮೈಸೂರು ನಿರಂಜನಮಠಕ್ಕೆ ಸೇರಿದವನು.
ಗ್ರಂಥಗಳು—ಹೋಲ್ಕರನ ಚರಿತ್ರೆ, ಧರ್ಮದರ್ಪಣ.

ಕೆ. ಕೇಷಾದ್ರಿ ಅಯ್ಯಂಗಾರ್ ಎಲ್. ಎ. ಜಿ.

ಈತನು ಶ್ರೀವೈಷ್ಣವನು; ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದನು. ಗ್ರಂಥಗಳು—ಉದ್ಭಿಜ್ಜಶಾಸ್ತ್ರ, ವ್ಯವಸಾಯಬೋಧಿನಿ.

ಬಿ. ಎಸ್. ದಾಸಪ್ಪ ಬಿ. ಎ.

ಈತನು ಸ್ಮಾರ್ತನು; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಉಪಾಧ್ಯಾಯನಾಗಿದ್ದನು. ಗ್ರಂಥ—ಖನಿಜಶಾಸ್ತ್ರ.

ಚೆನ್ನಪಟ್ಟಣದ ಅಹೋಬಲದಾಸ

ಈತನು ಶೂದ್ರನು; ತುಲಸೀರಾಮದಾಸನ ಶಿಷ್ಯನು. ಗ್ರಂಥ—ಕೀರ್ತನೆಗಳು.

ವೆಂಕಟಾಚಲಂ

ಈತನು ಬ್ರಾಹ್ಮಣನು. ಗ್ರಂಥ—ಲಕ್ಕಾಲಕ್ಕಿ ಫಾರ್ಸ್.

ಬಾಳಾಚಾರ್ಯ

ಈತನು ಮಾಧ್ವಕವಿ; ಮುಮ್ಮಡಿ ಕೃಷ್ಣರಾಜನ ಕಾಲದಲ್ಲಿದ್ದನು.
ಗ್ರಂಥ—ಪದ್ಮಾವತೀಪರಿಣಯ.

ವಿಷ್ಣುದಾಸ

ಈತನು ಮಾಧ್ವಕವಿ ; ಮುಮ್ಮಡಿ ಕೃಷ್ಣರಾಜನ ಕಾಲದಲ್ಲಿದ್ದನು.
ಗ್ರಂಥಗಳು—ಗೋವರ್ಧನಗಿರಿಯ ಕಥೆ, ಪುಂಡರೀಕಚರಿತ್ರೆ.

ಶೇಷದಾಸ

ಈತನು ಬ್ರಾಹ್ಮಣನು ; ಇವನ ಸ್ಥಳ ದ್ರಾವಿಡದೇಶದ ಉತ್ತಮಲ್ಲೂರು.
ಗ್ರಂಥಗಳು —ಮೈಕುಂಠನಳಚರಿತ್ರೆ, ಸಭಾಪರ್ವ.

ವೆಂಕಟ

ಈತನು ಬ್ರಾಹ್ಮಣನು. ಗ್ರಂಥಗಳು—ಪ್ರಹ್ಲಾದಚರಿತ್ರೆ, ಮಹಾಶೃಂಗಾರ ನಾಟಕ, ಕೃಷ್ಣಸಂಧಾನ, ಚಂದ್ರಕಳಾವತೀವಿಲಾಸ, ಸುಭದ್ರಾಕಲ್ಯಾಣ, ಸೌಗಂಧಿಕಾಪರಿಣಯ.

ನುಗ್ಗಿಹಳ್ಳಿ ರಂಗಾಚಾರ್ಯ

ಈತನು ಶ್ರೀವೈಷ್ಣವನು. ಗ್ರಂಥ —ಅಕ್ರೂರಚರಿತ್ರೆ

ಮುದ್ದಕವಿ

ಈತನು ವೀರಶೈವನು ಗ್ರಂಥ—ಪಾರಿಜಾತ.

ವಾಸುದೇವ

ಈತನು ಬ್ರಾಹ್ಮಣನು ; ಮುಮ್ಮಡಿ ಕೃಷ್ಣರಾಜನ ಕಾಲದಲ್ಲಿದ್ದನು.
ಗ್ರಂಥ—ಅಂಬರೀಷಚರಿತ್ರೆ.

ವಿದ್ವಾ೯ ವೆಂಕಟಾಚಾರ್ಯ

ಈತನು ಶ್ರೀವೈಷ್ಣವನು ; ಗ್ರಂಥಗಳು.—ಚಂದ್ರಾವಳಿ,ಭೋಜಪ್ರಬಂಧ, ಕಲಾನಾಥ.

ಬೊಮ್ಮಲಾಟಂ ವೀರಭಟ್ಟರ ಕಾವುಣ್ಣ

ಈತನು ಬ್ರಾಹ್ಮಣನು. ಗ್ರಂಥಗಳು— ಚಂದ್ರಾವಳಿ, ಶಾಕುಂತಳ.

ಸರಗೂರು ರಾಮಾನುಜಾಚಾರ್ಯ

ಈತನು ಶ್ರೀವೈಷ್ಣವನು; ಸರಗೂರು ವೆಂಕಟವರದಾಚಾರ್ಯನ ಸಹೋದರನು.
ಗ್ರಂಥ—ಭಾಗವತ (ಶ್ರೀಕೃಷ್ಣಲೀಲೆ)

ಯೂರೋಪಿಯನರು

ವಿದೇಶೀಯರಾದ ಪಾದ್ರಿಗಳೂ ಇತರರೂ ಕನ್ನಡ ಭಾಷೆಯ ವ್ಯಾಸಂಗಕ್ಕೆ ಅನುಕೂಲವಾದ ಕೆಲವು ಪುಸ್ತಕಗಳನ್ನು ಬರೆದು ಮುದ್ರಿಸಿ ಸಹಾಯಮಾಡಿದ್ದಾರೆ. **ರೀವ್**. ಇಂಗ್ಲಿಷ್ ಕನ್ನಡ ಕೋಶ **ರೀವ್ ಮತ್ತು ಸಾಂಡರ್ಸ್**. ಕನ್ನಡ ಇಂಗ್ಲಿಷ್ ಕೋಶ **ಕೇರಿ**. ಕನ್ನಡ ವ್ಯಾಕರಣ. **ಕೆರಲ್**. ಕರ್ನಾಟಕ ವ್ಯಾಕರಣ. **ಜೀಗ್ಲರ್**. ಪ್ರಾಕ್ಟಿಕಲ್ ಕೀ, ಶಾಲಾನಿಘಂಟು, ಆಚಾರ ಶೀಲರು **ಜೆಚರ್**. ಶಾಲಾನಿಘಂಟು **ನೋಬ್ಲ್**. ವ್ಯಾಕರಣ ಬೋಧಿನಿ. **ಕ್ಯಾಂಬಲ್**. ಕನ್ನಡವ್ಯಾಕರಣ ಸಾರ **ವಿತ್**. ಪ್ರಾಕ್ಟಿಕ್ಯಮಾಲಿಕೆ. **ಕಿಟೆಲ್**. ಕನ್ನಡ ಇಂಗ್ಲಿಷ್ ಕೋಶ, ಕನ್ನಡವ್ಯಾಕರಣ, ಪರಮಾತ್ಮಜ್ಞಾನ. ಈತನು ಶಬ್ದಮಣಿದರ್ಪಣ, ಛಂದೋಂಬುಧಿ ಇವುಗಳನ್ನು ಮೊದಲು ಮುದ್ರಿಸಿ ಪ್ರಕಟಿಸಿದನು. **ನೋಗ್ಲಿಂಗ್ ಮತ್ತು ವೀಗಲ್**. ಇವರ ಮೇಲ್ವಿಚಾರಣೆಯಲ್ಲಿ ಬಸವಪುರಾಣ, ಚೆನ್ನಬಸವಪುರಾಣ, ಜೈಮಿನಿಭಾರತ, ರಾಮಾಯಣ (2 ಕಾಂಡಗಳು), ರಾವಣದಿಗ್ವಿಜಯ, ದಾಸರ ಪದಗಳು, ರಾಜೇಂದ್ರನಾಮೆ— ಈ ಗ್ರಂಥಗಳು ಮೊದಲು ಮಂಗಳೂರಲ್ಲಿ ಮುದ್ರಿತವಾದುವು.

ಈರೀತಿಯಾಗಿ ಗ್ರಂಥಕರ್ತೃಗಳ ಮತ್ತು ಗ್ರಂಥಗಳ ಹೆಸರುಗಳನ್ನು ನಮಗೆ ತಿಳಿದಮಟ್ಟಿಗೆ ಒರೆದಿದ್ದೇವೆ. ಈ ಪಟ್ಟಿಯಲ್ಲಿ ಅನೇಕ ಲೋಪಗಳಿವೆ ಎಂಬುದರಲ್ಲಿ ಸಂದೇಹವಿಲ್ಲ. ಈಗಿನ ಪಾಠಶಾಲೆಗಳಿಗೆ ಉಪಯೋಗವಾಗುವಂತೆ ಪುಸ್ತಕಗಳನ್ನೂ ಟೀಕೆಗಳನ್ನೂ ಬರೆದಿರುವವರ ಪೆಸರನ್ನು ಹೇಳಿಲ್ಲ. ಜೀವಂತರಾಗಿರುವ ಗ್ರಂಥಕರ್ತೃಗಳ ಮತ್ತು ಅವರ ಗ್ರಂಥಗಳ ಹೆಸರನ್ನು ಎತ್ತುವುದಿಲ್ಲವೆಂದು ಹಿಂದೆಯೇ ತಿಳಿಸಿದ್ದೇವೆ

APPENDIX I.

ಪರಿಶಿಷ್ಟ I.

ಬಿಟ್ಟುಹೋಗಿರುವ ಕೆಲವರು ಕವಿಗಳ ವಿಷಯ.

ಕರಸ್ಥಲದ ನಾಗಿದೇವ[1]. ಸು. 1430.

ಈತನು ವಚನಗಳನ್ನು ಬರೆದಿದ್ದಾನೆ. ವಚನವೆಂಬ ಹೆಸರಿದ್ದರೂ ಇವು ವಾರ್ಧಕಷಟ್ಪದಿಯಲ್ಲಿವೆ. ಇವುಗಳ ಸಂಖ್ಯೆ 9. ಇವುಗಳಲ್ಲಿ ವಾರ್ವತಿಯು ಪ್ರಾರ್ಥನಾನುಸಾರ ಶಿವನು ಷಟ್ಸ್ಥಲಮಾರ್ಗವನ್ನು ಅವಳಿಗೆ ಬೋಧಿಸಿದಂತೆ ತಿಳಿಯುತ್ತದೆ ಒಂದು ಪದ್ಯವನ್ನು ಉದಾಹರಿಸುತ್ತೇವೆ :—

ಷಡ್ಬ್ರಹ್ಮದಿಂದೈದು ಭೂತಂಗಳುದಿಸಿದುವು ।
ಷಡ್ಬ್ರಹ್ಮದಿಂದಂಡಕೋಟಿಗಳು ನಿರ್ಮಿತವು ।
ಷಡ್ಬ್ರಹ್ಮದಿಂದೆ ಹರಿಯಜರಿಂದ್ರ ಮೇರು ಸಾಗರ ತಾರೆ ಶಶಿ ಭಾಸ್ಕರಂ ॥
ಷಡ್ಬ್ರಹ್ಮದಿಂದೆ ಮನುಮುನಿಸಿದ್ಧಸಾಧಕರು ।
ಷಡ್ಬ್ರಹ್ಮದಿಂದೆ ಸುರದನುಜರಮರರು ನರರು ।
ಷಡ್ಬ್ರಹ್ಮದಿಂದೆ ಮಾಯಾಜನನಸ್ಥಿತಿಲಯವು ಸ್ವರ್ಗವಾದುದು ಶಂಕರೀ ॥

ಸಿದ್ಧಮಲ್ಲಾರ್ಯ. ಸು. 1500.

ಈತನು ದೇವಾಂಗಪುರಾಣವನ್ನು ಬರೆದಿದ್ದಾನೆ. ಇವನು ದೇವಾಂಗದವನು. ಇವನ ಸ್ಥಳ ಹಂಪೆಯಾಗಿರಬಹುದು. ಈತನು ಸುಮಾರು 1300ರಲ್ಲಿ ಇದ್ದಿರಬಹುದೆಂದು ಹೇಳುತ್ತಾರೆ[2]. ಸುಮಾರು 1500ರಲ್ಲಿ ಇದ್ದಿರಬಹುದೆಂದು ನಮಗೆ ತೋರುತ್ತದೆ.

---

1 Vol. II, p. 69.

2 ಕರ್ನಾಟಕಸಾಹಿತ್ಯಪರಿಷತ್ಪತ್ರಿಕೆ, ಅಕ್ಟೋಬರ್ 1920, ಪುಟ 175.

ಇವನ ಗ್ರಂಥ

ದೇವಾಂಗಪುರಾಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ಬ್ರಹ್ಮಾಂಡ ಸ್ಕಾಂದ ಪುರಾಣಗಳಲ್ಲಿ ಉಕ್ತವಾದ ದೇವಾಂಗಋಷಿಯ ಚರಿತೆ ಹೇಳಿದೆ. ಒಂದೊಂದು ಅಧ್ಯಾಯದ ಆದಿಯಲ್ಲಿಯೂ ಪಂಪಾವಿರೂಪಾಕ್ಷಸ್ತುತಿ ಇದೆ. ಒಂದು ಪದ್ಯವನ್ನು ಉದಾಹರಿಸುತ್ತೇವೆ :—

ತಿಂಗಳಣುಗೆಯ ಪತಿಯ ಬಾಣಕೆ | ಯಂಗವನು ಕೊಡದವನ ಜನಕನ |
ನುಂಗಿದಾತನ ಸುತೆಯಳರಸನ ಪಿತನ ಸಮರದೊಳು ||
ಭಂಗಿಸಿದನತ್ತೆಯ ಕುಮಾರನ | ತುಂಗವಿಕ್ರಮದಿಂದ ಗೆಲಿದನ |
ತಂಗಿಪತಿಗಂಬಿತ್ತ ದೇವನೆ ಶ್ರೀವಿರೂಪಾಕ್ಷ ||

ದಾನಪ್ಪಾರ್ಯ. ಸು. 1550.

ಈತನು ಶಿವಸಂವಾದಿನಿ ಎಂಬ ಪುರಾಣವನ್ನು ಬರೆದಿದ್ದಾನೆ. ಇವನು ದೇವಾಂಗದವನು. ಇವನ ಸ್ವಳ ಗದಗು ತಾಲ್ಲೂಕು ಬೆಟಿಗೇರಿ. ಈತನ ಕಾಲವು ಸುಮಾರು 1550 ಆಗಿರಬಹುದು. ಇವನ ಗ್ರಂಥವು ದ್ವಿಪದೀರೂಪವಾಗಿದೆಯೆಂದೂ ಇದರಲ್ಲಿ ಶಿವಭಕ್ತಿಯ ಅನೇಕ ಕಥೆಗಳು ಅಡಕವಾಗಿವೆಯೆಂದೂ ತಿಳಿಯುತ್ತದೆ[1].

ನಾರಾಯಣ. ಸು. 1600.

ಈತನು ಉತ್ತರರಾಮಕಥೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಇವನ ತಂದೆ ತಾತಧೀಮಣಿ; ವಿದ್ಯಾಗುರು ಭಾನುಕವಿಯ ಮಗ ತಿಮ್ಮಣಾರ್ಯ; ಇಷ್ಟದೇವತೆ ಅಹೋಬಳನಾರಸಿಂಹ. "ರಂಗಯನಾರಸಿಂಹಂಗತಿಸಖನು" ಎಂದುಹೇಳಿಕೊಂಡಿದ್ದಾನೆ. ಈ ನಾರಸಿಂಹನಾರೋ ತಿಳಿಯದು.

ಈತನು **ಕುಮಾರವ್ಯಾಸನನ್ನು** (ಸು 1430) ಸ್ತುತಿಸುವುದರಿಂದ ಅವನ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗಿದೆ. ಭಾನುದತ್ತ ಅಥವಾ ಭಾನು ಎಂಬ ಒಬ್ಬ ಕವಿ ಸಂಸ್ಕೃತದಲ್ಲಿ ರಸಮಂಜರಿ, ರಸತರಂಗಿಣಿ ಎಂಬ ಗ್ರಂಥಗಳನ್ನು

1 ಕರ್ಣಾಟಕಸಾಹಿತ್ಯ ಪರಿಷತ್ಪತ್ರಿಕೆ, ಅಕ್ಟೋಬರ್ 1920, ಪುಟ 1 ರಿಂದ.

ಬರೆದಿದ್ದಾನೆ. ರಸಮಂಜರಿಗೆ ನಾಗೇಶಭಟ್ಟನು (ಸು. 175) ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ. ನಾರಾಯಣನ ವಿದ್ಯಾಗುರು ಈ ಭಾನುಕವಿಯ ಮಗನೇ ಆಗಿರಬಹುದೋ ಏನೋ ತಿಳಿಯದು. ಕವಿಯ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸ, ಕಾಳಿದಾಸ, ಕುಮಾರವ್ಯಾಸ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಉತ್ತರರಾಮಕಥೆ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 44, ಪದ್ಯ 2036. ಇದರಲ್ಲಿ ರಾಮಾಯಣದ ಉತ್ತರಕಾಂಡದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಕವಿ ರಾಮನನ್ನು ಸ್ತುತಿಸಿದ್ದಾನೆ; ಬಳಿಕ ಆಂಜನೇಯ, ಶಿವ, ಸರಸ್ವತಿ, ಗಣಪತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಸರಸ್ವತಿ.

ಮನದೊಳಗೆ ಬೇರ್ವರಿದು ಬುದ್ಧಿಯೊ|ಳನುನಯದಿ ಕುಡಿವರಿದು ಹಮ್ಮಿನ|
ಘನತೆಯೊಳು ಪಲ್ಲವಿತಕುಸುಮಿತವಾಗಿ ಚಿತ್ತದೊಳು ||
ಎನಗೆ ಕವಿತಾಕಲ್ಪಲತೆಯನು | ದಿನವು ಫಲಿಯಿಸುವಂತೆ ಸಲಹೌ |
ಜನನಿ ಶಾರದೆ ನಿನ್ನ ಕರುಣಾಮೃತದ ಮಳೆಯಿದಳೆದು ||

ರಂಭೆಯನ್ನು ಕುರಿತು ರಾವಣನ ಉಕ್ತ.

ಮೊಲೆಯ ಮಹಿಯಿಱಿತದಲಿ ಕಡೆಗ | ಣ್ಣಲಗುಗಳ ದೆಸೆದೋಱಿದಿಱಿತದ |
ಲೆಳನಗೆಯ ಸನ್ಮೋಹನಾಸ್ತ್ರದ ಮಾಯದಿಱಿತದಲಿ ||
ಮೆಲುನುಡಿಯ ಘನವೆೞಸದಿಱಿತದ|ಲೊಲಿದು ಕಾಮುಕಿಜನದ ಹರಣಕೆ |
ಮುಳಿವ ಕೊಲೆಗಾತಿಯರಿಗೆಲ್ಲಿಯ ನಿಜವು ನಿಮಗೆಂದಾ ||
ನುಡಿಯ ಸಿಡಿವಲೆಯಲಿ ಕಟಾಕ್ಷದ | ಮಿಡುಕುವಲೆಯಲಿ ಬಾಹುಪಾಶದ |
ತೊಡಕುವಲೆಯಲಿ ತೋರವೊಲೆಗಳ ಗುಂಡುವಲೆಗಳಲಿ ||
ಬಿಡದೆ ಖಗಮೃಗವಿಾನತತಿಯನು | ಕೆಡಹುವಂತಿರೆ ಬಲ್ಲವರ ಧೃತಿ |
ಗೆಡಿಸಿ ಮೋಸದಲಿಱಿವ ನಿಮಗೆಲ್ಲಿಯದು ನಯವೆಂದಾ ||

———

ಬಸವೇಶ. ಸು. 1600.

ಇವನು ಸುಜ್ಞಾನಚಿಂತಾಮಣಿಯನ್ನು ಬರೆದಿದ್ದಾನೆ. ಈತನು ವೀರಶೈವ ಕವಿ; ಇವನ ಪಿತಾಮಹ ಹೊಟ್ಟಿಯ ಈಶ್ವರಯ್ಯ, ತಂದೆ ಗಿರಿನಾಥ, ಗುರು ಅಘಹರದೇವ. ಈತನ ಕಾಲವನ್ನು ನಿರ್ಧರಿಸಲಿಕ್ಕೆ ಆವ ಆಧಾರವೂ ಇಲ್ಲ. ಇವನು ಸುಮಾರು 1600ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಸುಜ್ಞಾನಚಿಂತಾಮಣಿ.

ಇದು ಭಾವನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 9, ಪದ್ಯ 386. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೇದಾಂತವು ಬೋಧಿಸಲ್ಪಟ್ಟಿದೆ. ಅಲ್ಲಲ್ಲಿ ಸಂಸ್ಕೃತಶ್ಲೋಕಗಳೂ ಅನುವಾದವಾಗಿ ಉದ್ಧರಿಸಲ್ಪಟ್ಟಿವೆ. "ಶಿವನ ಸಂಬೋಧೆಯನು ಪೇಳುವೆನು" ಎಂದು ಕವಿ ಹೇಳುತ್ತಾನೆ. ಗ್ರಂಥದ ಉದ್ದೇಶವು ಈ ಪದ್ಯಭಾಗದಿಂದ ಸ್ಪಷ್ಟವಾಗುತ್ತದೆ.—

ನಿಶ್ಚಯವಿಯದ ಜನದು ಧರೆಯಲಿ | ಸತ್ತು ಹುಟ್ಟುತ್ತಿರಲು ಪರಮಗು |
ರೂತ್ತಮನು ಬೋಧಿಸಿಯೆ ಮುಕ್ತಿಯ ಪದಕೆ ನಿಲ್ಲಿಸಿದ ||

ಗ್ರಂಥಾವತಾರದಲ್ಲಿ ಹಂಪೆಯ ವಿರೂಪಾಕ್ಷನ ಸ್ತುತಿಯಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ತುಷವಡೆದ ಧಾನ್ಯಗಳ ಬಿತ್ತಲು | ಸಸಿ ಮೊಳೆತು ಫಲವಾದುದಲ್ಲದೆ |
ತುಷವಟೆದ ತಂಡುಲವು ಸಸಿದೋಱಿದುವೆ ಜಗದೊಳಗೆ ||
ಕಸವರದ ಕರ್ಮಗಳ ಪಿಡಿದವ | ರೊಸೆದು ಜನನಕೆ ಒಂದರಲ್ಲದೆ |
ಅಸಮರಮಳಾತ್ಮರಿಗೆ ಜನನಾದಿಗಳು ಹುಸಿಯೆಂದಾ ||
ಹಲವು ಹಡಿಕೆಯ ಹುಡುಕೆ ಕೇಳಿದು|ಹೊಲಸಿನಾಲಯ ಕ್ರಿಮಿಕುಲಂಗಳ |
ನೆಲೆಯಱಿಡಿದು ರೋಗದಾಲಯ ಮೃತ್ಯುವಿನ ತುತ್ತು ||
ಮಲದ ಭಾಂಡದಲುದಿಸಿ ನೀ ಸ | ತ್ಕುಲಜನೆಂಬುದು ನಾಸ್ತಿಮಾನವ |
ಕುಲವದೊಂದೇ ನಿನ್ನ ನೀನೇ ತಿಳಿದು ನೋಡೆಂದಾ ||

ಜೀವರಾಯನ ಓಲಗ.

ಸೋಗೆಗಂಗಳ ಸೊಬಗೆಯರು ಸುಖ । ಸಾಗರದ ಸೌರಂಭೆಯರು ರತಿ ।
ಭೋಗಿಗಳು ಮಿಗೆ ಸಕಲಕಲೆಗಳ ಬಲ್ಲ ಪ್ರೌಢೆಯರು ॥
ಪೂಗಣಿಯ ಗಾಯಗಳಿಗಳುಕುವ । ಭೋಗಿಗಳು ಮದದಳಿಗಳಂತಿಹ ।
ಶ್ರೀಗಣಿಕೆಯರು ಸಂದಣಿಸಿದರು ಜೀವನೋಲಗಕೆ ॥

ರುದ್ರಮುನಿ. ಸು. 1600.

ಈತನು ಹಾಡುಗಳನ್ನು ಬರೆದಿದ್ದಾನೆ. ಇವನು ದೇವಾಂಗದವನು. ಇವನ ಸ್ಥಳ ಗದಗು ತಾಲ್ಲೂಕು ಜೆಟಿಗೇರಿ. ಅಲ್ಲಿ ಈತನು ಮಠಾಧಿಪತಿಯಾಗಿದ್ದಂತೆ ತೋರುತ್ತದೆ. ಇವನ ಕಾಲವು ಸುಮಾರು 1600 ಆಗಿರಬಹುದು. ಈತನ ಹಾಡುಗಳಲ್ಲಿ ಒಂದನ್ನು ಉದಾಹರಿಸುತ್ತೇವೆ:—

ರಾಗ ಹಂಸಧ್ವನಿ. ಆದಿತಾಳ.

ಎಂಥ ಬಲವಂತ ನೋಡಮ್ಮ । ಮೂಜುಲೋಕದೊ ।
ಳಿಂಥ ಸರಿವಂತನಾರಮ್ಮಾ ॥ಪಲ್ಲವಿ॥
ಪಂಥಗಾಜಿರ ದೇವಾ । ನಂತಭಕುತಸ ಜೀವ।
ನಿಂತುವರಗಳನೀವ । ಶಾಂತ ಸದ್ಗುಣ ಹನುಮಂತ ॥ಅನುಪಲ್ಲವಿ॥
ಮಾರುತಾಂಜನೆಗೆ ಸುತನಾಗಿ । ಶ್ರೀರಾಮನಂಘ್ರಿ ।
ಸೇರಿ ಸೇವೆಯೊಳನುವಾಗಿ । ಹಾಟಕ ಲಂಕೆಯೊಳಿರ್ದ ।
ಕ್ರೂರದೈತ್ಯರನೊದ್ದ । ವೀರಾಧಿವೀರ ಜಗಕೀರ್ತ । ಮಾರನಗೆಲಿದಾತ ॥೧॥
ಕಟ್ಟಿರ್ದ ಕಾಸೆ ಕೊನೆಮಾಸೆ । ಬಿಟ್ಟಿರುಳುಗಣ್ಣು ।
ನಟ್ಟನಡು ಸೂರ್ಯನನು ಜಯಿಸಿ । ಬಿಟ್ಟಿರಕದರುಂಡಲಿಗಿ ।
ಪಟ್ಟಪರಿಣಮಿಸಲಾಗಿ। ಜೆಟ್ಟಗೇರಿಯ ರಾಮ। ನಾಮಸ್ಮರಿಸುವ ನೇಮ ॥೨॥

ನಿಜಗುಣಾರ್ಯ. ಸು. 1650.

ಈತನು ಅದ್ವೈತರಾಮಾಯಣವನ್ನು ಬರೆದಿದ್ದಾನೆ. ಇವನು ವೀರಶೈವ ಕವಿಯೆಂದು ತೋರುತ್ತದೆ. ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿಲ್ಲ.

---

1 ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕೆ, ಅಕ್ಟೋಬರ್ 1920, ಪುಟ 177.

ಗ್ರಂಥದ ಕೆಲವು ಭಾಗಗಳಲ್ಲಿ " ನಿಜಗುಣಾರ್ಯನ ವಚನದಮೃತ " ಎಂದು ದೊರೆ ವುದರಿಂದ ಗ್ರಂಥಕರ್ತನು ನಿಜಗುಣಾರ್ಯನಾಗಿರಬಹುದು ಎಂಬ ಊಹೆಗೆ ಅವಕಾಶ ವಿದೆ. ಇವನು ನಿಜಗುಣಶಿವಯೋಗಿಯೇ ಆಗಿರಬಹುದೋ ಎಂಬ ಸಂದೇಹವು ಹುಟ್ಟಬಹುದು ಆದರೆ ಅವನ ಗ್ರಂಥಗಳಲ್ಲಿ ದೊರೆವ ಶಂಭುಲಿಂಗನ ಅಂಕಿತವು ಈ ಗ್ರಂಥದಲ್ಲಿ ಇಲ್ಲದಿರುವುದರಿಂದ ಈ ಕವಿ ತದ್ಭಿನ್ನನೆಂದು ಹೇಳಬೇಕಾಗಿದೆ. ಇವನ ಕಾಲವು ಸುಮಾರು 1650 ಆಗಿರಬಹುದು.

ಇವನ ಗ್ರಂಥ

ಅದ್ವೈತರಾಮಾಯಣ.

ಇದು ವಚನಗಳಲ್ಲಿ ಬರೆದಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ ಸಂಧಿ 24, ಪದ 933 ಇವೆ. " ಅದ್ವೈತದಲಿ ರಾಮರಾವಣರ ನಿಜಪಥವನು ವಾದವೈಭವ ವನು ಮಂಡೋದರಿಯ ರಾವಣನ ವಾದವನು ಉಸಿರುವೆನು " ಎಂದು ಕವಿ ಹೇಳು ತ್ತಾನೆ. ಈ ಗ್ರಂಥದಲ್ಲಿ ರಾಮಾಯಣಕಥೆಗೆ ಅದ್ವೈತಬೋಧಕವಾದ ಗೂಢಾ ರ್ಥವು ಹೇಳಿರುವಂತೆ ತೋರುತ್ತದೆ. ಕೆಲವು ಕಡೆ " ಎಂದನಾಮುನಿಪ ", " ಕೇಳೈ ಶಾಂತರಾಮನೆ " ಎಂದು ಬರುತ್ತದೆ. ಇದರಿಂದ ಒಂದು ವಚನವನ್ನು ತೆಗೆದು ಬರೆಯುತ್ತೇವೆ :—

ದಶಶಿರೋತ್ತಮನು ದಶರಥೋತ್ತಮ ಎರಡು ಕಲೆತುದೆ ರಾಮಗುಣ. ಭಕ್ತಿ ಭಾವವು ಎರಡು ಕಲೆತುದೆ ಲಕ್ಷ್ಮಣಗುಣ. ಕಮಲ ಸೂರ್ಯನು ಕಲೆತುದೆ ಸೀತಾ ಗುಣ. ಮನಃಶ್ಚಿಧನವು ಕಲೆತುದೆ ಭರತಗುಣ. ಜೀವ ಭೂಮಿಯ ಕಲೆತುದೆ ಶತ್ರುಘ್ನ ಗುಣ. ಐದು ಗುಣ ಕಲೆತುದೇ ದೇಹಗುಣವೆಂದಾ.

ಮಹೀಪತಿಸ್ವಾಮಿ. ಸು. 1650.

ಈತನು ಅನುಭವಪದಗಳನ್ನೂ ಕೆಲವು ಇತರ ಗ್ರಂಥಗಳನ್ನೂ ಬರೆದಿರು ವಂತೆ ತಿಳಿಯುತ್ತದೆ[1]. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಮೊದಲು ಬಿಜಾಪುರದ ಆದಿಲ್‌ಷಾಹಿರಾಜರಲ್ಲಿ ದಿವಾನನಾಗಿದ್ದು ಆಮೇಲೆ ವಿರಕ್ತನಾಗಿ ಕಾಖಂಡಕಿಯಲ್ಲಿ ಸಮಾಧಿಸ್ಥನಾದನೆಂದು ಹೇಳುತ್ತಾರೆ. ಇವನ ಕಾಲವು ಸುಮಾ ರು 1650 ಆಗಿರಬಹುದು.

---

1 ಕರ್ನಾಟಕವೈಭವ (1915).

ವರ್ಧಮಾನ. ಸು. 1650.

ಈತನು ಶ್ರೀಪಾಲಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಶ್ರೀಪಾಲಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ. ; ಸಂಧಿ 22. ಸಂಧಿಗಳ ಕೊನೆಯಲ್ಲಿ ಈ ಪದ್ಯವಿದೆ—

ಮದನನಿಗುಪಮಾನ ನುಲಯಾದ್ರಿಪವಮಾನ । ವಿದಿತಸಜ್ಜನ ಸೇವ್ಯಮಾನ।
ಮೃದುಗುಣಬಾಭಾಸ್ಯಮಾನನೂರ್ಜಿಸಿದನು । ಜದುರ ಶ್ರೀಕವಿವರ್ಧಮಾನ॥

ಬಸಪ್ಪಾರ್ಯ. ಸು. 1650.

ಈತನು ವರ್ಣನಾರೂಪವಾದ ಅನೇಕ ಪದ್ಯಗಳನ್ನು ಬರೆದಿದ್ದಾನೆ. ಇವನು ದೇವಾಂಗದವನು. ಇವನ ಸ್ಥಳ ಗದಗು ತಾಲ್ಲೂಕು ಮುನಿವೃಂದ (ಮುಳುಗುಂದ). ಈತನು ಸುಮಾರು 1650ರಲ್ಲಿ ಇದ್ದಿರಬಹುದು. "ಈ ಕವಿ ಪಂಪಾಕ್ಷೇತ್ರವನ್ನು ನೋಡಬಂದ ಕಾಲದಲ್ಲಿ ಅಲ್ಲಿಯ ದೇವಸ್ಥಾನಗಳನ್ನೂ ಕಟ್ಟಡಗಳನ್ನೂ ವಿಜಯನಗರದ ರಾಜನಾದ ರಾಮರಾಜನ ಬಾಲಕ್ರೀಡೆಗಳನ್ನೂ ಸೌಂದರ್ಯಾದಿಗಳನ್ನೂ ರತ್ನಾಜಿಯೆಂಬ ವೇಶ್ಯಾಸ್ತ್ರೀಯ ಸೌಭಾಗ್ಯವನ್ನೂ ಲಾವಣ್ಯವನ್ನೂ ಇನ್ನೂ ಅನೇಕ ವಿಷಯಗಳನ್ನೂ ಶೃಂಗಾರರಸಭರಿತವಾದ ಪದ್ಯಗಳಿಂದ ಸರಸವಾಗಿ ಬಣ್ಣಿಸಿರುತ್ತಾನೆ[1] "

ಚಿದಾನಂದ. ಸು. 1675.

ಈತನು ಹಾಡುಗಳನ್ನು ಬರೆದಿದ್ದಾನೆ. ಇವಕ್ಕೆ ಚಿದಾನಂದರ ಕೋರಡೆ ಎಂಬ ಹೆಸರಿದೆ. ಇವನು ಬ್ರಾಹ್ಮಣ ಕವಿ. ಇವನ ಸ್ಥಳ ಉತ್ತರಕನ್ನಡಜಿಲ್ಲಾ ಹೊನ್ನಾವಾರದ ತಾಲ್ಲೂಕಿನಲ್ಲಿಯ ಬೈಲೂರು. ಈತನ ಶಿಷ್ಯನಾದ **ವಿಮಲಾನಂದನು** ಕೃಷ್ಣಾರ್ಜುನಕಾಳಗವೆಂಬ ಯಕ್ಷಗಾನವನ್ನು 1685ರಲ್ಲಿ ಬರೆದು ತನ್ನ ಗುರುವಿಗೆ ಅರ್ಪಿಸಿದಂತೆ ಆ ಗ್ರಂಥದಿಂದ ತಿಳಿವುದರಿಂದ ಇವನ ಕಾಲವು ಸುಮಾರು 1675 ಆಗಿರಬಹುದು.

---

1 ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕೆ, ಅಕ್ಟೋಬರ್ 1920, ಪುಟ 177.

ವಿಮಲಾನಂದ. ಸು. 1685.

ಇವನು ಕೃಷ್ಣಾರ್ಜುನಕಾಳಗ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ಚಿದಾನಂದನ ಶಿಷ್ಯನು. ಇವನ ಸ್ಥಳ ಉತ್ತರಕನ್ನಡ ಜಿಲ್ಲಾ ಹೊನ್ನಾವರದ ತಾಲ್ಲೂಕಿನಲ್ಲಿಯ ಬೈಲೂರು. ತನ್ನ ಗ್ರಂಥವನ್ನು ಶಕ 1606ನೆಯ ಕ್ರೋಧನದಲ್ಲಿ(1685)ಮುಗಿಸಿ ತನ್ನ ಗುರುವಾದ ಚಿದಾನಂದನ ಪಾದಕ್ಕೆ ಅರ್ಪಿಸಿದಂತೆ ಹೇಳುತ್ತಾನೆ. ಭಟಕಳದ ಅಪ್ಪಯ್ಯನು[1] ಈ ಕವಿಯ ಶಿಷ್ಯನು.

ಗುರುವ. ಸು. 1700.

ಈತನು ಪ್ರಾಣಲಿಂಗಶತಕವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಹಂಪೆಯ ದಾನಪ್ಪನ ಮಗನು. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಪ್ರಾಣಲಿಂಗಶತಕ.

ಇದರಲ್ಲಿ 101 ವೃತ್ತಗಳಿವೆ; ಪ್ರತಿವೃತ್ತವೂ "ಮತ್ಪ್ರಾಣಲಿಂಗೇಶ್ವರ" ಎಂದು ಮುಗಿಯುತ್ತದೆ. ಗ್ರಂಥವು ವೀರಶೈವಸಿದ್ಧಾಂತವನ್ನೂ ಅಲ್ಲಲ್ಲಿ ಪುರಾತನರ ಚರಿತವನ್ನೂ ತಿಳಿಸುತ್ತದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಧನಮುಂಟಾದವರಿತ್ತ ವಸ್ತುತತಿಯಂ ಕೈಕೊಳ್ವ ಭೂಪಂಗೆ ಸು।
ಮ್ಮನೆ ತಾಂಬೂಲಫಲಂಗಳಂ ಬಡವನೀಯಲ್ಕೆಂತು ಯೋಗ್ಯಂ ಸದಾ ॥
ಸನಕಂ ಮುಖ್ಯಸಮಸ್ತದೇವಋಷಿಗಳ್ ಸಂಕೀರ್ತನಂ ಮಾಡುವರ್।
ನಿನಗೆಂತೊಪ್ಪುಗುಮೆನ್ನ ಬಾಲನುಡಿಗಳ್ ಮತ್ಪ್ರಾಣಲಿಂಗೇಶ್ವರಾ ॥
ನಡೆಯಂ ಧರ್ಮವಿಹೀನವಾದ ನಡೆಯಂ ವಾರಾತಿನೇಲ್ವಾಯ್ದಡಂ।
ನುಡಿಯಂ ಸತ್ಯಕೆ ಭಿನ್ನವಾದ ನುಡಿಯಂ ಪ್ರಾಣಾಂತಕಂ ಬಂದಡಂ ॥
ಪಿಡಿಯಂ ಲೋಗರ ಸೊಮ್ಮನೊಮ್ಮೆ ಮನದೊಳ್ ದುಷ್ಕೃತ್ಯಮಂ ಮಾಡನೈ।
ಮೃಡ ನಿನ್ನದ್ಧತಭಕ್ತಿಯುಕ್ತಚರಿತಂ ಮತ್ಪ್ರಾಣಲಿಂಗೇಶ್ವರಾ ॥

---

1 ನೋಡಿ 1.

ಮುಮ್ಮಡಿಕಾರ್ಯೇಂದ್ರ. ಸು. 1700.

ಈತನು ವೇದಸಂಜೀವಿನಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕಾರ್ಯ ಎಂಬ ಸ್ಥಳಕ್ಕೆ ಪ್ರಭುವಾಗಿದ್ದಂತೆ ತೋರುತ್ತದೆ. ಇವನ ತಂದೆ ಇಮ್ಮಡಿ ಕಾರ್ಯೇಂದ್ರ, ತಾಯಿ ಕುಪ್ಪಮಾಂಬೆ, ಗುರು ದೊಡ್ಡದೇಶಿಕಾರ್ಯ. " ಮಾಸ್ತಿಕುಲ ಪ್ರದೀಪ " ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವನ್ನು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ವೇದಸಂಜೀವಿನಿ.

ಇದು ವೀರಶೈವಸಿದ್ಧಾಂತವನ್ನು ಬೋಧಿಸುವ ವಚನಗ್ರಂಥ; ವಚನ 116. ಒಂದೊಂದು ವಚನವೂ " ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೇ" ಎಂದು ಮುಗಿಯುತ್ತದೆ. ಒಂದು ವಚನವನ್ನು ಉದಾಹರಿಸುತ್ತೇವೆ:—

ಗೊಲ್ಲರಹಳ್ಳಿಯಲ್ಲಿ ಭೂವಲ್ಲಭನಿದ್ದರೆ ಅಲ್ಲಿಯ ಜನರು ಅವಂಗೆ ಕುಹಿಯ ಹಾಲಂ ಕಱೆದುಕೊಟ್ಟು ನೀಚೋಚ್ಚವಹಿಯದ ಮಾತುಗಳನಾಡಿ ನಗಿಸುವರಲ್ಲದೆ ರಾಜೋಪಚಾರವಂ ಮಾಡಬಲ್ಲರೇನಯ್ಯಾ; ಅಂತು ಜ್ಞಾನಿಯೆಂದಱಿತು ನನ್ನ ಹೃದಯದಲ್ಲಿ ನೀಂ ನೆಲಸಿದಲ್ಲಿ ನನ್ನಲ್ಲಿಹ ತಮೋಗುಣಗಳಿಂ ಪೂಜಿಸಿ ಅಪಶಬ್ದಗಳಿಂ ಸ್ತುತಿಸುವೆನಲ್ಲದೆ ನಿಜಭಾವದಿಂದರ್ಚಿಸಿ ನೈಘಂಟುಕಶಬ್ದಗಳಿಂ ಸ್ತುತಿಸಬಲ್ಲೆನೇನಯ್ಯಾ; ಇಂತು ನಾನು ಮಾಡುತ್ತಿರ್ಪ ಅಪಚಾರಂಗಳಂ ನೀನುಪಚಾರಂಗಳಾಗಿ ಕೈಗೊಳ್ಳದಿರ್ದೊಡೆ ನಿನ್ನ ಪರಮದಯಾನುಹಿನೆ ಪ್ರಕಟಮಪ್ಪುದೇನಯ್ಯಾ; ಮಹಾಘನದೊಡ್ಡದೇಶಿಕಾರ್ಯಗುರುಪ್ರಭುವೇ.

ಹುಬ್ಬಳ್ಳಿಯ ಸಂಗಯ್ಯ. ಸು. 1700.

ಇವನು ಶಿವಯೋಗರತ್ನಾಕರವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಸುಮಾರು 1700ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಶಿವಯೋಗರತ್ನಾಕರ.

ಇದು ವೇದಾಂತವನ್ನು ಬೋಧಿಸುವ ಗದ್ಯಗ್ರಂಥ; ಆಂಧ್ರಭಾಷೆಯಲ್ಲಿ ವರದರಾಜನೆಂಬ ಶಿವಯೋಗೀಶ್ವರನು ಬರೆದಿರುವ ಗ್ರಂಥದ ಭಾವಾಂತರವು;

೬ ಪ್ರಕರಣಗಳಾಗಿ ಭಾಗಿಸಲ್ಪಟ್ಟಿದೆ. ಅಲ್ಲಲ್ಲಿ ಸಂಸ್ಕೃತಶ್ಲೋಕಗಳು ಅನುವಾದ ಮಾಡಲ್ಪಟ್ಟಿವೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ:—

ಇದು ಶಿವಾಗಮಪುರಾಣ ವೇದವೇದಾಂತರಹಸ್ಯ ರಹಸ್ಯಾರ್ಥಪ್ರತಿಪಾದಕ ವೀರಶೈವಸಮಯಾಬ್ಜಖಂಡೋದಯ ಷಟ್ಸ್ಥಲ ಚಕ್ರವರ್ತಿಗಳಾದ, ಶ್ರೀಮತ್ಕಲ್ಯಾಣಪುರವರಾಧೀಶ ವೃಷಭೇಂದ್ರಮುಖ್ಯಪ್ರಮಥ ಪ್ರಮಥಪತ್ನಿಯರ ದಿವ್ಯ ಶ್ರೀಪಾದಪದ್ಮ ಮಕರಂದಪಾನಪೀನಮುದಿತ ಮಧುಕರಾಯಮಾನರಾದ ಹುಬ್ಬಳ್ಳಿಯ ಸಂಗಯ್ಯನವರಿಂದ ಪ್ರಣೀತವಾದ ಶಿವಯೋಗರತ್ನಾಕರವೆಂಬ ಶಾಸ್ತ್ರದೊಳ್.

ಹಾಗಲವಾಡಿ ಸಿದ್ಧರಾಮಪ್ಪನಾಯಕ. ಸು. 1700.

ಇವನು ಮಹಾನುಭಾವಪ್ರಕಾಶಿಕೆಯನ್ನು ಬರೆದಿದ್ದಾನೆ ಈತನು ವೀರಶೈವಕವಿ; ಹಾಗಲವಾಡಿಯ ಪಾಳೆಯಗಾರರ ಸಂತತಿಗೆ ಸೇರಿದವನೆಂದು ತೋರುತ್ತದೆ. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಮಹಾನುಭಾವಪ್ರಕಾಶಿಕೆ.

ಇದು ಗದ್ಯಗ್ರಂಥ ಇದರಲ್ಲಿ ಕವಿ "ಪೂರ್ವಪುರಾತನರಿಂದ ಯುಕ್ತಮಾದ ನವಚಕ್ರದ ವಚನಂಗಳ ಅಭಿವ್ಯಾಯಮಂ ತಾತ್ಪರ್ಯಮಾತ್ರದಿಂ" ವಿಸ್ತರಿಸುವಂತೆ ಹೇಳುತ್ತಾನೆ ಇದನ್ನು ಪೂರ್ವದಲ್ಲಿ ಸಿದ್ಧಲಿಂಗೇಶ್ವರನು ತೀಲಪಂತ ಮುರಿಗಪ್ಪನೆಂಬ ಶಿವಶರಣನಿಗೆ ನಿರೂಪಿಸಿದಂತೆ ಹೇಳಿದೆ.

ಮಲ್ಲಿಕಾರ್ಜುನ. ಸು. 1700.

ಇವನು ಬಸವತಿಲಕಾಮಣಿಯನ್ನು ಬರೆದಿದ್ದಾನೆ. ಗ್ರಂಥದಲ್ಲಿ ಈತನ ಹೆಸರು ಸ್ಪಷ್ಟವಾಗಿ ಹೇಳಿಲ್ಲ. ಆದರೆ ಒಂದು ಪದ್ಯದಲ್ಲಿ "ಪಾರುವ ಹೇಳಿದನೀಕೃತಿಯ" ಎಂದಿರುವುದರಿಂದ ಕವಿಯ ಹೆಸರು ಹೀಗಿರಬಹುದೋ ಎಂಬ ಸಂಶಯಕ್ಕೆ ಅವಕಾಶವಿದೆಯೇ ಹೊರತು ಖಂಡಿತವಾಗಿ ಹೇಳಲಾಗುವುದಿಲ್ಲ. ಈತನು ವೀರಶೈವಕವಿ. ಪೂರ್ವಕವಿಗಳಲ್ಲಿ ಭೀಮಕವಿಯನ್ನು (1389) ಸ್ಮರಿಸುವುದರಿಂದ ಅವನ ಕಾಲಕ್ಕೆ ಈಚೆಯವನು ಎಂಬುದಂತೂ ಸ್ಪಷ್ಟವಾಗಿಯೇ ಇದೆ: ಸುಮಾರು 1700ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಹೊಗಳಿದ್ದಾನೆ :—

ಭೂಮಿಯೊಳು ಕಾಳಿದಾಸ ಪದ್ಮರಸರ | ಪ್ರೇಮದಿ ರಾಘವಾಂಕನನು |
ಭೀಮಕವಿಯು ಗುರುವರ ಪಾಲ್ಕುರಿಕೆಯ | ಸೋಮೇಶನ ಬಲಗೊಂಬೆ ||

ಇವನ ಗ್ರಂಥ

ಒಸನಶಿಖಾಮಣಿ.

ಇದು ಸಾಂಗತ್ಯದಲ್ಲಿ ಬರೆದಿದೆ ; ಸಂಧಿ 11, ಪದ್ಯ 1270 ಇದರಲ್ಲಿ ಒಸವನ ಚರಿತೆ ಹೇಳಿದೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಬಾಗವಾಡಿ.

ಗಂಗೆಗೆ ತೆಂಕಣ ಭಾಗದೊಳಿರ್ಪುದು | ಹಿಂಗದೆ ಕರ್ನಾಟದೇಶ |
ಕಂಗಳ ಬೆಳಗಿನ ಮಂಗಳವೆನಿಸುವು | ದಿಂಗಳೇಶ್ವರ ಬಾಗವಾಡಿ ||
ಕುಸುಮದ ಪಸರದೊಳಿಸೆದಿಹ ಜಾಜಿಯು | ಪೊಸಮೊಲ್ಲೆ ಮಲ್ಲಿಗೆ ದವನ !
ಪಸರಿಪ ಕೇತಕಿ ಬಿಸರುಹ ಚಂಪಕ | ವೆಸೆದುವು ಕೇರಿಕೇರಿಯಲಿ ||

ಇಮ್ಮಡಿ ಮುರಿಗೆಯಸ್ವಾಮಿ. 1720.

ಈತನು ಹಾಲಾಸ್ಯಪುರಾಣವನ್ನು ಬರೆದಿರುವುದಾಗಿ ಹಿಂದೆಯೇ ಹೇಳಿದ್ದೇವೆ[1]. ಈ ಗ್ರಂಥವು ಈಚೆಗೆ ಬೊರೆಯಿತು. ಇದರಲ್ಲಿ ಗ್ರಂಥವು ಪೂರ್ತಿಯಾದ ಕಾಲವು ಶಕ 1642ನೆಯ ಶಾರ್ವರಿವರ್ಷವೆಂದು (1720) ಈ ಪದ್ಯದಲ್ಲಿ ಹೇಳಿದೆ :—

ಓದಿದ ಶಾಲಿವಾಹನ | ಸಾವಿರದಜಿನೂಜಿಂಗಿಂ ನಾಲ್ವತ್ತೆರಡನೆ |
ಯಾವರಿಸಿದ ಸುತಶಾರ್ವರಿ | ಭಾವಿತವರಸಿಂಹಲಗ್ನದೊಳಗತಿಶಯದಿಂ ||

ಈ ಕವಿಗೆ ನಾವು ಸುಮಾರಿನಮೇಲೆ ಕೊಟ್ಟಿರುವ ಕಾಲಕ್ಕೂ (ಸು. 1590)[2] ಇಲ್ಲಿ ಹೇಳಿರುವ ಕಾಲಕ್ಕೂ ಬಹಳ ವ್ಯತ್ಯಾಸವಿದೆ. ಇದರಿಂದ ಈತನು ಬೇರೆ ಒಬ್ಬ ಕವಿಯೋ ಎಂಬ ಸಂದೇಹವು ಹುಟ್ಟಬಹುದು. ಆದರೆ ಸೋಮಶೇಖರ ಕವಿಯ ಹೇಳಿಕೆಯಪ್ರಕಾರ[3] ಈ ಕವಿ ತೋಂಟದ ಸಿದ್ಧಲಿಂಗನ (ಸು. 1470) ಶಿಷ್ಯ ಪರಂಪರೆಯಲ್ಲಿ 7ನೆಯವನಾಗುವುದರಿಂದ ಇವನ ಕಾಲವು ಸುಮಾರು 1660 ಆಗಬಹುದು. ಈ ಶಿಷ್ಯಪರಂಪರೆಯಲ್ಲಿ ಇನ್ನೂ ಒಬ್ಬರಿಬ್ಬರ ಹೆಸರು ಬಿಟ್ಟುಹೋಗಿ

---

1 ದ್ವಿತೀಯಸಂಪುಟ, 575. 2 ಅದೇ, 313. 3 ಅದೇ, 527, 572

ದ್ದರೂ ಇರಬಹುದು; ಅಥವಾ ಕೆಲವರು ಬಹುಕಾಲ ಜೀವಿಸಿರಬಹುದು. ಆದುದರಿಂದ ಮೇಲೆಕೊಟ್ಟಿರುವ ಗ್ರಂಥನಿರ್ಮಾಣಕಾಲವು ಸರಿಯಾಗಿರಬಹುದೆಂದು ತೋರುತ್ತದೆ. ಇದರಿಂದ ಈ ಕವಿಯ ಗುರು ಮುರಿಗೆಯ ಶಾಂತವೀರ[1] ಮುಂತಾದವರ ಕಾಲವನ್ನೂ ಯಥೋಚಿತವಾಗಿ ಈಚೆಗೆ ಹಾಕಬೇಕಾಗುತ್ತದೆ. ಈಗ ಈತನ ನಾಂದೀಪದ್ಯಗಳನ್ನು ಅನುಸರಿಸಿ ಷಡಕ್ಷರದೇವನು ತನ್ನ ನಾಂದೀಪದ್ಯಗಳನ್ನು ಬರೆದಿರಬಹುದು ಎಂಬ ನಮ್ಮ ಊಹೆಗೆ[2] ಅವಕಾಶವಿಲ್ಲ.

ಇವನ ಗ್ರಂಥ

ಹಾಲಾಸ್ಯಪುರಾಣ.

ಇದು ಚಂಪೂರೂಪವಾಗಿದೆ; ಕಾಂಡ 4, ಆಶ್ವಾಸ 66, ಪದ್ಯ 3637; ಅಲ್ಲಲ್ಲಿ ತ್ರಿಪದಿಗಳೂ ರಗಳೆಗಳೂ ಇವೆ. "ಇದರಲ್ಲಿ ಮಧುರೆಯ ಸುಂದರೇಶ್ವರಂ ಚತುಷ್ಷಷ್ಟಿಲೀಲೆಗಳಂ ನಟಿಸಿದ ಕಥಾವೃತ್ತಾಂತಂ" ಹೇಳಿದೆ. ಈ ಕಥೆಯನ್ನು ಮೊದಲು ಶಿವನು ಪಾರ್ವತಿಗೂ ಬಳಿಕ ಅಗಸ್ತ್ಯನು ಋಷಿಗಳಿಗೂ ಹೇಳಿದಂತೆ ತಿಳಿಯುತ್ತದೆ. ಹರೀಶ, ಚೆನ್ನವೀರೇಶ್ವರ, ಕರಿಬಸವ, ಮುಚ್ಚಿನ್ನಬಸವ ಇವರುಗಳ ಇಷ್ಟಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಅಲ್ಲದೆ ಪೂರ್ವದಲ್ಲಿ ಈ ಕಥೆಯನ್ನು ಸೋದೆಯ ಪ್ರಭುವಾದ ಸದಾಶಿವಭೂಪತಿ 'ವರ್ಣಕ'ವಾಗಿ ಬರೆದಿದ್ದಂತೆಯೂ ಅದನ್ನೇ ತಾನು 'ವಸ್ತುಕ'ವಾಗಿ ರಚಿಸಿದಂತೆಯೂ ಈ ಪದ್ಯದಲ್ಲಿ ಹೇಳಿದ್ದಾನೆ:—

ಸಕಲಕಲಾವಿಚಾರದ ನನೇಂದ್ರಶಿರೋಮಣಿ ಲಿಂಗಜಂಗಮಾ ।
ರ್ಚಕನುರು ಸೋದೆಯಪ್ರಭು ಸದಾಶಿವಭೂಪತಿಯೊಲ್ದು ಪೂರ್ವದೊಳ್ ।
ಪ್ರಕಟಸುವರ್ಣವರ್ಣಕದೆ ಪೇಟ್ದುದನಾಂ ಪ್ರಮಥೋಕ್ತಿಯಿಂದೆ ವ ।
ಸ್ತುಕದಿನಿದಂ ನೆಗಟ್ಟಿದೆನುಮೇಶನ ಭಕ್ತರಪಾರರೊಲ್ವಿನಂ ॥

ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸಿದ್ದಾನೆ:—

ಹಂಪೆಯ ಹರಿಹರದೇವನ|ಲಂಪಿನ ರಾಘವನನಿಂದ್ಯ ಪಾಲ್ಕುಱಿಕೆಯ ಸೋ|
ಮಂ ಪರಮಂ ಪಂಡಿತಯಂ|ಸೊಂಪಿನರಸಭಾವಮುಖ್ಯಮಂ ನೀಡುಗೆ ತಾಂ॥

---

1 ದ್ವಿತೀಯಸಂಪುಟ, 212. 2 ಅದೇ 575.

ಗುರು ತೋಂಟದಾರ್ಯನಂ ಸು । ಸ್ಥಿರಕೊಟ್ಟೂರೇಶನಂ ಭುಜಂಗೇಶ್ವರನಂ ।
ಕರತಳದ ನಾಗಿದೇವನ।ನಿರದಾಂ ನುತಿಗೆಯ್ದ ಪೇಳಿತ್ತಿನೀ ಸತ್ಕೃತಿಯಂ ॥

ಗ್ರಂಥಾವತಾರದಲ್ಲಿ ಸುಂದರೇಶನ ಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರ ಇವರುಗಳನ್ನು ಸ್ತುತಿಸಿ ಅನಂತರ ನಂದಿ, ಭೃಂಗಿ, ರೇಣುಕ, ಬಸವ, ಮಡಿವಳಮಾಚಯ್ಯ ಮುಂತಾದ ಶಿವಶರಣರನ್ನು ಹೊಗಳಿದ್ದಾನೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಸಮುದ್ರ.

ಹರಿಗಂ ಶಂಖಮನಿತ್ತಂ । ಗಿರಿಶಂಗಂ ಶಶಿಯನಂದು ಕೊಟ್ಟಂ ವಿಧಿಯಂ ।
ಸರಸಿಜಪೀಠದೊಳಿರಿಸಿದೆ । ನಿರದಿನಗಣಿಯಾವನೆಂದು ಮೊರೆದುದು ಶರಧಿ ॥
ನವರತ್ನಾಕರನಾನೆಂ । ದವಿರತಮಿದೊ ನೋಡಿಮೆಂದು ಮುಕ್ತಾವಳಿಯಂ ।
ಸವಿಮಣಿಸಿಕರಮುಮುಂ ತಾಂ । ತವೆ ತೆರೆದೋಳಿಂದೆ ಜೆಲ್ವವೋಲ್ ಪನಿ
ಮೆಱೆಗುಂ ॥

ಬನಸಂಪಗೆ.

ಪಚ್ಚೆಯ ಬೆಟ್ಟುಗಳೊಳ್ ಮೆ । ಯ್ವೆಚ್ಚದ ವೈಡೂರ್ಯಮಣಿಕದಂಬಮೊ
ತಾನೆನೆ ।
ಬಿಚ್ಚಲಿಸಿದ ಬನಸಂಪಗೆ । ಯಚ್ಚರಿಯದ ಮಲರ್ಗಳಿಂದೆ ಸೊಗಯಿಕು
ಮನಿಶಂ ॥

ಕೆಂಪಯ್ಯ. ಸು. 1750.

ಈತನು ನಳಚಕ್ರವರ್ತಿಕಥೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಒಕ್ಕಲಿಗ ಕವಿ. ಇವನ ತಂದೆ ಕಂಪಣ್ಣ, ತಾಯಿ ತಿಮ್ಮಮ್ಮ. ಈತನು ಸುಮಾರು 1750ರಲ್ಲಿ ಇದ್ದಿರಬಹುದು. ಬೃಹದಶ್ವಮುನಿ ಧರ್ಮರಾಯನಿಗೆ ಹೇಳಿದ ಕಥೆಯನ್ನು ಹಿಂದೆ ರಾಘವಯ್ಯನು ದ್ವಿಪದಕಾವ್ಯವಾಗಿ ಬರೆದಂತೆಯೂ ಅದನ್ನೇ ತಾನು ಯಕ್ಷಗಾನವಾಗಿ ರಚಿಸಿದಂತೆಯೂ ಕವಿ ಹೇಳುತ್ತಾನೆ. ಆರಂಭದಲ್ಲಿ ವಾಲ್ಮೀಕಿ, ವ್ಯಾಸ, ಸೂತ, ಕಾಳಿದಾಸ ಇವರುಗಳ ಸ್ತುತಿ ಇದೆ.

ಶಿವಯೋಗೀಶ್ವರ. ಸು. 1750.

ಇವನು ವಾರ್ಧಕಷಟ್ಪದಿಯಲ್ಲಿ ಭಕ್ತಿಮಾರ್ಗವನ್ನನುಸರಿಸಿ ಕೆಲವು ಶತಕಗಳನ್ನು ರಚಿಸಿರುವಂತೆ ತಿಳಿಯುತ್ತದೆ[1]. ಈತನು ವೀರಶೈವಕವಿ. ಇವನ ಸ್ಥಳ ಸಾಲೋಟಗಿ; ಇವನ ಸಮಾಧಿಯೂ ಅಲ್ಲಿಯೇ ಇದೆ. ಈತನ ಕಾಲವು ಸುಮಾರು 1750 ಎಂದು ಹೇಳುತ್ತಾರೆ.

ಕವಿಚೆನ್ನ. ಸು. 1750.

ಈತನು ಶಿವರಾಯಚರಿತೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ 'ಹತ್ತರಕಿಯ ವೀರನ ನೆನೆವೆನು' ಎಂಬುದರಿಂದ ಈತನ ಸ್ಥಳವು ಹತ್ತರಕಿ[2] ಯಾಗಿರಬಹುದು. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಶಿವರಾಯಚರಿತೆ.

ಇದು ತ್ರಿಪದಿಯಲ್ಲಿ ಬರೆದಿದೆ; ಸಂಧಿ 5, ಪದ್ಯ 523. ಇದರಲ್ಲಿ "ಮಜ್ಜೆ ಹೊಕ್ಕವರ ಕೊಡೆನೆಂಬ ಬಿರುದಿನ" ಶಿವರಾಯನ ಕಥೆ ಹೇಳಿದೆ. ಆರಂಭದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಗಣಪತಿ, ಸರಸ್ವತಿ, ಹತ್ತರಕಿಯ ವೀರಭದ್ರ, ಏಳೂರ ಮಾಣಿಕೇಶ್ವರ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಕುಸುಮಾಲೆ ಜಿಟ್ಟುಹೋಗುವಾಗ ಮಲೆಯಾಳಸೆಟ್ಟಿಯ ಪ್ರಲಾಪ.

ಕಟಿಲಿತು ಮುಖವೆಲ್ಲ । ಬಟಿಲಿತು ದೇಹವು ।
ಕೆಳದಿಯ ನುಡಿಗೆ ಮನಸೊಂದು ಮಲೆಯಾಳ।ಕುಲಗೇಡಿತನವ ಮಾಡುವರೆ॥
ಭೋಗವನುಂಡು ನಾ । ಹೇಗೆ ಸೈರಿಸಲಿನ್ನು ।
ನೀಗುವೆನೆನ್ನ ಹರಣವ ಕುಸುಮಾಲೆ । ಹೀಗೆ ದೋಸವನು ಮಾಡುವರೆ ।
ನಂಬಿದೆ ನಾ ನಿನ್ನ । ಹಂಬಲವ ಬಿಡಲಾರೆ ।

---

1 ಕರ್ನಾಟಕವೈಭವ (1915).

2 ಈ ಗ್ರಾಮವು ಬಿಜಾಪುರದ ಉತ್ತರಕ್ಕೆ ಸುಮಾರು 12 ಮೈಲಿಗಳ ದೂರದಲ್ಲಿದೆ ಇದಕ್ಕೆ ಅಥರ್ಗಾ ಎಂಬ ಹೆಸರೂ ಉಂಟು

ರಂಭೆಯರೊಳು ತಿರೋಮಣಿಯೇ ಕುಸುಮಾಲೆ । ಹಂಬಲವನೆಂತು
ಮಱೆವೆನು ॥
ಕರವಿಡಿದು ಮುದ್ದಿಸಿ । ತಿರವಿಡಿದು ಮುಂಡಾಡಿ ।
ತರಹರಿಸದೆ ಬಿಗಿದಪ್ಪಿ ಕುಸುಮಾಲೆ । ಗರುವೆ ನೀಬಿಟ್ಟು ಹೋಗುವಳೆ ॥

ವಿರುಪಣಯ್ಯ. ಸು 1750.

ಈತನು ವೀರಭದ್ರವಿಜಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕಾಶ್ಯಪಗೋತ್ರದವನು; ಆಶ್ವಲಾಯನಸೂತ್ರದವನು. ಇವನ ತಂದೆ ಪರ್ವತಯ್ಯ, ಕುಲದೈವ ವೀರಭದ್ರ, ಸ್ಥಳ ದಕ್ಷಿಣನದೀತೀರದಲ್ಲಿರುವ ದಾಳಿಕೊಟ್ಟಿ[1]. ಈತನ ಗುರು ವೀರಣಯ್ಯ[2] ಪೂರ್ವಕವಿಗಳಲ್ಲಿ ಕುಮಾರವ್ಯಾಸನನ್ನು (ಸು. 1430) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗಿದೆ ಸುಮಾರು 1750 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ :—

ಮೆಱೆವ ಕಾಳಿಯ ಭಕ್ತನಾತನು । ಹರಿಹರೇಶ್ವರ ರಾಘವಾಂಕನು ।
ಸಿರುತದಲಿ ಶುಕರೂಪವ್ಯಾಸನು ಮಲುಹಣನು ಸಹಿತ ॥
ಪಿರಿಯರಿವರನು ನೆನೆದು ಕಾವ್ಯವ । ಸರಗೊಳಿಸುವೆನು.

ಇವನ ಗ್ರಂಥ

ವೀರಭದ್ರವಿಜಯ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರ ಪ್ರತಿಯಲ್ಲಿ 6 ಸಂಧಿಗಳಿವೆ. ಇದರಲ್ಲಿ ವೀರಭದ್ರನ ವಿವಾಹವು ವರ್ಣಿತವಾಗಿದೆ. ಈ ಕಥೆಯನ್ನು ಮೊದಲು ಶಿವನು ಷಣ್ಮುಖನಿಗೂ ಅನಂತರ ದಧಿಮುನಿ ಜೈಮಿನಿಗೂ ಹೇಳಿದಂತೆಯೂ ಅದನ್ನೇ ರಗಳೆಯರೂಪದಲ್ಲಿ ಹಂಪೆಯ ಹರೀಶ್ವರನು ರಚಿಸಿದಂತೆಯೂ ಕವಿ ಹೇಳುತ್ತಾನೆ ಆರಂಭದಲ್ಲಿ ವಿರೂಪಾಕ್ಷಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

---

1 ಇದು ಈಗಿನ ದೋಣಿಹೊಳೆಯ ತೀರದಲ್ಲಿರುವ ತಾಳಿಕೋಟೆ ಎಂದು ತೋರುತ್ತದೆ. ಈ ಸ್ಥಳವು ಬಿಜಾಪುರದ ಆಗ್ನೇಯಕ್ಕೆ ಸುಮಾರು 41 ಮೈಲಿಗಳ ದೂರದಲ್ಲಿದೆ.

2 ತನ್ನ ಗುರುವಿನ ಪೀಳಿಗೆಯಲ್ಲಿ 18 ಪಟ್ಟದವರ ಹೆಸರನ್ನು ಹೇಳಿದ್ದಾನೆ.

ಕವಿಪ್ರಾರ್ಥನೆ.

ಮಾಣಿಕವ ನಸುಮಾಸಿಯಿದ್ದಡೆ । ಸಾಣೆಯಿಕ್ಕಿಯು ಕಾಂತಿಯೆಸಗುವ ।
ಜಾಣರಂದದಿ ಸಕಲಕವಿಗಳು ನಿಪುಣಪಂಡಿತರು ॥
ಮಾಣದಣುಗೊಳಿಸುವುದು ಪದಲಾ ? ಕ್ಷುಣಿಕರೀಭದ್ರನ ಸುಲಗ್ನವ ।
ಕೇಣವಿಡಿದವನಲ್ಲ ರಚಿಸುವುದೆಲ್ಲರೊಂದಾಗಿ ॥

ಪಾರ್ವತಿ ಬೇಡಿತಿಯಾಗಿ ಶಿವನನ್ನು ಹುಡುಕುವುದು.

ಕೂಗುತಿರೆ ಕೋಗಿಲೆಯು ಸ್ವರದಲಿ । ಮಾಗಿ ಮದವೇಹುತ್ತ ಬರುತಿರೆ ।
ತಾಗುತಿರ್ದುವ ಫಲಗಳೋಳಿಯು ಜಂಜರಿಯ ಶಿರವ ॥
ಬಾಗುತಲಿ ಬಳುಕುತಲಿ ಕಂಗಳ । ಲಾಗ ಜಲಕಣವಿಟ್ಟುಯುತಿರೆ ಶಿವೆ ।
ಶ್ರೀಗುರುವೆ ದೊರಕಯ್ಯ ನಂಬಿದೆ ನಿನ್ನ ಚರಣವನು ॥(ಎನುತ್ತ ಅಲೆದಳು)

ಚಿನ್ಮಯ. ಸು. 1750.

ಈತನು ತಾರಕನಿರಂಜನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಸಹಜಾನಂದ ಸದ್ಗುರು ಲಿಂಗಾರ್ಯನ ಶಿಷ್ಯನು. ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ.

ತಾರಕನಿರಂಜನ.

ಇದು ಹಾಡಿನರೂಪವಾಗಿದೆ; ಅಧ್ಯಾಯ 7, ಪದ 204. ಇದರಲ್ಲಿ ಭಕ್ತಿಯೋಗ, ಸಾಂಖ್ಯಯೋಗ, ತಾರಕಯೋಗ, ಅಮನಸ್ಕಯೋಗ, ನಿರ್ಗುಣಯೋಗ, ಮೊದಲಾದ ವಿಷಯಗಳು ಹೇಳಿವೆ. ಆರಂಭದಲ್ಲಿ ಶ್ರೀರಂಗಪಟ್ಟಣದ ರಂಗನಾಥ, ರಾಮಚಂದ್ರ, ಪಾರ್ವತಿ, ಗಣೇಶ ಇವರ ಸ್ತುತಿ ಇದೆ.

ವೆಂಕಟದಾಸ. ಸು. 1750.

ಈತನು ಅಖಂಡಾನಂದಸ್ವರೂಪವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ತನ್ನ ಗುರುಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ:—ಗೋವಾರ್ಯಯತಿ; ಶಿಷ್ಯ ನಾರಾಯಣಸ್ವಾಮಿ; ಶಿಷ್ಯ ವಾಸುದೇವಯತಿ; ಶಿಷ್ಯ ವಾಸಾರ್ಯ;

ಶಿಷ್ಯ ಕವಿ ವೆಂಕಟದಾಸ. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ. ಗ್ರಂಥವು ಗದ್ಯರೂಪವಾಗಿದೆ ; ಬ್ರಹ್ಮಸ್ವರೂಪವನ್ನು ವಿವರಿಸುತ್ತದೆ; ಅಲ್ಲಲ್ಲಿ ಶ್ರುತಿ, ಸ್ಮೃತಿ, ಭಗವದ್ಗೀತೆ ಇವು ಅನುವಾದಮಾಡಲ್ಪಟ್ಟಿವೆ. ಕೆಲವು ಕನ್ನಡಪದ್ಯಗಳೂ ಇವೆ.

ಪೂರ್ವಾಂತರಂಗಯೋಗಿ. ಸು. 1750.

ಈತನು ನಾನಾರ್ಥಗುರುಬೋಧಸಾರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ; " ಶ್ರೀಮತ್ಪರಾಶರಪರಿವ್ರಾಜಕಾಚಾರ್ಯ ವ್ಯಾಸಭಟ್ಟಾರ ಮುಕುಂದಗುರುವರ್ಯ ಪಾದಕಮಲಭೃಂಗಾಯಮಾನ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1750 ಆಗಿರಬಹುದು. ಗ್ರಂಥವು ಗದ್ಯರೂಪವಾಗಿದೆ ; ಅಧ್ಯಾಯ 11 ; ಅದ್ವೈತವೇದಾಂತವನ್ನು ಬೋಧಿಸುತ್ತದೆ.

ರುದ್ರಮುನಿ. ಸು. 1750.

ಈತನು ಕಾಲಜ್ಞಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1750 ರಲ್ಲಿ ಇದ್ದಿರಬಹುದು. ಇವನ ಕಾಲಜ್ಞಾನವು ಪದಗಳ ರೂಪವಾಗಿದೆ; ಜೆನ್ನಬಸವನ ಕಾಲಜ್ಞಾನದ ಆಧಾರದಮೇಲೆ ರಚಿತವಾಗಿರುವಂತೆ ತಿಳಿಯುತ್ತದೆ.

ನಿರಂಜನಮೂರ್ತಿ. 1760.

ಈತನು ಕಂಚಿಯ ಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತನ್ನ ಗುರುಪರಂಪರೆಯಲ್ಲಿ ಹತ್ತು ಪಟ್ಟದವರ ಹೆಸರನ್ನು ಹೇಳಿ ತನ್ನ ಗುರುವಿನ ಹೆಸರನ್ನು ಹೇಳದೆ ಹತ್ತನೆಯ ಪಟ್ಟದ ವಿರೂಪಾಕ್ಷನ " ಗರ್ಭದಲಿ | ಬಂದ ಪಟ್ಟದ ಗುರುಗಳಿಗೆ ತಾ | ಹೊಂದಿ ಜನಿಸಿದ ಗುರುವಿನಂಘ್ರಿಗೆ | ವಂದದಿಂದಲಿ ಯೆಱಗಿ ಬೇಡುವೆ ಮತಿಗೆ ಮಂಗಳವ " ಎಂದು ಹೇಳುತ್ತಾನೆ. ಈ ಗ್ರಂಥವನ್ನು ಶಕ 1681ನೆಯ ವಿಕ್ರಮವರ್ಷದಲ್ಲಿ, ಎಂದರೆ 1760 ರಲ್ಲಿ, ಬರೆದಂತೆ ಹೇಳುತ್ತಾನೆ ಪೂರ್ವಕವಿಗಳಲ್ಲಿ ವ್ಯಾಸ, ಮಲುಹಣ, ಹರಿಹರ, ರಾಘವಾಂಕ, ಮಯೂರ, ಕಾಳಿದಾಸ, ಶುಕರೂಪ (ಕುಮಾರವ್ಯಾಸ) ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ಕಂಚಿಯ ಪುರಾಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಗತಿ 16, ಪದ್ಯ 887. ಇದರಲ್ಲಿ " ಕಂಚಿಯಪುರದ ಭೂಪಾಲ | ಮಾರಹರನನು ಭಜಿಸಿ ಭಕ್ತಿಲಿ | ಭೋರೆನಿಸಿ ಹೆಮ್ಮಡೆಯ ಕಳುಹಿದ | ವೀರಜೋಳನ ಗೆಲಿದ " ಕಥೆ ಹೇಳಿದೆ.

ಅಭಿನವ ಜನಾರ್ದನದಾಸ. ಸು. 1800.

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಜಗನ್ನಾಥದಾಸನ (ಸು. 1775) ಶಿಷ್ಯನೆಂದು ಪ್ರತೀತಿ ಇದೆ. ಇವನ ಕಾಲವು ಸುಮಾರು 1800 ಆಗಿರಬಹುದು

ಮುದ್ದುಸಂಗಮುನಿ. ಸು. 1800.

ಈತನು ದೇವಾಂಗಮತಪ್ರಕಾಶಿಕೆಯನ್ನು ಬರೆದಿದ್ದಾನೆ. ಇವನು ದೇವಾಂಗವನು; ಹಂಪೆಯ ಹೇಮಕೂಟಮಠದಲ್ಲಿ ಸ್ವಾಮಿಯಾಗಿದ್ದನು. ಇವನ ಕಾಲವು ಸುಮಾರು 1800 ಆಗಿರಬಹುದು. ಇವನ ಗ್ರಂಥವು ಷಟ್ಪದಿ, ಸೀಸಪದ್ಯ ಇವುಗಳನ್ನು ಒಳಕೊಂಡಿದೆ. ಇದಕ್ಕೆ ಕಾಡಸಿದ್ದಪ್ಪ ಎಂಬವನು ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ.

ಶಂಕರಾನಂದಯೋಗಿ. ಸು. 1800.

ಈತನು ಕೈವಲ್ಯನವನೀತವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; " ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರುಸಾರ್ವಭೌಮ ಶ್ರೀದತ್ತಾತ್ರೇಯ ಕರಕಮಲಸಂಜಾತ ಶ್ರೀಸದಾನಂದಗುರು ಮಹಲಿಂಗರಂಗ ಯತಿವರೇಣ್ಯನ " ಶಿಷ್ಯನು. ಅನುಭವಾಮೃತವನ್ನು ಬರೆದ ಮಹಲಿಂಗರಂಗನು (ಸು. 1675) ಸದಾನಂದನ ಶಿಷ್ಯನೆಂದು ತಿಳಿವುದರಿಂದ ಈ ಮಹಲಿಂಗರಂಗನು ತದ್ಭಿನ್ನನಾಗಿರಬೇಕು. ಕವಿಯ ಕಾಲವು ಸುಮಾರು 1800 ಆಗಿರಬಹುದೆಂದು ಊಹಿಸುತ್ತೇವೆ. ಇವನ ಗ್ರಂಥವು ಹಾಡಿನರೂಪವಾಗಿದೆ; ಅಲ್ಲಲ್ಲಿ ಕಂದಗಳೂ ಇವೆ.

ಚಂದ್ರಸಾಗರವರ್ಣಿ[1]. 1810.

ಈತನು ಬಿಜ್ಜಣರಾಯಪುರಾಣವನ್ನೂ ಬರೆದಿದ್ದಾನೆ. ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ; ಆಶ್ವಾಸ 8, ಪದ್ಯ 498. ಬಿಜ್ಜಣನು ಬಸವನ ಸಹೋದರಿಯಾದ ಗುಣವತಿಯನ್ನು ಮದುವೆಯಾಗಿ ಅವಳ ಮಗನನ್ನು ದೊರೆಯನ್ನಾಗಿ ಮಾಡುವಂತೆ ಮಂತ್ರಿ ಬಸವ ಮುಂತಾದವರಿಗೆ ಹೇಳಿ ಸತ್ತನು. ಬಸವನು ಜೈನರಿಗೆ ಮಾಡುತ್ತಿದ್ದ ಹಿಂಸೆಯನ್ನು ತಿಳಿದು ರಾಜಕುಮಾರನು ಯುದ್ಧದಲ್ಲಿ ಆತನನ್ನು ಜಯಿಸಿ ಜೈನರಿಗೆ ಸುಖವನ್ನು ಉಂಟುಮಾಡಿದನು—ಎಂಬುದೇ ಕಥಾಸಾರ.

ಗ್ರಂಥಾವತಾರದಲ್ಲಿ ಚಂದ್ರಪ್ರಭಸ್ತುತಿ ಇದೆ. ಆಮೇಲೆ ಕವಿ ಚತುರ್ವಿಂಶತಿ ಜಿನರು, ಪಂಚಪರಮೇಷ್ಠಿಗಳು, ಸರಸ್ವತಿ, ಗಣಧರರು, (ಸ್ವಗುರು) ಲಕ್ಷ್ಮಿಸೇನ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ:—

ಗುಣವತಿ.

ದೇವಸತಿ ಗಡ ಈಕೆ ಕಿನ್ನರ । ಭಾವೆ ಗಡ ಮತ್ತೀಕೆ ಖಗಕುಲ ।
ದೇವಿ ಗಡ ಮೇಣೀಕೆ ಭಾಸ್ಕರನಂಗನೆಯೊ ಶಶಿಯ ॥
ದೇವಿಯೋ ಸುರಜ್ಯೇಷ್ಠನಂಗನೆ । ಕಾವನರಸಿಯೊ ಹರನ ಗೌರಿಯೊ ।
ಭಾವಜನ ಪಿತನೊಲವಿನಾಕೆಯೊ ಅರೊ ಇವಳೆಂದ ॥

ಘನಮಠದಾರ್ಯ. ಸು. 1830.

ಈತನು ಅನುಭವಪದಗಳನ್ನೂ ಕೃಷಿಜ್ಞಾನಪ್ರದೀಪಿಕೆಯನ್ನೂ ರಚಿಸಿರುವಂತೆ ತಿಳಿಯುತ್ತದೆ[2]. ಇವನು ವೀರಶೈವಕವಿ. ಇವನ ಜನ್ಮಸ್ಥಾನವು ಬಳ್ಳಾರಿಜಿಲ್ಲೆಯಾದರೂ ಈತನು ತನ್ನ ಆಯುಷ್ಯವನ್ನು ಹುನುಗುಂದದಲ್ಲಿ ಕಳೆದನು. ಇವನು ದೊಡ್ಡ ಪಂಡಿತನೆಂದೂ ಇವನ ಪದಗಳು ಭಕ್ತಿರಸದಿಂದ ಕೂಡಿ ಸೊಗಸಾಗಿವೆಯೆಂದೂ ಹೇಳುತ್ತಾರೆ. ಈತನ ಕಾಲವು ಸುಮಾರು 1830 ಆಗಿರಬಹುದು.

ಬನವಲಿಂಗ. ಸು. 1830.

ಇವನು **ತರಣಿಬಸವರಗಳೆ**, ಶರಣಿ ವರಗಳೆ ಕಂದ ಎಂಬ ಗ್ರಂಥಗಳನ್ನು

---

1 **ಪುಟ** 164. 1 **ಕರ್ನಾಟಕವೈಭವ** (1915)

ಬರೆದಿದ್ದಾನೆ[1]. ಈತನು ವೀರಶೈವಕವಿ. ಇವನ ಕಾಲವು ಸುಮಾರು 1830 ಆಗಿರಬಹುದೆಂದು ತೋರುತ್ತದೆ. ಮೊದಲನೆಯ ಗ್ರಂಥದಲ್ಲಿ 100 ಪದ್ಯಗಳಿವೆ: ಒಂದೊಂದೂ "ಶರಣುಬಸವ" ಎಂದು ಮುಗಿಯುತ್ತದೆ. ಎರಡನೆಯದನ್ನು ಯತಿಪುರದ ಸಿದ್ಧೇಶನ ಅನುಗ್ರಹದಿಂದ ಬರೆದಂತೆ ಹೇಳುತ್ತಾನೆ. ಈ ಗ್ರಂಥದಲ್ಲಿ ಬಸವನ ಚರಿತ್ರವು ಹೇಳಿದೆ. ಇದರ ವಿಷಯವಾಗಿ ಕವಿ "ಪೂರ್ವದಲ್ಲಿ ಪಾಲ್ಕುರಿಕೆ ಸೋಮನಾಥನು ಬಸವ ಪುರಾಣವನ್ನು ತೆಲುಗಿನಲ್ಲಿ ಬರೆದನು; ಅದನ್ನು ಭೀಮಕವಿ ಕನ್ನಡಷಟ್ಪದಿಯಲ್ಲಿ ರಚಿಸಿದನು; ಶಂಕರಾರಾಧ್ಯನು ಸಂಸ್ಕೃತದಲ್ಲಿ ಬರೆದನು; ಬಾಲಚಂದ್ರನಗರದ ಶಿವಕವಿ ವಸ್ತುಕರೂಪವಾಗಿ ರಚಿಸಿದನು. ಅದನ್ನೇ ನಾನು ಸುಲಲಿತವಾಗಿ ಬರೆಯುತ್ತೇನೆ" ಎನ್ನುತ್ತಾನೆ.

ಕೃಷ್ಣಗಿರಿ ಕೃಷ್ಣಯ್ಯ. ಸು. 1860.

ಈತನು ಲಕ್ಷ್ಮಣಾವಿಲಾಸವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಗಯೋಪಾಖ್ಯಾನವನ್ನು ಬರೆದ ವೆಂಕಟರಮಣಯ್ಯನ[2] (1857) ತಮ್ಮನು. ಇವನ ಗ್ರಂಥವು ಯಕ್ಷಗಾನರೂಪವಾಗಿದೆ.

ಭಾಗವತಕೃಷ್ಣಸ್ವಾಮಿ. 1869.

ಈತನು ಜ್ಞಾನಯೋಗತರಂಗಿಣಿಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ. ಇವನ ತಂದೆ ಭಾಗವತ ನಾರಾಯಣಪ್ಪ. ಮುಮ್ಮಡಿ ಕೃಷ್ಣರಾಜನ ಮಹಿಷಿಗಳಾದ ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿ ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿ ಇವರಿಬ್ಬರೂ ತಮ್ಮ ಅಜ್ಜಿಯನ್ನು ಬಾಲನಾದ ಶ್ರೀಚಾಮರಾಜನ ಮೂಲಕವಾಗಿ ತಿಳಿಸಲು ಬಾಲ್ಯದಿಂದಲೂ ಆ ಸನ್ನಿಧಾನಗಳಲ್ಲಿಯೇ ಪೋಷಿತನಾದ ತಾನು ಈ ಗ್ರಂಥವನ್ನು 1869 ರಲ್ಲಿ ಬರೆದಂತೆ ಕವಿ ಹೇಳುತ್ತಾನೆ. ಗ್ರಂಥವು ವಾಸಿಷ್ಠರಾಮಾಯಣದ ಟೀಕಾರೂಪವಾಗಿದೆ.

---

1 Kittel: "Nagavarma's Prosody", LXXX.

2 ಪುಟ 205.

APPENDIX II.

ಪರಿಶಿಷ್ಟ II.

ಕವಿಗಳು ಗೊತ್ತಿಲ್ಲದ ಕೆಲವು ಗ್ರಂಥಗಳು.

ತ್ರೈಲೋಕ್ಯರಕ್ಷಾಮಣಿಸ್ತೋತ್ರ (ವೃತ್ತ 12). ಸು. 1300.

ಎನಿತಾನುಂ ಭವಮುಂ ಚತುರ್ಗತಿಗಳೊಳ್ ದುಃಖಿಂಗಳಂ ಕಂಡೆನುಂ ।
ಜೆನವರ್ಕಳ್ಕಿದೆನುಳ್ಕಿದೆಂ ಜಳಿತೆನಿಂ ಮೆಯ್ಯೊಡ್ಡಲಮ್ಮೆಂ ನಿರಂ ॥
ಜನ ಸಂಸಾರಸಮುದ್ರದಿಂ ತೆಗೆದುಕೊಂಡೆನ್ನಂ ಜಿನಸ್ವಾಮಿ ಮು ।
ಕ್ತಿನಿವಾಸಕ್ಕೆ ಮಮತ್ವದಿಂ ಕಳಿಪು ನೀಂ ತ್ರೈಲೋಕ್ಯರಕ್ಷಾಮಣೀ ॥
ಶ್ರೀಯುಂ ಜವ್ವನಮುಂ ವಿಳಾಸದೊದವುಂ ಸೌಭಾಗ್ಯಮುಂ ಮೈಮೆಯುಂ ।
ಮಾಯಂ ಮಂಜಿನಪುಂಜವಿಂದ್ರಧನು ವಿದ್ಯುಲ್ಲೇಖೆ ಸಂಧ್ಯಾರುಣ ॥
ಶ್ರೀಯೆಂಬಂತಿರೆ ನಿಷ್ಠೆಯಾಗಿರವಿವರ್ಕಂ ಪ್ರಾರ್ಥಿಸೆಂ ಶಾಶ್ವತ ।
ಶ್ರೀಯಂ ದೇವರದೇವ ಕೂರ್ತುದಯೆಗೆಯ್ ತ್ರೈಲೋಕ್ಯರಕ್ಷಾಮಣೀ ॥

ಜಿನೇಶ್ವರಾಷ್ಟಕ. ಸು. 1300.

ಪ್ರತಿಪದ್ಯವೂ ಜಿನೇಶ್ವರ ಎಂದು ಮುಗಿಯುತ್ತದೆ.

ಶ್ರೀನಿಧಿ ನೀನೆ ಸೌಖ್ಯನಿಧಿ ನೀನೆ ಯಶೋನಿಧಿ ನೀನೆ ವಿಶ್ವವಿ ।
ದ್ಯಾನಿಧಿ ನೀನೆ ತತ್ವನಿಧಿ ನೀನೆ ದಯಾನಿಧಿ ನೀನೆ ಸದ್ಗುಣಾಂ ।
ಭೋನಿಧಿ ನೀನೆ ಧರ್ಮನಿಧಿ ನೀನೆ ಸುಧಾಂಬುಧಿ ನೀನೆ ಮುಕ್ತಿಲ
ಕ್ಷ್ಮೀನಿಧಿ ನೀನೆ ಭವ್ಯನಿಧಿ ನೀನೆ ಜಗತ್ತ್ರಯದೊಳ್ ಜಿನೇಶ್ವರಾ ॥

ಗುಮ್ಮಟಸ್ತುತಿ (ಪದ್ಯ 6). ಸು. 1300.

ಕಂಡೆಂ ಕಣ್ಗಳ ಪುಣ್ಯಪುಂಜಮನೆ ಕಾಣ್ಬಂತೀಗಳಾನಂದದಿಂ ।
ಕಂಡೆಂ ಕಣ್ಗಳ ಕೌತುಕಂ ಕೊನರುತಿರ್ಪಂತೀಗಳೊಂದಟ್ಕಳಿಂ ॥

ಕಂಡೆಂ ಕಣ್ಬಡೆದಿರ್ದುದರ್ಕೆ ಫಲಮೆಂಬಂತೀಗಳೊಂದೇಪೆ್ಗಯಿಂ ।
ಕಂಡೆಂ ಕಣ್ ದಣಿವಂತು ಸಂತಸದೊಳಾಂ ಶ್ರೀಗುಮ್ಮಟಾಧೀಶನಂ ॥

ಜಿನಸ್ತುತಿ (ಪದ್ಯ 12). ಸು. 1300.

ಆಱಿಯದ ಬೇಶದೊಳ್ ತೊಟಿಲಿ ತಳ್ತ ಮಹಾವಿಪಿನಾಂಧಕಾರದೊಳ್ ।
ಸಱಿಗಳ ನಿರ್ಝರೋದಕದ ಗಹ್ವರದೊಳ್ ಭಯಮಾದ ಬೆಟ್ಟದೊಳ್ ॥
ತೆಱಪಱಿಡೊಲ್ದು ನಿಂದು ಮಿಗೆ ನಿರ್ಮಲಪಂಚಪದಾಕ್ಷರಂಗಳಂ ।
ಮಱೆಯದೆ ಭಾವಿಪೊಂದು ಪರಮೋತ್ಸವಸಂಪದಮೆಂದು ಸಾರ್ಗುಮೋ ॥

ಧ್ಯಾನಲಕ್ಷಣ (ಕಂದ 5). ಸು. 1300.

ತಾರಗೆಯುಂ ಕ್ಷೀರಾಬ್ಧಿಯ । ವಾರಿಯೊಳಿರದೊಱಿಸಿ ಕರ್ಚಿ ಕಳೆದವೊಲೆಸೆವಾ ।
ಕಾರದ ಪಂಚಪದಂಗಳ । ನಾರಯ್ದತಿಶುದ್ಧಮನದೊಳಿರಿಸೆ ಪದಸ್ಥಂ ॥

ಪಂಚಪದಾಷ್ಟಕ[1] (ಕಂದ 10). ಸು. 1300.

ಶ್ರೀಕರಮಭೀಷ್ಟಸಕಲಸು । ಖಾಕರಮಪವರ್ಗಕಾರಣಂ ಭವಪರಣಂ ।
ಲೋಕಹಿತಂ ಮನ್ಮನದೊಳ । ಗೇಕಾಗ್ರದೆ ನಿಲ್ಕೆ ನಿರುಪಮಂ ಪಂಚಪದಂ॥
ಸಾರಂಗಳ್ ಪಂಚನಮ । ಸ್ಕಾರಂಗಳ್ ಸಕಲಭವ್ಯಜನಹೃದಯಾಲಂ ।
ಕಾರಂಗಳ್ ಶ್ರುತಲಕ್ಷ್ಮೀ । ಹಾರಂಗಳ್ ನೆನೆವವರ್ಗೆ ಸುಖಸಾರಂಗಳ್ ॥

ಯೋಗಾಮೃತ (ಪದ್ಯ 110) ಸು. 1300.

ಸಮಚಿತ್ತಮೆ ಪರಮಪದಂ । ಸಮಚಿತ್ತಮೆ ಸಕಳಸುಖದ ನಿಳಯಂ ಮತ್ತಂ ।
ಸಮಚಿತ್ತಮೆ ಮುಕ್ತಿಪದಂ । ಸಮಚಿತ್ತದೆ ಕೂಡಿ ನೆಗಟ್ಟಿ ತಪಮದು ಸಫಲಂ ॥

1. 1ನೆಯ ಸಂಪುಟದ 304ನೆಯ ಪುಟವನ್ನು ನೋಡಿ.

ಅಱಿಯದವರಱಿವರೊಳ್ ತಾ । ನಱಿವುದು ಪರಮಾತ್ಮಗುಣಮನಱಿವಿಂ ಕರ್ಮಂ ।
ಪಱಿಪಡುಗುಮಱಿಯದಿರ್ದೊಡೆ । ನೆಹೆಯಟ್ಟಿ ತಗುಳ್ದು ಸುತ್ತುತಿರ್ಕುಂ ಕರ್ಮಂ ॥
ಕಾನಲ ಬಾನಲ ನೀರಂ । ಮಾನೊಲ್ಕುಂ ರಾಜಹಂಸನೊಲ್ಕುಮೆ ಮಿಥ್ಯಾ ।
ಜ್ಞಾನಿ ಭವಸುಖಮನೊಲ್ವಂ । ತೇನೊಲ್ಕುಮೆ ಪರಮಪಾವನ ಜ್ಞಾನಪರಂ ॥

ವೈದ್ಯಶಾಸ್ತ್ರ. ಸು. 1300.

ನೇಱಿಲ ಬೀಜಮಂ ಮೊಲೆವಾಲಿನಲ್ಲಿ ತೇದು ಕಣ್ಗೆ ಎಜ್ಜೆ ಕಣ್ಣುಬೇನೆ ಮಾಣ್ಗುಂ.

ಅರುಳಿಮೊಗರು ಅರಗು ಇವನರೆದು ಹುಳಿನುಜ್ಜಿಗೆಯಲ್ಲಿ ಕದಡಿ ಕುಡಿಯೆ ಸೂತಕಂ ನಿಲ್ಲುವುದು.

ಜ್ವಾಲಿನೀಕಲ್ಪಾದಿಸಂಗ್ರಹ. ಸು. 1300.

ಗದ್ಯ ಪದ್ಯಾತ್ಮಕವಾಗಿದೆ.

ಕರಿಯೆಳ್ಳು, ಕರಿಯ ಕಡಲೆ, ಕರಿಯ ಕಾಕಿ, ಕರಿಯಜಕ ಇನಿತುಮಂ ಸಮಂಗೊಂಡು ಎಳ್ಳೆಣ್ಣೆಯೊಳರೆದು ಮೆಯ್ಯಂ ಹೂಸೆ ಮೆಯ್ಯ ರೋಮಂ ಮೊದಲಾಗಿ ಏನುಂ ಬೇಯದು.

ಕನಕದ ಬೇರು ಗಿರಿಕರ್ಣಿಕೆಯ ಬೇರು ಸಹ ಕವಲೆಯಾವಿನ ಬಿಣ್ಣಿಯಿಂದರೆದು ಮೆಯ್ಯ ಮೊಗಮಂ ಪೂಸಿ ನೀರೊಳ್ ಪೊಕ್ಕು ಕುಳ್ಳಿರಲು ಮನೆಯೊಳಿರ್ದಂತಿರ್ಕುಂ.

ಕಡಲೆಯ ಬೇರಂ ಸಿದ್ಧದಿನದಲ್ಲಿ ತಂದು ಮಂಜದಲ್ಲಿ ಕಟ್ಟಲು ತಿಗುಣಿ ಹೊದ್ದಲಮ್ಮದು.

ಕರಮಿದು ಜೋದ್ಯಂ ಕೆಂಗಿನ।ತಿರುಳಂ ಪಿಪ್ಪಲಿಯ ನೀರೊಳರೆದದನಿಂಬಾ ।
ಗಿರೆ ಪಿಱಿದು ತಳೆಯೆ ದುಗ್ಧಂ । ಸ್ವರೂಪಮಂ ತಳೆದು ಕರಮೆ ರುಚಿಯಾಗಿರ್ಕುಂ ॥

ಕರ್ಮಪ್ರಕೃತಿ. ಸು. 1350.

ಕರ್ಮದ ಸ್ವರೂಪವನ್ನು ಹೇಳುವ ಗದ್ಯಗ್ರಂಥ.

ಕಿಚ್ಚಿಂದಂ ಬೆಂದೆರಡಾಗದ ನೀರಿಂದಂ ನನೆದೆರಡಾಗದ ಕೆಸಱಿಂದಂ ಲೊಪೆ

ದೆರಡಾಗದ ವಜ್ರಾದಿಗಳಿಂದೊಡೆದೆರಡಾಗದ ಕಡುಕಿಱಿದಪ್ಪ ಪುದ್ಗಲಮುಂ ಪರಮಾಣುವೆಂಬುದು.

ಮೂಲಪ್ರಕೃತಿ ಜ್ಞಾನಾವರಣೀಯ ದರ್ಶನಾವರಣೀಯ ವೇದನೀಯ ಮೋಹನೀಯಾಯುಷ್ಯ ನಾಮಗೋತ್ರಾಂತರಾಯ ಭೇದದಿಂದೆಂಟುತೆಱಂ. ಅವಱೊಳ್ ಜ್ಞಾನಾವರಣೀಯಕರ್ಮಮಱಿಯಲೀಯದು ಆದಿತ್ಯಂಗೆ ವಱೆಯೂದ ಮೇಘದಂತೆ. ದರ್ಶನಾವರಣೀಯಕರ್ಮಂ ಕಾಣಲೀಯದು ಸೊಡರಂ ಮುಚ್ಚಿದ ಕುಂಭದಂತೆ. ವೇದನೀಯಕರ್ಮಂ ಸುಖದುಃಖಂಗಳಂ ಮಾಡಿಪ್ಪುದು ಖಡ್ಗಧಾರೆಯ ಜೇನೆಯ್ಯಂ ನಕ್ಕುವಂತೆ. ಮೋಹನೀಯಕರ್ಮಂ ಮರುಳ್ಮಾಡಿಪ್ಪುದು ಮದ್ಯದ ಸೊರ್ಕಿನಂತೆ. ಆಯುಷ್ಯಕರ್ಮಂ ಶರೀರಮಂ ಪಿಡಿದಿರ್ಪುದು ಸಂಕಲೆಯಂತೆ. ನಾಮಕರ್ಮಂ ಪೆಸರ್ಗಳಂ ಮಾಡಿಪ್ಪುದು ಚಿತ್ರಕನಂತೆ. ಗೋತ್ರಕರ್ಮಂ ಕುಲಂಗಳಂ ಮಾಡಿಪ್ಪುದು ಕುಂಭಕಾರನಂತೆ. ಅಂತರಾಯಕರ್ಮಂ ವಿಘ್ನಮಂ ಮಾಡಿಪ್ಪುದು ಭಂಡಾರಿಯಂತೆ.

ದ್ರವ್ಯಸಂಗ್ರಹಾಗಮಟೀಕೆ. ಸು. 1350.

ಶ್ರೀಮನ್ನೇಮಿಚಂದ್ರಸಿದ್ಧಾಂತವೇದಿಗಳ್ ಸ್ವಾತ್ಮಾನುಭವಜನಿತಾನಶ್ವರಾನಂತ ಸುಖಸುಧಾರಸಪಿಪಾಸಿತರಪ್ಪ ಭವ್ಯಜನಂಗಳ್ಗೆ ತತ್ಸುಖಪ್ರಾಪ್ತಿಕಾರಣಭೂತ ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥ ಸಂಸಾರಮೋಕ್ಷಕಾರಣ ಪರಿಜ್ಞಾನಾರ್ಥಮಾಗಿ ಸಕಲಾಗಮಂಗಳ ಸಾರಮುಂ ಸಂಗ್ರಹಿಸಿ ದ್ರವ್ಯಸಂಗ್ರಹಮಂ ಪೇೞುತ್ತದಹ್ಯಾದಿಯಲ್ಲಿ ನಿರ್ವಿಘ್ನತಾದಿ ಚತುರ್ವಿಧಫಲಮನಪೇಕ್ಷಿಸಿ ವಿಶಿಷ್ಟದೇವತಾನಮಸ್ಕಾರಮುಂ ಮಾಡಿದಪರ್.

ತ್ರಿಭುವನಕೋಶ (ಗದ್ಯ) ಸು. 1400.

ಗಾಹೆಗಳೂ ಶ್ಲೋಕಗಳೂ ಅನುವಾದಮಾಡಲ್ಪಟ್ಟಿವೆ. ಆದ್ಯಂತಗಳಲ್ಲಿ ಈ ಕಂದವೂ ಗದ್ಯವೂ ಇವೆ—

ತ್ರಿಭುವನಚೂಡಾಮಣಿಜಿನ|ಶುಭವಾದಪಯೋಜಯುಗಳಮಂ ವಂದಿಸಿ ಮಾ|
ತ್ರ್ಯಭಯಜಗದ್ಧಿತವೆನಿಸಿದ|ತ್ರಿಭುವನಕೋಶಸ್ವರೂಪಮಂ ವಿರಚಿಸುವೆಂ ||

ಇಂತೀ ಶ್ರೀಮದರ್ಹತ್ಪರಮೇಶ್ವರಪ್ರಣೀತ ಪರಮಾಗಮಸಾರಾಮೃತಾಬ್ಧಿಯೊಳಗೆದ ತ್ರಿಭುವನಕೋಶಮೆಂಬ ಗ್ರಂಥಂ ಸಮಾಪ್ತಂ.

ಶಬ್ದಸಾರ. ಸು. 1400.

ಗದ್ಯರೂಪವಾದ ಕರ್ಣಾಟಕನಿಘಂಟು; 676 ವಾಕ್ಯಗಳಿವೆ.

ಜನ್ನವಗೆಯಂ, ಎಂಟಡಿವರಿಜಂ, ಬೀರಂ, ಬಿಸುಗಣ್ಣಿಗಂ, ಅರೆಹಾನಿಸವಗೆಯಂ—ಈ 5 ವೀರಭದ್ರಂಗೆ ಪೆಸರ್.

ಕಂದೆಂದುಂ ಕಜೆಯೆಂದುಂ ಕಳಂಕಂ. ಜತ್ತುಳಮೆಂದು ಫೇನಂ. ಕಾಱುರಮೆಂದು ಕಾಡ ಹೊನಲ್.

ಕಬ್ಬಿಗರ ಕೈಮಿಡಿ. ಸು. 1400.

ಪಳಗನ್ನಡಪದಗಳ ಅರ್ಥವನ್ನು ಕೊಡುವ ನಿಘಂಟು; ಕಂದವೃತ್ತಗಳಲ್ಲಿ ಬರೆದಿದೆ; ಪದ್ಯ 19.

ಪಂಡಿತವಕ್ಕಿ ಕೀರನೊಳೆ ತಾರಗೆವಟ್ಟಿಯೆನಲ್ಕೆ ವೃತ್ತರಂ।
ಕಂಡವೆನಲ್ಕೆ ತುಂಡಿನೊಳೆ ಬಣ್ಣವರಂ ಮಿಗೆ ವರ್ಣಪೂರದೊಳ್ ॥
ತಂಡವೆನಲ್ಕೆ ಹಿಂಡಿನೊಳೆ ದೂದವಿ ಕುಂಟಣಿಯೊಳ್ ಬಿದಂಡೆ ನೈ।
ದಂಡಿಕನಾಮಧೇಯದೊಳೆ ಕನ್ನವರಂ ಸಲೆ ವರ್ಣಪೂರದೊಳ್ ॥
ಪುಲ್ಗಯೆನಲ್ ಮುದ್ಗಾನ್ನಂ। ಮಲ್ಗದನೆನೆ ಬಿಲ್ವನಲ್ದಂ ಕಟ್ಟನೊಳಂ।
ನೊಲ್ಗದನೆನೆ ಪೊಡವಟ್ಟನೊ। ಳುಲ್ಗದನೆನೆ ಪ್ರೀತಿವಟ್ಟನೊಳ್ ತಳಿರ್ಕುಂ ॥

ಚಿಕ್ಕ ಶ್ರಾವಕಾಚಾರ. ಸು. 1400.

ಜೈನಶ್ರಾವಕರಿಗೆ ಉಪದೇಶರೂಪವಾದ ಗ್ರಂಥ; ಕಂದವೃತ್ತಗಳು 154. ಕೆಲವು ಪದ್ಯಗಳು ಅನ್ಯಗ್ರಂಥಗಳಿಂದ ಅನುವಾದಮಾಡಲ್ಪಟ್ಟಿವೆ.

ಹೆಣ್ಣಿಂಗಂ ಹೊನ್ನಿಂಗಂ ಮಣ್ಣಿಂಗಂ ಕಾಂಕ್ಷೆಯಿಂದಮೆಜಗದೆ ಲೋಕಂ।
ಬಣ್ಣಿಸೆ ಸಂಜಳನಾಗದೆ। ತಿಣ್ಣಂ ನಡೆವವನೆ ತಾಂ ತಪೋಧನಸಕ್ಕುಂ ॥
ಪೆಂಡಿರ್ ತಾಯ್ ಸಮಾನಂ। ಹೆಂಡದಸಮನರ್ಥಮೆಂದು ತೊಱೆದ ಬಳಿಕ್ಕಂ।
ಪೆಂಡಿಗ್ಗರ್ಥಕ್ಕಾಟಿಪ। ಭಂಡಂ ಸ್ವರ್ಗಾಪವರ್ಗಮಂ ಪಡೆದಪನೇ ॥

ಕೊಲ್ಲದ ವುಸಿಯದ ಕಳವಿನಿತಿಲ್ಲದ ಪರವನಿತೆಯರ್ಗೆ ಪದಮಿಂ ಚಿತ್ತಂ।
ಸಲ್ಲದ ಪರಿಗ್ರಹಕ್ಕೆಳ । ಸಿಲ್ಲದ ಸುವ್ರತವಿವಯ್ದುವುಲ್ಲವೆ ರತ್ನಂ ॥
ನಿಟ್ಟಿಲು ಮುಱಿಯದವುನ್ನಂ । ದಿಟ್ಟಿಗಳತ್ತಿತ್ತ ಸೂಸಿಪೋಗದವುನ್ನಂ ।
ಕಟ್ಟಿಗೆನಿಡಿಯದವುನ್ನಂ । ನೆಟ್ಟನೆ ನೀಂ ನಿನ್ನನಱಿದು ಭಾವಿಸು ಜೀವಾ॥
ಅವಂಗಂ ಸಿರಿ ನಿಲ್ಲದು । ಭಾವಿಸುವೊಡೆ ಬಂಧುಜನಕರಾಶ್ರಿತಜನಕಂ ।
ತಾವಾಗಿ ಕರೆದು ದಯೆಯಿಂ ದೀವುದು ನಿಜಕರಕೆ ಕರಕೆ ಬಾರದವುನ್ನಂ॥
ನೆರೆವುದಗಲ್ವುದರ್ಕೆ ಜನನಂ ಮರಣಕ್ಕೆ ವಿನೂತಯವ್ವನಂ ।
ಜನೆಗೆ ಧನಂ ದರಿದ್ರತೆಗೆನಲ್ಕೆ ವಿರಾಗಪಥಕ್ಕೆ ತಕ್ಕುಜೋ ॥
ತ್ಕರಮಸುಖಕ್ಕೆ ಕಾರಣವಿದೆಂದಱಿದುಂ ಭವಪಂಜರಾಂತರ್ಗತರಾಂ ।
ತರಗತರೆಂಕೆ ಶೋಕಿಸುವರೇಕೆ ಪಲುಂಬುವರೇಕೆ ನೋವರೋ ॥

ಧ್ಯಾನಲಕ್ಷಣ. ಸು. 1400.

ಮನವನೆತ್ತಲುಂ ಪರಿಯಲೀಯದೆ ಒಂದೆವಸ್ತುವಂ ಚಿಂತಿಸುವುದು ಧ್ಯಾನವೆಂಬುದು. ಆಧ್ಯಾನಂ ಆರ್ತಧ್ಯಾನಮುಂ ರೌದ್ರಧ್ಯಾನಮುಂ ಧರ್ಮಧ್ಯಾನಮುಂ ಶುಕ್ಲಧ್ಯಾನಮುಮೆಂದಿಂತು ನಾಲ್ಕುತೆಱನಪ್ಪುದು.

ಪರಮಾಗಮಪದಾರ್ಥದೊಳೆತ್ತಾನುಂ ಮಱವಿಯಾದೊಡೆ ನಯವಿಕ್ಷೇಪಪ್ರಮಾಣಂಗಳ್ಗೆ ವಿರೋಧಮಿಲ್ಲದಂತು ವಿಚಾರಿಸಿ ಸ್ಯಾದ್ವಾದಮತಾನುಸಾರಿಯಾಗಿ ಸ್ವಸಮಯಭೂಷಣಮುಂ ಪರಸಮಯದೂಷಣಮುಮೆಂದಿವನಱಿದು ಚಿಂತಿಸುವುದು ಕಾರಣವಿಜಯಮೆಂಬ ಪತ್ತನೆಯ ಧರ್ಮಧ್ಯಾನಮೆಂಬುದು. ಈ ಪತ್ತುತೆಱದ ಧರ್ಮಧ್ಯಾನಂ ಪೀತಪದ್ಮಶುಕ್ಲಲೇಶ್ಯಂಗಳನುಳ್ಳವು ಸ್ವರ್ಗಮೋಕ್ಷಂಗಳ್ಗೆ ಕಾರಣವುಕ್ಕುಂ.

ಮೋಹಾನುಭವಮುಕುರ. ಸು. 1400.

ಛಂದವೃತ್ತಗಳಲ್ಲಿ ಸ್ತ್ರೀವರ್ಣನೆ ; ಪದ್ಯ 114.
ಮಾನಿನಿಯರೊಳಗನಱಿವೊಡೆ। ದಾನವಪಥನಂಗೆ ಬಾರದದಱಿಂ ಪುರುಷರ್।
ಮಾನಿನಿಯರ ವಶಮೆಂತೆನೆ । ತಾನೇ ಘೃತಮಾಗಲಾರ್ಪುದೇ ನವನೀತಂ॥
ಅನಿನಮುಂ ಜಂದಿರನೆಂ । ದಾನೆಯ್ದಲನಕ್ಷಿಗಳ್ಗೆ ಸಮಮೆಂದಳಿಕ ।
ಸ್ಥಾನವನರಿವೆಱಿಗೆನೆಯೆಂ । ದಾನೀಲಾಳಕಮನಳಿಗಳೆನಿ ಬಣ್ಣಿಸುವರ್ ॥

ಸಂದೆಯುಂ ಕಲಿವಾಟಿ ಪ್ರಾಕಲಿ ಪಂದೆಯೆಂಬವೊಲಾಗಿಪರ್ ।
ಸಂದ ಜಾನದ ಯೋಗಿಯುಂ ಚಲಚಿತ್ತವೃತ್ತಿಯನೆಯ್ದಿಪರ್ ॥
ನಿಂದೆಯೊರ್ದವಗೇ ತತ್‌ಕ್ಷಣದಿಂದೆ ನಿಂದೆಯನೊರ್ದಿಪರ್ ।
ಚಂದಿರಾನನೆಯರ್ಕಳಿಂತಿರಡಕ್ಕುಮೋಪಳೆ ಕಾರಣಂ ॥
ಮಿಸುನಿಗೆ ಕಂಪು ರತ್ನತತಿಗಿಂಪು ಸುರೂಪಕೆ ಸೊಂಪು ಕೋಮಲ ।
ಪ್ರಸರಕೆ ನುಣ್ಪು ಸದ್ರಸಕೆ ತಣ್ಪು ಮಹತ್ವಕೆ ಗುಣ್ಪು ನಾಡ್ತಿರಾ ॥
ಜಿಸಲತಿರಮ್ಯಮಾದವೊಲನಂತಗುಣಾನ್ವಿತಮಾದ ಜೀವನ ।
ಕ್ಕಸಿಯಳ ಬೇಟನೊಂದು ದೊರೆಕೊಂಡೊಡೆ ಸಂಪದಮಾಗಿ ತೋಱುಗುಂ॥

ಲೋಕಸ್ವರೂಪ (ಗದ್ಯ). ಸು. 1400.

ಪರಮಜಿನಚರಣಕಮಳ । ಕ್ಕುರುಮುದದಿಂದೆಱಗಿ ಭವ್ಯಜನಹಿತಕರಮಂ।
ವರಮುಕ್ತಿಕಾಂಕ್ಷೆಯಿಂದಂ।ಸುರುಚಿರಲೋಕಸ್ವರೂಪಮಂ ಪ್ರಕಟಿಸುವೆಂ॥

ದುಷ್ಪಮಸುಷಮನೆಂಬ ನಾಲ್ಕನೆಯ ಕಾಲದೊಳ್ ಕರ್ಮಭೂಮಿ ವ್ಯವಸ್ಥೆಯಕ್ಕುಂ. ಅಲ್ಲಿ ಮೊದಲ ತೀರ್ಥಕರ ವೃಷಭನಾಥಂ ನಾಭಿರಾಜಂಗಂ ಮರುದೇವಿಗಂ ತ್ರಿಜ್ಞಾನಧರಂ ಪುಟ್ಟಿದಪ್ಪನೆಂದಿಂ ದ್ರನಾಸನಕಂಪದಿಂದಱಿದು ಶ್ರೀ ಹ್ರೀಧೃತಿಕೀರ್ತಿಬುದ್ಧಿಲಕ್ಷ್ಮಿ ಮೊದಲಾಗೊಡೆಯ ದೇವಿಯರಂ ಸ್ವಾಮಿಯ ತಾಯ್ಗೆ ಬೆಸಕೆಯಿಮೆಂದು ಪೇೞ್ದೊಡವಂ ಬಂದು ಗರ್ಭಶೋಧನೆಯಂ ಮಾಡಿದ ನಂತರಂ ದೇವಿ ಶುಭಷೋಡಶಸ್ವಪ್ನಂಗಳಂ ಕಂಡಿಂ ಒಲಿ'ಕ್ಕಂ ಸ್ವಾಮಿ ಸ್ವರ್ಗದಿಂ ಗರ್ಭಕ್ಕವತರಿಸೆಯದನಿಂದ್ರನಱಿದು ಧನದಂಗೆ ನಿರೂಪಮಂ ಕುಡಲ್ ಹಿಂದೆಯಱುದಿಂಗಳ್ ಮುಂದೆ ನವಮಾಸಪರ್ಯಂತಂ ನಿಚ್ಚನಿಚ್ಚಂ ಮೂಱುವರೆಕೋಟಿದ್ರವ್ಯಮಂ ಸುರಿವುದಱಿಂ ಹಿರಣ್ಯಗರ್ಭನೆಂಬ ಪೆಸರ್ ಭಟ್ಟಾರಕಂಗನ್ವರ್ಥಮಾದುದು. ಶುಭ ದಿನಶುಭಯೋಗ ಶುಭವುಹೂರ್ತದೊಳುದಯಂಗೆಯ್ಯಲೊಡಂ ಸೌಧರ್ಮೇಶಾನ ದೇವರ್ಕಳ್ ತಂತಮ್ಮ ವಿಭೂತಿಯಿಂ ಒಂದು ತಾಯಮುಂದೆ ಮಾಯಾಶಿಶುವ ನಿರಿಸಿ ಶಿಶುನಾಥನಂ ಮಂದರದ ಪಾಂಡುಶಿಲಾತಳದಮೇಲೆ ಪೂರ್ವಾಭಿಮುಖನಾ ಗಿರಿಸಿ ಕ್ಷೀರಾಬ್ಧಿಯ ನೀರಂ ತಂದಭಿಷೇಕಂಮಾಡಿ ಅರ್ಚಿಸಿಕೊಂಡು ಬಂದು ತಾಯ ಮುಂದಣ ಮಾಯಾಶಿಶುವಂ ತೆಗೆದು ಶಿಶುವನಿರಿಸಿ ಪೊಱಮಟ್ಟು ಪೋದರ್

ಶಿವಾಕ್ಷರಮಾಲೆ. (ಕಂದ ೪೨.) ಸು. 1400.

ಸಾವರ್ಣಾಂತವಿರಾಜ|ದ್ವೀವರ್ಣಮನಾಂಶು ಹಸ್ತದೊಳ್ ಬಾಜಿಸಿ ನೀಂ|
ದೇವಗಣಂಗಳ್ ಮನದೊಳ್|ಭಾವಿಸಿ ವಿಸ್ಮಯಮನಾಂತರವನಿವಿನೂತಾ॥
ಭವದೂರನಾಗಿಯುಂ ನೀಂ । ಭವನಾದಪೆ ನಿನ್ನಭಕ್ತಜನತತಿಗೆಲ್ಲಂ ।
ಭವಮಂ ಪಱಿದಿಟ್ಟು ಮಹೋ । ತ್ಸವಪದಮಂ ಕೊಟ್ಟಿ ಚರಣನತಸು
ತ್ರಾಮಾ॥

ಹರ್ಯಕ್ಷರಮಾಲೆ (ಕಂದ ೨೨). ಸು. 1400.

ಪವನಹತಿಯಿಂದೆ ನಾರಿದ|ನಿವಹಂ ಪರಿವಂತೆ ದನುಜಬಲಮದು ರಾಮಾ|
ಹವದೊಳ್ ಪರಿದುದು ಪರನೃಪ । ಯುವತಿಗೆ ಕಣ್ಪಿಟ್ಟವರ್ಗ್ಗೆ ಬಲಮು
ವಗುಂಫಂ ॥
ಹೊಬ್ಬಿನ ದನುಜನ ಬಿಲ್ಲಂ । ತಿಬ್ಬಂ ಮುಱಿದಸುವನಂತಕಂಗಿತ್ತು ಸುರ ।
ಗ್ಗುರ್ಬ್ಬಿನೆಸಗಿದನುದಾರಂ । ನಿಬ್ಬರದಿಂ ರಾಮದೇವಗಿವನೇನುಬಣಂ ? ॥

ಶಿವಪ್ರಾರ್ಥನಾಶತಕ. ಸು. 1400.

ನೋಡಿ ನಲಿನಲಿದು ಭಕ್ತಿಯೊ । ಳಾಡಿ ಮನಂಬೆರಸು ಪಾಡಿ ಮೈಮಱ
ನೊಳ್ ಚಿತ್ತಂ ।
ಕೂಡಿ ಸುಖಜಲಧಿಯೊಳ್ ಮುಳು । ಗಾಡಿ ಕರಂ ಲೀಲೆಯಿಂದಮೆಂದಿರ್ದ
ಪೆನೋ ॥
ಹರನ ದಯಾವ್ಯತಿಷಙ್ಗದ । ಪರಿವೊನಲಿಂ ನಾಂದುನಾಂದು ತನುಮನು
ಪೆಂಬು ।
ವರಿ ದಣಿದು ಭಕ್ತಿಬೀಜಾಂ । ಕುರಮುದು ತಾನೆಂಬು ಬೆಳೆದು ಫಲಮಾ
ದಪುದೋ ॥
ಬಾಲಂ ಜನನಿಯಗಲ್ದೆಗೆ । ನಾಲಗೆಗಿಟ್ಟಲ್ವಲೇಡಿಸಿರುಳುಂ ಪಗಲುಂ ।
ನೀಲಗ್ರೀವನ ಪದಯುಗ । ದೋಲಗಕಾಂ ಬಾಲನಂತೆ ವಜ್ರುಗಲ್ವೇಡಾ॥

ಶಾಂತಿಜಿನಾಷ್ಟಕ. ಸು. 1400.

ಪುಲ್ಲಶರನಿಕ್ಷುಚಾಪವು । ನುಲ್ಲಂಘಿಸಿ ಕಳೆದು ಮೋಹಮಲ್ಲನ ಬೇರಂ ।
ನಿಲ್ಲಿಸಿ ಪಳಿದಿಹಾಡಿದ । ವಲ್ಲಭ ನೀಂ ಕರುಣಿಸೆನಗೆ ಶಾಂತಿಜಿನೇಂದ್ರಾ॥

ಪರಮಾಗಮಸಾರ. ಸು. 1400.

ಗದ್ಯರೂಪವಾಗಿದೆ. ಆರಂಭದಲ್ಲಿ ಮಾತ್ರ ವರ್ಧಮಾನಸ್ತುತಿರೂಪವಾದ ಒಂದು ಕಂದವಿದೆ.

ಶ್ರೀಯೆಂಬನಂತವಿದ್ಯಾ । ಶ್ರೀಯೆಂಬೀಯೆರಡು ಸೌಖ್ಯಹೇತುಗಳದಱಿಂ ।
ಶ್ರೀಯುಮನನಂತವಿದ್ಯಾಶ್ರೀಯುಮನೆಮಗೀಗೆ ವರ್ಧಮಾನಜಿನೇಂದ್ರಂ ॥

ಜಗನ್ಮಾಭ್ಯುದಯವಿಲ್ಲದ ಭವ್ಯಜನಂಗಳ್ಗೆ ಸಾಧುಸಂಬೋಧನಾರ್ಥಂ ಪರಮಾಗಮಸಾರಮನಶಿಸಂಕ್ಷೇಪದಿಂ ಪೇೞ್ದಪರ್—ಇತ್ಯಾದಿ.

ವಿರೂಪಾಕ್ಷಶತಕ. ಸು. 1410.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 136 ಪದ್ಯಗಳು ವ್ಯಾಪ್ತಿಯವಾಗಿ "ವಿರೂಪಾಕ್ಷ" ಎಂದು ಮುಗಿಯುತ್ತವೆ. ಗ್ರಂಥವು ವಿಜಯನಗರದ ರಾಜನಾದ 1ನೆಯ ದೇವರಾಯನ (1406—1416) ಕಾಲದಲ್ಲಿ ಹುಟ್ಟಿದೆ. ಇವನ ಪರಂಪರೆ ಹೀಗೆ ಹೇಳಿದೆ:—ಸಂಗಮ, ಮಗ ಹರಿಹರ, ತಮ್ಮ ಬುಕ್ಕ, ಮಗ ಹರಿಹರ, ತಮ್ಮ ವಿಕ್ರಮರಾಯ, ಮಗ ಬುಕ್ಕ, ಮಗ ದೇವರಾಯ. "ವಿದ್ಯಾನಗರವನಾಳುವ ದೇವರಾಯಂಗಾಯುವಿತ್ತು ಸಲಹು" ಎಂದು ಕವಿ ತಲವು ಕಡೆ ಹೇಳುತ್ತಾನೆ. ಅಚ್ಚಾಗಿರುವ ಪರಂಪರೆಗೂ ಇಲ್ಲಿ ಕೊಟ್ಟಿರುವ ಪರಂಪರೆಗೂ ಸ್ವಲ್ಪ ವ್ಯತ್ಯಾಸವಿದೆ.

ಬಿಡುಜಡೆಯು ನಿಡುದಲೆಯು ಗಂಗೆಯು।ಕಿಡಿ ಸುರಿವ ನಡುನೊಸಲ್ದೃಷ್ಟಿಯು।
ಜಡಿವ ಕುಂಡಲಗಿವಿಯು ನಾಸಾಪುಟದ ಜೆಲುವಿಕೆಯು ॥
ಸಿಡಿವ ದಂಷ್ಟ್ರವಿಯು ಕನಮೊಗ । ಕೆಡೆಯು ಕಾಂತಿಯು ಮುಖದ ಮೂಗ
ದೊಡೆಯು ನೀನೆನ್ನೊಡನೆ ನುಡಿಯೈ ಶ್ರೀವಿರೂಪಾಕ್ಷ ॥
ಉತ್ತರುಣ್ಮಾರ ಕಂಡು ದುಃಖಿಸಿ । ಕೆಡುವೆ ಕೆಡುವರ ಕಂಡು ಸಂತಸ।
ಬಡುವೆನಕಟೆನ್ನಂತೆ ನೋಡೆನಿದೇನು ದುಷ್ಕೃತವೋ ॥
ಮೃಡನೆ ಕೇಳೆನ್ನೊಡಲ ಕ್ಷುದ್ರವ । ಬಿಡಿಸಿ ಪರರಿಗೆ ಹಂತಿಸುವ ನ ।
ಮ್ಮಡಿಗಳನು ಬಿಗದಂತೆ ವಾಸನ ಮೃಡಾಣಿಯೊಡನಾಡಿ ॥

ಶಿವಾಕ್ಷರಮಾಲೆ. (ಕಂದ ೪೭.) ಸು. 1400.

ಸಾವರ್ಣಾಂತವಿರಾಜ|ದ್ವೀವರ್ಣಮನಾಂಶು ಹಸ್ತದೊಳ್ ಬಾಜಿಸೆ ನೀಂ|
ದೇವಗಣಂಗಳ್ ಮನದೊಳ್|ಭಾವಿಸಿ ವಿಸ್ಮಯಮನಾಂತರವನಿವಿನೂತಾ॥
ಭವದೂರನಾಗಿಯುಂ ನೀಂ | ಭವನಾದಪೆ ನಿನ್ನಭಕ್ತಜನತತಿಗೆಲ್ಲಂ |
ಭವಮಂ ಪಱಿದಿಟ್ಟು ಮಹೋ | ತ್ಸವಪದಮಂ ಕೊಟ್ಟಿ ಜರಣನತಸು
ತ್ರಾಮಾ॥

ಹರ್ಯಕ್ಷರಮಾಲೆ (ಕಂದ ೪೨). ಸು. 1400.

ಪವನಹತಿಯಿಂದೆ ನಾಂದ|ನಿವಹಂ ಪರಿವಂತೆ ದನುಜಬಲಮದು ರಾಮಾ|
ಹವದೊಳ್ ಪರಿಮದು ಪರನೃಪ | ಯುವತಿಗೆ ಕಣ್ಪಿಟ್ಟವರ್ಗ್ಗೆ ಬಲಮು
ವಗುಂಫಂ ॥
ಹೊಬ್ಬಿನ ದನುಜನ ಬಿಲ್ಲಂ | ತಿಬ್ಬಂ ಮುಱಿದಸುವನಂತಕಂಗಿತ್ತು ಸುರ |
ಗ್ಗುರ್ಬ್ಬಿನೆಸಗಿದನುದಾರಂ | ನಿಬ್ಬರದಿಂ ರಾಮದೇವಗಿವನೇಸುಬಡಂ ? ॥

ಶಿವಪಾರ್ಶ್ವನಾಥಶತಕ. ಸು. 1400.

ನೋಡಿ ನಲಿನಲಿದು ಭಕ್ತಿಯೊ | ಳಾಡಿ ಮನಂಬೆರಸು ವಾಡಿ ಮೃಡ
ನೊಳ್ ಚಿತ್ತಂ |
ಕೂಡಿ ಸುಖಜಲಧಿಯೊಳ್ ಮುಂ | ಗಾಡಿ ಕರಂ ಲೀಲೆಯಿಂದಮೆಂದಿರ್ದ
ಪೆನೋ ॥
ಹರನ ದಯಾಮೃತವರ್ಷದ | ಸರಿವೊನಲಿಂ ನಾಂದುನಾಂದು ತನುಮನು
ಬೆಂಬು |
ವರಿದಣಿದು ಭಕ್ತಿಬೀಜಾಂ | ಕುರಮುದು ತಾನೆಂಪು ಬೆಳೆದು ಫಲಮಾ
ದಪುದೋ ॥
ಬಾಲಂ ಜನನಿಯುಗಲ್ಕ್ಕೆಗೆ | ನಾಲಗೆಗಿಚ್ಚಾಟ್ವಲೆಯದಿನಿರುಳುಂ ಪಗಲುಂ |
ನೀಲಗ್ರೀವನ ಪದಯುಗ | ದೋಲಗಕಾಂ ಬಾಲನಂತೆ ವಂಜುಗಲ್ವೇಡಾ॥

ಶಾಂತಿಜಿನಾಷ್ಟಕ. ಸು. 1400.

ಪುಲ್ಲಶರನಿಕ್ಷುಚಾಪವು | ನುಲ್ಲಂಘಿಸಿ ಕಳೆದು ಮೋಹವುಲ್ಲನ ಬೇರಂ |
ನಿಲ್ಲದೆ ಪಱಿದಿಡಾಡಿದ | ವಲ್ಲಭ ನೀಂ ಕರುಣಿಸೆನಗೆ ಶಾಂತಿಜಿನೇಂದ್ರಾ॥

ಪರಮಾಗಮಸಾರ. ಸು. 1400.

ಗದ್ಯರೂಪವಾಗಿದೆ. ಆರಂಭದಲ್ಲಿ ಮಾತ್ರ ವರ್ಧಮಾನಸ್ತುತಿರೂಪವಾದ ಒಂದು ಕಂದವಿದೆ.

ಶ್ರೀಯೆಂಬನಂತವಿದ್ಯಾ । ಶ್ರೀಯೆಂಬೀಯೆರಡು ಸೌಖ್ಯಹೇತುಗಳದಱಿಂ ।
ಶ್ರೀಯುವನನಂತವಿದ್ಯಾಶ್ರೀಯುವನೆವುಗೀಗೆ ವರ್ಧಮಾನಜಿನೇಂದ್ರಂ ॥

ಆಗಮಾಭ್ಯಾಸವಿಲ್ಲದ ಭವ್ಯಜನಂಗಳ್ಗೆ ಸಾಧುಸಂಬೋಧನಾರ್ಥಂ ಪರಮಾಗಮಸಾರವನ್ನಶಿಸಂಕ್ಷೇಪದಿಂ ಪೇೞ್ದಪರ್—ಇತ್ಯಾದಿ.

ವಿರೂಪಾಕ್ಷಶತಕ. ಸು. 1410.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 136 ಪದ್ಯಗಳು ವಾಯಿಕವಾಗಿ "ವಿರೂಪಾಕ್ಷ" ಎಂದು ಮುಗಿಯುತ್ತವೆ. ಗ್ರಂಥವು ವಿಜಯನಗರದ ರಾಜನಾದ 1ನೆಯ ದೇವರಾಯನ (1406—1416) ಕಾಲದಲ್ಲಿ ಹುಟ್ಟಿದೆ. ಇವನ ಪರಂಪರೆ ಹೀಗೆ ಹೇಳಿದೆ:—ಸಂಗಮ, ಮಗ ಹರಿಹರ, ತಮ್ಮ ಬುಕ್ಕ, ಮಗ ಹರಿಹರ, ತಮ್ಮ ವಿಕ್ರಮರಾಯ, ಮಗ ಬುಕ್ಕ, ಮಗ ದೇವರಾಯ. "ವಿದ್ಯಾನಗರವನಾಳುವ ದೇವರಾಯಂಗಾಯುವಿತ್ತು ಸಲಹು" ಎಂದು ಕವಿ ತಲವನ್ನು ಕಡೆ ಹೇಳುತ್ತಾನೆ. ಆಚ್ಚಾಗಿರುವ ಪರಂಪರೆಗೂ ಇಲ್ಲಿ ಕೊಟ್ಟಿರುವ ಪರಂಪರೆಗೂ ಸ್ವಲ್ಪ ವ್ಯತ್ಯಾಸವಿದೆ.

ಬಿಡುಜಡೆಯು ನಿಡುದಲೆಯು ಗಂಗೆಯುಕಿಡಿ ಸುರಿವ ನಡುನೊಸಲೆಡಹ್ಮಿಯು।
ಜಡಿವ ಕುಂಡಲಗಿವಿಯ ನಾಸಾಪುಟದ ಜೆಲುವಿಕೆಯು ॥
ಸಿಡಿವ ದಂಷ್ಟ್ರವಿಯು ಕನಪುಗ । ಳೆಸೆಯ ಕಾಂತಿಯು ಮುಸಿದ ಮೂಗ
ದೊಡೆಯ ನೀನೆನ್ನೊಡನೆ ನುಡಿಯೈ ಶ್ರೀವಿರೂಪಾಕ್ಷ ॥
ಉಸುರುಗುಂದಿರ ಕಂಡು ದುಃಖಿಸಿ । ಕಡುವೆ ಕೆಡುವರ ಕಂಡು ಸಂತಸ।
ಬಡುವನಿಕರಿನ್ನಂತೆ ನೋಡೆನಿದೇನು ದುಷ್ಕೃತವೋ ॥
ಮೃಡನೆ ಕೇಳೆನ್ನೊಡಲ ಕ್ಷುದ್ರವ । ಬಿಡಿಸಿ ಪರರಿಗೆ ಜಂತಿಸುವ ನ ।
ಮ್ಮಡಿಗಳನು ಬಿಡದಂತೆ ವಾಸನಾಮೃಡಾಣಿಯೊಡನಾಡಿ ॥

ರಾಮನಾಥಶತಕ. ಸು. 1500.

ವೃತ್ತ 101 ; ಪ್ರತಿವೃತ್ತವೂ ವ್ಯಾಯಿಕವಾಗಿ " ಗುರುಶಾಂತರಾಮನೇ " ಎಂದು ಮುಗಿಯುತ್ತದೆ. ಆರಂಭದಲ್ಲಿ ಬಸವ, ಜೆನ್ನಬಸವ, ಅಕ್ಕ, ಅಲ್ಲಮ ಇವರುಗಳ ಸ್ತುತಿ ಇದೆ. ಕವಿಯ ಗುರು ವೀರಭದ್ರ.

ಮದನನ ಬಲ್ಪಿನುಬ್ಬಟೆಯನೇನನುಸಿರ್ದಪೆನೆನ್ನ ಚಿತ್ತದೊಳ್ ।
ಪುದಿದು ವಿವೇಕಮಂ ಬಡಿದು ಸತ್ಯಮನಿಕ್ಕಿ ಸುಶೌಜದೇಪ್ಪಿಯಂ ॥
ಸದೆಬಡಿದೊತ್ತಿ ಮೆಟ್ಟಿ ಕೊಱಜಾಡುತುಮಿಂತಿರೆ ನಿನ್ನೊಳರ್ಪವಂ ।
ಗಿದು ವಿಧಿಯೇ ಮಹಾತ್ಮ ಕರುಣಾಕರ ಸದ್ಗುರು ಶಾಂತರಾಮನೇ ॥
ಕಳವಳಿಸಿತ್ತು ಕಂಗೆಡಿಸಿದತ್ತು ಕರಂ ಕೊಱಜಾಡಿ ಕಾಡಿದ ।
ತ್ತಲಿಲಿಸಿದತ್ತು ಮುಂದುವರಿಸಿತ್ತು ಕರಂ ಮಱಹೆಂಬ ಕೂಪದ ॥
ಲ್ಲೀ'ಯಿಸಿದತ್ತು ಮನ್ಮನಮನೀಯಳಿಪಿಂತಿದನೊತ್ತಿ ಭಕ್ತಸಂ ।
ಕುಳವನಚೈತ್ರ ನೋಡಿ ನಿಜೆ ರಕ್ಷಿಸು ಸದ್ಗುರು ಶಾಂತರಾಮನೇ ॥
ಸೇತುವನೆಯ್ದಿ ಪರ್ವತಮನೇಱಿ ಮಹಾವರವಾರಣಾಸಿಗಂ ।
ತಾತುರದಿಂದೆ ಸಾರ್ದು ಪಮವಂತಕೆ ಯೋಗಿ ಸಮಸ್ತದೇಶದೊಳ್ ॥
ಧಾತುಗಿಡಲ್ಕೆ ಮುಕ್ತಿದೊರೆಕೊಳ್ವುದೆ ಚಿದ್ಘನಲಿಂಗಪೂಜೆಯೊಳ್ ।
ಪ್ರೀತಿಯೊಳರ್ಪವಗ್ಗೆ ಘಟಿಸರ್ಪವೊಲೇಂ ಗುರುಶಾಂತರಾಮನೇ ॥

ಶೀಧರಾಕರರ ಉದಯರಾಗ. ಸು. 1500.

ಪಕ್ಕಗಳ ಕೆದಱಿ ಪಂಜರದೊಳಿಹ ಪವಳವಾ ।
ಯ್ವಕ್ಕಿಗಳು ಪಂಜಪರಮೇಷ್ಠಿಗಳ ನಾಮಗಳ ।
ನಕ್ಕಱಿಂ ವಿವರಿಸುತ್ತಿವೆ ಕೇಳ್ವವರ ಕಿವಿಗೆ ಚಕ್ಕುಲಿಸುವಂತೆ ಮುದದಿ ॥
ದಿಕ್ಕನ್ನೆಯರ ಸುಪ್ರಭಾತ ಸ್ವಪ್ನಾವಳಿಯ ।
ಸಕ್ಕರೆಯ ಸಿಹಿಯ ಮಿಕ್ಕೆಸೆವ ಸಂಗೀತರಸ ।
ವಕ್ಕಿ ಶೋಭಿಸುತಿಹುದು ಧರಣಿರಾಜನ ತೋಳ ತೆಕ್ಕೆಯಿಂದುಪ್ಪವಡಿಸಾ ॥

ವೈದ್ಯಶಾಸ್ತ್ರ. ಸು. 1500.

ಸಂಸ್ಕೃತತೆಲ್ಲಿಗಳಿಗೆ ಕನ್ನಡ ಟೀಕೆ. ಅಲ್ಲಲ್ಲಿ ಪದ್ಯಗಳೂ ಇವೆ.

ವೊಸ ಎಕ್ಕಯ ಪಣ್ಣಿಲೆಯಾ । ರಸಮುಂ ತೈಲಮುನಟ್ಟು ಕಿವಿಗಿಟ್ಟಿ
ಯಲ್ ಪಾ ।
ಟಿಸುಗುಂ ಪಲತೆಱಮಿಂಪಿಗಿಡಿಸುವ ಮಹಾಕರ್ಣರೋಗಶತಸಂತತಿಯಂ ॥
ಕಡುಕೆಚ್ಚ್ನಾಗಿ ಪೋಪೊಡೆ । ಬಿಡದಾವುಂ ಕಿಱಿದುಗೆಱಿದು ನಡೆವೊಡೆ
ನೊರೆಯು ।
ವ್ಪೊಡೆ ಸೊಂದು ಗುದಂ ಕೀಕುರಿ । ವ್ಪೊಡೆ ತಿಳಿ ವಾತಾತಿಸಾರಮಾಗೆ
ವಿಕಾರಂ ॥
ವರತಿರವಾರಾಂಜನಮಂ । ನಿರತಂ ಘೃತಮಿಂದೆ ಕೂಡಿಸೆ ಸತಿಯರ ಗರ್ಭಂ।
ಉರಿಗೊಡ್ಡಿದರಗಿನಂತಿರೆ । ಕರಗುಗುಮಾಸತಿಯ ಗರ್ಭನಾಗದವೋಘಂ॥

ನೀತಿರಸಾಯನಸತಕ. ಸು. 1500.

ನುಡಿಯುಲೊಡಮಿದಿರಹೃದಯಂ । ನುಡಿನುಡಿಗುಡುಕುವೊಡೆ ಬೇಱೆ ಕೊ
ಲವೇಡವರಂ ।
ನುಡಿನಿಂದೆಯಕ್ಕುಮಲ್ಲದೆ । ನುಡಿವೊಡೆಯಿಪಪರಕೆ ಹಿತವ ನುಡಿವುದು
ಪುರುಷಂ ॥
ತಲೆವಱಿದು ಮುನಿಯ ಚಿತ್ತಂ । ತಲೆವಱಿದುಂ ಕ್ರೋಧಮಾನಮಾಯಾ
ಲೋಭಂ ।
ತಲೆವಱಿದುಪೋಗದಿರ್ದೊಡೆ । ತಲೆವಱಿದೊಂದಟ್ಟಿಯಾಡಿತೆಂಬವೊಲಕ್ಕುಂ॥
ನೀತಿರಸಾಯನಮೆಂತುಂ।ಪ್ರೀತಿಯ ಪುಟ್ಟಿಪ್ಪುದು ಗುಣಕ್ಕೆ ಗಣಿಯಲ್ಲದವಂ।
ನೀತಿಯನೊಲ್ಲನದೆಂತೆನೆ।ಭ್ರಾಂತೇಂ ಜ್ವರಿತಂಗೆ ಪಾಲು ಪಥ್ಯಮೆ ಪೇೞಿಂ॥
ನಂದದ ಸೊಡರಿದು ಸಹಜಾ । ನಂದದೆ ಬೆಳಗುವ್ದು ಸಕಳಕೇವಳ
ಬೋಧಾ ।
ನಂಜದೆ ಬೆಳಗುತ್ತಿರ್ಪ್ದಿ । ದೆಂದುಂ ಪರಮಾತ್ಮಜ್ಯೋತಿ ಲೋಕಕ್ಕೆಲ್ಲಂ ॥

ದೇವರಾಜವಲ್ಲಭಾಪ್ಟಕ. ಸು. 1500.

ಕಡಲ ತಡಿಯ ಕಾಣದೊಂದು ಖಗವು ಸುಖವಿಹಾರದ್ದಿದಂತೆ
ಮುಡಿದು ಮುಡಿದು ಪಂಜಕಡಲ ನಡುವೆ ನಾನು ಮುಳುಗಿದೆಂ ॥

ಬಿಡದೆಯೆನ್ನ ಪುಣ್ಯಪಾಪವೊಡಲಸುತ್ತಿ ಒದ್ದಿರ್ದೆ. |
ಕಡಲ ತಡಿಯನೆಯ್ದಿಸೆನ್ನ ದೇವರಾಜವಲ್ಲಭಾ ॥

ಚಂದ್ರನಾಥಸ್ತುತಿ (ಪದ್ಯ 8). ಸು. 1500.

ಸಾವ ಪುಟ್ಟುವ ಚಿಂತೆಯಿಲ್ಲದೆ ಜೀವನಂ ನಿನಗೇಚ್ಛಾ |
ಜೀವ ಗೇಹದೊಳಿರ್ದು ಸೌಖ್ಯವ ಭಾವಿಸುತ್ತಿಹ ಮಾಟ್ಕೆಯಿಂ ॥
ಜಾವಜಾವಕೆ ನಿನ್ನ ಯಾಯುವ ನೀಂಟುವಂ ಜವನೆಂಬವಂ |
ಭಾವಿಸೈ ಜಡನಿದ್ರೆಯುಂ ಬಿಡು ಭಾವಜಾರಿಜಿನಾಂಘ್ರಿಯಂ ॥

ಅನಂತಜಿನೇಶ್ವರಾಷ್ಟಕ. ಸು. 1500.

ಪಲ್ಲಬಾಣನ ಬಾಣಪುಷ್ಪಗಳೆಲ್ಲ ತುಂಬಿಗಳೆಂಬಲೆಂ |
ದೊಲ್ಲದೇಳಿಸಿ ಒಲ್ಲರೆಲ್ಲರು ನಿಚ್ಚ ಪೂಜಿಸುವಂತೆ ನಾಂ ॥
ನಿಲ್ಲದೀ ಸ್ತುತಿಯೆಂಬ ಪೌರಭ ಪೋಗದೀ ಪರಮಲ್ಲಿಕಾ |
ಮಾಲೆಯುಂದದಿ ಪೂಜಿಪೆಂ ಶರಣಾಗನಂತಜಿನೇಶ್ವರಾ ॥

ಸಿದ್ಧಸ್ತೋತ್ರಟೀಕೆ. ಸು. 1501.

ಆಶಾಧರರ್ ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ಸ್ತುತಿಯಿಸುತ್ತು॥ ಮೊದಲೊಳ್ ಸಂಯಕ್ತ್ವಗುಣಮುಂ ಸ್ತುತಿಯಿಸಿದಪರ್.

ಪಂಚಕಲ್ಯಾಣಸ್ತೋತ್ರಟೀಕೆ. ಸು. 1500.

ಅರ್ಹತ್ಪರಮೇಶ್ವರನ ಪಂಚಕಲ್ಯಾಣಂಗಳಂ ಸ್ತುತಿಯಿಸಲಿಚ್ಛೆಯನುಳ್ಳ ಆಶಾಧರಸೂರಿಗಳ್ ಮೊದಲೊಳ್ ಗರ್ಭಾವತರಣಕಲ್ಯಾಣವಂ ಸ್ತುತಿಯಿಸಿದ ಪರ್. ಅಥವಾ ಪ್ರತಿಮೆಯೊಳ್ ಪಂಚಕಲ್ಯಾಣಂಗಳನಾರೋಪಿಸಲಿಚ್ಛೆಯ್ಸುವ ಆಶಾಧರರ್ ಮೊದಲೊಳ್ ಗರ್ಭಾವತರಣಕಲ್ಯಾಣವನಾರೋಪಿಸಿದಪರ್.

ಅನ್ವಯಾರ್ಥಂ ಪೇಳಿಲ್ಪಡುಗುಂ; ಪದಚ್ಛೇದಮುಮುಂ ಪದಾರ್ಥಮು ಮನನ್ವಯಾರ್ಥದ ಸಾಮರ್ಥ್ಯದಿಂದಮೆ ಆಜಿವುದು.

ದ್ವಾದಶಾನುಪ್ರೇಕ್ಷೆ (ಗದ್ಯ) ಸು. 1500.

ನಗರಾದಿಸ್ಥಾನಂಗಳುಂ ಪದವಿಗಳುಂ ಸಿಂಹಾಸನಾದಿಗಳುಂ ಪುತ್ರಕಳತ್ರ ಮಿತ್ರಾದಿಗಳೊಳಪ್ಪ ಪ್ರೀತಿ—ಇವು ಮೊದಲಾದುವ ಜೀವಕ್ಕೆ ನಿತ್ಯವಲ್ಲೆಂದು ಚಿಂತಿಸುವುದು ಅಧ್ರುವಾನುಪ್ರೇಕ್ಷೆ—ಇತ್ಯಾದಿ.

ವೀರಜಿನೇಶ್ವರಸ್ತುತಿ (ಪದ್ಯ 9). ಸು. 1500.

ನಿನ್ನ ನಾಮಮರೀಚಿಮಂಜರಿ ಕರ್ಣಭೂಷಣಮಾಗಿರೆ।
ನನ್ನ ಚಿದ್ಗ್ರಹದಿಂದ ಕಶ್ಮಲೆ ಹೋಗಲಾಕ್ಷಣವಿಮಾಕ್ಷಣಂ ॥

ನಿನ್ನ ಸದ್ಗುಣರತ್ನರಾಶಿಯ ಕಂಡು ಸೋಲ್ತಿದೆ ಮುಕ್ತಿಯಂ।
ಮನ್ನಿಸಯ್ಯ ಮಹಾನುಭಾವನೆ ಸಂದ ವೀರಜಿನೇಶ್ವರಾ ॥

ಜ್ಞಾನಸಾರ. ಸು 1500.

ಪಲಪಲವನೋದಿ ಮನವಂ । ಪೊಲೆಗೆಡಿಸದೆ ಕಿಱಿದಱಿದೆ ನಿಜತತ್ವ
ವಮಮಂ।
ನೆಲೆಗೊಳಿಸದೊಡದೆ ಸಾಲದೆ । ಸಲೆ ಬೆಳಗುವ ಗಗನದಗಲಮೇ ರವಿ
ಬಿಂಬಂ ॥

ಒರ್ವನೆ ನಿಜಶುದ್ಧಾತ್ಮನ!ನಿರ್ವಾಣಸುಖಕ್ಕೆ ಹೇತುವೆಂದಱಿಯುದವಂ।
ನಿರ್ಧಂದದೆ ಮಾಟ್ಪಿ ತಪಂಕವಿಗಳೆ ಹೆಬ್ಬಿದಿರನಡಸಿ ತಿಱಬವೊಲಕ್ಕುಂ ॥

ಜೀವಕ್ಕೆ ಬಂಧಮೋಕ್ಷಂ । ಭಾವಂಗಳಿನಕ್ಕುಮಲ್ಲಿ ಸಹಜಮೆ ಸಾರರಾ ।
ಭಾವಿಸು ನಿನ್ನೊಳ್ ನೀಂ ಯ । ದ್ಭಾವಂ ತದ್ಭವತಿಯೆಂಬ ನುಡಿ
ತಪ್ಪುವುದೇ ॥

ಪರಮಜ್ಞಾನಾನಂದ । ಸ್ವರೂಪನಾನೆಂದು ತನ್ನನಱಿವಬಱಿಕ್ಕುಂ ।
ಪರವಸ್ತುವಿಗೆಱಿಗುವುದೇ । ಪಿರಿದುಂ ನಿಧಿಗಂಡು ಜತಗಗರ್ಚುವ
ನೊಳನೇ ॥

ವೃಷಭಜಿನಸ್ತುತಿ (ಪದ್ಯ 8). ಸು. 1500.

ಮರದ ಮಡಕೆಯೊಳು ಪಾಕಮು । ನುರವಣೆಯಿಂ ಮಾಟಿಪ್ಪಿಡಿಂತು
ಸಂಸಾರಸುಖ।
ಕ್ಕಿರದಳಿಸಿ ಕೆಟ್ಟಿನಿನ್ನೆಗ । ಪರಮೇಶ್ವರ ರಕ್ಷಿಸೆನ್ನ ನೀಂ ಪರಮಜಿನಾ ॥

ಪಾರ್ಶ್ವನಾಥಾಷ್ಟಕ. ಸು. 1500.

ಮುನ್ನ ಮಾಡಿದ ದುಶ್ಚರಿತ್ರದೆ ಹಿಂದೆ ಕೆಟ್ಟುದೆ ಸಾಲದೇ ।
ನಿನ್ನ ಭಕ್ತಿಯು ಪರ ಷ ಮುಟ್ಟಿದ ಲೋಚದಂದದೆ ಶುದ್ಧನಾಂ ॥

ನಿನ್ನ ಪಾದಸರೋಜಯುಗ್ಮದ ಸೇವೆಯುಂ ಬಡದಿರ್ಪೆನಾಂ ।
ನಿನ್ನ ರೂಪನೆ ಮಾಡು ಬೇಗದಿ ಪಾರ್ಶ್ವನಾಥ ಜಿನೇಶ್ವರಾ ॥

ನಿರ್ಮಲರೂಪಸ್ತುತಿ (ಪದ್ಯ 25) ಸು. 1500.

ವಾತದ ಪಿತ್ತದ ಶ್ಲೇಷ್ಮದ।ಘಾತಿಯೊಳತಿಭೀತಿಯಾದ ದೇಹಕೆ ನೀನುಂ ।
ಓತು ನಿಜಗುಣಮನೊಲ್ಲದೆ।ಕಾತರಮತಿಯಾಗಬೇಡ ನಿರ್ಮಲರೂಪಾ ॥

ಸುಂಬುಳಿನ ನಳಿಗೆ ನಾಸಿಕ।ಬಿಂಬಾಧರ ತೊಗಲ ಸುರುಳಿಯಲರ್ಗಣ್ಣು
ದಕಂ ।
ಬಂಬಲ್ಗುರಳ್ಗಳು ಕಿಸುನಱಿ । ಪಂಬಲನುಲಿ' ಪೆಣ್ಣನೆಂದ ನಿರ್ಮಲ
ರೂಪಾ ॥

ನೋಂಪಿಗಳು. ಸು. 1500.

ಜೈನರ ವ್ರತಗಳನ್ನು ನಿರೂಪಿಸುವ ಗ್ರಂಥ; ಚಂಪೂರೂಪವಾಗಿದೆ.
ಕುವಲಯತತಿಹಿತಕರನಂ।ಸವಿವಿಲ್ಲನಕಣೆಯುಮುಱಿದ ವೀರಾಗ್ರಣಿಯಂ।
ಭವಭಯವರನಂ ಸನ್ಮತಿ । ದಿವಿಜಾರ್ಚಿತಪಾದಪದ್ಮನಂ ವಂದಿಸುವೆಂ ॥

ಇಲಿಯಂ ಕಪ್ಪೆಯನೊಲವಿಂ । ದುಲಿದಟ್ಟಿ ತಗುಳ್ದು ತಿಂಬ ಪುತ್ತಿನ
ಪುಲ್ಲಿವಂ
ಸಲೆ ನಾಗರೆಂದು ಪೂಜಿಪ । ರೊಲವಿಂ ಜನಮುರುಳೊ ಜಾತ್ರೆಮುರುಳೋ
ಎನೆ ತಾಂ ॥

ನಿರ್ದುಃಖಸಪ್ತಮೀಕಥೆ (ಗದ್ಯ). ಸು. 1500.

ಆರಂಭದಲ್ಲಿ ಈ ಕಂದವಿದೆ:—
ಜಿನಗೆಱಗಿ ಪೇಳ್ವೆನೊಲವಿಂ । ದನುಪಮನಿರ್ದುಃಖಸಪ್ತಮಿಯ ಸತ್ಕ
ಥೆಯಂ ।

ಜನತತಿಹಿತವುಂ ನುತವುಂ । ಜನನಚರಾಮರಣಹರಣಕಾರಣಮುದಯಂ॥

ಧನ್ವಂತರೀಯ ನಿಘಂಟು. ಸು. 1500.

ಸಂಸ್ಕೃತ ಮೂಲಗ್ರಂಥದಲ್ಲಿ ಉಕ್ತವಾದ ಮೂಲಿಕಾದಿಗಳಿಗೆ ಕನ್ನಡದಲ್ಲಿ ಪ್ರತಿಪದಗಳು ಹೇಳಿವೆ.

ಚಂದನೆಯ ಕಥೆ. ಸು. 1500.

ತ್ರಿಪದಿಯಲ್ಲಿ ಬರೆದಿದೆ; ಸಂಧಿ 4, ಪದ್ಯ 460. ಈ ಕಥೆ ಗುಣಭದ್ರಕೃತವಾದ ಉತ್ತರಪುರಾಣದಲ್ಲಿ ಉಕ್ತವಾಗಿದೆ. ಆದಿಯಲ್ಲಿ ಆದಿನಾಥ, ಸಿದ್ಧಾದಿಗಳು, ಸರಸ್ವತಿ ಇವರುಗಳ ಸ್ತುತಿ ಇದೆ.

ಕೆಡೆದಿರ್ದ ಸರ್ಪನ ಪಿಡಲ ಮೆಟ್ಟಲಿ ಹಸಿದಡರುವ ಹುಲಿಯ ಹಿಡಿಯಲ್
ಪರರನು । ಕೆಡಲಾಡಬಹುದೆ ಕೆಳೆಯುಳೇ ॥

ಅಂಜೆನು ಸಿಂಹಕ್ಕೆ ಅಂಜೆ ವಾತಂಗಕ್ಕೆ । ಅಂಜೆನಂಜಿಸುವ ಸಿಡಿಲಿಗೆ ।
ಕೆಳೆಯುಳೆ । ಅಂಜುವೆ ಪರರ ನಿಂದೆಗೆ ॥

ಪರಧನ ಪರಸತಿ ಪರನಿಂದೆಗೆಣಿಸದಾ । ನರಮಣಿಯಿಂದ ಮತೊಬ್ಬ ।
ಪರಲೋಕಕೆ । ಗುರುವಿಲ್ಲವಿದು ಸಂಶಯವಲ್ಲ ॥

ಶೃಂಗಾರಶಿವಸ್ತುತಿ. ಸು. 1500.

ನಾಲ್ದೆಸೆಗಳಂ ಬೆಳಪ ಮೆಲ್ಲೊಡಿಗೆಯುಂ ತೊಡುತ
ರಲ್ದು ಮುಬಿನಲ್ಲರೆಯರಲ್ದ ಪೊಸ ಪೂವಂ ।
ಜೋಲ್ದಗುವವೋಲ್ ಮುಡಿದು ಪಾಲ್ದೆರೆಗಳಂತೆಸೆವ
ಪೋಲ್ದಗುಲವುಂ ಧರಿಸಿ ಕಾಲ್ದೆಗೆದು ಮುಂಬಾ ॥

ಗಿಲ್ದರೆಯ ಚಾವಡಿಗೆಯೋಲ್ದು ನಿಮ್ಮತಿ ಸೊಬಗ
ನೊಲ್ದು ಬಿಡದೀಕ್ಷಿಸುತೆ ಸೋಲ್ದವಳನೇ ಕಂ ।
ಡಾಲ್ದು ಮದನಂ ಕೆದರುಗಿಲ್ದಭಿಯನುಬಿಸೆ ಬ
ಲಿಲ್ದವಳ್ಗೆ ಬಾಯ್ಗೊಡು ಕುಕಿಲ್ದು ನೆರೆ ಶಂಭೂ ॥

ತುಂಬುರುಸುನಾರದಚುಂಬಿತಸುಗಾನರಸ
ದಿಂ ಬಿಡದೆ ಬಣ್ಣಿಸುವ ತುಂಬಿದ ತಪಃ ಪಾ ।
ಡಂಬರ ಮಹಾಮುನಿಕದಂಬನೆಂ ಸಹಸ್ರದಳ
ದಂಬುಜದ ಮಧ್ಯದೊಳಗಿಂಬಿಡುವ ಭಾಸ್ವ ॥

ದ್ಬಿಂಜಸುಫಲೋಷ್ಮವೆಸೆವಂಬಿಕೆ ನೆಗಲ್ತಿ ಮುದ
ದಿಂ ಬಿಗಿದು ತಲ್ತಿಕ್ಕೃಪ ಕಂಬೆಳಗ ಧೀವಾ? ।
ಸಾಂಬಶಿವನಂ ನೆನೆಯೆ ಬೆಂಬಿಡದೆ ಬರ್ಪುದು ಸು
ಖಂ ಬಯಸಿದರ್ಥಮುವಘಂ ಬಯಲದಲ್ತೇ ॥

ಲಿಂಗಸ್ತೋತ್ರಷಟ್ಪದಿ. (ಪದ್ಯ 111). ಸು. 1500.

ತಿಂಗಳ ತಣ್ಗದಿರ್ಗೊಂಗಲ್ ತೀವಿದ । ಪಿಂಗಳವರ್ಣಜಟಾಕೋಟೀರದ।
ಮಂಗಳಮೂರ್ತಿ ಭುಜಂಗಾಭರಣ ವಿಹಂಗಗಮನನೆನುತ ॥

ಗಂಗಾಧರ ಮಾತಂಗಾಸುರಹರ । ಪುಂಗವವಾಹ ಸಿತಾಂಗ ಸಮುಸ್ತುಜ।
ಗುಗಳದಸ ಕೃಪೆಯಿಂ ಸಲಹೆಮ್ಮಂ ಸಂಗಮನಾಥ ಶಿವಾ ॥

ಹುಟ್ಟಂ ಹಱಿಸಂ ವಿನತಜನದ ದೆಸೆಯುಟ್ಟಂ ನಿಟ್ಟೊಡಲೆಲರಣಿವಚ್ಚಂ।
ದೊಟ್ಟಂ ಬಾನೊಳ್ ತಿರ್ಪನೆ ತಿರ್ಪನೆ ತಿರುಗುವ ಮುಪ್ಪೊಲಿಬಂ ॥

ಸುಟ್ಟಂ ಕಟ್ಟುರಗಣ್ಣಿಂದುಱಿಕುಳಿವೆಟ್ಟಿನಣುಗಿಗೊಲ್ದರೆಮೆಯ್ಯಂ ಸಲೆ।
ಕೊಟ್ಟಂ ದೇವರ ಹಿಂಡೊಳ್ ತನಗೆಣೆಗೆಟ್ಟಂ ಪಾಲಿಸುಗೆ ॥

ಆಚರಣಸಂಬಂಧಷಟ್ಪದಿ (ಪದ್ಯ 165). ಸು. 1500.

ಹುರುಳಿಲ್ಲದ ವಿಷಯಂಗಳ ಬೆನ್ಹೊಳು । ಹರಹರಿದೆಳತಟಗೊಳುತಿಹ
ರವನೇಂ ।
ಪರಮವರಾತ್ಮಜಲ್ಲದೆ ದಿಟ ಸತ್ಪುರುಷರೆ ಲೋಕದೊಳು ॥

ಉರಗನ ಹೆಲಿ'ಗೆಯನು ಕದ್ದೊಡಿದ । ಮುರುಳುವನಾಕಸತೆಲಿದಿಂ
ಹೊಳ್ಳನು।
ಹುರಿದರಳನು ಕುಱಿ ಕುವಸಂತಿಗನಲಿ'ಯೆಂದನು ದೇಶಿಕನು ॥

ವಾಗದ್ವೈತನಿರಸನ ತ್ರಿಪದಿ. ಸು. 1500

ಪದ್ಯ 127 ಅಲ್ಲಲ್ಲಿ ಸಂಸ್ಕೃತಶ್ಲೋಕಗಳೂ ಅನುವಾದವೂಡಲ್ಪಟ್ಟಿವೆ.

ಕರಿಯುಂಡಕಪಿತ್ಥ।ವಿರಲುಂಟುನೋಡುವರೆ । ತಿರುಳಿಲ್ಲವೆಂಬ ವಾಟ್ಕ
ಯಿಂ।ಭಕ್ತರೊಳ । ಗಿರಲುಂಟೆ ಕರ್ಮಫಲ ಶೇಷ ॥

ಛೀಯೆಂದು ಪರಧನವ।ಛೀಯೆಂದು ಪರಸತಿಯ।ಛೀಯೆಂದು ಹಿಂಸೆಪಾಪ।
ಪೈಶುನ್ಯವನು । ಛೀಯೆಂದು ಕಳೆಯುಲವ ಬ್ರಹ್ಮ ॥

ಬಸವೇಶ್ವರಸ್ತೋತ್ರ (ಕಂದ 16). ಸು. 1500.

ಪ್ರಣವದ ಬಳಿ ಬಕಾರಂ । ಪ್ರಣವದ ನಾದಾನುಸಾರಸಾರ ಸಕಾರಂ ।
ಪ್ರಣವದ ಬಿಂದು ವಕಾರಂ । ಪ್ರಣವಂ ಬಸವಾಕ್ಷರತ್ರಯಂ ಬಸವೇಶಾ ॥

ಬಸವಂ ಭಕ್ತಿಗೆ ಮೂಲಂ । ಬಸವಂ ಕಾಲಂಗೆ ಕಾಲನನುಪಮಶೀಲಂ ।
ಬಸವಂ ಜಂಗಮಲೋಲಂ । ಬಸವಾ ರಕ್ಷಿಸುವುದೆನ್ನ ಸಂಗನ ಬಸವಾ ॥

ಪಂಚಾಶಿಕೆ. ? 1528 (ಸರ್ವಧಾರಿ).

ಭಾಮಿನೀಷಟ್ಪದಿ; ಸಂಧಿ 13, ಪದ್ಯ 673. "ರಚಿಸುವೆನು ಸುರಪಗೆ ಪರಮಶಿವನುಪದೇಶಿಸಿದ ಪಂಚಾಶಿಕಾಗಮವ" ಎಂದು ಕವಿ ಹೇಳುತ್ತಾನೆ. ಆರಂಭದಲ್ಲಿ ಶಿವ, ಗೌರಿ, ತೋಂಟದ ಸಿದ್ಧಲಿಂಗ, ಗಣಪತಿ, ನಂದಿ, ವೀರೇಶ್ವರ, ಕುಮಾರ ಇವರುಗಳ ಸ್ತುತಿ ಇದೆ

ಪೊಕ್ಕ ಪೊಸಬಾಂದೊಚ್ಚದಲೆಯುಂ । ಗಚ್ಚಲಿಯದೆಣ್ಮಯ್ಯಂವಂಗುಱೆ ।
ಮುಚ್ಚರವನೊಂದದ ಸಿರಿಗಳೆಲಿಸಿಯುಂಗೆ ಬಗೆಯೊಳಗೆ ॥

ಬಿಚ್ಚಲಿಪ ಮಲ್ಲಿಕದ ಜಸಂದಳೆ । ದೆಚ್ಚಲಿಡಗದ ದೇಸಿಗಂಗಾ ।
ನೊಚ್ಚತಂ ತುಲಿಲ್ಗೆಯ್ವನೊಡಲಿಚನೊಡಲ ಚುರ್ಚಿದಗೆ ॥

ವಿನುತ ಭೇದಾಭೇದವಹ ಚಿತಿ । ಯನುಸರದೆ ಚಿತಿಯಾತ್ಮಕವಿದೆಂ ।
ದೆನಿಪ ಜಗವಾ ಚಿತ್ತೆ ಚಿತ್ತು ಜ್ಞಾನವದೆ ಧರ್ಮ ॥

ತನುಜ ಧರ್ಮಿಗೆ ಧರ್ಮಕಂ ಕೇ । ಳಿನಿಸುಮಗಲಿಗೆ ತೋಲಿವನುವೆಂ ।
ತೆನಲು ಶರಧಿತರಂಗನೀತಿಯೊಳೆಲ್ಲವೇಕತೆಯು ॥

ಒಸವೇಶ್ವರನ ಪಂಚಸ್ತೋತ್ರ. ಸು. 1550.

ಕುವಲಯಪರಾಜಿತಂ ಕಂಜಾತರಂಜಿತಂ ।
ತವೆ ತಾರಕಾಲಂಕೃತಂ ನಾಡೆ ಸಂತತಂ ।
ರವಿಯಂತೆ ಪುರದಂತೆ ವನದಂತೆ ದಿವದಂತೆ ಶಿವನಂತೆ ದನುಜರಂತೆ ॥

ವಿವಿಧಾನಿಮಿಷಭಂಗವರ್ಧನಂ ಶ್ರುತಿಯುತಂ ।
ವಿವರಿಸಲ್ಕಂ ಜನೋದ್ಭಾಸಿತಂ ಒಕ ಸರಸಿ ।
ನವಗಾನ ವಿಪ್ರಕುಲ ಗಿರಿ ವರುಣನೆಸೆಯುಂತೆ ಗಿರಿಜೆಯುಂಬಕಮೆಸೆದುವು ॥

ಪಲಗಣ್ಣ ಕಾರೊಡಲ ಮಾತುವೆಣ್ಸೊಲಿಯರುಂ ।
ತುಟಿಲ್ಗೈವ ಮೆಲ್ಲಡಿಯ ಜತಿಗಳೆದೆವಕ್ಕೈಗನು ।
ಮುಲರಂಬವಗೆಯ ಎಗಗ್ಯೆಯ ಜೊನೊಪ್ಪಿಡಲ ಮರಗೂಬಿಬಾನ್ಮಣಿ
ಗಣ್ಣನು ॥
ಎಲವರ್ಟ್ಟೆದಲೆಯನಲ್ಲಿವೊಗನಯ್ಯ ಸಬ್ಸೆಲಿಯ ॥
ನೆಲರುಣಿಸಗಂಕಣಂ ಪೊಂಬೆಟ್ಟಬಿಲ್ಗೈಯ
ನೆಲದಳೆದನಣುಗಿಯಾಣ್ಮಂ ಸಿದ್ದನಂಜೇಶ ರಕ್ಷಿಸುಗೆ ಬಿಡದೆವ್ಮನು ॥

ಭುವನಭವಭವವಿನುತ ಭುವನಭವನಯುನನತ ।
ಭುವನಭವಭವನಭವ ಭುವನಧರದಳನಸವಿ ।
ಭುವನಭವಸಖಭುವನಭನರಿಪುವಸಲನಯುನ ಗಗನಭುವನಾವತಂಸ ॥

ಭುವನಧರಧರ ಕನಕಭುವನಧರಧರ ವರದ ।
ಭುವನಧರಗಜಶರದ ಭುವನಭವಸರ ಭುವನ ।
ಭುವನೇಶ್ವರಿಯ ವದನಭುವನೇಜ ಭುವನನಯುನ ಜಯು ಜಯ ಸಿದ್ಧ
ನಂಜಾ ॥

ನೀಲಮ್ಮನ ತ್ರಿಪದಿ (ಪದ್ಯ 55). ಸು. 1550.

ಶ್ರೀ ಪರಮೇಶ್ವರನ । ಅಪಾರಮಹಿಮೆಯನು । ರೂಪುಗೊಂಡಂತೆ ನಿಂದ
ನೀಲಮ್ಮ । ನೀನೇಪೊತ್ತು ಎನಗೆ ಕೃಪೆಯಾಗು ॥
ಕರಗಿದಗೆ ಕಾಮುದಳಿ । ಕೊರಗಿದಗೆ ಕ್ರೋಧದಲಿ । ಬೆರೆದವಗನೇಕ
ಭವದೊಳಗೆ ।
ನೀಲಮ್ಮ । ಪರಿಪೂರ್ಣರೂಪೆ ಕೃಪೆಯಾಗು ।

ಮುರಿಗೆ ಶಾಂತವೀರೇಶ್ವರನ ಕಂದ (ಪದ್ಯ 24) ಸು. 1550.

ನಿನ್ನನೆ ಪಾಡುವೆ ಸಂತತ । ನಿನ್ನನೆ ಪೊಗಟ್ಪುವೆನು ನಿತ್ಯವೆಡೆ ಬಿಡದಾವಗ।
ನಿನ್ನನೆ ಬೇಡುವೆನಲ್ಲದೆ । ಅನ್ಯರ ನಾನರಿಯೆನೀಶ ಶಾಂತವಿರೇಶಾ ॥

ಶಿವಭಕ್ತಸ್ತುತಿ (ಕಂದ ಸುಮಾರು 800). ಸು. 1550).

ಭಕ್ತರನಳವಿಯೊಳೀಕ್ಷಿಸಿ । ಭಕ್ತರ್ ಬಂದಪರೆನುತ್ತೆ ಬದ್ಗಳಿಕೆದೆನೆ ನುಶುಂ ।
ಭಕ್ತಗಿದಿರೆಲ್ದಿನ್ ಯಥಾ । ಶಕ್ತಿ ಸ್ಫುರಿಯಿಂದೆ ಪೂಜಿಸಲ್ವೇಟ್ಕುಭವಾ ॥

ಕುಲಜಕುಲಹೀನರಿರ್ವರ್ । ನೆಲೆಗೊಳೆ ಭವದಜಲಭಕ್ತಿನಿಷ್ಠಾಗತಿಯಿಂ।
ಬೆಲೆಗೆಯ್ವೊಡವರ್ ಸದೃಶರ್ । ಕುಲಜರ್ ಕುಲಹೀನರೆಂಬುದಘಟಿತಮುವರೊಳ್ ॥

ಕೊಟ್ಟಿರೆದ ಶಿರಂಗಳ್ ಬೆರೆಗುಂ । ಪಟ್ಟಿದಾಜಿಹ್ವೆಗಳುಟ್ಟಿಯುದೆ ಬಕುರ್ದಂ ।
ಕಟ್ಟಿಗೊರಲನ ಭಕ್ತಗ್ಗೆರ್ದಂ । ದಟ್ಟಿಯುರೆ ಸದ್ಯಃ ಪ್ರಸಾದರೀಶನ ಭಕ್ತರ್॥

ಮಿಶ್ರಸ್ತೋತ್ರ. ಸು. 1550.

ಕುಸುಮಷಟ್ಪದಿ; ಪದ್ಯ 110. ಕೊನೆಯ ಪದ್ಯದಲ್ಲಿ ಗುರುಸೋಮನಾಥನ ಅಂಕಿತವಿದೆ.

ನಂದಿಕೇಶ್ವರ ಭೃಂಗಿ । ಸ್ಕಂದ ಮುಖ್ಯಸುರಾಳಿ ।
ಬಂದೆನ್ನ ಹೃತ್ಕಮಲದೊಳಗೆ ॥
ನಿಂದು ನಿಮ್ಮಯ ಭೃತ್ಯ । ನೆಂದೀ ಕೃತಿಯೊಳು ತ ।
ವ್ಪೊಂದಿಲ್ಲವೆನೆ ನಡೆಯಿಸುವುದು ॥

ಒಡಲ ಒಟ್ಟಿಯಲಿ ಛಾಯೆ । ನುಡಿಯ ಒಟ್ಟಿಯೊಳಗರ್ಥ
ದೃಢಭಕ್ತಿಜ್ಞಾನಂ ನಿರಕ್ತಿ ॥
ಒಡನೆ ಸನ್ಮುಕ್ತಿ ಬೆಂ । ಬಿಡದವೋಲ್ ಮಹದೇವಿ
ನಡೆದಳಾ ಭೈರವನ ಕೂಡೆ ॥

ಸುಗ್ರೀವನಿಮಿತ್ತ. ಸು. 1550.

ಮುಂದನೊಡನಸುರಗುರುವುಂ । ಮುಂದನಿರಲ್ ನಿಂದ ನೆಲೆಯೊಳಿರೆ ಶುಭ
ಮಕ್ಕುಂ ।
ಕುಂದದೆ ಪೊಲಿಮಡೆ ಕಲಹಂ । ಸಂದಿಸುಗುಂ ಕೇಡು ರುಜೆಗಳುಂ ಪೀಡಿ
ಸುಗುಂ ॥
ಭೌಮನೊಡನಮರಗುರುವುಂ । ಸೋಮಜನುಮಿರಲ್ಕೆ ವೈರಿಬಲಮುಂ
ಗೆಲ್ಗುಂ ।
ಕ್ಷೀಮಾರ್ಥಲಾಭಮಕ್ಕುಂ । ಭೂಮೀಶ್ವರಪೂಜೆ ಸಂತತಂ ಪಿರಿದಕ್ಕುಂ।

ಸಾಮುದ್ರಿಕಲಕ್ಷಣ (ಗದ್ಯ). ಸು. 1600.

ಕಿಱುವೆರಳಿನ ಅಡಿಯು ಅಡ್ಡಲಾಗಿರ್ದುದು ಆಯುಷ್ಯರೇಖೆ. ಹೆಬ್ಬೆರಳಿನ ಒತ್ತಿನ ತರ್ಜನಿಯೆಂಬ ಬೆರಳ ಮುಟ್ಟಿದೊಡೆ ತೊಂಬತ್ತು ವರ್ಷದಾಯುಷ್ಯ ವೆಂದಱಿವುದು ; ತರ್ಜನಿಯುಂ ಸುತ್ತಿದೊಡೆ ನೂರುವರ್ಷದಾಯುಷ್ಯವೆಂ ದಱಿವುದು ; ಕಿಱುವೆರಳಿಂದ ಮಧ್ಯವೆರಳಲ್ಲಿ ನಡೆದು ನಿಂದೊಡೆ ಎಪ್ಪತ್ತು ವರ್ಷ ವೆಂದಱಿವುದು ; ಕಿಱುವೆರಳಿಂದ ಅನಾಮಿಕ ಮಧ್ಯವೆರಳಲ್ಲಿ ನಿಂದೊಡೆ ಅಱು ವತ್ತು ವರ್ಷಕೆ ಕೊಱತೆಯಿಲ್ಲದೆ ಬಾಳ್ವರು

ಶಕುನಗಳು. ಸು. 1600.

ಈ ಗ್ರಂಥದಲ್ಲಿ ಹಲ್ಲಿಯ ಶಕುನ, ಹಸುಬನ ಶಕುನ, ಗಾರ್ದಭಶಕುನ, ಸರ್ಪಶಕುನ, ಸೀನಿನ ಫಲ, ಕಣ್ಣುಹಾರಿದ ಫಲ, ಗೌಳಿ ಬಿದ್ದ ಫಲ, ಜೀನು ಇಕ್ಕಿದ ಫಲ, ಸ್ವರ ಮುಂತಾದ ಅನೇಕ ವಿಷಯಗಳು ಗದ್ಯಪದ್ಯಗಳಲ್ಲಿ ಹೇಳಿವೆ. ಕೆಲವು ಪದ್ಯಗಳು ವರಕವಿಚಂದ್ರ, ಅಲ್ಲಜಮಾಪ, ಅಜಳಿಶವಜನ ಎಂದು ಮುಗಿಯುತ್ತವೆ.

ಕಾಗೆ ನರಿ ಪಲ್ಲಿ ಪಿಂಗಳಿ । ಗೂಗೆ ಹಯುಂ ಖರದ ಶಕುನ ವೃಷಭದ
ಧ್ವನಿಯುಂ ।
ಪೋಗಲೆಡಬಲದೊಳಾಗಲು । ಮೇಗೆ ಕರಂ ಕಾರ್ಯಸಿದ್ಧಿಯಜಳಿತ ವಜನಾ ॥
ಆಪತ್ತು ಪುಟ್ಟಿ ಮನದೊಳ್ । ತಾಪಿಸಿ ನಷ್ಟಕ್ಕೆ ಬಂದು ಬೆಸಗೊಳುತಿರಲುಂ।

ಪಾಪಗ್ರಹದೊಳಗುಳಿಯಲು ಆಪತ್ತುಗಳಡಗಿ ಮುಂದೆ ಸಂಪದಮಕ್ಕುಂ ॥
ಗಂದವ ಸೀಡುವ ಪದದೊಳ । ಮುಂದಣ ಕನ್ನಡಿಯ ಪಿಡಿದು ನೋಡುವ ಪದದೊಳ್ ।

ಚಂದವಲಿ ಪಲ್ಲಿ ಕರೆಯಲ । ಸಂದೇವನೆ ಕ್ಷಯದವೊಂದಸಲ್ಲಜಮೂವಾ॥
ಚಿಂತೆಗೆಯಿದಿರುಂ ಬಲನುಂ । ಸಂತೋಷಕೆಯೆಡನು ಬೆನ್ನ ಮಾಡೊಡೆ ಶುಭದಂ ।

ಚಿಂತೆಗೆ ಬ್ರಹ್ಮಸ್ಥಾನಂ । ಬಿಟ್ಟಿಂತೆಗೆ ಸೊಸಲಪಕ್ಷಿಯೊಸಗೆಯ ಪೇಟಿಸ್ಗುಂ ॥
ಹರ ಮುನಿದಂಬಂ ತೊಟೆಪ್ಪಡೆ । ಶರಧಿಯ ನಡು-ಮಧ್ಯದೊಳಗೆ ಬಿದ್ದೊಡೆ ಮತ್ತಾ ।

ಮುರರಿಪು ಚಕ್ರದೊಳಟ್ಟೊಡೆ । ಪರಿಯರಿಪುದು ಬಲದಪಲ್ಲಿಯುಲ್ಲಜಮೂವಾ ॥
ನಾಡಲಿ'ವಲ್ಲಿ ದಾಟಿ'ಯಿಡುವಲ್ಲಿ ಕಡಂಗುಡುವಲ್ಲಿ ಚಿಂತೆಯಿಂ ।
ಮೂಡಿ ಮುಟಿಯಿಂಗುವಲ್ಲಿ ಸಪ್ಪೆಯೊಳ ಸಿಲುಕಿರ್ದೊಡೆಯಲ್ಲ ಭೀತಿಯಿಂ ॥
ದೊಡುವ ತಾಣದಲ್ಲಿ ಸಲೆ ಏಕ್ರಯದೊಂದೆಡೆಯಲ್ಲಿ ಕಲ್ಲಿಗಳ್ ।
ನಾಡೆ ಗೃಹಂಗಳಿಂ ಪೊಱಗೆ ದಕ್ಷಿಣದೊಳ್ ಸ್ವರಮೇಯಲುತ್ತಮಂ ॥
ಬಡತನದಿಂ ಪೋಪಾತಗೆ । ಯೆಡದಿಂ ಬಲಗಡೆಗೆ ಬಂದು ಪನ್ನಗರಾಜಂ ।
ಪೆಡೆಯೆತ್ತಿ ಮುಂದೆ ನಿಲ್ಲಲ್ । ಪೊಡವಿಗೆ ತಾನೊಡೆಯನಕ್ಕುಮಿದೆ ಸಿದ್ಧಾಂತಂ ॥

ಅಂಬಿಲದ ಕೂಟಿ ಮಡಕೆಯು । ತುಂಬಿದ ನಡುಮನೆಯು ಕಡೆವ ಕಂಬಗ ಳೆಡೆಯೊಳ್ ।
ಹೊಂಬಣ್ಣದಿಜುಪೆ ನೆಗಪೊಡೆ । ತುಂಬಿದ ಧನಧಾನ್ಯಮಕ್ಕುಮಾತನ ಮನೆಯೊಳ್ ॥

ಗಾಳಿ ಬಿದ್ದ ಫಲ—ನೆತ್ತಿಯಮೇಲೆ ಬೀಪೆ ಕಲಹ; ನಡುನೆತ್ತಿಯಮೇಲೆ ಬೀಪೆ ತಂದೆತಾಯಿಗೆ ಹೊಲ್ಲ; ಇತ್ಯಾದಿ.

ಅಂಗಸ್ಪರ್ಶಫಲ—ಮೂಗ ಹಿಡಿದಡೆ ಹಾನಿ; ಮುಖವ ಹಿಡಿದಡೆ ಲಾಭ; ಎಸೆಯು ಹಿಡಿದಡೆ ಪುರುಷಾರ್ಥ; ತುಟಿಯು ಮುಟ್ಟಲು ಜಗಳ; ಗಲ್ಲವ ಮುಟ್ಟಲು ದುಃಖ; ಮುಂಗೈಯ ಹಿಡಿದಡೆ ರೋಗ; ಇತ್ಯಾದಿ.

ಅವಯವ ಹಾಱಿದ ಫಲ—ಎಡದ ಹುಬ್ಬು ಹಾಱಲು ಕಷ್ಟ; ಬಲದ

ಹುಬ್ಬು ಹಾಜಲು ಲಾಭ; ಬಲದ ಅಳ್ಳೆ ಹಲಜಿಲು ಸಂಪತ್ತು; ಎಡದ ಅಳ್ಳೆ ಹಾಜಲು ವಿಪತ್ತು; ಇತ್ಯಾದಿ.

ಕಾಗೆ ಹೆಚ್ಚೆಯಿಕ್ಕಿದ ಫಲ—ಶಿರದೊಳು ಮೃತ್ಯು; ಲಲಾಟದೊಳು ಕನಕಪಟ್ಟ; ಉರದೊಳು ಭೋಜನ; ಕರ್ಣದೊಳು ಸುವರ್ಣಲಾಭ; ಇತ್ಯಾದಿ

ನೀಲಾಂಬಿಕಾಸ್ತುತಿ. ಸು. 1600.

ಬಸವನ ಹೆಂಡತಿ ನೀಲಮ್ಮನ ಸ್ತುತಿರೂಪವಾದ ಗ್ರಂಥ; 25 ಷಟ್ಪದಿಗಳಿವೆ.

ಮಂಜುಮಣಿಗಣಖಚಿತನೂಪುರ । ರಂಜಿತಾಮಳಚರಣಸರಸಿಜೆ ।
ಕಂಜಮುಖಿ ಕಮನೀಯಮಂತ್ರಾಲಾಪೆ ಜಿತತಾಪೆ ॥
ಕಂಜರಿಪುನಿಭನಖಜಯೆ ಮದ । ಕುಂಜರಾಧಿಕಯಾನೆ ದುರ್ಗುಣ ।
ಭಂಜೆ ಪಾಲಿಸು ಭಕ್ತಜಗವನು ವೃಜಿನಸಂಹಾರೆ ॥
ನೋಡಿ ನಿನ್ನಯ ದಂತಜಯಮಂ । ಡಾಡಿಮಂಗಳು ನಾಚಿ ವನದೊಳು ।
ಕೂಡಿ ಸೈವೆರಗಾಗಿ ಬಾಯಂ ತೆಱೆದು ಪಲ್ಗರಿದು ॥
ಬೇಡಿದಪುವಾವಾಗ ನಿನ್ನೊಳು । ಗಾಡಿಯುಂ ಬಹುಮಾನಿ ದಯೆಯಂ ।
ಸೂಡಿ ಪಾಲಿಸು ನೀಲಲೋಚನೆಯೆಮ್ಮನನವರತ ॥

ಮಣ್ಣೇಶ್ವರಕಾವ್ಯದ ನಾಂದ್ಯ. ಸು. 1600.

ಇವು ಈ ಕಾವ್ಯದ ಸಂಧಿಗಳ ಆದಿಯಲ್ಲಿರುವ ನಾಂದೀಪದ್ಯಗಳಾಗಿರಬಹುದು. ಒಗಟಿಗಳಂತಿರುವ 13 ಪದ್ಯಗಳಿವೆ. ಇವಕ್ಕೆ ಒಂದು ವ್ಯಾಖ್ಯಾನವೂ ಇದೆ.

ನಾಸಿಕದುಂಬನ । ಗಾಸಿಗೈದವನ ಛೇ । ದಿಸಿದನಂಗನೆಯ ಪಿತನಾ ।
ಸೂಸದುಂಡವಗೆ ವಂ । ದಿಸಿದಾತಗೆಯಾದಿ । ವಾಸವಾಗಿಹ ಮಣ್ಣೇಶ
ಮಾಂ ತ್ರಾಹಿ[1] ॥

---

1 ನಾಸಿಕದುಂಬನ - ಅನೆಯ, ಗಾಸಿಗೈದವನ - ಮೊಸಳೆಯ, ಛೇದಿಸಿದನ - ವಿಷ್ಣುವಿನ, ಅಂಗನೆಯ - ಲಕ್ಷ್ಮಿಯ, ಪಿತನ - ಸಮುದ್ರನ, ಸೂಸದುಂಡವಗೆ - ಅಗಸ್ತ್ಯನಿಗೆ, ವಂದಿಸಿದಾತಗೆ - ವಿಂಧ್ಯಕ್ಕೆ, ಆದಿ - ಮೇರು.

ಸರಸಿಯ ಪೊಕ್ಕನ ತಾಯ | ವರನಣುಗನ ರಕ್ತ | ಸುರಿದನಯ್ಯನ ವಾಜಿ
ಯುರನಿಗೆ |
ಅರಿಸುತೆಯರಸನ | ವರಭಾವನ ಸೊಸೆಯ ಮೂ | ಗರಿದನಯ್ಯನೆ ವಂದ್ಯೋ
ಶ ಮಾಂ ತ್ರಾಹಿ ॥

ಮನೋವಿಕಾರ ನಿರಸನ ರಗಳೆ. ಸು. 1600.

ನುಡಿ 127 ; ಒಂದೊಂದೂ " ಶಂಕರಲಿಂಗ " ಎಂದು ಮುಗಿಯುತ್ತದೆ.

ಏರಿ ನೀರುಣ್ಬೊಡಂ ಬೇಲಿ ಕೆಯ್ಮೇವೊಡಂ |
ಪರಿದಂ ಮಾಣಿಸುವರಯ್ಯ ಶಂಕರಲಿಂಗ ॥
ಅಟ್ಟಡಿಗೆಯಂ ಮಡಕೆ ಕದ್ದುಣ್ಬೊಡಂತದಕೆ |
ಕಟ್ಟಣೆಯ ಮಾೞ್ಪರಾರಯ್ಯ ಶಂಕರಲಿಂಗ ॥
ಪಶು ಕಣ್ಣಿಯೊಳು ಕಟ್ಟುವಡೆದಂತೆ ನಿಮ್ಮ ಪದ |
ಬಿಸರುಹದೊಳೆನ್ನ ಕಟ್ಟಯ್ಯ ಶಂಕರಲಿಂಗ ॥
ಕೋಟಿಹುಲುಮೊಜ್ಜಿಗಳು ಕೂಡಿ ಮೇರುವಿಗೆ ಸಮ |
ಸಾಟಿಯಹುವೇ ನುಡಿಯಲಮ್ಮೆ ಶಂಕರಲಿಂಗ ॥

ಪುನರ್ದೀಕ್ಷೆ ರಗಳೆ, ಪುಷ್ಪದಷ್ಟಕ ಇವುಗಳಲ್ಲಿಯೂ ಶಂಕರಲಿಂಗ ಎಂಬ ಅಂಕಿತವಿರುವುದರಿಂದ ಇವೆಲ್ಲವೂ ಏಕಕವಿರಚಿತವೆಂದು ತೋರುತ್ತದೆ.

ಪುನರ್ದೀಕ್ಷೆ ರಗಳೆ.

ಗುರುವ ಲಘುವೆನಬಹುದೆ ಲಘುವ ಗುರುವೆನಬಹುದೆ |
ಗುರುವೆ ಗುರು ಲಘುವೆ ಲಘುವೆನುತಿಹ ಪುನರ್ದೀಕ್ಷೆ ॥

---

1 ಸರಿಸಿಯಪೊಕ್ಕನ - ಕೌರವನ, ತಾಯ ಗಾಂಧಾರಿಯ, ವರನ - ಧೃತರಾಷ್ಟ್ರನ, ಅಣುಗನ - ದುಶ್ಶಾಸನನ, ರಕ್ತಸುರಿದನ - ಭೀಮನ, ಅಯ್ಯನ - ವಾಯುವಿನ, ವಾಜಿಯುರನಿಗೆ - ಹುಲ್ಲೆಯ ಎದೆಯಲ್ಲಿ ಉಳ್ಳ ಚಂದ್ರನಿಗೆ, ಅರಿಸುತೆಯ - ಸರ್ಪದಮಗಳ, ಅರಸನ - ಅರ್ಜುನನ, ವರಭಾವನ - ಕೃಷ್ಣನ, ಸೊಸೆಯ - ಸರಸ್ವತಿಯ, ಮೂಗರಿದನ - ವೀರಭದ್ರನ, ಅಯ್ಯನೆ - ಶಿವನೆ.

ಪುಷ್ಪದಷ್ಟಕ (ಪದ್ಯ 17).

ಕವಿಯ ಮರುಗಂ ಬಿಳಿಯು । ಮರುಗ ಮುಡಿವಾಳದಿಂ ।
ಪರಿಮಳದ ಪಾದರಿಯ ಪುಷ್ಪದಿಂದ ॥
ಸುರಗಿ ಸುರಹೊನ್ನೆ ಹೊಂ । ಗೇದಗೆಯ ಪುಷ್ಪದಿಂ ।
ಕರುಣಸಾಗರನ ಪೂಜಿಸುತಿರ್ಪೆನು ॥

ಘೋರಾಸುರಯುದ್ಧ ಸು. 1600.

ವಾರ್ಧಕಷಟ್ಪದಿ; ಸುಮಾರು 100 ಪದ್ಯಗಳಿರುವಂತೆ ತೋರುತ್ತದೆ ಸಂಧಿಗಳ ಕೊನೆಯಲ್ಲಿ ಅವಿರಳಸಿದ್ಧಲಿಂಗೇಶನ ಅಂಕಿತವಿದೆ.

ಭರದಿಂದೆ ತೋಜುವಾವರ್ತದಿಂ ವೃತ್ತದಿಂ ।
ದಿರದೆ ನಭಕೇಳಿ ಪ್ಪ ಸೀರ್ಪನಿಗಳಿಂ ದನಿಗಳಿಂ !
ಹರುಷದಿಂ ತಿರುಗುತಿಹ ನಕ್ರದಿಂ ಜಕ್ರದಿಂ ಘನತರದ ಮತ್ಸ್ಯಾಂಗಳ ॥
ಪರಿಪರಿಯ ನಟನೆಗಳ ಚಂದದಿಂದಂದಟಂ ।
ಸ್ಫುರಿಸುತಿಹ ಮೌಕ್ತಿಕದ ಮಣಿಗಳಿಂ ಗಣಿಗಳಿಂ ।
ದೊರೆಯಲೇಂ ಏದ್ರುಮದ ಗುಂಪಿನಿಂ ಸೊಂಪಿನಿಂದಂ ಪಯೋನಿಧಿಯೆಸೆದದು ॥

ಅಸಂಖ್ಯಾತರ್ಷಿ. ಸು. 1600.

ಪುರಾತನರ ಸ್ತುತಿರೂಪವಾದ ಗ್ರಂಥ; ನುಡಿ 138. ಕೊನೆಯ ಕಂದದಲ್ಲಿ ಗುರುಪುರದ ಮಲ್ಲಿನಾಥಪ್ರಭುವಿನ ಅಂಕಿತವಿದೆ.

ಒತ್ತಿ ಸಂಸಾರಮಂ ಕಿತ್ತು ಸದ್ಭಕ್ತಿಯಂ ।
ಬಿತ್ತರದಿ ವೆಚ್ಚಿದ ಪೊಲ್ಲೆಯ ಬೊಮ್ಮನಾಳಯ್ಯ ॥

ಬಸವಪವಾಡದ ರಗಳೆ. ಸು. 1600.

ಬಸವನ 88 ಪವಾಡಗಳ ವರ್ಣನೆ; ನುಡಿ 112 ಆದ್ಯಂತಗಳಲ್ಲಿ ಹಂಪೆಯ ವಿರೂಪಾಕ್ಷನ ಅಂಕಿತದ ಕಂದಗಳಿವೆ.

ಮೃಡನ ಶರಣ ಬೊಮ್ಮಿತಂದೆ ಕನ್ನಪಕ್ಕ ನೃಪನು ಸೆಣಸೆ ।
ಒಡನೆ ಮಣ್ಣರಾಸಿಗಳನು ಚಿನ್ನವಾಡಿ ಮೆಚ್ಚಿದ ಬಸವ ॥

ಎಲ್ಲಾ ಪುರಾತನರ ತ್ರಿಪದಿ. ಸು. 1600.

ಇದರಲ್ಲಿ ಶಿವಭಕ್ತರಾದ ಪುರಾತನರ ಸ್ತುತಿರೂಪವಾದ 62 ಪದ್ಯಗಳಿವೆ.

ಏಕೋದೇವ ಘನವೆಂದು । ಕಾಕುಬಿತ್ತಿಯನೊಡೆದು । ಲೋಕವಣಿಯಲ್ಕೆ ಸಿರವರಿದು ।
ಎಲುದಿನ ಮೆಚ್ಚಿದ ಏಕಾಂತರಾಮಯ್ಯ ಶರಣಾಗು ॥
ಸೂಲ ತಲೆಯಲಿ ಮೂಡಿ । ಮೇಲೆ ಮುಡಿ ಪಲ್ಲೈಸಿ । ಲೋಲ ಬಸವೇಶ್ವರಸಲು ।
ಮರಸಹಿತೈದಿದ ಸೂಲದ ಬ್ರಹ್ಮಯ್ಯ ಶರಣಾಗು ॥
ಅಲ್ಲಿ ಮಾಯೆಯನಾಡಿಸಿ । ನಿಲ್ಲದೆ ಮರ್ತ್ಯಕೆ ಬಂದು । ಎಲ್ಲಾ ಪುರಾತನರನು ।
ಕಲಹಿ ಕದಳಿಯ ಪೊಕ್ಕ ಅಲ್ಲಮ ಪ್ರಭುವೆ ಶರಣಾಗು ॥

ಗುರುರಗಳೆ. ಸು. 1600.

ಗುರುಸ್ತುತಿರೂಪವಾದ ಗ್ರಂಥ. ಆದ್ಯಂತಗಳಲ್ಲಿ ಗುರುವಿಶ್ವೇಶ ಎಂದು ಮುಗಿವ ಒಂದೊಂದು ಕಂದವಿದೆ. ಮಹಾದೇವ ರಗಳೆಯಲ್ಲಿಯೂ ಹೀಗೆಯೇ ಕಂದವಿರುವುದರಿಂದ ಅದನ್ನೂ ಈ ಗ್ರಂಥಕರ್ತನೇ ರಚಿಸಿರಬಹುದು.

ವಿಭವದಿಂ ಭವದ ವಾಸವ ಪಜೆದ ಗುರು ಶರಣು । ಅಭವನಾಚಾರದಾಜ್ಞೆಯನಿತ್ತ ಗುರು ಶರಣು ।
ನಿತ್ಯಪದವಿಂತುಟೆಂದೊರೆದ ಶ್ರೀಗುರು ಶರಣು । ಮುಕ್ತಿಪೂಜೆಯ ಮಾಜಿ ತೋಱುತಿಹ ಗುರುಶರಣು ॥
ಆದಿಯನಾದಿಗಳೆಂಬಿವ|ಛೇದಿಸಿ ತಾಂ ತಾದು ಯೋಗಸಾಧ್ಯದೊಳಿರಿಸಿಯೆ ।
ಬೋಧಿಸಿ ಗುರುಸುಜ್ಞಾನದ|ಹಾದಿಯ ತೋಱಿಸಿದನೆಮ್ಮ ಗುರುವಿಶ್ವೇಶಂ ॥

ಮಹಾದೇವ ರಗಳೆ.

ಶ್ರೀಸಮಸ್ತಲೋಕಜೀವಭಾವಭರಿತಮಹಾದೇವ । ಈಶ ನೀನೆ ಭಕ್ತಿಲತೆಯ ಬೆರಸಿ ಮೆಚ್ಚಿದೆ ಮಹಾದೇವ ॥
ನರಜನ್ಮನೆಂಬುದತಿಶಯ । ಹರಭಕ್ತಿಯೆ ಅಧಿಕವದಱೊಳಱಿದಾಗ

ಕರ ಭ್ರಾಂತನಾಗಿ ತೊಲಿಲದೆ । ಪರಮನ ಕೀರ್ತಿಯನು ಮೆಚ್ಚೆದ ಗುರು ವಿಶ್ವೇಶಂ ॥

ಬಸವೇಶ್ವರ ರಗಳೆ. ಸು. 1600.

ರಗಳೆ ಎಂಬ ಹೆಸರಿದ್ದರೂ ಇದರಲ್ಲಿ 46 ಕಂದಗಳಿವೆ.

ಪ್ರಣವದ ಬಳ್ಳಿ ಒಕಾರಂ । ಪ್ರಣವದನಾದಾನುಸಾರಸಾರ ಸಕಾರಂ ।
ಪ್ರಣವದ ಬಿಂದು ವಕಾರಂ । ಪ್ರಣವಂ ಬಸವಾಕ್ಷರತ್ರಯಂ ಬಸವೇಶಾ॥

ಪುರಾತನ ಶರಣೆಯರ ತ್ರಿಪದಿ ಸು. 1600.

ಇದರಲ್ಲಿ 54 ಪದ್ಯಗಳಿವೆ; ನೀಲಲೋಚನೆ, ಮಹಾದೇವಿಯಕ್ಕ ಮೊದಲಾದ ಪುರಾತನದೇವಿಯರ ಸ್ತುತಿರೂಪವಾದ ಗ್ರಂಥ.

ಗುರುಭಕ್ತಿಯೊಳು ನಂದು । ಹರಭಕ್ತಿಯೊಳು ನಿಂದು ।
ಜರಭಕ್ತಿಯಿಂದ ಪರಮೇಶ್ವರನನೊಲಿಸಿದಾ ।
ಶರಣೆಯರ್ಗಾನು ನಮನಪ್ಪೆಂ ॥

ಬಸವೇಶ್ವರನ ತಾರಾವಳಿ. ಸು. 1600.

ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ ೫೪. ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿಯಲ್ಲಿರುವಂತೆ ಪ್ರತಿಪದ್ಯವೂ ಚರಣಾಂಬುಜಕ್ಕೆ ಶರಣು ಎಂದು ಮುಗಿಯುತ್ತದೆ

ರವಿಯುದಯವಂ ಬಯಸಿ ಒಲಿವುವಂಬುಜದಂತೆ ।
ಶಿವಪದದ ಮಾರ್ಗದಲಿಯೆಡೆವಿಡದೆ ಸಂಚರಿಪ ।
ರವರ ದರುಶನವೆಂದಿಗೆನಗೆ ದೊರಕುವುದೆಂದು ಮನದೊಳಗೆ ತೊಲಿಲಿ ಬಲಿಲಿ ॥

ದಿವರಾತ್ರಿ ಹಲುಬಿ ಹಂಬಲಿಸುವವನಾವನವ ।
ನವನ ಪದಕಮಲಕೆಱಗುವ ಮಧುಕರನ ನಾಡು ।
ಶಿವ ನಿನ್ನ ಜೇಡುತಿಹೆನೆಂಬ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥

ವಿರೂಪಾಕ್ಷಸ್ತುತಿ. (ಪದ್ಯ 20) ಸು 1600.

ಅಂಗಭವನತುಳಸರ್ವಾಂಗವಹ ನಿರ್ಗುಣೋ ।
ತ್ತುಂಗಶಮನಾಗ್ನಿಸ್ಫುಲಿಂಗ ಹಿಮಶೈಲಜಾ ।
ರ್ಧಾಂಗ ನತಜನಕಮಲಭೃಂಗ ಶಂಕರ ಕೃಪಾಪಾಂಗ ನಿರ್ಮಲಶುಭಾಂಗ॥
ಗಂಗಾತರಂಗಪ್ರಸಂಗತಜಟಾಪಟಲ ।
ಮಂಗಳಾತ್ಮಕ ಭಕ್ತಸಂಗಮಂ ರಕ್ಷಿಪುದು ।
ಹಿಂಗದನುದಿನಮೆಸೆವ ಪಂಪಾವಿರೂಪಾಕ್ಷಲಿಂಗ ಸತ್ಕೀರ್ತಿಸಂಗ ॥

ಮೂಲಕ ರಾಮಾಯಣ. ಸು. 1600.

ಭಾಮಿನೀಷಟ್ಪದಿ ; ಸಂಧಿ 6. ಮೂಲಕಾಸುರನು ಲಂಕೆಗೆ ಮುತ್ತಿಗೆ ಹಾಕಿ ವಿಭೀಷಣನನ್ನು ಸೋಲಿಸಿ ಒಳಕ ಅಯೋಧ್ಯೆಗೆ ಹೋಗಿ ಭರತ ಶತ್ರುಘ್ನ ಲಕ್ಷ್ಮಣ ರಾಮರನ್ನು ಸೋಲಿಸಿ ಕೊನೆಗೆ ಕುಶನಿಂದ ಸತ್ತನು.

ಹಲ್ಲುಗಿರಿಯುತ ಹಣುಕಿ ನೋಡುತ । ಮಿಳ್ಳಿಸುತ ಬಾಲವನು ತೆಗೆದರು ।
ಮಲ್ಲಸುಭಟರು ಖಳನ ಇದಿರಿಗೆ ಪಿಂಗರಾಗಿರಲು ॥
ಅಲ್ಲಿ ಚೀಱುತ ಚಿರುಕುಗುಟ್ಟುತ । ಜೆಲ್ಲಿ ನೆರವುತ ಏಡಿಸುತ ಹರಿ ।
ದಲ್ಲಿಗಲ್ಲಿಗೆ ನೆರವುತಿರ್ದರು ಮಾಣಿಮರ್ಕಟರು ॥

ಕಕೋಕಶಾಸ್ತ್ರ ಟೀಕೆ. ಸು. 1600.

ಕಾಮಶಾಸ್ತ್ರವಿವರಣ. ಈ ಶಾಸ್ತ್ರಪ್ರವರ್ತಕರಾದ ನಂದಿಕೇಶ್ವರ, ಗೋಣಿಕಾಪುತ್ರ, ದತ್ತಕ, ವಾತ್ಸ್ಯಾಯನ ಮುಂತಾದವರ ಹೆಸರುಗಳೂ ಈ ಶಾಸ್ತ್ರಕ್ಕೆ ಸಂಬಂಧಪಟ್ಟ ಗುಣಪತಾಕೆ, ಶಬ್ದಾರ್ಣವ ಎಂಬ ಗ್ರಂಥಗಳ ಹೆಸರುಗಳೂ ಹೇಳಿವೆ.

ಕಲ್ಪದಾದಿಯೊಳು ಬ್ರಹ್ಮದೇವನು ಪ್ರಜಾಸೃಷ್ಟಿಯಂ ಮಾಡಿ ಅವರ್ಗೆ ತ್ರಿವರ್ಗಸಾಧನೋಪಾಯಶಾಸ್ತ್ರಂಗಳಂ ಒಂದು ಲಕ್ಷ ಅಧ್ಯಾಯದಿಂ ಪೇಳಿದ್ದಂ. ಅವನ ಲಪ್ಪಣೆಯಿಂ ಶಾಸ್ತ್ರದೊಳೇಕದೇಶವಂ ತೆಗೆದುಕೊಂಡು ಸ್ವಾಯಂಭುವ ಮನು ಧರ್ಮಾಧಿಕಾರವಂ ಮಾಡಿದಂ. ಬೃಹಸ್ಪತಿ ಅರ್ಥಾಧಿಕಾರವಂ ಮಾಡಿದಂ.

ಪರಮೇಶ್ವರನ ಅನುಚರನಾದ ನಂದಿಕೇಶ್ವರನು ಪುರುಷಾರ್ಥಸಂತತಿವೃದ್ಧಿಗೆ ಕಾರಣವಾದುದಱಿಂದ ಕಾಮಶಾಸ್ತ್ರಮಂ ಸಾವಿರ ಅಧ್ಯಾಯ ಸೂತ್ರರೂಪವಾಗಿ ಪೇಳಿದ್ದಂ. ಅದಂ ಐನೂಱು ಅಧ್ಯಾಯದಿಂದ ಶ್ವೇತಕೇತು ಪೇಳಿದ್ದಂ. ಅದಂ ನೂಱು ಅಧ್ಯಾಯದಿಂದ ಸಾಧಾರಣ ಸಾಂಪ್ರಯೋಗಿಕ ಕನ್ಯಾಸಂಪ್ರಯುಕ್ತಕ ಭಾರ್ಯಾಧಿಕಾರಕ ಪಾರದಾರಿಕ ವೈಶಿಕೌಪನಿಷದಿಕಂಗಳೆಂಬ ಆಱು ಅಧಿಕರಣಂಗಳಂ ಬಾಭ್ರವ್ಯ ಪಾಂಚಾಲನು ಪೇಳಿದ್ದಂ. ಮತ್ತಂ ಐದನೆಯ ಅಧಿಕರಣವಾಗಿ ವೈಶಿಕವಂ ಪಾಟಲಿಪುರವೆಂಬ ಪಟ್ಟಣದ ವೇಶ್ಯಾಸ್ತ್ರೀಯರ ಪ್ರಾರ್ಥನೆಯಿಂದ ದತ್ತಕನೆಂಬವಂ ಪೇಳಿದ್ದಂ ಔಪನಿಷದಿಕವೆಂಬ ಅಧಿಕರಣಮುಂ ವಾತ್ಸ್ಯಾಯನನೆಂಬ ಋಷಿ ಪೇಳಿ ಅಧಿಕರಣಂಗಳಿಂ ಅನೇಕವಿಧವಾಗಿ ಈ ಕಾಮಶಾಸ್ತ್ರವಂ ಸರ್ವಜನ ಸಂತೋಷಕರವಾಗಿ ಸೂತ್ರರೂಪವಾಗಿ ಪೇಳಿದ್ದಱಿಂದ ಇದು ಋಷಿಸಮ್ಮತವೆಂದು ಪೇಳಿಲ್ಪಟ್ಟುದು. ಕಕೋಕನೆಂಬ ಮಹಾಕವಿ ಋಷಿಪ್ರೋಕ್ತಮಾದ ಈ ಕಾಮಶಾಸ್ತ್ರಮಂ ಪಂಡಿತಪಾಮರವರ್ಗಂ ಆಬಾಲವೃದ್ಧವರ್ಗಂ ರಂಜನೆಯಾಗುವಂತೆ ಪೇಳಿದ್ದಂ.

ಸರ್ವಾಗಮನಿಖಾಮಣಿ. ಸು. 1600.

ವಚನ 590 ; ಅಪ್ರಮಾಣ ಕೂಡಲಸಂಗಮದೇವ ಎಂಬ ಅಂಕಿತವಿದೆ.

ಶಾಂಭವೀ ಚಕ್ರೋದ್ಧರಣೆ. ಸು. 1600.

ಇದು ವ್ಯಾಯಿಕವಾಗಿ ಗದ್ಯಗ್ರಂಥ. ಅಲ್ಲಲ್ಲಿ ಪುರಾತನರ ವಚನಗಳು ಉದಾಹೃತವಾಗಿವೆ. ಕೊನೆಯಲ್ಲಿ "ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣರಾದ ಯೋಗಿಗಳೆ ಬಲ್ಲರು" ಎಂದು ಹೇಳಿವೆ. ಇದರಲ್ಲಿ 10 ಪದಗಳೂ ಇವೆ. ಒಂದನ್ನು ಉದಾಹರಿಸುತ್ತೇವೆ :—

ಹತ್ತುದಳ ಕಮಲನುಣಿಪೂರಕದ ಚಕ್ರದಲಿ ।
ವಿಸ್ತಾರಶಿಖಾಗ್ರ ಪ್ರಣವವನೆ ಧ್ಯಾನಿಪುದು ॥
ವಸ್ತುಸಕಲವನೀವ ರುದ್ರನೇ ಗತಿಯೆಂದು ।
ಹತ್ತು ಅಕ್ಷರವ ಭಕ್ತಿಯಲಿ ಭಾವಿಪುದು ॥

ಇಷ್ಟಲಿಂಗಚರಿತ್ರ (ಪದ್ಯ 47). ಸು. 1600.

ನಿಧಿಯಿದೆ ನಿಧಾನವಿದೆ ಸುಧೆಯಿದೆ ಸುವರ್ಣಗಿರಿ ।
ಯಿದೆ ಸಿದ್ಧರಸದ ಮಡುವಿದೆ ಮರುಜೀವಣಿಯ ಗಿಡು ।
ವಿದೆ ಸುರರ ಭೂಜವಿದೆ ಸುರಭಿಯಿದೆ ಜಕಿತಮಭಿಧತ್ತೆ ಶ್ರುತಿರಪಿ ಎನಿಪ್ಪ॥
ಅಧಿಕಸಿನ್ಯನಿರಾಳವಿದೆ ತತ್ವಮಸಿ ಪದಾ ।
ರ್ಥದ ತುಟ್ಟತುದಿಯ ನಿರ್ಣಯಲ ನಿಶ್ಯೂನ್ಯ ಬಂ ।
ದಿದೆ ಕರಸ್ಥಳದೊಳಾಹಾ ಮಹಾದೇವ ನಾನೇಂ ಭಾಗ್ಯನೋ ಯೋ
ಗ್ಯನೋ ॥

ಗುರುಶಿಷ್ಯವಾದ (ಪದ 31). ಸು. 1600.

ಪಲ್ಲವಿ॥ಜೆನ್ನಶ್ರೀಗುರುರಾಯ ನಿಮ್ಮಪಾದಂಗಳನು ।
ಮುನ್ನಲಜಿಸುತ ಬಂದೆಯೆನ್ನ ಭವಬಾಧೆಗಳ ।
ಜೆನ್ನಾಗಿ ಪರಿಹರಿಸಿ ಮನ್ನಿಸೆನ್ನಯ ಗುರುವೆ ನಿಮ್ಮ ಮಹೆಹೊಕ್ಕೆನಭವಾ ॥
ನೆಲೆದಪ್ಪಿ ಕುಲಗೆಟ್ಟು ಜಲವಲಿದು ತಲೆಯೆತ್ತಿ ।
ಒಲಭಂಗದೊಳು ನಿಂದು ಪುಲಿಸೊವಲನುಟ್ಟಂಗೆ ।
ಸಲಹೆಂದು ಕಾಡುವರೆ ಪರಮಮೂಢರ ಮೂಢ ನಾಚಿಕಿಲ್ಲೇನು ನಿನಗೆ ॥

ಶಬ್ದಾಗಮು. ಸು. 1600.

ಕನ್ನಡನಿಘಂಟು; ಕಂದರೂಪವಾಗಿದೆ. ಪ್ರತಿಪದ್ಯವೂ ಶಬ್ದಾಗಮದೊಳ್ ಎಂದು ಮುಗಿಯುತ್ತದೆ.

ಶ್ರೀಧರಮೆನೆ ಗಿರಿಯಕ್ಕುಂ । ಶ್ರೀಧರಮೆನೆ ಸಿಂಹಮಕ್ಕು ಸಿಂಗರಮಕ್ಕುಂ।
ಶ್ರೀಧರನುನೆ ಜಲಮಕ್ಕುಂ । ಶ್ರೀಧರನೆನೆ ವಿಷ್ಣುವಕ್ಕು ಶಬ್ದಾಗಮ
ದೊಳ್ ॥
ಶ್ರೀಧರಮೆನೆ ಕೊಳಮಕ್ಕುಂ । ಶ್ರೀಧರಮೆನೆ ಕೋಟಿಯಕ್ಕು ಕುಮುದ
ಮದಕ್ಕುಂ ।
ಶ್ರೀಧರಮೆನೆಯಜನಕ್ಕುಂ । ಶ್ರೀಧರನೆನೆ ಶಿವನದಕ್ಕು ಶಬ್ದಾಗಮದೊಳ್ ॥
ಆರಡಿಯೆನೆ ಮುಡಿಯಕ್ಕುಂ । ಆರಡಿಯೆನೆ ತುಂಬಿಯಕ್ಕುಮಾರಡಿ
ತುರಗಂ ।
ಆರಡಿಯೆನೆ ಗಿರಿಯಕ್ಕುಂ।ಆರಡಿಯೆನೆಯಹಿಯದಕ್ಕು ಶಬ್ದಾಗಮದೊಳ್ ॥

ಭಾರತನಿಘಂಟು. ಸು. 1600.

ಕಂದ 67. ಆದಿಯಲ್ಲಿ ಸರಸ್ವತೀಸ್ತುತಿ ಇದೆ. ಇದರಲ್ಲಿ ಕುಮಾರವ್ಯಾಸನು ಪ್ರಯೋಗಿಸಿರುವ ದೇಶ್ಯಶಬ್ದಗಳಿಗೆ ಅರ್ಥವು ಹೇಳಿದೆ.

ತಲ್ಲಣಮೆನೆ ಭಯಮಕ್ಕುಂ । ಹಲ್ಲಣಿಸಿತೆನಲ್ಕೆ ನಿಲ್ಲದೈದಿದುದಕ್ಕುಂ ।
ಭುಲ್ಲವಣೆಯೆನಲು ಪೆರ್ಚುಗೆ । ಘುಲ್ಲಣಿಯೆನೆ ಘಾತಿಯೆಂದು ತಿಳಿಗೆ ವಿದಗ್ಧರ್ ॥
ಕೊಳುಗುಳಮೆಂದೆನೆ ಕಾಳೆಗ । ಮಳವೆಂದೆನೆ ಸತ್ವಮುಂ ಸಮೀಪಮು ಮಕ್ಕುಂ ।
ತಳಪಟನೆಂದೊಡೆ ಬಯಲು । ಮ್ಮಳಮೆಂದೊಡೆ ದುಗುಡವೆಂದು ತಿಳಿಗೆ ವಿದಗ್ಧರ್ ॥

ಸಿದ್ಧೇಶ್ವರತ್ರಿಪದಿ. ಸು. 1600.

ಪ್ರತಿಪದ್ಯವೂ " ಸಿದ್ಧೇಶಾ ದಯವಾಗೋ " ಎಂದು ಮುಗಿಯುತ್ತದೆ. ಪದ್ಯ 40.

ಆಸೆಯ ದಾಸನಿಗೆ । ವೇಷದ ಚೋರನಿಗೆ । ಭಾಷೆಹೀನನಿಗೆ ದೋಷ ।
ಕ್ಕೀಡಾದವಗೆ । ಸೋಸಲ ಸಿದ್ಧೇಶಾ ದಯವಾಗೋ ॥

ಲೋಕಸ್ವರೂಪ (ಕಂದ 21). ಸು. 1600

ಶ್ರೀವರ್ಧಮಾನಜಿನರಂ । ಭಾವನಮಸ್ಕಾರದಿಂದೆ ವಂದಿಸಿ ಮುದದಿಂ ।
ಭಾವಕರಿಗಱಿಯೆ ಪೇಪೆ್ವಂ।ಪಾವನಲೋಕಸ್ವರೂಪಮಂ ಬುಧನುತಮಂ॥

ಉಪವಾಸಗಳು (ಗದ್ಯ). ಸು. 1600

ಭಾದ್ರಪದಮಾಸದ ಶುಕ್ಲಪಕ್ಷದ ಸಪ್ತಮಿಯ ದಿನದಲು ಉಪವಾಸಮಂ ಮಾಡುವುದು—ಇತ್ಯಾದಿ.

ನೀತಿಕಂದಶತಕ. ಸು. 1600.

ಮುದದೆಡೆಗೆ ದುಃಖದೆಡೆಗಂ । ಸುದತಿಯರ ವಿಯೋಗದೆಡೆಗೆ ಕೂಡಿ ರ್ದೆಡೆಗಂ ।

ಕದಡಿರ್ದ ಚಿತ್ತದೆಡೆಗಂ । ಪದಪಿಂದಂ ಬಂಧುವಲ್ತೆ ಸಾಹಿತ್ಯರಸಂ ॥
ಮಾನಿತಪದಮಂ ಪದಸಂ । ಧಾನಮನರ್ಥಪ್ರತೀತಿಯಂ ಕವಿಹೃದಯ ।
ಸ್ಥಾನಮನಱಿದೋದದೆ ಕ । ಣ್ಬೀನೆಯ ಕರಡಿಯವೊಲಱಿಚುವಂ ವಾಚ
ಕನೇ ॥

ನೀತಿಪದ್ಯಗಳು. ಸು. 1600.

ಪರಿಜನಫಲನತ್ಕ್ಷೀತ್ರೋ।ತ್ಕರಬಂಧುಜನಾಳಿ ಭವನಮಹಿಳಾವಳಿಯೆಂ ।
ಬುರುತರಪವರ್ಗಚಿಂತಾ । ತುರನಪವರ್ಗಪ್ರಚಿಂತೆಯಂ ಮಾಡುಗುಮೇ ॥
ಯಸ್ಮಾತ್ತಸ್ಮಾತೆಂಬೀ । ಕಶ್ಮಲದಿಂದಾದ ನಡಿಯ ಜಾಣ್ಮೆಗಳೆಲ್ಲಂ ।
ವಿಸ್ಮಯಕರ್ಣಾಟಕಳಾ । ರತ್ನಿಯ ರಜನೆಗಳ ಮುಂದದೇಂ ಸೊಗ
ಯಿಕುಮೇ ॥
ಹೆಣ್ಣಂ ತಲೆಗೇಱಿಸಿ ತಿರು।ದುಣ್ಣನೆ ಮುನ್ನೊರ್ವ ಮೂಱುಕಣ್ಣಿಸವಂ ಮು ।
ಕ್ಕಣ್ಣಂಗಾವಿದಿಯಳಿದಾ । ದಣ್ಣಂಗಳನಣ್ಣಿಕಲ್ಲನಾಡರೆ ಸತಿಯರ್ ॥
ಸುರಗಿ ಸುರಹೊನ್ನೆ ಸಂಪಗೆ । ಸರಸಿಜಮಿರೆ ಮದ್ದುಗುಣಿಕೆಗೀಶ್ವರ
ನೊಲಿವಂ ।
ಅರಸುಗಳುಂ ಕಾಂತೆಯರುಂ । ಹುರುಳಿಲ್ಲದವರ್ಗೆ ಕೂರ್ತರಿದು
ಸಿದ್ಧಾಂತಂ ॥
ಧನಮದು ನಗುವುದು ಲೋಭಿಯ । ತನಯನ ಮುದ್ದಿಸುವ ಸತಿಯನಸತಿ
ಯು ನಗುವಳ್ ।
ಅನುವರವಂ ಕಂಡಂಜುವ । ಜನಪತಿಯಂ ಮೃತ್ಯುದೇವಿ ನಗುವಳ್
ರಾಮಾ ॥

ಸಿದ್ಧೇಶ್ವರನ ತ್ರಿಪದಿ (ಪದ್ಯ 55). ಸು.1600.

ವರಗುರುಸಿದ್ಧೇಶ್ವರ । ನುರುತರ ಸ್ತೋತ್ರವನು।ಬರೆದರ್ಥವನು ಪೇಳಿ' ।
ಕೇಳಿದವರಿಗೆ । ಪರಶಿವನೊಳೈಕ್ಯವಿದು ಸಿದ್ಧಾಂತ ॥

ತುರಂಗಧಾಟಿ. ಸು. 1600.

ದುಂಡಕ. ಕೊನೆಯಲ್ಲಿ " ಶಾಂತವೀರೇಶದೇವ ಜಯಜಯಾ " ಎಂದಿದೆ.

ಸಕಲಸಾರ ಸಂಗ್ರಹ. ಸು. 1600.

ಪಳಿಕಿನ ಕೊಡನೊಳ್ ಸಹಜಂ|ಬೆಳಗುವ ಶಶಿಕಾಂತದೆಸೆವ ಬಿಂಬಾಕೃತಿ ತ|
ನ್ನೊಳಗೊಳಗೆ ತೊಳಗಿ ಬೆಳಗುವ । ಬೆಳಗಂ ನಿಜಮಾಗಿ ಕಂಡೊಡದು
ಪಿಂಡಸ್ಥಂ ॥

ಜಿನೇಂದ್ರಮಾಲೆ. ಸು. 1600.

ಜ್ಯೋತಿಷಗ್ರಂಥ; 150 ಕಂದಗಳಿವೆ. ಹಲವು ಕಂದಗಳು " ಜಿನಪದ
ಭೃಂಗ " ಎಂದು ಮುಗಿಯುತ್ತವೆ.

ಮೂಡಣದೆಸೆಯೊಳ್ ದಿನಪಂ|ನೆೞ್ದಿರೆ ತಾನಗ್ನಿಯಲ್ಲಿ ಮಂಗಳನಿರ್ಕುಂ|
ಕೂಡೆ ಬೃಹಸ್ಪತಿ ತೆಂಕಲ್ । ರೂಢಿಗೆ ನೈರುತ್ಯದಲ್ಲಿ ಬುಧ ಪತಿಸುಗುಂ॥
ನಿಂದಿರ್ದು ನಡೆದು ಮಲಗಿದ|ನೆಂದುದಕಾಯೇೞಿಜಿಲ್ಲಿ ನೇಸಿದ ಗ್ರಹದಿಂ|
ಸಂದಿರ್ದ ಪೂರ್ಣದೃಷ್ಟಿಯೊ । ಳಂದಱಿವುದು ಪಯಣಗತಿಯ ಜಿನಪದ
ಭೃಂಗಾ ॥

ರಾಜನೃಪಚರಿತೆ. ಸು. 1610.

ಸೂಜಿಯ ಮೊನೆಯ ತಾಗಿದ ಪಂಚರತ್ನ ವಿ । ರಾಜಿಸಿತಬಲೆಯರೆದೆಗೆ |
ಆಜಿರಂಗದೊಳಲಗಿನ ಮೊನೆ ತಾಗಿದ । ರಾಜನಿಗವನಿ ಮೋಹಿಪುಗು ॥
ಅಳುಕದೆ'ದೊಡೆ ಸಂಗರದೊಳು ಸಗ್ಗ|ಲಲನೆಯರುಗಳು ಮೋಹಿಪರು|
ಅೞಿ'ದನಾದೊಡೆ ನರಲೋಕಸಂಪದ ಬಂದು|ನೆಲಸುವುದಾತನಿಗೊಲಿದು ॥
ಧರೆಯ ವೈರಿಗಳ ಗರ್ವವ ಸುಟ್ಟು ಮೇಲಣ|ತರಣಿಬಿಂಬಕೆ ಧಾೞಿ'ಯಿಡುವ|
ನರಪತಿವಿಕ್ರಮಶಿಖಿಯೆನೆ ಪದರೇಣು । ಪರಿದುದಾಕಾಶಮಂಡಲಕೆ ॥
ಜಡಿವ ಖಡುಗ ಮಿಂಜು ಮೊರೆವ ವಾದ್ಯದ ರವ । ಗುಡುಗು ಕೂರ್ವಾಳ
ಹೊಯ್ಲುಗಳು ।
ಸಿಡಿಲು ನೆತ್ತರು ಮಱೆವನಿಯಾಗೆ ರಣಭೂಮಿ|ಪಡೆದುದು ಕಾರ್ಗಾಲವನು॥
ಪರಪೆಗುರುಳ ಕಿಱುವೆಱೆನೊಸಲಿನ ಮಿಗ । ವಱಿಗಣ್ಣತೊಳಪ ಕದಪಿನ |
ನೆಱೆವೆಱೆವೊಗದೇಱುಂಜವ್ವನೆಯರು ಬಂದು । ತುಱುಗಿಹರೋಲಗ
ದೊಳಗೆ ॥

ಬಟ್ಟವೊಗದ ಬಡನಡುವಿನ ನೈದಿಲ । ನಿಟ್ಟಿಸಲ್ಗಣ್ಣ ವೋಹಿಸುವ ।
ಇಟ್ಟಿಡೆವೊಲೆಯ ತೆಳ್ವಸಿಜಿನ ನೀಜೆಯು । ರಿಟ್ಟಣಿಸಿದರು ಜೆಲ್ವಿಂದ ॥

ಜಗದೇವರಾಯನ ಕಾವ್ಯ. ಸು. 1620.

ಚೆನ್ನಪಟ್ಟಣದ ದೊರೆಯಾದ ಜಗದೇವರಾಯನ ಸ್ತುತಿರೂಪವಾದ ಗ್ರಂಥ; ವೃತ್ತ 120. ಆರಂಭದಲ್ಲಿ ವಿಷ್ಣು, ಶಿವ ಇವರುಗಳ ಸ್ತುತಿ ಇದೆ.

ಭೂನಾಥಂ ಮಣಿಕಂಠಸದ್ವರದರಾಜಂ ನೋಡೆ ಚಿಂತಾಮಣಿ ।
ಸ್ಥಾನಂ ತಾರ್ಕಿಕರಕ್ಷಣಂ ಶಶಧರಾಸ್ಯಂ ನಾಡೆ ಸತ್ತರ್ಕಭಾ ॥
ಷಾನಂದಂ ಕಿರಣಾವಲೀಕ್ಷಣಪರಂ ಸದ್ಸರ್ಧಮಾಸೋದಯಂ ।
ತಾನಾದಂ ಜಗದೇವರಾಯಮಹಿಪಂ ಸತ್ಕರ್ಕಶಾಸ್ತ್ರೋದಯಂ ॥
ತಾಂ ಮೂಹ್ರಾಜುಡಿಯೆಯ್ದೆ ತನ್ನ ರಿಪುಗಳ್ ಭೂಲಂಘನಂ ಗೆಯ್ದುಪರ್ ।
ತಾನೊಂದಂಬನೆ ಬಟ್ಟೊಡಂದು ರಿಪುಗಳ್ ಸರ್ವಾಸ್ತ್ರಮಂ ಬಿಟ್ಟುಪರ್ ॥
ಪ್ರೇಮಂಬೆತ್ತು ವಸುಂಧರಾಸತಿಗೆ ತಾಂ ವ್ಯಾಣೇಶನಾಗಲ್ ರಿಪು ।
ಸ್ತೋಮಂ ನಾಕನಿವಾಸಿನೀಪತಿಗಳಾದರ್ ಭೂಪನೇಂ ವೀರನೋ ॥
ಧುರದೊಳ್ ಶ್ರೀಜಗದೇವ ನಿನ್ನ ವಿಜಯಪ್ರಸ್ಥಾನದೊಳ್ ವಾಜಿಸ ।
ತ್ಖುರಘಾತೋತ್ಥಿತಧೂಳಿಯಿಂ ಜಲಧಿಯೆಲ್ಲಂ ಒತ್ತಿ ವೋಗಲ್ ದಿಟಂ ॥
ಹರಿ ನಿನ್ನೀಮನದೊಳ್ ಕಟಾಕ್ಷರುಚಿಯೊಳ್ ಶ್ರೀಕಾಂತೆ ಹಸ್ತಾಗ್ರದೊಳ್।
ಸುರವೃಕ್ಷಂ ಖರಖಡ್ಗದೊಳ್ ವಿಷವಲಿಸ್ತ್ರೀಯೊಳ್ ತದೌರ್ವಾನಳಂ ॥

ಮಡಿವಾಳಯ್ಯಗಳ ತಾರಾವಳಿ. ಸು. 1650.

ಹಾಡಿನಂತಿದೆ; ನುಡಿ 27. ಅವ್ಯಂತಗಳಲ್ಲಿ ಒಂದೊಂದು ಕಂದವಿದೆ. ಮಡಿವಳವಾಚಯ್ಯನ ಸ್ತುತಿರೂಪವಾದ ಗ್ರಂಥ. ಈತನು ವೀರಭದ್ರಾವತಾರವೆಂದು ಹೇಳಿದೆ.

ವರವೀರಭದ್ರನುದ್ಭವಿಸಲತ್ತವರಿಗೆ ।
ದುರಿತ ದುಷ್ಕೃತದ ಸೂಚನೆಯ ಸ್ವಪ್ನಗಳಾಗೆ ।
ಅರುಣಕೋಟಿಗಳೊಗೆದಂತೆ ಪ್ರಜ್ವಲವಾಗೆ ।
ಸುರಸತಿಯರ ಕರ್ಣಪತ್ರವೋಸರಿಸುಗೆ ।
ಶರಧಿ ಘೂರ್ಮಿಸುವಂತೆ ಸಂಜೆ ಬೊಬ್ಬೆಗಳಾಗೆ ।

ಉರಿವ ನಗಾನುಗತವಾಗಿ ಕಾರ್ಪೊಗೆಯಾಗೆ ।
ಸುರಮನುಮುನಿಗಳು ಶವದಂತಾಗಲು ಮಿಗೆ ।
ಹರಿವಿರಿಂಚಿಗಳಿಗೆ ಹಮ್ಮು ಪಲ್ಲಟವಾಗೆ ।
ಹರುಷಗುಂದಲು ದಕ್ಷನಿಂತೆಂದನವರಿಗೆ ।
ಮರುಳೊಡನಾಡುವ ಮತಿಹೀನಗೊರವಂಗೆ ।
ಪೆಱತಂಜುವೆನೆ ಎಂದನು । ಆ ಸಮಯದಿ ಧುರಧೀರನೈತಂದನು ।
ದಕ್ಷನ ಸಿರವರಿದು ಹೋಮದೊಳಿಟ್ಟನು ।
ಪದ್ಮಾಕ್ಷನ ಸಿರವನು ಹಱಿಯಲೆಚ್ಚನು ।
ಭಾರತಿಯ ಮೂಗನರಿದು ಕರದೊಳಿತ್ತನು ।
ಪೂವಡಿಗನುರವ ತುಟಿ'ದು ಕುಲಿಲೆಂದು ಬೊಬ್ಬಿಱಿದನು ॥

ಗುರುಸ್ತೋತ್ರ. ಸು. 1650.

ಭಾಮಿನೀಷಟ್ಪದಿಯಲ್ಲಿ ಬರೆದಿದೆ ; ಪದ್ಯ 25.

ಲಿಂಗದೊಳು ನಡೆ ಲಿಂಗದೊಳು ನುಡಿ|ಲಿಂಗದೊಳು ಸಕಲಾಂಗಸಮರಸ
ಲಿಂಗದೊಳು ತನುಭಾವಕರಣಗಳೊಂದು ಹುರಿಯಾಗಿ ॥
ಲಿಂಗದೊಳು ಕೀಲಿಸಿದ ಕಂಗಳು । ಹಿಂಗದಿರೆ ನಿಜಮುಕ್ತಿಯೆನುತದ ।
ಱಿಂಗಿತವನೆನ್ನೊಳಗೆ ತೋಱಿದ ಗುರುವೆ ಶರಣಾರ್ತಿ ॥

ಉದ್ಧರಣೆಯವಾಚ್ಯ. ಸು. 1650.

ಶ್ರೀವೀರಶೈವಸಿದ್ಧಾಂತಸ್ಥಾಪನಾಚಾರ್ಯರಪ್ಪ ಆದ್ಯರ ಅನುಮತದಿಂದುದ್ಧರಿಸಿದ ಶಿವಲಿಂಗಾಂಗಸಂಬಂಧಪ್ರತಿಪಾದಕಾಗಮಗ್ರಂಥವಾಕ್ಯಂಗಳಿಂ ಕೆಲವು ವಚನಂಗಳಂ ಸಂಗ್ರಹಿಸಿದ ಉದ್ಧರಣೆಯ ಸಂಬಂಧ.

ಬಸವಲಿಂಗನಾವಮಾಷ್ಟೋತ್ತರ (ನುಡಿ 108). ಸು. 1650.

ಘೋರಪಾಪದೋಷಪುಂಜಕುಜಕುಠಾರ ಬಸವಲಿಂಗ ।
ಸಾರವೀರಶೈವಸಮಯಚಕ್ರವರ್ತಿ ಬಸವಲಿಂಗ ॥

ಮಾಯೆಯೆಂಬ ಬಲೆಗೆ ಸಿಲುಕಿ ಮರುಳನಾದೆ ಬಸವಲಿಂಗ ।
ಕಾಯೊ ಎನ್ನ ಕರ್ಮಗಳನು ಕಡೆಗೆ ಮೆಟ್ಟಿ ಬಸವಲಿಂಗ ॥

ಪಾರ್ವತೀಸ್ತುತಿ (ವಾರ್ಧಕಷಟ್ಪದಿ). ಸು. 1650.

ಪರಮೇಶ್ವರಿಯ ಪುಣ್ಯನಾಮವನು ಪಗಲಿರುಳು ।
ಸರಸಾನುರಾಗದಿಂದೋದಿ ಕೇಳಿದವರ್ಗೆ ।
ದುರಿತಕಂಟಕವಲಿ'ದು ಕೈಸಾರುತಿಹುವಮಳತರಭೋಗಮೋಕ್ಷಂಗಳು ॥

ಬಸವಸ್ತುತಿ (ನುಡಿ 31). ಸು. 1650.

ಧರಣಿಪತಿಯು ಓಲಗದೊಳು । ಶರಣನಾಗಮಯ್ಯ ಬರಲು ।
ಬೆರಳಿನಲ್ಲಿ ಹಾಲ ಕಪ್ಪೆದ ಬಸವ ಪಾಹಿ ಮಾಂ ॥
ವಿಷಮರೂಪುತಾಳಿ ಬಂದ । ವಿಷಮಧಾರಿ ಜಂಗಮಕ್ಕೆ ।
ಲೇಸಿನಿಂದ ಬಸವನೆದ್ದು ಶರಣುವಾಡಿದ ॥
ಚಿತ್ರರೂಪು ಜಂಗಮರ । ಪ್ರತಿಮೆಗಳಿಗೆ ಪ್ರಾಣವಿತ್ತು ।
ಅತಿಥಿಯಿಂದ ಬಸವ ಮನೆಗೆ ಕರೆದು ತಂದನು ॥

ಅಂಗಜಬೋಧೆ. ಸು. 1650.

ಕಾಮಶಾಸ್ತ್ರ; ಭಾಮಿನೀಷಟ್ಪದಿ, ಸಂಧಿ 9, ಪದ್ಯ 288. ಆದಿಯಲ್ಲಿ ಗಣೇಶ, ಶಿವ, ಮನ್ಮಥ, ಇವರುಗಳ ಸ್ತುತಿ ಇದೆ. ಹರ, ಗಿರಿಜೆ, ನಂದಿಕೇಶ್ವರ, ಭರತಾಚಾರ್ಯ, ಸೋಮೇಶ್ವರ, ಜಯಮಂಗಳ, ವಾಸವ, ವ್ಯಾಸಬೋಧ, ಸರಸಿಜಾಕ್ಷ, ಪುಷ್ಪದಂತ, ಹರಿಹಯ, ರತಿಗುಣಪತಾಕೆ, ಕಕ್ಕೊಕ್ಕ, ಪಾಂಚಾಲ, ನಾರಾಯಣ, ಸಿರಿಸುತ, ಸುರರು, ಮನುಗಳು, ಭೋಜರಾಜ, ಸೌಮ್ಯನರ, ದತ್ತಕ, ಕೂಚಿಮಾರ, ಶಶಭದ್ರ ಮೊದಲಾದ ಪ್ರಮಾಣಗಳನ್ನು ಅನುಸರಿಸಿರುವಂತೆ ಕವಿ ಹೇಳುತ್ತಾನೆ.

ಚಿತ್ತದಿಂಗಿತವರಿದು ಹರುಷವ । ನಿತ್ತು ಕರುಣಕಟಾಕ್ಷದಿಂದಲಿ ।
ಸತ್ಯಸಂತೋಷದಲಿಯಭಯವನಿತ್ತು ನಿಜಪತಿಗೆ ॥

ನಿತ್ಯಕೃತ್ಯದ ನಿಯಮದಲಿಯನು । ರಕ್ತಿಶಕ್ತಿಯನಿತ್ತು ಮನವೊ ।
ಚ್ಚತ್ತುಗೊಂಡನುಕೂಲೆಯಾಗಿಹ ಬಾಲೆ ಕುಲಯುವತಿ ॥

ನೀತಿವಾರ್ಧಕ. ಸು. 1650.

ತನ್ನ ಕಾರ್ಯಕ್ಕಾಗಿ ಪರರ ಕೆಡಿಸುವರೊಳಂ ।
ಭಿನ್ನವಿಲ್ಲದೆ ಭಾಷೆಕೊಟ್ಟು ತಪ್ಪುವರೊಳಂ ।
ಹೊನ್ನಾಸೆಗಾಗಿ ಮಹಿಹೊಕ್ಕವರ ಕಡಿಪರೊಳು ವಿಶ್ವಾಸ ಸಲ್ಲ ಕೇಳ್ಮೈ ॥
ಕಸ್ನಿಡೊಳಗಣ ಗಂಟ ಕೈನೀಡಿ ತೆಗೆವಂತೆ ।
ಸುಣ್ಣ ಪಾಯಸನೆಂದು ಸುರಿದುಂಬ ಮರುಳಂತೆ ।
ಯಿನ್ನಿವರೊಳೇನುಫಲ ದೊರೆಕೊಳ್ಳದೆಲೆ ಕುವರ ಕೇಳೆಂದ ಗುರುವರೇಣ್ಯ॥

ಶ್ರಾವಕಾಚಾರ. ಸು. 1650.

ಸಾಂಗತ್ಯ: ಪದ್ಯ 93. ಆರಂಭದಲ್ಲಿ ಶಾಂತೀಶ, ಸಿದ್ಧಾದಿಗಳು, ಸರಸ್ವತಿ ಇವರುಗಳ ಸ್ತುತಿ ಇದೆ ಸ್ತ್ರೀಯರಿಗೆ ಉಪದೇಶರೂಪವಾದ ಗ್ರಂಥ.

ಕೊಲೆ ಹುಸಿ ಕಳವು ಪರಾಂಗನೆ ಬಹುಕಾಂಕ್ಷೆ । ಪಲ ಮದ್ಯ ಜೇನ ತುಪ್ಪವನು ।
ಸಲೆ ಜೀವರಾಶಿ ಪಾಲ್ಮರದ ಫಲಂಗಳ । ನೊಲಿದು ಜೈನರು ಬಿಡಬೇಕು ॥
ಕಟ್ಟಿದ ಕರ್ಮದಿ ಹುಟ್ಟಿದ ದೇಹಕೆ । ತೊಟ್ಟನೆ ವ್ಯಾಧಿ ತೋಱಿದೊಡೆ ।
ಹೆಟ್ಟುಗೆ ಕಣಿಯರ ಮನೆಗೈದಿ ಸೇಸೆಯನಿಟ್ಟುಕೈಮುಗಿದು ಕೇಳುವುದೇ ॥
ಉತ್ತಮಕುಲಸತಿಯರು ನೀಚಕಣಿಯರಿ । ಗೆತ್ತಿ ಕೈಮುಗಿದಾಗ ತಮ್ಮ ।
ಉತ್ತಮವ್ರತಕತಿಚಾರ ಮತ್ತಾವುದು । ಮತ್ತೆ ದುರ್ಗತಿಗೆ ಕಾರಣವು ॥
ಗಟ್ಟಿಪಾವಡೆಯಲ್ಲಿ ಶೋಧಿಸಿದುದಕವ । ನೆಟ್ಟನೆ ತಂದು ಶುಚಿಯಾಗಿ ।
ಬಿಟ್ಟು ಜೀವಾಳಿಯ ಶುದ್ಧೋದಕದಿಂದ । ಹೆಟ್ಟುಗೆಯಡುಗೆಮಾಡುವುದು॥
ಮಕ್ಕಳಿಗೆಂಜಲಿಲ್ಲೆಂಬ ಮಾತನು ಮಾಡಿ । ಮಕ್ಕಳ ಒಳಲೆ ಕಟ್ಟಿಗಳ ।
ಮಿಕ್ಕ ಹಾಲೆಂಬಿವ ಮುಟ್ಟದೆ ಮಡಕೆಯನಿಕ್ಕಕೈದೊಳೆದು ಮುಟ್ಟುವುದು॥
ಮಕ್ಕಳ ತೊಡೆಯಮೇಲಿಟ್ಟು ಬೀಸಲು ಸತಿ । ಮಕ್ಕಳ ಕೈಕಾಲುಗಳು ।
ದೊಕ್ಕನೆ ಮುಟ್ಟುವುವೆಂದವ ಸಂತೈಸಿ । ಯಕ್ಕ ಸುದ್ದದಲಿ ಬೀಸುವುದು ॥

ಶುಕಸಪ್ತತಿ ಸು. 1650.

ಭಾಮಿನೀಷಟ್ಪದಿ; ಪದ್ಯ ಸುಮಾರು 3000. ಕೆಳದಿಯರಸರ ಕಾಲದಲ್ಲಿ ಹುಟ್ಟಿದ ಗ್ರಂಥ. "ಶುಕನಗ್ನಿಭೂಭುಜಗಜ.ಹಿದತಿಕೌಶಲ್ಯಕಥೆಯನು ನಿರಚಿಸುವೆನು" ಎಂದು ಕವಿ ಹೇಳುತ್ತಾನೆ.

ಜಡೆಮುಡಿಯ ನಡುವೆಡೆಯೊಳಡಗಿಹ | ಮಡದಿಯನು ಬಿಡದಡಿಗಡಿಗೆ ಘಡು।
ಘುಡಿಸಿ ಸಿಡಿಮಿಡಿಗುಟ್ಟುತೆದೆತೊಡೆಗಡರಿ ಜಡಿಯುತ್ತ ॥
ಮಿಡುಕಿ ಜಡಿಬಿಡಿಯಾಗಲಾಬಡ | ನಡುವಿನಬಳಿಯಮೃದುನುಡಿಯಲೊಡ।
ಬಡಿಸಿ ಕಡುಸೊಗಯಿತ್ತ ಮೃಡ ನಿಮ್ಮಡಿಗೆ ಪೊಡಮಡುವೆ ॥
ಗಂಧಸಿಂಧುರನಂದು ದಂದುಗ | ದಿಂದ ನೊಂದು ಮುಕುಂದ ಹರಿ ಗೋ।
ವಿಂದ ರಕ್ಷಿಪುದೆಂದು ವೊರೆಯಿಡಲೊಂದು ನಿಮಿಷದಲಿ ॥
ಬಂದು ನೆಗಟಿನು ಕೊಂದು ಪರಮಾ | ನಂದದಿಂದುದ್ಧರಿಸಿ ಬಕುತರ |
ತಂದೆಯೆನಿಸುವ ದೇವ ನಿಮ್ಮ್ಯಷ್ಟಿಗೆ ನಮೋ ಎಂಬೆ ॥

ಯಶೋಧರಸಾಂಗತ್ಯ ಸು. 1650.

ಸಂಧಿ 3, ಪದ್ಯ 338. ಇದರ ಕಥಾಸಾರವು ಪ್ರಥಮಸಂಪುಟದ (ತಿದ್ದಿದ ಮುದ್ರಣ) 332ನೆಯ ಪುಟದಲ್ಲಿ ಕೊಟ್ಟಿರುವಂತೆಯೇ.

ಸುರಪನ ವಜ್ರದ ಹತಿಗಂಜಿ ಗಿರಿಗಳು | ಪಿರಿದು ಬೇಗದೊಳೋಡಿಬಂದು |
ಶರಣುಹೊಕ್ಕುವು ಮಾರಿದತ್ತನನೆಂಬಂತೆ | ಕರಿಗಳೊಪ್ಪಿದುವು ಪೌಜನಲಿ ॥

ಜ್ಯೋತಿಷ (ಚಂಪು) ಸು. 1650.

ಪಶ್ಚಿಮದಿಶೆಯೊಳ್ ಕಂಪಿಸೆ | ನಿಶ್ಚಯ ಧರ್ಮಂಗಳೆಲ್ಲ ಕೆಡುವುದು ಲೋಕಂ।
ಅಶ್ಚರಿ ಡಾಮಂ ಬರ್ಕುಂ| ದುಶ್ಚರದೊಳ್ನಗರದುರ್ಗಕೆಡುವುದುನಿಜದಿಂ॥
ಬಿಲ್ಲುಪರಿವೇಷಪಡುವಲ್ | ಸಿಲ್ಲದೆಪೂರ್ವಾದ್ರಿಯೊಳಗೆಪಡಿಸೂರ್ಯಂಗಳ್|
ಬಲ್ಲಿತ್ತಗ್ನಿಯ ಮಿಂಚದು | ಮುಲ್ಲಸದಿಂ ತೋಜೆದಿವಸ ಮಚೆಸಂಪೂರ್ಣಂ॥

ನರಪಿಂಗಲಿಯ ನಿಮಿತ್ತ (ಗದ್ಯ) ಸು. 1650.

ಅನೆಮುಟ್ಟಲು ಅಮೃತಾನ್ನವನುಣ್ಬರು. ಕಾಗೆ ಮುಟ್ಟಲು ಯಮಲೋಕಕ್ಕೆ ಹೋಗುವರು—ಇತ್ಯಾದಿ.

ಸಂವತ್ಸರಫಲ ಸು. 1650.

ಕಾಳಯುಕ್ತಿಸಂವತ್ಸರಕ್ಕೆ ಮಟೆಬೆಳೆ ಘನಮಕ್ಕು, ಸೈರಣೆ ಸಂತೋಷಮಕ್ಕು; ಬಡಗಲು....ತೆಲಗು ರಾಜ್ಯಕ್ಕೆ ರಾಜಭಯದಿಂದ ಕೇಡಕ್ಕು, ಮಿಕ್ಕ ದೇಶಕ್ಕೆ ಲೇಸಕ್ಕು.

ಮೂರೇಳು ದೀಕ್ಷೆಯ ಪದ ಸು. 1650.

ವಾರ್ಧಕಷಟ್ಪದಿ; ಪದ್ಯ 21. ಆರಂಭದಲ್ಲಿ "ಗುರುಶಾಂತಮೂರ್ತಿ ಮೂರೇಳು ದೀಕ್ಷೆಯನಿತ್ತ ತೆಱನ ಪೇಳ್ದಿಪೆನು" ಎಂದಿದೆ. ಒಂದೊಂದು ಪದ್ಯದಲ್ಲಿಯೂ ಒಂದೊಂದು ವಿಧವಾದ ದೀಕ್ಷೆ ವಿವರಿಸಿದೆ.

ಭಿಕ್ಷಾಟನ ಚರಿತೆಯ ಟೀಕೆ. ಸು. 1650.

"ಭೂಮೀಶ್ವರನಾದ ಸತ್ಯಭಾಷಾಭೂಷಣನಾದ ಪ್ರತಾಪರಂಜಿತನಾದ ಭೂಲೋಕದೇವೇಂದ್ರ ಬಲ್ಲಾಳಪುರವರಾಧೀಶ್ವರ ಭೈರವಭೂಪಾಲನ ಭುಜಾದಂಡ ಶಿವಭಕ್ತಿವಾರ್ಧಿವರ್ಧನಪೂರ್ಣಚಂದ್ರ ಸೇನಾಧಿನಾಥ ಚಿಕ್ಕವೀರಭದ್ರಯ್ಯನು ಹೇಳಿಸಿದ ಭಿಕ್ಷಾಟನ ಚರಿತ್ರದ ವ್ಯಾಖ್ಯಾನ".

ಭುವನಕೋಶ (ಗದ್ಯ) ಸು. 1650.

ಗುರುಬಸವಧರ್ಮರೂಪನ । ಪರಮೇಶ್ವರನಾದಿಯಲ್ಲಿ ತ್ರಿಜಗತ್ಸೃಷ್ಟಿಯ।
ವಿರಚಿಸಿದ ವಿಧವ ಕೇಳ್ದನು। ನೆಱೆಮುದದಿ ಸನತ್ಕುಮಾರ ನಂದೀಶ್ವರನಂ॥

ಇಮ್ಮಡಿ ತಮ್ಮರಾಯ ಕೆಂಪರಾಯರ ಪದ. ಸು. 1650.

ಮಂಡಲಪತಿವೆಂಕಟರಾಯರ ಭುಜ । ದಂಡ ಸ್ವಾಮಿದ್ರೋಹರ ಗಂಡನೆನಿಪ
ಕಾ ।
ಲ್ಪಿಂಡೆಯವನಿಟ್ಟ ಚಿಕರಾಯನೆನಿಸಿಯೆ । ಕೊಂಡು ಇಮ್ಮಡಿತಮ್ಮ ಭೂಪ
ಸುಖದೊಳಿರ್ದು ।

ಖಂಡೇಂದುಧರನೆಡೆಗೈದಲಾತನರಾಜ್ಯ । ಭಂಡಾರ ಬೊಕ್ಕಸವಧಿಕಾನೆಕುದುರೆಯ ।
ತಂಡ ಮುಂತಾಗಿ ಎಲ್ಲವನು ಆ ಈ ಯಮಗೌಡ । ಲಂಡತನದೆ ಗ್ರಹಿಸಿದುಗರ್‌ಗಳ ಪ್ರ ।
ಚಂಡತೆಯಿಂ ಬಲಿಸಿ ತಾನಲ್ಲದೆ । ಗಂಡುಗಲಿ ಇಲ್ಲೆನಿಸಿ ಇರಲದ ।
ಕಂಡು ಕಡುಹುವೆರಸಿ ಆಕ್ಷಣದೆ ಮುಂ । ಕೊಂಡೆ ನೀ ರಾಜಕಾರ್ಯಕೆ ಮನವೆಳಸಿ ।
ಎಲಹಂಕನಾಡಪೆಯ ಕೆಂಪರಾಯಾ ॥

ಭೋಜನರಗಳೆ ಸು. 1650.

ಅನ್ನವನಿಕ್ಕುವ ಪುಣ್ಯಾತ್ಮಕನು । ವನ್ನಿಪುರದ ರಘುರಾಮ ರಕ್ಷಿಸಲಿ ॥

ಭಾರತ ಸಾವಿತ್ರಿ (ಗದ್ಯ) ಸು. 1650.

ಆರಂಭ—

ವೇದಾಂತದಲ್ಲಿ ನಿರ್ಣಯ । ಪಾದಂ ಜ್ಞಾನಂದಸುಗುಣನಿರ್ಗುಣದೊಳ್‌ಸಂ ।
ಪಾದಿಸಿದ ವಿಮಲಹರಿಮಹಿ । ಮೋದಧಿಯಂ ಭೀಷ್ಮನರ್ಥಿಯಿಂ ಕೀರ್ತಿಸಿದಂ ॥

ಭಾಗವಂತಿಗೆ ಹಾಡು ಸು. 1650.

ಕ್ಷಿತಿಯೊಳು ಕುಂತಣವಿಷಯದೊಳೊಪ್ಪುವ । ಪ್ರತಿಕೊಪಣದ ಜಂದ್ರಪ್ರಭರ ।
ಕೀರ್ತಿಯ ಕೀರ್ತನೆಯಭಿಷೇಕಕೆ ಮಾನಿನಿಯರೆ ಕೇಳಿ ಜಿನವಚನವನು ॥

ಶುಕಸಪ್ತತಿ ಸು. 1680.

ಭಾಮಿನೀಷಟ್ಪದಿ. ನಮಗೆ ದೊರೆತ ಅಸಮಗ್ರಪ್ರತಿಯುಲ್ಲಿ 38 ಸಂಧಿಗಳು (ಪದ್ಯ 1680) ಇವೆ. ಆರಂಭದಲ್ಲಿ ಗಣೇಶ, ಶಿವ, ವಿಷ್ಣು, ಬ್ರಹ್ಮ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಷಣ್ಮುಖ, ವೀರಭದ್ರ, ಸೂರ್ಯ ಇವರುಗಳ ಸ್ತುತಿ ಇದೆ.

ಉರಿಗೆ ತಪ್ಪವ ಹಾಕಿದಷ್ಟಕೆ । ಮರಳಿ ಹೇಗೆ ವಿಶೇಷವಹುದೋ ।
ಹುರುಳುಗೆಡಿಸುವ ಕಾಮದೊಡನೆ ಮನಸ್ಸು ವಿಶ್ರಸಲು ॥

ಭರದಿ ಪೆಚ್ಚುತ ಪೋಪುದಲ್ಲದೆ । ಪರಿಹರಕ್ಕವಕಾಶವಾವುದು ।
ಪರಮವೈರಾಗ್ಯದಲಿ ಮನವನು ನಿಲಿಸಬೇಕೆಂದ ॥
ಮನುಮಥನ ಸಿಂಗಾಡಿಯಂದದಿ । ಮಿನುಗುತಿರ್ಪುದು ಪುಬ್ಬು ಕರ್ಣಗ ।
ಳನುಪಮಶ್ರೀಕಾರಕೆಣೆ ತುಟಿ ಹವಳವೆನಿಸುವುದು ॥
ವನಜನೇತ್ರೆಯ ಕೊರಳು ಶಂಖದ । ನೆನಹಿಗೀಡಾಗಿಹುದು ಮಿಗೆ ಕಂ ।
ಪಿನ ಹೊಳಹ ಬೀಜುವುವು ಮೊಳೆಗೊಂಡಿರ್ಪ ದಂತಗಳು ॥

267ನೆಯ ಪುಟದಲ್ಲಿ ಹೇಳಿರುವ ಶಕಸಪ್ತತಿಯೂ ಇದೂ ಒಂದೇ ಗ್ರಂಥವಾಗಿದ್ದರೂ ಇರಬಹುದು.

ಶ್ರೀರಂಗಮಾಹಾತ್ಮ್ಯ (ಚಂಪು) ಸು. 1680.

ಶ್ರೀರಮಣೀಯಕಾಯನತಿತೀತಳಶೀಲಕೃಪಾಕಟಾಕ್ಷನಂ ।
ಭೋರುಹಸಂಭವಾನನಚತುಷ್ಟಯನಿಸ್ಸ್ಪೃತಸನ್ನುತಿಪ್ರಿಯಂ ॥
ಚಾರುಫಣೀಂದ್ರಭೋಗಶಯನಂ ಗರುಡಧ್ವಜನತ್ಯಪೂರ್ವಶೃಂ ।
ಗಾರರಸಾಕರಂ ಸಲಹುಗೆಮ್ಮನತಿಪ್ರಿಯರಂಗನಾಯಕಂ ॥

ಚಿಕ್ಕದೇವರಾಯಬಾವಪದ ಸು. 1680.

ವೈಸೂರು ದೊರೆಯಾದ ಚಿಕ್ಕದೇವರಾಯನ ಸ್ತುತಿರೂಪವಾಗಿದೆ.
ಅರಿರಾಯಗಿರಿವಜ್ರದಂಡನೆನಿಸುವನು ।
ಗರುವನಹ ದೇವರಾಜೇಂದ್ರನಾತ್ಮಜನು ।
ದೊರೆ ಚಿಕ್ಕದೇವರಾಜೇಂದ್ರನಿಷ್ಟವನು ।
ವರವಿತ್ತು ಲಕ್ಷ್ಮೀಯಾರಮಣ ರಕ್ಷಿಪನು ॥

ಕೃಷ್ಣಾರ್ಜುನರ ಕಾಳಗ. 1685.

ಭಾವನಿಸೀಷಟ್ಪದಿ ; ಸಂಧಿ 30, ಪದ್ಯ 1825.
ಆರಜನಿಂದೀಕೃತಿಯನಱಿಪುವ । ಹದನ ಭವಪುರಸದನಲಕ್ಷ್ಮೀ ।
ವದನಹಂದಿರನೆನಿಪ ಗೋಪೀನಾಥನೊಲಪಿಂದ ॥
"ಗುರುಚಿದಾನಂದಾತ್ಮನಂಘ್ರಿಯಲಿ" ಎಂದು ಒಂದು ಕಡೆ ಹೇಳಿದೆ.

ಮೌನೇಶ್ವರಬಾಲಲೀಲೆ ಸು. 1700.

ಭಾವನಿಸೀಷಟ್ಪದಿ ; ಅಧ್ಯಾಯ 6, ಪದ 310. ಆರಂಭದಲ್ಲಿ ಕಾಳಿ, ವಿಷ್ಣು, ಬ್ರಹ್ಮ, ಗಣೇಶ, ಸರಸ್ವತಿ ಇವರುಗಳ ಸ್ತುತಿ ಇದೆ. ವ್ಯಾಸ, ಮಲು

ಹಣ, ಹರಿಹರ, ನಿರಂಜನ, ಮಯೂರ, ಕಾಳಿದಾಸ, ಶುಕ ಈ ಕವಿಗಳ ಹೆಸರುಗಳು ಹೇಳಿವೆ. ಗ್ರಂಥದಲ್ಲಿ ಷೇಕ್, ಸೈಯದ್, ಪಟಾಕ ಎಂಬ ಹೆಸರುಗಳೂ ತುರುಕರ ಸಮಾಚಾರವೂ ಬರುತ್ತವೆ.

ಅಣುವಿನೊಳಗಣುವೆನಿಸಿ ತೋರ್ಪನೆ । ಗುಣನಿಧಿಯೆ ತನುವಿನೊಳು ತನುವಿನ ।
ಒಣಿತೆಯಲಿ ಕಾಣಿಸುತಲಿಹನೆ ಮಹಾಪ್ರಮಾಣದಲಿ ॥
ಗಣಿಸಿ ನೋಡೆ ಮಹತ್ತಿನಿಸಿ ಸ ! ನ್ಮಣಿಯೊಳಿಹ ಗುಣದಂತೆ ಪೊಳೆಯು ।
ತ್ರಿಣಿಕೆ ಮಾಳಿದನಂತವೇ ಕೇಳೈಕ್ಯಪರಬ್ರಹ್ಮ ॥

ಘಟ್ಟಿವಾಳಯ್ಯನ ಚರಿತೆ ಸು. 1700.

ವಾರ್ಧಕಷಟ್ಪದಿ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 3 ಸಂಧಿಗಳಿವೆ. ಆರಂಭದಲ್ಲಿ ಶಿವ, ಪಾರ್ವತಿ, ಗಣೇಶ, ವೀರಭದ್ರ, ಷಣ್ಮುಖ, ನಂದಿ, ಭೃಂಗಿ, ಜಂಡೇಶ್ವರ, ಮಹಾಕಾಳ ಇವರುಗಳ ಸ್ತುತಿ ಇವೆ. ಕವಿಯು ಗುರು ಚೆನ್ನ ಮಲ್ಲೇಶ.

ನಂಬಿದವರಂ ನಿಂಬಿಯೆಂಬುವರ್ ಮನಮೆಚ್ಚಿ ।
ಹಂಬಲಿಸುವರ್ ಬಾಯೊಳಾತ್ಮದೊಳ್ ನಿಷ್ಕರುಣ ।
ವುಂಬ ಉಮನಂಬರಕ್ಕಿಂಬು ತಪ್ಪಲ್ ಸುಯ್ಲು ಕಂಬನಿಯಕಷ್ಟೆಯುತ್ತಲಿ ॥
ಗುಂಭವೆಲ್ಲಂ ನಿಂಗಿ ಜೃಂಭಣದಿ ಸ್ವಾತ್ಮಪತಿ ।
ಯೆಂಬ ಭಾವನೆಬಿಟ್ಟು ಬಲೊವಾಪಿ ಮೂಢನಂ ।
ನಂಬು ಈತೆಜಿನಾದೆ ನರೆಜೊರೆಯ ಪುರುಷರಾ ತಂಬುಲವ ತಿನ್ನೆಂಬರೈ ॥
ವಿಜಯನೆಂಬರ್ ಪ್ರಾಯವಿರ್ದನ್ನೆಗಂ ಪತಿಯ ।
ಭಜನೆಗೈವರ್ ಉಣಿಸಿಯುಡಿಸಿಭೂಷಣಮಿಡಲ್ ।
ಸುಜನನೆಂಬರ್ ತಮ್ಮ ಪರ್ಣನೆಯ ಭಾವಿಸದೆ ಸುಮ್ಮನಿರ್ದೊಡೆ ಹಿಗ್ಗುತೆ ॥
ಮಜರೆಯೆಂಬರ್ ಮಾಜುವುತ್ತರಕೆ ಕನಲದಿರೆ ।
ಕುಜನನೆಂಬರ್ ಸತ್ಯವಂ ಕ್ಯವಾಡಲ್ ಮುಪ್ಪು ।
ರುಜೆಯೊಂದೆ ಮುದಿಪಾಪಿಯಜನೇಕೆನಿಲಿಸಿಹನೊತ್ಯಜಿಸೊಕಾಲನೆ ಎಂಬರೈ ॥
ದುರ್ಭವದ ಬಿತ್ತುಗಳ್ ಕೊರ್ಬುಳ್ಳ ಕತ್ತೆಗಳ್ ।
ಆರ್ಭಟದ ತೊತ್ತುಗಳ್ ನಿರ್ಭರದ ಕುತ್ತಗಳ್ ।

ಪರ್ಬಿದಘಸುಕ್ತುಗಳ್ ತಪ್ಪಿರುವ ಮಿತ್ತುಗಳ್ ಸರ್ಬದುರ್ಗುಣ ಗೊತ್ತು
ಗಳ್ ॥

ಉಬ್ಬಸದ ತಿತ್ತಿಗಳ್ ಹೆಚ್ಚುಳ್ಳ ತತ್ತಿಗಳ್ ।
ಮರ್ಬಿಡಿದ ಮೂರ್ತಿಯರ್ ಪರ್ಬಿದಪಕೀರ್ತಿಯರ್ ।
ಪೆರ್ಬೇಟಕಾರ್ತಿಯರ್ ಗರ್ಭಸುಖಮೂರ್ತಿಯರ್ ಒಬ್ಬರೊಶವಲ್ಲ ಕೇಳೈ ॥

ನಿರಾಳ ಗುರುಸ್ತೋತ್ರ. ಸು. 1700.

ಭಾಮಿನೀಷಟ್ಪದಿ: ಪದ್ಯ 35. ಹಲವು ಪದ್ಯಗಳು "ಗುರುವೆ ಶರಣಾರ್ತಿ" ಎಂದು ಮುಗಿಯುತ್ತವೆ.

ಒಡವನೆಡೆಯಾಡುತ್ತೆ ಭಾಗ್ಯವ । ನೆಡವುತಂ ಕಂಡಂತೆ ರೋಗಿಯು ।
ತಡಕುತಿರ್ಪೌಷಧಿಯು ಲತೆ ಕಾಳ್ಗೊಡರು ಕಾಣ್ಬಂತೆ ॥
ಒಡಲ ಪಸಿವಂಡಲೆವವನು ಪಾ । ಲ್ಗಡಲನಿದಿರೊಳು ಕಂಡವೋಲೆ ।
ನೊಸ್ಲೆಯ ಶ್ರೀಗುರುದೇವರಂಘ್ರಿಯಕಂಡು ಒದುಕಿದೆನು ॥
ಮನವೆ ಕ್ಷಣ ಪಾತಾಳಕ್ಕೆದುಗು । ಮನವೆ ಕ್ಷಣದೊಳು ಗಗನಕ್ಕೆ
ದುಗು ।
ಮನವೆ ಕ್ಷಣದೊಳಗಷ್ಟದೆಸೆಗಳ ಬಳಸಿ ಬಂದಿಹುದು ॥
ಮನವನೊಬ್ಬುಳಿಮಾಡಿ ನಿಂದಡೆ । ಘನಕೆ ಘನ ಮಹಲಿಂಗವೆನುತದ ।
ಅನುವನೆನ್ನೊಳು ತೋಱಿ ಸಲಹಿದ ಗುರುವೆ ಶರಣಾರ್ತಿ ॥

ಮುಕ್ತಿರಾಮೇಶ್ವರಶತಕ ಸು. 1700.

"ಮುಕ್ತಿರಾಮೇಶ್ವರನೇ" ಎಂದು ಮುಗಿವ ಕೆಲವು ಕಂದಗಳು ದೊರೆ
ಯುತ್ತವೆ. ಇವು ಎವುದಾದರೂ ಒಂದು ಶತಕಕ್ಕೆ ಸೇರಿದ್ದರೂ ಇರಬಹುದು.

ಹಾಪಿನ ವೊಗದೊಳ್ ಸುಧೆಯಂ । ಭಾವೆಯರೊಳ್ ಜೀವನೇಹಮಂ
ನಂಬುಗೆಯಂ ।
ಸೇವೆಯಲಿ ಸುಖವನೆಸವ । ಜೀವರು ಮರುಳುಗಳು ಮುಕ್ತಿರಾಮೇ
ಶ್ವರನೇ ॥
ಜೀವದಲಿಪೆಂಬುದದನೇ । ಸಾವೆಂದಲಂಜುವರು ಮನುಜರದು ಸಾವಲ್ಲಂ ।
ಸಾವೆಂಬುದಾವುದೈ ಪರ । ಸೇವೆಯೆ ನಿರ್ವಾಣ ಮುಕ್ತಿರಾಮೇಶ್ವರನೇ ॥

ಶಿವಾಷ್ಟಕ ಸು. 1700.

ಅಕಾಶಕೇಶಂ ಶಿರಪಾತ್ರಗೇಯುಂ ಲೋಕಾದಿವಂದ್ಯಂ ನಿಜಭಕ್ತಕಾಯಂ ।
ಏಕಾಕ್ಷರಂ ಪೀತಧರಾಬ್ಜದೇಹಂ ಸಾಕಾರದಿಂದೆನ್ನ ಕರಕ್ಕೆ ಬಂದಂ ॥

ಮಹಿಮಾಷ್ಟಕ ಸು. 1700.

ಅವಂಗೆ ವಿಷ್ಣು ಭಕ್ತನು । ಅವಂ ತಾನೀದ್ರವಂದ್ಯ ಬ್ರಹ್ಮಸ್ತುತನುಂ ।
ಅವಂಗೆ ಸುರರ ಒಲಗ । ದೇವಪರೂಪಾಕ್ಷಗಲ್ಲದುಲಿ'ದಗ್ಗಂಟೇ ॥

ಅಕ್ಷರಮಾಲಿಕೆ. ಸು. 1700.

ಕಂದ 56; ಪ್ರತಿಕಂದವೂ "ಗರಳಪುರೀಶಂ" ಎಂದು ಮುಗಿಯುತ್ತದೆ. ಅಕಾರದಿಂದ ಹಕಾರದವರೆಗೆ ಇವೆ.

ನಾನೆಂಬ ಹಸ್ಮನಿಂದವೆ ! ನಾನಾಸುಕೃತಗಳ ನೀಗಿ ದುಷ್ಕರ್ಮಗಳಂ ।
ತಾನಾರ್ಜಿಸುತ್ತೆ ಕೆಡುವರು । ದೀನರು ತ್ರೈಜಗದಧೀಶ ಗರಳಪುರೀಶಾ ॥

ಅಲ್ಲಮಪ್ರಭುವಿನಷ್ಟಕ ಸು. 1700.

ಶ್ರೀರಮಣನಿಂದ್ರಾದಿವಂದಿತಚರಣನಂ ಶುಭಕರಣನಂ ।
ಮಾರಮದಸಂಹಾರ ನಿರ್ಮಲಸೂರನಂ ಸುಧೀರಸಂ ॥
ಕಾರುಣಿಕಮಾಪಾತ್ಮಜನುತಜಗಪಾಲನಂ ದಯಶೀಲನಂ ।
ಧೀರಗುಣ ಗಂಭೀರಸಲ್ಲಮದೇವನಂ ಸುಖವೀವನಂ ॥

ನರಹರಿಭಕ್ತಿಸಾರ ಸು. 1700.

ಭಾಮಿನೀಷಟ್ಪದಿ; ಪದ್ಯ 1೦೫. ಕರಿಗಿರಿಯ (ದೇವರಾಯದುರ್ಗದ) ನರಹರಿಯ ಅಂಕಿತವಿದೆ. ಪ್ರಾಣೇಶಶತಕದಲ್ಲಿಯೂ ಇದೇ ಅಂಕಿತವಿರುವುದರಿಂದ ಆ ಗ್ರಂಥವನ್ನೂ ಈ ಗ್ರಂಥಕರ್ತನೇ ಮಾಡಿರಬಹುದು.

ಬಿಲ್ಲಹಬ್ಬಕೆ ನಲ್ಲಕೃಷ್ಣನ । ಮಿಲ್ಲಕಂಸನು ಕರಸೆ ಗೋಕುಲ ।
ದಲ್ಲಿ ಬಲಿ'ಕೆಲ್ಲರನು ಸಂತೈಸಗ್ರಜನು ಸಹಿತ ॥
ಸಲ್ಲಲಿತಚರಣದೊಳು ಕುಬುಜೆಯ । ಜೆಲ್ವ ರಕ್ಷಿಸಿ ಬಿಲ್ಲಬಾಗಿಲೆ ।
ದಲ್ಲಿ ಮಲ್ಲರ ಕೊಂದ ನರಹರಿ ರಕ್ಷಿಸನವರತ ॥

ಪ್ರಾಣೇಶಶತಕ.

ಧರೆಯ ಸುರುಳಿಯ ಸುತ್ತಿಕಕ್ಕಸದೊ । ಳಿಜುಕಿ ಜಾಜುವ ದುರುಳದೈತ್ಯನ ।
ತರಣಿಸಾಸಿರಕಿರಣಲಹರಿಯ ನಿಶಿತದಾಡೆಯೊಳು ॥
ಇಟ್ಟಿದು ಧರಣಿಯ ತಂದು ಹರಹಿದ । ಸುರರ ಪಾಲಕ ರಿಪುಕುಲಾಂತಕ ।
ದುರಿತದೂರ ವರಾಹಮೂರ್ತಿಯ ತೋಜೊ ಪ್ರಾಣೇಶಾ॥

ಧರ್ಮವ್ಯಾಧೋಪಾಖ್ಯಾನ ಸು. 1700.

ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಆರಂಭದಲ್ಲಿ ಗಣೇಶ, ಸರಸ್ವತಿ, ಕೃಷ್ಣ, ಈಶ್ವರ, ಪಾರ್ವತಿ, ವ್ಯಾಸ ಇವರುಗಳ ಸ್ತುತಿ ಇದೆ.

ಸರಸಕಲ್ಪನವೀಚಿವಿಸರದೆ । ಮೊಹೆವ ನಿಜಹೃದಯಾಂಬುನಿಧಿಯೋ ।
ವರಿಯೊಳುದಿತಚ್ಛನವೆಂಬ ಗಭೀರಮಂಥನದೆ ॥
ಪರಮಭಾರತವೆಂಬ ಸುಧೆಯಂ । ಭರದೆ ತೆಗೆದೀಜಗತಿಗರ್ಪಿಸಿ ।
ಹರಿಸವೊಂದಿಸಿ ಜಸದಿನೆಸೆವಾವ್ಯಾಸಮುನಿ ಪೊರೆಗೆ ॥
ನೆಲದೆ ಪಾತಿವ್ರತ್ಯಮಹಿಮೆಯ । ನಲಘುಜನನೀಜನಕಸೇವಾ ।
ಫಲಮನಱಿಯಿಪ ಧರ್ಮಸಾರದ ಮಹಿತಭಾರತದ ॥
ಲಲಿತಧರ್ಮವ್ಯಾಧಕಥೆಯನು । ಸುಲಭವೆನೆ ಕನ್ನಡದ ನುಡಿಗಳಿ ।
ನೊಲಿದು ನುಡಿವೆಂ ಭಾಮಿನೀಷಟ್ಪದಿಯ ವೃತ್ತದೊಳು ॥

ಆಸ್ಥಾನಜ್ಯೋತಿ (ಕಂದ 130) ಸು. 1700.

ಖುಲ್ಲರಕುಹಕರಕದನಕೆ । ನಿಲ್ಲದೆಹರಿವವರಕೊಂಡೆಯರ ದುರ್ಜನರಂ ।
ಒಳ್ಳಿದರೆಂದುಂ ಸಲಹಲು ! ಹಲ್ಲುಂಹದಿನಾಜ್ಞಹೋಹುದೆಂಬುದನಱಿಯಾ ॥
ಬಡತನದಲಿಬಂಧುಗಳಿ । ಪ್ಪೆಡೆಯಂ ಹೊಕ್ಕಿರ್ದು ಅಲ್ಲಿ ನಗೆಗೆಡೆಯಾಗದೆ ।
ಅಡವಿಯ ಸೊಪ್ಪಂ ತಿನ್ನು । ತ್ತೊಡಲಂಹೊರೆದಿಪ್ಪಸುಖಕೆಕಡೆಯೊದಲಿಲ್ಲಂ॥

ಪಾಂಡವರ ಚರಿತ್ರೆ ಸು. 1700.

ಹಾಡಿನಂತೆ ಕಾಣುತ್ತದೆ: ಸಂಧಿ 5, ಪದ 571. ಒಂದೊಂದು ನುಡಿಯೂ "ಶ್ರೀ ಜಾನಕೀವಲ್ಲಭಾ" ಎಂದು ಮುಗಿಯುತ್ತದೆ. ತಟ್ಟೆಯಕೆರೆಯ ರಂಗನ ಅಂಕಿತವಿದೆ. ಆರಂಭದಲ್ಲಿ ವಿಷ್ಣು, ಶಿವ, ಸರಸ್ವತಿ, ಗಣೇಶ ಇವರುಗಳ ಸ್ತುತಿ ಇದೆ.

ಕೇಳು ಕೇಳೆಲೊ ಕುಹಕ ಖಳ ಎನ್ನ ವಲ್ಲಭರು ।
ಕೇಳಿದರೆ ಬಿಡರು ನಿನ್ನ । ಮುನ್ನ ।
ಸದೆದುಸೀಳಿಬಿಡುವರುಬೇಡಕಾಣೊ। ಸಾರಿಹೋಲಿ'ದೆನುಕೆಡಬೇಡಮಾಣೊ ।
ಅಂತ್ಯಕಾಲಕೊದಗಿದ ಬುದ್ಧಿಯೇನೊ ।
ಪಾಪಿಬಯಲಾಸೆಗಾಗಸುವಲಿ'ಯದಿರೆಂದೆಂಬ ।
ಬಾಲಕಿಯೊಳಿಂತೆಂದನು । ತಾನು । ಶ್ರೀಜಾನಕೀವಲ್ಲಭಾ ॥
ಬಡಪಾಂಡವರನಡವಿಗೋಡಿಸಿದೆನೆಂದು ಎ ।
ನ್ನೊಡನೆ ಕೆಣಕಿದನೆ ಬಂದು । ಇಂದು ।
ಅಯ್ಯ ತೊಡೆವೆನಾತನ ಹಣೆಯಲಿಯ । ನೃಪನಪಡೆಯನಿಕ್ಕುವೆನು ರಣ ಬಲಿಯ ।
ಅವನ ಮಡದಿಮಕ್ಕಳ ತಹೆನು ನಿಜಯ ।
ನೆಂದು ಕಡುಗವಸು ಜಡಿದು ಕಮಲಾಕ್ಷಿಯರ ಮುಖನೋಡಿ ।
ಕುಡಿಮಾಸೆಯನು ತಿರುಹಿದ । ಉತ್ತರ । ಶ್ರೀಜಾನಕೀವಲ್ಲಭಾ ॥

ಕಾವ್ಯಸಾರ (ಪದ್ಯ 225) ಸು. 1700.

ಇಂದೆಂ ನಾಟ್ಯಮನಾಡೆ ಕಾಂತೆಯಮೊಗಂ ತತ್ಕಾಲದೊಳ್ ತೋರ್ಪುದಾ।
ಜಂಬೂವಜ್ಜಲಬಿಂದುವಜ್ಜಲಜವಜ್ಜಂಬಾಳವಜ್ಜಾಲವತ್ ॥
ಇಂಬಾಗಿರ್ದ ಸುಸೀಣೆಗಾನರನವಿಂ ಮಧ್ಯಸ್ಥನಾಪಾಂಗದಿಂ ।
ಜಂಬೂವಜ್ಜಲಬಿಂದುವಜ್ಜಲಜವಜ್ಜಂಬಾಳವಜ್ಜಾಲವತ್ ॥
ಕೈಸನ್ನೆದೋಜೆ ಜೆಲ್ವಿನ । ಮೈಸಿರಿಯಂ ಪೀಜೆ ವೈಸಿಕದೆ ವಿಟರಸುವಂ ।
ಕೈಸೆಪೆಗೊಳುತ್ತಿರಂಜಿಪು । ದೈಸರಳನ ಪಿಡಿಯತೆಜಿದೆ ಗಣಿಕಾನಿಕರಂ ॥
ತಿಜಿಕಲೊಲ್ಲಾಡುವಳಷ್ಟಶೈಲಕುಲವಂ ದಿಗ್ದಂತಿದಂತಂಗಳಂ ।
ನಿಜಿಕೈಯಿಕ್ಕಲೆದಾಡುವಳ್ ಮುಗಿಲಪೂವಂ ಸೂಡುವಳ್ ತಾರೆಯಂ ॥
ತಿಜಿವಳ್ತುತ್ತುಗಳೆಂದು ಚಂದ್ರರವಿಯಂ ಕಂಜೋಲೆಯೆಂದಿಕ್ಕುವಳ್ ।
ನಿಜಿಯಂ ಸುತ್ತುವಳೀಲಿವಾರ್ಧಿಚಯಮಂ ಶ್ರೀಕೀರ್ತಿರೇಚಾಂಕನಾ ॥
ನಂಬಿದವನಿವಂ ತನ್ನಂ । ನಂಬದೆ ಹಿಂಗಿರುವ ಮನುಜನಿವನೆಂದಱಿದುಂ ।
ಇಂಬಱಿದು ಸಲಹದರಸಿನ । ಡೊಂಬಾಟಕೆ ಮನವನಿತ್ತು ಕೆಡದಿರು ಮನುಜಾ ॥

ಲೆಕ್ಕದ ಚೌಪದ. ಸು. 1700.

ಗಿಣಿ ಗಿಡುಗ ಗಿಡವೊಂದಱೆಂ ಪಾಱುವಾಗ ।
ಗಿಣಿ ಕ್ಷಣಕೆ ಶತಕೊ್ರೀಶವನು ಪೋಗೆ ಬೇಗ ।
ಕ್ಷಣಕೆಯೊಂದೊಂದ ಹೆಚ್ಚುತ ಪೋಗಿ ಗಿಡುಗ ।
ಗಿಣಿವಿಡಿವುದೆನಿತುದಿನಕೆಂದು ನುಡಿ ಬೆಡಗ ॥
ಹಡಗು ಮೂಱನು ಕೊಂಡು ಹೋಹ ಮಾರ್ಗದಲಿ ।
ಯೊಡಲೊಳಿಡಿದೊಡವೆ ಭರವಾಯ್ತೊಂದಕಲ್ಲಿ ।
ಮಡಿದೆರಡಕವರನಿತ ಕೊಡುತ ಬರಲಲ್ಲಿ ।
ಕಡೆಗೆ ಮೂಹಸುಗೆಯಲಿ ಸಮುಮೂಱು ಸೊಲ್ಲಿ ॥
ಕಾಲಾಱು ಕಣ್ಣಾಱು ಬಾಲವೆರಡೇನು ।
ಜೋಲುವಾಕಿವಿ ನಾಲ್ಕು ತಲೆಮೂಱುದೇನು ।
ನಾಲಗೆಯು ನಾಲ್ಕು ಕೈ ನಾಲ್ಕಂತದೇನು ।
ಬಾಲಭಾಷೆಗಳಲ್ಲ ನುಡಿ ನಿಜವದೇನು ॥
(ಹೊಟ್ಟೆಗೆ ಹಾವಸುತ್ತಿ ಮೂಷಕವನೇರಿದ ವಿಘ್ನೇಶ)
ಮರದಿಂದ ಮುಱಿದು ಬಿದ್ದನ ಹಿಡಿದು ತಂದು ।
ಧರದಿಂದಲಾಕ್ಷಣದಿ ಚರ್ಮವನು ಸುಲಿದು ।
ಅರೆಬೆಂದು ನೊಂದವನನಂಗಡಿಗೆ ತಂದು ।
ಸರಸಜನರಾ ಕೈಗೆ ಬಾಯ್ಗೆ ಬರಲೆಂದು ॥
(ಅಡಕೆ)

ಬಿಳಿಗಿಯರಸರ ವಂಶಾವಳಿ (ಚಂಪು) ಸು 17೦0.

ಐಸೂರುಪಟ್ಟಣವನಾಳಿದ ಆಂಡಣ್ಣನಿಂದ ಬಸವಭೂಪಾಲನವರೆಗೆ ದೊರೆಗಳ ಚರಿತೆ ಹೇಳಿದೆ.

ಪರಮಜಲವಂತಧರಣೀ । ಶ್ವರಚೂಡಾರತ್ನ ಬಸವಭೂಪನಕೊರಲೊಳ್ ।
ಮುಱುಗಲ್ ಮುಕ್ತಾಹಾರಂ। ಪರನರಪರ್ಗ್ಗಾರ್ಯ್ಯು ನಿತ್ಯಮುಕ್ತಾಹಾರಂ ॥
ಕಂದನ ಮುದ್ದಿನಂತೆ ಕಡುವೊತಿಹ ಜಂಪಕವೃಕ್ಷದಂತೆ ಮಾ ।
ಕಂದದ ಪಣ್ಣಿಂತೆ ವಸುಧಾ.ಶ್ರಿತಶರ್ಕರೆಯೂಟದಂತೆ ಪೂ ॥

ರ್ಕೇಂದುಗಭಸ್ತಿಯಂತೆ ಯೆಳದೆಂಗಿನ ಪಾಲ್ಗುಡಿದಂತೆ ರಂಜಿಪುಂ ।
ಮುಂದರ ಸುಸ್ವರೋಕ್ತ ಬಸವನತೇಂದ್ರ ಸುಧಾಮಯ ವಾಕ್ಯದೀಪ್ಗೆ ತಾಂ॥

ರಾತ್ರಿಯ ನಲ್ಲನ ಪದ್ಯ (ಕಂದ 120) ಸು. 1700.

ಮೃಗಧರನ ಹಗೆಯ ವೈರಿಯ । ಹೆಗಲೇಱಿರ್ದವನ ಮಗನ ವೈರಿಯ ಗಿರಿಯಂ ॥
ನೆಗಪಿದನ ಪಗೆಯ ಭೃತ್ಯನ । ನಗೆಪೊಗಮಂ ಪೋಲ್ತನಕ್ಕ ರಾತ್ರಿಯ ನಲ್ಲಂ ।
(ಹನುಮಂತ)
ಒಂದೆರಡು ಪಥದಿ ನಡೆವಾ । ಸುಂದರಿಯಾತ್ಮಜನ ಪಿತನ ಮೋಹದ ಸುತ ನಂ ।
ಎಂದೆಂದಿಗಗಲದಿರ್ಪವ । ನಂದವ ನೆಪೆ ಪೋಲ್ತನಕ್ಕ ರಾತ್ರಿಯ ನಲ್ಲಂ ॥
(ಇಲಿ)

ಪಾರ್ಶ್ವತೀರ್ಥಂಕರರ ಪಂಚಕಲ್ಯಾಣ. ಸು. 1700.

ಭಾಮಿನೀಷಟ್ಪದಿ, ವಚನ ಇವುಗಳನ್ನು ಒಳಕೊಂಡಿದೆ. ಪ್ರಥಮಪದ್ಯ—
ಸರ್ವಗುಣದೊಳು ಜಿನನು ಹಿಡಿವುದು । ಸರ್ವರೊಳು ರತ್ನತ್ರಯಂಗಳು ।
ಉರ್ವಿಯೊಳು ಒಱಿಕುಂಟೆ ಗುಣಿಗಳು ಪಿಡಿವ ವಸ್ತುಗಳು ॥
. . ತಿರಲದು ವನದೊಳುಯ್ಯಲ । ಸರ್ವತೌರ್ಯತ್ರಿಕಸನೇತದಿ ।
ನುರ್ವಿಪತಿ ಜಿನದತ್ತನಾಡಿದ ಸರ್ವರೋಲೈಸೆ ॥
ಕೊನೆಯ ವಚನ—ಈ ವಿಧಿವೆ. ಪೆದು ಮುಕ್ತಿಗೆ ಸಂದ ಶ್ರೀಪಾರ್ಶ್ವದೇವರ ಯಕ್ಷಧರಣೇಂದ್ರನರಸಿ ದೇವಿಪದ್ಮಾವತಿಯ ವರಪುತ್ರ ಜಿನದತ್ತ ತ್ರಿವಿಧೈಶ್ವರ್ಯದಿಂ ಸುಖಮಿರ್ದನಂದು.

ಲೋಕಸ್ವರೂಪ (ಕಂದ 21) ಸು. 1700.

ಆಕಾಶಮಧ್ಯದಲ್ಲಿಹ । ಲೋಕಂ ಪದಿನಾಲ್ಕು ರಜ್ಜುವಗಲಮದೇಱುಂ ।
ಏಕಂ ಪಂಚಕಮೊಂದೆನೆ । ಯಾಕಾರಂ ವಾಯುತ್ರಯದಿನೊಪ್ಪುಗೆ ಲೋಕಂ ॥

ಹರಿಶ್ಚಂದ್ರ ಸಾಂಗತ್ಯ. ಸು. 1700.

ಸಂಧಿ 4, ಪದ್ಯ 549. ಆರಂಭದಲ್ಲಿ ವಿರೂಪಾಕ್ಷ, ಗಣೇಶ, ಶಾರದೆ ಇವರುಗಳ ಸ್ತುತಿ ಇದೆ.

ಉತ್ತಮವಾದ ಕುಲದ ಹರಿಶ್ಚಂದ್ರನ । ಭಕ್ತಿಯ ಕೃತಿಯ ಪೇಳುವೆನು ॥

ಭಾವಾರ್ಥಶತಕ ಸು. 1700.

ಒಗಟಿಯ ರೂಪವಾದ ಕಂದಗಳು. ಚೆನ್ನಕೇಶವಸ್ತುತಿ ಇವೆ.

ಧರ್ಮಗುಪ್ತ ಚರಿತೆ ಸು. 1700.

ಹಾಡುಗಳು ; ಆಶ್ವಾಸ 11 ಪಂಚಾಕ್ಷರಿ, ಶಿವರಾತ್ರಿ ಮುಂತಾದುವುಗಳ ಮಹಿಮೆ ಹೇಳಿದೆ. ಕವಿ ಷಡಕ್ಷರ ದೇವನನ್ನು ಸ್ಮರಿಸುತ್ತಾನೆ.

ಸುಗಂಧಪಾರಿಜಾತ (ಕಂದ 64) ಸು. 1700.

ಪರಿಪಕ್ವಮಾಕುಲುಂಗೋ । ತ್ಕರಮಂ ಪೊಱಗಾಗಿ ಮಾಡಿ ಪುಟದಿಂಸುಡೆ ಓಂ ।
ಧುರಗಂಧಂ ಪೆರಡೆ ಕ । ಪ್ಪುರಮಾಸುವಡೆದು ಲೇಸನಿಸಿ ತಾನಿರ್ಕುಂ (?) ॥

ಪ್ರಶ್ನಚಿಂತಾಮಣಿ (ಗದ್ಯ) ಸು. 1700.

ಈ ಗಂಡಹೆಂಡಿರು ಸುಖದಲ್ಲಿ ಇದ್ದಾರು. ಈ ಭೂಮಿ ಸಾಲಾವಳಿಯುಂಟು ಲೇಸು.—ಇತ್ಯಾದಿ.

ಪಂಚಾಕ್ಷರಿಯ ಪ್ರಣಮಂಗಳು (ಗದ್ಯ) ಸು. 1700.

ಪಂಚಾಕ್ಷರಿಯೆ ಪರಮೇಶ್ವರನು ; ಪಂಚಾಕ್ಷರಿಯೆ ಪರತತ್ವವು ; ಪಂಚಾಕ್ಷರಿಯೆ ಪರಮಯೋಗವು ; ಪಂಚಾಕ್ಷರಿಯೆ ಪರಂಜ್ಯೋತಿ ; ಪಂಚಾಕ್ಷರಿಯೆ ಪಾಪಾಂತಕನು. ನ ಎಂಬ ಅಕ್ಷರವೆ ದೇವರ ಚರಣ ; ಮ ಎಂಬ ಅಕ್ಷರವೆ ದೇವರ ಒಡಲು—ಇತ್ಯಾದಿ. ಮತ್ತೆ ನ ಎಂಬ ಅಕ್ಷರವೆ ಪೃಥ್ವಿ ; ವ ಎಂಬ ಅಕ್ಷರವೆ ಅಪ್ಪು—ಇತ್ಯಾದಿ.

ರುದ್ರಭಾರತ (ಗದ್ಯ) ಸು. 1700.

ರುದ್ರ ನಂದಿಕೇಶ್ವರ ಸಂವಾದ ರೂಪವಾಗಿದೆ. ಮೂಲತತ್ವವು ಹೇಗೆ ನಿರ್ಮಿತವಾಯಿತು ? ಪಂಚಪ್ರಣವಗಳು ಹೇಗೆ ಉದ್ಭವಿಸಿದುವು ? ಚರಾಚರ ಗಳು ಹೇಗೆ ಜನ್ಮಿಸಿದುವು ? ಇತ್ಯಾದಿ ಪ್ರಶ್ನೆಗಳಿಗೆ ಶಿವನ ಉತ್ತರಗಳು ಹೇಳಿವೆ.

ಇಂದ್ರರು ಆದಿರುದ್ರನ ಹೆಬ್ಬರಳಿನಲ್ಲಿ ಹುಟ್ಟಿದರು. ಅವರ ನಾಮ ಮಘವರ್ಣ, ಹರಿಹಯ ಇತ್ಯಾದಿ. ಇಂದ್ರಂಗೆ ಐರಾವತ ಬಿಳಿಯಾನೆ ವಾಹನ, ಪರುಷವಣ್ಣದ ಕಲ್ಲು, ಸಿದ್ಧರಸವೆ ಜಲನಿಧಿ, ವಜ್ರವೆ ಆಯುಧ, ಕಾಮಧೇನು ವಿನ ಹಿಂಡು, ಕಲ್ಪವೃಕ್ಷದ ವನ, ತವನಿಧಿ, ಚಿಂತಾಮಣಿಯ ಮೊಱಡಿ, ರಂಭೆ, ಊರ್ವಶಿ ಚಿತ್ರಾಂಗಿ ಮೇನಕೆ ತಿಲೋತ್ತಮೆ ಇಂತು ಪಂಚ ನೃತ್ಯದ ಸ್ತ್ರೀಯರ ಮಿಂಡ ಶಚಿಯ ಗಂಡ, ಅಮೃತದ ಬಾವಿ, ಬೃಹಸ್ಪತಿ ಪ್ರಧಾನಿ, ವಿರಿಂಚಾದಿಗಳ ಮೇಳ.

ಸಹಸ್ರಗಣ ನಾಮಮಂತ್ರಾವಳಿ (ಹಾಡು) ಸು. 1700.

ಪಾಡಿ ಶರಣರು ಪಾಲ್ಕುರಿಕೆಸೋಮೇಶನತ್ಯಾ | ಡಂಬರದ ಗಣಸಹಸ್ರನಾ
ಮವಂ ॥

ಆಯಿ ಕ (ಗದ್ಯ) ಸು. 1700.

" ನಿತ್ಯದಲ್ಲಿಯೂ ಅರುಣೋದಯಾರಭ್ಯವಾಗಿ ರಾತ್ರಿಯಲ್ಲಿ ನಿದ್ರೆಮಾಡುವ ಪರ್ಯಂತ ಮಾಡಬೇಕಾದ ಕಾರ್ಯಗಳು " ಹೇಳಿವೆ.

ಧ್ರುವ ಚರಿತ್ರೆ ಸು. 1700.

ಉದಯರಾಗ. ವಾರ್ಧಕಷಟ್ಪದಿ, ಪದ್ಯ 18.

ಗಳದ ರೇಖೆಯ ಕಂಬುಕಂಧರವ ಜಂದಿರನ |
ತೆಱದ ಮೊಗದೋಜೆಯಂ ಸರಸಿಜಸಿರಾಜಿಯಂ |
ಕಿಱುನಗೆಯ ವದನಮಂ ನಿಗಮಾದಿಸದನಮಂ ಎವೆಯಿಕ್ಕದೀಕ್ಷಿಸಿದನು ॥
ಕಿಱುಡೊಳ್ಳಿನುದರಸುಳಿ'ನಾಭಿಯಂ ಶೋಭೆಯಿಂ |
ಧರದೊಳೊಪ್ಪುವ ತಿವಳಿಯಂದಮಂ ಚೆಂದಮಂ |
ಶರದಭ್ರದಂತೆಸೆವರಸ್ಥಲದೊಳಿಹ ಸಿರಿಯ ಶೋಭೆಯಂ ಕಂಡನಂದು ॥

ಗುಂಡಬ್ರಹ್ಮಯ್ಯನ ಸುವ್ವಿ ಸು. 1700.

ಹರನು ನಾರದನು । ಧರೆಗೆ ಕಳ್ಳರಾಗಿ । ಪುರವೋರಗಲ್ಲ ಗಣಪತಿರಾಯನ ॥

ಸಿರಿಯ ಕಬ್ಬೊಯ್ದ ಕಥೆಕೇಳಿ ॥

ಕೃಷ್ಣಕಥೆ ಸು. 1700.

ವಾರ್ಧಕಷಟ್ಪದಿ ; ಸುಮಾರು 2500 ಪದ್ಯಗಳಿರುವಂತೆ ತೋರುತ್ತದೆ ಸಂಧಿಗಳ ಕೊನೆಯಲ್ಲಿ ವೆಂಕಟಕೌರಿ ಎಂಬ ಅಂಕಿತವಿದೆ.

ಕರವೀರನಗರದಿಂ ಬರ್ಪ ಪಥದಲ್ಲಿ ಸಂ ।
ಹರಿಸಿ ಮಗಧನ ಸೈನ್ಯಮಂ ದ್ವಾರವತಿಯ ನೆಱೆ ।
ವಿರಚಿಸಿ ಯಶೋದೆಜಂ ಮುಚುಕುಂದನಿಂ ಕಾಲಯವನನಂ ಕೊಲಿಸಿ ಮೆಱೆದಂ ॥

ವಿರೂಪಾಕ್ಷನೀತಿ (ಕಂದ 56) ಸು. 1700.

ರುಜೆಯುಂ ಪಱಿವನೆ ವೈದ್ಯಂ । ಗಜಗಮನದಿ ರಣವ ಪೊಕ್ಕು ಜಯಿಪನೆ ವೀರಂ
ಭುಜಗಾಭರಣನೆ ದೈವಂ। ಪ್ರಜೆಗಳ ಪಾಲಿಪನೆ ಅರಸು ಶ್ರೀವಿರೂಪಾಕ್ಷ ॥

ವಿನಾಯಕ ಸ್ತೋತ್ರರಗಳೆ ಸು. 1700.

ಮೋದಕವುಂಡಲಿಗೆ ಹೂರಣಗಡುಬು । ಸೇವಗೆ ಸೂಸಲು ದೋಸೆ ಹೊಯ್ಗಡುಬು ।
ಹಾಲು ಮೊಸರು ಪಾನಕ ಪನ್ನೀರು । ಫಾಲನಯನಸುತಗರ್ಪಿಸುತಿಹರು ॥

ಕಪೋತಪಕ್ಷಿಚಾರಿತ್ರ ಸು. 1700.

ಸಾಂಗತ್ಯ; ವದ್ಯ 120. "ಗುರುಸಿದ್ಧವೀರನ ಚರಣವ ಬಲಗೊಂಬೆ" ಎಂದು ಹೇಳಿದೆ.

ಗಂಗಾಗೌರೀ ಸಂವಾದ ಸು. 1700.

ಯಕ್ಷಗಾನದಂತಿದೆ. ಆರಂಭದಲ್ಲಿ ಹೀಗೆ ಹೇಳಿದೆ.

ಕಲ್ಯಾಣವೆಂಬ ಪಟ್ಟಣದಲ್ಲಿ ಪರಮಜ್ಞಾನಶಕ್ತಿಯಹ ನೀಲಲೋಚನೆ ತನ್ನ ಪುರುಷ ಬಸವೇಶ್ವರದೇವರಿಗೆ ಬಿನ್ನಹಂಮಾಡಿ ಪೇಳ್ದಿ ಗಂಗಾಗೌರೀ ಸಂವಾದದ ಶ್ರವಣದ ಸಾಂಗತ್ಯ-

ಸಪ್ತರ್ಷಿವಾಕ್ಯ ಸು. 1700.

ಅಂತ್ಯದಲ್ಲಿ " ಮಹಾಭಾರತ ಅನುಶಾಸನಿಕಪರ್ವದ ಇತಿಹಾಸ ಸಮುಚ್ಚಯದೊಳ್ ಸಪ್ತರ್ಷಿಸಂವಾದ ಸಮಾಪ್ತ " ಎಂದಿದೆ.

ಚೂಡಿಕುಡುತ್ತ ನಾಚ್ಚಾರ್ ವಿವಾಹ ಸು. 1700.

ಯಕ್ಷಗಾನ

ರಾಜಗೋಪಾಲಮುನಿಪದರಾಜೀ ಕೆ ಭೃಂಗನಾಗಿ ರಂಜಿಪ ಕೃ . . .
. . . ದೊಳಚಿ ಸಿದೆನು ಕವಿರಾಜರಹುದೆನಲು ರಂಗರಾಜನ ಭಜಕಂ ||

ಗಂಗಾಗೌರೀ ಸಂವಾದ. ಸು 1700.

ಕೊನೆಯಲ್ಲಿ

ಗುರುರೇವಣಾಚಾರ್ಯನೊರೆದು ನೂರೊಂದನಿಗೆ |
ಹರ ಮೆಚ್ಚಿ ಯಿಷ್ಟಾರ್ಥವನೀವ | ತಿರಿಕೆಕಲಹ ಬೇಡವೆಲೆ ಗರ್ವ ನಿನಗೆ ||

ಅಲ್ಲಮಪ್ರಭು ಸಂಗೀತಪದ. ಸು. 1700.

ಅಲ್ಲಮಪ್ರಭುಲಿಂಗನ ಅನುಪಮದಿಂದಿರ್ಪ ಐದುಲೀಲೆಯ |
ಬಲ್ಲಷ್ಟು ಪೇಳುವೆನಧಿಕಹರ್ಷದಿಂದ ಕೇಳಿ ನೀವು ||

ಸೂಳೆಯ ಕೆರೆಯ ಸಾಂಗತ್ಯ ಸು. 1700.

ಸಂಧಿ 3, ಪದ್ಯ 350. ಆರಂಭದಲ್ಲಿ ಹೊನ್ನಾಳಿ ಚೆನ್ನಬಸವನ ಸ್ತುತಿ. ಇದೆ.

ಬಲ್ಲಿದ ಕಂತೆಯ ಸಿದ್ಧನ ಕೃತಿಯನು | ಸೊಲ್ಲಿಸಿದೆನು ಬಲುನೀತ ||

ವೈದ್ಯಸಾರ ಸು. 1700.

ಕುಂಬಳಕ ಬೀರನರೆದು ನಿಂಬೆಯ ಕಾಯಷ್ಟು ಸಕ್ಕರೆಯ ಹಾಕಿ ಹಸಿಯ ಹಾಲೊಳಗೆ ಹನ್ನೊಂದು ದಿನಂ ತೆಗೆದುಕೊಳೆ ಮೊಲೆಹಾಲು ಒರುವುದು.

ಕುಶಲಪ್ರೋಪಾಖ್ಯಾನ (ಗದ್ಯ) ಸು. 1700.

ಸಂಸ್ಕೃತ ಜೈಮಿನಿಭಾರತದಲ್ಲಿರುವ ಕುಶಲವರ ಕಥೆ ಕನ್ನಡದಲ್ಲಿ ಬರೆದಿದೆ.

ಉತ್ತರಗೀತಾಟೀಕೆ ಸು. 1700.

ಕೊನೆಯಲ್ಲಿ—ಇತಿ ಉತ್ತರಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಕರ್ಣಾಟಕಭಾಷಾವಿರಚಿತೇ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ— ಎಂದಿದೆ. ಅಧ್ಯಾಯ 3.

ಆರಂಭ—ಭಗವದ್ಗೀತೆಯಲ್ಲಿ ತತ್ಪದಾರ್ಥವಾದಂಥ ವಾಚ್ಯಾರ್ಥವನು ಮನೋವಿಕ್ಷೇಪದಿಂದ ಮಾಡಿ ಅರ್ಜುನನು ಶ್ರೀಕೃಷ್ಣ ದೇವರ ಕೂಡಿತು ಬಿನ್ನಹಂಮಾಡಲಾಗಿ ಉತ್ತರಗೀತೆಯಿಂದ ನಿರೂಪಿಸಿದ ಅರ್ಥವನು ಕನ್ನಡಿಸಿ ನಿರೂಪಿಸಿದರು.

ಶಂಕರ ರಾಮಾಯಣ ಸು. 1700.

ಭಾಮಿನೀಷಟ್ಪದಿ; ಸಂಧಿ 47, ಪದ್ಯ 3300. ಬ್ರಹ್ಮನು ನಾರದನಿಗೆ ಉಪದೇಶಮಾಡಿದ ರಾಮಾಯಣ ಕಥೆಯನ್ನು ಈಶ್ವರನು ಪಾರ್ವತಿಗೆ ರಾಮತಾರಕ ಮಂತ್ರದ ಮಾಹಾತ್ಮ್ಯವನ್ನು ತಿಳಿಸುವುದಕ್ಕಾಗಿ ಹೇಳಿದಂತೆ ತಿಳಿಯುತ್ತದೆ. ಆರಂಭದಲ್ಲಿ ರಾಮ, ಶಿವ, ಬ್ರಹ್ಮ, ವಿನಾಯಕ, ಸರಸ್ವತಿ ಇವರ ಸ್ತುತಿ ಇದೆ. ಪೂರ್ವಕವಿಗಳಲ್ಲಿ ವ್ಯಾಸ, ಕಾಳಿದಾಸ, ವಾಲ್ಮೀಕಿ, ದಂಡಿ, ಮಯೂರ, ಬಾಣ, ಧನಂಜಯ ಇವರುಗಳ ಹೆಸರು ಹೇಳಿದೆ.

ಪಟ್ಟಣ.

ಪುರದ ಭಾಗ್ಯ ಶ್ರೀಯು ಜನ್ಮಾಂ । ಶರವು ಶ್ರೀಹರಿ ಚರಣಕಮಲವ ।
ಸಿರದೊಳಾಂತಿಹೆನೆಂದು ತನ್ನಿಷ್ಟಾರ್ಥದೇವತೆಯ ॥
ಪರಕೆಗಾಗಿಯೆ ಸೊಪ್ಪಿನುಡುಗೆಯ । ಧರಿಸದಳೊ ಎಂಬಂತೆ ಪಟ್ಟಣ ।
ಪರಿವಿಡಿಯೊಳುದ್ಯಾನ ಪರಿವೇಷ್ಟಿಯಲಿ ವೆಸೆದಿಹುದು ॥

ವಿಷ್ಣುವಿನ ಹಡಪಿಗ.

ಪೂಗಫಲವನು ಹೆಚ್ಚು ಕುಂದುಗ । ಳಾಗದಂದದಿ ಭೇದದೆಂಟಱ ।
ಭಾಗವನು ಸರಿಮಾಡಿಯುದ್ಧಿಯೆ ಪರಿಮಳಂಗಳಲಿ ॥
ಭೋಗಿಭರಣಿಯತುಂಬಿಕಪ್ಪುರ । ನಾಗವಲ್ಲಿಯ ಹಿಂದುಮುಂದನು ।
ನೀಗಿಯಿದ್ದೆಸೆಯೆತ್ತಿ ಸಂಬಳಿಗೆಯಲಿ ಅಳವಡಿಸಿ ॥
ಒಡೆಯತನ್ನಯ ನೀರಜಾಕ್ಷ್ಯದ । ಕಡೆಯಸೀಕ್ಷ್ಮಿಸಿಯೆಲೆಯ ಘಳಿಗೆಯ ।
ಮಡಿದು ನೀಡುತ ಹಿಂದುಹಿಂದಕೆ ಒಯ್ಯನೋಸರಿಸಿ ॥
ಕಡೆಗಿಡಿದು ಕಂಗಳಲಿ ಒಡೆಯನ । ಬಿಡದೆನೋಡುತ ಸನ್ನೆಯಲಿದಿಹ ।
ಹಡಪದೂಟಿಗ ವರದನೆಂಬುದಗಾಯ್ತು ಕೈವಶವು ॥

ಮದುವೆಯಾಗೆಂದು ಹೇಳಿದ ಶಿವನಿಗೆ ಗಂಗೆಯ ಉತ್ತರ.

ಗಿರಿಯ ತುದಿಯಿಂ ಬೀಳಲಾಪರು । ಉರಿಯತೃಣಕೆಸಮಾನವೆಂಬರು ।
ಹರಿವ ಹೊಟೆಯನು ಲೆಕ್ಕಿಸರು ಶಾರ್ದೂಲಸಿಂಹಗಳ ॥
ಭರವಸಕೆ ಕಂಗೆಡರು ಸತಿಯ । ಸ್ಮರಣೆಯೆಂದರೆ ಜ್ವಾಲೆ ಮೈಗಾ ।
ವರಿಸಿದಂದದಿ ತಾಳಲಾಱರು ಭಾಮೆಯರು ಜಗದಿ ॥

ರಾಜಸಂಗೀತ. ಸು 1710.

ಮೈಸೂರು ದೊರೆಯಾದ ಚಿಕ್ಕದೇವರಾಜನ ಮಗ ಕಂಠೀರವರಾಜನ (1704-1713) ಸ್ತುತಿರೂಪವಾದ ಹಾಡುಗಳು.

ಪಂಡಿತೋತ್ತಮಜನಮನೋಮತಿ ಪುಂಡರೀಕವಿಕಾಸವಿಕಸಿತ ।
ಚಂಡಕರ ರಿಪುಶರಭತತಿಭೇರುಂಡ ಬಿರುದಂತೆಂಬ ದೊರೆಗಳ ।
ಗಂಡ ನಿನ್ನರುಮಹಿಮೆಯನು ನೆಲೆಗಂಡು ಬಣ್ಣಿಸಲಳವೆ ಧರಣೀ ।
ಮಂಡಲಸ್ತುತಮಹಿಮ ಕದನೋದ್ದಂಡ ಕಂಠೀರವಮಹೀಧವ ।
ಚಾರುಚಂದ್ರ । ಜೆಲ್ವಿನೊಳಾರತೀಂದ್ರ । ಶ್ರೀಕಂಠೀರವೇಂದ್ರಾ ॥
ಪಲ್ಲವಿ॥ ಸಹಿಗೊಳಲೆಸೆವಾ । ಜೆಲುವಿಕೆ ಚತುರಕಲಾಕುಶಲತೆಯೆ ।
ನೆಲಸಿದುವಮವು ಕಂಠೀರವನೃಪಗೆ ॥

ಅಲರಂಬಿಗೆ ನಗೆಗಣ್ ತುಱುಗೆವೆಯಾ ವಲಿಮಱಿದುಂಬಿವೆದೆಗೆಪುರ್ಬು ।
ವೊಳೆವಿನಿವಿಲ್ಗೆಣೆಯಾಗಲವಂಗಿಕಂಗೊಳಿಪಭಿನವಮನಸಿಜನೆನಿಪಂಗೆ ॥

ಕರ್ನಾಟಕಕೊರವಂಜಿ. ಸು. 1710.

ಮೈಸೂರು ದೊರೆಯಾದ ಕಂಠೀರವರಾಜನ ಸ್ತುತಿರೂಪವಾಗಿದೆ.

....ಶ್ರೀಕಂಠೀನವ । ನೃಪತಿಗೆ ಸೌಖ್ಯಮನೊಡರ್ಚುಗೀರಂಗೇಶಂ ॥

ಲಕ್ಷ್ಮೀಸ್ವಯಂವರ ಸೋಬಾನೆ. ಸು. 1715.

ರಾಜವಂಶದ ಸೋಮರಾಜನಂದನ ವೀರರಾಜೇಂದ್ರನ ಆಜ್ಞಾನುಸಾರವಾಗಿ ಬರೆದಂತೆ ಹೇಳಿದೆ; ಕವಿ ಆತನ ಆಶ್ರಿತನಾಗಿರಬೇಕು.

ಸುರರನೆಲ್ಲರ ಸಲಹಿ । ನರರನೆಲ್ಲರ ವೊರೆಯೆ ।
ಸಿರಿಸಹಿತ ನರಸಿಂಹಪುರವರದಲಿ ।
ಪಿರಿದಾಗಿ ಮೂಗೂರ ವೀರರಾಜೇಂದ್ರಗೊಲಿ ।
ದಿರುವ ಗುಂಜಾಕರದ ನರಸಿಂಹಗೆ ॥
ನರಸಿಂಹಪುರದಗುಂಜಾ । ನರಸಿಂಹನು ವೀರರಾಜನೃಪಕುಲಮಣಿಗಂ ।
ವರಪುತ್ರಪೌತ್ರರೇಪ್ಪ್ಗಯ । ಭರದಿಂದೈಶ್ವರ್ಯವಿತ್ತು ಸಲಹಲಿ ನಿರತಂ ॥

ಕೆಳದಿನೃಪ ವಿಜಯ. ಸು. 1750.

ಚಂಪು, ಆಶ್ವಾಸ 11.

ಹರನ ನಿಷಂಗವಜ್ಯುತನ ಪಾಸು ಜಲೇಶನ ರಾಜಮಂದಿರಂ ।
ನಿರುಪಮಮಪ್ಪ ಲಕ್ಷ್ಮಿಯ ತವರ್ಮನೆ ಚಂದ್ರನ ಜನ್ಮಭೂಮಿ ಭೂ ॥
ಧರವರಪುತ್ರನುದ್ಭವಿಸಿದ ಬಡಬಾನಲಪಾನಪಾತ್ರನು ।
ತ್ಯುರುತರಮಪ್ಪ ಸನ್ಮಣಿಗಳಾಗರಮೊಪ್ಪಿದುದೈದೆ ಸಾಗರಂ ॥
ಅಮರರ್ಗಮೃತಾಶನರೆಂ । ದುಮೆಯಾಣ್ಮಗೆ ನೀಲಕಂಠನೆಂದಜ್ಯುತಗಂ ।
ಕ್ರಮದಿಂ ಕಮಲಾಪತಿಯೆಂ । ದಮರ್ದಿರೆ ಪೆಸರಿತ್ತ ಜಲಧಿಯೇಂ
ರಂಜಿಸಿತೋ ॥

ಪೊಡೆಯೆಂಬರ್ ಶಾಲಿಯನಾ । ರಡಿಯೆಂಬರ್ ಷಟ್ಪದಾಳಿಯಂ ಕರಿಣಿ
ಯುಮಂ ।
ಸಿಡಿಯೆಂಬರಲ್ಲದೀಪರಿ । ನುಡಿಯಾಲಿಪೊಡಿಲ್ಲ ಜನಪೊಳಂತಾನಾಡೊಳ್ ॥
ಕಡೆಯೆಂಬರ್ ದಧಿಮಥನದೊ । ಳೊಡೆಯೆಂಬರ್ ಭಕ್ಷ್ಯಭೇದದೊಳ್
ಕಬರಿಗಳೊಳ್ ।
ಮುಡಿಯೆಂಬರಲ್ಲದೀಪಿಱು । ನುಡಿಕನಸಿನೊಳಾದೊಡಂ ವಿಚಾರಿಪೊಡಿಲ್ಲಂ॥

ಶಂಕರಸಂಹಿತೆ. ಸು. 1750.

ಭಾವಿನೀಷಟ್ಪದಿ; ಸಂಧಿ 89, ಪದ್ಯ 2981. ಆರಂಭದಲ್ಲಿ ಗಣಪತಿ, ಸರಸ್ವತಿ, ವಿಷ್ಣು, ಶಿವ, ಮೂಕಾಂಬಿಕೆ, ಕುಮಾರ ಇವರುಗಳ ಸ್ತುತಿ ಇದೆ. ಸಂಧಿಗಳ ಕೊನೆಯಲ್ಲಿ ಮೂಕಾಂಬಿಕೆಯ ಅಂಕಿತವಿದೆ.

ಶರಧಿ ಶರಧಿ ನವಾಂಬರಾಂಬರ । ವರಕುಮಾರ ಕುಮಾರನಘಹರ ।
ಹರವಿನಾಯಕ ಜನವಿನಾಯಕ ರಾಜರಾಜಸಖಾ ॥
ಪರಮಭೂತಿಭೂರ್ಭುತಿದಿನಕರ । ಕರರುಚಿಯ ಕುಂಡಲಿಯ ಕುಂಡಲಿ ।
ಕರುಣ ಕರುಣಿಸು ಮಾರಮಾರ ಸುರಾಸುರಾಧೀಶ ॥
ಅರಳುಮಲ್ಲಿಗೆ ಜಾಜಿಸಂಪಗೆ । ಪರಿಪರಿಯ ಕುಸುಮಗಳಮಾಲೆಯ ।
ಸಿರಿವಡಿಗೆ ಮುಡಿಸಿದರು ಕುಂಕುಮವಗಿಲುಗಂಧಗಳ ॥
ಪರಿಮಳದ ಮೃಗಮದವ ಲೇಪಿಸಿ । ಮೆಱೆವ ಕಸ್ತುರಿತಿಲಕವಿಟ್ಟರು ।
ಸ್ಮರನಸಾಣೆಯಖಡ್ಗದಂದದಿ ಕಾಂತಿಯೊಪ್ಪಿದುದು ॥

ವೈಕುಂಠನಾರಾಯಣಶತಕ. ಸು. 1750.

ಶ್ರುತಿಸಂಪಶ್ಚುವನೊಯ್ದ ದುಷ್ಟಖಳನಂ ಬೆಂಬತ್ತಿ ಕೋಪೋಗ್ರದಿಂ ।
ದತುಳಂ ಸಾಹಸಿಯೆಂಬ ದೈತ್ಯಶಿರಮಂ ಜೆಂಡಾಡಿ ನಾಲ್ವೇದಮಂ ॥
ಚತುರಾಸ್ಯಂಗುಱೆ ಕೊಟ್ಟು ಮೂಜಗತಲಕ್ಕಂ ಸಾಕ್ಷಿರೂಪಾದ ಗೋ ।
ಪತಿ ತಾಂ ಮತ್ಸ್ಯಾವತಾರನಾದನಿವನ್ಗೆ ವೈಕುಂಠನಾರಾಯಣಾ ॥

ಮೈಸೂರು ದೊರೆಗಳ ಚೌಪದ. ಸು. 1750.

ಭಟನೆಗೆದು ಗಟ್ಟಬೆಟ್ಟಗಳೊಡೆದು ಬಹಳ ।
ಚಿಟಿಲು ಪೆಟಪೆಟಲು ಗುರ್ಗುಳಿರೆಂಬ ದನಿಗಳ ।
ನಿಟಿಲಲೋಜನ . . . ।
. . . . . ।
ಟೆಂಬಿಡದೆ ತೆರೆನೊರೆಯು ಗುಂಬಿ ಘುಳಿರೆನುತ ।
ಇಂಬಿನಲಿ ದಡವನಾಭ್ರಟಿಸಿ ಫಳಿರೆನುತ ।
ತುಂಬಿ ಘುಡುಘುಡಿಸಿಯಾಭ್ರಟಿಸಿ ಮೊರೆಯುತ್ತ ।
ನಂಬಿರ್ದ ಕೂರ್ಮದಲ್ಲೆಣಿಸಿ ಶಿವ ಎನುತ ।
ಸಾರಿ ಮೊರೆಯುತ್ತ ಭೋರೆಂದು ಹರಿಯುತ್ತ ।
ಧಾರಿಣಿಯನಿಬ್ಬಗಿಯಮಾಡಿ ಪರಿಯುತ್ತ ।
ಆರೈದು ಮನುಜರಿಗೆ ಅಭಯಗಳ ಕೊಡುತ ।
ಕಾರುಣ್ಯನಿಧಿ ಕಾವೇರಿ ಜನರ ರಕ್ಷಿಸುತ ॥

ಅರುವತ್ತು ಮೂವರು ಪ್ರಮಥಗಣಾಧೀಶ್ವರರ ತ್ರಿಪದಿ ಸು. 1750.

ನಂಜನಗೂಡಿನಲ್ಲಿ ಕಳಲೆನಂಜರಾಜನು ಪ್ರತಿಷ್ಠೆ ಮಾಡಿದ ಅರುವತ್ತುಮೂವರ ಸ್ತುತಿರೂಪವಾಗಿದೆ; ಪದ್ಯ 64. ಪ್ರತಿಪದ್ಯವೂ "ಪೊಡಮಡುವೆಮನದಣಿಯಲು" ಎಂದು ಮುಗಿಯುತ್ತದೆ.

ಪೊಡಮಡುವೆ ಮನದಣಿಯಲು ॥
ಪೊಡುಮಡುವೆ ನಾನವರ ಪೊಗಟ್ಪಿ ಸಂತಸವಡುವೆ ।
ಮೃಡನೊಲಿಸಿದಱುವತ್ತುಮೂಱು । ಭಕ್ತರಿಗಾನು ।
ಪೊಡಮಡುವೆ ಮನದಣಿಯಲು ॥
ಧರೆಯೊಳಗೆ ಜಸವಡೆದ ಧಾರ್ಮಿಕಾಗ್ರಣಿ ವೀರ ।
ನರವರಾತ್ಮಜ ಕಳುಲೆನಂಜೇಂದ್ರ । ಗಾವಗಂ ।
ವರವೀವ ಗರಳಪುರದೆಱೆಯ ॥

ವರವೀವ ಗರಳವುರಡೆಱೆಯನಂ ಬಿಡದೊಲಿಸಿ ।
ದಜುವತ್ತುಮೂಱುಭಕ್ತರ । ಚರಣಗಳಿಗಾನು ।
ಪೊಡಮಡುವೆ ಮನದಣಿಯಲು ॥

ಬಸವಪದ. ಸು. 1750

ಮಾತೆಜೆನ್ನಮ್ಮನಂದರಾಬ್ಧಿಚಂದ್ರಮನು ।
ನೀತಿಯುತ ಜವನಯ್ಯನಾತ್ಮಸಂಭವನು ।
ಖ್ಯಾತಿಯುತ ಜೆಲುವಯ್ಯ ಜನಿಸಿ ಸುಖವಿತ್ತನು ।
ಪ್ರೀತಿಯಿಂ ಶ್ರೀಕೃಷ್ಣನೊಲಿದು ರಕ್ಷಿಸಿದನು ॥

ದಶಕಂಠರಾವಣಾಯಣ (ಗದ್ಯ) ಸು. 1750.

ವಾಲ್ಮೀಕಿರಾಮಾಯಣವನ್ನು ಭಾಸ್ಕರಕವಿ ತೆಲುಗಿನಲ್ಲಿ ಬರೆದನು. ಅದನ್ನೇ ಕುಮಾರವಾಲ್ಮೀಕಿ ಕನ್ನಡಿಸಿದನು. ಅದನ್ನು ಸರ್ವರಿಗೂ ತಿಳಿವಂತೆ ಗದ್ಯರೂಪವಾಗಿ ಬರೆದಿದೆ. (ಯುದ್ಧಕಾಂಡಮಾತ್ರ).

ನಂಜುಂಡೇಶಚರಿತ್ರೆ. ಸು. 1750.

ನಂಜನಗೂಡುಮಾಹಾತ್ಮ್ಯ; ಭಾಮಿನೀಷಟ್ಪದಿ, ಸಂಧಿ 5, ಪದ್ಯ 200. ಆರಂಭದಲ್ಲಿ ನಂಜುಂಡ, ವಿಷ್ಣು, ಬ್ರಹ್ಮ, ಗಣೇಶ, ಸರಸ್ವತಿ, ಬಸವ ಇವರುಗಳ ಸ್ತುತಿ ಇದೆ.

ಮಾತೆಯೇ ವರಸತ್ಯ ತಾತನೆ । ಪ್ರೀತಿಮಯಸುಜ್ಞಾನ ಧರ್ಮವೆ ।
ಭ್ರಾತನಾಗೆ ದಯಾ ಸಖೀ ಎಂದೆನಿಪ ಪೆರ್ಮೆಯೊಳು ॥
ಖ್ಯಾತಿಪಸರಿಸೆ ಶಾಂತಪತ್ನಿಯ । ನೂತನರಕ್ಕೈಕೊಂಡು ಕ್ಷಮೆಯೇ ।
ಜಾತನಾಗಿರೆ ಬಾಲಿದ್ರಾಕೈಲಾಸದೊಳು ಜನರು ॥
ಪರಮಮಯದಾನಂದ ಬೀದಿಗ । ಳುರುತರದ ಬೇಹಾರ ನವವಿಧ ।
ಭರಿತಭಕ್ತಿವಿಶೇಷವವ್ಯಯ ನೋಡೆ ಗೃಹನಿಚಯ ॥

ವಿಷಮ ಮೋಕ್ಷಾಸಕ್ತಿಯೇ ವರ । ತರುಣಿಯರ ರೂಪಾಗಿ ರಾಜಿಸೆ ।
ಹರನೆಸೆವ ಕೈಲಾಸ ರಾಜಿಪುದೇನಬಣ್ಣಿಪೆನು ॥

ಅಕ್ಷರಕೇವಲಿನಿಮಿತ್ತ (ಗದ್ಯ.) ಸು. 1750.

ಆದಿಯಲ್ಲಿ ವರ್ಧಮಾನಸ್ತುತಿ ಇದೆ.

ವದದ—ಎಲೆ ಬೆಸಗೊಂಬಾತನೆ ಕೇಳು. ನಿನ್ನ ಬಂಧುಗಳು ನಿನ್ನಮೇಲೆ ವಿರುದ್ಧವ ಚಿಂತಿಸುತಿದ್ದಾರು. ನಿನ್ನ ಸ್ವಭಾವವ ಬಿಡದೆ ನಿನ್ನ ಚಿತ್ತದಲ್ಲಿ ಕ್ಲೇಶವ ಮಾಡಿಕೊಂಡು ಇರುತಿದೆ. ನೀನು ಹಿಂದಕ್ಕೆ ಬಹಳ ದುಃಖವನನುಭವಿಸಿದೆ. ಮುಂದಕ್ಕೆ ಪುಣ್ಯವುಳ್ಳವನಾದೆ. ಮುಂದಕ್ಕೆಲೇಸಾದುದು. ವಿಘ್ನನಾಶವಾದೀತು. ನೀನು ಚಿಂತಿಸಿದ ಕಾರ್ಯವು ಪ್ರಯಾಸವಿಲ್ಲದೆ ಶೀಘ್ರದಲ್ಲಿ ಸಿದ್ಧಿಯಾಗುವುದು. ನಿನ್ನಮೇಲೆ ಕ್ರೂರಗ್ರಹಂಗಳು ಶತ್ರುಗಳು ಕಷ್ಟವನೆಣಿಸುತಿದ್ದಾರು. ಅವರ ಶಾಂತಿನಿಮಿತ್ತವಾಗಿ ಇಷ್ಟದೇವರ ಪೂಜೆಯನುಮಾಡಿದರೆ ಆ ಪುಣ್ಯದಿಂದ ಎಲ್ಲಾ ನಿನಗೆ ಸಿದ್ಧಿಯಾದೀತು. ಇಲ್ಲಿ ಸಂದೇಹಂಮಾಡಬೇಡ.

ಮಹಾನವಮಿಯ ಪದ ಸು. 1750.

ಅಳಿಯನುಡುಗೊರೆಯಲ್ಲ ಮರಳಿ ಬೇಡುವರೆ ।
ಒಲಿಯು ಸಂಬಳವಲ್ಲ ನಿಂತು ಕೇಳುವರೆ ।
ಹಟಿಸಾಲವಲ್ಲ ಹಗಲಿರುಳು ಕಾಡುವರೆ ।
ಅಟಿಮನಸುಮಾಡದೇ ಕೊಡು ಕೀರ್ತಿ ಬಹರೆ ॥
ಧನಕನಕವಸ್ತುವಾಹನವಾಗಲೆಂದು ।
ಕನಕದಂಡಿಗೆ ಪದವಿ ನಿಮಗಾಗಲೆಂದು ।
ದಿನದಿನಕೆ ರಾಜಮನ್ನಣೆ ಹೆಚ್ಚಲೆಂದು ।
ಅನುನಯದಿ ಹರಸಿದೆವು ಬಾಲಕರು ಬಂದು ॥

ಭಾಗವತಟೀಕೆ ಸು. 1750.

ಏಕಾಕಾರಟೀಕೆ ಎಂಬ ಹೆಸರುಳ್ಳ ಹಾಡಿನರೂಪವಾದ ವ್ಯಾಖ್ಯಾನ.

ಅದಱ ಪಕ್ವಾನ್ನ ಜೊಕ್ಕಡಿ । ವ್ಯಾಕೃತದ ಪದ ಮೋಡಿ ।

ಏಕೋಜನಾರ್ದನ ಮಾಡಿದ ಪರವಡಿ |
ಅದ ರುಚಿನೋಡಿ ಬೋಗಿಸುವ ನಿಜಾತ್ಮಭೋಕ್ತಾ ||

ವೇದಾಂತವಿವೇಕಸಾರ ಸು. 1750.

ಅದ್ವೈತ ವೇದಾಂತವನ್ನು ಬೋಧಿಸುವ ಗದ್ಯಗ್ರಂಥ. ಇದರ ಮಾತೃಕೆ ವಾಸುದೇವ ಯತಿಕೃತ ಸಂಸ್ಕೃತಗ್ರಂಥ.

ಗಜೇಂದ್ರಮೋಕ್ಷ. ಸು. 1750.

ಉದಯರಾಗ. ದ್ವಿಪದಿ, ಪದ್ಯ 91. ಆರಂಭದಲ್ಲಿ ವಿಷ್ಣು, ಶಿವ, ಬ್ರಹ್ಮ, ಗಣಪತಿ ಇವರುಗಳ ಸ್ತುತಿ ಇದೆ.

ಕಮಲರೇಣುಗಳಿಂದೆ ಪರಿಮಳವನಾಂತ | ಏಮಲಜಲವನು ಹೊಕ್ಕು
ದೊಡನೆಯಾದಂತಿ ||
ತಣಿವನ್ನೆಗಂ ನೀರನೀಂಟಿ ಕರದಿಂದೆ ! ಕ್ಷಣದೆ ಜಲವನು ಕೊಂಡುಕೊಂಡು
ಮುದದಿಂದೆ ||
ಸುರಿದು ತನುವಿನಮೇಲೆ ತನ್ನ ಡಗೆಯಾಪೆ | ಕರಿಣಿಗಳಮೇಲೆ ಸುರಿದುದು
ಒಲಿಕನೀರ ||
ಜಳಕವಾಡಿಸಿ ನೀರನೂಡಿಮಜಿಗಳಿಗೆ | ನಲವಡಿಸಿ ಸೊಗವಿರ್ದುದಿಂತುಟತೆ
ಗಜಿಗೆ ||

ಕುಶಲವರ ಕಾಳಗ ಸು. 1750.

ಸೋಲೂರುಸ್ಥಳದ ಕರಣಿಕ ಚಿಕ್ಕಣ್ಣ, ಚೆನ್ನಮ್ಮ ಇವರ ಮಗ ಹುಚ್ಚನಿಗೋಸ್ಕರ ಹಿಂದೆ ಷಟ್ಪದಿಯಲ್ಲಿದ್ದ ಈ ಕಥೆಯನ್ನು ಯಕ್ಷಗಾನ ರೂಪವಾಗಿ ಒರೆದಂತೆ ಕವಿ ಹೇಳುತ್ತಾನೆ. ಆರಂಭದಲ್ಲಿ ಕಕುದ್ಗಿರಿಯ (ತಿವಗಂಗೆ) ಈಶ್ವರ, ಸ್ವರ್ಣಾಂಬಿಕೆ, ಕವಿಯ ಕುಲಸ್ವಾಮಿಯಾದ ತಟ್ಟಿಯಕೆರೆ ರಂಗನಾಥ, ಲಕ್ಷ್ಮಿ, ಶಂಕರಾಚಾರ್ಯ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಕವಿ ಬಭ್ರುವಾಹನ ಕಾಳಗ, ಯಾಗಚರಿತ್ರೆ ಎಂಬ ಯಕ್ಷಗಾನಗಳನ್ನೂ ಒರೆದಿದ್ದಾನೆ. ಯಾಗಚರಿತ್ರೆಯಲ್ಲಿ ಧರ್ಮರಾಜನು ಅಶ್ವಮೇಧಯಾಗವನ್ನು ಮಾಡಿದ ಕಥೆ ಹೇಳಿದೆ. ಪೂರ್ವ ಕವಿಗಳಲ್ಲಿ ಕನಕ, ಪುರಂದರ ಇವರುಗಳನ್ನು ಸ್ಮರಿಸಿದ್ದಾನೆ.

ವಿನಾಯಕಾಷ್ಟಕ ಸು. 1750

ಕಲಿವೆಯೋಗರ ಸೂಪಸ್ಪೃತವಿಂ ಕಲಸುವೇಲೋಗರಗಳ ।
ಬಿಳಿಯಹೋಳಿಗೆಯೆಣ್ಣೆಹೂರಿಗೆ ಬಗೆಬಗೆಯಪಾಯಸಗಳ ।
ಒಳ್ಳೆಹೂರಣಗಡುಬುಜಕ್ಕುಲಿಯು ಎಳಲಿಗೆಮೋದಕಗಳ ।
ಒಳ್ಳುಮುಜ್ಜಿಗೆಪಾಯಸಂಗಳನರ್ಪಿಸುವೆ ಗಣನಾಯಕ ॥

ಗಾಯಚರಿತ್ರೆ ಸು. 1750

ಯಕ್ಷಗಾನ; ಕುಕ್ಕೆಯ ಸುಬ್ಬರಾಯ, ಮೂಕಾಂಬಿಕೆ, ಶಂಕರಾಚಾರ್ಯ ವಿದ್ಯಾರಣ್ಯ ಇವರುಗಳ ಸ್ತುತಿಇದೆ. "ಪೇಟ್ಟಿದಕೃತಿಯನುಡಪಿಯಕೃಷ್ಣಗೆ".

ಶಂಕರವಿಜಯ (ಗದ್ಯ) ಸು. 1750

"ಗೀರ್ವಾಣದಲ್ಲಿ ಹೇಳಿದಪ್ರಕಾರ ಕನ್ನಡಭಾಷೆಯಿಂದ ವಿಸ್ತರಿಸಿ ಬರೆದೆನು"

ರಾಮಚರಿತೆ ಸು. 1750

ಯಕ್ಷಗಾನ. ಆರಂಭದಲ್ಲಿ ಶೃಂಗೇರಿ ಶಾರದೆಯ ಸ್ತುತಿಯೂ ಅಂತ್ಯದಲ್ಲಿ ಚುಂಚನಕಟ್ಟೆ ರಾಮನ ಸ್ತುತಿಯೂ ಇವೆ.

ವೃತ್ತರತ್ನಾಕರಟೀಕೆ. ಸು. 1775

ಆರಂಭದಲ್ಲಿ ಈ ಪದ್ಯವಿದೆ—

ಆಪನ ಜೋಧರತ್ನಮಯದರ್ಪಣದೊಳ್ ಸಚರಾಚರಂ ಜಗಂ ।
ಭಾವಿಸಲಂತರಿಕ್ಷತಲದೊಳ್ ಪರಿಶೋಭಿಪ ತಾರೆಯಂತಿರಾ ॥
ದೇವನ ಪಾವನಾಂಘ್ರಿಗಳಿವಂದಿಸಿ ವೃತ್ತಸಮುದ್ರಮೆಂಬ ಛಂ ।
ದೋವಿಸರಕ್ಕೆ ವೃತ್ತಿಯನಿಳಾಂಚಿತಕನ್ನಡದಿಂದೆ ಪೇಟ್ಟಿಪೆಂ ॥

ರಾಜೇಂದ್ರನಾಮೆ 1796

ಇದರಲ್ಲಿ 1633ರಿಂದ 1790ರವರೆಗೆ ಕೊಡಗುದೊರೆಗಳ ಚರಿತ್ರವು ಹೇಳಿದೆ ಕೊಡಗು ದೊರೆಯಾದ ವೀರರಾಜೇಂದ್ರನು ಈ ಗ್ರಂಥವನ್ನು ಒರೆಯಿಸಿದನು.

ಮಟದಕಂಪ ಸು. 1800

ಅಸ್ತಮಯವಾಯಿತಯ್ಯಾ । ಪುಸ್ತಕಮಂ ಕಟ್ಟಿ ಮನೆಗೆ ಪೋಪೆವಯ್ಯಾ।
ಹೊತ್ತಾಟವೆಮ್ದು ಬಾರದೊ।ಮುತ್ತಮ ಕಶೆರಾಜ ನೋಡಿ ಶಿಕ್ಷಿಸನೊಡೆಯಂ॥
ಕಶೆರಾಜನೊಡನೆಹುಟ್ಟಿದ । ನೆನೆಪಂ ಕಿಱಿಯಾತನೊಬ್ಬ ಕೊ ದಂಡರಸಂ ।
ಸಸಿನಿರಡಾಡುವ ದುಷ್ಟರ । ಬೆಸಗೈದವನಿಂದ ಒಡಿವ ಕಶೆಮುಹ ರಾಜಂ ॥
ಕಶೆಗೆ ಕಱುಗೆಜ್ಜೆತೊಂಗಿಲು । ಪೊಸಬಣ್ಣದತಾಳೆಗೋಲು ಮುಪ್ಪುರಿದಾರಂ।
ವಶವಲ್ಲದಿರ್ಪ ಕುವರರ । ಹೊಸಹೋರಿಯ ತರೆವ ಕಿಱಿದೆ ತರೆವಂ ಬೆನ್ನಂ ॥
ಗಟಿಗೆಗೆ ಪದಪದವೊಪ್ಪಿಸಿ । ತಳುವಿಲ್ಲದೆ ಬಣ್ಣದೋಲೆ ಕಂಠವು ಜೀಯಾ ।
ಹಲಗೆಯ ದಟ್ಟಿಪೆ ಜೀಯಾ।ಬಳಹಂಗಳ ವೊನಜುಮಾಡಿ ಬರೆವೆವುಜೀಯಾ॥
ನಡುನೀಳವಾಗಿ ಬೆನ್ನಂ । ಕಡುಬೆಟ್ಟಿತ್ತಾಗಿ ಜಘನಮಂ ಹೊಕ್ಕುಱಿಮುಂ ।
ನಡುವಿಂಗೆ ಸರಿಸಮಾಗಿಯೆ । ಕೊಡುವುದು ತಲೆಕಟ್ಟನರ್ಧಚಂದ್ರಾಕೃತಿಯಂ ॥

ಗಯಚರಿತ್ರೆ ಸು. 1800

ಯಕ್ಷಗಾನ; ಗೋಕರ್ಣಗಣನಾಥ, ಕಾರಕಳದವೆಂಕಟೇಶ್ವರ ಇವರುಗಳಿಗೆ ಮಂಗಳವು ಹೇಳಿನೆ.

ಗಿರಿಜಾಕಲ್ಯಾಣ (ತ್ರಿಪದಿ 108) ಸು. 1800.

ಮರುಗಮಲ್ಲಿಗೆಜಾಜಿ । ಸುರಗಿಸೇವಂತಿಗೆ । ಮುಡಿವಾಳಪಚ್ಚೆದವನವು ।
ಸಂಪಗೆಯ । ಸರವ ಹಾಕಿದಳಳಿಯನಿಗೆ ॥

ನಂದಿಛಂದಸ್ಸು ಸು. 1800.

ಪ್ರಾಸಗಳು, ವೃತ್ತಗಳು ಇವುಗಳ ಲಕ್ಷಣವನ್ನು ಹೇಳುವ ಗ್ರಂಥ.
ಪ್ರಾಸವೆನಲ್ಕೆರಡನೆಯುದು । ಭಾಸುರತರದಾದಿವರ್ಣ ವಡಿ ಮೇದಿನಿಯೊಳ್।
ಪ್ರಾಸವದು ಚರಣಕೆಲ್ಲಕೆ । ಲಾಸವು ಕೇಳ್ವಡಿಯು ಪಾದಪಾದಕೆ
ಸಖಿಯೇ ॥

ಕಾವೇರೀಪುರಾಣ ಸು. 1800.

ಭಾಮಿನೀಷಟ್ಪದಿ; ಸಂಧಿ 11, ಪದ್ಯ 354.

ಮೆಱೆವ ಸಹ್ಯಾಚಲದ ಪಾರ್ಶ್ವದ । ಲಿರುವ ಪುಣ್ಯಕ್ಷೇತ್ರನದಿಗಳ ।
ಹರಿಹರಬ್ರಹ್ಮಾದಿದೇವರ ದಿವ್ಯಮಹಿಮೆಗಳ ॥
ವಿರಚಿಸಿದ ಸಹ್ಯಾದ್ರಿಕಾಂಡದ । ಪರಮಪಾವನ ಕಥೆಯ ಕೇಳಿದ ।
ನರರ ಸಲಹುವಳೊಲಿದು ಮೂಕಾಂಬಿಕೆಯು ಕರುಣದಲಿ ॥

ಶಂಕರಸಂಹಿತೆ ಸು. 1800.

ಭಾಮಿನೀಷಟ್ಪದಿ; ಸಂಧಿ 89, ಪದ್ಯ 298. ಆರಂಭದಲ್ಲಿ ಗಣಪತಿ, ಸರ್ವಸ್ವತಿ, ವಿಷ್ಣು, ಈಶ್ವರ, ಮೂಕಾಂಬಿಕೆ, ಸುಬ್ರಹ್ಮಣ್ಯ ಇವರುಗಳ ಸ್ತುತಿಇದೆ. ಪ್ರತಿಸಂಧಿಯ ಕೊನೆಯಲ್ಲಿಯೂ ಮೂಕಾಂಬಿಕೆಯ ಅಂಕಿತವಿದೆ. ನೈಮಿಶಾರಣದಲ್ಲಿ ಋಷಿಗಳು ಸೂತನನ್ನು ಕುರಿತು

ಹರನಸುತ ಷಣ್ಮುಖನ ಪಾವನ । ಚರಿತವನು ನೀನೆಮಗೆ ಕರುಣದ ।
ಲಿಹುದು ತಜ್ಜನ್ಮವನು ಬಾಲಕತನದ ಕೇಳಿಗಳ ॥
ಸುರರ ಸೇನಾಪತ್ಯವಾದುದು । ಧುರದಿ ಬಹುರಾಕ್ಷಸರ ಕೆಡಹಿದ ।
ಪರಿಯನೆಲ್ಲವನೆಮಗೆ ವಿಸ್ತರವಾಗಿ ತಿಳುಹುವುದು ॥
ಎಂದು ಕೇಳಲು ಅವನು ವಿವರಿಸಿದನು.

ರತಿಯ ಪ್ರಲಾಪ

ತಂದೆತಾಯಿಗಳಿಲ್ಲ ರಕ್ಷಿಪ । ಬಂಧುಬಳಗಗಳಿಲ್ಲ ಸಂಗಡ ।
ಬಂದ ಸೋದರರಕ್ಕತಂಗಿಯರಿಲ್ಲ ನೋಡಲ್ಕೆ ॥
ಒಂದುಗೂಡಿಸೊಳೆರಡುಪಕ್ಷಿಗ । ಳಂದದೊಳು ನಿನ್ನಂಗಸಂಗದಿ ।
ಛಂದದೊಳಗಿರೆ ಮೃತ್ಯು ಬಂದುದೆನುತ್ತ ಹಲುಬಿದಳು ॥

ಐರಾವತ ಸು. 1800.

ಯಕ್ಷಗಾನ; ಕಣ್ವಪುರದ ಗೋಪಾಲಕೃಷ್ಣನ ಅಂಕಿತವಿದೆ.

ಲವಕುಶರ ಕಾಳಗ ಸು. 1800.

ಯಕ್ಷಗಾನ; "ಶಂಕರಾಚಾರ್ಯರಿಗೆ ಶರಣೆಂದು" ಗ್ರಂಥವು ಆರಂಭವಾಗಿದೆ.

ಭಸ್ಮಾಸುರನಕಾಳಗ ಸು. 1801.

ಯಕ್ಷಗಾನ; ವೇಲಾಪುರದ ಚೆನ್ನಕೇಶವನ ಅಂಕಿತವಿದೆ.

ವೆಂಕಟಾಚಲರಾಮನ ಹಸೆಗೆ ಕರೆಯುವ ಹಾಡು ಸು. 1820.

ಸಿರಿಯಪುರದ ಚೆನ್ನಕೇಶವನ ಅಂಕಿತವಿದೆ.

ಬಭ್ರುವಾಹನಕಾಳಗ ಸು. 1820.

ಯಕ್ಷಗಾನ; ಉಡುಪಿಯ ಕೃಷ್ಣನ ಅಂಕಿತವಿದೆ.

ಹುಲಿಕಲ್ಲು ಸಂಸ್ಥಾನಿಕರ ಚರಿತ್ರೆ ಸು. 1820,

ಗದ್ಯಗ್ರಂಥ. ಇದರಲ್ಲಿ ಮೂಗಡಿತಾಲ್ಲೂಕು ಹುಲ್ಲಿಕಲ್ಲಿನಲ್ಲಿ ಆಳಿದ ಎಲ ಹಂಕ ಪ್ರಭುಗಳ ಚರಿತ್ರೆ ಹೊನ್ನಪ್ಪಗೌಡನಿಂದ ಗಿರಿಯಪ್ಪಗೌಡನವರೆಗೆ ಹೇಳಿದೆ.

ಕೃಷ್ಣರಾಜಸ್ತವ ವರ್ಣನೆ ಸು. 1825.

ರಾಗತಾಳಗಳೊಡನೆ ಹಾಡಬಹುದಾದ ದಂಡಕದಂತಿರುವ 22 ನುಡಿಗಳಿವೆ. ಇವಕ್ಕೆ ಖಡಕ್ ಎಂಬ ಹೆಸರಿರುವಂತೆ ತೋರುತ್ತದೆ. ವೈಸೂರು ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾದ ಗ್ರಂಥ. ಕೊನೆಯಲ್ಲಿ ವೆಂಕಟವಿಠಲೇಶ ಎಂಬ ಅಂಕಿತವಿದೆ.

ಇದುಂ ಎನ್ನವಂಶದ ಧರಣೀಪತಿ ಕುಂದರದನ ಅರವಿಂದನಯನ ಬಲು ಸುಂದರಾಂಗ ಗೋವಿಂದನ ಸೇವಕ ಒಂದಿಹ ಸ್ವಾಮಿಯನಿಂದು ನೋಡಬೇಕೆಂದು ಒಲಿಕ ಆಯಿಂದು ಧರೆಗೆ ತಾ ಬಂದಪನೊ ಎಂದೆಂಬತೆಱದ ಮುಗ್ಧದಿಂದ ತಾರೆಗಳ ಹೊಂದಿ ಶಶಿಯು ಉದಯಿಸೆ ಬರುತಿರಲು,

ಕೃಷ್ಣರಾಜಸೋಬಾನೆ ಸು. 1825.

ಕೆಂಪಿನತೊಡಿಗೆಯ ಸೊಂಪುಗಾಱಯರು ।
ಪಂಪಗೆಯೆಸಳಿನ ನಾಸಿಕದವರು ।
ಜಂಜಲಾಕ್ಷಿಯರು ತಾವರೆಯ ಪೋಲ್ವ ನಳುನದ ।
ಪಂಚನಾರಿಯರ್ಧವರು ಕೂಡಿಲದಿ ಸೋಬಾನೆ ॥

ರುಕ್ಮಿಣೀಸ್ವಯಂವರ ಸು. 1825.

ಹಾಡು 32; ಮುಮ್ಮಡಿ ಕೃಷ್ಣರಾಜನ ಕಾಲ

ಪಾರ್ವತೀಕಲ್ಯಾಣ ಸು. 1825.

ಹಾಡು 47; ಮುಮ್ಮಡಿ ಕೃಷ್ಣರಾಜನ ಕಾಲ

ಪಾರ್ವತಿಯ ಹಸೆಗೆ ಕರೆದಸೋಬಾನೆ ಸು. 1825.

11 ಪದ; ಕೊನೆಯಲ್ಲಿ ಈ ಪದವಿದೆ—

ಮಿತ್ರೆ ದೇವಾಜಮ್ಮಣ್ಣಿಯವರಿಗೆ ।
ಪುತ್ರಸಂತಾನವಿತ್ತು ಮುತ್ತೈದೆತನ ಸ್ಥಿರವಿತ್ತು ।
ಸ್ಥಿರವಿತ್ತಾ ಪಾರ್ವತಾದೇವಿಗೆ ಮುತ್ತಿನಾರತಿಯಬೆಳಗೆಸೋಬಾನೆ ॥

ಹರಕೆಸೋಬಾನೆ ಸು. 1825.

ಪದ 10; ಕೊನೆಯಲ್ಲಿ ನರಹರಿಪುರದ ಗಿರಿಜಾಧವನ ಸ್ತುತಿ ಇದೆ.

ಬ್ರಹ್ಮಾಂಡದ ವಿವರ ಸು. 1825

ಭಾಗವತಪುರಾಣದಲ್ಲಿರುವ ಪ್ರಕಾರಕ್ಕೆ ಪಂಚಾಶತ್ಕೋಟಿ ಭೂಮಂಡಲದ ವಿವರಂಗಳನು ಸಕಲರಿಗೂ ತಿಳಿವಹಾಗೆ ನನ್ನ ಬುದ್ಧಿಗೆ ತಿಳಿದಷ್ಟು ಶಾಸ್ತ್ರಗಳಲ್ಲಿರುವಪ್ರಕಾರಕ್ಕೆ ಏಂಗಡಿಸಿ ಬರೆದಿದ್ದೇನೆ.

ಪ್ರಸನ್ನ ಕೃಷ್ಣ ಕೊರವಂಜಿ ಸು. 1830.

ನರಪತಿಕೃಷ್ಣಧರಾಧಿಪ । ವಿರಚಿತನವಪಾರಿಜಾತವಿಮಲಸುಕಥೆಯೊಳ್ ।
ಮುರರಿಪುಧರಿಸಿದ ವೇಷದ । ಕೊರವಂಜಿಯ ಕಥೆಯ ನಾನು ಕುಶಲದಿ ಸೇಪೆ ॥

ಅಮ್ಮಣ್ಣಿ ಪಾರಿಜಾತ ಸು. 1830.

ಯಕ್ಷಗಾನ; ಮಧ್ವಾಚಾರ್ಯ, ಸಿರಿಗುಪ್ಪಿ ಆಂಜನೇಯ ಇವರುಗಳ ಸ್ತುತಿ ಇದೆ.

ರುಕ್ಮಾಂಗದಚರಿತ್ರೆ ಸು. 1830.

ಯಕ್ಷಗಾನ; ನಾಮಾಂತರ ಕೃಷ್ಣರಾಜ ಮುಖೋಲ್ಲಾಸ.

ಸಿರಿಯಾಳಚರಿತ್ರೆ ಸು. 1830

"ಶಿವಲೀಲಾಮೃತಗ್ರಂಥಾಂತರ್ಗತವಾದ ಜ್ಞಾನಭಕ್ತಿವೈರಾಗ್ಯ ಸತ್ಯ ಶಿವ ಸುಹಿಮೆ ಇವುಗಳಿಂದ ಕೂಡಿರತಕ್ಕ ಸಿರಿಯಾಳರಾಜನ ಚರಿತ್ರೆ ನೂತನವಾಗಿ ಮಾಡಲ್ಪಟ್ಟಿದೆ."

ಮೈಸೂರು ಮುಮ್ಮಡಿ ಕೃಷ್ಣರಾಜನ ಕಾಲ. "ಚಾಮೇಂದ್ರಾತ್ಮಜನಂಜ ರಾಜವಿಭುವಂ ಪಾಲಿಕ್ಕೆ ನಾರಾಯಣಂ" ಎಂದಿದೆ.

ಭಾಗವತಸೋಬಾನೆ ಸು. 1830

ಪದ 17; ಕೊನೆಯಲ್ಲಿ "ಕೃಷ್ಣರಾಜನಿಗೆ ಮಂಗಳವಾಗಲಿ" ಎಂದಿದೆ.

ವೆಂಕಟೇಶಜೋಗುಳಪದ ಸು. 1830.

ಪದ 17. ಕೊನೆಯಲ್ಲಿ "ಕೃಷ್ಣರಾಜನಿಗೆ ಮಂಗಳವಾಗಲಿ" ಎಂದಿದೆ.

ಸುಭದ್ರಾಕಲ್ಯಾಣ ಸು. 1830.

ಯಕ್ಷಗಾನ; ಗೋಷ್ಪೀಪುರದ ಲೋಕನಾಥನ ಅಂಕಿತವಿದೆ.

ಸುಧನ್ವನಕಾಳಗ ಸು. 1830.

ಯಕ್ಷಗಾನ; ಕ್ಷೇಮಪುರದ ವೆಂಕಟರಮಣನಿಗೆ ಮಂಗಳವು ಹೇಳಿದೆ.

ಪುತ್ರಕಾಮೇಷ್ಟಿ ಸು. 1850

ಯಕ್ಷಗಾನ; ಸಂಧಿ 10. ಶರಪುರದ ವಿಘ್ನೇಶನ ಅಂಕಿತವಿದೆ.

ದೀನಪಾಲಶತಕ ಸು. 1850.

ಇದರಲ್ಲಿ 108 ವೃತ್ತಗಳಿವೆ; ಒಂದೊಂದೂ "ದೀನಪಾಲನಾ" ಎಂದು ಮುಗಿಯುತ್ತದೆ.

ಎಂದಿಗು ನಿನ್ನ ನಂಬಿಹೆನು ಬಂಧುವೆ ನೀ ದಯಮಾಡಿಯೆನ್ನನುಂ ।
ಕಂದನ ಕಾದವೋಲ್ ಸತತ ಚಂದದಿಯೆನ್ನನು ಕಾದು ರಕ್ಷಿಸೈ ॥
ಮಂದರಪರ್ವತೋತ್ತಮವನಂದದೊಳೆತ್ತಿದ ಧೀರನೇ ಸದಾ ।
ನಿಂದು ಮದೀಯಗೇಹದಲಿಯೆಂದಿಗು ರಕ್ಷಿಸೊ ದೀನಪಾಲನಾ ॥

ಭಕ್ತಿವಿಜಯ (ಗದ್ಯ) 1884.

ಮಹೀಪತಿಯ ಸುಹಾರಾಷ್ಟ್ರಗ್ರಂಥದ ಭಾಷಾಂತರ. "ಸೀತಾವಿಲಾಸದ ಸನ್ನಿಧಾನದ ಅಪ್ಪಣೆಯಿಂದ ಭಕ್ತಿಜ್ಞಾನವೈರಾಗ್ಯಗಳಿಗೆ ನಿಧಿಸ್ವರೂಪವಾದ ಭಕ್ತಿವಿಜಯವೆಂಬ ಗ್ರಂಥಾರಂಭ."

APPENDIX III

ಪರಿಶಿಷ್ಟ III

ಗ್ರಂಥ ಶುದ್ಧಿ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
1	10	ಕುಶಸಲದ	ಕುಶಸ್ಥಲದ
4	14	ಪಾಲ್ಗುಣ	ಫಾಲ್ಗುಣ
9	4	ಲೆನೆಯ	ಲೆವೆಯ
,,	23	ವೀರರಾಜ	ವೀರಾಜ
11	20	ಸಕಲಕಲ	ಸಕಲಕಲಾ
13	7	ಭಾವನ್ನ	ಬಾವನ್ನ
14	3	ಬೆಟ್ಟದ	ಬಟ್ಟಿದ
16	19	ಈಪದ	ಈಪದ
24	9	ಸಂವದ	ಸುವಾದ
26	6	ಕಪಿಕುಲರನ	ಕವಿಕುಲರನ್ನ
,,	25	ಪುಂಗವವ	ಪುಂಗವ
28	ನಿರ್ವಾಣಮಂತ್ರಿ. ಈತನು ಸಂಸ್ಕೃತದಲ್ಲಿ ಕ್ರಿಯಾಸಾರದ ಕೆಲವು ಭಾಗಗಳಿಗೆ ವಾಖ್ಯಾನವನ್ನು ಬರೆದಿದ್ದಾನೆ. ಅಲ್ಲದೆ ನಿಜಗುಣ ಶಿವಯೋಗಿಯ ವಿವೇಕಚಿಂತಾಮಣಿಯ ಸ್ವಲ್ಪ ಭಾಗವನ್ನು ಸಂಸ್ಕೃತಕ್ಕೆ ಪರಿವರ್ತಿಸಿದ್ದಾನೆ.		
32	3	ನೆಗಳಿದೆಂ	ನೆಗಳಿ್ದೆಂ
35	16	ಹೆದಲಿ	ಹೆದಱಿ
39	ಜಾಯೇಂದ್ರನು ಸ್ತುತಿಸುವ ಕಾಡಸಿದ್ಧೇಶನೂ ಇಷ್ಟಲಿಂಗಶತಕವನ್ನು ಬರೆದವನೂ (ಪುಟ 28) ಒಬ್ಬನೇ ಆಗಿರಬಹುದೋ ಏನೋ ತಿಳಿಯದು.		

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
40	25	ಶೀವಗೀತೆ	ಶಿವಗೀತೆ
47	14	ಕೃಷರಾಜ	ಕೃಷ್ಣರಾಜ
49	9	ಸಿದೇಶ್ವರ	ಸಿದ್ಧೇಶ್ವರ
50	10	ಬ್ರಾಹ	ಬ್ರಾಹ್ಮ
52	8	ವಿಷು	ವಿಷ್ಣು
55	13	ಗಜೆವಜಿ	ಗಜೆವ
59	3	ಸಳ	ಸ್ಥಳ
62	18	ಕೊಂಡಿದಾನೆ	ಕೊಂಡಿದ್ದಾನೆ
66	10	ಪಬಿರ	ಪರ್ಬಿರಲ್
69	13	ಹರಿಪರದ	ಮಲೆಬಿನ್ನೂರ
71	7	ಋಷಿಕ	ಋಷಿಕು
73	7	ಗೆರಿಯು	ಪೆರಿಯು
75	16	ಸುದುಟಿ	ಸಟಿದು
78	5	ಸದ್ಗುರ	ಸದ್ಗುರು
	6	ಉದು	ಉದಾ
” 79	16	ತೂಟಿದಳು	ತೂಟಿದಳು
		ದಂತೆ	ದಂತೆ
” 81	” ಮಹಾಲಕ್ಷ್ಮಿ.	219 ನೆಯ ಪುಟವನ್ನು ನೋಡಿ.	
	17	ಹೇಳ	ಹೇಳು
” 84	ಮುದ್ದಣ್ಣ.	219 ನೆಯ ಪುಟವನ್ನು ನೋಡಿ.	
86	6	ಪದ	ಪದ್ಮ
87	ಹೆಡ್ಡಿಂಗ್	ಷಡಕ್ಷರಯ್ಯ	ಷಡಕ್ಷರಯ್ಯ
	1	ರಂಗ,	ರಂಗ.
” 89	24	ಜಳಿಸುವ	ಜ್ವಲಿಸುವ
90	13	ಹೇಳಿದಾನೆ	ಹೇಳಿದ್ದಾನೆ
97	10	ಬಾಹ್ಮಣ	ಬ್ರಾಹ್ಮಣ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
99	17	ದೊರೆಯ	ಸೇವಂತವರಾಜನ
100		ತಿಪ್ಪಯಾರ್ಯ. ಈತನು ಕಾಳೀಯಮರ್ದನ, ಕುಜೇಲೋ ಪಾಖ್ಯಾನ ಎಂಬ ಯಕ್ಷಗಾನಗಳನ್ನೂ ಬರೆದಿದ್ದಾನೆ.	
		ಸಂಜಯ್ಯ. ಇವನು ಮೂಗೂರು ಅರಸುಗಳ ವಂಶಕ್ಕೆ ಸೇರಿದವನು ; ಕಾಶ್ಯಪಗೋತ್ರದವನು. ಈತನು ಶಬರಧನಂಜಯವಿಲಾಸವಂಜರು ಎಂಬ ಯಕ್ಷಗಾನವನ್ನೂ ಬರೆದಿದ್ದಾನೆ.	
,,	15	ಜಿನಸು	ಜಿನಸ್ತ
,,	2	ವೇಶ	ದೇಶ
104	16	53,	53.
105	13	ಗಂಥ	ಗ್ರಂಥ
107	13	ಮುಗಿಯುತದೆ	ಮುಗಿಯುತ್ತದೆ.
108	5	ಪಟ್ಪದಿ	ಷಟ್ಪದಿ
,,	12	ಉದ್ದರಿಸಿ	ಉದ್ಧರಿಸಿ
115	17	ಪದಾವತಿ	ಪದ್ಮಾವತಿ
122	4	ದೃವಿಲ್ಲೆಂದ	ದ್ಯೆವಿಲ್ಲೆಂದ
,,	5	1748	1748—1775
129	5	ಇಂದಿರಾಭ್ಯುದಯ	ರಮಾಭ್ಯುದಯ
130	25	ದು ದೇಶ	ದುಪದೇಶ
134	4	ಮಾಹಾತ್ಮ೫	ಮಾಹಾತ್ಮ್ಯ
135	15	ಉದರಿಸಿ	ಉದ್ಧರಿಸಿ
137		ಜಗನ್ನಾಥದಾಸ. ಇವನ ತಾಯಿ ಲಕ್ಷ್ಮಕ್ಕ. ಇವನಿಗೆ ಮೊದಲು ಶ್ರೀನಿವಾಸಪ್ಪ ಎಂಬ ಹೆಸರಿದ್ದಿತು. ಈತನು ಶಕ 1649 ಕೀಲಕದಲ್ಲಿ (1728) ಹುಟ್ಟಿ ಶಕ 1731 ಶುಕ್ಲದಲ್ಲಿ (1809) ಸತ್ತನೆಂದೂ ಪದೇಂದ್ರನಲ್ಲಿ ತರ್ಕ ಮುಂತಾದ ಶಾಸ್ತ್ರಗಳನ್ನು ಕಲಿತನೆಂದೂ ಹೇಳುತ್ತಾರೆ.	
141	12	ತೆಗೆದ	ತೆಗೆದು

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
142	7	ನವರತ	ನನವರತ
145	15	ಕಸ.	ಕುಸು
148	3	ಒಗೆ	ಬಂ
150	11	ಯ-ಪ	ಯಪ್ಪ
,,	15	ಕೂಗಿ	ಕೂಚಿ
151	4	ಸಿದ್ಧಾ	ಸಿದ್ಧಾದಿ
,,	ವಿಠಲದಾಸ.	ಇವನ ಸ್ಥಳ ಕರ್ಜಗಿ.	
152	7	ಶ್ರೀಧ	ಶ್ರೀದ
,,	18	ಬೊಲಿಲಿ	ತೊಲಿಲಿ
156	5	ದ	ದಲ್ಲಿ
160	25	ಮೇರೀ	ಮೇರಿ
161	20	ಉದ	ಉದ್ಧ
164	1	ಸು. 1808	1808
,,	13	ಸು. 1810	1810
165	3	ಭವಾ	ಭವಾ
,,	26	ಮಣ	ಮಣಿ
168	12	ಸರ್ವಸತೀ	ಸರಸ್ವತೀ
170	16	ಸು. 1812	1813
172	ಮುಮ್ಮಡಿ ಕೃಪ್ಣರಾಜ. ಈತನು ದಕ್ಷಾಧ್ವರಕಥೆ ಎಂಬ ಯಕ್ಷಗಾನವನ್ನೂ ಬರೆದಿರುವಂತೆ ತೋದುತ್ತದೆ.		
178	12	ಪ್ರಕಟಿಸಿರುವನ್ನು	ಪ್ರಕಟಿಸಿರುವನು.
,,	21	ಸಂಖ್ಯಾತ	ಸಂಖ್ಯಾ
174	12	ವಂಡ	ಮಂಡಲ
175	10	ಅಧ್ಯಾತ	ಅಧ್ಯಾತ್ಮ
,,	20	ಇದರ	ಇದರಲ್ಲಿ
180	16	ಸಿದಾ	ಸಿದ್ಧಾ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
184	20	ವಿಠೋಬ	ವಿಠೋಬ
,,	26	ಬಲಿಕೊಡ	ಬಲಿಕೊಡಬೇಕೆಂದಿದ್ದ ಒಬ್ಬ ಬಾಲಕನನ್ನು ಪಂಡರಿಪುರದ ವಿಠಲದೇವರು ಕಾಪಾಡಿದ ಕಥೆ ಹೇಳಿದೆ.
185	3	ಅಣುಪ್ರಸ	ಅಣುಪ್ರಸಂ
,,	19	ದೇವರು	ದೇವರ
192	25	ದೆವಜ್ಞ	ದೈವಜ್ಞ
193	13	ಸುಧಾಸರ	ಸುಧಾರಸ
96	17	ಷಜಿ	ಷಷ್ಟಿ

206 ನಂಜಯ್ಯ. ಇವನು ಮೋಹವಿವೇಕಕಾಳಗ, ಹರಿಶ್ಚಂದ್ರೋಪಾಖ್ಯಾನ, ಬಲಿಚಕ್ರವರ್ತಿಯ ಚರಿತೆ, ಸಾರಂಗಧರನ ಕಥೆ, ಚಂದ್ರಹಾಸನ ಕಥೆ ಈ ಗ್ರಂಥಗಳನ್ನೂ ಬರೆದಿರುವಂತೆ ತೋರುತ್ತದೆ.

208 ನಂಜುಂಡಶಿವಯೋಗಿ. ಈತನು ಅಬಪೇಶ್ವರಚರಿತೆ, ಸುರಾಭಾಂಡೇಶ್ವರೋಪಾಖ್ಯಾನ ಎಂಬ ಯಕ್ಷಗಾನಗಳನ್ನೂ ಬರೆದಿದ್ದಾನೆ.

120	11	1886	1866
319	14	ಕೊಟ್ಟಿವು	ಕೊಟ್ಟಿವು (ಪುಟ 81, 84).

223 ಸರಗೂರು ವೆಂಕಟವರದಾಚಾರ್ಯ. ಈತನ ಚರಿತ್ರೆಯ 313ನೆಯ ಪುಟದಲ್ಲಿಯೂ ಸಂಗ್ರಹವಾಗಿ ಕೊಟ್ಟಿದೆ.

224	15	ಟಾನ್ಸ್	ಟ್ರಾನ್ಸ್
233	10	ಸೆಂಟ್ಜೀವಿಯರ್	ಅಲೋಸಿಯಸ್

,, ಸಜ್ಜೀವರಾಮಕೃಷ್ಣಯ್ಯ. ಇವನು ಶ್ರೀರಾಮಚರಿತ್ರವನ್ನು ಬರೆದಿದ್ದಾನೆ.

233	14	ಸಾರಸ್ವತ	ಕೊಂಕಣ
243	1	175	1715

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
256	4	ಮಾಣದಣು	ಮಾಣದನ್ನ
268	18	ಮನು	ಮನ
272	14	ಸ್ತುತಿಯಿಸುತ್ತು॥	ಸ್ತುತಿಯಿಸುತ್ತುಂ
275	73 ಎಂದಿರಬೇಕು. ಹೀಗೆ 282 ರ ವರೆಗೆ 8 ಪುಟ ಗಳಿಗೆ ಸಂಖ್ಯೆ ತಪ್ಪು ಬಿದ್ದಿದೆ. 282 ಎಂಬುದು 281 ಎಂದಿರಬೇಕು.		
279 (277)	3	ನೊಡುವರೆ	ನೋಡುವರೆ
281 (279)	15	ಕುಸುಮಷಟ್ಪದಿ	ಸಾಂಗತ್ಯ
285	5	ಎಲ್ಲಿ	ಏಲ್ಲಿ
,,	25	ದಾಗ	ದಾಗಳೆನುತ

286 ಬಸವೇಶ್ವರರಗಳೆ. ಇದೂ 279 (277) ರಲ್ಲಿ ಕೊಟ್ಟಿರುವ ಬಸವೇಶ್ವರ ಸ್ತೋತ್ರವೂ ಒಂದೇ ಗ್ರಂಥವಾಗಿದ್ದರೂ ಇರಬಹುದು.

288 ಸರ್ವಾಗಮಪುರಾಣ, ಇವರಿಂದ ಒಂದು ವಚನವನ್ನು ತೆಗೆದು ಬರೆ ಯುತ್ತೇವೆ —

ಆದಿ ಅನಾದಿ ಇಲ್ಲದಂದು ಅಜಾಂಡಬ್ರಹ್ಮಾಂಡವಿಲ್ಲದಂದು ತಾನೆ ನಾದಬಿಂದುಕಳಾತೀತನು. ಜನಪರವಾರಿಲ್ಲದಂದು ತಾನೆ ನಾಮರೂಪಕ್ರಿಯಾತೀತನು. ಸಚರಾಚರಂಗಳೆಲ್ಲ ರಚನೆಗೆ ಬಾರದಂದು ತಾನೆ ಅಖಂಡಪರಿಪೂರ್ಣನು. ಅಪ್ರಮಾಣ ಅಗಮ್ಯ ಅಗೋಚರದತ್ತಲಾದ ಮಹಾಘನಚಿಜ್ಜೈತನ್ಯಲಿಂಗ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

299	13	ಪಾದಂ	ವಾದಂ
300	26	ಪದ 30	ಪದ 300
302	1	ಪರ್ಭ	ಪರ್ಬ
304	14	ನಲಿಯಿಪ	ನಲಿಯಿಪ
307	11	ಬಸವವೇಂದ್ರ	ಬಸವೇಂದ್ರ
308	11	ಪರಿಪಳ್ಳ	ಪರಿಪಕ್ವ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
309	ಹೆಡ್ಡಿಂಗ್	ಧ್ರುವ	ಧ್ರುವ
,,	6	ಹೆಬ್ಬರಳಿನಲ್ಲಿ	ಹೆಬ್ಬೆರಳಿನಲ್ಲಿ
,,	6	ಮಳುದಾ	ಮಳುವಾ
,,	14	ಅಹಿಕ	ಅಹ್ನಿಕ
10	9	ನೆಱೆ	ನೆಱೆಂ
,,	10-11	ಮೆಱೆದಂ	ಮೆಱೆಡಂ
,,	21	ವದ್ಯ	ಪದ್ಯ
311	2	ಇತಿಪಸ	ಇತಿಹಾಸ
316	10	ಸಾರಿ	ಸಾಱೆ
320	10	ಹೇಳಿದ	ಹೇಱು'ದ
322	8	ಸರ್ಯ	ಸರ
,,	10	ಸೈಮಿಶಾರಣ	ಸೈಮಿಶಾರಣ್ಯ
323	12	ಹುಲ್ಲಿ	ಹುಲಿ
324	3	ಮುಳದಿಂದ	ಮುದದಿಂದ
,,	,,	ತಾತೆಗದ	ತಾರೆಗಳ

—o—

APPENDIX IV.

ಪರಿಶಿಷ್ಟ IV.

ಪ್ರಥಮದ್ವಿತೀಯಸಂಪುಟಗಳಿಗೆ ಸೇರಬೇಕಾದ ಕೆಲವು ವಿಷಯಗಳು.

ಶ್ರೀಮಾನ್ ರಾವ್‌ಸಾಹೇಬ್ ಹಳಕಟ್ಟಿಯವರು ಮುದ್ರಿಸಿರುವ "ವಚನ ಶಾಸ್ತ್ರಸಾರ" ದಿಂದ ನಾವು ಪ್ರಥಮಸಂಪುಟದ (ತಿದ್ದಿದಮುದ್ರಣ) 211ನೆಯ ಪುಟದಲ್ಲಿ ಕೊಟ್ಟಿರುವ ಅಂಕಿತಗಳಲ್ಲಿ ಕೆಲವನ್ನು ಉಪಯೋಗಿಸಿರುವ ವಚನಕಾರರ ಹೆಸರುಗಳು ತಿಳಿದುದು ಮಾತ್ರವಲ್ಲದೆ ನನುಗೆ ತಿಳಿಯದೆ ಇದ್ದ ಹಲವರು ವಚನ ಕಾರರ ಹೆಸರುಗಳಿಗೂ ಅಂಕಿತಗಳನ್ನೂ ತಿಳಿದುವು[1]. ಅಲ್ಲದೆ ಈ ಪುಸ್ತಕದಲ್ಲಿ

---

1 ನಾವು ಹಿಂದೆ ಕೊಟ್ಟಿರುವ ವಚನಕಾರರ ಅಂಕಿತನಾಮಗಳಿಗೂ ವಚನ ಶಾಸ್ತ್ರಸಾರದಲ್ಲಿ ಕೊಟ್ಟಿರುವ ಅಂಕಿತನಾಮಗಳಿಗೂ ಕೆಲವು ಕಡೆ ವ್ಯತ್ಯಾಸವು ಕಂಡುಬರುತ್ತದೆ. ಈ ಪುಸ್ತಕದಲ್ಲಿ ಅರ್ಕೇಶ್ವರಲಿಂಗ, ಅಖಂಡೇಶ್ವರ, ಅಜಗಣ್ಣ, ಅಮರಗುಂಡದ ಮಲ್ಲಿಕಾರ್ಜುನ, ಅಮುಗೇಶ್ವರಲಿಂಗ, ಕಲಿದೇವರದೇವ, ಕಾಮನಾಥ, ಸಿಮ್ಮಲಿಗೆಯ ಚೆನ್ನರಾಮ ಎಂಬ ಅಂಕಿತಗಳು ಕ್ರಮವಾಗಿ ಮಧುವಯ್ಯ, ಷಣ್ಮುಖಸ್ವಾಮಿ, ಮುಕ್ತಾಯಕ್ಕ, ಪುರದನಾಗಣ್ಣ, ಬಾಯಸದ ಮಂಚಣ್ಣನ ಹೆಂಡತಿ ರಾಯಮ್ಮ, ಮಡಿವಾಳ ಮಾಚಯ್ಯ, ದೇವರದಾಸಿಮಯ್ಯ, ಚಂದಿಮರಸ ಇವರಿಗೆ ಅನ್ವಯಿಸುತ್ತವೆ ಎಂದು ಹೇಳಿವೆ. ನಮ್ಮ ಪುಸ್ತಕದಲ್ಲಾದರೋ ಈ ಅಂಕಿತಗಳು ಕ್ರಮವಾಗಿ ಮಡಿವಾಳ ಮಾಚಯ್ಯ, ನಿರಾಲಂಬಶರಣ, ಅಜಗಣ್ಣ, ಮಲ್ಲಿಕಾರ್ಜುನಪಂಡಿತಾರಾಧ್ಯ, ಅಮುಗಿದೇವಯ್ಯ, ಕಲಿದೇವಯ್ಯ, ಹೇಡರದಾಸಿಮಯ್ಯ, ಸಿಮ್ಮಲಿಗೆಯ ಚೆನ್ನಯ್ಯ ಇವರಿಗೆ ಸೇರಿವೆ. ನಾವು ಬರೆದಿರುವುದಕ್ಕೂ ಅವುಗಳೋ ಆಧಾರವಿದ್ದಿರಬೇಕು. ಈ ವಿಷಯವನ್ನು ಪುರಾತನವಾದ ಕೈಬರಹದ ಪುಸ್ತಕಗಳಿಂದ ನಿರ್ಧರಿಸಬೇಕಾಗಿದೆ. ಕಲಿದೇವ ಎಂಬ ಅಂಕಿತವುಳ್ಳ ಒಂದು ವಚನದಲ್ಲಿ (ವಚನಶಾಸ್ತ್ರಸಾರ, ಪುಟ 267) ಮಡಿವಾಳಯ್ಯನು ಚಂದ್ರಮೌಳಿಯನ್ನು ಸಂಬೋಧಿಸುವಂತೆ ಕಂಡುಬರುತ್ತದೆ. ಇದರಿಂದ ಈತನ

ನಮಗೆ ತಿಳಿಯದ ಹಲವು ಅಂಕಿತಗಳೂ ಅವುಗಳನ್ನು ಒಳಕೊಂಡಿರುವ ಅನೇಕ ವಚನಗಳೂ ಕೊಟ್ಟಿವೆ. ನಾವು ಹಿಂದೆ ಒಂದೊಂದರಮೇರೆಗೆ ವಚನಗಳನ್ನು ಉದಾಹರಿಸಿರುವ ಕೆಲವರು ವಚನಕಾರರ ಮತ್ತೊಂದು ವಚನವನ್ನೂ, ಇನ್ನು ಕೆಲವರು ಹೊಸ ವಚನಕಾರರ ವಚನಗಳನ್ನೂ, ವಚನಗಳು ಸಧ್ಯಕ್ಕೆ ಸಿಕ್ಕದೆ ಇರುವ ಕೆಲವರು ವಚನಕಾರರ ನಾಮಾಂಕಿತಗಳನ್ನೂ, ಕೆಲವು ಹೊಸ ಅಂಕಿತಗಳನ್ನೂ ಇಲ್ಲಿ ಕೊಡುತ್ತೇವೆ:—

(ಪ್ರ. ಸಂಪುಟ 190) ಮಹಾದೇವಿ. ಸು. 1160.

ಸಂಸಾರಸಾಗರದಿಂದುದಿಸಿದ ಸುಖವೆ ದುಃಖವೆಂದಲ್ಲಿಯದೆ ಆ ಸುಖವನೆ ಮೆಚ್ಚಿ ಭವದುಃಖವೆಂಬ ಕ್ರೂರಜನ್ಮಹಕ್ಕಕ್ಕೀಡಾಗಿ ಅಲ್ಲಿ ತನ್ನ ಮಜ್ಜೆದು ತನಗಿಲ್ಲದ ಭ್ರಮೆಯ ತನ್ನದೆಂದು ಅಂತಪ್ಪ ಘೋರದೊಳಗೊಲಾಡುತಿಪ್ಪ ಮುಂಡಿಗಾಡುತಿಪ್ಪ ಅಜ್ಞಾನಿಜೀವಿಗಳು ನಿಮ್ಮನೆತ್ತ ಬಲ್ಲರಯ್ಯ ಎನ್ನಯ್ಯಪ್ರಿಯ ಇಮ್ಮಡಿ ನೀಕಳಂಕಮಲ್ಲಿಕಾರ್ಜುನಾ.

(ಪ್ರ. ಸಂಪುಟ 193) ನಿಜಗುಣದೇವ. ಸು. 1160.

ಅಂಗಲಿಂಗವೆಂಬನಕ ಯೋಗವೂಜೆ ಪುಣ್ಯಕ್ಕೆ ಬೀಜ. ಆತ್ಮನನಱಿದಿಪೆನೆಂಬನಕ ಉಭಯದೊಡಲಾಯಿತ್ತು. ಉಭಯದ ಗೊಬ್ಬಜೆಯಲ್ಲಿ ಸಿಲುಕದೆ ನಿಂದ ನಿಜಗುಣಯೋಗಿ.

(ಪ್ರ. ಸಂಪುಟ 194) ಕಲಿದೇವಯ್ಯ. ಸು. 1160.

ಈತನ ವಚನಗಳಲ್ಲಿ ಕಲಿದೇವಯ್ಯ, ಕಲಿದೇವರ ದೇವಯ್ಯ ಎಂಬ ಅಂಕಿತಗಳೂ ದೊರೆಯುತ್ತವೆ.

ಅಂಕಿತವು ಕಲಿದೇವ ಎಂದಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿದೆ. ಆದರೆ ನಮಗೆ ದೊರೆತ ಒಂದು ಪ್ರಾಚೀನಪುಸ್ತಕದಲ್ಲಿ ಈತನ ಅಂಕಿತವು ಅಕೇಶ್ವರ ಲಿಂಗ ಎಂದು ಸ್ಪಷ್ಟವಾಗಿ ಹೇಳಿದೆ. ಸುಗ್ಗಲದೇವಯ ಗುರು ದೇವರದಾಸಿಮಯ್ಯನೆಂದು ಬಸವಪುರಾಣ ಪೆನ್ನಬಸವಪುರಾಣಗಳಲ್ಲಿ ಹೇಳಿದೆ. ಆದರೆ ವೃಷಭೇಂದ್ರವಿಜಯದಲ್ಲಿ ಅವನು ಜೇಡರದಾಸಿಮಯ್ಯನೆಂದು ಉಲ್ಲೇಖವಾಗಿದೆ.

ಸಿಂಹದಮುಂದೆ ಜಿಗಿದಾಟವೆ ? ಪ್ರಳಯಾಗ್ನಿಯ ಮುಂದೆ ಪತಂಗದಾಟವೆ? ಸೂರ್ಯನಮುಂದೆ ಕೀಟದಾಟವೆ ? ನಿಮ್ಮ ಮುಂದೆ ಎನ್ನಾಟವೆ ಕಲಿದೇವರದೇವ.

(ಪ್ರ. ಸಂಪುಟ 197) ಸಿಮ್ಮಲಿಗೆಯ ಚೆನ್ನಯ್ಯ. ಸು. 1160.

ಸಾವು ತಡವಿಲ್ಲ ; ನರಕ ದೂರವಿಲ್ಲ. ದೇಹದಿಚ್ಛೆಗೆ ಹರಿದು ಕೆಮ್ಮನೆ ಕೆಡಬೇಡ. ದುರ್ವಿಷಯವ ಬಿಡು ಬೇಗ. ಗುರುಪದವ ನಂಬು. ನಮ್ಮ ಸಿಮ್ಮಲಿಗೆಯ ಚೆನ್ನರಾಮನಲ್ಲಿ ನೀನು ಸುಖಿಯಪ್ಪೆ ಮರುಳೆ

(ಪ್ರ. ಸಂಪುಟ 205) ಬಾಹೂರಬೊಮ್ಮಣ್ಣ. ಸು. 1160.

ಚಂದ್ರಕಾಂತಶಿಲೆಯಲ್ಲಿ ಬಿಂದುವಿದ್ದಡೆ ಹಿಂಡಿ ಹಿಜ್ಜಿದಿಹೆನೆಂದಡೆ ಬಂದುದುಂಟೆ? ಆ ಬಿಂದುವರುಣಶಿಲೆಯಲ್ಲಿ ಉರುಹಿ ನೋಡಲಿಕ್ಕೆ ಉರಿದುದುಂಟೆ ಅನಲ ? ಅವು ತಮ್ಮ ಒಲವಿನ'ದ ಸಾನ್ನಿಧ್ಯಕ್ಕಲ್ಲದೆ ಫಲಿಸುವುದಿಲ್ಲ. ಇಂತೀತೆಱನಂತೆ ಕ್ರಿಯಾಜ್ಞಾನವೆಲ್ಲವ ಬಲ್ಲೆನೆಂದು ಅಡ್ಡವಾಯ್ದು ಅಲ್ಲಲ್ಲಿ ನಡಿದಡೆ ನಿಜವಸ್ತು ಸಲ್ಲೀಲೆಯುಳ್ಳಪ್ಪನೆ? ಶ್ರದ್ಧೆ ಸನ್ನಾರ್ಗಿಗಳಲ್ಲಿಲ್ಲದೆ ಗೆಲ್ಲಗೂಳಿಗರಲ್ಲಿಲ್ಲ, ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವು ಅವರಲ್ಲಿ ಇಲ್ಲವಾಗಿ.

(ಪ್ರ. ಸಂಪುಟ 206) ಪ್ರಸಾದಿಭೋಗಣ್ಣ. ಸು. 1160.

ಭಕ್ತಿಯೆಂಬುದು ಬೀರು ; ವಿರಕ್ತಿಯೆಂಬುದು ಮರ ; ಫಲವೆಂಬುದು ಜ್ಞಾನ; ಪಕ್ವಕ್ಕೆ ಬಂದಿತೆಂಬುದು ಅವಧಿಜ್ಞಾನ ; ತೊಟ್ಟು ಬಿದ್ದಲ್ಲಿ ಪರಮಜ್ಞಾನ; ಸವಿದಲ್ಲಿ ಆಂತರ್ಯಜ್ಞಾನ ; ಸುಖ ತನ್ಮಯವಾದಲ್ಲಿ ದಿವ್ಯಜ್ಞಾನ ; ದಿವ್ಯತೇಜಸ್ಸು ಹಿಂಗಿದಲ್ಲಿ ಪರಿಪೂರ್ಣ ; ಅದು ಮಹದೊಡಲೆಂಬುದಕ್ಕೆ ಎಡೆಯಿಲ್ಲ, ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ಅಪ್ರಮಾಣವಾದ ಕಾರಣ.

(ಪ್ರ. ಸಂಪುಟ 208) ಡಕ್ಕೆಯಬೊಮ್ಮಣ್ಣ. ಸು. 1160.

ತಾನಜ'ಯದೆ ಮಾಡಿದ ದೋಷಕ್ಕೆ ಘೋರವಿಲ್ಲ. ಅದು ಜಗದ ಹುದುಗು. ತಾನಜ'ಧು ಅಲ್ಲ ಅಹುದೆಂದು ಎಲ್ಲರಿಗೆ ಹೇಳಿ' ಪರಧನದಲ್ಲಿ ಪರಸ್ತ್ರೀ

ಯರಲ್ಲಿ ಅನ್ಯರ ನಿಂದೆಯುಳ್ಳಿ ಪ್ರತಾಚಾರಭಂಗಿತರಲ್ಲಿ ಇದನಱಿತು ಅನುಸರಣೆಯ ಮಾಡಿದಡೆ ಕುಂಭಿನೀನರಕದಲ್ಲಿ ಹಿಂಗದಿಪ್ಪನು. ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿಯುಂ ಸೂತಕ್ಕನು.

(ಪ್ರ ಸಂಪುಟ ೨೦೯) ಸಗರದ ಬೊಮ್ಮಣ್ಣ. ಸು. 1160.

ಸಕಲಾಗಮಂಗಳ ಕಲಿತು ಸರ್ವರಿಗೆ ಹೇಳಿ ತಾ ನಿಃಕರುಣಿಯಾಗಿ ತ್ರಿವಿಧ ಮಲಕ್ಕೆ ಹೊಱಗಾಗೆಂದು ತಾನೊಳಗಾಗಿ ಬಱಿಯಮಾತಿನ ಭಟನಂತೆ ಅದೇತಱ ಱೀಕೆ? ಸಗರದಬೊಮ್ಮನೊಜೆಯ ತನುಮನಸಂಗನೇಶ್ವರಾ.

(ಪ್ರ. ಸಂಪುಟ ೨೦೯) ಅವಸರದ ಕೇರಣ್ಣ. ಸು. 1160

ಮಗನನೇಱಿದೆ ಹಣ್ಣು ಕೊಯ್ಯಬಹುದೆ? ಕುಸುಮವಿಲ್ಲದೆ ಗಂಧವ ಮುಡಿಯಬಹುದೆ? ಉಪದೃಷ್ಟವಿಲ್ಲದೆ ನಿಜದೃಷ್ಟವ ಕಾಣಬಹುದೆ? ಕ್ರಿಯಾಶುದ್ಧಿಯಿಲ್ಲದೆ ತ್ರಿವಿಧಕರ್ತೃ ತನಗೆ ಸಾಧ್ಯನಪ್ಪನೆ? ಇದುಕಾರಣ ಗುರುವಿನಲ್ಲಿ ಸದ್ಭಾವ, ಲಿಂಗದಲ್ಲಿ ಮತಿ, ಜಂಗಮದಲ್ಲಿ ತ್ರಿವಿಧಮಲದೂರಸ್ಥನಾಗಿಪ್ಪುದು ಸದ್ಭಕ್ತನಂಗ, ಚಿದ್ಘನವಸ್ತುವಿನ ಸಂಗ. ಸದ್ಯೋಜಾತಲಿಂಗಕ್ಕೆ ಸುಸಂಗ.

(ಪ್ರ. ಸಂಪುಟ ೨೦೯) ದಾಸೋಹದ ಸಂಗಣ್ಣ. ಸು. 1160.

ತನಗುಂಟಾಗಿ ಶಿಷ್ಯನ ಮನೆಗೆ ಹೋಗಿ ಕಟ್ಟಳೆಯ ವರುಷಕ್ಕೆ ತಪ್ಪದೆ ಅಂಗವಸ್ತ್ರವೆಂದು ಲಿಂಗವಸ್ತ್ರವೆಂದು ಕನಕಪರಿಮಳವೆಂದು ಅಂದಣಛತ್ರಚಾಮರ ಕರಿತುರಗಂಗಳೆಂದು ಇವು ಬಂದುದಿಲ್ಲ ಎಂದು ಸಂದಣಿಯುಲಂದಣಕಾಜಿರ ಕೈಯಲ್ಲಿ ಹೇಟಿಸಿ ಅವ್ವು ಬಾರದಿರೆ ಬಂಧಿಸುವ ಲಿಂಗಮಾರಿಗೆ ಗುರುಸ್ಥಲವೆಂದಿಗೂ ಇಲ್ಲ. ಶಂಭುಗಿಂದಿತ್ತ ಸ್ವಯಂಭುಗಿಂದತ್ತ ಅತಿಬಳ ನೋಡಾ ಮಾತುಳಾಂಗಮಧುಕೇಶ್ವರನು.

(ಪ್ರ. ಸಂಪುಟ ೨೭೬) ಉರಿಲಿಂಗಪೆದ್ದಿ. ಸು. 1180.

(1) ಆಸೆಯುಳ್ಳನಕ ಒಬ್ಬರನಾಶ್ರಯಿಸುವುದು. ಆಶ್ರಯದಾಸೆ ಕಷ್ಟಕಾಣಿರಯ್ಯ. ಆಸೆಯೇ ದಾಸತ್ವ; ನಿರಾಶೆಯೇ ಈಶತ್ವ. ದಾಸತ್ವದ ಈಶತ್ವದ ಈಯನುವ ವಿಚಾರಿಸಿ ನಿರಾಶೆಯಾಗಿಪ್ಪುದೆ ಈಶಪದವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

(2) ಶಿವನೇ ನೈವ; ಕೊಲ್ಲದಿರ್ಪುದೇ ಧರ್ಮ; ಅಧರ್ಮದಿಂದ ಬಂದುದನೊಲ್ಲ. ದಿರ್ಪುದೇ ನೇಮ; ಆಶೆಯಿಲ್ಲದಿರ್ಪುದೇ ತಪ; ರೋಷವಿಲ್ಲದಿರ್ಪುದೇ ಜಪ; ನಂಚನೆಯಿಲ್ಲದಿರ್ಪುದೇ ಭಕ್ತಿ; ಹೆಜ್ಜೆ ಕುಂದಿಲ್ಲದಿರ್ಪುದೇ ಸಮಯಾಚಾರ. ಇದು ಸತ್ಯ. ಶಿವ ಬಲ್ಲ. ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

———

ಇನ್ನು ಕೆಲವರು ವಚನಕಾರರು

ಇವರೆಲ್ಲರೂ ವೀರಶೈವರು. ಇವರಲ್ಲಿ ಕೆಲವರು ಬಸವನಕಾಲದಲ್ಲಿಯೂ ಕೆಲವರು ಈಚೆಯೂ ಇದ್ದಂತೆ ತೋರುತ್ತದೆ.

ಕಿನ್ನರಿ ಬ್ರಹ್ಮಯ್ಯ. ಸು. 1160

ಈತನ ವಚನಗಳಲ್ಲಿ ಮಹಾಲಿಂಗತ್ರಿಪುರಾಂತಕದೇವ (ದ್ವಿ. ಸಂಪುಟ 117) ಎಂಬ ಅಂಕಿತನಿದೆ.

ನಿನ್ನ ಹರೆಯದ ರೂಹಿನ ಚೆಲುವಿನ ನುಡಿಯ ಜಾಣಿನ ಸಿರಿಯ ಸಂತೋಷದ ಕರಿತುರಗರಥಪದಾತಿಯ ನೆರವಿಯ ಸತಿಸುತರ ಬಂಧುಗಳ ಸಮೂಹದ ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಅಕಟಕಟ! ರೋಮಜನಿಂದ ಹಿರಿಯನೆ? ಮದನನಿಂ ಚೆಲುವನೆ? ಸುರಪತಿಯಿಂದ ಸಂಪನ್ನನೆ? ವಾಮದೇವ ವಸಿಷ್ಠರಿಂದ ಕುಲಜನೆ? ಅಂತಕನ ದೂತರು ಬಂದು ಕೈಪಿಡಿದೆಳೆದೊಯ್ವಾಗ ನುಡಿ ತಡವಿಲ್ಲ ಕೇಳೊ ನರನೆ. ಎನ್ನ ಮಹಾಲಿಂಗತ್ರಿಪುರಾಂತಕದೇವರ ಪೂಜಿಸಿದೆಯಾದಡೆ ಕೇಡಿಲ್ಲದ ಪದ ದೊರೆಕೊಂಬುದು ಮರುಳೆ.

ಚಿಕ್ಕಯ್ಯ. ಸು. 1160.

ಇವನ ವಚನಗಳಲ್ಲಿ ಉಳಿಯಮೋಶ್ವರ (ದ್ವಿ. ಸಂಪುಟ 117) ಎಂಬ ಅಂಕಿತವು ಉಪಯೋಗಿಸಿದೆ.

(1) ಅಸ್ಥಿಚರ್ಮ ಮಾಂಸರಕ್ತಖಂಡದ ಚೀಲ ಲೆಕ್ಕಕ್ಕೆ ಬರುವುದೆ ? ಹುರುಳಿಲ್ಲ ಸಂಸಾರ. ಎಂದಿಗೆ ನಾನೀ ಹೊತ್ತ ಹೊಪ್ಪೆಯನೀಡುಹುವೆನೋ ? ಎಂದಿಗೆ ನಾನಿದ ಬಳಸಿ ಕಳೆವೆನಯ್ಯಾ. ಎಡಹಿ ಕೊಡನುದಕವ ನಡುನೀರಲ್ಲೊಡೆವಂತೆ ಎನ್ನೊಡಲೊಡೆದು ನಿಮ್ಮನೆಂದಿಗೆ ಬೆರಸುವೆನು ಉಳಿಯುಮೇಶ್ವರಾ.

(2) ಭವಪಾಶಬಂಧದಿಂ ಬಿಗಿದು ಕವಿಲೆಯ ಹುಲಿಯ ।
ಗವಿಯೊಳಗೆ ಕಟ್ಟಿದಂತಾಪೆ ಸಂಸಾರವೆಂ ।
ಬವಿಚಾರಸರ್ಪ ಸರ್ವಗ್ರಾಸಗೊಂಡುದಿದನೊಮ್ಮೆ ಪರಿಹರಿಸಿ ನಿಮ್ಮ ॥
ಅವಿರಳಶ್ರೀಪಾದದೊಳು ಮಗ್ನನಾಗಿ ಮ ।
ತ್ತವಿಕಲ್ಪಸಮಸುಖಾನಂದದೊಳಗೆಂದಿಪೆನೊ ।
ಭವರಹಿತ ಪರಮೇಶ ಪಾಲಿಸೈ ಸದ್ಗುರುವೆ ಉಳಿಯುಮೇಶ್ವರಲಿಂಗವೇ ॥

ಸತ್ಯಕ್ಕ. ಸು. 1160.

ಈಕೆಯ ವಚನಗಳಲ್ಲಿ ಶಂಭುಜಕ್ಕೇಶ್ವರ (ದ್ವಿ. ಸಂಪುಟ 118) ಎಂಬ ಅಂಕಿತವಿದೆ.

(1) ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ; ಧೂಪ ದೀಪಾರತಿ ನೇಮವಲ್ಲ; ಪರಧನ ಪರಸ್ತ್ರೀ ಪರದೈವಂಗಳಿಗೆಱಗದಿರ್ಪುದೇ ನೇಮ. ಶಂಭುಜಕ್ಕೇಶ್ವರದೇವರಲ್ಲಿ ಇದೇ ಕಾಣಾ ನಿತ್ಯನೇಮ.

(2) ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ ಮನದಿಚ್ಛೆಯನಱಿವ ಸಖಿಯರಿಲ್ಲ. ಮನ್ಮಥವೈರಿಯನುಭಾವದಲ್ಲಿ ಮನ ಸಿಲುಕಿ ಬಿಡದು. ಇನ್ನೇವೆನಿನ್ನೇವೆ. ದಿನ ವೃಥಾ ಹೋಯಿತು. ಯವ್ವನ ಬೀಸರವೋಗದಮುನ್ನ ಪಿನಾಕಿಯ ತಂದು ನೆರಹವ್ವಾ ಶಂಭುಜಕ್ಕೇಶ್ವರನ.

ಒಕ್ಕಲುಮುದ್ದಯ್ಯ. ಸು. 1160.

ಇವನ ಅಂಕಿತ ಕಾಮಭೀಮಜೀವದನದೊಡೆಯ (ದ್ವಿ ಸಂಪುಟ 118)

(1) ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ; ಇಱಿದು ಮೆಱೆವು

ದಕ್ಕೆ ಕ್ಷತ್ರಿಯನಲ್ಲ; ವ್ಯವಹರಿಸುವುದಕ್ಕೆ ವೈಶ್ಯನಲ್ಲ. ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯ ಕಾಮಭೀಮಜೀವದನನೊಡೆಯ ನೀನೇ ಬಲ್ಲೆ.

(2) ದೊಡ್ಡವೆರಡು ಕಂಬದ ಮಧ್ಯದಲ್ಲಿ ಚಿಕ್ಕವೆರಡು ಕಂಬ; ಇಂತೀನಾಲ್ಕಱಮಧ್ಯದ ಮನೆ, ಅಸ್ಥಿಯ ಗಱ, ನರದ ಕಟ್ಟು, ಮಜ್ಜೆಯ ಸಾರ, ಮಾಂಸದ ಗೋಡೆ, ಚರ್ಮದ ಹೊದಿಕೆ, ಶೋಣಿತದ ಸಾರಣೆ, ಶುಕ್ಲದ ಕಂಬದಿಂದಲಿವ್ವು ದೊಂದು ಚಿತ್ರದ ಮನೆ ನೋಡಾ. ಆ ಮನೆಗೆ ಒಂಬತ್ತು ಬಾಗಿಲು, ಈಡೆ ಏಂಗಳೆಯೆಂಬ ಗಾಳಿಯ ಬಾದಳ, ಮೃದುಕಠಿನವೆಂಬೆರಡಗುಱಿಯ ಭೇದವು ನೋಡಾ. ಇತ್ತಲೆಯಮೇಲಿಪ್ಪ ಸುಷುಮ್ನನಾಳವ ಮುಚ್ಚಿ ದಿವಾರಾತ್ರಿನೆಂಬ ಮಱವಳಿವಿನ ಉಭಯದ ಕದ ಕೆತ್ತುನುಸೆ ನಷ್ಟವಾಗಿಹೋದಡೆಯೂ ಮನೆಯೊಡೆಯ ಮತ್ತೊಂದು ಮನೆಗೆ ಹೋಹುದು ತಪ್ಪದು ನೋಡಾ. ಇಂತೀಮನೆಗೆ ಮರಳಿ ಬಾರದಂತೆ ಮಾಡಯ್ಯಾ ಕಾಮಭೀಮಜೀವದನನೊಡೆಯ ನಿಮ್ಮ ಧರ್ಮ ನಿಮ್ಮ ಧರ್ಮ.

ಗೊಗ್ಗವ್ವೆ. ಸು. 1160

ಇವಳ ವಚನಗಳಲ್ಲಿ ನಾಸ್ತಿನಾಥ (ದ್ವಿ. ಸಂಪುಟ 123) ಎಂಬ ಅಂಕಿತವು ಉಪಯೋಗಿಸಿದೆ-

(1) ಅನಲನು ಕೊಂಡ ಭೋಗಕ್ಕೆ ಪುಪ್ರಕಾರವುಂಟೆ? ಶರಧಿ ಕೊಂಡ ಸಾಗರಕ್ಕೆ ಕುಱುಹಿನ ತಲೆಯುಂಟೆ? ಲಿಂಗವು ನುಟ್ಟಿದ ಅಂಗಕ್ಕೆ ಪುಣ್ಯವೆಂಬುದು ಪುಸಿ ನಾಸ್ತಿನಾಥಾ.

(2) ಉದ್ಭವನೇಜುವುದಕ್ಕೆ ಗದ್ದುಗೆಯಿಲ್ಲದೆ ಎಯ್ದಬಾರದು; ಚಿದ್ರೂಪನನಱಿವುದಕ್ಕೆ ಅರ್ಚನೆ ಪೂಜನೆ ನಿತ್ಯನೇಮವಿಲ್ಲದೆ ಕಾಣಬಾರದು. ಅದನು ಸತ್ಯದಿಂದ ಮಾಡಿ ಅಸತ್ಯವ ಮಚ್ಚೆದಜೆ ಇದೇ ಸತ್ಯ ನಾಸ್ತಿನಾಥಾ

ಜೊಂದರ ಮಾಯಣ್ಣ. ಸು. 1160

ಇವನ ಅಂಕಿತ ಶಂಭುಸೋಮನಾಥಲಿಂಗ. (ದ್ವಿ. ಸಂಪುಟ 123)

(1) ಮುನ್ನ ಪರಸತಿ ಪಾರ್ವತಿಯೆಂದು ನಡಸಿತ್ತು ನುಡಿಸಿತ್ತು ಗುರುವ ಜನ್ನ ಬಳಿಕ ಪರಣಸತಿ ಪಾರ್ವತಿಯೆಂದು ನಡಸಿತ್ತು ನುಡಿಸಿತ್ತು ಗುರುವಚನ;

ಇನ್ನು ಸತಿಯರೆಲ್ಲ ಗುರುಸತಿಯರೆಂದು ನಡಸಿತ್ತು ನುಡಿಸಿತ್ತು ಗುರುವಚನ. ಶಂಭು ಸೋಮನಾಥಲಿಂಗನ ಸಂಗ ಸುಸಂಗವ ಮಾಡಿತ್ತು ಗುರುವಚನ.

(2) ಎನ್ನ ತ್ರಿವಿಧಾತ್ಮ ನಿಮ್ಮ ಹೆಂಡಿರು. ಸತ್ವರಜಸ್ತಮಂಗಳು ನಿಮ್ಮ ಭೃತ್ಯರಯ್ಯಾ. ಅಂತಃಕರಣಚತುಷ್ಟಯಂಗಳು ನಿಮ್ಮ ಬಾಣಸಿಗರಯ್ಯಾ. ಅಷ್ಟ ಮದಂಗಳು ನಿಮ್ಮ ದಳವಾಯಿಗಳು. ನವರಸಂಗಳು ನಿಮ್ಮ ಭಂಡಾರಿಗಳಯ್ಯಾ ದಶವಾಯುಗಳು ನಿಮ್ಮ ಛತ್ರಚಾಮರಸೀಗುರಿಗಳು. ಶಂಭುಸೋಮನಾಥಲಿಂಗ ನಿಮಗೆನ್ನ ಕಾಯ ಮುಂತಾಗಿ ಬಾಹ್ಯಾಂತರ ಡಿಂಗರಿಗರಯ್ಯಾ.

ಡೋಹರ ಕಕ್ಕಯ್ಯ. ಸು. 1160

ಈತನ ಅಂಕಿತ ಅಭಿನವಮಲ್ಲಿಕಾರ್ಜುನ (ದ್ವಿ. ಸಂಪುಟ 123). ಕೆಲವು ಕಡೆ ಅಭಿನವಚೆನ್ನಮಲ್ಲಿಕಾರ್ಜುನ ಎಂದೂ ಇರುವಂತೆ ತೋರುತ್ತದೆ.

ನೆನೆಯಲಾಯೆ ನಿರ್ಧರಿಸಲಾಯೆ ಮನವಿಲ್ಲಾಗಿ, ಭಾವಿಸಲಾಯೆ ಬೆರಸಲಾಯೆ ಭಾವ ನಿರ್ಭಾವವಾಯಿತ್ತಾಗಿ, ಧ್ಯಾನಮೌನವನಾಯೆ ಧ್ಯಾನಮೌನಾತೀತ ತಾನೆಯಾಯಿತ್ತಾಗಿ, ಜ್ಞಾತೃಜ್ಞಾನಜ್ಞೇಯಂಗಳೆಲ್ಲವ ವಿಾಜಿ' ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

(ಪ್ರ. ಸಂಪುಟ 196) ಹಡಪದ ಅಪ್ಪಣ್ಣ. ಸು. 1160

ಇವನ ವಚನಗಳಲ್ಲಿ ಬಸವಪ್ರಿಯ ಕೂಡಲಚೆನ್ನಸಂಗಮದೇವ ಎಂಬ ಅಂಕಿತವಿದೆ.

ಅನೇಕಪರಿಯ ಭಕ್ತಿಯ ವೇಷವನಳವಡಿಸಿಕೊಂಡು ಮನೆಮನೆದಪ್ಪದೆ ತಿರುಗುವೆನು. ಅವರಿಚ್ಛೆಗೆ ಅನುಮಾನವಿಡಿದು ನುಡಿವೆನು ಅವರ ಮನೋಧರ್ಮವನಱಿಯದೆ ನುಡಿದೆನಾದಡೆ ಅನೇಕಪರಿಯಲ್ಲಿ ಭಂಗವಡುವೆನು. ದಿಟದಭಕ್ತಸಂತೆ ಪುರಾತನರ ವಚನಂಗಳ ಉದರನಿಮಿತ್ತವಾಗಿ ಬಲಿಸುನೆನು ಕಡುಪಾಪಿ. ಇನ್ನೇನು ಪದನಯ್ಯ ಬಸವಪ್ರಿಯಕೂಡಲಚೆನ್ನಸಂಗಮದೇವಾ[1]?

---

[1] ಇವನ ಒಂದು ವಚನವು (ಪರರಾಶೆಯೆಂಬ ಜ್ವರಹತ್ತಿ ಇತ್ಯಾದಿ) ಪ್ರಥಮ ಸಂಪುಟದ 77 ನೆಯ ಪುಟದಲ್ಲಿ ಚೆನ್ನಬಸವನದೆಂದು ತಪ್ಪಾಗಿ ಕೊಟ್ಟಿದೆ.

(ಪ್ರ. ಸಂಪುಟ 196) ಬಾಚಿಕಾಯಕದ ಬಸವಪ್ಪ. ಸು. 1160.

ಈತನ ಅಂಕಿತ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಶಿಕಾವಿಮಲ ರಾಜೇಶ್ವರಲಿಂಗ.

ಜಾಲಗಾಱಂಗೆ ಸುವರ್ಣದ ವಳಿಯನಱಿದು ತೊಳೆಯಬೇಕು. ಬಲೆಗಾಱಂಗೆ ಮತ್ಸ್ಯದ ಬೆಂಬಱಿಯನಱಿದು ಕಲ್ಲಿಯ ಇಲಿ'ಯಬಿಡಬೇಕು. ಶಬರಂಗೆ ಸಂಭ್ರಮವ ಬಿಟ್ಟು ತರುಲತೆಪರ್ಣಗಳಂತಿರಬೇಕು. ಇಂತೀ ಹೊಲಬಿನ ತಿಱಿನಂತೆ ಗುಣವಿವರವನಱಿದು ಆರಾರ ಇರವಿನ ತಿಱಿನಱಿದು ಅನುಸರಿಸಲಾಗಿ ವಿರತಿಗಳ ನಿಜವನಱಿದು ವೇಷಗಳ್ಳರ ನಿಹಿತವ ನೋಡಿ ವಂಚಕರ ಪರಿಹಾಸಕರ ನೀತಿಯು ತಿಳಿದು ಮತ್ತಾನ ರೀತಿನೀತಿಗಳಲ್ಲಿಯೂ ಮನತಾರದೆ ತನ್ನ ಸುನೀತಿಯನೆ ಬೀಱಿ ತನ್ನ ಸದ್ಗುಣರೀತಿಯನೆ ತೋಱಿ' ತನ್ನ. ಸದ್ಗುಣವಾಸನೆಯ ತೀಪಿ ಸತ್ಕುಲ ಭಕ್ತಿಯನೆ ತನ್ನ ಸತ್ಯವನೆ ಸಾಱಿ ಇವ್ವಾತ ತ್ರಿವಿಧದಱನಲ್ಲ, ಅರಿಷಡ್ವರ್ಗಂಗಳೊಳು ನಿಲ್ಲ, ಪ್ರಪಂಚೇಂದ್ರಿಯಂಗಳ ಸಂಚಿನ ಸುಖದವನಲ್ಲ, ಮಿಕ್ಕಾದ ಬಹವಿಷಯದ ಗೊಂಜಲ ತೊಂಬೆಯವನಲ್ಲ, ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲರಾಜೇಶ್ವರಲಿಂಗವು ತಾನು ತಾನೇ.

(ಪ್ರ. ಸಂಪುಟ 196) ಕಾಳವ್ವೆ. ಸು. 1160

ಇವಳು ಬಾಚಿಕಾಯಕದ ಬಸವಪ್ಪನ ಹೆಂಡತಿ; ಈಕೆಯ ಅಂಕಿತ ಕರ್ಮಹರ ಕಾಳೇಶ್ವರ.

ಕೈತಪ್ಪಿ ಕೆತ್ತಲು ಕಾಲಿಂಗೆ ಮೂಲ; ಮಾತುತಪ್ಪಿ ನುಡಿಯಲು ಬಾಯಿಗೆ ಮೂಲ; ಪ್ರತಿಜ್ಞೆನನ ನೆರೆಯಲು ನರಕಕ್ಕೆ ಮೂಲ; ಕರ್ಮಹರಕಾಳೇಶ್ವರಾ.

(ಪ್ರ. ಸಂಪುಟ 200) ಮರುಳುದೇವ. ಸು 1160.

ಇವನ ವಚನಗಳಲ್ಲಿ ಶುದ್ಧಸಿದ್ಧಪ್ರಸಿದ್ಧಪ್ರಭುವೇ ಶಾಂತಚೆನ್ನಮಲ್ಲಿಕಾರ್ಜುನಯ್ಯ ಎಂಬ ಅಂಕಿತವು ದೊರೆಯುತ್ತದೆ.

ಶ್ರೋತ್ರದಲ್ಲಿ ಕೇಳುವ ಸುವಾಕ್ಯದ ಪರಿಣಾಮವನು ಮನದ ಅವಧಾನದಲ್ಲಿ ಲಿಂಗಕ್ಕೆ ಸಮರ್ಪಿಸಬೇಕು. ನೇತ್ರದಲ್ಲಿ ಕಂಡ ರೂಪನು ಮನದ ಅವಧಾನದಲ್ಲಿ

ಲಿಂಗಕ್ಕೆ ಸಮರ್ಪಿಸಬೇಕು. ನಾಸಿಕದಲ್ಲಿ ಬಂದ ಸುಗಂಧದ ಪರಿಣಾಮವನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು ಜಿಹ್ವೆಯಲ್ಲಿ ಬಂದ ಸುರುಚಿಯನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು. ಇದೇ ಅರ್ಪಿತದ ಮುಖ ಕೇಳಿರಣ್ಣಾ. ನಮ್ಮ ಶುದ್ಧಸಿದ್ಧಪ್ರಸಿದ್ಧ ಪ್ರಸನ್ನಪ್ರಭುವೇ ಶಾಂತಮಲ್ಲಿಕಾರ್ಜುನಯ್ಯನಲ್ಲಿಯೂ ಈಯರ್ಪಿತಮುಖವಹಿದು ಅರ್ಪಿಸಬಲ್ಲಡೆ ತೃಪ್ತಿಯನೆಯ್ದುವನು.

ಮಾದಾರ ಚೆನ್ನಯ್ಯ. ಸು. 1160.

ಈತನ ಅಂಕಿತಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ ಅಱಿ ನಿಜಾತ್ಮರಾಮರಾಮನ.

ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ. ನುಡಿ ಲೇಸು ನಡೆಯಧಮವಾದಲ್ಲಿ ಅದೇ ಬಿಡುಗಡೆ. ಇಲ್ಲದ ಹೊಲೆ ಕಳವು ಪರದಾರಂಗಳಲ್ಲಿ ಹೊಲಬನಱಿಯದೆ ಕೆಟ್ಟು ನಡೆಯುತ್ತ ಮತ್ತೆ ಕುಲಜರೆಂಬ ಒಡಲುಂಟೆ? ಆಚಾರವೇ ಕುಲ, ಅನಾಚಾರವೇ ಹೊಲೆ. ಇಂತೀಉಭಯವ ತಿಳಿದು ಱಿಯಬೇಕು. ಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ ಅಱಿ ನಿಜಾತ್ಮರಾಮರಾಮನಾ.

ದಸರಯ್ಯ. ಸು. 1160.

ಇವನ ಅಂಕಿತ ದಸರೇಶ್ವರಲಿಂಗ.

(1) ನುಡಿಯಲ್ಲಿ ಕಿಂಕರತ್ವವನಱಿದು, ಕರವ ಬೀಸುವಲ್ಲಿ ತುಷಾರಕೀಟವನಱಿದು, ಅಡಿಯಿಡುವಲ್ಲಿ ಪೊಡವಿಯಲ್ಲಿ ಹೊಱಜಹೊಮ್ಮಿದ ಜೀವನಜೇತನಾದಿಗಳನಱಿದು, ಮತ್ತೆ ಗಿಡವ ಹಿಡಿವಲ್ಲಿ ಮತ್ತೊಂದ ಒಡಗೂಡುವಲ್ಲಿ ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಪುದಿಪುಚ್ಚವಿಲ್ಲದಿರಬೇಕು. ಇಂತೀಸಡಗರದ ಚಿತ್ತ ದಸರೇಶ್ವರಲಿಂಗವನೊಡಗೂಡುವ ಭಕ್ತಿ.

(2) ಸರ್ವವನಱಿದಲ್ಲಿ ಸರ್ವಜ್ಞನಾದಲ್ಲಿ ಇದಿರೆಲ್ಲ ತನ್ನಲ್ಲಿ ತಾನೆಲ್ಲ ಇದಿರಲ್ಲಿ. ತನ್ನ ಭಿನ್ನಭಾವ ಅನ್ಯರಲ್ಲಿ ತೋಱಿ ಅಗುಣ ತನ್ನನೆ ಅನ್ಯವೆನಿಸುವುದು. ತನ್ನಯ ಶಾಂತಿ ಅನ್ಯರಲ್ಲಿ ತೋಱಿ ಅಲ್ಲಿ ಭಿನ್ನಭಾವವಿಲ್ಲದಿರೆ ಅವರನ್ಯರಲ್ಲ ಎಮ್ಮವರೆಂ

ಬರು. ಅದು ತನ್ನ ಗುಣ ಅನ್ಯವಿಲ್ಲ ಎಂಬುದನಱಿದು ತನ್ನೊಪ್ಪ ದರ್ಪಣದಲ್ಲಿ ತೋಱುವಂತೆ. ಇದಕ್ಕೆ ಕರ್ಕಶವಿಲ್ಲ ದಸರೇಶ್ವರಲಿಂಗವನಱಿ'ವುದಕ್ಕೆ.

ವೀರಪ್ಪ. ಸು. 1160.

ಈಕೆ ದಸರಯ್ಯನ ಹೆಂಡತಿ; ಇವಳ ಅಂಕಿತ ಗುರುಶಾಂತೇಶ್ವರ.

ಚರಣಾಯುಧ ವೇಳೆಯನಱಿ'ವುದಯ್ಯಾ. ಭಕ್ತ ಪ್ರತಿಜ್ಞೆಯನನಱಿ'ದು ನೆರೆಯನಯ್ಯಾ. ನೆರೆದರೆ ನರಕ ಗುರುಶಾಂತೇಶ್ವರಾ.

ಮೋದರ ಕೇತಯ್ಯ. ಸು. 1160.

ಇವನ ವಚನಗಳಲ್ಲಿ ಗೌರೇಶ್ವರ ಎಂಬ ಅಂಕಿತವಿದೆ.

ಇಂದ್ರಿಯಂಗಳ ಕೊಂದಿಹೆನೆಂದಡೆ ಅವು ಕಂದರ್ಪನ ಹಂಗು. ಕಂದರ್ಪನ ಕೊಂದಿಹೆನೆಂದಡೆ ಅವು ಕಂಗಳ ಲಾಭ. ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು. ಅದು ನಿರಂಗಂಗಲ್ಲದೆ ಜಗದ ಹಂಗಿನವರಿಗಿಲ್ಲ ಎಂದೆ ಗೌರೇಶ್ವರಾ

ಕರುಳಕೇತಯ್ಯ. ಸು. 1160.

ಈತನ ವಚನಗಳಲ್ಲಿ ಮನಕ್ಕೆ ಮನೋಹರ ಶಂಭೇಶ್ವರಲಿಂಗ ಎಂಬ ಅಂಕಿತವಿದೆ.

ತನಗಲ್ಲದಾದುದ ಘಟ ಸೋಂಕಿದಲ್ಲಿ ಅಲ್ಲಿಯೆ ಕಡಿವೆನು. ತನಗಲ್ಲದಾದುದ ಕೈಮುಟ್ಟಿದಲ್ಲಿ ಅಲ್ಲಿಯೆ ತೆಗೆವೆನು. ತನಗಲ್ಲದಾದುದ ಕಿವಿ ಕೇಳಿದಲ್ಲಿ ಅಲ್ಲಿಯೆ ಗೂಂಟವ ಬಲಿವೆನು. ತನಗಲ್ಲದಾದುದ ನಾಸಿಕ ವಾಸಿಸಿದಲ್ಲಿ ಅಲ್ಲಿಯೆ ದಸಿಯುದಕ್ಕನೇಱಿ'ಸುವೆನು. ದೃಷ್ಟಿ ಅನುದಪ್ಪಿನೋಡಿದಲ್ಲಿ ಅಲ್ಲಿಯೆ ಕಿತ್ತಿಡುವೆನು. ಚಿತ್ತ ಅನುದಪ್ಪಿ ಮತ್ತೊಂದ ನೆನೆದಡೆ ಆತ್ಮನನಲ್ಲಿಯೆ ಕಿತ್ತುಹಾಕುವೆನು. ಇದಕ್ಕೆ ನೀವೇ ಸಾಕ್ಷಿ ಮನಕ್ಕೆ ಮನೋಹರ ಶಂಭೇಶ್ವರಲಿಂಗವೇ.

ಕಲಕೇತಬೊಮ್ಮಯ್ಯ. ಸು. 1160.

ಇವನ ವಚನಗಳಲ್ಲಿ ಮೋಳಿಲೇಶ್ವರಲಿಂಗ ಎಂಬ ಅಂಕಿತವು ಉಪಯೋಗಿಸಿದೆ.

ಜೇಡಲೇತಕ್ಕೆ ಕಾಯಕವಮಾಡಿಹೆನೆಂದು ? ಕೊಡದೆಂಡೆ ಒಡಗೂಡಿ

ಬಯ್ಯಲೇತಕ್ಕೆ ? ಭಕ್ತರು ಮಾಡಿಹರೆಂದು ಗಡಿತಡಿಗಳಲ್ಲಿ ಕವಾಟಮಂದಿರಗಳ ಮುಂದೆ ಗೊಂದಿಗಳಲ್ಲಿ ನಿಂದು ಕಾಯಲೇತಕ್ಕೆ ? ಈ ಗುಣ ಕಾಯಕದಂದವೆ ? ಈ ಗುಣ ಹೊಟ್ಟೆಗೆ ಕಾಣದ ಸಂಸಾರದ ಘಟ್ಟುವನ ಇರವು. ಉಭಯಭ್ರಷ್ಟಂಗೆ ಕೊಟ್ಟ ದ್ರವ್ಯ ಮೇಖಲೇಶ್ವರ ಲಿಂಗಕ್ಕೆ ಮುಟ್ಟದೆ ಹೋಯಿತು.

ಒಳ್ಳೇಶ ಮಲ್ಲಯ್ಯ. ಸು. 1160.

ಇವನ ಅಂಕಿತ ಬಳ್ಳೇಶ್ವರಲಿಂಗ.

ಆ ಪರಮನೆಂಬುದು ನಿಮ್ಮ ಭೇರಿ. ಬೇಡಿದುದನೀವನೆಂಬುದು ನಿಮ್ಮ ಶಂಬಟ. ಜಗದ್ವಂದಿತ ಲೋಕದೊಡೆಯನೆಂಬುದು ನಿಮ್ಮ ಶಂಖ. ಶಿವನಲ್ಲದೆ ಪರದೈವವಿಲ್ಲೆಂಬುದು ನಿಮ್ಮ ಡವರುಗ. ಶಿವಕೊಡನೆಂಬವರ ಬಾಯ ತ್ರಿಶೂಲದಲ್ಲಿಟ್ಟಿನ ಬಳ್ಳೇಶ್ವರಲಿಂಗದ ಡಂಗುರ ಮೂಜಗದೊಳಯ್ಯ.

ಮಿಂಡಸಂಗಯ್ಯ. ಸು. 1160.

ಈತನ ಅಂಕಿತ ತರುಣರಸಂಗಮಲಿಂಗದೇವ

ಶಮೆದಮೆಗಳಲ್ಲಿ ತ್ರಿಕರಣದಿಂದ ಶುದ್ಧವಾಗದ ಪರಿಯಂತ ಪೂಜೆಯೆಲ್ಲಿಹುದು ? ಅವರ ಮಹಿಮೆ ಅವರ ಗುಣವು ಪೂಜೆಯಲ್ಲಿ ಕಾಣಬಹುದಲ್ಲದೆ ಬೇಱೆ ಅಱಿಸಲುಂಟೆ ತರುಣಸಂಗಮಲಿಂಗದೇವಾ.

ರಾಯಸದ ಮಂಚಣ್ಣ. ಸು. 1160.

ಈತನ ವಚನಗಳಲ್ಲಿ ಜಾಂಬೇಶ್ವರ ಎಂಬ ಅಂಕಿತವಿದೆ.

(1) ಕೈದು ಮೊನೆಯೇಱುವುದಕ್ಕೆ ಮುನ್ನವೆ ಕಟ್ಟಬಲ್ಲಡೆ ಕೈದೇನವಾಡುವುದು ? ಹಾವು ಬಾಯಿಬಿಡುವುದಕ್ಕೆ ಮೊದಲೆ ಹಿಡಿದ ಮತ್ತೆ ವಿಷವೇನವಾಡುವುದು ? ಮನವಿಕಾರಿಸುವುದಕ್ಕೆ ಮೊದಲೆ ಮಹದಲ್ಲಿ ನಿಂದಮತ್ತೆ ಇಂದ್ರಿಯಂಗಳೇನವಾಡಲಾಪುವು ಜಾಂಬೇಶ್ವರಾ.

(2) ಊರ ವಂಕದ ಹೊಱಗಿರ್ದು ಮನೆಯ ಬಾಗಿಲ ಕಾಣೆನೆಂದು ಅಱಿಸುವನಂತೆ, ಇದಿರಲ್ಲಿ ತೋಱುವ ಕಾಱುಹ ಮಱಿಸು ಅಱಿವನೆನ್ನೊಳಕೊಂಡೆನೆಂ

ಬವನಂತೆ, ಜಂಬುಕಶಸ್ತ್ರದ ಫಲವನುಂಗಿ ಜಾಬೂದ್ವೀಪವೆಲ್ಲ ಪ್ರಳಯವಾಯಿತ್ತೆಂದಡೆ ಅದು ಚಂದವೆ ಜಾಂಬೇಶ್ವರಾ.

ಗಾವುದಿ ಮಾಚಯ್ಯ[1]. ಸು. 1160.

ಇವನ ವಚನಗಳಲ್ಲಿ ಕಲ್ಯಾಣದ ತ್ರಿಪುರಾಂತಕಲಿಂಗ ಎಂಬ ಅಂಕಿತದೊಡನೆ ಈತನ ಹೆಸರೂ ಬರುತ್ತದೆ.

(1) ಮುನ್ನಗಟಿಸಿದವರೊಡವೆಯು ಈಗ ಕಂಡು ಮತ್ತೆ ಇನ್ನಾರಿಗೆ ಗಟಿಸಿಹಿರಣ್ಣಾ. ಅಂದಂದಿಗೆ ಮಟಿ ಬೆಳೆ ತಾನಿದ್ದಂದಿಗೂ ತಪ್ಪದು. ಇದನು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿಮಾಚಯ್ಯ ಹೇಟಿನುದು ದಿಟವೆನ್ನಿರಣ್ಣಾ.

(2) ಭಕ್ತರು ಬಯಕೆಯನಿರಿಸಿದಡೆ ಅದು ಸತ್ಕಾಯ ಮಾಂಸ. ವಿರಕ್ತರು ದ್ರವ್ಯವ ಮುಟ್ಟಿದಡೆ ಅದು ಕತ್ತೆಯ ಹಡುಹು. ಹೀಗೆ ತಪ್ಪಿದರೆಂಬೆ. ಇದು ಸತ್ಯ. ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಟಿನುದು ಸತ್ಯವೆನ್ನಿರಣ್ಣಾ.

ತಳವಾರ ಕಾಮಿದೇವ[1]. ಸು. 1160.

ಇವನ ಅಂಕಿತ ಕಾಮಹರಪ್ರಿಯ ರಾಮನಾಥ.

ಕಾಲವಂಚಕನಾಗಿ ಜಂಗಮಕಿಕ್ಕಿದಡೆ ಕರ್ಮವೆ ತಿಂಬುದು. ಉಪಚರಿಸಿಕೊಂಬನಾಗಿ ತ್ರಿಸಂಧಿಯು ಶಿವಪೂಜೆಯು ಮಾಡಿದಡೆ ಅದು ಹಸಿವಿಲ್ಲದ ಗ್ರಾಸ. ಅಸಮಾಕ್ಷನ ಮುಟ್ಟದು. ಇದು ಹುಸಿಯಲ್ಲವೆಂದೆ ಕಾಮಹರಪ್ರಿಯ ರಾಮನಾಥಾ.

---

1. ಚನ್ನಬಸವಪುರಾಣದಲ್ಲಿ ಗಾವುದಿ ಮಾರಿತಂದೆ, ತಳವಾರ ರಾಮಯ್ಯ ಎಂದಿದೆ, ಕಾಂಡ 5, ಸಂಧಿ 4.

ಹೊಡೆಹುಲ್ಲ ಬಂಕಣ್ಣ. ಸು. 1160.

ಈತನ ಅಂಕಿತ ಕುಂಭೇಶ್ವರಲಿಂಗದಲ್ಲಿರ್ದ ಜಗನ್ನಾಥ.

ಕೂಲಿ ಕೃಷಿ ಕಾಯಕಂಗಳಿಂದ ನೂಡುವ ಸೇವೆ ಅದಾವ ತೆಱನೆಂದಱಿದು ಭಾವಶುದ್ಧವಾಗಿ ನೂಡುವ ಕಾಯಕವಂತನಿರವು ಎಂತುಟೆಂದಡೆ ಮಾಡಿಕೊಂಡ ಕೃತ್ಯದಲ್ಲಿ ಆರಿಗೂ ಒಡಲೆಡೆಗುಡದೆ ಸಂಕಲ್ಪನಱಿದು ಪ್ರಸಾದವನೆಡೆಮಾಡ ಬೇಕು. ಅದು ನಿರ್ಮಾಲ್ಯವಲ್ಲ. ಅದು ಲಿಂಗಾರ್ಚನೆಗ ಕುಂಭದಲ್ಲಿ ನಿಂದ ಪ್ರಸಾದ. ಇದಱ ಸಂದೇಹವ ಹಱಿದು ಕಾಯಕಗೊಂಡ ಪ್ರಸಾದಿಗೆ ಕುಂಭೇಶ್ವರ ಲಿಂಗ ದಲ್ಲಿರ್ದ ಜಗನ್ನಾಥ ಸಾಕ್ಷಿಯಾಗಿ ನನೋನವೋ ಎನುತಿರ್ದನು.

ತೆಲುಗ ಜೊಮ್ಮಯ್ಯ. ಸು 1160.

ಇವನ ಅಂಕಿತವು ತೆಲುಗೇಶ್ವರ ಎಂದಿರುವಂತೆ ತೋರುತ್ತದೆ.

ಕಾವ ಸನ್ನದ್ಧನಾಗಿ ತಾ ಜೆಲುವನಾದಡೆ ಕಾಮಿನೀ ಜನವೆಲ್ಲ ಮೆಚ್ಚ ಬೇಕು. ದಾನಗುಣವುಳ್ಳವ ಚರೆದೀವನಾದಡೆ ಯಾಚಕ ಜನವೆಲ್ಲ ಮೆಚ್ಚಬೇಕು. ವೀರನಾದಡೆ ವೈರಿಗಳು ಮೆಚ್ಚಬೇಕು. ಖೂಳನಾದಡೆ ತನ್ನತಾ ಮೆಚ್ಚಿಕೊಂಬ. ಎನ್ನದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದಡೆ ದೇವರು ಮೆಚ್ಚೆ ಜಗವು ತಾ ಮೆಚ್ಚುವುದು.

ವೈದ್ಯಸಂಗಣ್ಣ. ಸು. 1160.

ಈತನ ಅಂಕಿತ ಮರುಳು ಶಂಕರಪ್ರಿಯಸಿದ್ಧ ರಾಮೇಶ್ವರಲಿಂಗ.

ಭಕ್ತಂಗೊಂದೇ ವಾಕ್ಯ. ಬಾಣಿಗೊಂದೇ ಫಲ. ವಿರಕ್ತಬಿಟ್ಟುದ ಹಿಡಿ ಬಲ್ಲಿ ಮತ್ತೆ ಮುಟ್ಟಿದಡೆ ಸತ್ಕರ್ಮನಾಯ ಹಡುಹು. ಮತ್ತೆ ಸತ್ಕ್ರಿಯೆಯಲ್ಲಿ ನಡೆವ ತನ್ನ ನಿತ್ಯನೇಮವ ತಪ್ಪಿಕೆಟ್ಟು ನಡೆದು ಮತ್ತೆ ದ್ರವ್ಯವ ಕೊಟ್ಟು ಭಕ್ತರೊಡೆಯರಲ್ಲಿ ಪರಿಹರಿಸಿಕೊಂಡಿಹನೆಂಬ ಬಹುವಿಟ್ಟಿಯ ಭಂಡರ ಕಂಡಡೆ ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವಾಯಿತ್ತಾದಡೂ ಒಡಗೂಡಲೊಲ್ಲೆ.

ಗಾಣದ ಕನ್ನಪ್ಪ. ಸು. 1160.

ಇವನ ವಚನಗಳಲ್ಲಿ ಗುಹೇಶ್ವರನಲ್ಲಯ್ಯ ಎಂಬ ಅಂಕಿತವಿದೆ.

ಪುಣ್ಯಪಾಪವಿಲ್ಲಾಗಿ ಯಮನ ಹಂಗಿಲ್ಲ. ಬಂದುದನುಂಬನಾಗಿ ಮೂವರ ಹಂಗಿಲ್ಲ. ಭವಗೆಟ್ಟನಾಗಿ ದೈವದ ಹಂಗಿಲ್ಲ. ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ. ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯ ನೊಬ್ಬನೆ.

ರಕ್ಕಸ ಬೊಮ್ಮಯ್ಯ ಸು. 1160.

ಈತನ ವಚನಗಳಲ್ಲಿ ರಕ್ಕಸನೊಡಯ ಎಂಬ ಅಂಕಿತವು ಉಪಯೋಗಿಸಿದೆ.

ನಾನು ನಾನಾದ ಕಾರಣ ಎನಗೆ ಗುರುವಿಲ್ಲ. ನಾನೆಂಬುದನರಿಯನಾಗಿ ಎನಗಾಲಿಂಗವಿಲ್ಲ. ನಾ ಮಾಡದವನಾಗಿ ಎನಗಾ ಜಂಗಮವಿಲ್ಲ. ಇಂತೀ ಮೂರು ಇಲ್ಲದವಂಗೆ ಭಕ್ತಿಪಥವಿಲ್ಲ. ಇದನಿನ್ನಾರ ಕೇಳುವೆ? ರಕ್ಕಸನೊಡೆಯ ಕೊಟ್ಟುದು ಬೇಡಾ.

ಸೋಮದೇವಯ್ಯ. ಸು. 1160.

ಇವನ ವಚನಗಳಲ್ಲಿ ಗಾರುಡೇಶ್ವರಲಿಂಗ ಎಂಬ ಅಂಕಿತವಿದೆ.

ಸರ್ವಾಂಗದಲ್ಲಿ ವಿಷವಿದ್ದಿತ್ತೆಂದಡೆ ಸರ್ವಾಂಗದಲ್ಲಿ ವಿಷ ತಪ್ಪದಿಪ್ಪುದೆ ವಿಷವಿಪ್ಪ ಠಾವು ಒಂದಲ್ಲದೆ? ಸೃಷ್ಟಿಯಲ್ಲಿ ನಿಕ್ಷೇಪವಿದ್ದಿತ್ತೆಂದಡೆ ಅಲ್ಲಿ ಎಲ್ಲ ಠಾವಿನಲ್ಲಿ ಅಡಗಿಪ್ಪುದೆ? ಸಮಯಕುಲದಲ್ಲಿ ವಸ್ತುಪರಿಪೂರ್ಣವೆಂದಡೆ ಪಾಷಂಡಿಗಳಲ್ಲಿ ವಸ್ತುಪರಿಪೂರ್ಣವಾಗಿಪ್ಪುದೆ ಇಪ್ಪ ಸತ್ಯ ಸನ್ಮಾರ್ಗದಲ್ಲಿಯಲ್ಲದೆ ಪರಮವಿರಕ್ತನಲ್ಲಿಯಲ್ಲದೆ? ನೆಲದಲ್ಲಿದ್ದ ನಿಧಾನವನಱಿವು ಅಗೆವುದು, ವಿಷವಿದ್ದ ಬಾಯ ಮುಚ್ಚಿ ಹಿಡುವುದು, ವಸ್ತುವಿದ್ದಠಾವ ನೆಱಿಯಱಿವು ಪೂಜಿಸುವುದು, ಭೂತ ಅಱಿವುಳ್ಳವರಲ್ಲಿ ಎರವಿಲ್ಲದ ಕೂಟವು, ಇಂತಿವು ಜಗದಲ್ಲಿ ಅಱಿದು ಮಾಡಿದ ಪರಿತೋಷ ಗಾರುಡೇಶ್ವರ ಲಿಂಗದಲ್ಲಿ ಎಡಹಿದವನ ಕೂಟ.

ಹಡಪದ ರೇಚಣ್ಣ. ಸು. 1160.

ಈತನ ಅಂಕಿತ ನಿಃಕಳಂಕ ಕೂಡಲ ಚನ್ನಸಂಗಮದೇವ.

ಮರದ ದೇವರಿಗೆ ಉರಿಯ ಪೂಜಿಸುಂಟೆ? ಮಣ್ಣಿನ ಹಲ್ಲಿಗೊಲ್ಲಲ್ಲಿ ತುಂಬಿದ ತೊಡಿಸಿಯ ಹಾಯಲು ಬಹುದೆ? ಇಂತೀ ದೃಷ್ಟವ ಕಂಡು ಕಾಣಿಸದಲ್ಲಿ ಪ್ರಮಾಣಿಸದಲ್ಲದೆ ಆವ ತೆರಿನು? ಹಾಗೆ ಬಲ್ಲಿಹುಂಡರ ಆಚಾರಭ್ರಷ್ಟರ ಅರ್ಥಿ ಕಾಲಿರ ಚರ್ಚೆಗೋಷ್ಠಿವಂತರ ಬಹು ಯಾಚಕರ ಪಗುಡಿ ಪರಿಹಾಸಕರ ತ್ರಿವಿಧದಲ್ಲಿ ಸೂತಕವನರಿಸುವರ ವಿಶ್ವಾಸಘಾತಕರ ಅಪ್ರಮಾಣಪಾತಕರ ಭಕ್ತಿ ತೊಟ್ಟಲ್ಲಿ ಭಕ್ತರೆಂದಡೆ ಎರಕ್ಕಿ ತೊಟ್ಟಲ್ಲಿ ಕರ್ತರೆಂದಡೆ ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ ನಾನೀ ತಪ್ಪುಕಂಡಲ್ಲಿ ಎತ್ತಿ ತೂರಿವೆನು. ಗೋಷ್ಠಿಯಲ್ಲಿ ಕುಚಿತ್ತ ಬಿಡದಿದ್ದಡೆ ಇದು ನಿಮಗೆ ನಿಶ್ಚಯವಲ್ಲ ಎಂಬೆನು. ಮತ್ತೆಯು ಇವ ಕಚ್ಚಿ ಬಿಡಲಾರಿದಿದ್ದಡೆ ನಿಃಕಳಂಕ ಕೂಡಲ ಚೆನ್ನಸಂಗಮ ದೇವರಾಗಿಡೂ ಎತ್ತಿ ಹಾಕುವೆನು.

ಬೊಕ್ಕಸದ ಸಂಗಣ್ಣ. ಸು 1160

ಇವನ ಅಂಕಿತ ಬಸವಣ್ಣ ಪ್ರಿಯ ನಾಗರೇಶ್ವರ ಲಿಂಗ.

ಶೀತವುಳ್ಳನಕ ಉಷ್ಣವ ಪ್ರತಿಪಾದಿಸಬೇಕು. ಉಷ್ಣವುಳ್ಳನಕ ಶೀತವ ಪ್ರತಿಪಾದಿಸಬೇಕು. ದಿವದಲ್ಲಿ ಎಮ್ಮು ರಾತ್ರಿಯಲ್ಲಿ ಒಳಗುವನಕ ಅದ್ವೈತ ಭಿಶಕ್ಯ ನೋಡಾ. ಇದುಕಾರಣ ಕ್ರಿಯೆಯ ಮಲಿನವಿಲ್ಲ. ಅಲಿವು ಶೂನ್ಯವೆಂದು ಬಿಡಲಿಲ್ಲ ಅದು ಶಿಲೆಯ ಮಲಿನವು ಪಾವಕ, ತಿಲದೊಳಗಣ ತೈಲ ಅವರ ಒಲವಲಿವಿಲ್ಲ ಕುಲವ ಕಾಣಬೇಕು ಬಸವಣ್ಣ ಪ್ರಿಯ ನಾಗರೇಶ್ವರ ಲಿಂಗವನಲಿವುದಕ್ಕೆ.

ಕೀಲಾರದ ಭೀಮಣ್ಣ ಸು. 1160

ಈತನ ವಚನಗಳಲ್ಲಿ ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ ಎಂಬ ಅಂಕಿತವಿದೆ.

ವ್ಯಾಧನಂತೆ ಜಾಲಗಾಱನಂತೆ ಹೇಮ ಚೋರನಂತೆ ಇಂತೀ ಗಾಳಹುಳ್ಳರಂತೆ ಮಾತಿನಲ್ಲಿ ಬ್ರಹ್ಮವ ನುಡಿದು ಸರ್ವಸಂಸಾರದಲ್ಲಿ ಏಟು ತ್ತ ಮುಂಟಿಗುತ್ತ

ಬೇಯುತ್ತ ನೋಯುತ್ತ, ಮತ್ತೆ ಬ್ರಹ್ಮನ ಸುಮ್ಮಾನದ ಸುಖಿಗಳೆನಿತಪ್ಪರೋ ? ಇಂತು ನುಡಿಯಬಾರದು, ಸಮಯವ ಬಿಡಬಾರದು ಕ್ರಿಯೆಯಲ್ಲಿದು ಮಹಿಮೆಯಬಾಗದು ಜ್ಞಾನ. ಇಂತೀ ಭೇದವನಱಿದು ಹಱಿವಂಗಲ್ಲದೆ ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗವು ಸಾಧ್ಯವಲ್ಲ.

ಕಾಳವ್ವೆ. ಸು. 1160

ಈಕೆ ಸಿದ್ಧಬುದ್ಧಯ್ಯನ ಹೆಂಡತಿ. ಇವಳ ಅಂಕಿತ ಭೀಮೇಶ್ವರ.

ವೃಕಭ್ರಷ್ಟ ಲಿಂಗಬಾಹ್ಯನ ಕಂಡಡೆ ಸತ್ಕಾರ ಕಾಗೆಯ ಕಂಡಂತೆ. ಅವರೊಡದೆ ನುಡಿಯಲಾಗದು ಭೀಮೇಶ್ವರಾ.

ಬೊಂತಲದೇವಿ. ಸು. 1160

ಇವಳ ಅಂಕಿತ ಬಿಡಾಡಿ.

ಊರೊಳಗಣ ಒಯಲು ಊರ ಹೊಱಿಗಣ ಬಯಲು ಎಂದುಂಟೆ ? ಊರೊಳಗಣ ಬ್ರಾಹ್ಮಣ ಬಯಲು ಊರ ಹೊಱಿಗೆ ಹೊಲೆ ಬಯಲು ಎಂದುಂಟೆ ? ಎಲ್ಲಿ ನೋಡಿದಡೆ ಬಯಲೊಂದೆ ಭಿತ್ತಿಯಿಂದ ಒಳಹೊಱಿಗೆಂಬ ನಾಮವೈಸೆ. ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೇ ಬಿಡಾಡಿ.

ಕದಿರಕಾಯಕದ ರೆಮ್ಮವ್ವೆ. ಸು. 1160

ಈಕೆ ಕದಿರರೆಮ್ಮಯ್ಯನ ಅನುಬಂಧಿನಿ ಎಂದು ತೋರುತ್ತದೆ. ಇವಳ ವಚನಗಳಲ್ಲಿ ಗುಮ್ಮೇಶ್ವರ ಎಂಬ ಅಂಕಿತವೂ ಈಕೆಯ ಹೆಸರೂ ಬರುತ್ತವೆ.

(1) ನಾ ತಿರುಹುವ ಱಾಟೆಯ ಕೀಜಜಾತಿಯ ಕೇಳಿರಣ್ಣಾ. ಅಡಿಯಲಿ ಹಲಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೋದೆ ಮಹಾರುದ್ರ, ರುದ್ರನ ಜೆಂಬಱಿಯವೇಡು ಸೂತ್ರದ ಕಣ್ಣ. ಱಿವೆಂಬ ಕದಿರು, ಭಕ್ತಿಯೆಂಬ ಕಯ್ಯಲ್ಲಿ ತಿರುಹಲಾಗಿ ಸುತ್ತಿತ್ತು ನೂಲು, ಕದಿರು ತುಂಬಿತ್ತು, ಱಾಟೆಯ ತಿರುಹಲಾಱಿತ್ತು. ಎನ್ನ ಗಂಡ ಕುಟ್ಟಿಹ. ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ ?

(2) ಎಲ್ಲರ ಗಂಡಂದಿರು ಪರದಳವಿಭಾಡರು ; ಎನ್ನ ಗಂಡ ಮನೆದಳವಿಭಾಡ. ಎಲ್ಲರ ಗಂಡಂದಿರು ಗಜಬೇಂಟೆಕಾಲಿರು ; ಎನ್ನಗಂಡ ಮನಬೇಂಟೆಕಾಲಿ. ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು ; ಎನ್ನ ಗಂಡ ತಾರದೆ ಇಕ್ಕಿಸಿಕೊಂಬ. ಎಲ್ಲರ ಗಂಡಂದಿರಿಗೆ ಮೂಲಿು, ಎನ್ನ ಗಂಡಂಗೆ ಒಂದು. ಅದೊಂದು ಸಂದೇಹ ಬೇಡ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ.

ರೇಚವ್ವೆ. ಸು. 1160

ಇವಳು ಕಾಳಕೂಟಯ್ಯನ ಹೆಂಡತಿ. ಈಕೆಯ ಅಂಕಿತ ಕುಂಭೇಶ್ವರ.

ಬಂಜೆ ಆವಿಂಗೆ ಕ್ಷೀರವುಂಟೆ ? ವ್ರತಹೀನನ ಬೆರೆಯಲಾಗದು. ಬೆರೆದಡೆ ನರಕ ತಪ್ಪದು. ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ.

ರೆಮ್ಮವ್ವೆ. ಸು. 1160

ಈಕೆಯ ಅಂಕಿತ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ.

(1) ಆಚಾರ ತಪ್ಪಿದಡೆ ಪ್ರಾಯಶ್ಚಿತ್ತವುಂಟೆಂಬ ಅನಾಚಾರಿಗಳ ಮುಖವ ನೋಡಬಹುದೆ ? ಆಚಾರ ನೋಟದ ಹೊನ್ನೇ ? ಮೊತ್ತದ ಮಡಕೆಯೇ ? ಸಂತೆಯ ವ್ಯವಹಾರವೇ ? ಜೂಜಿನ ಮಾತೇ ? ವೇಶಿಯ ಸತ್ಯವೇ ? ಸುಸರವಾಜ್ಯವೇ ? ಇಂತೀವ್ರತದ ವಿಹಿತವ ತಿಳಿದಲ್ಲಿ ಇಷ್ಟಬಾಹ್ಯನ ವ್ರತಭ್ರಷ್ಟನ ನಾನಱಿತು ಕೂಡಿದೆನಾದಡೆ ಅಱಿಯದೆ ಕೂಡಿ ಮತ್ತಱಿದಡೆ ಆತನ ಬಿಡದಿರ್ದಡೆ ಎನಗದೇ ಭಂಗ. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವಾದಡೂ ತಪ್ಪಿದಡೆ ಹೊಱಗೆಂದು ಮತ್ತೆಕೂಡಿಕೊಳ್ಳೆ.

(2) ವೇಷ ಎಲ್ಲಿರದು ? ಸೂಳೆಯಲ್ಲಿ ಡೊಂಬನಲ್ಲಿ ಬಹುರೂಪಿಯಲ್ಲಿ ಇರದೆ ? ವೇಷವ ತೋಱಿಬೆರಸಲ ಹೊರೆವ ದಾಸಿವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ ?

ಕೊಟ್ಟಣದ ಸೋಮವ್ವೆ. ಸು. 1160

ಇವಳ ವಚನಗಳಲ್ಲಿ ನಿರ್ಲಜ್ಜೇಶ್ವರ ಎಂಬ ಅಂಕಿತವು ದೊರೆಯುತ್ತದೆ.

ಹದ ತಪ್ಪಿ ಕುಟ್ಟಲು ಸುಚ್ಚಲ್ಲದೆ ಅಕ್ಕಿಯಲ್ಲ. ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ. ಅಱಿಯದಾದಡೆ ಹೋಗಲಿ. ಅಱಿದು ಬೆರೆದೆನಾದಡೆ ಕನ್ನಗತ್ತಿಯಲ್ಲಿ ಕಿವಿಯ ಕೊಯ್ವಿರಯ್ಯ. ಒಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ.

ದಶಗಣ ಸಿಂಗಿದೇವಯ್ಯ. ಸು. 1160

ಇವನ ಅಂಕಿತ ನಾಚಯ್ಯಪ್ರಿಯ ಮಲ್ಲಿನಾಥಯ್ಯ.

(1) ಸತಿ ಸುತ ಮಾತಾಪಿತರಿಗೆಂದು ಹಡೆದಡೆ ನಿಮ್ಮಾಣೆ ಕಂಡಯ್ಯ.ಮಾನವರ ಸೇವೆಮಾಡಿದಡೆ ನಿಮ್ಮಾಣೆ ಕಾಡಯ್ಯ. ನೀವಲ್ಲದನ್ಯಕ್ಕೆ ಱಿಗಿದಡೆ ನಿಮ್ಮಾಣೆ ಕರೆಡಯ್ಯ. ಎನ್ನ ಸತಿಯಲ್ಲದನ್ಯಸತಿಗಳುಪಿಡಿದಡೆ ನಿಮ್ಮಾಣೆ ಕಂಡಯ್ಯ. ತನುಮನ ವಂಚನೆಯಾದಡೆ ನಾಚಯ್ಯಪ್ರಿಯ ಮಲ್ಲಿನಾಥಯ್ಯ ನಿಮ್ಮಾಣೆ ಕರೆಡಯ್ಯ.

(2) ಹೆಂಡಿರೆನ್ನದೆ ಮಕ್ಕಳೆನ್ನದೆ ತೊತ್ತಿರೆನ್ನದೆ ಬಂಟರೆನ್ನದೆ ಹಗೆಗಳೆನ್ನದೆ ತಪ್ಪೆನ್ನದಯ್ಯ. ಜಾಗ್ರತ್ಸ್ವಪ್ನ ಸುಷುಪ್ತಿಯಲ್ಲಿ ತಪ್ಪೆನ್ನದಯ್ಯ. ನಾಚಯ್ಯ ಪ್ರಿಯ ಮಲ್ಲಿನಾಥಯ್ಯ ನೀನು ಇರ್ದವರ ನೀನೆನ್ನದ ತಪ್ಪೆನ್ನದಯ್ಯ.

ಅನಾಮಿಕ ನಾಚಯ್ಯ. ಸು. 1160

ಈತನ ಅಂಕಿತ ನಾಚಯ್ಯಪ್ರಿಯ ಚೆನ್ನರಾಮೇಶ್ವರ.

ಹಸಿವಿಂಗೆ ಲಯವಿಲ್ಲ. ವಿಷಯಕ್ಕೆ ಕುಲವಿಲ್ಲ. ಮರಣಕ್ಕೆ ಮನ್ನಣೆಯಿಲ್ಲ. ಆಸೆಗೆ ಹವಣಿಲ್ಲ. ವಂಚಕನನಾಮಿಕ. ನಾಚಯ್ಯಪ್ರಿಯ ಚೆನ್ನರಾಮೇಶಯ್ಯಾ.

ಬಾಲಬೊಮ್ಮಣ್ಣ. ಸು. 1160

ಇವನ ವಚನಗಳಲ್ಲಿ ವೀರಶೂರರಾಮೇಶ್ವರ ಲಿಂಗ ಎಂಬ ಅಂಕಿತವಿದೆ.

ಪ್ರಾಣಕ್ಕೂ ಲಿಂಗಕ್ಕೂ ಅನುಸಂಧಾನವ ಮಾಡಬೇಕೆಂಬಲ್ಲಿ ಮಣಿಯ ವಿರಳದಲ್ಲಿ ವಿಹುವ ನೂಲೇ? ರಾಗಾದಿವ್ಯಾಮೋಹ ತಥ್ಯೆ ಮಿಥ್ಯೆ ನಿಶ್ಚಯವಾದಲ್ಲಿಯೆ ವಸ್ತುವಿನಲ್ಲಿ ಅನುಸಂಧಾನವಾದ ಚಿತ್ತವ ಸನ್ನೆ ಸಂಜ್ಞೆಯ ಮಾಡಿ ಪೂಜಿಸಲಿಲ್ಲ. ಆಯುಧದಲ್ಲಿ ಗಾಯವಾದ ಆತ್ಮನ ಸ್ವಸ್ಥದಂತೆ ಆಜಿದಲ್ಲಿಯೇ ಮಾಯಾಹೀನ ಮಲಕರ್ಮವ ಬಿಟ್ಟುದು ವೀರಶೂರರಾಮೇಶ್ವರ ಲಿಂಗವನಱಿದುದು.

ವೀರ ಗೊಲ್ಲಾಳಯ್ಯ. ಸು. 1160.

ಇವನ ಅಂಕಿತ ವೀರ ಬೀರೇಶ್ವರ ಲಿಂಗ.

ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು. ಮರ ದೇವರಲ್ಲ, ಉರಿಗುಲ್ಲಿ ಬೆಂದಿತ್ತು. ಮಣ್ಣು ದೇವರಲ್ಲ, ನೀರಿನ ಕೂನೆಯಲ್ಲಿ ಕರಡಿತ್ತು. ಇಂತಿವನೆಲ್ಲವನಱಿವ ಚಿತ್ತ ದೇವರಲ್ಲ, ಕರಣಂಗಳ ಮೊತ್ತದೊಳಗಾಗಿ ಸತ್ವಗೆಟ್ಟಿತ್ತು. ಇಂತಿವ ಕಳೆದುಱಿದು ವಸ್ತುವಿಪ್ಪೆಡೆಯಾವುದೆಂದಡೆ ಕಂಡವರೊಳಗೆ ಕೈಕೊಂಡಾಡದೆ ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಜಿರೆಯದೆ ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ ಮತ್ತೊಂದ ಪ್ರತಿಷ್ಠೆಯನಱಿಯದೆ ನಿಂದಾತನೆ ಸರ್ವಾಂಗಲಿಂಗಿ, ವೀರಬೀರೇಶ್ವರ ಲಿಂಗದೊಳಗಾದ ಶರಣ.

(ದ್ವಿ|ಸಂಪುಟ 123) ಮಲ್ಲಯ್ಯ. ಸು. 1160.

ಈತನ ಅಂಕಿತ ಗುರುಕುಲದ ಮಲ್ಲಯ್ಯ.

(1) ಒಳಗನಱುಹಿಸಿ ತಿಳುಹಿ| ಹೊಱಗೆ ಬೋಧಿಸಿ ನಿಲಿಸಿ|
ಒಳಗು ಹೊಱಗೆಂದೆಂಬೆರಡ ಕೆಡಿಸಿ |
ಕಳೆಯ ಲಿಂಗದೊಳೊಚ್ಚ| ತವಸೊಪ್ಪುಗೊಳಿಸಿದಾ|
ಕರುಣಿ ಗುರುವಪುರದ ಮಲ್ಲಯ್ಯಗುರುವೇ ||

(2) ಎನ್ನ ಪಾದವೆ ಪಾದತಿಲೆಯಾಗಿ, ಎನ್ನ ಕಾಲೆ ಕಡಹದ ಕಂಬಗಳಾಗಿ, ಎನ್ನ ಕೋಳೆ ನಾಗವೇದಿಗೆಯಾಗಿ, ಎನ್ನ ಅಸ್ಥಿಯೆ ಸುತ್ತಣ ಜಂತೆಯಾಗಿ, ಎನ್ನ ಅಧರವೆ ಒಳ್ಕಿಹ ಬಾಗಿಲಾಗಿ, ಎನ್ನ ಗುರುಕಾರುಣವೆ ಲಿಂಗವಾಗಿ, ಎನ್ನಂಗವೆ ರಂಗಮಧ್ಯವಾಗಿ, ಎನ್ನ ಹೃದಯಕಮಲವೆ ಪೂಜೆಯಾಗಿ, ಎನ್ನ ಕಿವಿಗಳೆ ಕೀರ್ತಿಮುಖವಾಗಿ, ಎನ್ನ ನಾಲಗೆಯೆ ಗಂಟೆಯಾಗಿ, ಎನ್ನ ಶಿರವೆ ಸುವರ್ಣಕಳಶವಾಗಿ, ಎನ್ನ ನಯನವೆ ಕುಂದದ ಜ್ಯೋತಿಯಾಗಿ, ಎನ್ನ ಜನ್ಮವೆ ನಿರ್ಮಲ ಹೊದಿಕೆಯಾಗಿ, ಎನ್ನ ನೆನಹೆ ತನಗೆ ಉಪಹಾರವಾಗಿ ಗುರುಪುರದ ಮಲ್ಲಯ್ಯ ನಿಂದನಾಗಿ.

ಅಣತಿಯ ಚಂದಯ್ಯ. ಸು. 1160

ಇವನ ಅಂಕಿತ ಅಣತಿಯ ಲಿಂಗ.

ನಿಜಜಂಗಮವೆಂದೆನಿಸಿರ್ಪರು ಕುಂದುಕೊಳ್ಳತೆ ನುಡಿವರೆ? ಅನಾದಿ ಜಂಗಮವೆಂದೆನಿಸುವರು ಆಚರಣೆಯ ಭೇದದಲ್ಲಿ ದಾಕ್ಷಿಣ್ಯವಿಡಿದಿರ್ಪರೆ? ಶೂರನು ರಣಪ್ರಸಂಗದಲ್ಲಿ ಮಗನ ನೋಡುವನೆ? ಇದು ಕಾರಣ ತಮ್ಮವರೇನು ಅನ್ಯರೇನು ಮೃದುವಾಗಿ ಮಾತಾಡರು ಅಣತಿಯ ಲಿಂಗದ ಅಜ್ಞೆಯಲ್ಲಿ.

ಅಂಗ ಸೋಂಕಿದ ಲಿಂಗ ತಂದೆ. ಸು. 1160.

ಇವನ ಅಂಕಿತ ಭೋಗ ಬಂಕೇಶ್ವರ ಲಿಂಗ.

ಮರದೊಳಗಣ ಬೆಂಕಿ ತನ್ನ ತಾನೆ ಉರಿಯಬಲ್ಲುದೆ? ತಿಲೆಯೊಳಗಣ ದಿಪ್ತಿ ಆ ಬೆಳಗ ತನ್ನ ತಾನೆ ಅಱಿಯಬಲ್ಲುದೆ? ಆತೆಱನಂತೆ ಕುಟಿಲನ ಭಕ್ತಿ ಕಿಸುಕಾಳನ ವಿರಕ್ತಿ ಮಥನಿಸಿಯಲ್ಲದೆ ದಿಟವ ಕಾಣಬಾರದು. ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿಯಲ್ಲದೆ ನಿಶ್ಚಯವನಱಿಯಬಾರದು. ಗುರುವಾದಡೂ ಲಿಂಗವಾದಡೂ ಜಂಗಮವಾದಡೂ ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ ತೂತ ಕುಂಭದಲ್ಲಿಯ ನೀರು, ಸೂತ್ರ ತಪ್ಪಿದ ಬೊಂಬೆ, ನಿಜನೇತ್ರ ತಪ್ಪಿದ ದೃಷ್ಟಿ. ಜೇರು ವೇಲಾಗಿ ಸಸಿಗೆ ನೀರಿನಾರಯ್ಕೆಯುಂಟೆ? ಇಂತೀ ಅವ ಕ್ರಿಯೆಯಲ್ಲಿಯೂ ಭಾವ ಶುದ್ಧವಾಗಿ ಆರಯ್ಕೆ ಬೇಕು. ಇದು ಭೋಗ ಬಂಕೇಶ್ವರ ಲಿಂಗದ ಸಂಗದ ಶರಣನ ಸುಖ.

ಗೋರಕ್ಷ. 1160.

ಇತನ ಅಂಕಿತ ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗ.

ಓಸವಾದಂಗಳ ಕಲಿತಲ್ಲಿ ಲೋಹಸಿದ್ಧಿಯಲ್ಲದೆ ರಸಸಿದ್ಧಿಯಾದುದಿಲ್ಲ. ನಾನಾಕಲ್ಪವೋಗ ಅದೃಶ್ಯಕರಣಂಗಳ ಕಲಿತಲ್ಲಿ ಕಾಯಸಿದ್ಧಿಯಲ್ಲದೆ ಆತ್ಮ ಸಿದ್ಧಿಯಾದುದುಂಟೆ ? ನಾನಾಮೌಗ್ಯಾದಂಗಳಿಂದ ಹೋರಿ ಮಾತಿನ ಮಾಲೆಯೂ ಯಿತ್ತಲ್ಲದೆ ಆತ್ಮವಿಹಿತವಾದುದಿಲ್ಲ. ನೀ ನಾ ಎಂದಲ್ಲಿ ನೀನು ನಾನಾದೆಯಲ್ಲದೆ ನಾನು ನೀನಾದುದಿಲ್ಲ. ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗ ನೀ ನಾನಾದೆಯಲ್ಲದೆ ಲೀಯವಾಗಿ ನಾ ಆ ಲಿಂಗವ ಆದುದಿಲ್ಲ.

ಕಾಳವ್ವೆ. ಸು. 1180.

ಇವಳು ಉರಿಲಿಂಗ ಪೆದ್ದಿಯ ಹೆಂಡತಿ. ಈಕೆಯ ಅಂಕಿತ ಉರಿಲಿಂಗ ಪೆದ್ದಿಗಳರಸ.

(1) ವ್ರತವೆಂಬುದು ನಾಯಕರತ್ನ. ವ್ರತವೆಂಬುದು ಸುಪ್ರಾಣಿಯ ಮುತ್ತು. ವ್ರತವೆಂಬುದು ಜೀವದ ಕಳೆ. ವ್ರತವೆಂಬುದು ಸುಯಿಧಾನ, ಸುಯಿಧಾನ, ಸುಯಿಧಾನ. ವ್ರತತಪ್ಪಲು ಉರಿಲಿಂಗ ಪೆದ್ದಿಗಳರಸ ಒಲ್ಲನವ್ವಾ.

(2) ತುಮರಿಯ ಕೊಳ್ಳಿಯಂತೆ ಉರಿವಾತ ಭಕ್ತನೆ ? ಹುಸಿದು ತಂದು ಮಾಡುವಾತ ಭಕ್ತನೆ ? ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ ? ತನ್ನ ಪ್ರಾಣದ ಮೇಲೆ ಬಂದಡೂ ಬರಲಿ, ಇವರ ಬಿಡಬೇಕು. ಇವರ ಬಿಡದಿರಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ,

ಗುಡ್ಡವ್ವೆ. ಸು. 1430.

ಈಕೆ ಬತ್ತಲೇಶ್ವರನ ಹೆಂಡತಿ. ಇವಳ ಅಂಕಿತ ನಿಂಬೇಶ್ವರ.

ತನು ಬತ್ತಲೆಯಾದಡೇನು ? ಮನ ಬತ್ತಲೆಯಾಗದನಕ ವ್ರತವಿದ್ದಡೇನು? ವ್ರತಹೀನನಾದ ಭಂಡಿಕ ನೆರೆದರೆ ನರಕವಯ್ಯ ನಿಂಬೇಶ್ವರಾ.

ಘನಲಿಂಗದೇವ. ಸು. 1480.

ಈತನು ತೋಂಟದ ಸಿದ್ಧಲಿಂಗನ ಶಿಷ್ಯನು ಇವನ ಅಂಕಿತ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

ದೇವಾ ! ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವ ಕಂಡೆ. ಆ ಮಾನವಜನ್ಮಕ್ಕೆ ಗುಣಾಕ್ಷರಜ್ಞಾಯಾದಂತೆ ಲಿಂಗ ಬಂದುದ ಕಂಡೆ. ಎನಗಿದು ಜೋದ್ಯವಯ್ಯ. ಎನಗಿದು ವಿಪರೀತವಯ್ಯ. ಇದಕ್ಕೆ ನುಡಿದಂತೆ ನಡಸು. ನಡೆದಂತೆ ನುಡಿಸು. ನುಡಿದ ನಡೆಗೆ ಭಿನ್ನವಾದಡೆ ನಿಮ್ಮ ಶರಣರೊಪ್ಪರು. ನಿಮ್ಮ ಶರಣರೊಪ್ಪದಲ್ಲಿಯೆ ನೀನೊಪ್ಪೆ. ನೀನೊಪ್ಪದಲ್ಲಿಯೆ ಎನಗೆ ಬಂದಿತ್ತು ಹಿಂದಣ ಭವದ ಹೆಮ್ಮಾರಿ. ಅದಕ್ಕೆ ನಾನಂಜುವೆನಯ್ಯ. ಅದಕ್ಕೆ ನಾನಳುಕುವೆನಯ್ಯ. ನುಡಿ ನಡೆ ಎರಡಾಗದಂತೆ ನಡಸಯ್ಯ ಘನಲಿಂಗಿಯ ಮೋಹದ ಚೆನ್ನ ಮಲ್ಲಿಕಾರ್ಜುನಾ.

ಮಸಣಮ್ಮ. ಸು. 1500.

ಇವಳು ಎಡೆಮಟದ ನಾಗಿದೇವನ ಹೆಂಡತಿ. ಇವಳ ಅಂಕಿತ ನಿಜಗುಣೇಶ್ವರಲಿಂಗ.

ಕಾಗೆಯ. ನಾಮು ತಿಂದವರಿಲ್ಲ. ವ್ರತ ಭ್ರಷ್ಟನ ಕೂಡಿದವರಿಲ್ಲ. ನಾಯಿಗೆ ನಾರಂಗವಪ್ಪುದೆ? ಲೋಕವ ನರಂಗೆ ವ್ರತವಪ್ಪುದೆ ಶಿವಬೀಜಕ್ಕಲ್ಲದೆ ನೀವೆ ಸಾಕ್ಷಿಯಾಗಿ ನಿಜಗುಣೇಶ್ವರ ಲಿಂಗದಲ್ಲಿ?

ರೇಕಮ್ಮ. ಸು. 1500

ಈಕೆ ರೇವಣ ಸಿದ್ಧಯ್ಯನ ಹೆಂಡತಿ ಇವಳ ಅಂಕಿತ ಶ್ರೀಗುರುಸಿದ್ಧೇಶ್ವರ.

ಲಿಂಗಬಾಹ್ಯನ ಆಚಾರಭ್ರಷ್ಟನ ವ್ರತತಪ್ಪುಕನ ಗುರುಲಿಂಗಜಂಗಮಕೊಂದವನ ಪಾದೋದಕ ಪ್ರಸಾದ ದೂಷಕನ ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ ಶಕ್ತಿಯುಳ್ಳಡೆ ಸಂಹಾರಮಾಡುವುದು. ಶಕ್ತಿಯಿಲ್ಲದಿರ್ದಡೆ ಗ್ರಾಮವ ಬಿಡುವುದು. ಇಲ್ಲದಿರ್ದಡೆ ಆಸ್ಥಲವ ಬಿಡುವುದು. ಅದಾಗದಿರ್ದಡೆ

ಕರ್ಣಮುಚ್ಚಿಕೊಂಬುದು, ಶಿವ ಮಂತ್ರ ಜಪಿಸುವುದು. ಅಲ್ಲದಿರ್ದಡೆ ಕುಂಭಿ ನೀಪಾತಕ ನಾಯಕ ನರಕದಲ್ಲಿಕ್ಕುವ ಶ್ರೀಗುರು ಸಿದ್ಧೇಶ್ವರನು.

ವರದ ಸಂಗಣ್ಣ. ಸು. 1500

ಈತನ ಅಂಕಿತ ವರದ ಶಂಕರೇಶ್ವರ.

ಓತ ಹಿಡಿದವನ ಕೈ ಮಸಿ ಎಂಬುದ ನಾಡೆಲ್ಲ ಬಲ್ಲರು. ಅವನ ಕೂಡೆ ಆಡಲಾದಯ್ಯ, ತನಗಾ ಮಸಿ ಹತ್ತುವುದಾಗಿ. ಲಿಂಗ ವಿರೋಧಿಯ ಕೈವಿಡಿದಾಡುವನು ಮುನ್ನವೆ ವ್ರತಗೇಡಿ, ಅಂತವನ ಸಂಗ ಬೇಡವಯ್ಯ ತನಗಾ ಭಂಗ ಬಂದುದಾಗಿ. ಎಂತೆಂದೊಡೆ ಜಗದ ಕರ್ತ ಶಿವನ ವಿರೋಧಮಾಡಿ ದಕ್ಷನೊಬ್ಬ ಯಾಗವನಿಕ್ಕಲು ಮೂವತ್ತು ಮೂಱುಕೋಟಿ ದೇವರ್ಕಳೆಲ್ಲ ತೊತ್ತಲಿದುಲಿ'ಸಿ ಕೊಂಡು ನುಚ್ಚುನೂರಾಗಿ ಹೋದರು ನೋಡಾ, ಅವನಂಗಸಂಗದಲ್ಲಿರ್ದ ಕಾರಣ. ಗೆಲವು ಸೋಲಕ್ಕೆ ಇಕ್ಕುಮುಡಿಗೆ ಏಱುಮುಡಿಗೆ ಎಂಬ ಮತ್ಸರಕ್ಕೆ ಮುಂದುವಿಡಿದು ಮುಡುಹಿಕ್ಕಿ ಕೆಲೆದಾಡುವರನೆಲ್ಲ ತಮ್ಮ ಮನದಲ್ಲಿ ತಾವಱಿದು ಒಯ್ಯನೆ ತೊಲಗುವರು. ಮೇಲೆ ಲಿಂಗ ನಿರೂಪದಿಂದ ಬಂದ ಕಾರ್ಯಕ್ಕೆ ಅಂಜರು ಏಕಾಂಗ ವೀರರು. ವಾಯದ ಪರಿಮಾತಿನಮಾಲೆಗೆ ಬೆಡಱಿ ಓಡುವರಲ್ಲ ಏಕೋಭಾವನಿಷ್ಠೆ ನಿಬ್ಬೆರಗು ಗಟ್ಟಿಗೊಂಡು ದೃಢಜಿತ್ತವುಳ್ಳ ಸದ್ಭಕ್ತರು. ಇಂತಪ್ಪ ಉಲುಹಡಗಿದ ಶರಣರ ಸುಸಂಗದಲ್ಲಿರಿಸಿ ಬದುಕುವಂತಿರಿಸಯ್ಯ ವರದ ಶಂಕರೇಶ್ವರಾ.

ಕಾಲು ಕಣ್ಣಿಯ ಕಾಯುಮ್ಮ. ಸು. 1500

ಈಕೆಯ ಅಂಕಿತ ನಿಭೀರ್ತಿ ನಿಜಲಿಂಗದಲ್ಲಿ.

ಎನ್ನ ಕರಣಂಗಳ ಲಿಂಗಕ್ಕೆಲ್ಲಿ ಕಟ್ಟುವೆ. ಗುರು ಲಿಂಗಜಂಗಮದ ಕಾಲ ಕಟ್ಟುವೆ. ವ್ರತ ಭ್ರಷ್ಟರನಿಟ್ಟೊರಸುವೆ, ಸುಟ್ಟು ತೂಱುತೂಱನೆ ತೂಱುವೆ ನಿಭೀರ್ತಿ ನಿಜಲಿಂಗದಲ್ಲಿ.

ಕೇದಾರಗುರು. ಸು. 1500.

ಇವನ ವಚನಗಳಲ್ಲಿ ಈತನ ಹೆಸರು ಸ್ಪಷ್ಟವಾಗಿ ಹೇಳಿದೆ; ಅಂಕಿತ ಕೇದಾರಗುರುದೇವ.

ಎಲೆ ಗುಡ್ಡ ನೀ ನುಡಿದ ನುಡಿಯಿಂದ ನಿನ್ನ ಮನದ ಜಡ್ಡು ಕಳಿಯಿತೆಂದೆ ನಲಾಹೆ. ನಿಜವಳಿತ ಒಳಿಕ ಸಂಸಾರ ಬಿಡಬೇಕೋ ? ನಿಜವಳಿತ ಬಳಿ'ಕ ಅಂಗೀಕರಿಸಿದ ಹೆಣ್ಣುಬಿಟ್ಟರೆ ಅಘೋರನರಕದಲ್ಲಿಕ್ಕುವ ಕೇದಾರಗುರುದೇವ ಕೇಳಾ ಅಂದಂದಿಂಗೆ.

ನಿವೃತ್ತಿ ಸಂಗಯ್ಯ. ಸು 1500.

ಈತನ ವಚನಗಳಲ್ಲಿ ಇವನ ಹೆಸರು ಹೇಳಿದೆ.

ಪರಧನ ಪರಾನ್ನ ಪರಸ್ತ್ರೀಯರಾಶೆ ಬಿಡದು. ಶರಣನೆಂತೆಂಬೆ ? ಸಂಬಂಧಿಯೆಂತೆಂಬೆ ಮರುಳೆ ? ಜಿಹ್ವಾ ದಗ್ಧಾ ಪರಾನ್ನೇನ ಹಸ್ತೌ ದಗ್ಧೌ ಪ್ರತಿಗ್ರಹಾತ್| ಚಕ್ಷುರ್ದಗ್ಧಂ ಪರ ಸ್ತ್ರೀ ಭ್ಯಸ್ತಸ್ಯ ಜನ್ಮ ನಿರರ್ಥಕಂ || ಇಂತೆಂದು ಶ್ರುತಿ ಸಾಹಿಲು ಮತಿಗೆಡುವಿರಕಟಾ ! ನಿವೃತ್ತಿ ಸಂಗಯ್ಯ ದೇವನೆಂತೊಲಿವ ನಮ್ಮಾ ?

ಸತ್ತಿಗೆಕಾಯಕದ ಇಟ್ಟಪ್ಪಯ್ಯ ಅಥವಾ ಮಾರಿತಂದೆ. ಸು. 1500.

ಇವನ ಅಂಕಿತ ಐಘಂಟೇಶ್ವರಲಿಂಗ.

ಅವ ಆಚರಣೆಯ ತೊಟ್ಟಲ್ಲಿ ಅನುಸರಣೆಯಿಲ್ಲದಿರ್ದುದೆ ಗುರುಚರಲಿಂಗ ಪೂಜೆ. ಕಾಯಕಕ್ಕೆ ಇಂದಿಂಗೆ ನಾಳಿಂಗೆಂಬ ಸಂದೇಹವಿಲ್ಲದಲ್ಲಿಯೆ ಸರ್ವಶೀಲ. ತಾಗು ನಿರೋಧ ಒಂದಲ್ಲಿ ಕಂದದೆ ಕುಂದದೆ ಎಂದಿನಂತಿಪ್ಪುದೆ ಶಿವಲಿಂಗ ಪೂಜೆ. ಇದಕ್ಕೆ ಹಿಂದು ಮುಂದು ವಿಚಾರಿಸಲಿಲ್ಲ, ಇದಕ್ಕೆ ಐಘಂಟೇಶ್ವರಲಿಂಗ ಸಾಕ್ಷಿಯಾಗಿ.

ಕಾಳಲಿಂಗ. ಸು 1500.

ಇವನ ವಚನಗಳಲ್ಲಿ ಈತನ ಹೆಸರು ಉಕ್ತವಾಗಿದೆ.

ಆಚಾರ ವಿಚಾರ ತಪ್ಪಿದಲ್ಲಿ ಶರಣರ ವಾದವಲ್ಲದೆ ಮತ್ತೊಂದಱಲ್ಲಿ ವಾದ ವಿಲ್ಲ. ಶರಣರ ವಾದ ಮೋಕ್ಷದ ಬೀಡು; ಶರಣರ ವಾದ ಲಿಂಗದ ನಾಡು; ಶರಣರ ವಾದ ಕಾಳಿಲಿಂಗ ದೇವನು ಮಾಡಿದ ಮಾಯೆಯ ಕೇಡು.

ಕಂಭದ ಮಾರಯ್ಯ. ಸು. 1500.

ಈತನ ಅಂಕಿತ ಕದಂಬ ಲಿಂಗ.

ಕಾಯದಿಂದ ಕರ್ಮವ ಕಂಡು ಭಾವದಿಂದ ಲಿಂಗವ ಕಂಡು ಲಿಂಗದಿಂದ ಸ್ವಾನುಭಾವವಾಗಿ ಅಂಗದ ಸಂಗಕ್ಕೆ ಹೊಱಗಾಯಿತ್ತು ಕದಂಬಲಿಂಗವನಱಿಯು ಲಾಗಿ.

ಫರಾರೆ ದೇವಯ್ಯ. ಸು. 1700.

ಈತನ ಅಂಕಿತ ಮಹಾದೇವಲಿಂಗ.

ಶರಣರಲ್ಲಿ ವಾದ ಬಂದಡೆ ಶರಣರೆ ಸಮರ್ಥರು. ಸತಿಪತಿಯರಲ್ಲಿ ವಾದ ಬಂದಡೆ ಜನನಿ ಜನಕರೆ ಸಮರ್ಥರು. ರಾಜರಾಜರಲ್ಲಿ ವಾದ ಬಂದಡೆ ಛತ್ರಪತಿಗಳೆ ಸಮರ್ಥರು. ಶಿವಗೌರೀವರರಲ್ಲಿ ವಾಬದ ಂದಡೆ ಲೋಕವಱಿವುದೆಂತು? ಇದು ಕಾರಣ ಶಿವನಲ್ಲಿ ಸಿದ್ಧರಾಮನಲ್ಲಿ ಬಂದ ವಾದ ವಾದವಲ್ಲ; ಪ್ರಮಥರ ಮನಕ್ಕೆ ಮಹಾಮೋದ ಮಹಾದೇವಲಿಂಗದಲ್ಲಿ.

ಕಾಡ ಸಿದ್ಧೇಶ. ಸು. 1725.

ಇವನ ವಚನಗಳಲ್ಲಿ ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬ ಲಿಂಗ ನಿರ್ಮಾಯ ಪ್ರಭುವೇ ಎಂಬ ಅಂಕಿತವಿದೆ. ಈಕವಿ ಇಷ್ಟಲಿಂಗ ಶತಕವನ್ನು ರಚಿಸಿದ ಕಾಡಸಿದ್ಧೇಶನೇ (ಪುಟ 28) ಆಗಿರಬಹುದೆಂದು ತೋರುತ್ತದೆ.

(1) ನೇಲ ಫಲ ಉತ್ಪತ್ತಿ ಮಾಡಿದ ಹಣ್ಣಿನಂತೆ ಇರುವರು ಮರ್ತ್ಯರು. ಹಲಸು ತೆಂಗು ದಾಳಿಂಬದಂತೆ ಇರುವರು ಸ್ವರ್ಗ್ಯರು. ಹಾಲು ತುಪ್ಪ ಸಕ್ಕರೆ

ಬೆಲ್ಲದಂತೆ ಇರುವರು ನಿಮ್ಮವರು ಕಾಡಿನೊಳಗಾದ ಶಂಕರ ಪ್ರಿಯ ಚೆನ್ನಕದಂಬ ಲಿಂಗ ನಿರ್ಮಾಯಪ್ರಭುವೇ.

(೪) ಆಕಾರವಿಲ್ಲ ನಿರಾಕಾರವಿಲ್ಲ, ಬಿಡಿಯಿಲ್ಲ ಅಂತರವಿಲ್ಲ, ಎಡನಿಲ್ಲ ಬಲ ನಿಲ್ಲ, ಹಿಂದಿಲ್ಲ ಮುಂದಿಲ್ಲ, ಒಳಗಿಲ್ಲ ಹೊಱಗಿಲ್ಲ, ಈರೇೞಿರಲ್ಲಿಲ್ಲ, ಮಧ್ಯದಲ್ಲಿಲ್ಲ. ಮತ್ತೆಲ್ಲಿಹುದು? ಎರಡಱಿ'ದು ಒಂದಿಲ್ಲದೆ ನಿರಾಳದಲ್ಲಿಹುದು ಎಂದೆನಯ್ಯ ಕಾಡಿ ನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

ಇನ್ನೂ ಕೆಲವರು ವಚನಕಾರರ ಹೆಸರುಗಳೂ ಅಂಕಿತಗಳೂ ದೊರೆತಿವೆ; ವಚನಗಳು ಮಾತ್ರ ಸದ್ಯಃ ಸಿಕ್ಕಿಲ್ಲ. ಈ ವಚನಕಾರರ ಹೆಸರುಗಳನ್ನು ಅಂಕಿತ ಗಳೊಡನೆ ಕೆಳಗೆ ವರ್ಣಾನುಕ್ರಮದಲ್ಲಿ ಕೊಟ್ಟಿದ್ದೇವೆ. ಇವರಲ್ಲಿ ಹಲವರು ಬಸವನ ಸಮಕಾಲದವರು.

ಹೆಸರು	ಅಂಕಿತ	ಹೆಸರು	ಅಂಕಿತ.
ಅಕ್ಕನಾಗಮ್ಮ	ಬಸವಣ್ಣ ಪ್ರಿಯ ಚೆನ್ನಸಂಗ	ಕನ್ನದಮಾರಿ ತಂದೆ	ಮಾರನ ವೈರಿ ಮಾರೇಶ್ವರ.
ಅನಂತದೇವ	ಅನಂತಗುರು ಅಲ್ಲಮ ಮಹಾಪ್ರಭು	ಕಾಮಾಟದ ಭೀಮಣ್ಣ	ಭಾರೇಶ್ವರ ಲಿಂಗ
ಅಹಂಕಾರ ಭೀಮಯ್ಯ	ನಿರಹಂಕಾರ ಭೀಮಯ್ಯ	ಕಿರಾತ ಸಂಗಯ್ಯ	ಕಿರಾತೇಶ್ವರಲಿಂಗ
ಏಕಾಂತದ ರಾಮಯ್ಯ	ಏಕಾಂತರಾಮೇಶ್ವರಲಿಂಗ	ಕುಪ್ಪಸದ ಜಂದಯ್ಯ	ಕುಪ್ಪಸ ಜಂದೇಶ್ವರಲಿಂಗ
ಕನಕದ ನಾಚಯ್ಯ	ಕನಕದ ನಾಚಿ ಲಿಂಗ	ಕ್ಷೇತ್ರನಾಥ	ಕ್ಷೇತ್ರನಾಥಲಿಂಗ
ಕನ್ನಡಿಕಾಯಕದ ಅಮ್ಮ ದೇವಯ್ಯ.	ಚೆನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗ	ಗಂಗಮ್ಮ	ಗಂಗೇಶ್ವರಲಿಂಗ
		ಗಂಗಾಂಬಿಕೆ (ಬಸವನ ಹೆಂಡತಿ)	ಗಂಗಾ ಪ್ರಿಯ ಕೂಡಲ ಸಂಗದೇವ
		ತೆಲುಗೇಶ ಮಸಣಯ್ಯ	ಶಂಭು ತೆಲುಗೇಶ್ವರ
ಕನ್ನಡಿ ಕಾಯಕದ ರೆಮ್ಮವ್ವೆ	ಸದ್ಗುರು ಸಂಗ ನಿರಂಗ ಲಿಂಗ	ನಿರಂಜನ ದೇವ	ನಿರಂಜನಲಿಂಗ
		ನಿರಾಲಂಬ ದೇವ.	ನಿರಾಲಂಬ

ಹೆಸರು	ಅಂಕಿತ
ನೀಲಲೋಚನೆ	ಸಂಗಯ್ಯ
ನೀಲಾಂಬಿಕೆ	ಬಸವಪ್ರಿಯ ಕೂಡಲಸಂಗಮದೇವ
ಪಂಚಾಕ್ಷರದೇವ	ಶ್ರೀಗುರುಪಂಚಾಕ್ಷರಲಿಂಗ
ಪಡಿಹಾರಿಬಸವಣ್ಣ	ಪಡಿಯಾರಿಪ್ರಿಯ ಕೂಡಲಸಂಗಮದೇವ
ಪರ್ವತನಾಥ	ಪರ್ವತನಾಥಲಿಂಗ
ಪ್ರಸಾದಿಲೆಂಕಬಂಕಣ್ಣ	ದಹನಚಂಡಿಕೇಶ್ವರಲಿಂಗ
ಪುಷ್ಪದ ಸೋಮಯ್ಯ	ಸೋಮೇಶ್ವರಲಿಂಗ
ಬಿಬ್ಬಿದೇವಯ್ಯ	ಕೂಡಲಸಂಗಮದೇವ + ಬಸವಣ್ಣ
ಬೆಡಗಿನ ಸುಂದರಯ್ಯ	ಸುಂದರ ಶಿವಲಿಂಗಯ್ಯ
ಭರಿತಾರ್ಪಣದ ಚೆನ್ನ ಬಸವಣ್ಣ	ಚೆನ್ನ ಕೂಡಲ ರಾಮೇಶ್ವರಲಿಂಗ
ಭೋಗಣ್ಣ	ನಿಜಗುರುಭೋಗಸಂಗ
ಮಲಹರಕಾಯಕದ ಚಿಕ್ಕದೇವಯ್ಯ	ಊರ್ಧ್ವರೇತೋಮೂರ್ತಿ ಶ್ವೇತ ಸ್ವಯಂಭು ಕಪಿಲೇಶ್ವರಲಿಂಗ
ಮಹಾದೇವಿ	ಮಹಾದೇವ ಜ್ಯೋತಿರ್ಲಿಂಗ
ಮುಗ್ಧಸಂಗಯ್ಯ	ಮುಗ್ಧಸಂಗ
ಮೂಲಪ್ರಣಮದೇವ	ಮೂಲಪ್ರಣಮದೇವ
ಮೈದುನರಾಮಯ್ಯ	ಮಹಾಲಿಂಗ ಚೆನ್ನರಾಮ
ಮೌಕ್ತಿಕಸಂಗಯ್ಯ	ಮುತ್ತಿನಸಂಗಲಿಂಗ
ರತ್ನದ ರಾಚಯ್ಯ	ವೀರರಾಜಕೋಟಿಲಿಂಗ

ಹೆಸರು	ಅಂಕಿತ
ಲಕ್ಷ್ಮಮ್ಮ (ಕೊಂಡೆಯ ಆಗಜೇಶ್ವರ ಮಂಜಣ್ಣನ ಹೆಂಡತಿ)	ಲಿಂಗ
ಲಿಂಗಸತ್ಯಣ್ಣ	ಲಿಂಗಸತ್ಯಣ್ಣ
ವೀರಚಂಡ	ವೀರಚಂಡಲಿಂಗ
ವೇದಮೂರ್ತಿಸಂಗಣ್ಣ	ಲಲಾಮಭೀಮ ಸಂಗಮೇಶ್ವರ
ಶಂಕರದಾಸಿಮಯ್ಯ	ನಿಜಗುರುಶಂಕರದೇವ
ಶಂಕರಸೋಮಯ್ಯ	ಸಂಬಸೋಮೇಶ್ವರಲಿಂಗ
ಶಾಂತರಾಮ	ಶಾಂತರಾಮಲಿಂಗ
ಶಾಂತಸೆಟ್ಟಿ	ಶಿವಶಾಂತಮಲ್ಲಿಕಾರ್ಜುನ
ಶಾರ್ದೂಲಸಂಗಯ್ಯ	ಶಾರ್ದೂಲಲಿಂಗ
ಶಿವನಾಗಮಯ್ಯ	ನಾಗಯ್ಯಪ್ರಿಯ ಚೆನ್ನರಾಮೇಶ್ವರ
ಶಿವಪೂಜೆಯ ಭೀಮಯ್ಯ	ಶಿವಪೂಜೆಯ ಭೀಮ
ಶಿವಾನಂದದೇವ	ಶಿವಾನಂದಲಿಂಗ
ಸಿದ್ಧವೀರದೇವ	ತೋಂಟದಸಿದ್ಧಲಿಂಗದೇವ
ಸಿದ್ಧಾಂತವೀರಸಂಗಯ್ಯ	ಗೋಳಕಾರ ವಿಶ್ವವಿರಹಿತಲಿಂಗ
ಸುವರ್ಣದೇವಿ	ಸುವರ್ಣಲಿಂಗ
ಸೂಜಿಕಾಯಕದ ರಾಮಿತಂದೆ	ಪ್ರಸನ್ನಕಪಿಲ ಸಿದ್ಧಮಲ್ಲಿಕಾರ್ಜುನಲಿಂಗ
ಹೆಂಡದ ಮಾರಯ್ಯ	ಧರ್ಮೇಶ್ವರ

ಮತ್ತೆ ಕೆಲವರು ವಚನಕಾರರು :—ಷಣ್ಮುಖಸ್ವಾಮಿ, ಕರಸ್ಥಳದ ವೀರಣ್ಣ, ಕರಿಬಸವೇಶ್ವರ, ಜೆನ್ನಡಣಾಯಕ, ಗುರುಬಸವಾರೂಢ, ಲಿಂಗಾವಧೂತ.

ಹೊಸ ಅಂಕಿತಗಳು.

ಹೆಸರು ಗೊತ್ತಿಲ್ಲದ ಸುಮಾರು ಐವತ್ತು ವಚನಕಾರರ ಅಂಕಿತಗಳೊಡನೆ ವಚನಗಳು ದೊರೆತಿವೆ. ಈಯಂಕಿತಗಳನ್ನು ವರ್ಣಾನುಕ್ರಮದಲ್ಲಿ ಕೊಟ್ಟು ಅವನ್ನು ಒಳಕೊಂಡಿರುವ ಒಂದೊಂದು ವಚನವನ್ನು ಉದಾಹರಿಸುತ್ತೇವೆ :—

ಅಪ್ಪಣಪ್ರಿಯ ಚೆನ್ನಬಸವೇಶ್ವರ, ಅಮರೇಶ್ವರಲಿಂಗ, ಕಪಿಲಸಿದ್ಧಮಲ್ಲಿನಾಥ, ಕಮಠೇಶ್ವರಲಿಂಗ, ಕಲ್ಲೇಶ್ವರಲಿಂಗ, ಕಾಮೇಶ್ವರಲಿಂಗ, ಕಿನ್ನರ ತ್ರಿಪುರಾಂತಕಲಿಂಗ, ಕೂಡಲಚೆನ್ನಸಂಗಯ್ಯ + ಅಲ್ಲಯ್ಯ, ಗಜೇಶ್ವರ (ದ್ವಿ. ಸಂಪುಟ 1:1), ಗುರುಶಾಂತಮಲ್ಲಿಕಾರ್ಜುನ, ಗುರುಸಿದ್ಧಮಲ್ಲ [1](ದ್ವಿ. ಸಂಪುಟ 119), ಘನಗುರುಪ್ರಿಯ ಸೋಮನಾಥ (ದ್ವಿ. ಸಂಪುಟ 124), ಘನಲಿಂಗ ಗುರುಚೆನ್ನಬಸವೇಶ್ವರ, ಚಂದೇಶ್ವರಲಿಂಗ, ಚೆನ್ನದಸರೇಶ್ವರಲಿಂಗ, ಚೆನ್ನಬಂಕನಾಥನ ಮಹೇಶ್ವರ, ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ, ಚೆನ್ನರಾಮ, ಚೆನ್ನಸಿದ್ಧನಾಥ, ನಂದಗೋಪಿಯ ಕಂದಪ್ರಿಯ ನಿಸ್ಸಂಗಲಿಂಗ ರಾಮನಾಥ (ದ್ವಿ. ಸಂಪುಟ 122), ನಿಃಕಳಂಕ ಚೆನ್ನಮಲ್ಲಿಕಾರ್ಜುನಯ್ಯ, ನಿಜಗುರು ಭೋಗೇಶ್ವರ, ನಿಜಗುರು ಶಾಂತೇಶ್ವರ (ದ್ವಿ. ಸಂಪುಟ 122), ನಿಜಗುರು ಸ್ವತಂತ್ರಕಪಿಲಸಿದ್ಧಮಲ್ಲೇಶ್ವರ, ನಿಸ್ಸಂಗನಿರಾಳಪ್ರಭು, ಭೌಂಭೇಶ್ವರ (ದ್ವಿ. ಸಂಪುಟ 122), ಮಸಣಯ್ಯಪ್ರಿಯ ಗಜೇಶ್ವರ (ದ್ವಿ. ಸಂಪುಟ 111), ಮಹಾಘನಲಿಂಗ ಹುಲಿಗೆರೆಯ ಸೋಮೇಶ್ವರ, ಮಹಾಘನಸದ್ಗುರು ಸಿದ್ಧಸೋಮನಾಥ, ರೇಕಣಾಥಯ್ಯ (ದ್ವಿ. ಸಂಪುಟ 124), ಶ್ರೀ ಗುರುಲಿಂಗಜಂಗಮವೇ, ಶ್ರೀಜಂಗಮ ಲಿಂಗಪ್ರಭುವೇ, ಸಂಗನಬಸವಣ್ಣ, ಸಂಗನಬಸವಣ್ಣಪ್ರಿಯಚಂಡೇಶ್ವರ ಲಿಂಗ, ಸಂಗನ ಬಸವೇಶ್ವರ, ಸಂಗಪ್ರಭು (ದ್ವಿ. ಸಂಪುಟ 124), ಸಂಗಯ್ಯಪ್ರಿಯಬಂಕೇಶ್ವರ (ದ್ವಿ. ಸಂಪುಟ 115), ಸದ್ಗುರು ಮಲ್ಲಿಕಾರ್ಜುನಯ್ಯ, ಸದ್ಗುರು ಶಂಭುಸೋಮೇಶ್ವರ (ದ್ವಿ. ಸಂಪುಟ 124), ಸದ್ಗುರ

1. ಇದು ಪಂಡಿತರಾಧ್ಯನ ಅಂಕಿತವೆಂದು ಕೆಲವರು ಹೇಳುತ್ತಾರೆ.

ಸಿದ್ಧಸೋಮೇಶ್ವರಲಿಂಗ (ದ್ವಿ. ಸಂಪುಟ 117), ಸಿದ್ಧಸೋಮನಾಥ, ಸಿದ್ಧಸೋಮನಾಥಲಿಂಗ, ಸಿದ್ಧಸೋಮೇಶ (ದ್ವಿ ಸಂಪುಟ 123), ಹಂಪೆಯ ವಿರುಪಯ್ಯ[1] (ದ್ವಿ. ಸಂಪುಟ 124), ಹುಲಿಗೆರೆಯವರದ ಸೋಮನಾಥ, ಹುಲಿಗೆರೆಯ ವರದಸೋಮೇಶ (ದ್ವಿ. ಸಂಪುಟ 124).

ವಚನಗಳು.

ಜಂಗಮವೆ ಜಗತ್ಪಾವನ. ಆ ಜಂಗಮದ ನೆನಹೆ ಲಿಂಗವಾಯಿತ್ತು. ಅವರ ತನುವೆ ಎನ್ನ ಕಾಯವಾಯಿತ್ತು ; ಅವರ ದರುಶನವೆ ಎನಗೆ ಪರುಷವಾಯಿತ್ತು. ಆ ಪರುಷವಿಡಿದು ಮನವ ಲಿಂಗದಲ್ಲಿ ಬೆರಸಿ ಕನಸು ಕಳವಳಿಕೆ ಹೆಸರುಗೆಟ್ಟುಹೋದುವಯ್ಯ ನಿಮ್ಮ ಜಂಗಮದಿಂದ ಅಪ್ಪಣಪ್ರಿಯ ಚೆನ್ನಬಸವೇಶ್ವರಾ.

ಗೆದ್ದಲು ಮನೆಮಾಡಿ ಸರ್ಪಂಗೀಡಾದಂತೆ ತಾನತ್ತಣ ದ್ರವ್ಯವ ತಂದು ಇತ್ತ ಮಾಡಿದಡೆ ನಿನಗೆತ್ತಣ ಮುಕ್ತಿ ? ಅಮರೇಶ್ವರಲಿಂಗವೇ.

ಜಲದೊಳಗಣ ಮತ್ಸ್ಯವು ಜಲವ ತನ್ನ ನಾಸಿಕದತ್ತ ಹೊದ್ದಲೀಯದ ಪರಿಯನೋಡಾ ಅಯ್ಯ. ಶರಣನು ಸಂಸಾರಪ್ರಪಂಚಗಳೊಳಗಿದ್ದು ಆ ಸಂಸಾರಪ್ರಪಂಚವು ತನ್ನ ಹೊದ್ದಲೀಯದ ಪರಿಯ ನೋಡಾ ಅಯ್ಯ. ಶರಣಂಗೆ ಈ ಬುದ್ಧಿಯ ಮತ್ಸ್ಯಂಗೆ ಆ ಬುದ್ಧಿಯ ನೀನು ಕರುಣಿಸಿದೆಯಲ್ಲ ಎನ್ನ ಕಪಿಲಸಿದ್ಧಮಲ್ಲಿನಾಥಯ್ಯ.

ಕಾಂಬುದು ಜೀವನಲ್ಲ ; ಕಾಣಿಸಿಕೊಂಬುದು ಪರಮನಲ್ಲ ; ಮುಟ್ಟಿಹರಿದಾಡುವುವು ಕರಣಂಗಳಲ್ಲ ; ಸುಖವನನುಭವಿಸುವುವು ಇಂದ್ರಿಯಂಗಳಲ್ಲ. ಇಂತೀ ಭೇದಂಗಳಲ್ಲಿ ಆರೆಂಬುದ ತಿಳಿದು ಶಶಿವೃಕ್ಷಕ್ಕೆ ನೀರನೆಱೆದಡೆ ನೀರ ಕುಡಿವುದು ಬೇರೋ ಮರನೋ ಮಿಾಱಿ ಬೆಳೆವ [illegible]ಂಬುದನಱಿತಲ್ಲಿ ಅಱಿದ ಅಱಿಕೆಯು ನಿಱಿಗೆಯ ಒಲ್ಲಾತನೆ ಕಪಿಲಸಿದ್ಧಮಲ್ಲಿನಾಥ [illegible] ತಾನಾದ ಶರಣ.

ಕರ್ತೃ ಭೃತ್ಯನ ವಾಸಕ್ಕೆ ಎಯ್ದಿದಡೆ ಆತನ ಭಕ್ತಿಯನಱಿತು ತಾನೊಡಗೂಡಿದಲ್ಲಿ ಆತ ಕೊಟ್ಟುದ ತಾ ಮುಟ್ಟದೆ, ಆತನಲ್ಲಿ ದುರ್ವಾಕ್ಯ ದುಶ್ಚರಿತ್ರ ಪಗಡಿ ಪರಿಹಾಸಂಗಳಂ ಮಾಡದೆ, ಆತನ ಚಿತ್ತ ನೋವಂತೆ ಮತ್ತಾವ ಬಂಧನದ ಕಷ್ಟವ

1. ಇದು ಅಗ್ಗಣಿಯ ಹಂಪಯ್ಯನ ಅಂಕಿತವೆಂದು ಕೆಲವರು ಹೇಳುತ್ತಾರೆ.

ನಿಕ್ಕದೆ, ಕೃತ್ಯ ಎನಗೊಂದು ಮಾಡೆಂಬ ನೇಮವ ಲಕ್ಷಿಸದೆ, ಆತ ತನ್ನ ತಾನ ಹಿಡು ಮಾಡುವಲ್ಲಿ ಅದು ತನಗೆ ಮುನ್ನಿನ ಸೋಕೆಂಬುದನಹಿದು, ಗನ್ನಗತುಕಿನಿಂ ಬಿನ್ನಾಣದಿಂ ಒಂದುವ ಮುಟ್ಟದೆ, ಆ ಪ್ರಸನ್ನವಪ್ಪ ವಸ್ತು ಮಹವಾಗಿರುವ ಕಲ್ಲೀ ಶ್ವರ ಲಿಂಗವು ತಾನಾದ ಶರಣ.

ತನ್ನ ತಾನಹಿದಡೆ ತನ್ನಹಿವೇ ಗುರು, ತಾನೇ ಲಿಂಗ, ತನ್ನ ನಿಷ್ಪತ್ತಿಯೇ ಜಂಗಮ. ಇಂತೀತ್ರಿವಿಧವು ಒಂದಾದಡೆ ಕಾಮೇಶ್ವರಲಿಂಗವು ತಾನೆ.

ಪ್ರಭುವಿನ ವಾದದಿಂದ ವೈರಾಗ್ಯ ಸಂಪತ್ತು; ಬಸವನ ವಾದದಿಂದ ಭಕ್ತಿಯ ಸಂಪತ್ತು; ಜೆನ್ನಬಸವನ ವಾದದಿಂದ ಶಿವಪ್ರಸಾದದ ಸಂಪತ್ತು; ಮಡಿವಾಳಯ್ಯನ ವಾದದಿಂದ ಜ್ಞಾನದ ಸಂಪತ್ತು; ಸಕಳೇಶನ ವಾದದಿಂದ ಶಾಂತಿಯ ಸಂಪತ್ತು. ಮೋಳಿಗಯ್ಯನ ವಾದದಿಂದ ದಾಸೋಹದ ಸಂಪತ್ತು; ನೀಲಮ್ಮನ ವಾದದಿಂದ ಲಿಂಗಪೂಜೆಯ ಸಂಪತ್ತು; ನಾಗಮ್ಮನ ವಾದದಿಂದ ಮಹತ್ವ ಸಂಪತ್ತು. ಇದುಕಾರಣ ಕಿನ್ನರ ತ್ರಿಪುರಾಂತಕಲಿಂಗ ಸಾಕ್ಷಿಯಾಗಿ ಪ್ರಮಥರ ನುಡಿಯಲ್ಲಿ ಬೇಸಱ ಬೀಱದಿರು.

ಹೊನ್ನು ಹೆಣ್ಣು ಮಣ್ಣು ಬಿಟ್ಟು ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ ನಿರಾಸಕ್ತನಾಗಿ ಶಿವಧ್ಯಾನ ಪರಾಯಣನಾಗಿಪ್ಪುದೀಗ ಪ್ರಥಮಬೋಳಿ; ಲಿಂಗಾಣತಿಯಿಂದ ಬಂದುದ ಕೈಕೊಂಡು ಲಿಂಗಸಾವಧಾನವಾಗಿಪ್ಪುದೀಗ ದ್ವಿತೀಯಬೋಳಿ; ಶರಣ ಸತಿ ಲಿಂಗ ಪತಿ ಎಂಬುಭಯವಳಿದು ಪರಮಾನಂದದಲ್ಲಿಪ್ಪುದೀಗ ತೃತೀಯಬೋಳಿ. ಬೋಳಿನ ಅನುವ ಕೂಡಲ ಚೆನ್ನಸಂಗಯ್ಯನಲ್ಲಿ ಅಲ್ಲಯ್ಯ ಒಲ್ಲ.

ದೇವರ ನೆನೆದು ಮುಕ್ತರಾದೆವೆಂದೆಂಬ ಯುಕ್ತಿಶೂನ್ಯರ ಮಾತು ಕೇಳಲಾಗದು. ಅದೇನುಕಾರಣವೆಂದೊಡೆ ದೇವರ ನೆನೆವವರಿಗೆ ದೇವರುಂಟೇ? ದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರ ನೆನೆವರಿಲ್ಲ. ಇದನಹಿದು ನಿನ್ನೊಳಡಗಿದೆ ನಿನ್ನ ನೆನೆಯಲಿಲ್ಲ, ನೀನೆನಗೆ ಮುಕ್ತಿಯನೀಯಲಿಲ್ಲ, ನೀನಾನೆಂದೆನಲಿಲ್ಲ ಗಜೇಶ್ವರ.

ಕರಸ್ಥಲದಲ್ಲಿದ್ದ ಲಿಂಗವ ಬಿಟ್ಟು ಧರೆಯುಮೇಲಣ ಪ್ರತಿಮೆಗೆ ಎಳಗುವ ನಾಯಕ ನರಕಿಗಳನೇನೆಂಬೆನಯ್ಯ ಪರಮಗುರು ಶಾಂತವಮಲ್ಲಿಕಾರ್ಜುನಾ.

ಒಲ್ಲನ ಕುತ್ತವ ಕೊಂಡು ಬಲ್ಲವರ ಬಾಯ ಹೊಗಹೋದಡೆ ಬಲ್ಲಬಲ್ಲರೆಲ್ಲಾ ಅಲ್ಲತ್ತತ್ತಗೊಳುತಿದ್ದರು. ಇದೆಲ್ಲಿಯ ಕುತ್ತವೆಂದು ತಿಳಿದು ವಿಚಾರಿಸಲು ಅದಲ್ಲಿಯೆ ಬಯಲಾಯಿತ್ತು ಗುರುಸಿದ್ಧಮಲ್ಲ.

ದಶವಾಯುಗಳ ತಮ್ಮ ವಶಕೆ ಹರಿಯಲೀಯದೆ ಊರ್ಧ್ವವಶಕೆ ಬಪ್ಪ ಪ್ರಣಮವಶನಾಗಿರಾ. ವಿಷಮಲೋಚನ ಘನಗುರು ಪ್ರಿಯ ಸೋಮನಾಥ ಎಸಳಿನಾ ದಳದೊಳಗೆ ಬೆಳಗುತಿಹನು.

ಉದಯದಲೆದ್ದು ಗಡಗಡನೆ ನಡುಗುತ ಹೋಗಿ ಹೂಗಿಡುವ ಪತ್ರೆಯ ಕಡಿವ ದೃಢಗೇಡಿಗಳಿರಾ ! ನೀವು ಕೇಳಿರಿ. ಅದು ಕಡುಪಾಪವಲ್ಲವೆ ? ನಿಃಗುಣ ನಡುಗಿರೋ. ಪರಧನ ಪರಸ್ತ್ರೀಯರಿಗೆ ನಡುಗಿರೋ. ಕೊಲೆಹುಸಿಕಳವು ಪರದಾರ ಕಾಂಕ್ಷೆಗೆ ನಡುಗಿರೋ. ಹರನಿಂದೆ ಗುರುನಿಂದೆ ಶಿವನಿಂದೆ ಕೇಳಲಾರೆವೆಂದು ನಡುಗಿರೋ. ಶಿವಾಚಾರಕ್ಕೆ ನಡುಗದೆ ಮಹಾಜಳಿಗೆ ನಡುಗಿ ಹೂವಿನ ಗಿಡುವ ತಿವಿವ ಕಡುಪಾಪಿಗಳಿರಾ ! ನಿಮಗೆ ಮೃಡನ ಪೂಜೆ ಎಲ್ಲಿಯದು ? ಇಲ್ಲ ನಿಮಗೆ ಅಖಂಡ ಪರಿಪೂರ್ಣ ಘನಲಿಂಗ ಗುರು ಚೆನ್ನಬಸವೇಶ್ವರ ಸಾಕ್ಷಿಯಾಗಿ.

ಕಂದಿಸಿ ಕುಂದಿಸಿ ಬಂಧಿಸಿ ನೋಯಿಸಿ ಕಂಡಕಂಡವರ ಬೇಡಿ ತಂದು ಮಾಡಿ ಹೆನೆಂಬುದು ದಂದುಗದೋಗರ ; ಲಿಂಗನೈವೇದ್ಯಕ್ಕೆ ಸಲ್ಲದು. ತನು ಕರಗಿ ಮನ ಬಲಿಲಿ ಬಂದ ತೆಱದನುವನಱಿದು ಸಂದಿಲ್ಲದೆ ಸಂಶಯವಿಲ್ಲದೆ ದಾಸೋಹವ ಮಾಡುವುದೆ ಮಾಟ. ಕಾರೆಯ ಸೊಪ್ಪಾದಡೂ ಕಾಯಕದಿಂದ ಬಂದುದು ಲಿಂಗಕ್ಕೆ ಪ್ರೀತವಲ್ಲದೆ ದುರಾಶೆಯಿಂ ಬಂದುದು ಅನಪ್ರೀತ. ಇದು ಕಾರಣ ಸತ್ಯ ಶುದ್ಧ ಕಾಯಕದ ನಿತ್ಯದ್ರವ್ಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಕೇಳಯ್ಯ.

ಸರ್ವಜೀವ ನಿನ್ನವಾಹೆ ಎಂಬೆನೆ, ಅದು ಭಿನ್ನಭಾವ. ತ್ರಿಗುಣಾತ್ಮಕರುಂಟು. ಅವರು ನಿನಿಗನ್ಯರೆಂಬೆನೆ, ಆ ತ್ರಿಗುಣಾತ್ಮಕರು ನಿನ್ನ ತಿಲಾಂಶ. ಇಂತೀಸರ್ವ ಭೂತಕ್ಕೆ ನಿನ್ನ ದಯೆ. ಎನಗಿದೇಕೆ ? ಗೆಲ್ಲ ಸೋಲವೆಂಬ ಖುಲ್ಲತನ ಎಲ್ಲ ಜೀವಕ್ಕೂ

ಸರಿ. ಅರುಣೋದಯದಂತೆ ಎನ್ನ ಚಿತ್ತದಲ್ಲಿ ಸರ್ವಜೀವಕ್ಕೂ ದಯವ ಮಾಡು ಚೆನ್ನದಸರೇಶ್ವರಲಿಂಗಾ.

ಸುಖದ ಸುಖಿಗಳ ಸಂಭಾಷಣೆಯಿಂದ ದುಃಖ ವಿಶ್ರಾಮವಾಯಿತ್ತು. ಭಾವಕ್ಕೆ ಭಾವ ತಾಕಣೆಯಾದಲ್ಲಿ ನೆನಹಿಂಗೆ ವಿಶ್ರಾಮವಾಯಿತ್ತು. ಬೆಚ್ಚು ಬೆರಸಲೊಡನೆ ಮಚ್ಚು ಒಳಕೊಂಡಿತ್ತು ಚೆನ್ನಬಂಕನಾಥನ ಮಹೇಶ್ವರಂಗೆ.

ಇಷ್ಟಲಿಂಗ ಗುರುವಿನ ಹಂಗು : ಚಿತ್ತ ಕಾಸ್ಯದ ಹಂಗು ; ಪೂಜೆ ಪುಣ್ಯ ಮಹಾದೇವನ ಹಂಗು ; ಎನ್ನದಾಸೋಹ ಇರ ಹಂಗೂ ಇಲ್ಲ. ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವೇ ! ಕಣ್ಣಿಯ ಮಾಡಬಲ್ಲಡೆ ಬಾ ಎನ್ನ ತಂದೆ.

ಶಿಲೆ ಹಲವುತೆಱದಲ್ಲಿ ಹೊಲಬುಗುಗೆ ಹೊಲಬಾಗಿ ಒಲವರವಿಲ್ಲದೆ ಅನರ ಭಾವದಲ್ಲಿ ನಿಲುವುದು ಶಿಲೆಯೋ ಮನವೋ ? ಆ ನಿಜದ ನೆಲೆಯ ತಿಳಿವುದು. ದರ್ಪಣದ ತನ್ನೊಪ್ಪದ ಭಾವ ಎನ್ನಯ್ಯ ಚೆನ್ನರಾಮನನಲಿವಲ್ಲಿ.

ಪ್ರಾಣಲಿಂಗವೆಂಬುದೊಂದು ಪೂತಿನಂತುಟಲ್ಲ ನೋಡಾ. ಲೋಕದ ಸುಖದುಃಖ ತನ್ನದೆಂಬನಕ ಚೆನ್ನಸಿದ್ಧನಾಥನೆಂಬ ಲಿಂಗ ಬಳಿಪೆ ಒಲಿವನೆ ?

ವಾದ್ಯದೊಳಗಣ ನಾದದಂತೆ ಪಾಷಾಣದೊಳಗಣ ಪಾವಕನಂತೆ ಕಿಸಲಯದೊಳಗಣ ರಸದಂತೆ ಆಸಿಯ ಮೊನೆಯಲ್ಲಿ ತೋಱುವ ನಯಕುಸುಲವೊಲು ಮುಸುಕಿನೊಳಗೆ ತೋಱುವ ಆಕಾಶದ ಪ್ರತಿರೂಪಿನಂತೆ ಗಜಗತಿಯಂತೆ ಮಯೂರನಂತೆ ಉಲುಹಡಗಿದ ವೃಕ್ಷ ಬಯಲೊಳಡಗಿದ ನಾದದಂತೆ ಹೊಱಹೊಮ್ಮದ ಐಕ್ಯ. ಇಂತಿವಱಿಂದದಲ್ಲಿ ಸಂದ ಶರಣಂಗೆ ಸಂದೇಹಪರವಿಲ್ಲ ನಂದಗೋಪಿಯ ಕಂದಪ್ರಿಯ ನಿಸ್ಸಂಗಲಿಂಗರಾಮನಾಥ.

ಹುಟ್ಟಿಸುವಾತ ಬ್ರಹ್ಮನಾದಡೆ ಆರ್ಚಿಸಲೇಕೊ ನಿಮ್ಮವ ? ರಕ್ಷಿಸುವಾತ ವಿಷ್ಣುವಾದಡೆ ಆರ್ಪಿಸಲೇಕೊ ನಿಮಗೊಂದುವ ? ಹೊಂದಿಸುವಾತ ರುದ್ರನಾದಡೆ ಮಹತ್ವವ ನುಡಿಯಲೇಕೊ ನಿಮ್ಮವ ? ಇಂತೀಲೀಲೆಗೆ ಆರಾದಡೂ ಆಗಲಿ, ನಾನಾ ಲೀಲೆಯವನಲ್ಲ, ಇದಱಿ ಹೊಳಹು ನೀನೆ ನಿಃಕಳಂಕ ಚೆನ್ನಮಲ್ಲಿಕಾರ್ಜುನಯ್ಯ.

ಅಯ್ಯಾ ನಿಮ್ಮ ಶರಣರ ಇರವು ಉರಿಯ ಕಯ್ಯ ದೀವಿಗೆಯಂತರ್ದಿತಯ್ಯ. ಅಯ್ಯಾ ನಿಮ್ಮ ಶರಣರ ಸುಳಿಹು ಪವನನ ಕಯ್ಯ ಪರಿಮಳದಂತಿರ್ದಿತಯ್ಯ. ಹುತಾ

ಶನನೆಂಬ ಗದ್ದುಗೆಯಮೇಲೆ ಕಪ್ಪುರದರಸು ಕುಳ್ಳಿರಲು, ಅರಸು ಗದ್ದುಗೆಯ ನುಂಗಿದನೊ ಗದ್ದುಗೆ ಅರಸನ ನುಂಗಿತ್ತೊ ಎಂಬ ದೃಷ್ಟದಲ್ಲಿ, ಕಂಗಳ ಗದ್ದುಗೆಯಮೇಲೆ ಮಹಾಗುರುಲಿಂಗನೆಂಬರಸು ಕುಳ್ಳಿರಲು, ಲಿಂಗ ಕಂಗಳ ನುಂಗಿತ್ತೊ ಕಂಗಳು ಲಿಂಗನ ನುಂಗಿತ್ತೊ ಈ ಉಭಯವ ನುಂಗಿದ ಬೆಡಗಿನ ಬಿನ್ನಾಣವ ನಿಜಗುರು ಭೋಗೇಶ್ವರಾ ನಿಮ್ಮ ಶರಣರಲ್ಲಿಯೆ ಕಾಣಬಹುದು.

ಪರಿಪೂರ್ಣನಲ್ಲ ಪ್ರಾದೇಶಿಕನಲ್ಲ ನಿರುಶಯದೊಳತಿಶಯ ತಾ ಮುನ್ನಲ್ಲ. ಶರಣನೈಕ್ಯನಲ್ಲ ಪರಮನಲ್ಲ ಜೀವನಲ್ಲ ನಿರನಯನಲ್ಲ ಸಾವಯ ಬಟೆಕಲ್ಲ ಪರವಿಹ ವೆಂಬುಭಯದೊಳಗಲ್ಲ. ನಿಜಾಲಯ ನಿಜಗುರುಶಾಂತೇಶ್ವರನ ಶರಣನ ನಿಲುವು ಉಪಮೆಗೆ ತಾನನುಪಮ.

ಕಾಯವ ನಿಶ್ಚಯಿಸಲಿಲ್ಲ, ಜೀವವ ನಿಶ್ಚಯಿಸಲಿಲ್ಲ. ಕಾಯ ಜೀವಕ್ಕೆಂತು ನೆಲೆಯಿಲ್ಲವಯ್ಯ. ಸುಖವ ನಿಶ್ಚಯಿಸಲಿಲ್ಲ, ದುಃಖವ ನಿಶ್ಚಯಿಸಲಿಲ್ಲ. ಸುಖ ದುಃಖಗಳೆಂಬು ವಕ್ಕೆಂತು ನೆಲೆಯಿಲ್ಲವಯ್ಯ. ರಾಜ್ಯವ ನಿಶ್ಚಯಿಸಲಿಲ್ಲ, ಲಕ್ಷ್ಮಿಯ ನಿಶ್ಚಯಿಸಲಿಲ್ಲ. ಅಭ್ರಚ್ಛಾಯೆ, ಮಾಯಾಮೋಹ, ಮಹೇಂದ್ರಜಾಲವೋ. ಎನ್ನದು ಮನೆ ಎನ್ನದು ಧನ ಎನ್ನದು ಸ್ತ್ರೀ ಎಂಬುದೆಲ್ಲವೂ ಕನಸಿನಲ್ಲಿ ಕಂಡ ಸಿರಿ ಕಣ್ಣ ತೆಱೆದಡೆ ಹೋದಂತೆ. ಹಾಲುಳ್ಳಲ್ಲಿ ಮಾಡು. ಗಾಳಿ ಇದ್ದಲ್ಲಿ ತೂಟೆಕೊಳ್ಳಿ. ಬಟೆಕಱೆದಡೆಂತು ಪರಮಸುಖವು? ನಿಜಗುರುಸ್ವತಂತ್ರ ಕಪಿಲಸಿದ್ಧ ಮಲ್ಲೇಶ್ವರನಲ್ಲಿ ಹಟೆಗೋಲು ಪಡೆದಲ್ಲಿ ತೊಱೆಯದಾಂಟಿಕೊಳ್ಳಿ ಭೋ.

ಶಿವನು ಜಗದ್ಭರಿತನೆಂದೆಂಬವರ ಬಾಯಲ್ಲಿ ಇಕ್ಕಿರೊ ಹನ್ನೆರಡುವರ್ಷದ ಹಟೆಯ ಪಾದರಕ್ಷೆಯನು. ಅದೇನುಕಾರಣವೆಂದಡೆ, ಶಿವನು ಜಗದ್ಭರಿತನೆ? ಅಲ್ಲ. ಶಿವನು ಜಗದ್ಭರಿತನಾದಡೆ ಜೀವಕ್ಕೆ ಜೀವ ಭಕ್ಷಿಸಲೇತಕೋ? ಶಿವನು ಜಗದ್ಭರಿತನಾದಡೆ ಪ್ರಾಣಕ್ಕೆ ಪ್ರಾಣ ವಿರೋಧಿಸಲೇತಕೋ? ಶಿವನು ಜಗದ್ಭರಿತನೆಂದಱೆದಡೆ ತಾನೆ ಗುರು ತಾನೆ ಲಿಂಗ ತಾನೆ ಜಂಗಮ ತಾನೆ ಪಾದೋದಕ ಪ್ರಸಾದಕಾಣಾ ಸಿಸ್ಸಂಗನಿರಾಳ ಪ್ರಭುವೇ.

ಅರುವಿನ ಪ್ರಸಂಗಕೆ ಮಜ್ಜರವೇಕೆ? ಮಹಾನುಭಾವಿಗೆ ಮನ್ನಣೆಯ ಮಾಡರೆಂಬ ತೇಜದ ಶಿಷ್ಟತೆಯೇಕೆ? ತಾನು ತಾನಾದಮತ್ತೆ ತನಗೇನೂ ಅನ್ಯವಿಲ್ಲ ಎಂದೆ ಭೌಂಭೇಶ್ವರ.

ಶಿವನೆ ನೀನು ಗುರುವಾಪೆ, ಲಿಂಗವಾದೆ, ಜಂಗಮವಾದೆ, ಭಕ್ತನಾದೆ. ಗುರುವಾಗಿದ್ದು ಭಕ್ತನೊಳಡಗಿದೆ; ಲಿಂಗವಾಗಿದ್ದು ಭಕ್ತನೊಳಡಗಿದೆ; ಜಂಗಮವಾಗಿದ್ದು ಭಕ್ತನೊಳಡಗಿದೆ. ಇಂತಡಗುವರೇ ಹಿರಿಯರು, ಇಂತಡಗುವರೇ ಗುರುವರು, ಇಂತಡಗುವರೇ ಮಹಿಮರು; ಇವಂಗೆ ಭಾಜನವೊಂದೆ, ಭೋಜನವೊಂದೆ. ಈ ನಾಲ್ಕು ಒಂದಾದ ಘನಕ್ಕೆ ಪರಿವಾಣ ಬೇಕೆಂಬ ಶಾಸ್ತ್ರದ ಸೂತ್ರಗಳನೆನಗೆ ತೋಱದಿರಾ ಮಸಣಯ್ಯಪ್ರಿಯ ಗಜೇಶ್ವರ.

ಅಷ್ಟತನುಮೂರ್ತಿ ಶಿವನೆಂಬ ಕಷ್ಟಜೀವಿಗಳ ಮಾತ ಕೇಳಲಾಗದು. ನಾನೇ ನೆಂಬೆನಯ್ಯ ? ಯುಗಯುಗಪ್ರಳಯವಾಹಲ್ಲಿ ಧರೆ ಜಲದಲ್ಲಿ ಅಡಗಿತ್ತು; ಜಲ ಅಗ್ನಿಯಲ್ಲಿ ಅಡಗಿತ್ತು; ಅಗ್ನಿ ವಾಯುವಿನಲ್ಲಿ ಅಡಗಿತ್ತು; ವಾಯು ಆಕಾಶದಲ್ಲಿ ಅಡಗಿತ್ತು; ಆಕಾಶ ಅತೀತದಲ್ಲಿ ಅಡಗಿತ್ತು; ಅತೀತ ತಾನೊಳಡಗಿತ್ತು; ಆದಿ ಅನಾದಿಯೊಳಡಗಿತ್ತು; ಅನಾದಿ ನಿಜದೊಳಡಗಿತ್ತು. ಇಂತೀ ಅಷ್ಟತನುಗಳು ಒಂದಕ್ಕೊಳಗೊಂದು ಅಡಗುವಲ್ಲಿ ಒಂದಕ್ಕೊಂದೊಂದು ಹುಟ್ಟುವಲ್ಲಿ ಎಂದಱಿದ ರೆಂಬುದ ಬ್ಲ್ಲಡೆ ನೀವು ಹೇಳಿರೇ. ಎಂದು ಹುಟ್ಟಿದರೆಂಬುದ ನೀವು ಬಲ್ಲಡೆ ಹೇಳಿರೇ. ಹುಟ್ಟಿದನಱಿದನೆಂಬ್ಕಷ್ಟವಚನವ ನುಡಿಯಲಾಗದು. ಇಂತೀಯಷ್ಟತನು ವೆಲ್ಲವು ನಮ್ಮ ಮಡಾಘನಲಿಂಗ ಹುಲಿಗೆರೆಯ ಸೋಮೇಶ್ವರ ಅಗೆಂದಡಾದುವು, ಬೇಡೆಂದಡೆ ಮಾದುವು.

ಕಾಯ ಲಿಂಗಾರ್ಪಿತವಾದಡೆ ಕರ್ಮವಿಲ್ಲ; ಜೀವ ಲಿಂಗಾರ್ಪಿತವಾದಡೆ ಜನಿತವಿಲ್ಲ; ಭಾವ ಲಿಂಗಾರ್ಪಿತವಾದಡೆ ಭ್ರಮೆಯಿಲ್ಲ. ಆಱವು ಲಿಂಗಾರ್ಪಿತವಾದ ಬಟಿಕ ಆ ಪ್ರಸಾದನ ಗ್ರಹಿಸಿದನಾಗಿ ಕುಱುಹು ಮುನ್ನಿಲ್ಲ. ಮಾಯಾಪ್ರಪಂಚವ ನತಿಗಳೆದು ನಿಮಗರ್ಪಿಸಬಲ್ಲನಾಗಿ ಆತನೇ ಶರಣ. ಬೆಚ್ಚಂತೆ ಬೆರಸಿ ಆಜ್ಯೊತ್ತಿದಂತೆ, ಅಪ್ಪು ಒಳಕೊಂಡ ಆಲಿಕಲ್ಲಿನಂತೆ ಜ್ಯೋತಿಯುಂಡ ತೈಲದಂತೆ ಜಲ ಉಂಡ ಮುತ್ತಿನಂತೆ ಬಯಲುಂಡ ಬೆಳಗಿನಂತೆ ಇದ್ದರಾಗಿ ಮಹಾಘನಸಮರ್ಪಿಸಿದ್ಧ ಸೋಮನಾಥ ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂಬೆ.

ಸತ್ತು ಸಂಯೋಗದಿಂದೆ ಭಕ್ತಿಪತಿಯ ಕೂಡಲು ಸಮತೆಯೆಂಬ ಬಸುಪ್ರಾಗಲು ಪರಿಣಾಮವೆಂಬ ಮಗ ಹುಟ್ಟಲು ರೇಕನಾಥಯ್ಯನೆಂದು ಹೆಸರಿಟ್ಟರು.

ಆಶಾಪಾಶದಿಂದ ತೊಱಲಿತ್ತಯ್ಯ ಎನ್ನ ಕಾಯವು. ಆಶೆಯಿಂದ ಹೊಡದಳುಗೊಂಡಿತ್ತಯ್ಯ ಎನ್ನ ಮನವು. ಆಶೆಯೆಂಬ ಸುಜನೆಯಲ್ಲಿ ಮನೆಮಾಡಿತ್ತಯ್ಯ ಎನ್ನ

ಪ್ರಾಣವು. ಆಶೆಯೆಂಬ ಹೊಡೆಗಿಚ್ಚಿನಲ್ಲಿ ಹೊಡೆದಾಡಿ ಸತ್ಕೃತ್ಯ ಎನ್ನಭಾವವು. ಇನ್ನೆನಗೆ ಗತಿ ಪಥವ ತೋಱಿ ರಕ್ಷಿಸಯ್ಯ ಭವಪಾಶರಹಿತ ಪರಬ್ರಹ್ಮಮೂರ್ತಿ ಶ್ರೀ ಗುರುಲಿಂಗ ಜಂಗಮವೇ.

ಚತುರ್ವೇದದನುಭವವಮಾಡುವ ಜಂಗಮವೆಲ್ಲ ಬ್ರಹ್ಮನ ಸಂತತಿ. ಹದಿನೆಂಟು ಪುರಾಣದನುಭವ ಮಾಡುವ ಜಂಗಮವೆಲ್ಲ ವಿಷ್ಣುವಿನ ಸಂತತಿ. ಇಪ್ಪತ್ತೆಂಟು ದಿವ್ಯಾಗಮದನುಭವ ಮಾಡುವ ಜಂಗಮವೆಲ್ಲ ರುದ್ರನ ಸಂತತಿ. ಮೂವತ್ತೆರಡು ಉಪನಿಷದುಗಳನುಭವ ಮಾಡುವ ಜಂಗಮವೆಲ್ಲ ಈಶ್ವರನ ಸಂತತಿ. ಆಱುಶಾಸ್ತ್ರಗಳನುಭವ ಮಾಡುವ ಜಂಗಮವೆಲ್ಲ ಸದಾಶಿವನ ಸಂತತಿ. ಇಂತೀ ಎಲ್ಲ ಶಬ್ದವನು ಮುಚ್ಚಿ ಲಿಂಗದನುಭವನಾಡುವ ಜಂಗಮ ಘನ ನಿತ್ಯ ಕಾಣಾ ಶ್ರೀ ಜಂಗಮ ಲಿಂಗಪ್ರಭುವೆ .

ಅಯ್ಯಾ ಕೊಱಿಡು ಕೊನರಾಗಬಲ್ಲುದೆ? ಬಱಿಡು ಹಯನಾಗಬಲ್ಲುದೆ? ಕುರುಡಂಗೆ ಕನ್ನಡಿಯ ತೋಱಿದಡೆ ನೋಡಬಲ್ಲನೆ? ಮೂಗಂಗೆ ರಾಗವ ಹೇಳಿದಡೆ ಹಾಡಬಲ್ಲನೆ ? ಲೋಗರಿಗೆ ಉಪದೇಶವ ಹೇಳಿದಡೆ ಶಿವಸತ್ಪಥದ ಹಾದಿಯ ಬಲ್ಲರೆ? ಇದು ಕಾರಣ ಶಿವಸತ್ಪಥದ ಅಗೆಂಬುದು ಶಿವಜ್ಞಾನ ಸಂಪನ್ನಂಗಳ್ಗಲ್ಲದೆ ಸಾಧ್ಯವಲ್ಲ ಕಾಣಾ. ಅಸಾಧ್ಯ. ನಿರವಯಶೂನ್ಯವಸ್ತುವಿನೊಳಗಣ ಸತ್ಪಥೈಜೈಕ್ಯವು ಅವಿವೇಕಿಗಳಿಗೆ ಅಳವಡುವುದೆ ನಿಮ್ಮವರಿಗಲ್ಲದೆ ಸಂಗನ ಬಸವಣ್ಣಾ?

ಗುರುವನಱಿತು ಮಾಡುವಲ್ಲಿ ಅಹಂಕಾರವ ಮಱೆದು ಮಾಡಬೇಕು; ಲಿಂಗವನಱಿತು ಮನ ಮುಟ್ಟಿದಲ್ಲಿ ಪ್ರಕೃತಿ ತಲೆದೋಱದಿರಬೇಕ; ಜಂಗಮವನಱಿತು ಮುಟ್ಟಿ ಪೂಜಿಸುವಲ್ಲಿ ಅರ್ಥ ಪ್ರಾಣ ಅಭಿಮಾನ ಈ ಮೂಱಱಲ್ಲಿ ನಿಶ್ಚಯವಾಗಿರಬೇಕು, ಸಂಗನ ಬಸವಣ್ಣಪ್ರಿಯ ಚಂಡೇಶ್ವರಲಿಂಗವನಱಿಯಬಲ್ಲಡೆ.

ಕಾಳಿಕಾ, ಚಾಮುಂಡಿ, ಗಂಗೆ, ಗೌರಿ, ಬನಶಂಕರಿ, ಎಲ್ಲಿ, ಎಕ್ಕನಾದಿ, ಹುಲಿಗೆ, ಹೊಸೂರಿ, ಸತ್ತವರು, ಹೆತ್ತವರು ಇಂತೀ ಹಲವು ಪಿಶಾಚಗಳ ಹೆಸರಿಂದ ಇದಿರಿಟ್ಟು ಆರಾಧಿಸಿ ಅವರ ನೈವೇದ್ಯವೆಂದು ಶ್ರೀಗುರುವಿತ್ತ ಲಿಂಗಕ್ಕೆ ತೋಱಿ ಭುಂಜಿಸುವ ಶಿವದ್ರೋಹಿಗಳಿಗೆ ಗುರುವಿಲ್ಲ ಲಿಂಗವಿಲ್ಲ ಜಂಗಮಪಾದೋದಕ ಪ್ರಸಾದವಿಲ್ಲ ಕಾಣಾ ಸಂಗನ ಬಸವೇಶ್ವರಾ.

ಒಡೆಯರಿಗೊಡವೆಯನೊಪ್ಪಿಸಿ ಶುದ್ಧನು | ಎಡೆಯೊಳಗಾಮಾಡಿದುದಿಲ್ಲೆಂದಱಿ |
ದೊಡಲವಗುಣವಡಗಿಸಿ ನಿರಹಂಭಾವದೊಳಗೆ ಸಲೆ ಸಂದು ||

ಮೃಡಶರಣರುಗಳ ಕಂಡವರಡಿಗಳ | ಪಿಡಿದು ಸದಾಸುಖಿಯಾಗಿರ್ಪರ ಮೆ |
ಲ್ಲಡಿಗಳೊಳಗೆ ಹಾವುಗೆಯಾಗಿರಿಸೆನ್ನನು ಸಂಗಪ್ರಭುವೇ ||

ಅಡಿಗಡಿಗೆ ಬಂದು ಅಡರುತ್ತಿಪ್ಪೆ ಕಡುಜಲ ನಿನಗೆ ಬೇಡ ಕಂಡೆಯಾ. ಮೃಡನೆ ಎನ್ನೊಡನೆ ತೊಡರಿ ನೀನು ಸಸಿನೆ ಹೋಗಲರಿಯೆ. ಅದು ಹೇಗೆಂದಡೆ ನಾನು ನಿನಗಂಜುವನಲ್ಲ. ಗಾಸಿಯಾಗಬೇಡ ಕಂಡೆಯಾ. ಹರಹರಾ! ಶಂಕರಾ! ಎನ್ನ ನೇಮಕ್ಕೆ ಅಡ್ಡಬಾರದಿರು. ಒಡವೆ ಸವೆದಡೆ ಒಡಲನೊಡ್ಡುವೆ, ಕಡಗಿ ನೋಡುವಡೊಮ್ಮೆ ಹಱಿಜು. ಬಂದು ಬಡವನ ಕೈಯ ಕಡುಹ ನೋಡೆನ್ನೊಡೆಯ ಸಂಗಯ್ಯಪ್ರಿಯ ಬಂಕೇಶ್ವರಾ.

ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ. ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ. ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದ ಬಸವಣ್ಣ. ಇಂತೀ ತ್ರಿವಿಧ ವಿಡಿದು ದಾಸೋಹವ ಮಾಡಿ ಸದ್ಗುರು ಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣ ಸ್ವಯ ಪ್ರಸಾದಿಯಾದನಯ್ಯಾ.

ಶಿವನೆ ಅಧಿಕನು ಶಿವಭಕ್ತನೆ ಕುಲಜನು ಶಿವನ ಪ್ರಸಾದದಿಂದಧಿಕವಾವುದಿಲ್ಲೆಂದುದು ಶ್ರುತಿ. ಇದನಱಿತು ಸದ್ಗುರು ಶಂಭುಸೋಮೇಶ್ವರನ ಭಜಿಸಿ ಪ್ರಸಾದವ ಸೇವನೆಯ ಮಾಡದಿರಲು ಅಘೋರನರಕ ತಪ್ಪದು.

ಶಿವನ ನೆನೆದಡೆ ಭವಹರವಹುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನುಕಾರಣವೆಂದಡೆ—ಜ್ಯೋತಿಯ ನೆನೆದಡೆ ಕತ್ತಲೆ ಹರೆವುದೆ ? ಮೃಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ ? ರಂಭೆಯ ನೆನೆದಡೆ ಕಾಮದ ಕಳವಳವು ಹಿಂಗುವುದೆ? ನೆನೆದಡಾಗದು. ನಿರ್ಧರಿಸಿ ದ್ವಯಕುಳವಱಿದು ಬೆರಸಬಲ್ಲಡೆ ಸದ್ಗುರು ಸಿದ್ಧಸೋಮೇಶ್ವರಲಿಂಗವು ತಾನೆ.

ಜ್ಞಾನದಲ್ಲಿ ಅಱಿದಡೇನಯ್ಯ ಸತ್ಕ್ರಿಯಾಚಾರ ಸಂದನಕ? ನೆನೆದಮಾತ್ರದಲ್ಲಿ ಕಾಂಬುದೆ ಕಾರ್ಯದಲಲ್ಲದೆ? ಕುರುಡ ಕಾಣ ಪಥವ; ಹೆಱಿವ ನಡೆಯಲರಿಯ.

ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿಯೆ ಜಡನು; ಕ್ರಿಯೆಯಿಲ್ಲದ ಜ್ಞಾನ ಭ್ರಾಂತು. ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು.

ಉಷ್ಣತೆಯ ಒಜೆತೆಯಂತೆ ಉರಿಯ ನೆಲೆಯಂತೆ ಮಂಜಿನ ಮಟ್ಟೆಯಂತೆ ಬಿಸಿಲ ಕುದುರೆಯಂತೆ ಬೆಟ್ಟದ ಶಬ್ದದಂತೆ ಸುಜೆವ ಸಿದ್ಧಸೋಮನಾಥಲಿಂಗ ನಿಮ್ಮ ಶರಣ.

ಉರಿ ಕರ್ಪುರವ ಸೋಂಕಿದಂತೆನ್ನೊಳು ಬೆರಸಿರ್ದ ಮಹಾಘನವನು ತೋಱಿ ಪರಮಸುಖದೊಳಗಿರಿಸಿದ ಸಿದ್ಧಸೋಮೇಶ ಕರುಣಾಮೃತಗುರುವೆ ಶರಣು.

ದಶದಿಕ್ಕು ಸಚರಾಚರದೊಳಗೆಲ್ಲ ವಿವರಿಸಿ ನೋಡಲು ತನ್ಮಯ. ಅಪರಾಪರ ಹಂಪೆಯ ವಿರುಪಯ್ಯನಲ್ಲದಿಲ್ಲವೆಂದು ಶ್ರುತಿ ಸಾಱುತಿವೆ.

ಆದಂತೆ ಆಗಲಿ ಮಾದಂತೆ ಮಾಣಲಿ ಎನಲಾಗದು. ನೇಮದಾತಂಗೆ ಛಲ ಬೇಕು, ಛಲ ಬೇಕಯ್ಯ. ಹಿಡಿದುದ ಬಿಡಲಾಗದು. ಹುಲಿಗೆಱೆಯ ವರದ ಸೋಮನಾಥನ ಮನಮುಟ್ಟಿದ ಧೀರನು ಏತಕ್ಕೂ ಸೋಲುವನಲ್ಲ.

ಮಾಯಾಸಂಗ್ರಹಮಲವ ತೊಳೆದು ನಿರ್ಮಾಯಸ್ವರೂಪವನೆಯ್ದಿಸಿ ಕಾವುದು ಹುಲಿಗೆಱೆಯ ವರದಸೋಮೇಶನ ಅಕ್ಷಯಾನಂದಪಾದೋದಕ.

ಇನ್ನೂ ಕೆಲವು ಅಂಕಿತಗಳು ದೊರೆತಿವೆ; ಆದರೆ ಇವುಗಳುಳ್ಳ ವಚನಗಳು ಸದ್ಯಃ ಸಿಕ್ಕಿಲ್ಲ. ಈ ಅಂಕಿತಗಳನ್ನು ವರ್ಣಾನುಕ್ರಮದಲ್ಲಿ ಕೆಳಗೆ ಕಾಣಿಸುತ್ತೇವೆ :—ಕದಂಬಕಲಶ ಕೂಡಲ ಚೆನ್ನಸಂಗ, ಕುಮಾರಸಂಗ, ಗುರುವರದ ವಿರೂಪಾಕ್ಷ, ಗುಹೇಶ್ವರಲಿಂಗ + ಸಂಗನ ಬಸವಣ್ಣ, ಚೆನ್ನಬಂಕೆನಾಥ, ನಿಜಲಿಂಗೈಕ್ಯ ನಿಃಕಳಂಕ ನಿರ್ಮಾಯಪ್ರಭುವೇ, ಬಸವಣ್ಣ ಪ್ರಿಯ ನಿಃಕಳಂಕ ಸೋಮೇಶ್ವರ, ಬಾಲಸಂಗಯ್ಯ ಪ್ರಿಯ ಕೂಡಲಸಂಗಮದೇವ, ಮತ್ತ್ರಾಣನಾಥ ಮಹಾಶ್ರೀ ಗುರುಸಿದ್ಧಲಿಂಗೇಶ್ವರ, ಮಾರದಮಹಾಲಿಂಗ, ಶಂಭುಭುಜಂಗೇಶ್ವರ ಲಿಂಗ, ಶಿವತಂತ್ರ ಗುರುಶಾಂತೇಶ್ವರ, ಹುಲಿಗೆರೆಯ ಸೋಮೇಶ್ವರ.

ಇದುವರೆಗೆ ವಚನಕಾರರ ವಿಷಯವನ್ನೆಲ್ಲಾ ಒಂದೇ ಕಡೆ ಸೇರಿಸಿ ಹೇಳಿದುದಾಯಿತು. ಇನ್ನು ಮುಂದೆ ಕೆಲವು ಬೇರೆ ವಿಷಯಗಳನ್ನು ಹೇಳುತ್ತೇವೆ :—

ಶ್ರೀಕಂಠಸೂರಿ. 1099.

ಈತನು ಬಳ್ಳಾರಿಜಿಲ್ಲೆಗೆ ಸೇರಿದ ಕುರುವತ್ತಿಯಲ್ಲಿರುವ ಒಂದು ಶಾಸನವನ್ನು ಬರೆದುದಾಗಿ ಆಶಾಸನದ ಕೊನೆಯಲ್ಲಿರುವ

ವಿದ್ಯಾವಧೂಶ್ರವಣಭಾಸುರಕರ್ಣಪೂರಃ ಶ್ರೀಕಾಳಿದಾಸವಿಬುಧಾಧಿಪತೇಸ್ತನೂಜಃ|
ಸೋವೇ.ಶಶಾಸನವಜೋರಜನಾಂ ವಿಧಾಯ ಶ್ರೀಕಂಠಸೂರಿರಲಿಖದ್ವಿಬುಧೈರ್ನಿ
[ಚಾರ್ಯಂ ||

ಎಂಬ ಪದ್ಯದಿಂದ ತಿಳಿಯುತ್ತದೆ.[1] ಇವನು ಬ್ರಾಹ್ಮಣಕವಿ; ಕಾಳಿದಾಸನ ಮಗನು. ಈ ಶಾಸನವು ಚಾಳುಕ್ಯರಾಜನಾದ ತ್ರಿಭುವನಮಲ್ಲನ ಆಳಿಕೆಯಲ್ಲಿ 1099ರಲ್ಲಿ ಹುಟ್ಟಿದೆ. ಇದರಲ್ಲಿ ಕುರುವತ್ತಿಯ ಇನ್ನೂರ್ವರೂ ಅಲ್ಲಿಯ ಅಧಿಪತಿಯಾದ ಕಾಳಿದಾಸನೂ ಅಭಿನವ ಸೋಮೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಒಂದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಕಾಳಿದಾಸ.

ಪರಹಿತದೊಳ್ ವಿದ್ಯಾಧರ | ಪರಿವೃಢನಂ ಸ್ವಾಮಿಭಕ್ತಿಯೊಳ್ ಪವನಜನಂ |
ಪರಮೌದಾರ್ಯದೊಳಂಗೇ | ಶ್ವರನನಧಃಕರಿಸಿ ಕಾಳಿದಾಸಂ ನೆಗಲ್ದಂ ||

ಕುರುವತ್ತಿಯ ಇನ್ನೂರ್ವರು.

ಶರಣಾಯಾತಜನಕ್ಕೆ ವಜ್ರಕವಚಂ ಮಾಹೀಕಾಂತ ವೀರಂಗೆ ಕೇ |
ಸರಿ ಬಾಯ್ವಿಟ್ಟಿರೆದಂಗೆ ಕಲ್ಪಮಹಿಜಂ ಶಾಸ್ತ್ರಕ್ಕೆ ತಾನಾಸ್ಪದಂ ||
ಪುರುಷಾರ್ಥಕ್ಕೆ ತವರ್ ಶ್ರುತಿಸ್ಮೃತಿಗೆ ತಾಂ ಲೀಲಾಗೃಹಂ ಧರ್ಮದಾ |
ಕರಮಿಂತೀಕುರುವರ್ತಿವರ್ತಿ ಮಹಿದೇವಾನೀಕಮಿನ್ನೂರ್ವರುಂ ||

ಭಾಸ್ಕರ. 1127.

ಈತನು ನಿಜಾಂ ಸರಕಾರಕ್ಕೆ ಸೇರಿದ ಪಟ್ಟನಚೆರುವು ಎಂಬ ಗ್ರಾಮದಲ್ಲಿರುವ ಒಂದು ಶಾಸನವನ್ನು ಬರೆದುದಾಗಿ ಆ ಶಾಸನದ ಅಂತ್ಯದಲ್ಲಿರುವ

1. *Archæological Survey of India*, Memoir 13, p. 9.

ನಿರತಿಶಯೋನ್ನತಮತಿ ಭಾ | ಸ್ಕರ ಸರಸಕವೀಂದ್ರರಚಿತ ಶಾಸನಮಂ ಬಿ |
ತ್ತರದಿಂ ಪ್ರತಿಕಂಠಂ ಸಾ | ಕ್ಷರನಿಳಯಂ ತಿಟ್ಟಿ ಭಾಸ್ಕರಯ್ಯಂ ಬರೆದಂ ||

ಎಂಬ ಪದ್ಯದಿಂದ ತಿಳಿಯುತ್ತದೆ.[1] ಅಲ್ಲದೆ ಇವನು ಬರೆದುದನ್ನು ಭಾಸ್ಕರಯ್ಯನೆಂಬವನು ತಿದ್ದಿ ಬರೆದಂತೆಯೂ ತಿಳಿಯುತ್ತದೆ. ಭಾಸ್ಕರನು ಬ್ರಾಹ್ಮಣಕವಿಯೆಂದು ತೋರುತ್ತದೆ. ಈ ಶಾಸನವು ಚಾಳುಕ್ಯರಾಜನಾದ ಭೂಲೋಕಮಲ್ಲ ಸೋಮೇಶ್ವರನ ಆಳಿಕೆಯಲ್ಲಿ 1127ರಲ್ಲಿ ಹುಟ್ಟಿದೆ. ಇದರಲ್ಲಿ ದೊಡೆ ತನ್ನ ಪಟ್ಟಬಂಧೋತ್ಸವಸಮಯದಲಿ ನನ್ನಯಭಟ್ಟನಿಗೆ ಭೂಮಿಯನ್ನು ಕೊಟ್ಟಂತೆ ಹೇಳಿದೆ. ಈ ಶಾಸನದಿಂದ ಬಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ತೈಲಪ.

ಶ್ರೀಮಚ್ಚಾಳುಕ್ಯವಂಶೋದ್ಭವನನುಪಮಿತೋದ್ಯದ್ಭುಜಾದಂಡಶೌರ್ಯೋ |
ದ್ದಾಮಂ ವೀರಾರಿಭೂಭೃತ್ಪ್ರಕರಸಿತವಜ್ರಾಯುಧಂ ಕ್ಷತ್ರಸದ್ಯಾ ||
ಧಾಮಂ ರಟ್ಟಾನ್ವಯಾಯ ಪ್ರಬಳತರತಮಸ್ತೋಮಮಾರ್ತಾಂಡತೇಜ |
ಸ್ತೋಮಂ ತಾನೆಂಬನಂ ಮಿಕ್ಕೆಸೆದನಸದಳಂ ತೈಲಪಕ್ಷ್ಮೋಣಿಪಾಳಂ ||
ಮೊಳೆವೆತ್ತೆತ್ತಿದ ತೋಳ ಬಾಳ ಬಳದಿಂ ಮೆಯ್ಗೊಂಡಮಿತ್ರಾಂಗನಾ |
ಕುಳಬಾಷ್ಪದ್ರವದಿಂ ತಳಿತ್ತು ರಿಪುಸೇನಾಜಕ್ರರಕ್ತಾಂಬುವಿಂ ||
ಬಳೆದತ್ತೀಗಳುಪಾಹಿತಾಹಿತಗಳಕ್ಕಾಳಂಗಮಾತಂಗಸಂ |
ಕುಳದಾನಪ್ಲವದಿಂ ಪರಾಕ್ರಮವನಂ ಭೂಲೋಕಮಲ್ಲಾಂಕನಾ ||

[ಪ್ರ. ಸಂಪುಟ 155] ಮಧುಸೂದನದೇವ. 1148.

ಈತನು ಬಳ್ಳಾರಿ ಜಿಲ್ಲೆಯ ಹಡಗಳ್ಳಿ ತಾಲ್ಲೂಕಿನ ಕೊಟ್ಟ್ನಕಲ್ಲಿನಲ್ಲಿಯೂ ಬಂದು ಶಾಸನವನ್ನು ಬರೆದಿದ್ದಾನೆ.[2] ಇದು ಚಾಳುಕ್ಯರಾಜನಾದ 2ನೆಯ ಜಗದೇಕಮಲ್ಲನ ಆಳಿಕೆಯಲ್ಲಿ 1148 ರಲ್ಲಿ ಹುಟ್ಟಿದೆ. ಇದರಲ್ಲಿ ಈ ರಾಜನ ಸಾಮಂತ ವೀರಪಾಂಡ್ಯನ ಮಾತುಲನಾದ ವಿಕ್ರ

1. *Archæological Survey of India*, Memoir 13, p. 12.
2. *I bid.* p. 10.

ಮಾದಿತ್ಯನು ಸ್ವಯಂಭು ಕೋಟಿ ಶಂಕರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ವಿಕ್ರಮಾದಿತ್ಯ.

ವಿನಯಾಂಭೋನಿಧಿಯೆಂದು ಧರ್ಮಪರನೆಂದುದ್ದಾಮಪುಣ್ಯೈಕಭಾ |
ಜನನೆಂದುರ್ವರೆ ಬಣ್ಣಿಕುಂ ವಿಬುಧವಕ್ತ್ರೇಂದೀವರಾದಿತ್ಯನಂ ||
ತನುವಿಂ ನಿತ್ಯನನುದ್ಧಸತ್ಯನನಶೇಷೋರ್ವೀತಳಸ್ತುತ್ಯನಂ |
ಮನುಸಾಹಿತ್ಯನನಲ್ಕಿಜೆಂಪೆ ಸತತಂ ಶ್ರೀವಿಕ್ರಮಾದಿತ್ಯನಂ ||
ಅಯದೊಳ್ ವಿಕ್ರಮದೊಳ್ ಪರೋಪಕೃತಿಯೊಳ್ ವಿಖ್ಯಾತಿಯೊಳ್
[ನೀತಿಯೊಳ್ |
ದಯೆಯೊಳ್ ಧರ್ಮದೊಳಾರ್ಜ್ಜನೊಳ್ ವಿನಯದೊಳ್ ಸಂಶುದ್ಧಿಯೊಳ್
[ಬುದ್ಧಿಯೊಳ್ ||
ನಿಯತಂ ತನ್ನವೊಲನ್ಯರಾರೆನೆ ಜಗಂ ಜೀಯೆಂಬಿನಂ ಸಂತತೋ |
ದಯಮಂ ತಾಳ್ದಿದ ಪೆರ್ಮೆ ಸೂರ್ಮಡಿ ವಲಂ ಶ್ರೀವಿಕ್ರಮಾದಿತ್ಯನಾ ||
ಜನತಾಸಂಸ್ತುತಮಾದನೇಕಗುಣದಿಂ ಶ್ರೀವಿಕ್ರಮಾದಿತ್ಯದೇ |
ವನೊಳಿಂತೀ ಕಲಿಕಾಲಕಲ್ಮಷಮುಷೀಸಂಶ್ಲಿಷ್ಟರಂ ಪೋಲಿಪೆ ||
ಗ್ಗಿನೊಳೇನುನ್ನತಸತ್ವಸಂಪದದೊಳಾರಿಂದಗ್ಗಳಂ ನೋಟೆ್ಪೊಡೆಂ |
ಬಿನೆಗಂ ತಾಳ್ದಿದನತ್ಯುದಾತ್ತಚರಿತಂ ದಿಗ್ವರ್ತಿಸತ್ಕೀರ್ತಿಯಂ ||
ಸ್ಥಿರತೇಜೋಜಾಳಮೆಂಟುಂ ದೆಸೆಗೆ ಪಸರಿಸಲ್ ವೈರಿವೀರಾಂಧ್ಯಕಾರಂ |
ಪರೆದೋಡಲ್ಕಾನತಾಸ್ಯಾಂಬುರುಹವನಮದಾನಂದಮಂ ತಾಳ್ದೆ ವಿದ್ವಿ ||
ಟ್ಟರುಣೀನೇತ್ರೋತ್ಪಳಂಗಳ್ ಕೊರಗೆ ನಿಜಚಮೂಚಕ್ರವಾಕೋತ್ಕರಂ ರಾ |
ಗರಸಾಂಭೋರಾಶಿಯೊಳ್ ನರ್ತಿಸೆ ಧರೆಗೆಸೆವಂ ವಿಕ್ರಮಾದಿತ್ಯದೇವಂ ||
ಪರಮಂ ಶ್ರೀವಿಕ್ರಮಾದಿತ್ಯರಸ ನಿನಗೆ ದೀರ್ಘಾಯುವಂ ಶ್ರೀಯುಮಂ ಶಂ |
ಕರನತ್ಯಾನಂದದಿಂದಂ ಕುಡುಗಮರಸರಿದ್ವಾರಿಪೂತೋಚ್ಚಳಚ್ಛೀ ||
ಕರತಾ(ರಾ)ಧಾರಜಂಜತ್ತರುಣಶಶಿಕಳಾಕಾಂತಿಸಂತಾನಶೋಭಾ |
ಕರಮಂಜತ್ತುಂಗಪಿಂಗದ್ಯುತಿವಿಕಟಜಟಾಜೂಟಕೋಟೀರಭಾರಂ ||

(ದ್ವಿ. ಸ-ಪುಟ 346) ಗಣದಾಸಿ ವೀರಣ್ಣ. ಸು. 1160.

ಈತನ ಹೆಸರು ಗಣಸಹಸ್ರನಾಮದ (ಪ್ರ.ಸಂಪುಟ 294) ಅಮರ ಗಣದಲ್ಲಿ ಪಠಿತವಾಗಿರುವುದರಿಂದ ಇವನು ಬಸವನ ಸಮಕಾಲದವನು. ಇವನ ಕಾಲವು ಸುಮಾರು 1160 ಆಗಿರಬೇಕು.

(ಪ್ರ. ಸಂಪುಟ 246) ತ್ರಿಭುವನತಾತ. ಸು. 1165.

ಈತನು ಗುರುರಗಳೆಯನ್ನು ಬರೆದಿರುವುದಾಗಿ ಶಾಂತಮಲ್ಲನು (ದ್ವಿ. ಸಂಪುಟ 390) ಇದಕ್ಕೆ ತಾನು ಬರೆದಿರುವ ಟೀಕೆಯ ಅಂತ್ಯದಲ್ಲಿಯ ಧರೆಯೊಳ್ ತ್ರಿಭುವನತಾತಂ | ಗುರುವಿಂದುಪದೇಶವಾಗುವಾಗಳ್ ರಗಳೆಯ | ಬರೆದು ನಿಜಮುಕ್ತನಾದಂ | ಭರದಿಂ ಪಠಿಸಿದರ್ಗೆ ಭೋಗಮೋಕ್ಷಗಳಕ್ಕುಂ ||

ಎಂಬ ಪದ್ಯದಲ್ಲಿ ಹೇಳುತ್ತಾನೆ. ಈ ರಗಳೆಯಿಂದ ಸ್ವಲ್ಪ ಭಾಗವನ್ನು ಉದಾಹರಿಸುತ್ತೇವೆ :—

ಆಳಿನಪಮಾನವಾಳ್ದಂಗಯ್ಯ ಗುರು ಶರಣು |
ಕಾಲಕರ್ಮಗಳೆನ್ನ ಕಾಡುತಿವೆ ಗುರು ಶರಣು ||
ಶೂಲಪಾಣಿಯೆ ನೀವು ಬಿಡಿಸಯ್ಯ ಗುರು ಶರಣು |
ಮೇಲೆ ನೀವಲ್ಲದಿನ್ನಾರಯ್ಯ ಗುರು ಶರಣು ||

285ನೆಯ ಪುಟವನ್ನು ನೋಡಿ. ಅಲ್ಲಿ ಕೊಟ್ಟಿರುವ ಕಾಲವು ತಪ್ಪಾಗಿದೆ.

ಭಾಸ್ಕರ. 1186.

ಇವನು ಬಳ್ಳಾರಿಜಿಲ್ಲೆಯ ನಂದವರವೆಂಬ ಗ್ರಾಮದಲ್ಲಿರುವ ಒಂದು ಶಾಸನವನ್ನು ಬರೆದಿರುವುದಾಗಿ ಆ ಶಾಸನದ ಅಂತ್ಯಭಾಗದಿಂದ ತಿಳಿಯುತ್ತದೆ.[1] ಈತನು ಬ್ರಾಹ್ಮಣಕವಿಯೆಂದು ತೋರುತ್ತದೆ. ಇವನಿಗೆ ಕುಕವಿಮುಖಮುದ್ರ, ಸುಕವಿಪದ್ಮಪ್ರಭಾಕರ ಎಂಬ ವಿಶೇಷಣಗಳು ಹೇಳಿವೆ. ಈ ಶಾಸನವು ಚಾಳುಕ್ಯರಾಜನಾದ 4 ನೆಯ ಸೋಮೇ

1. *Archæological Survey of India*, Memoir 13, p. 13,

ಶ್ವರನ ಆಳಿಕೆಯಲ್ಲಿ 1186ರಲ್ಲಿ ಬರೆದುದು. ಇದರಲ್ಲಿ ಸೋಮೇಶ್ವರನ ದಂಡನಾಯಕ ಮಾಳಪರಸನು ನಂದಾಪುರದ ಮಲ್ಲಿಕಾರ್ಜುನದೇವರಿಗೆ ದತ್ತಿಯನ್ನು ಬಿಟ್ಟುಂತೆ ಹೇಳಿದೆ. ಇದರಿಂದ ಬಂದು ಪದ್ಯವನ್ನು ತೆಗೆದು ಬರೆಯುತ್ತೇವೆ :—

ಮಾಳಪರಸ.

ಪಪನಪಥದಂತುಪಾಶ್ರಿತ | ಕವಿರಾಜನನಂತನಂತೆ ಬಹುಭೋಗಧರಂ |
ದಿವಸಕರನಂತೆ ತೇಜೋ | ಭವನಂ ಮಾಳಪಜಮೂಪನೆಸೆವಂ ಧರೆಯೊಳ್ ||

(ಪ್ರ. ಸಂಪುಟ 122) ರಾಜಾದಿತ್ಯ. ಸು 1190.

ಇವನ ವ್ಯವಹಾರಗಣಿತದ ಬಂದು ಪ್ರತಿಯಲ್ಲಿ ಸೇವುಣರಾಜನಾದ ಭಿಲ್ಲಮನ (1187-1191) ಹೆಸರನ್ನು ಹೇಳುವ ಪದ್ಯಗಳಿರುವುದಾಗಿ ಈಚೆಗೆ ತಿಳಿದುಬಂದಿರುವುದರಿಂದ ಈ ಕವಿಯ ಕಾಲವನ್ನು ಸು. 1120 ರಿಂದ ಸು. 1190ಕ್ಕೆ ತರಬೇಕಾಗುತ್ತದೆ.

(ಪ್ರ. ಸಂಪುಟ 427) ಮಧುರ. 1410.

ಈತನು ಹಂಪೆಯ ಸವಿಾಪದಲ್ಲಿ ಕೃಷ್ಣದೇವಸ್ಥಾನದ ಬಳಿ ಇರುವ ಬಂದು ಶಾಸನವನ್ನೂ ಬರೆದಂತೆ ಆ ಶಾಸನದ ಕೊನೆಯ ಪದ್ಯದಿಂದ ತಿಳಿಯುತ್ತದೆ.[1] ಈ ಶಾಸನವು ವಿಜಯನಗರದ ರಾಜನಾದ 1ನೆಯ ದೇವರಾಯನ ಆಳಿಕೆಯಲ್ಲಿ 1410ರಲ್ಲಿ ಹುಟ್ಟಿದುದು. ಇದರಲ್ಲಿ ರಾಜನ ಮಂತ್ರಿಯಾದ ಲಕ್ಷ್ಮೀಧರನು ಮಾಲ್ಯವತ್ಪರ್ವತದ ಬಳಿ ಗಣೇಶ ಪ್ರತಿಷ್ಠೆಯನ್ನು ಮಾಡಿದಂತೆ ಹೇಳಿದೆ. ಈ ಶಾಸನದಿಂದ ಮಧುರನು ಹರಿಹರರಾಜನಕಾಲವಾದ ಮೇಲೆ ದೇವರಾಯನ ಆಳಿಕೆಯಲ್ಲಿಯೂ ಇದ್ದನೆಂದೂ ಆ ದೊರೆಯ ಮಂತ್ರಿಯಾದ ಲಕ್ಷ್ಮೀಧರನ ಆಶ್ರಿತನಾಗಿದ್ದನೆಂದೂ ತಿಳಿಯುತ್ತದೆ. ಈ ಲಕ್ಷ್ಮೀಧರನು ಮಧುರನಿಗೆ ಸುಕ್ಷೇತ್ರ ಹಸ್ತ್ಯಶ್ವಭೂಷಾದಿಗಳನ್ನು ಕೊಟ್ಟು ಗೌರವಿಸಿದಂತೆ ತಿಳಿಯಬರುತ್ತದೆ. ಅಲ್ಲದೆ ಮಧುರನು ದೊರೆಗೆ ಪ್ರಾಣಾಪಾಯವುಂಟಾಗಿದ್ದಾಗ

1. *Archæological Survey of India*, Memoir 13, p. 15.

ತನ್ನ ಸಾಹಸದಿಂದ ಅವನ ಪ್ರಾಣವನ್ನು ಉಳಿಸಿದಂತೆ ತಿಳಿಯುತ್ತದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :–

ದೇವರಾಯ

ಸಲೆ ನಾನಾಸಸ್ಯಸಂಪತ್ತಿಯನೊದವಿಸಿ ಸಂತುಷ್ಟಿಯಂ ದಾನಧಾರಾ ।
ಜಲದಿಂ ಸಂತಾಪಮಂ ತಳ್ದಿಸಿ ವಿಶದ ಸಿತಚ್ಛತ್ರಸುಚ್ಛಾಯೆಗೊಯ್ದು ॥
ಜ್ವಲಿಪಾಜ್ಞಾದಾಮದಿಂದಂ ನಿಯಮಿಸಿ ನಿಜದೋಸ್ತಂಭದೊಳ್ ಕಟ್ಟಿಗೋಮಂ।
ಕಲಮಂ ಸತ್ಕೀರ್ತಿದುರ್ದ್ಧಂಗಱೆದನಱಿಕೆಯಿಂ ದೇವರಾಜಾವನೀಂದ್ರಂ ॥

ಲಕ್ಷ್ಮೀಧರ.

ಕನ್ನಡಿಗಕುಲಕೆ ರನ್ನದ । ಕನ್ನಡಿಯೆನೆ ವಿಶ್ವವಿದಿತವೃತ್ತಶ್ರೀಸಂ ।
ಪನ್ನಂ ಲಕ್ಷ್ಮೀಧರದೇ । ವನ್ನಿರ್ಮಲನಾಗಿ ನೆಗಟ್ಟಿದನೊಳಗಂ ಪೊಱಗಂ ॥
ಕೈಯೆಂದೊಡೆ ಮಂದಾರದ|ಕೈಯುಂ ಮಂತ್ರೀಂದ್ರಲಕ್ಷ್ಮಣಾಂಕನಕೈಯುಂ|
ಕೈಯಲ್ಲದುಟ್ಟಿದ ಮನುಜರ । ಕೈಯೆಂಬುವು ಮರುಳ ಕೈಗಳೇತಱಿಕೈಗಳ್ ॥
ಧರಣೀಚಕ್ರಂ ಮನಂಗೊಳ್ವುದಯನುರುತಮಸ್ತೋಮವಲ್ಲಾಡುನಾತ್ಮ ।
ಚರಣಂ ಸನ್ಮಾರ್ಗಮುದ್ಯೋತಿಸುವ ರುಚಿ ಸದಾಲೋಕಮುರ್ವೀವ್ಲತೇಜ ।
ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸವೀಪೆರ್ಮೆಯಿಂ ದೇವಭೂಭೃ ।
ದ್ವರಪಾದಾಸನ್ನನೇನುನ್ನತಿವಡೆದನೊ ಲಕ್ಷ್ಮೀಧರಾವಾತ್ಯಮಿತ್ರಂ ॥
ವೂವಿನ ಬಿಲ್ಲನೇಱಿಸುವ ಬಂಡಬಸಂತನನಾಸೆಮಾಡುವಿ ।
ವ್ಯಾಪಿನರಲ್ಗಳಂ ಬನಸಗೆಯ್ವೆಳದಿಂಗಳ ಪಂಗುಗೊಳ್ವ ಬ ॥
ಲ್ಪೇವುದೆನುತ್ತೆ ಚಿತ್ತಭವನಾವನ ಮೆಯ್ವಳಗೊಂಡು ಕಂಡ ಕಾಂ ।
ತಾವಳಿಯುಂ ಮರಳ್ದುವನೆಸಲ್ ಸೊಬಗೆಂತುಟೊ ಲಕ್ಷ್ಮಣಾಂಕನಾ ॥
ಸಾರಶ್ರೀನೀತಿವಾಕ್ಯಾಮೃತಪರಿಸರದೊಳ್ ಪುಟ್ಟಿ ಮೆಯ್ಗ್ಗಂದದಾನಂ ।
ದಾರಾವಾಸನ್ನರಾಮಾಯಣದೊಳಮರ್ದು ತಳ್ತಾವಗಂ ಕೃಷ್ಣಲೀಲಾ ॥
ಧಾರಂ ತಾನಾಗಿ ನಾನಾಫಲಮನಿಳೆಗೆ ಬೀಱಿತ್ತು ಸಂಸಾರ ಸೌಖ್ಯಾ ।
ಕಾರಂ ಸನ್ಮಂತ್ರಿಲಕ್ಷ್ಮೀಧರನುರುಕವಿತಾಕಲ್ಪವಲ್ಲೀವಿತಾನಂ ॥
ವೊಗಟಿಲ್ ಪೊಂಪುಟ್ಟಿವೋಪ ಪೆಂಪಿನ ಯಶೋಲಕ್ಷ್ಮೀಧರಂ ಬಲ್ಲವರ್ ।

ಬಗೆಗೊಳ್ವಿಂಪಿನ ಸೊಂಪುನೆಕ್ಕ ಕವಿತಾಲಕ್ಷ್ಮೀಧರಂ ರಾಜನೀ ॥
ತಿಗೆ ನೇರ್ಪಾದ ಮಹಾಪ್ರಧಾನಪದವೀಲಕ್ಷ್ಮೀಧರಂ ಧಾತ್ರಿಯೊಳ್ |
ನೆಗಳ್ದಂ ನಿರ್ಮಲರಾಮಚಂದ್ರತನಯಂ ಸನ್ಮಂತ್ರಿಲಕ್ಷ್ಮೀಧರಂ ॥

ಸಾಸಲ ಚಿಕ್ಕಣಾರಾಧ್ಯ. ಸು. 1450.

ಇವನು ಪಂಚಬ್ರಹ್ಮೋದಯಭಾಷ್ಯವನ್ನು ಬರೆದಿದ್ದಾನೆ. ಈತನು ವೀರಶೈವಕವಿ ; ಅಮರಗುಂಡದ ಮಲ್ಲಿಕಾರ್ಜುನವಂಶೋದ್ಭವನಾದ ಶಾಂತಲಿಂಗನ ಮಗನು. ತನ್ನ ಗ್ರಂಥದಲ್ಲಿ ಶಬ್ದಮಣಿದರ್ಪಣದಿಂದ ಸೂತ್ರವನ್ನು ಉದಾಹರಿಸಿರುವುದರಿಂದ ಕೇಶಿರಾಜನಿಗಿಂತ (ಸು. 1260) ಈಚೆಯವನು ಎಂಬುದು ವ್ಯಕ್ತವಾಗುತ್ತದೆ. ಸಾಸಲ ಭೈರವರಾಜನ ಕಾಲದಲ್ಲಿ ಒಬ್ಬ ಚಿಕ್ಕಣಾರ್ಯನು ಇದ್ದಂತೆ ತಿಳಿಯುತ್ತದೆ. (ದ್ವಿ. ಸಂಪುಟ 266). ಇವನೇ ಕವಿಯಾಗಿರಬಹುದು. " ನೂತನರಲ್ಲಿ " ಒಬ್ಬನಾದ ಈ ಭೈರವರಾಜನ (ದ್ವಿ. ಸಂಪುಟ 386) ಕಾಲವು ಸುಮಾರು 1450 ಆಗುವುದರಿಂದ ಕವಿಯ ಕಾಲವೂ ಇದೇ ಆಗಿರಬೇಕು.

ಇವನ ಗ್ರಂಥ

ಪಂಚಬ್ರಹ್ಮೋದಯ ಭಾಷ್ಯ.

ಇದು ಗದ್ಯಗ್ರಂಥ ; ಅಧ್ಯಾಯ 9. ಅಥರ್ವಣ ವೇದಮಂತ್ರವ್ಯಾಖ್ಯೆಯೆಂದು ಹೇಳಿದೆ. ಕೊನೆಯಲ್ಲಿ ಪಂಚಾಚಾರ್ಯರು, ಅವರ ಸಂತತಿಯವರು, ತತ್ಕೃತ ಗ್ರಂಥಗಳು ಈ ವಿಷಯಗಳು ಉಕ್ತವಾಗಿವೆ. ಈ ಗ್ರಂಥದ ವಿಷಯವಾಗಿ ಕವಿ ಹೀಗೆ ಹೇಳುತ್ತಾನೆ :—

ವೇದಮಂತ್ರಕ್ಕೆ ಸಾನಂದಮುನಿ ಶಂಭುಸೂತ್ರವೆಂಬ 36 ಸಾವಿರ ಗ್ರಂಥ ಪರಿಮಾಣವೂ 72 ಅಧ್ಯಾಯಗಳೂ ಉಳ್ಳ ಭಾಷ್ಯವನ್ನು ಬರೆದನು ; ಒಳಿಕ ಶ್ರೀಪತಿಪಂಡಿತನು, ಆರಾಧ್ಯಸಂಹಿತೆಯೆಂಬ 12 ಸಾವಿರ ಗ್ರಂಥಪರಿಮಾಣವೂ 16 ಅಧ್ಯಾಯಗಳೂ ಉಳ್ಳ ಸಂಗ್ರಹವಾದ ಭಾಷ್ಯವನ್ನು ಬರೆದನು ; ಮತ್ತೆ ಇದನ್ನು ಸಂಗ್ರಹಿಸಿ ಪಾಲ್ಕುರಿಕೆ ಲಿಂಗಣಾರಾಧ್ಯನು ನಾಟೋದಯವೆಂಬ

6 ಸಾವಿರ ಗ್ರಂಥಪರಿಮಾಣವೂ 13 ಪ್ರಕರಣಗಳೂ ಉಳ್ಳ ಭಾಷ್ಯವನ್ನು ಬರೆದನು. ಈ ಭಾಷ್ಯಗಳೆಲ್ಲಾ ಸಂಸ್ಕೃತದಲ್ಲಿರುವುದರಿಂದ ಕವಿ ತನ್ನ ಭಾಷ್ಯವನ್ನು ಕನ್ನಡದಲ್ಲಿ ಬರೆದನು.

ನಂಜನಾಥಾಚಾರ್ಯ. ಸು. 1500.

ಇವನು ವೈಷ್ಣವವಾದಖಂಡನವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ತ್ರಿಲೋಚನಾಚಾರ್ಯನ ಮಗನು. ಪದ್ಮಣಾಂಕನ (ಸು. 1385) ಪದ್ಮರಾಜಪುರಾಣವನ್ನು ನಿರ್ದೇಶಿಸುವುದರಿಂದ ಅವನ ಕಾಲಕ್ಕೆ ಈಚೆಯವನೆಂಬುದು ಸ್ಪಷ್ಟವಾಗುತ್ತದೆ. ಸುಮಾರು 1500ದಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ವೈಷ್ಣವವಾದಖಂಡನ.

ಇದು ಗದ್ಯರೂಪವಾಗಿದೆ. ಈ ಗ್ರಂಥದ ವಿಷಯವಾಗಿ ಕವಿ ಹೀಗೆ ಹೇಳುತ್ತಾನೆ :—

ಈ ವಾದಖಂಡನವೆಂಬುದು ದೋರಾಂಬುಧಿಯೆಂಬ ಪುರಕ್ಕಧಿಪತಿಯಾದ ನೃಸಿಂಹಬಲ್ಲಾಳರಾಜನ ಮಹಾದ್ಯೈಶ್ವರ್ಯಕ್ಕೆ ದಣಾಯಕಪಟ್ಟಮಂ ತಾಳ್ದಿದುದ್ ಆ ರಾಜನಿಗೆ ತಟಾಕದ ಮಹಿಮೆಯಂ ತೋಱಿ ಮೆಱೆದ ತಟಾಕಪದ್ಮಣಾಚಾರ್ಯರ (ಕೆರೆಯ ಪದ್ಮರಸ) ಪುತ್ರಪೌತ್ರಾದಿವಿಡಿದು ಬಂದ ಪದ್ಮಣಾಚಾರ್ಯರು(ಪದ್ಮಣಾಂಕ) ಅವಾದನಿಮಿತ್ತವಾಗಿ ನೇದೋಪನಿಷತ್ಪುರಾಣಾಗಮೇತಿಹಾಸಾದಿ ಗ್ರಂಥಂಗಳೆಲ್ಲವಂ ತೆಗೆದು ವಾಕ್ಯವೇಷ್ಟನವಾಗಿ ಷಟ್ಪದಪದಬಂಧರೂಪಿನಿಂದ (ಪದ್ಮರಾಜ ಪುರಾಣ) ರಚಿಸಿದರು. ಅವರ ವಾಕ್ಪ್ರಸಾದದ ಬಲದಿಂದ ವೇದೋಪನಿಷತ್ಪುರಾಣಾಗಮಾದಿ ಗ್ರಂಥಂಗಳನು ಸಂಗ್ರಹಿಸಿಕೊಂಡು ತ್ರಿಲೋಚನಾಚಾರ್ಯರ ಸತ್ಪುತ್ರಮಾರನು ನಂಜನಾಥಾಚಾರ್ಯನು ತ್ರಿಭುವನತಾತನೆಂಬವಾದಿ (ಪ್ರ. ಸಂಪುಟ 246) ತನ್ನ ವಿಷ್ಣುವಿನ ಮಹತ್ವವ ನುಡಿದ ನುಡಿಗಳೆಲ್ಲವನು ವಚನರೂಪಿನಿಂದ ಖಂಡಿಸಿ ಆ ವಚನದೆಡಗೆಡೆಗೆ ವೇದಪುರಾಣಾಗಮಾದಿ ಗ್ರಂಥಂಗಳಂ ಬರೆದು ಇದು ವೈಷ್ಣವವಾದಖಂಡನವೆಂದು ಹೆಸರನಿಟ್ಟು ಮಾಡಿದನು.

(ದ್ವಿ. ಸಂಪುಟ 141) ಕುಮಾರವಾಲ್ಮೀಕಿ.

ಈ ಕವಿಯ ಕಾಲವನ್ನು ಕುರಿತು ಒಬ್ಬ ಮಿತ್ರರು ಹೀಗೆ ಬರೆದಿದ್ದಾರೆ:—

"ಕುಮಾರವಾಲ್ಮೀಕಿಯ ಕಾಲವು ಕ್ರಿ. ಶ. 1500 ಎಂದು ತಾವು ಹೇಳಿರುವಿರಿ. ಆದರೆ 1580 ರಿಂದ 1632 ರವರೆಗೆ ಆಳಿದ ಸಣ್ಣ ಇಬ್ರಾಹಿಮ ಅದಿಲಶಹನು ತೊರವೆಯನ್ನು ಕಟ್ಟಿಸಿದ್ದಾನೆ. ಹೀಗೆಂದಮೇಲೆ ಕುಮಾರವಾಲ್ಮೀಕಿಯ ಕಾಲವು ಸುಮಾರು ಕ್ರಿ. ಶ. 1650 ಎಂದು ಹೇಳಬೇಕಾಗಬಹುದಲ್ಲವೇ ?"

ತೊರವೆಯ ಉತ್ಪತ್ತಿ ಇಲ್ಲಿ ಸೂಚಿತವಾದ ಕಾಲದಲ್ಲಿ ಆಯಿತು ಎಂಬುದಕ್ಕೆ ಸರಿಯಾದ ಪ್ರಮಾಣವಿದ್ದರೆ ಕುಮಾರವಾಲ್ಮೀಕಿಯ ಕಾಲವನ್ನು ಈಚೆಗೆ ಹಾಕಬೇಕಾಗುವುದು.

(ದ್ವಿ. ಸಂಪುಟ 313) ಮಲ್ಲಿಕಾರ್ಜುನಕವಿ. 1593.

ಈತನು ಮಗ್ಗೆಯ ಮಾಯಿದೇವನ ಶತಕತ್ರಯಕ್ಕೂ ವ್ಯಾಖ್ಯಾನವನ್ನು ಬರೆದಿದ್ದಾನೆ.

ಕಂಬಾಳ ಶಾಂತಪುಲ್ಲೇಶ. ಸು. 1600.

ಇವನು ಗಣವಚನರತ್ನಾವಳಿಯನ್ನು ಬರೆದಿದ್ದಾನೆ. ಈತನು ವೀರಶೈವ ಕವಿ; ಷಟ್ಸ್ಥಲಾಚಾರ್ಯವರ್ಯ ಎಂಬ ವಿಶೇಷಣವು ಇವನಿಗೆ ಹೇಳಿದೆ. ಈತನಿಗೆ ಕಂಬಾಳದೇವ ಎಂಬ ಹೆಸರೂ ಉಂಟು. ತೋಂಟದ ಸಿದ್ಧೇಶ್ವರನ (ಸು. 1470) ಶಿಷ್ಯನಾದ ಬೋಳೇಶನ ವಚನಗಳನ್ನು ಉದಾಹರಿಸುವುದಾಗಿ ಹೇಳಿರುವುದರಿಂದ ಕವಿ ಅವನ ಕಾಲಕ್ಕೆ ಈಚೆಯವನಾಗಿರಬೇಕು. ಸುಮಾರು 1600 ರಲ್ಲಿ ಇದ್ದಿರಬಹುದು.

ಇವನ ಗ್ರಂಥ.

ಗಣವಚನರತ್ನಾವಳಿ

ಇದು ಪುರಾತನರ ವಚನಗಳ ಸಂಗ್ರಹ; ಸ್ಥಲ 216, ಸ್ವರವಪದಂಗಳು 1206. ಇದರಲ್ಲಿ ಉದಾಹೃತರಾದ ವಚನಕಾರರ ಹೆಸರುಗಳು ಈ ಪದ್ಯದಲ್ಲಿ ಹೇಳಿವೆ:—

ಬಸವೇಶ ನೀಲಾಂಬೆ ಸಿದ್ಧರಾಮಂ ಚೆನ್ನ | ಬಸವನಲ್ಲಮ ಕರಸ್ಥಲವೀರನಾಗಾರ್ಯ |
ರಸಮಮಾಯಿಗದೇವರಪ್ಪಣ್ಣ ಮಹದೇವಿ ದಾಸ ಬಹುರೂಪಿ ಚೌಡಂ ||
ಮಿಸುಪ ಶಾಂತಯ್ಯನಾದಯ್ಯ ಜೋಳೇಶಗುರು | ಬಸವಶಂಕರದೇವ
ನಂಗಾಂಬೆ ಮೊದಲಾದ |
ರುಸುರ್ದ ನಾನಾರಾಗಕಲಿತವಚನಂಗಳಿಂ ರಚಿತಮಾಯ್ತಿ ಶಾಸ್ತ್ರವು ||

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ :—

ಇದು ಲಿಂಗಾಂಗಸುಯೋಗಮಂ ತಿಳಿಪಲೊಂದೇಸಾಲ್ವುದಮ್ಮಮ್ಮ ನೋ |
ಡಿದು ವೇದಾಗಮವಾಗತೀತಪದಮಂ ತೋರ್ದಪ್ಪುದಯ್ಯಯ್ಯ ತಾ ||
ನಿದು ಕರ್ಮತ್ರಯವೃಕ್ಷಮೂಲದೊದವಂ ಕೆಟ್ಟಿಪ್ಪುದಾಹಾ ಬಟೆ |
ಕ್ಕಿದು ಸನ್ಮುಕ್ತಿವಧೂಟಿಯೊಳ್ ನೆರಪುಗುಂ ತಾನೆಂದೊಡಾರ್ ಬಣ್ಣಿಪರ್ ||

ಬಂದೊಂದು ಸ್ಥಲದ ಆದಿಯಲ್ಲಿಯೂ ಕವಿರಚಿತವಾದ ಕೆಲವು ಪದ್ಯಗಳಿವೆ. ಬಂದೆರಡನ್ನು ಉದಾಹರಿಸುತ್ತೇವೆ :—

ಬಸವಾದಿಪ್ರಮಥರ ಪದ | ಪಸಜಮನೆರ್ದೆಗೊಳಿಸ ತತ್ಕೃಪಾಬಲದಿಂದೀ |
ಪೊಸತೆನಿಪ ಶಾಸ್ತ್ರಮಂ ವಿರ | ಚಿಸಿದೆಂ ಶರಣಾಳಿ ಕೇಳಿ ಕೈಕೊಳ್ವುದಿದಂ ||
ತಿಳಿಪಲ್ ಶಿವಜೀವೈಕ್ಯಮ | ನಿಟೆಪಲ್ ಭವಪಾಶಬಂಧಮುಂ ಶಿವಪದವಿ |
ತ್ತುಟೆಪಲ್ ನಿಜದೊಳ್ ಚಿತ್ಕ್ರಿಯೆ | ಯಳವಟ್ಟ ಪುರಾತನೋಕ್ತಿಯೊಂದೆ
ಸಮರ್ಥಂ ||

(ದ್ವಿ. ಸಂಪುಟ 377) ಶಾಂತವೀರದೇಶಿಕ. ಸು. 1650.

ಈತನು ಶಿವಲಿಂಗಚಾರಿತ್ರ, ಶಿವಗಣಚಾರಿತ್ರ ಎಂಬ ಗ್ರಂಥಗಳಲ್ಲದೆ ಸೌಂದರೇಶ್ವರನ ಯಕ್ಷಗಾನ, ಶಿವಮಹತ್ವಸಾರಶಿಖಾಮಣಿ ಸಂಗ್ರಹಶತಕ, ಗಿರಿಜಾದೇವಿಯ ಸಂಕೀರ್ತನ ಎಂಬ ಮೂರು ಗ್ರಂಥಗಳನ್ನೂ ಬರೆದಿದ್ದಾನೆ. ಇವನ ಸ್ಥಳ ಕೆಣೆಯನೂರು. ಪರಕವಿಗಜೇಂದ್ರ ಕಂಠೀರವ, ಶಿವಕವಿಭೃತ್ಯ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ತಂದೆ ಚೆನ್ನಾರ್ಯನನ್ನು " ಸರಸಕವಿ ಕರ್ನಾಟ ಚಕ್ರೇಶ್ವರ" ಎಂಬುದರಿಂದ ಈತನೂ ಕವಿಯಾಗಿದ್ದಂತೆ ತೋರುತ್ತದೆ.

ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಕವಿಯ ಸೌಂದರೇಶ್ವರನ ಯಕ್ಷಗಾನದ ಒಂದು ಓಲೆಯ ಪ್ರತಿಯ ಕೊನೆಯಲ್ಲಿ "ಇದನು ಶಾಂತವೀರದೇಶಿಕನು ನಿರ್ಮಿಸಿ ಕಾಳಾಯುಕ್ತಸಂವತ್ಸರದಲ್ಲಿ ಬಸವನ ಕೋಟೆಯ ಪರಮೇಶ್ವರಯ್ಯನಿಗೆ ಲೇಖನಂಗೈದುದು" ಎಂದಿದೆ. ಈ ಕಾಳಾಯುಕ್ತವರ್ಷವು 1678 ಆಗಿರಬೇಕು.

ಈ ಗ್ರಂಥಗಳಲ್ಲಿ

1. ಸೌಂದರೇಶ್ವರನ ಯಕ್ಷಗಾನ.

ಇದಕ್ಕೆ ಜನವೈಶ್ಯತಿಲಕ ಎಂಬ ಹೆಸರೂ ಉಂಟು. ಸಂಧಿ 13, ಪದ 1610. ಇದರಲ್ಲಿ 63 ಶಿವಭಕ್ತರಲ್ಲಿ ಒಬ್ಬನಾದ ಸೌಂದರೇಶ್ವರ ಅಥವಾ ನಬಿಯಣ್ಣ ಎಂಬವನ ಕಥೆ ಹೇಳಿದೆ.

2. ಶಿವಮಹತ್ವಸಾರಶಿಖಾಮಣಿ ಸಂಗ್ರಹಶತಕ.

ಇದರಲ್ಲಿ ಶಾರ್ದೂಲವಿಕ್ರೀಡಿತ ವೃತ್ತಗಳು 100 ಇವೆ. ಒಂದೊಂದು ವೃತ್ತವೂ "ಶ್ರೀ ಶಾಂತವೀರೇಶ್ವರ" ಎಂದು ಮುಗಿಯುತ್ತದೆ. ಪ್ರತಿ ವೃತ್ತಕ್ಕೂ ವ್ಯಾಖ್ಯಾನ ರೂಪವಾಗಿ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳು ಅನುವಾದ ಮಾಡಲ್ಪಟ್ಟಿವೆ. ಪ್ರಕರಣ 11, ವೃತ್ತ ಗ್ರಂಥಸಹ 640 ಗ್ರಂಥದ ಉದ್ದೇಶ ಶಿವಮಹತ್ವನಿರೂಪಣ. ಈ ಗ್ರಂಥದಿಂದ ಕೆಲವುಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಸುರಭೂಜಾತಕೆ ಕಾಡ ಕಗ್ಗಲಿಯುಮಂ ಪಂಕೇಜಮಿತ್ರಂಗೆ ದುಃ |
ಕರಖದ್ಯೋತಮಧರ್ಮಿಗಂ ಕೃಪಣನಜ್ಞಾನಂಗೆ ಸುಜ್ಞಾನಿಯಂ ||
ನೆಪೆ ಸಾದೃಶ್ಯಮ ಮಾಟ್ಪಿವೋಲ್ ಸುರಪಕಂಸಾರಾತಿದೇವಾದ್ಯರಂ |
ಗಿರಿಜಾಕಾಂತಗೆ ಸಾಟಿಯೆಂಬರಧಮರ್ ಶ್ರೀಶಾಂತವೀರೇಶ್ವರಾ ||
ಕುಡುವಿಲ್ಲೀಕ್ಷಿಸಿ ತುಂಬಿಬಲ್ವೆದೆಯ ಬೊಬ್ಬಿಟ್ಟಾಗ ಪಂಚಾಸ್ತ್ರಮಂ |
ತೊಡರುತ್ತಂ ಮುಳಿದೆಚ್ಚ ಮನ್ಮಥನ ತದ್ಭಾಳಾಕ್ಷದಾವಾಗ್ನಿಯೊಳ್ ||
ಸುಡೆ ಬೆಂದಿರ್ದ ರತೀಶನಂ ತುಟಿದು ಭಸ್ಮೋದ್ಧೂಳನಂ ಮಾಡಿದಾ |
ಕಡುಸಾಮರ್ಥ್ಯರದಾರು ದೇವತತಿಯೊಳ್ ಶ್ರೀಶಾಂತವೀರೇಶ್ವರಾ ||

ಪುಷ್ಪಮಾಲಿಕಾ ಪ್ರಬಂಧ

ಸತಸುತದಾತನಾಗಧರ ಧರ್ಮದಯಾಪರ ಧೀರಸಾರ ಶೋ |
ಭಿತಹತಸೂತಕಾದಿ ಸುಭಸುದ್ಧಸುರಾಶ್ರಯ ಮಾಯಕಾಯವ ||
ರ್ಜಿತಮೃತಭೀತಭೀಮ ಮುನಿಮುಖ್ಯಮುರಾಂತಕನೀಕಶೋಕನಂ |
ದಿತಶತಶಾಂತವೀರನಿಜನಿತ್ಯ ನಿರಾಕರ ಮಾರಸೂರನೇ ||

ಈ ಪದ್ಯಕ್ಕೆ ಪ್ರಸ್ತಾರ

ನು ರ ಧೀ ಹ ಭ ಮಾ
ನ ತ ನಾಗ ಧ ಯಾಪ ರ ಶೋ | ಭಿ ತ ಕಾದಿ ಸು ರಾಶ್ರ ಯ ವ ||
ದಾ ಮ ಸಾ ಸೂ ದ್ಧ ಕಾ

ಮೃ ನಿ ನೀ ಶ ಜ ಮಾ
ರ್ಜಿ ತ ಭೀಮ ಮು ರಾಂತ ಕ ನಂ | ದಿ ತ ವೀರ ನಿ ರಾಕ ರ ನೇ ||
ಭೀ ಖ್ಯ ಶೋ ಶಾಂ ತ್ಯ ಸೂ

3 ಗಿರಿಜಾದೇವಿಯ ಸಂಕೀರ್ತನ

ಇದರಲ್ಲಿ ಪಾರ್ವತೀ ಸ್ತುತಿರೂಪನಾದ 131 ಪದಗಳಿವೆ. ಕೊನೆಯಲ್ಲಿ ಈ ಗದ್ಯವಿದೆ ;—

ಇತಿ ಶ್ರೀಮದ್ಗುರುಶಾಂತವೀರೇಶಪದಪಂಕಜಪರಾಗಸೇವಿತ ಶಿಖೀಮುಖ ಪರಕವಿಗಜೇಂದ್ರಕಂಠೀರವ ಶಿವಕವಿಭೃತ್ಯ ಚೆನ್ನವೀರಾಖ್ಯತನೂಭವ ಶಾಂತವೀರದೇಶಿಕ ವಿರಚಿತಮಪ್ಪ ಗಿರಿಜಾದೇವಿಯ ಸಂಕೀರ್ತನಂ ಸಂಪೂರ್ಣಂ.

(ದ್ವಿ. ಸಂಪುಟ 433) ವೀರಣಾರ್ಯ. ಸು. 1650.

ಈತನು ಪ್ರಸಾದಚಾರಿತ್ರವಲ್ಲದೆ ನಂಜುಂಡೇಶ್ವರಪುರಾಣವನ್ನೂ ಬರೆದಿದ್ದಾನೆ. ಇದರಲ್ಲಿ ಕೊಲ್ಲಿಪಾಕಿಯ ಸೋಮೇಶ್ವರ ಎಂಬುದಕ್ಕೆ ಪ್ರತಿಯಾಗಿ ರೇವಣಸಿದ್ಧೇಶವಂಶವ ವೀರಣಾರಾಧ್ಯ ಎಂದಿದೆ. ದೇವಣಾರಾಧ್ಯ ಎಂದು ನಾವು ಕೊಟ್ಟಿರುವುದು ರೇವಣಾರಾಧ್ಯ ಎಂದಿರಬೇಕು.

ನಂಜುಂಡೇಶ್ವರಪುರಾಣ

ಇದು ಭಾವಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 11, ಪದ್ಯ 697. ಇದರಲ್ಲಿ ನಂಜನಗೂಡು ನಂಜುಂಡೇಶ್ವರನ ಮಹಿಮೆ ವರ್ಣಿತವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ :—

ಪಲವುದಿನವಗಲಿರ್ದ ಕಾಂತನು | ಘಟಿಲನಿದಿರ್ಚಿತರಲು ಮುಗ್ಧಾ |
ಲಲನೆ ಜಾಣ್ನುಡಿಯಾಡಲಱಿಯದೆ ಕೊರಳ ಸೆರೆ ಬಿಗಿದು ||
ಗಳಬಳನೆ ಗದ್ಗದಿಸುತಿಹ ಜೆ | ಲ್ವಿಳೆಯಳನುಚಿತವಾಕ್ಯಮೊಪ್ಪುವೊ |
ಲಿಳಿಯ ಸತ್ಕವಿಗಳಿಗೆ ರಾಜಿಸುತಿರ್ಪುದೀಕಾವ್ಯ ||

ಗ್ರಂಥಾವತಾರದಲ್ಲಿ ನಂಜುಂಡೇಶ್ವರನ ಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಂಗೆ, ಗಣೇಶ, ಷಣ್ಮುಖ, ಬಸವ, ಭೃಂಗಿ, ವೀರಭದ್ರ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಶಿವಸ್ತುತಿ

ಇಂಗಡಲ ಮಗಳೆಯ ಸಗ್ಗದ | ಹೆಂಗಳೊಡೆಯರ ಶಿರದೊಳೊಪ್ಪುವ |
ರಂಗುದೋರ್ಪ ಕಿರೀಟಮಣಿಗಳೊಳೆಯ್ದೆ ಮಥನಿಸುವ ||
ತುಂಗಪದಪಂಕೇಜನಗಜೆಯ | ನುಣ್ಗದಪನಾಲೋಕಿಸುವ ಕಡೆ |
ಗಂಗಳಿಂದೆಮ್ಮವನು ಪಾಲಿಪುದೀಶನಹಿಭೂಷಾ ||

ವರ್ಷಾಕಾಲ

ಮುಗಿಲ ಮದ್ದಾನೆಗಳ ಮಿಂಚಿನ | ನೆಗೆವ ತುರಗಾಳಿಗಳ ಸಿಡಿಲಿಂ |
ದೊಗೆವ ದನಿವಾದ್ಯಗಳ ಬಲ್ವನಿಯೆಸೆವ ಕಿಂಕರರಿಂ ||
ಸೊಗಯಿಸುವ ಕೆಮ್ಮುಗಿಲ ತೇರನು | ಮಿಗುವಪರುಷದೊಳೇಱಿ ಜೈತ್ರನ |
ಮೊಗವ ಕೆಡಿಸುತ ವರ್ಷಸೇನಾಧೀಶನೈತಂದ ||

ರೇಣುಕೆಯ ಗಂಡನ ಅನನುರೂಪತೆ

ಮಿಗದ ಜಕ್ಕಳ ಕೌಂಕುಳೊಳು ತೆಕ್ಕೆ | ನೆಗೆದ ಮುಸುಡಿನ ಪಚ್ಚೆವಲ್ಲಿನ |
ಬಿಗಿದ ಕೆಂಜೆಡೆ ನರಿಯ ಗಡ್ಡದ ಬೂದಿ ಮೈಯವಗೆ ||

ಮುಗುದೆಯಹ ಗೋಪಿಕೆಯನೀವುದು | ಬಗೆಯೆ ಒಳಿದೇ ಹೋಯ್ತೆಬೊಮ್ಮಗೆ |
ಮಿಗಿಲುದಲೆಯೆಂದೆನುತ ಮಜ್ಜುಗಿತು ಖಚರ ವಧುನಿಕರ ||

ರಾಘವೇಂದ್ರಸ್ವಾಮಿ. ಸು. 1650

ಈತನು ಕೀರ್ತನೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ನಂಜನಗೂಡು ಮಾಧ್ವ ಮಠದಲ್ಲಿ 1624 ರಿಂದ 1671 ರ ವರೆಗೆ ಸ್ವಾಮಿಯಾಗಿದ್ದಂತೆ ತಿಳಿಯುತ್ತದೆ. ಈತನು ಮಾಧ್ವ ಗುರುಗಳಲ್ಲಿ ಬಹಳಪ್ರಸಿದ್ಧನು. ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಕನ್ನಡದಲ್ಲಿ ಬಂದೇ ಬಂದು ಕೀರ್ತನೆಯನ್ನು ಬರೆದನೆಂದು ಹೇಳುತ್ತಾರೆ. ಈತನ ಸಮಾಧಿ ಬಳ್ಳಾರಿ ಜಿಲ್ಲೆಯ ಮಂತ್ರಾಲಯದಲ್ಲಿದೆ. ಇವನ ಕೀರ್ತನೆಯಲ್ಲಿ ವೇಣು ಗೋಪಾಲ ಎಂಬ ಅಂಕಿತವಿದೆ.

ಕೀರ್ತನೆ.

ರಾಗ ಭೈರವಿ. ಅಟತಾಳ.

ಪಲ್ಲವಿ|| ಇಂದು ಎನಗೆ ಗೋವಿಂದ ನಿನ್ನ ಪಾದಾರ|ವಿಂದವ ತೋಱೊ ಮುಕುಂದ||
ನೊಂದೆನಯ್ಯ ಭವ ಬಂಧನದೊಳು ಸಿಲುಕಿ | ಮುಂದೆ ದಾರಿಗಾಣದೆ
ಕುಂದಿದೆ ಜಗದಿ |
ಕಂದನಾದೆನ್ನ ಕುಂದುಗಳೆಣಿಸದೆ|ತಂದೆ ಕಾಯೊ ಎನ್ನ ಕಂದರ್ಪಜನಕನೆ||1||
ಮೂಢತನದಿ ಬಲು ಹೇಡಿಜೀವನನಾಗಿ | ದೃಢ ಭಕುತಿಯನು ಮಾಡಲಿಲ್ಲ |
ನೋಡಲಿಲ್ಲವೊ ನಿನ್ನ ಪಡೆದಿಲ್ಲವೋ ಮಹಿಮೆ | ಗಾಡಿಕಾಱಿಕೃಷ್ಣ ಬೇಡಿ
ಕೊಂಬೆನೊ ದೇವ ||2||
ಧಾರಿಣಿಯೊಳು ಭೂಭಾರ ಜೀವನನಾಗಿ | ಮೇರೆದಪ್ಪಿ ನಡೆದು ಸೇರಿದೆ
ಕುಜನರ |
ಛರೂ ಕಾಯುವರಿಲ್ಲ ಸಾಱುವೆ ನಿನಗಯ್ಯ | ಧೀರ ವೇಣುಗೋಪಾಲ ಪಾರ
ಗಾಣಿಸೊ ರಾಮ ||3||

(ದ್ವಿ. ಸಂಪುಟ 442) ಷಡಕ್ಷರದೇವ. 1655

ಷಡಕ್ಷರದೇವನು ಕನ್ನಡದಲ್ಲಿ ಷಡಕ್ಷರ ಮಂತ್ರಸ್ತೋತ್ರ ಎಂಬ ಗ್ರಂಥವನ್ನೂ ಬರದಿದ್ದಾನೆ. ಇದು ಉತ್ಸಾಹರಗಳೆಯಲ್ಲಿ ಬರೆದಿದೆ; ಸುಮಾರು 105 ವಾಕ್ಯಗಳಿವೆ. ಒಂದೊಂದೂ "ಓಂ ನಮಶ್ಶಿವಾಯ" ಎಂದು ಮುಗಿಯುತ್ತದೆ. ಆರಂಭದಲ್ಲಿ

ಶ್ರೀಮದುಮಾವರವಿಲಸ | ನ್ನಾಮೋನ್ನತಶುಭಷಡಕ್ಷರೋತ್ತಮ
ಮಂತ್ರೋ |
ದ್ದಾಮಸ್ತುತಿಯಂ ರಚಿಸಿ ಭ | ವಾಮಯಮಂ ತೀರ್ಚಿ ಕಳೆದೆನಾಂ
ಶಿವಲಿಂಗಾ ||

ಎಂಬ ಕಂದವೂ ಅಂತ್ಯದಲ್ಲಿ

ಹರಕರುಣಾಬಲದೆ ಷಡ | ಕ್ಷರದೇವಂ ಭಕ್ತಿಯಿಂದೆ ವಿರಚಿಸಿದ ಷಡ |
ಕ್ಷರಮಂತ್ರಸ್ತವಮನಿದಂ|ಬರೆದೋದುವವರ್ಗೆ ಭುಕ್ತಿಮುಕ್ತಿಗಳಕ್ಕುಂ ||
ಹರಿವಿಧಿವಾಸುಕಿಮಾಣೀ | ಸುರಗುರುಗಳ್ ತಿಳಿಯಲಾಱದಪ್ರತಿಮ ಷಡ |
ಕ್ಷರಮಹಿಮೆಯನಳಿವವರಾರ್ | ವಿರಚಿಸಿದೆಂ ಸ್ವಲ್ಪಮತಿಯೊಳಾನಱಿ
ದನಿತಂ ||

ಎಂಬ ಕಂದಗಳೂ ಇವೆ. ಈ ಗ್ರಂಥದಿಂದ ಕೆಲವು ವಾಕ್ಯಗಳನ್ನು ಉದಾಹರಿಸುತ್ತೇವೆ:—

ಶರಣಜನದ ಹರಣಮೆನಿಸಿ ಮೆಱೆವುದೋಂ ನಮಶ್ಶಿವಾಯ |
ಸುರಣರುಜೆಯ ಪಱಿವ ಸುಧೆಯು ಕಱೆವುದೋಂ ನಮಶ್ಶಿವಾಯ ||
ಮುಳಿದು ಜವನ ಗರ್ವಗಜವ ಸೀಳ್ವುದೋಂ ನಮಶ್ಶಿವಾಯ |
ಸೆಳೆದು ಮೃತ್ಯುಕುಜವನೊತ್ತಿ ಕೀಲ್ವುದೋಂ ನಮಶ್ಶಿವಾಯ ||
ಮಂಗಳಕ್ಕೆ ಮಂಗಳಂ ನಿರಂಗಮೋಂ ನಮಶ್ಶಿವಾಯ |
ಸಿಂಗರಕ್ಕೆ ಸಿಂಗರಂ ಚಿದಂಗಮೋಂ ನಮಶ್ಶಿವಾಯ ||

ಈ ಕವಿಯಂದ ರಚಿತವಾದ ವೀರಭದ್ರೋದಹರಣಗದ್ಯ[1] ಎಂಬ ಸಂಸ್ಕೃತ ಗ್ರಂಥವು ಮುದ್ರಿತವಾಗಿದೆ. ಇದರ ಕೊನೆಯ ಶ್ಲೋಕದ

ಗದ್ಯಂ ಹೃದ್ಯಂ ವ್ಯಧತ್ತ ಪ್ರಣವಪರಿಮಿಳತ್ಪಂಚವರ್ಣಾಖ್ಯದೇವಃ |
ಕ್ಷಿಪ್ರಂ ಭದ್ರಪ್ರದಾತುರ್ಬುಧನುತಕೆಳದೀ ವೀರಭದ್ರೇಶ್ವರಸ್ಯ ||

ಎಂಬ ಉತ್ತರಾರ್ಧದಿಂದ ಈ ಗ್ರಂಥವು ಕೆಳದಿಯ ವೀರಭದ್ರದೇವರ ಸ್ತುತಿರೂಪವಾದುದು ಎಂದು ತಿಳಿಯುತ್ತದೆ. ಕವಿ ಆ ಸ್ಥಳಕ್ಕೆ ಹೋಗಿದ್ದನೆಂದು ಊಹಿಸಬಹುದಾಗಿದೆ. ನಾವು ಹೇಳಿರುವ ವೀರಭದ್ರದಂಡಕವು ಇದೇ ಆಗಿರಬಹುದೋ ಏನೋ ತಿಳಿಯದು.

(ದ್ವಿ. ಸಂಪುಟ 554) ಶಾಂತಾಚಾರ್ಯ. ಸು. 1700.

ಈತನು ಮರಣಮಣಿದರ್ಪಣಶತಕವನ್ನೂ ಬರೆದಿರುವಂತೆ ತೋರುತ್ತದೆ. ಇದರಲ್ಲಿ 100 ಕಂದಗಳಿವೆ. ಸಂಸ್ಕೃತಪುರಾಣಾದಿಗ್ರಂಥಗಳಲ್ಲಿ ಹೇಳಿರುವ ಮರಣಸೂಚನೆಗಳನ್ನು ಕವಿ ಕನ್ನಡಿಸಿದಂತೆ ಹೇಳುತ್ತಾನೆ. ಈ ಶತಕದಲ್ಲಿ ಮರಣಸೂಚನೆಗಳಲ್ಲದೆ ಸುಸ್ವಪ್ನ ದುಸ್ಸ್ವಪ್ನ ಫಲ, ಆಯುರ್ವೃದ್ಧಿಕಾರಣ ಇವೂ ಹೇಳಿವೆ. ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ :—

ಗೂಗೆ ಕಪೋತಂ ಬಲಿಗಳ್ | ಬೇಗದಿ ಬಂದೇಱಿ ಮಸ್ತಕದಿ ಕುಳ್ಳಿರೆ ತಾಂ |
ಯೋಗೀಂದ್ರ ಕೇಳು ಹರಣಂ | ಪೋಗುವುದಾಱನೆಯುಮಾಸಕಿದು ನಿಜನೆಂದಂ||
ನುಡಿಯದೆ ನಿಂದಕಮಂ ಪರ | ಮಡದಿಯುರಂ ಮಾತೆಯೆಂದು ಮನದೊಳ್
[ಭಾವಿಸು |
ತೆಡೆಬಿಡದೆ ಸತ್ಯವಾಡಲ್ | ಪೊಡವಿಯೊಳವಗಕ್ಕು ನಿರುತ ದೀರ್ಘಾಯುಷ್ಯಂ||

ಸಂಜುಂಡೇಶಚರಿತೆ ಎಂಬ ಗ್ರಂಥದ ಕೊನೆಯಲ್ಲಿರುವ

---

1. ಈ ಗ್ರಂಥವನ್ನೂ ಏತತ್ಕವಿಕೃತವಾದ ಇನ್ನೂ 13 ಸ್ತುತಿಗಳನ್ನೂ ಮೇಲೆ ಹೇಳಿದ ಷಡಕ್ಷರ ಮಂತ್ರಸ್ತೋತ್ರದೊಡನೆ ದಾವಣಗೆರೆ ನಿಶಾನಿಮಠದ ಶ್ರೀಮಾನ್ ಶಾಂತವೀರಾರ್ಯರು ಕಂಡು ಹಿಡಿದು ಅಚ್ಚು ಹಾಕಿಸಿರುತ್ತಾರೆ. ಈ ಕವಿಯ ಸಂಸ್ಕೃತ ಕೃತಿಗಳಲ್ಲಿ ಶಿವ ಮಹಿಮಾಗದ್ಯವೆಂಬುದೂ ಒಂದು.

ವಿಧಿಮಧುಸೂದನವಿನುತ ನಂಜುಂಡೇಶ | ಪದಪದ್ಮಷಟ್ಪದನೆನಿಪ |
ಸದಮಲಶಾಂತಾರ್ಯ ಪೇಳಿದೀಕೃತಿಯೊಳ | ಗೊದವಿದೇಕಾದಶ ಸಂಧಿ ||

ಎಂಬ ಪದ್ಯದಿಂದ ಈ ಗ್ರಂಥವೂ ವಿತತ್ಕವಿಕೃತವಾಗಿರಬಹುದೆಂದು ತೋರುತ್ತದೆ. ಇದು ಸಾಂಗತ್ಯದಲ್ಲಿ ಬರೆದಿದೆ ; ಸಂಧಿ 11, ಪದ್ಯ 744.

ಉದ್ದಂಡ ಸು. 1700.

ಇವನು ಸುಜ್ಞಾನಿದೇವಕಾವ್ಯವನ್ನು ಬರೆದಿದ್ದಾನೆ. ಈತನು ವೀರಶೈವ ಕವಿ ; ಇವನ ತಂದೆ ಹಲಗ, ಗುರು ಜೆತ್ರಹಳ್ಳಿಯ ಸಿದ್ಧೇಶನ ಶಿಷ್ಯ ಶಾಂತಪ್ಪ, ಪೋಷಕ ಜೆತ್ರಹಳ್ಳಿಯ ರಾಜಪ್ಪ. ಇವನ ಸ್ಥಳ ಜೆತ್ರಹಳ್ಳಿಯಾಗಿರಬಹುದು. ಇವನು ಸುಮಾರು 1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಸುಜ್ಞಾನಿದೇವಕಾವ್ಯ.

ಇದು ಸಾಂಗತ್ಯದಲ್ಲಿ ಬರೆದಿದೆ ; ಸಂಧಿ 7, ಪದ್ಯ 1178. ಇದರಲ್ಲಿ ಬಸವನ ಸಮಕಾಲದವನಾದ ಓಢ್ರದೇಶದಲ್ಲಿಯ ಕರ್ಣಿಕಾಪುರದ ಸುಜ್ಞಾನಿದೇವನ ಕಥೆ ಹೇಳಿದೆ. ಈ ಕಥೆಯನ್ನು ಕಲ್ಯಾಣದಲ್ಲಿ ಬಸವನು ಶಿಷ್ಯರಿಗೆ ಹೇಳಿದಂತೆ ತಿಳಿಯುತ್ತದೆ

ಕಥಾಸಾರ—ಸುಜ್ಞಾನಿದೇವನು ಶಿವಜ್ಞಾನಮೂರ್ತಿಯಿಂದ ಬಸವನ ಮಹಿಮೆಯನ್ನು ಕೇಳಿ ಆತನನ್ನು ನೋಡಬೇಕೆಂದು ಹೊರಟುಬರುತ್ತ ದಾರಿಯಲ್ಲಿ ಮತಂಗನೆಂಬ ಕ್ರೂರನಾದ ಬೇಡನನ್ನು ಸಂಧಿಸಿ ತತ್ತ್ವೋಪದೇಶದಿಂದ ಅವನನ್ನು ಸಾಧುಮಾಡಿ ನನ್ನಯ್ಯನೆಂಬ ಹೆಸರಿಟ್ಟು ಶಿಷ್ಯನನ್ನಾಗಿ ಮಾಡಿಕೊಂಡು ಮುಂದಕ್ಕೆ ತೆರಳಿ ಒಂದು ಮರದಡಿಯಲ್ಲಿ ಮಲಗಿರಲು, ಆ ಸಮಯದಲ್ಲಿ ಅಮರಪುರದ ಕೌಶಿಕರಾಯನ ಅರಮನೆಯಲ್ಲಿ ಒಡವೆಗಳನ್ನು ಕದ್ದಿದ್ದ ಕಳ್ಳರು ರಾಜಪುರುಷರಿಂದ ಹಿಂಬಾಲಿಸಲ್ಪಟ್ಟು ಆ ಒಡವೆಗಳನ್ನು ನಿದ್ರೆಮಾಡುತ್ತಿದ್ದ ಸುಜ್ಞಾನಿದೇವನಬಳಿಯಲ್ಲಿಟ್ಟು ಓಡಿಹೋಗಲು, ರಾಜಪುರುಷರು ಇವನೇ ಕಳ್ಳನೆಂದು ಭ್ರಮಿಸಿ ಇವನ

ತಲೆಯನ್ನು ಕತ್ತರಿಸಿಕೊಂಡು ಹೋಗಿ ದೊರೆಗೆ ಒಪ್ಪಿಸಿದಾಗ ಅವನು ಆ ತಲೆಯನ್ನು ಊರ ಹೊರಗಣ ಒಂದು ಮರಕ್ಕೆ ಕಟ್ಟಿಸಿದನು. ಇತ್ತ ನನ್ನಯ್ಯನು ಗುರುವಿನ ಮುಂಡವನ್ನು ನೋಡಿ ಅದಕ್ಕೆ ತನ್ನ ತಲೆಯನ್ನು ಕತ್ತರಿಸಿ ಸೇರಿಸಲು ಉದ್ಯುಕ್ತನಾದಾಗ ಶಿವನಿಂದ ತಡೆಯಲ್ಪಟ್ಟು ಮಣ್ಣಿನಿಂದ ತಲೆಯನ್ನು ಮಾಡಿರಿಸಿ ಗುರುವನ್ನು ಬದುಕಿಸಿ ಸಂಗಡ ಕರೆದುಕೊಂಡು ಬರುತ್ತ ಅಮರಪುರದಬಳಿ ಮರಕ್ಕೆ ಕಟ್ಟಿದ್ದ ಗುರುವಿನ ತಲೆಯನ್ನು ಕಂಡು ಅದಕ್ಕೆ ತನ್ನ ಮುಂಡವನ್ನು ಕತ್ತರಿಸಿಕೊಡಲು ಯತ್ನಿಸಿದಾಗ ಪುನಃ ಶಿವನಿಂದ ತಡೆಯಲ್ಪಟ್ಟು ಮಣ್ಣಿನ ಮುಂಡವನ್ನು ಆ ತಲೆಗೆ ಸೇರಿಸಿ ಕರೆದುಕೊಂಡು ಬರುತ್ತಿರಲು ಶಿವನು ಮೆಚ್ಚಿ ಇಬ್ಬರನ್ನೂ ಕೈಲಾಸಕ್ಕೊಯ್ದನು.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗುರುಶಾಂತವುಲ್ಲೀಶ, ಸಿದ್ಧೀಶ ಶಿಷ್ಯ ಶಾಂತಪ್ಪ ಇವರುಗಳನ್ನು ಹೊಗಳಿದ್ದಾನೆ.

ಈ ಗ್ರಂಥದಿಂದ ಒಂದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಕವಿಗಳ ಕರುಣದಿ ಶಿವನ ನಿರೂಪದಿ | ವಿವರಿಸಿದೆನು ಈ ಕೃತಿಯ |
ನವರಸಗಳ ಬಲ್ಲ ಕೋವಿದಸುಜನರು | ಹವಣ ಕಂಡಱಿದು ತಿದ್ದುವುದು ||
ಗಿಡುವನು ಮಡುವನು ಮೊಱಡಿಕಾನನವನು | ಗೊಡವೆ ಬಣ್ಣಿಸಿ ಬಱಿಲದಲಿ !
ದೃಢಭಕ್ತರ ಪಾದವನೆನೆದು ಬದುಕೆಂದು | ಪೊಡಮಟ್ಟು ಬೇಡಿದೆ ಮನವ ||

Appendix v.

ಪರಿಶಿಷ್ಟ V.

ಸಂಪುಟಕ್ಕೆ ಸೇರಬೇಕಾದ ಇನ್ನು ಕೆಲವರ ಆಧುನಿಕ ಗ್ರಂಥಕರ್ತರ ವಿಷಯ.

ಸಕ್ಕರೆ ಶಾಂತ. ಸು. 1800.

ಈತನು ಪ್ರಭುನಾಟಕವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ ; ಸುಮಾರು 1800 ರಲ್ಲಿ ಇದ್ದಿರಬಹುದು. ಇವನ ಗ್ರಂಥವು ಯಕ್ಷಗಾನರೂಪವಾಗಿದೆ ; ಪ್ರಭುದೇವನ (ಅಲ್ಲಮನ) ಚರಿತೆಯನ್ನು ಹೇಳುತ್ತದೆ.

(ದ್ವಿ. ಸಂಪುಟ 517) ಪಂಡಿತ ಮಲ್ಲಿಕಾರ್ಜುನ. 1800.

ಈತನಿಂದ ರಚಿತವಾದ ಶಂಕರದಾಸಿಮಯ್ಯನ ಚರಿತೆಯು ಮತ್ತೊಂದು ಪ್ರತಿಯ ಕೊನೆಯಲ್ಲಿ ಗ್ರಂಥರಚನಾಕಾಲವು ಹೀಗೆ ಹೇಳಿದೆ :—

.... ಮಿಗೆ ರೌದ್ರಿ ಸಂವ | ತ್ಸರದ ಶ್ರೀವೈಶಾಖಮಾಸಾಂ |
ಲಿಂಗಾರ್ಚನೆ (ದ್ವಿ)
ಲಿಂಗಾವಧೂತರ ವಚನ
ಲಿಂಗಾಷ್ಟಕ
ಲೋಕಾಕಾರ-ಚಂದ್ರಕೀರ್ತಿ
ವಂಶರತ್ನಾಕರದ ಟೀಕೆ (16 ತರಂಗ)
ವಚನ ರಾಮಾಯಣ—ಮೌನಿಭಟ್ಟಾರಕ
ವಚನಸಾರ
ವಜ್ರಮಕುಟರಾಯನ ಕಥೆ (ಯ)
ವರಗ ಬಸವೇಶ್ವರನ ತಾರಾವಳಿ
ವರನಂದೀ ಕಲ್ಯಾಣ (ಯ)
ವರಾಹ ತಿಮ್ಮಪ್ಪನ ಪದಗಳು
ವರಾಹಪುರಾಣ ಟೀಕೆ
ವರ್ಧಮಾನ ಕಾವ್ಯದ ಟೀಕೆ
ವರ್ಧಮಾನಪುರಾಣ—ಏವಿರಾಜ
ವರ್ಧಮಾನಾಷ್ಟಕ
ವರ್ಷಾದಿ ವಿಷಯ ಟೀಕೆ
ವಶ್ಯತಂತ್ರ(ವೈದ್ಯ)
ವಸ್ತಾರ ಅರಸರ ವಂಶಾವಳಿ
ವೃಣವೈದ್ಯಸಂಗ್ರಹ
ವ್ಯಾಕರಣ ಟೀಕೆ
ವಾಕ್ಯರಾಮಾಯಣ
ವಾಕ್ಯಾವಳಿ
ವಾಣಿಜೋತ್ಪತ್ತಿ (ಪ)
ವಾತ್ಸ್ಯಾಯನೀಯ ಟಿಪ್ಪಣಿ
ವಾತುಲಾಗಮ ಟೀಕೆ—ಮಲ್ಲಿಕಾರ್ಜುನ
ವಾಸ್ತುಕರ್ಮತಂತ್ರ ಟೀಕೆ ಹರಿಭಟ್ಟ
ವಾಸುದೇವಮನನ
ವಾಸುದೇವವಿಠಲ ಪದಗಳು
ವಾಸ್ತುಪುರುಷಲಕ್ಷಣ ಟೀಕೆ
ವಾಸ್ತುಶಿಲ್ಪಾದಿ ವಿಶ್ವಕರ್ಮಪುರಾಣ
ವ್ಯಾಘ್ರಮುಖಸ್ತಂಭನ ಮಂತ್ರ
ವಿಂಶತಿವೇದಾಂತ—ಅವಧೂತ ಶಿವಯೋಗೀಂದ್ರ
ವಿಕ್ರಮಾರ್ಕ ಚರಿತ್ರ
ವಿಗಾಲರಾಯ ಚರಿತ್ರ
ವಿಜಯನಗರದ ರಾಜರ ಚರಿತೆ
ವಿಟ್ಠಲಪದಗಳು
ವಿದಗ್ಧಚೂಡಾಮಣಿ—ವಿಟ್ಠಲ
ವಿದಗ್ಧಮಂಗಮಂಜರಿ
ವಿದ್ಯಾಮಾಧವೀಯ ಟೀಕೆ
ವಿನೋದರಸಮಂಜರಿ ಕಥೆ
ವಿಭೀಷಣನೀತಿ
ವಿಭೀಷಣ ಬುದ್ಧಿ
ವಿಭೂತಿ ಮಹಾತ್ಮ್ಯ ಟೀಕೆ
ವಿರೂಪಾಕ್ಷ ಪಂಚಾಶಿಕೆ
ವಿರೂಪಾಕ್ಷ ಶತಕ—ಕವಿರಂಗ
ವಿರೂಪಾಕ್ಷಾಷ್ಟಕ
ವಿಶ್ವಕರ್ಮ ಕಥೆ
ವಿಶ್ವಕರ್ಮಕುಲಭೂಷಣ
ವಿಶ್ವಕರ್ಮಪುರಾಣಟೀಕೆ
ವಿಶ್ವಗುಣಾದರ್ಶ ಟೀಕೆ
ವಿಶ್ವಪತಿನೀತಿ(ಕಂ)
ವಿಶುದ್ಧವೈದಿಕಾದ್ವೈತ ಸಿದ್ಧಾಂತ
ವಿಷ್ಣುಕವಚ
ವಿಷ್ಣುದಾಸಾವತಾರ ಕಥೆ
ವಿಷ್ಣುಧರ್ಮ
ವಿಷ್ಣುಧರ್ಮೋತ್ತರ (ಗ)
ವಿಷ್ಣುಮಾನಸಪೂಜೆ
ವಿಷ್ಣುಸ್ತೋತ್ರ (ಕಂ)
ವೀತರಾಗ ಪರೀಕ್ಷೆ
ವೀರಗುಂಡಯ್ಯನ ಕಥೆ (ಗ)

ವೀರಭದ್ರದೇವ ಚರಿತೆ - ವಿರೇಶ್ವರ ಕವಿ
ವೀರಭದ್ರಮಂತ್ರ
ವೀರಭದ್ರರಾಜಸ್ತುತಿ—ರಾಮಚಂದ್ರ
ವೀರಶೈವತತ್ವಪ್ರಕಾಶ
ವೀರಶೈವ ಪ್ರದೀಪಿಕೆ
ವೀರಶೈವ ಮತೋಪನ್ಯಾಸ
ವೀರಶೈವ ಮಹಾತಂತ್ರ ಟೀಕೆ
ವೀರಶೈವ ಶಿಖಾರತ್ನ
ವೀರಶೈವ ಷಟ್ಸ್ಥಲಸಿದ್ಧಾಂತ
ವೀರಶೈವ ಸಂಪಾದನೆ
ವೀರಶೈವ ಸಿದ್ಧಾಂತಜ್ಞಾನ
ವೀರಶೈವಸಿದ್ಧಾಂತ ಸುಧಾನಿಧಿ (ಗ)
ವೀರಶೈವಾಚಾರ ನಿರೂಪಣ ಟೀಕೆ
ವೀರಶೈವಾಚಾರ ಪ್ರದೀಪಿಕೆಯ ಟೀಕೆ
ವೀರಶೈವಾಚಾರ ಪೇಟಿಕೆ
ವೀರಶೈವಾಭರಣ
ವೀರಶೈವೋತ್ಕರ್ಷಪ್ರದೀಪಿಕೆಯ ಟೀಕೆ
ವೀರಶೈವೋಪನಿಷತ್ತಿನ ಟೀಕೆ—ಶಿವಸಿದ್ಧೇಶ್ವರ
ವೀರಾಂಕ ಚರಿತೆ (ನಾಟಕ)
ವೀರಾಗಮ
ವೀರೇಶ್ವರನ ಕಂದ
ವೃಷಭಸ್ತೋತ್ರ
ವೃಷಭೇಂದ್ರಪುರಾಣ—ಶಿವರಾತ್ರಿಸ್ವಾಮಿ
ವೃಷಭೇಂದ್ರವಿಜಯ ಶಬರಶಂಕರ ವಿಲಾಸಗಳ ಷಟ್ಪದ್ಯಗಳಿಗೆ ಟೀಕೆ
ವೃಷ್ಟಿಶಾಸ್ತ್ರ ಟೀಕೆ
ವೃಷೋತ್ಸರ್ಜನವಿಧಿ ಟೀಕೆ
ವೆಂಕಟಗಿರಿ ಮಹಾತ್ಮ್ಯ ಟೀಕೆ
ವೆಂಕಟಪುರ ವೈಷ್ಣವಾದಿ ನಾನಾ ಮತೋತ್ಪತ್ತಿ
ವೆಂಕಟೇಶದಂಡಕ
ವೇದಾಂತ ಕೀರ್ತನೆ
ವೇದಾಂತದಿಂಡಿಮ ಟೀಕೆ—ಕೃಷ್ಣಕವಿ
ವೇದಾಂತ ತತ್ವ
ವೇದಾಂತತತ್ವ ರಸಾಯನ
ವೇದಾಂತಪಂಚದಶೀ ಟೀಕೆ
ವೇದಾಂತ ವಚನ—ವೈದ್ಯದಾಸಣ್ಣ
ವೇದಾಂತ ವಾರ್ತಿಕ
ವೈದ್ಯಕಲ್ಪ ಟೀಕೆ
ವೈದ್ಯಚಿಂತಾಮಣಿ (ಗ)
ವೈದ್ಯಚಿಂತಾಮಣಿ ಟೀಕೆ
ವೈದ್ಯದ ಕ್ರಿಯೆ
ವೈದ್ಯಬೋಧಿನಿ—ಜಗನ್ನಾಥನಾಯ್ಡು
ವೈದ್ಯರತ್ನಾಕರ ಟೀಕೆ
ವೈದ್ಯವಿಷಯ ಟೀಕೆ
ವೈದ್ಯಸಂಗ್ರಹ—ಸೂರಪಂಡಿತ
ವೈದ್ಯಸಾರಸಂಗ್ರಹ ಟೀಕೆ
ವೈದ್ಯಸಾರಸಮುದ್ರ ಟೀಕೆ
ವೈನತೇಯ ಶತಕ—ಲಕ್ಷ್ಮೀನಾರಾಯಣಪ್ಪ
ವೈರಾಗ್ಯಷಟ್ಪದಿ ಸೋಮೇಶ್ವರ
ವೈಷ್ಣವ ಧರ್ಮ
ಶಂಕರಕಥೆ
ಶಂಕರತತ್ವ
ಶಂಕರಭಾರತಿ
ಶಂಕರ ವಾರ್ಧಕ
ಶಂಕರವಿಜಯದ ಕಥೆ
ಶಂಕರವಿಜಯ ಸಂಗ್ರಹ
ಶಂಕರಸಂಹಿತಾಟೀಕೆ—ಮಾದಪ್ಪ
ಶಂಕರಸಂಹಿತೆ—ಬಸವರಾಜೇಂದ್ರ
ಶಂಭುಲಿಂಗದ ಕಂದ
ಶಂಭುಲಿಂಗದ ಕಂದದ ಟೀಕೆ
ಶಕುನಶಾಸ್ತ್ರ
ಶತಕಂದರ ರಾಮಾಯಣ
ಶಬರಶಂಕರವಿಲಾಸದ ಟೀಕೆ
ಶಬ್ದಚಂದ್ರಿಕೆ
ಶಬ್ದರತ್ನಾಕರ
ಶರಣರ ಕಥೆ (ಯ),
ಶರಣುಬಸವ ರಗಳೆಯ ಟೀಕೆ
ಶಲ್ಯಮಂತ್ರ
ಶಾಂತಪ್ರಕಾಶಿಕೆ (ಶ್ರೀರುದ್ರಟೀಕೆ)
ಶ್ಯಾಂತ್ಯಷ್ಟಕದ ಟೀಕೆ
ಶಾಂತಿಕರಸ್ತೋತ್ರ ಟೀಕೆ
ಶಾಂತಿಗಣೇಶ್ವರನ ಸಾಂಗತ್ಯ
ಶಾರದಾ ಗದ್ಯ

ಶಾಲಿಹೋತ್ರಾಶ್ವವೈದ್ಯ ಟೀಕೆ
ಶಾಸ್ತ್ರಸಾರಸಮುಚ್ಚಯ ವೃತ್ತಿ
ಶಿಖಾಚಕ್ರ ವಚನ
ಶಿಖಾಮಣಿ
ಶಿತಿಕಂಠವ್ಯಾಖ್ಯಾನ
ಶಿರೋಮಣಿಕೃತಿಸದ್ಯ—ಪಾಲಯ್ಯ
ಶಿಲ್ಪಶಾಸ್ತ್ರ (ಗ)
ಶಿಲ್ಪಶಾಸ್ತ್ರ ಟೀಕೆ
ಶಿವಕಥಾಮೃತಸಾರ (ಷ)
ಶಿವಕವಚ
ಶಿವಕವಚ ಟೀಕೆ
ಶಿವಚಿಂತಾಮಣಿ (ಗ)
ಶಿವಜ್ಞಾನ ಚಾರಿತ್ರ—ಶಾಂತವೀರದೇಶಿಕ
ಶಿವತತ್ವಜ್ಞಾನಬೋಧೆ
ಶಿವತತ್ವಸುಧಾಂಬುಧಿ
ಶಿವಪಾದರೇಣುಕಾಸಹಸ್ರ
ಶಿವಪಾರಿಜಾತ
ಶಿವಪೂಜೆಯ ಫಲ
ಶಿವಭಕ್ತರ ಪುರಾಣ
ಶಿವಭಕ್ತರ ರಗಳೆ
ಶಿವಭಕ್ತವಿಲಾಸ
ಶಿವಮಲ್ಲಿಕಾಮಾಲೆ
ಶಿವಯೋಗ
ಶಿವರಹಸ್ಯ
ಶಿವರಹಸ್ಯ ಟೀಕೆ
ಶಿವರಾತ್ರಿಯ ಕಥೆ (ಷ)
ಶಿವಲಿಂಗಷಟ್ಪದಿ
ಶಿವಲಿಂಗಾಂತಿಕೆ (ಗ)
ಶಿವಲೋಕಾಸ್ಥಾನವರ್ಣನೆ
ಶಿವಶರಣಂ—ಬಸವರಾಜಯ್ಯ
ಶಿವಶರಣರ ಕಥೆ
ಶಿವಶರಣರ ವಿಲಾಸ—ದೇಶಿಕೇಂದ್ರ
ಶಿವಶರಣಾಷ್ಟಕ
ಶಿವಷಟ್ಪದಿ—ಪ್ರಧಾನಿ ವೆಂಕಪ್ಪ
ಶಿವಸ್ತವ ಶಿರೋಮಣಿ
ಶಿವಸಿದ್ಧಾಂತ ಟೀಕೆ
ಶಿವಸ್ತುತಿ (ಕಂ)
ಶಿವಸೂತ್ರ
ಶಿವಾಗಮಕಥೆ
ಶಿವಾದ್ವೈತಮಂಜರಿ
ಶಿವಾಧಿಕ್ಯೋತ್ತರಾಣ—ಮಾಧವಶಾವಯ್ಯ
ಶಿವಾಧಿಕ್ಯೋತ್ತರಾಣದ ಟೀಕೆ
ಶಿವಾಧಿಕ್ಯೋತ್ತರತಾತ್ಪರ್ಯವಳಿ
ಶಿವಾಧಿಕ್ಯೋತ್ತರತಕೆ
ಶಿವಾನಂದಲಹರಿಯ ಟೀಕೆ
ಶಿವಾನುಭವ ಶಾಸ್ತ್ರ
ಶಿವಾರ್ಚನಮಾಲೆ (ಪಾ)
ಶಿವಾಷ್ಟಕ
ಶ್ರೀರಂಗಮಾಹಾತ್ಮ್ಯದ ವೈಷ್ಣವ ಖಂಡನೆ
ಶ್ರೀರಂಗಪಟ್ಟಣದ ನುಡಿಮೆ
ಶ್ರೀರಂಗಪಟ್ಟಣದ ಮಾಹಾತ್ಮ್ಯ
ಶ್ರೀರಂಗಪಟ್ಟಣದ ವರ್ಣನೆ
ಶ್ರೀರಂಗಪಟ್ಟಣ ಮತ್ತು ಮೈಸೂರು ಚರಿತ್ರೆ ಬೋಕಯ್ಯ
ಶ್ರೀರಂಗ ಮಾಹಾತ್ಮ್ಯ (ಗ)—ದೊಡ್ಡತಿಮ್ಮದಾಸ
ಶ್ರೀರಂಗರಾಜ ವಂಶಪ್ರಭಾವ (ಗ)
ಶ್ರೀರುದ್ರ ಟೀಕೆ—ಸೋಸಲೆ ರೇವಣಾರಾಧ್ಯ
ಶ್ರೀವಚನಭೂಷಣ
ಶ್ರೀವೆಂಕಟೇಶ ಜೋಗುಳದ ಪದ
ಶ್ರೀವೈಷ್ಣವಾಹ್ನಿಕೆ
ಶೃಂಗಾರಪದಗಳು
ಶೃಂಗಾರಮಂಜರಿಯ ಟೀಕೆ
ಶೇಷಕೆಲಾನಿಧಿ (ಚಂ—? ತಿರುಮಲಾರ್ಯ)
ಶ್ವೇತಾಂಗನ ಕಥೆ
ಶ್ವೇವಪಟಲ
ಶ್ವೇವಸಿದ್ಧಾಂತದ ಕೆಂದ
ಶ್ವೇವಸಿದ್ಧಾಂತ ದೀಪಿಕೆ—ವೀರಣಾಚಾರ್ಯ
ಶ್ವೈವಾದ್ವೈತಪ್ರಕಾಶಿಕೆಯ ಟೀಕೆ
ಷಟ್ಚಕ್ರಭೂಚಕ್ರ
ಷಟ್ಪದೀಲಕ್ಷಣ
ಷಟ್ಸ್ಥಲಚಕ್ರವರ್ತಿಯ ಸಂಪಾದನೆ
ಷಟ್ಸ್ಥಲ ಚರಿತೆ
ಷಟ್ಸ್ಥಲ ಜ್ಞಾನಚಾರಿತೆ—ಗುರುರಾಜ

ಷಟ್ಸ್ಥಲ ತಿಲಕ
ಷಟ್ಸ್ಥಲನಿರ್ಣಯ ಟೀಕೆ
ಷಟ್ಸ್ಥಲ ವಿವರಣೆ
ಷಟ್ಸ್ಥಲ ಸಾರಾಮೃತ
ಷಟ್ಸ್ಥಲಸಾರಾಯದಂದ
ಷಡಕ್ಷರಮಹಿಮೆ
ಷಡ್ಲಿಂಗಕ್ಕೆ ವಚನ
ಷಡಿಂಗ ವಿವರ
ಷಡ್ಭಕ್ತಿಸೋತ್ರ ಟೀಕೆ
ಷೋಡಶ ಕ್ರಿಯಾ ಟೀಕೆ
ಸಂಕ್ಷೇಪಭಾರತ
ಸಂಕ್ಷೇಪರಾಮಾಯಣ
ಸಂಕ್ಷೇಪರಾಮಾಯಣ ಟೀಕೆ
ಸಂಖ್ಯಾರತ್ನಕೋಶ ಟೀಕೆ— ಕೃಷ್ಣರಾಜ
ಸಂಗನಬಸವೇಶ್ವರ ಶತಕ
ಸಂಗನಮಲಿಂಗಾಷ್ಟಕ
ಸಂಗನಬೇಸರ ಶತಕ
ಸಂಗೀತಚೂಡಾಮಣಿ ಟೀಕೆ
ಸಂಧಾನಸೇವಾಪ್ರಕಾಣ ಟೀಕೆ
ಸಂಪ್ರದಾಯ ವಚನ
ಸಂಭಾಷಣೆಯ ಸರಸ
ಸಂಸ್ಕೃತಗೀತ ವಿಲಾಸದ ಟೀಕೆ
ಸಕಲನುಶಿಖಿಂಡನ
ಸಕಲಾಗಮಸಾರ
ಸಕಲಾಗಮಸಾರ ಟೀಕೆ
ಸತ್ಯಭಾಮಾಕಲ್ಯಾಣ
ಸತ್ಯವೇದಪರೀಕ್ಷೆ 1852
ಸತ್ಯೋಪದೇಶ
ಸದ್ದರ್ಮಪಾತೋಕಕ್ಕೆ ಟೀಕೆ
ಸನತ್ಸುಮಾರವಾಸುದೇವಾಸ್ಯ ಟೀಕೆ
ಸನತ್ಸುಜಾತ ಸೀಕೆ
ಸಪ್ಪಣ್ಣನವರ ವಚನ
ಸಭಾಪತಿ ಲಕ್ಷಣ
ಸಮಯಪರಿಚ್ಛೇದ
ಸಮಾಧಿಕ್ರಿಯೆಯ ವಚನ
ಸಮಾಧಿತತ್ವಟೀಕೆ
ಸರಸ್ವತೀ ವಿಲಾಸ
ಸರಸ್ವತೀಸ್ತುತಿಯ ಟೀಕೆ

ಸರ್ವೇಶ್ವರ ನಿರೂಪಣ
ಸ್ಥಲಯುಕ್ತೈವಾದ ಸ್ಫುರವಚನಗಳು
ಸ್ಮಮಂತಕಮಣಿಕಥೆ (ಸಾಂ)
ಸ್ಯಾಧ್ಯಾಯ ಟೀಕೆ ಶತಕ 1738—ಶ್ರೀರಂಗ ಪಟ್ಟಣದ ರಂಗಶಾಸ್ತ್ರಿ
ಸ್ಫುಟಲಿಂಗಾಮಣಿ
ಸ್ಫುಟಲಿಂಗಾಮಣಿಯ ಟೀಕೆ
ಸ್ಫುಟಲಿಂಗ
ಸ್ಫುರದ್ರೂಪ—ಮುಪ್ಪಿನ ಷಡಕ್ಷರಸ್ವಾಮಿ
ಸ್ಫುರಣಾಸ್ತ್ರ ಟೀಕೆ
ಸ್ಫುರದ್ರೂಪಸಂಶೋಧನೆಯ ಟೀಕೆ—ಬ್ರಹ್ಮಸೂರಿ ಪಂಡಿತ

ಸಾಕಾರಸಿದ್ಧಾಂತಚರಿತೆ
ಸಾಗಾರಧರ್ಮಾಮೃತ ಟೀಕೆ
ಸಾದಾನ್ನ ಕಟ್ಟಳೆ
ಸಾನಂದಕ್ಕೆತಿ
ಸಾನಂದಗಣೇಶಸಾಂಗತ್ಯ—ಮಲ್ಲೇಶ
ಸಾನಂದಗಣೇಶ್ವರನರಗಳೆ
ಸಾನಂದ ಚರಿತ್ರೆ (ಸಾಂ)
ಸಾವಯವಿಕ್ರಾಸ್ತ ಟೀಕೆ
ಸಾರಂಗಧರನ ಕಥೆ—ನಂಜುಂಡ
,, ರಂಗರಾಜೇಂದ್ರ
ಸಾರಂಗಧರನ ಚರಿತ್ರೆ
ಸಾಲಗಾಮ ಮಹಾತ್ಮೆ
ಸಾಲಗಾಮ ಲಕ್ಷಣ ಟೀಕೆ
ಸಾವಿತ್ರೀ ಚರಿತ್ರೆ (ಗದ್ಯ)
ಸ್ಕಾಂದಪುರಾಣ
ಸಿದ್ಧಚರಿತ್ರೆ
ಸಿದ್ಧಯೋಗಸಾರ
ಸಿದ್ಧರಾಮನ ಕಥೆ (ಸಾಂ)
ಸಿದ್ಧರಾಮನ ಮಂತ್ರಕಥಾಗೋಪ್ಯದಕಥಾಗರ್ಭ
ಸಿದ್ಧರಾಶಿ—ಕಲ್ಯಾಣಕೀರ್ತಿ
ಸಿದ್ಧಲಿಂಗ ಚರಿತ್ರೆ
ಸಿದ್ಧಲಿಂಗೇಶ್ವರ ವಿಜಯ
ಸಿದ್ಧಸಾಂಗತ್ಯ
ಸಿದ್ಧಾಂತಾರ್ಥಪ್ರಕಾಶಟೀಕೆ
ಸಿದ್ಧಾಷ್ಟಕ

ಸಿರಿಯಾಳಸೆಟ್ಟಿಯ ರಗಳೆ
ಸಿರಿಯಾಳಸೆಟ್ಟಿಯ ವಾರ್ಧಕ
ಸಿರುಮನಕಥೆ—ಶಿವಕವಿ
ಸೀತಾದೇವಿಯ ಮೇಲೆ ಹಾಡು
ಸೀನಿನ ಫಲ
ಸೀನುಗೌಳಫಲ
ಸೀಮಂತರತ್ನಾಕರ
ಸ್ತ್ರೀಯರ ಋತುಫಲ
ಸುದಾಮಚರಿತ್ರೆ (ಚ)
ಸುಪ್ರಭಾತಗಳು—ಚಾಮರಾಜ
ಸುಬೋಧಾಮೃತ
ಸುಭದ್ರಾಕಲ್ಯಾಣ—ಲಿಂಗರಾಜ
ಸುಭಾಷ್ಯಸಂಗ್ರಹ
ಸುಭಾಷಿತ
ಸುಭಾಷಿತಕ್ಕೆ ಟೀಕೆ
ಸುಳಾದಿ
ಸೂಕ್ತಿಮುಕ್ತಾವಳಿಯ ಟೀಕೆ
ಸೂಕ್ಷ್ಮಾಗಮಟೀಕೆ
ಸೂಪಶಾಸ್ತ್ರ (ಗ)
ಸೂಪಶಾಸ್ತ್ರ ಟೀಕೆ
ಸೂರ್ಯಸಿದ್ಧಾಂತ ಟೀಕೆ
ಸೂರಾಸಾನಿಯ ಕಾವ್ಯ
ಸೂಳೆಕರೆ ಸಿದ್ಧೇಶ್ವರನ ಪೂರ್ವೋತ್ತರ
ಸೃಷ್ಟಿಯ ನಿರ್ದೇಶದ ವಾಚ್ಯ
ಸೋಮನಾಥಭಾಷ್ಯಟೀಕೆ
ಸೋಮನಾಥಶತಕ
ಸೋಮವಾರ ಶಿವಪೂಜಾ ವ್ರತಕಥೆ
ಸೌಂದರೇಶನ ಅರುವತ್ತುನಾಲ್ಕು ಲೀಲೆ
ಸೌಗಂಧಿಕಾ ಪರಿಣಯ (ದ್ವಿ) —ತಮ್ಮಯ್ಯ
ಹಂಪೆಯ ರಗಳೆ
ಹಂಸವಿಂಶತಿ ಕಥೆ
ಹತ್ತುಬಗೆಯ ರಗಳೆ
ಹತ್ತುಬಗೆಯ ವಾದ್ಯಗಳು
ಹನುಮಂತ ವಿಜಯ
ಹನುಮದ್ವಿಜಯ (ಯ)
ಹಯಗ್ರೀವದಾಸರ ಪದಗಳು
ಹರದತ್ತಚರಿತೆ—ಕೃಷ್ಣರಾಜ
ಹರ್ಷಷ್ಟಕ
ಹರಿಲೀಲೆ
ಹರಿವಂಶಾನುಕ್ರಮಣಿಕೆ
ಹರಿಶ್ಚಂದ್ರಚರಿತ್ರ (ಯ)—ವೆಂಕಟಕೃಷ್ಣ
ಹರಿಹರದೇವಸ್ಥಾನದ ಮಾಹಾತ್ಮ್ಯ
ಹರಿಹರಾಂಕನ ಸ್ತೋತ್ರ
ಹಲ್ಲಿಯ ಶಕುನ
ಹಸ್ತಿಗಿರಿ ಮಾಹಾತ್ಮ್ಯ ಟೀಕೆ
ಹಸೆಗೆ ಕರೆಯುವ ಶೋಭಾನ
ಹಸೆಗೆ ಕರೆಯುವ ಹಾಡು
ಹಸೆಗೆ ಬಂದ ವರ್ಣನೆ
ಹಳೆಯಪ್ಯೆಕದವರ ಮತವರ್ಣನೆ
ಹಳೆಯಬೀಡು ಪೂರ್ವೋತ್ತರ
ಹಾರನಹಳ್ಳಿಯ ವರ್ಣನೆ
ಹಿಂದುಗಳ ಆಟದ ವರ್ಣನೆ
ಹಿರಿಯಮಂತ್ರಗೋಪ್ಯದ ಟೀಕೆ
ಹೈದರನ ವಂಶಾವಳಿ
ಹೈದರಲ್ಲಿಯ ವರ್ತಮಾನ ವಿವರ

APPENDIX VII.

ಪರಿಶಿಷ್ಟ VII

ಪ್ರಥಮ ದ್ವಿತೀಯ ಸಂಪುಟಗಳಿಗೂ ಈ ಸಂಪುಟಕ್ಕೂ ಸೇರಬೇಕಾದ ಇನ್ನೂ ಕೆಲವರು ಕವಿಗಳ ಮತ್ತು ಗ್ರಂಥಕರ್ತರ ವಿಷಯ.

ನಾರಣದೇವ 1109

ಈತನು ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ನರಸಿಂಹದೇವಸ್ಥಾನದ ಬಳಿ ಇರುವ ಒಂದು ಶಾಸನವನ್ನು[1] ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಪ್ರಣುತಾರ್ಥಂ ಹೃದ್ಯಮೀಪದ್ಯನಿಚಯಮೆನೆ ಪೇಲ್ದಂ ಮನಂಗೊಂಡುವಿದ್ವ ।
ದ್ಗಣಮತ್ಯಾನಂದದಿಂ ಬಣ್ಣಿಸೆ ಬರೆದನಿದಂ ಸತ್ಕವೀಂದ್ರಸ್ತುತಂ ನಾ ॥
ರಣದೇವಂ ಪಾರ್ವತೀವಲ್ಲಭ ಪದಯುಗಳಾರಾಧಕಂ ವಿಪ್ರವಂಶಾ ।
ಗ್ರಣಿ ವಿಶ್ವಾಮಿತ್ರಗೋತ್ರಾಂಬುರುಹವನಪತಂಗಂ ವಿಶುದ್ಧಾಂತರಂಗಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈತನು ವಿಶ್ವಾಮಿತ್ರಗೋತ್ರದ ಬ್ರಾಹ್ಮಣ ಕವಿ ಎಂಬುದು ಈ ಪದ್ಯದಿಂದಲೇ ವ್ಯಕ್ತವಾಗುತ್ತದೆ. ಈ ಶಾಸನವು ಚಾಳುಕ್ಯ ರಾಜನಾದ ತ್ರಿಭುವನಮಲ್ಲನ (1076-1126) ಆಳಿಕೆಯಲ್ಲಿ 1109 ರಲ್ಲಿ ಹುಟ್ಟಿದೆ. ಇದರಲ್ಲಿ ದಂಡನಾಯಕ ಮಾಧವಭಟ್ಟನ ಮಗ ನಿಂಬರಸನೂ ಹಾವೇರಿ ಅಗ್ರಹಾರದ ಮಹಾಜನಗಳು ನಾನೂರ್ವರೂ ಸೇರಿ ಸಿದ್ಧೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಮಾಧವಭಟ್ಟ

ಈ ಧರಣೀತಳಂ ಪ್ರತಿದಿನಂ ಸಲೆ ಬಣ್ಣಿಸುಗುಂ ಪ್ರಚಂಡದಂ !
ಡಾಧಿಪನಂ ವಿದಗ್ಧಬುಧಮಾಗಧರಕ್ಷಕನಂ ವಿವೇಕವಿ ॥
ದ್ಯಾಧರನಂ ಮಹಾಮಹಿಮನಂ ಸುಚರಿತ್ರಪವಿತ್ರಗಾತ್ರನಂ ।
ಮಾಧವಭಟ್ಟನಂ ಬುಧಲಲಾಟತಟಸ್ಥಿತರತ್ನಪಟ್ಟನಂ ॥

---

1 ಈ ಶಾಸನದ ಪ್ರತಿಯನ್ನು ಹಾವೇರಿ ಮ್ಯುನಿಸಿಪಲ್ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀಯುತರಾದ ಎಚ್. ಜಿ. ಬೆಂಗೇರಿ ಬಿ. ಎ., ಅವರು ಬರೆದು ಕಳುಹಿಸಿಕೊಟ್ಟಿದ್ದಾರೆ.

ಪ್ರಭುಲಕ್ಷಣದೊಳ್ ಸಂತತ ।
ವಿಭವದೊಳಭಿಮಾನದೊಳ್ ವಿಶುದ್ಧಜ್ಞಾನ ॥
ಪ್ರಭೆಯೊಳ್ ವಾಕ್‌ಶ್ರೀರಮಣೀ ।
ವಿಭು ಮಾಧವಭಟ್ಟನೆಸೆದನಖಿಲೋರ್ವರೆಯೊಳ್ ॥

ಅವನ ಹೆಂಡತಿ ಕಾಳಿಕಬ್ಬೆ

ರತಿಗನುರುಂಧತಿಗಂ ದಾ ।
ಕ್ಷತಿಗಂ ರೂಪಿನೊಳುದಾತ್ತಪತಿಭಕ್ತಿಯೊಳ ॥
ನ್ವಿತಸಕಲಕಲಾಗಮೆಪರಿ ।
ಣತಿಯೊಳ್ ಸಲೆ ಕಾಳಿಕಬ್ಬೆ ಮಿಗಿಲೆನೆ ನೆಗಟ್ಟಿದ್ಳ್ ॥

ಸರಸಿಜಸಂಭವಂ ಬರೆದು ನಿರ್ಮಿಸಿದಂ ಸ್ಮರನಿಕ್ಕಿಜೆಂದೆ ವಿ ।
ಸ್ತರಿಸಿದನೆಯ್ದೆ ಸಂಪದಮನುದ್ಭವಮಂ ಸೊಬಗಂ ವಿಲಾಸಮುಂ ॥
ಸರಸಕಲಾಪ್ರವೀಣತೆಯನೆಂಬಿನಮುನ್ನತಿನೆತ್ತ ಕಾಳಿಕ ।
ಬ್ಬರಸಿಯ ರೂಪನಾಂ ಸಕ್ಕೆಯೆ ಬಣ್ಣಿಪೆನೆಂಬವನೆಗ್ಗನಲ್ಲನೇ ॥

ನಿಂಬರಸ

ಪತಿಹಿತನೇ ಮರುತ್ತನಯನಾಹವಧೀರನೆ ಸವ್ಯಸಾಚಿ ಮಿ ।
ಕ್ಕತಿಶಯರೂಪನೇ ಕುಸುಮಸಾಯಕನುನ್ನತನೇ ಸುರಾಚಲಂ ॥
ವಿತತಗುಣಶೀಲನೇ ರವಿಜನುತ್ತಮನೇ ಮನುಮಾರ್ಗನೆಂದು ಪಂ ।
ಡಿತಜನಮೆಯ್ದೆ ಬಣ್ಣಿಪುದು ನಿ ಬನನೀವಸುಧಾತಲಾಗ್ರದೊಳ್ ॥

ಧುರದೊಳಿದಿರಾದ ವೈರಿಗೆ ।
ಪುರಹರನಿಟಿಳಾಂಬಕಾನಳಂ ಶರಣೆಂದಾ ॥
ದರಿಸಿದೊಡಂಬುಧಿ ವಂದಿಗೆ ।
ಸುರತರು ಸರಿ ಪಾಟಿ ಸಮನೆನಿಸ್ಪಂ ನಿಂಬಂ ॥

ಹಬ್ಬಣಯ್ಯನಾಯಕ 1149

ಈತನು ಬಿಜಾಪುರಜಿಲ್ಲೆಗೆ ಸೇರಿದ ಬಾಗಲಕೋಟೆ ತಾಲ್ಲೂಕು ಸಿದೂರ ಕೊಮೆಲಿಂಗದೇವರ ಗುಡಿಯಲ್ಲಿರುವ ಒಂದು ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ 'ಈ ಸಾಸನಗಬ್ಬವಂ ಪೇಳ್ದಿಂ ಹಬ್ಬಣಯ್ಯನಾಯಕಂ'

ಎಂಬ ಭಾಗದಿಂದ ತಿಳಿಯುತ್ತದೆ. ಇದರಲ್ಲಿ ಚಾಳುಕ್ಯರಾಜನಾದ 3ನೆಯ ಜಗದೇಕಮಲ್ಲನ ಆಳಿಕೆಯಲ್ಲಿ ಶ್ರೀಮನ್ಮಹಾಪ್ರಭುವಿಗೆ ಲಕುಮಾದೇವಿ ಆದಿಯಣ್ಣ ಮಾಡಿಸಿದ ಸೂರ್ಯದೇವರಿಗೆ 1149 ರಲ್ಲಿ 10 ಮತ್ತರ ಭೂಮಿಯನ್ನು ಬಿಟ್ಟದಾಗಿ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಲಕುಮಾದೇವಿ

ಮನಸಿಜರಾಜನರ್ಚಿಸುವ ಕರ್ಬಿನ ಬಿಲ್ಲನೆ ಪುರ್ಬು ಕಾಮುದೇ ।
ವನ ಕುಸುಮಾಸ್ತ್ರವಿಸ್ತರವಿವೆಂದೆನೆ ನೀಳ್ದಲಗಣ್ಗಳಾ ವುನೋ ॥
ಜನ ನಡದಿಟ್ಟ ಜಂಗಮಲತಾಂಗವೆನಲ್ ನಿಜರೂಪು ಲಕ್ಷ್ಮಿಭಾ ।
ಜನವೆನೆ ಲಕ್ಷ್ಮಿದೇವಿಗೆಣೆ ಮೇನಕೆಯೂರ್ವಸಿರಂಭೆಯೆಂಬವರ್ ॥
ವಿಕಸಿತಪಂಕಜಾಸ್ಯೆ ಮೃಗಲೋಚನೆ ಮತ್ತಗಜೇಂದ್ರಯಾನೆ ಕೇ ।
ತಕಿವರಗಂಧಿ ಕೋಮಳಲತಾಂಗಿ ಜಳಾಳಕೆ ಕಂಬುಕಂಠೆ ಯಾ ॥
ಜಕಜನಕಲ್ಪಭೂಜೆ ಸುರಧೇನು ವಲಂ ಪರಿವಾರಕೆಂದು ದಿ ।
ಕ್ಕಕಟಿತಕೀರ್ತಿಯಂ ಲಕುಮಿದೇವಿಯ ಬಣ್ಣಿಸುಗುಂ ಜಗಜ್ಜನಂ ॥

ಅದೇ ಗುಡಿಯ ಇದಿರಿಗಿರುವ ಲಕ್ಷ್ಮೀನಾರಾಯಣದೇವಾಲಯದಲ್ಲಿಯೂ ಎರಡು ಶಾಸನಗಳಿವೆ- ಈ ಮೂರು ಶಾಸನಗಳಲ್ಲಿಯೂ ಒಂದರ ಪದ್ಯಗಳು ಮತ್ತೊಂದರಲ್ಲಿ ಬಂದಿರುವುದರಿಂದ ಮೂರೂ ಹಬ್ಬಣಯ್ಯನಾಯಕಕೃತವೆಂದು ಊಹಿಸಲು ಅವಕಾಶವಿದೆ. ಲಕ್ಷ್ಮೀನಾರಾಯಣದೇವಾಲಯದ ಶಾಸನಗಳೊಳಗೆ ಒಂದರಲ್ಲಿ ಕಳಚುರ್ಯರಾಜನಾದ ರಾಯಮುರಾರಿ ಸೋಮದೇವನ ಆಳಿಕೆಯಲ್ಲಿ ಶ್ರೀಮನ್ಮಹಾಪ್ರಭುವಿಗೆ ಲಕುಮಾದೇವಿಗೆ ಪಾದಪೂಜೆಯನ್ನು ಕೊಟ್ಟ ಏಚಗೌಡನ ಮಗ ಬಸವಗೌಡನು ಭೂಮಿಯನ್ನು ಪಡೆದು 1173 ರಲ್ಲಿ ಕೆರೆಗೂ ಸತ್ರಕ್ಕೂ ಬಿಟ್ಟಹಾಗೆ ಹೇಳಿದೆ. ಮತ್ತೊಂದರಲ್ಲಿ ಹಿಂದೆ ಹೇಳಿದ ಆದಿಯಣ್ಣನ ಮಗ ನಾಗಿದೇವನು ಲಕ್ಷ್ಮೀನಾರಾಯಣದೇವರಿಗೂ ನಾಗೇಶ್ವರದೇವರಿಗೂ ಭೂಮಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನಗಳಿಂದಲೂ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಲಕ್ಕುಮಾದೇವಿ

ನುಡಿಗಲ್ತು ಸತ್ಯವಲ್ಲದೆ ।
ನುಡಿಯಳ್ ನಡೆಗಲ್ತು ಧರ್ಮಪಥವಲ್ಲದೆ ತಾಂ ।
ನಡೆಯಳ್ ಲಕ್ಕುಮಾದೇವಿಯ ।
ನುಡಿ ಸತ್ಯಂ ನಡೆವುದೆಲ್ಲ ಮನುಮುನಿಮಾರ್ಗಂ ॥
ಹರಳಲ್ಲದ ಚಿಂತಾಮಣಿ ।
ಮರನಲ್ಲದ ಕಲ್ಪಲತಿಕೆ ಪಶುವಲ್ಲದ ಶ್ರೀ ॥
ಸುರಧೇನು ಬುಧರ್ಗೆ ವಂದಿಗೆ ।
ಪರಿಜನಕನವರತಮೀಗೆ ಲಕ್ಕುಮಾದೇವೀ ॥

ಲಕ್ಕುಮಾದೇವಿಯ ಮಗ ಚೌಡರಸ

ಪಿರಿಯ ಮಗಂ ಚೌಡರಸಂ ।
ವರವನಿತಾತತಿಗೆ ಕಂತು ವಿತರಣದೊಳ್ ಭಾ ।
ಸ್ಕರನ ಸುತನಣ್ಮನೆಡೆಯೊಳ್ ।
ಹರಿನಂದನನನ್ನನೆಂದೊಡೇವಣ್ಣಿಪುದೋ ॥
ಎರೆದಂಗಂ ಪೊರೆದಂಗಂ ।
ವರವಧುಗಂ ಚೌಡಭೂಪನೀವಸುಮತಿಯೊಳ್ ।
ಮರನಲ್ಲದ ಸುರತರು ವಾ ।
ನರನಲ್ಲದ ಹನುಮನತನುವಲ್ಲದ ಕಾಮಂ ॥

ಲಿಂಗವ್ವ ಸು. 1160.

ಈಕೆ ವಚನಗಳನ್ನು ಬರೆದಿದ್ದಾಳೆ. ಇವಳು ವೀರಶೈವ ಕವಿ; ಹಡಪದ ಅಪ್ಪಣ್ಣನ ಹೆಂಡತಿ.

---

1 ಈ ವಚನಗಳನ್ನು ಮು॥ ರಾ॥ ಹಲಸಂಗಿಯ ಚೆನ್ನಮಲ್ಲಪ್ಪನವರು ಪ್ರತಿಮಾಡಿ ಕಳುಹಿಸಿದ್ದಾರೆ.

ವಚನಗಳು

ಇವಳ ವಚನಗಳ ಸಂಖ್ಯೆ 87. ಇವುಗಳಲ್ಲಿ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ[1] ಎಂಬ ಅಂಕಿತವಿದೆ. ಒಂದು ವಚನವನ್ನು ತೆಗೆದು ಬರೆಯುತ್ತೇವೆ:—

ಮನವ ಗೆದ್ದೆನೆಂದು ತನುವ ಕರಗಿಸಿ ಕಾಯವ ಮಱುಗಿಸಿ ನಿದ್ದೆಯ ಕೆಡಿಸಿ ವಿದ್ಯೆಯ ಕಲಿತೆನೆಂಬ ಬುದ್ಧಿಹೀನರಿರಾ ನೀವು ಕೇಳಿರೋ. ನಮ್ಮ ಶರಣರು ಮನವನೆಂತು ಗೆದ್ದರೆಂದಡೆ ಕಾಮಕ್ರೋಧ ನೀಗಿ ಮೋಹಮದಮತ್ಸರವ ಛೇದಿಸಿ ಆಶೆರೋಷವಱಿದು ಜಗದ ವಾಸನೆಯ ಬಿಟ್ಟು ಆ ಮಱುಗಿಸುವ ಕಾಯವನೆ ಪ್ರಸಾದವ ಮಾಡಿ ಸಲಹಿದರು; ಕೆಡಿಸುವ ನಿದ್ರೆಯನೆ ಯೋಗಸಮಾಧಿಯ ಮಾಡಿ ಸುಖವನೇಡಿಸಿ ಜಗವ ಕದ್ದ ಶರಣರ ಬುದ್ಧಿಹೀನರೆತ್ತ ಬಲ್ಲರೊ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. (363ನೆಯ ಪುಟದಲ್ಲಿ ಒಂದು ವಚನವು ಉದಾಹೃತವಾಗಿದೆ.)

ಬಾಲಸಂಗಣ್ಣ ಸು. 1160

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವ ಕವಿ. ಇವನ ವಚನಗಳಲ್ಲಿ ಕಮತೇಶ್ವರಲಿಂಗ ಎಂಬ ಅಂಕಿತವಿದೆ. ಒಂದು ವಚನವನ್ನು ಉದ್ಧರಿಸಿ ಬರೆಯುತ್ತೇವೆ:—

ಏದಱಿಂದ ಕಾಣ್ಬುದು ಜೀವ; ಮೂಱಱಿಂದ ಕಾಣ್ಬುದು ಆತ್ಮ; ಇಪ್ಪತ್ತೈದಱಿಂದ ಕಾಣ್ಬುದು ಪರವು; ಮೂವತ್ತಾಱಱಿಂದ ಕಾಣ್ಬುದು ಚಿತ್ತ; ಒಂದಱಿಂದ ಕಾಣಿಸಿಕೊಂಬುದು ಚಿದಾನಂದ; ಚಿದಾನಂದವೆಂಬ ಆನಂದ ನಿಂದು ಸದಮಲಾನಂದ ತಾನಾದಲ್ಲಿ ಸದಾಸನ್ನದ್ಧವೆಂಬ ಆನಂದ ಹಿಂಗಿ ನಿಂದ ಉಱವೆ ಕಮತೇಶ್ವರಲಿಂಗವು ತಾನಾದ ಶರಣ. (363ನೆಯ ಪುಟದಲ್ಲಿ ಒಂದು ವಚನವು ಉದಾಹೃತವಾಗಿದೆ.)

ಮೂರೇಶ್ವರೊಡೆಯ ಸು. 1160

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ. ಇವನ

---

1 ಚೆನ್ನಬಸವಣ್ಣ ಎಂಬುದಕ್ಕೆ ಪ್ರತಿಯಾಗಿ ಚೆನ್ನಬಸವೇಶ್ವರ ಎಂದೂ ಇರುವಂತೆ ತಿಳಿಯುತ್ತದೆ. 363ನೆಯ ಪುಟವನ್ನು ನೋಡಿ.

ವಚನಗಳಲ್ಲಿ ಮೂರೇಶ್ವರ ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದಾಹರಿಸುತ್ತೇವೆ :—

ಊಡಿದಡುಣ್ಣದು, ಒಡನೆ ಮಾತಾಡದು, ನೋಡದು, ನುಡಿಯದು, ಬೇಡದು, ಕಾಡದು ; ಕಾಡಬೆರಣಿಯ ಕೈಯಲಿ ಕೊಟ್ಟು ಹೇಂಟಿದೆ ಹೋದೆಯೋ ಮೂರೇಶ್ವರಾ.

ಸತ್ಯದ ಹಿರಿಯರ ಕತ್ತಲೆ ಕಚ್ಚಿ ಹುತ್ತವನೇಱಿತ್ತಲಿಪ್ಪರಲ್ಲಾ. ಅಲ್ಲದ ಜೇಳೆನ ಜಲಕ್ಕೆ ಹೋಗಿ ಇವರೆಲ್ಲರೂ ಒಸೆದು ಕೆಟ್ಟರಲ್ಲಾ. ಇವರೆಲ್ಲರ ಕಾರ್ಯ ವಿಲ್ಲಿಯೇ ಉಳಿ'ಯಿತ್ತು ಲ್ಲವಬರಾರೊ ಮೂರೇಶ್ವರಾ.

ಪುಟ 360-361ರಲ್ಲಿ ಹೇಳಿರುವ ಕೆಲವರು ವಚನಕಾರರ ವಚನಗಳನ್ನು ಉದಾಹರಿಸುತ್ತೇನೆ. ಇವರೆಲ್ಲಾ ಬಸವನ ಸಮಕಾಲದವರು ಎಂದು ತೋರುತ್ತದೆ.

ಏಕಾಂತದ ರಾಮಯ್ಯ ಅಥವಾ ಏಕಾಂತರಾಮಿ ತಂದೆ. ಸು. 1160

ಇವನ ಅಂಕಿತವು ಎನ್ನಯ್ಯ ಚೆನ್ನರಾಮ ಅಥವಾ ಚೆನ್ನರಾಮೇಶ್ವರ ಲಿಂಗ. 360ನೆಯ ಪುಟದಲ್ಲಿ ಕೊಟ್ಟಿರುವ ಏಕಾಂತ ರಾಮೇಶ್ವರಲಿಂಗ ಎಂಬುದು ತಪ್ಪು.

ಅಶನ ವ್ಯಸನ ಸರ್ವವಿಷಯಾದಿಗಳಲ್ಲಿ ಹುಸಿದು ಪಿಸುಣತ್ವದಿಂದ ಗಸಣಿಗೊಂಡು ಮಾಡಿಸಿಕೊಂಬುದು ಸಂಬಂಧವಲ್ಲ. ತಿಲರಸವಾರಿಯ ಭೇದದಂತೆ ಮಣಿಯೊಳಗಿದ್ದ ಸೂತ್ರದಂತೆ ಅಂಗವ ತೀರ್ಚಿ ಪಾಯ್ದು ನಿಂದ ಅಹಿಯ ಅಂಗದಂತೆ ಸದ್ಗುರುಸ್ಥಲದ ಸಂಬಂಧ ಎನ್ನಯ್ಯ ಚೆನ್ನರಾಮೇಶ್ವರಲಿಂಗವನಱಿಯಬಲ್ಲಡೆ. (366ನೆಯ ಪುಟದಲ್ಲಿ ಒಂದು ವಚನವು ಉದಾಹೃತವಾಗಿದೆ.)

ಕನ್ನದ ಮೂರಿತಂದೆ. ಸು. 1160

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ ಎನಗೆ ಕತ್ತಿಯಕೊಟ್ಟ ಕರ್ತೃವಿಂಗೆ ಭಂಗ; ಅವರು ಮಹೆದಿರ್ದಲ್ಲಿ ಮಹೆಯ ಹೊಕ್ಕಡೆ ಎನ್ನ ಜೋರತನದ ಆಱಿಕೆ ಭಂಗ ; ಮಹೆದಿರ್ದವರ ಎಬ್ಬಿಸಿ ಅವರಿಗೆ ಅವರೊಡವೆಯ ತೋಱಿ ಎನ್ನೊಡವೆಯ ತಂದೆ ಮೂರನ ವೈರಿ ಮೂರೇಶ್ವರ.

ಪ್ರಸಾದಿ ಲೆಂಕಬಂಕಣ್ಣ. ಸು. 1160

ರೂಪನಱಿದು ರುಚಿಯನುಂಡು ಅವಱ ನಿಹಿತಂಗಳ ಕಂಡು ಮತ್ತೆ ಲಿಂಗಕ್ಕೆ ಅರ್ಪಿಸಿ ಪ್ರಸಾದ ಮುಂತಾಗಿ ಕೊಂಡಿಹೆನೆಂಬ ವರ್ತಕಭಂಡರ ನೋಡಾ. ಕಟ್ಟಿ ಹುಟ್ಟಿದ ರತ್ನಸುಗುಣ, ಅಪ್ಪು ತುಂಬಿದ ಮುತ್ತು, ಕಳೆ ತುಂಬಿದ ಬೆಳಗು, ಹೊಳವುದೋಱುವ ಸೂತ್ರ, ಲವಲವಿಕೆಯಿಲ್ಲದ ಚಿತ್ತ, ಇದಱಿ ಗುಣವನಱಿಯದ ಆತ್ಮ, ಇಂತಿವು ಫಲಿಸಬಲ್ಲವೇ? ಕ್ರಿಯೆಯನಱಿದು ಅರ್ಪಿಸಬೇಕು; ಅರ್ಪಿಸುವಲ್ಲಿ ದೃಷ್ಟಾಂತಸಿದ್ಧಿ ಪ್ರಸಿದ್ಧವಾಗಬೇಕು. ಕಾಣದವಗೆ ತಾ ಕಂಡು ಕುಱುಹಿನ ದಿಕ್ಕ ಱಱುಹಿತೋಱುವ ತೆಱನಂತೆ, ತಾ ಲಕ್ಷಿಸಿದಲ್ಲಿ ತಾ ದೃಷ್ಟಿಸಿದಲ್ಲಿ ತಾ ಮುಟ್ಟಿದಲ್ಲಿ ಅರ್ಪಿತವಾದ ಪ್ರಸಾದಿಯು ಕಟ್ಟು ದಹನಜಂಡಿಕೇಶ್ವರ ಲಿಂಗವು ತಾನಾದ ಚಿತ್ತ ದವನ ಮುಟ್ಟು.

ಮೈದುನ ರಾಮಯ್ಯ. ಸು. 1160

ಮಱಿಲಲ್ಲಿ ರಸವುಂಟೆ? ನೆಱಿಲಿಗೆ ತಡೆಯುಂಟೆ? ರಣದಲ್ಲಿ ತಪವುಂಟೆ? ನೇಹ ತಪ್ಪಿದಲ್ಲಿ ಮೋಹವನರಸಲುಂಟೆ? ಮಹಾಲಿಂಗ ಚೆನ್ನರಾಮ ಮನಮುರಿದ ಬಱಿ'ಕ ಕಂಗಳಿಗೆ ವಿಷವಯ್ಯ.

ಸಿದ್ಧಾಂತಿ ವೀರಸಂಗಯ್ಯ. ಸು. 1160

ಕ್ರಿಯೆಯಲ್ಲಿ ವಸ್ತುವಿಪ್ಪುದೆ ದಿಟ, ಆದಡೆ ಇನ್ನು ತಿಳಿದು ನೋಡಿದಲ್ಲಿ ವಸ್ತುವಿನಲ್ಲಿ ಕ್ರಿಯೆಯಿಪ್ಪುದೆ ದಿಟ; ಇಂತೀ ಉಭಯವ ತಿಳಿದು ನೋಡಿದಲ್ಲಿ ವಸ್ತುವಿಗೂ ಕ್ರಿಯೆಗೂ ಭಿನ್ನವುಂಟು. ಆದೆಂತೆಂದಡೆ ಸಕ್ಕರೆಯ ಕುಂಭವೆನಲೇಕೆ? ತುಪ್ಪದ ಕಂದಲೆನಲೇಕೆ? ಕಪ್ಪುರದ ಕರಂಡವೆನಲೇಕೆ? ಆ ವಸ್ತು ದೃಷ್ಟ ದಿಟವೆ. ಕುಂಭ ಸಕ್ಕರೆಯಲ್ಲ ಸಕ್ಕರೆ ಕುಂಭವಲ್ಲ; ತುಪ್ಪ ಕಂದಲಲ್ಲ ಕಂದಲು ತುಪ್ಪವಲ್ಲ; ಕರಂಡ ಕಪ್ಪುರವಲ್ಲ ಕಪ್ಪುರ ಕರಂಡವಲ್ಲ; ಅಱಿದ್ದ ವಸ್ತು ಹೋದಮತ್ತೆ ಉಪದೃಷ್ಟದ ಮಾತಡಗಿತ್ತು, ಒಣ್ಣಿವಿಲ್ಲದ ಮತ್ತೆ ಬಂಗಾರವೆಂಬ ಕುಱುಹುಂಟೆ? ಸಕ್ಕರೆ ತುಪ್ಪ ಕಪ್ಪುರ ಹೋದ ಮತ್ತೆ ಘಟವಲ್ಲದೆ ವಸ್ತುನಾಮವಿಲ್ಲ. ವಸ್ತು ವಸ್ತುಕದಂತೆ, ಘಟ ಆತ್ಮನಂತೆ, ಉಭಯಕ್ಕೂ ಭಿನ್ನವಿಲ್ಲದೆ ಸಿದ್ಧಿಯಾಗಿ ಆ ಸಿದ್ಧಿ ಪ್ರಸಿದ್ಧಿಯಾಗಿ ಆ ಪ್ರಸಿದ್ಧಿ ಪ್ರಸಂಗವಾಗಿ

ಆ ಪ್ರಸಂಗ ಆ ಪ್ರಸಂಗಕ್ಕೊಡಲಱಿತುದು ಗೋಳಾಕಾರ ವಿಶ್ವವಿರಹಿತ ಲಿಂಗವು ತಾನಾದುದು.

ಸೂಜಿಕಾಯಕದ ರಾಮಿತಂದೆ. ಸು. 1160

ಏತ್ವದಲ್ಲಿ ಸುಚ್ಚಿ ಓತ್ವದಲ್ಲಿ ತೆಗೆದು ಔತ್ವದಲ್ಲಿ ಒಡಗೂಡಿ ಕುರುಕಿನಲ್ಲಿ ಸುಱಿದು ಸೊನ್ನೆಯಲ್ಲಿ ಸಂಜ್ಞೆಗೆಟ್ಟು ಸೂಜಿಯ ಮೊನೆಯೊಡಗೂಡುವುದಕ್ಕೆ ಎರಡಿಲ್ಲ. ಇದನಾರು ಬಲ್ಲರು ? ಇಂತಿವನಾರಯ್ಯಬಲ್ಲಡೆ ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಬಲ್ಲವ.

ಸ್ಥೂಲಕ್ಕೆ ಮೂಱು, ಸೂಕ್ಷ್ಮಕ್ಕೆ ಎರಡು, ಕಾರಣಕ್ಕೆ ಒಂದೆಂದು ತಿಳಿದ ಮತ್ತೆ ನಾನಾಸಂದುಸಂದ ಹೊಲಿಯಲೇತಕ್ಕೆ ? ನಾಗಳಿಗೆಯ ಒಡಗೂಡಿ ದಳಿದು ಮುಗಿದ ಮತ್ತೆ ಹೊಲಿವ ತಾನೇಕವಾದ ಮತ್ತೆ ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವನೊಡಗೂಡುವನಿರವು.

ಉಗ್ಗಡಿಸುವ ಬಿಬ್ಬಿದೇವಯ್ಯ[1]. ಸು. 1160

ಈತನು ವಚನಗಳನ್ನು ಬರೆದಿದ್ದಾನೆ ಇವನು ವೀರಶೈವಕವಿ. ಇವನ ವಚನಗಳಲ್ಲಿ ಕೂಡಲ ಸಂಗಮದೇವರಲ್ಲಿ ಬಸವಣ್ಣ ಎಂಬ ಅಂಕಿತವಿದೆ. ಕೆಲವು ವಚನಗಳನ್ನು ತೆಗೆದು ಬರೆಯುತ್ತೇವೆ:—

ಜೀವನ ಬಾಗಿಲಲ್ಲಿ ಭ್ರಮೆಯ ತಡೆದು ಆತ್ಮನ ಬಾಗಿಲಲ್ಲಿ ಪ್ರಕೃತಿಯ ತಡೆದು ಪರಮನ ಬಾಗಿಲಲ್ಲಿ ಚಿತ್ತವ ತಡೆದು ಮಿಕ್ಕಾದ ವಾಯುಗಳ ದೆಸೆಯಿಂದ ಇಂದ್ರಿಯಂಗಳಂ ತಳಿದು ಇಂತೀ ಜೀವಾತ್ಮಪರಮತ್ರಿವಿಧಗುಣಂಗಳಂ ತಲೆದೋಱಿದೆ ಕರ್ಮೇಂದ್ರಿಯ ಭಾವೇಂದ್ರಿಯ ಜ್ಞಾನೇಂದ್ರಿಯ ಇಂತೀ ತ್ರಿವಿಧ ಸ್ವಾನುಭಾವದಲ್ಲಿ ಅಡಗಿ ಓಂಕಾರದ ಉಲುಹು ನಷ್ಟವಾಗಿ ಷಡಕ್ಷರ ಪಂಚಾಕ್ಷರ ಮೂಲದ ಉಭಯದ ವೊಳೆ ಮುಱಿದು ಐವತ್ತೊಂದು ಭೇದದ ಸೂತಕದ ಸುಟ್ಟುಪಡಗಿ ಹಿಂದಣ ಮುಂದಣ ಎಚ್ಚಱಿಕೆ ಸಮುಖ ತಿರುಗಱಾಗೆನುತಿದ್ದೆನು ಕೂಡಲಸಂಗಮದೇವರಲ್ಲಿ ಬಸವಣ್ಣನ ಮುಂದಣ ಎಚ್ಚಱಿಕೆ ಕುಂದದಂತೆ ಉಗ್ಗಡಿಸುತಿದ್ದೆನು.

---

1 ಗಬ್ಬಿ ದೇವಯ್ಯ ಎಂದೂ ಇರುವಂತೆ ತೋರುತ್ತದೆ.

ರಾಮದೇವ. 1187.

ಈತನು ವಿಜಾಪುರಜಿಲ್ಲೆ ಇಂದಗಿತಾಲ್ಲೂಕು ಕಲಕೇರಿ ಗ್ರಾಮದ ಮಲ್ಲಯ್ಯದೇವರ ಗುಡಿಯ ಒಳ ಬಲಕ್ಕೆ ಇರುವ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಸಲೆ ಶಂಕರನಾರಾಯಣ । ಪೊಲಿಸನ ಕಾರುಣ್ಯದಿಂದೆ ಈ ಶಾಸನಮುಂ ।
ಸುಲಲಿತವಾಗಿರೆ ಮುದದಿಂ । ಕಲುಕೆಮ್ಮಡಿ ಕುಲಜನೈದಿ ಬರೆದಂ ಪೇಳ್ದಿಂ ॥

ಎಂಬ ಪದ್ಯದಿಂದ ತಿಳಿದುಬರುತ್ತದೆ. ಈ ಶಂಕರನಾರಾಯಣರತನವನ್ನು ಕುರಿತು ಇನ್ನೊಂದು ಮತ್ತೊಬ್ಬ ಶಾಸನಕವಿ ಸುಮಾರು 1180ರಲ್ಲಿ ಹಾಡಿರುವ ಪ್ರಶಸ್ತಿಯು ಪುಟದ 276ನೆಯ ಪುಟದಲ್ಲಿ ಹೇಳಿದೆ. ಇವರಿಬ್ಬರೂ ಒಬ್ಬರೇ ಅಥವಾ ಬೇರೆಯವರೂ ಎನ್ನುವುದು ತಿಳಿಯದು. ಕಲಕೇರಿ ಶಾಸನದಲ್ಲಿ ಹೆಗರಿಟಿನಾಡನ್ನಾಳುತ್ತಿದ್ದ ಪಂಪರಾಜನ ಕಾಲದಲ್ಲಿ ಶಕ 1109ನೆಯ ಪ್ಲವಂಗ ಸಂವತ್ಸರದಲ್ಲಿ (1187) ಸೇನಬೋವ ಕಾಳಿದಾಸನಿಂದ ನಿರ್ಮಿತವಾದ ಅಶ್ಮತಟಾಕವೆಂಬ (ಕಲುಕೆರೆ) ಅಗ್ರಹಾರದ ಮುನ್ನೂರ್ವರು ಬ್ರಾಹ್ಮಣರೊಳಗೆ ರೇಚಿಭಟ್ಟನು ಅನ್ನಸತ್ರವನ್ನು ಏರ್ಪಡಿಸಿದನು ಎಂದು ಅಶ್ಮತಟಾಕದ ಪ್ರಧುಗಳು ಅದಕ್ಕೆ 10 ಮತ್ತರು ಭೂಮಿಯನ್ನೂ ಅಡುಗೆಮನೆಯೊಂದನ್ನೂ ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆದುತ್ತೀವೆ :—

ಕಲಕೇರಿಯ ಮುನ್ನೂರ್ವರು ಬ್ರಾಹ್ಮಣರು.

ಮನುವಂ ಚಾರಿತ್ರದೊಳ್ ವಾಕ್ಪತಿಯಸತಿಶಯಂ ಬುದ್ಧಿಯೊಳ್ ಸೋದರಂ ಬೆ ।
ಣ್ಪಿನೊಳಾಜಂಭಾರಿಯಂ ಭೋಗದೊಳಸುಗಸಂ ಧೈರ್ಯದೊಳ್ ಪಾರ್ಥಿಯಂ ಗು ॥
ಣ್ಪಿನೊಳಂಭೋಜಾರಿಯಂ ತಣ್ಪಿನೊಳತಿಪೃಥುವಂ ಪೊಲ್ಲರೆಂದೆಂದುಮಿರ್ದ್ದ ।
ಜ್ಜನಮೀ ಮುನ್ನೂರ್ವರಂ ಒಣ್ಪಿಕುಮತಿಶಯಮುಂ ಸಂತತೋತ್ಸಾಹದಿಂದಂ ॥

ಪತತಾಳಾಪದೊಳೇನೊ ನಾಲ್ಕುಮುಖದಿಂದಂ ಬ್ರಹ್ಮಭಟ್ಟಾರಕಂ
ಶ್ರುತಿವಾರಂಗತನಾದನೊಂದೆ ಮುಖದಿಂದಂ ನಾಲ್ಕು ವೇದಂಗಳಂ ॥
ಸ್ಮೃತಿಯಂ ಕಾವ್ಯಪುರಾಣನಾಟಕಕಳಾಸಂಪತ್ಕರಂ ತಾಳ್ದಿತಾಂ ।
ಪಿಕನಿಂದಂ ಮಿಗಿಲಂ ಚರಿತ್ರಶಶಿಪ್ರಭಾ ಮುನ್ನೂರ್ವರಂ ಗಣಾ ॥ 1

---

1. ಈ ಶಾಸನದ ಪ್ರತಿಯನ್ನು ಶ್ರೀಮಾನ್ ಹಲಸಂಗಿ ಚೆನ್ನಮಲ್ಲಪ್ಪನವರು ಕಳುಹಿಸಿ ಕೊಟ್ಟಿದ್ದಾರೆ.

ಬೆಡಗಿನ ಸೋಮನಾಥಪಂಡಿತ. 1190.

ಇವನು ವಿಜಾಪುರಜಿಲ್ಲೆ ಇಂಡಿತಾಲ್ಲೂಕು ಹಿರಿಯಬೇನೂರಲ್ಲಿರುವ ಒಂದು ಶಾಸನವನ್ನು ಬರೆಮಡಾಗಿ ಆ ಶಾಸನದ "ಸಾಸನನ ಪೇಲಿದ್ದ ಬೆಡಗಿನ ಸೋಮನಾಥಪಂಡಿತಗ್ಗೆ ನೂಮ ಮಸೆರಂ" ಎಂಬ ಭಾಗದಿಂದ ತಿಳಿಯುತ್ತದೆ. ಸೋಮನಾಥಪಂಡಿತನೆಂಬ ಮತ್ತೊಬ್ಬ ಶಾಸನಕವಿ 1231 ರಲ್ಲಿ ಇದ್ದಂತೆ ಪ್ರಥಮಸಂಪುಟದ 352ನೆಯ ಪುಟದಿಂದ ತಿಳಿಯುತ್ತದೆ. ಇದರಿ ಇವರಿಬ್ಬರೂ ಬೇರೆ ಬೇರೆ ಕವಿಗಳಾಗಿರಬಹುದೆಂದು ತೋರುತ್ತದೆ. ಹಿರಿಯಬೇನೂರು ಶಾಸನದಲ್ಲಿ ಸೇವುಣರಾಜನಾದ ಭಿಲ್ಲಮನ ಮಂತ್ರಿ, ಮಾಯಿದೇವನ ಆಜ್ಞಾನುಸಾರವಾಗಿ ಬೊಪ್ಪಣನಾಯಕನ ಪತ್ನಿ ಸಂದೇವಿ ಎಂಬ ತಿರುಕನಿಡುವೊಂದು ಸೋಂಪಿಯುಂಟೆನೆ ಕೇಳ್ದು' ಬೇವಿನೂರಲ್ಲಿ ಫಲವೃಕ್ಷಗಳ ವನವನ್ನು ಮಾಡಿಸಿ ಅಲ್ಲಿ ಧರ್ಮಸಂತೆ ನೆರೆವಂತೆ ಏರ್ಪಾಡುಮಾಡಿರಲು ಶಕ 1112 ನೆಯ ಸಾಧಾರಣವರ್ಷದಲ್ಲಿ (1190) ಮಾಯಿದೇವನು 'ಸಂತೆಯುಮಂ ವನಸ್ಪತಿಯುಮುಂ ಸರ್ವಾರ್ಥಮುಂ ಮಾಡಿದಂ' ಎಂದು ಹೇಳಿದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಭಿಲ್ಲಮ.

ಜೋಳಾಂಭೋರಾಶಿಯೌರ್ವಾನಳನಸಿತತುರುಷ್ಕಾದ್ರಿಸಂಘಾತವಜ್ರಂ !
ಗೌಳಾಂಭೋದಾಳಿಕುಂಭಾನಿಳನತುಳಬಳಂ ಗೂರ್ಜರೇಭೇಂದ್ರಸಿಂಹಂ ॥
ಕಾಳಿಂಗಾನಂಗಗೌರೀವಂನೆನಿಪೆಸಕಂದಾಳ್ದಿದೀ ಭಿಲ್ಲಮೋರ್ವೀ ।
ನಾಳಂಗಾರ್ಪಾಟಿ ಚಕ್ರೇಶ್ವರರೆನಲೆಸೆವಂ ಬಣ್ಣಿಸಲ್ ಬಲ್ಲನಾವಂ ॥

ಮಾಯಿದೇವ

ಬಿಸರುಹದಿಂ ಕೊಳಂ ನಿತಿ ನಿಶಾಧಿಪನಿಂ ದಿನನಾಥನಿಂದಮಾ ।
ಗಸಮಮರೇಂದ್ರನಿಂ ದಿವಿಜಸಂತತಿ ಕೇವಣದಿಂದೆ ಮಾಣಿಕಂ ॥
ವಸುಮತಿಯಲ್ಲಿ ಶೋಭಿಸುವವೊಲ್ ನೆಗಳ್ದ ಯಾದವರಾಜ್ಯಲಕ್ಷ್ಮಿ ಶೋ ।
ಭಿಸುವುದು ಮಾಯಿದೇವರಥಿನೀಶ್ವರನಿಂದೆನಲೇನ ಬಣ್ಣಿಪೆಂ ॥

ಬೊಪ್ಪಣ

ನು ದೇವಸಭೆ ಪಂಕಜಮಿರ್ದ [illegible]ಚಪಂಡಮಾ ।
ಸು [illegible]ವನಂ ಹರಿಯಿರ್ದಮೃತಾಬ್ಧಿಯೊಪ್ಪುವಂ ॥

ತಿರೆ ನೃಪಮೇರು ಭಿಲ್ಲಮನಮಾತ್ಯತಿಲಾಮಣಿ ಮಾಯಿದೇವನಾ ।
ದರಿಸುವ ಮಂತ್ರಿ ಬೊಪ್ಪಣಜಮೂಪತಿಯಿರ್ದಿಡೆಯಂತಿರೊಪ್ಪುಗುಂ ॥

ಬೇವಿನೂರು

ಪಲವುಂ ವೇದದ ಶಾಸ್ತ್ರದಾಗಮದ ವಿದ್ಯಾಭ್ಯಾಸವಿಪ್ರಕ್ಕಳಿಂ ।
ದಳಿಯಿಂ ಕೋಗಿಲೆಯಿಂ ಶುಕಪ್ರತತಿಯಿಂ ಪೌಡೈಕ್ಕುದಂಡಂಗಳಿಂ ॥
ದಲರ್ದಂಭೋರುಹಷಂಡದಿಂ ಪಲವುಮುದ್ಯಾನಂಗಳಿಂ ಶಿಷ್ಯಸಂ ।
ಕುಳದಿಂದೊಪ್ಪುವ ಬೇವಿನೂರಿಗಿದೊರೆಯೋ ಭೂಲೋಕದೊಳ್ ಪಟ್ಟಣಂ ॥

ಫಲಶ್ರುತಿ

ಊರೊಡೆಯರಕ್ಕೆ ಮನ್ನೆಯ ।
ರೂರಾಳ್ವವರಕ್ಕೆ ನಾಡ ಕೊಂಡೆಯರಕ್ಕಂ ।
ತಾರಾದೊಡನೀಧರ್ಮವು ।
ಸೋರಂತಿರೆ ಕಿಡಿಸಿದವರಘೋರಗತಿಗಿಚ್ಚಿಪಂ ॥

ಆದೇ ತಾಲ್ಲೂಕು ಸಾಲೋಟಗಿಯಲ್ಲಿ ಹೊಲೆಯರ ಚಾವಡಿಯ ಗೋಡೆಗೆ ನಟ್ಟಿರುವ ಶಾಸನವನ್ನೂ ಈ ಕವಿಯೇ ಬರೆದಿರಬೇಕೆಂದು ತೋರುತ್ತದೆ. ಏಕೆಂದರೆ—ಬೇವಿನೂರು ಶಾಸನದ ಪದ್ಯಗಳಲ್ಲಿ ಕೆಲವು ಈ ಶಾಸನದಲ್ಲಿಯೂ ದೊರೆಯುತ್ತವೆ. ಅಲ್ಲದೆ ಒಂದು ಶಾಸನದಲ್ಲಿ ವರ್ಣಿತರಾದ ವ್ಯಕ್ತಿಗಳೇ ಮತ್ತೊಂದರಲ್ಲಿಯೂ ವರ್ಣಿತರಾಗಿದ್ದಾರೆ. ಈ ಶಾಸನದ ಕಾಲವೂ (1187) ಬೇವಿನೂರು ಶಾಸನದ ಕಾಲಕ್ಕೆ ಬಹಳ ಸಮೀಪವಾಗಿದೆ.

ಸಾಲೋಟಗಿಯ ಶಾಸನದಲ್ಲಿ ನೇವುಣರಾಜನಾದ ಭಿಲ್ಲಮನ ಸಾಮಂತ ಬಂದರಸನು ಶಕ 1110 ರಲ್ಲಿ (1187) ರಾಜಧಾನಿ ಪೌತಗೆಯ ಘೋಗೇಶ್ವರ ದೇವರಿಗೆ ಮೂವುಲಗನೂರನ್ನು ಬಿಟ್ಟಂತೆ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಬಂದರಸನ ತಂದೆ ಗೋವಣ.

ಅಂತೊಡೆ ಕೊಂದನೆಂದೆ ಬಗೆ ಶತ್ರುಸಿಕಾಯಮನರ್ಥಿ ಬಂದು ಕ ।
ಯ್ಯಾಂತೊಡೆ ಕೊಟ್ಟನೆಂದೆ ಬಗೆ ಬೇಡಿದಪ್ಪುದನಂಜಿ ಶರಣ್ಗೆ ವಂದರ ॥
. ಂತಿಯೆ ಕಾದನೆಂದೆ ಬಗೆ ವೀರದ ತ್ಯಾಗದ ಕಾವ ಪೆರ್ಮೆಗಾ ।
ವಂ ತೊಣೆಯೆಂದು ಒಣ್ಪಿಪುವು ಧಾರಿಣಿ ಗೋವಣಮಂಡಳೇಶನಂ ॥

ಬಂದರಸ (ನರಿಯೋಡೆ ಗಂಡ)

ಬಂದೊಂದರ್ಕಾಸ್ತ್ರಸೋಪೇತಮುಂ ರಿಪುತಿರೋವ್ರಾತಂಗಳಂ ಪೊಯ್ಯೆ ಒಂ ।
ದಂಬಾಕಾಕನಿಷೇವ್ಯಬಾಹುಪೂಳೆ ಬೀಲಿಲ್ ಸಿದ್ಧಮುಗ್ಧಾಂಗನಾ ॥
ಸಂಬೆಂಬೀಸಮ ಮಪೀಜಮೆಂದೆ ತಿಳಿಯಲ್ ಸಾರ್ದೆಯ್ದೆ ಭೀತತ್ವದಿಂ ।
ಸಿಂದಿದ್ದಾರ್ ನಗುಗೆಡಿಳ್ ಸಿರೀಕ್ಷಿಪ ಪುರಗ್ಗರ್ದಂ ಹಾಸ್ಯಮಪ್ಪನ್ನೆಗಂ ॥
ಹಗೆವಗಕ್ಕೆಟ್ಟ ಜಳಮುಮಂಗಿರ ಪಂದಲೆ ರಕ್ತಪಂಕಜಂ ।
ಸೊಗಯಿಪ [illegible] ಶಪಥಂ ಕರುಳೂಳಿ ಮೃಣಾಳಮಾಗೆ ದಿ ॥
ಟ್ಟಿಗೆ ನೆರೆಬಿಂಕಾಲೆಗಂಡನಡಟಿಂದಮೆ ಸಿಲ್ದ ಮಹಾಹವಾಂಗಣಂ ।
ನಗುವಂತೊಪ್ಪಿದ ನೆಯ್ದೆ ಕಮಳಾಕರಮುಂ ದಿಟಿದಿಂ ವಿಚಿತ್ರಮೋ ॥
ಫಣಿಭುಜಾಲಿಲ್ಲಿಯುಂದೆ ವಿಜಯಾಂಗನೆ ನರ್ತಿಪ ನಾಟ್ಯಶಾಲೆ ಭೂ ।
ವನುತನೆಂದಿ ವಿತಂಗಿಗೆ ಮುಟ್ಟಾಂಬುಜಸೊಳ್ಪಿನ ಚಿತ್ರಶಾಲೆ ಮಾಂ ॥
ತನಸಿರಿ [illegible] ಗೋಶಾಲೆಯೆನಲ್ಕೆ ಬಂದಭೂ ।
ವನಪೇಂದ್ರಂ ನಿಜಕಿರ್ತಿ ಮಂಗಳಪತಾಕಾಳಿಗೊಂಡನಾವನೋ ॥

ಬೊಪ್ಪಚಮೂಪ.

ಅಳೆದಿಕ್ಕಂ ಬಿ[illegible]ಭಾಮುಬಾಹನೆಣಿಸಿತ್ತಂ ತೂಕರಿಂದಿತ್ತನಿಂ ।
ತಳಿಸಿಂದಂ ಬಲ[illegible]ನ್ನಸಂ) ಪಟಿದು ಜನ್ಮಂ ಬೋಳ್ಪುದಂ ಬೇಟ್ಟಿವ ॥
ಗ್ಗಳಿಕೆಯ [illegible] ಪಿಲ್ಲ ತೊಗನನಿದಾರ್ಯಂ ಕೊಟ್ಟಪಂ ನೋಡೆ (ಪೊಂ) ।
ಗಳನಗ್ಗಾಧಿಪ [illegible] ಪೆಡಿಪ್ಪಣಚಮೂಪಂಗಾರ್ ಸಮಂ ಬಾಸಿಗಳ್ ॥

ಜಿಕೆಯ.

ಮಸೆಗಲ್ಲರ್ ಸೊಸೆಗಲ್ಲರಿಗಳನ ಸೆನಾನಿಲಯಕ್ಕರ್ ಭಾವಿಸಲ್ ।
ಮನೆಯೆಂಬಿಳ್ ಕ್ಷಿಪ್ರಬಾಣಚತದಂತೆ ಕುಡಲುಂ ಮಾಣಲಾಂತರಂ ಕೊಪದಿಂ ॥
ಮೊನೆಯೆಂಬಿಳ್ ನಾಗ ಕ್ಷತಾಂಗನಂತೆ ಕೊಲಲುಂ ಶ್ರೀಬಂದಿಗಕ್ಕೊಣೆಪಾ ।
ಧನ ಚಕ್ರಪ್ರಿಯ ಲಂತ್ಯಪಾಳಕನೆನಿಪ್ಪೀ ಯೂಚಿಯುಂ ಸಾಲನೇ ॥[1]

---

1. ಈ ಎರಡು ಕಾಲನಗಳ ಪ್ರತಿಗಳನ್ನೂ ಶ್ರೀವರ್ಮ ಹಲಸಂಗಿ ಚೆನ್ನಮಲ್ಲಪ್ಪನವರು ಕಳುಹಿಸಿಕೊಟ್ಟಿದ್ದಾರೆ.

ಕವಿಪದ್ಮ. 1395.

ಈತನು ದೇಲೂರು 323ನೆಯ (ಹಾಸನದ ಡಿಸ್ಟ್ರಿಕ್ಟ್ ಶಾಸನಗಳ ಅನು ಬಂಧ) ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಸರಸಕವಿತುಂಗನೆನಿಸಿದ । ವರಕವಿಪದ್ಮಂ . . . ನಿಷಿದಿಗೆ ಪದ್ಯಂ ।
ಬರೆದು ಪರೋಕ್ಷದ ಪದನಂ । ವಿರಚಿಸಿ ಜಿನಸಭೆಯೊಳಗ್ರವೂಜೆಯ ಪಡೆದಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಇವನು ಜೈನಕವಿ. ಈ ಶಾಸನದಲ್ಲಿ ವರ್ಧಮಾನಮುನಿಧಾರಿಗಳು 1395 ರಲ್ಲಿ ಸ್ವರ್ಗಸ್ಥರಾಗಲು ದೋರಸಮುದ್ರದ ಭವ್ಯ ಜನಗಳು ಅವರ ನಿಷಿಧಿಯನ್ನು ಮಾಡಿಸಿದರು ಎಂದು ಹೇಳಿದೆ. ಶಾಸನದ ಅಕ್ಷರಗಳು ಸವೆದು ಹೋಗಿರುವುದರಿಂದ ಸರಿಯಾಗಿ ಪದ್ಯಗಳನ್ನು ಉದಾಹರಿಸಲು ಅವಕಾಶವಿಲ್ಲದಂತಿದೆ. ಒಂದು ಪದ್ಯವನ್ನು ಬರೆದು ತೋರಿಸುತ್ತೇವೆ :—

ಕರಸಿ ಸಮಸ್ತ . . . . . ಯುಕ್ತರಂ ಜನ(ಂಗಳ)ಂ ।
ನೆರಪಿ ಪರಿಗ್ರಹಂಗಳಿನಿಸ . . . . . ಚಿತ್ತದೊಳ್ ॥
ದರಿಸಿ ಜಿಸೇಂದ್ರನಂ ಜಿನಸಮಾನ ನಿಜಾತ್ಮ . . . . . ।
. . ವರವರ್ಧಮಾನಮುನಿ ಪೊಕ್ಕನನಿಂದಿತ (ನಿಂದ್ರಲೋಕಮುಂ) ॥

ದೇವಪ್ಪ ಸು. 1635

ಇವನು ರಾಮನಿಜಯಚರಿತೆಯನ್ನು ಬರೆದಿದ್ದಾನೆ. ಈತನು ಜೈನ ಕವಿ, ಭೂಸುರವಂಶೋದ್ಭವಂ ಎಂದು ಹೇಳಿಕೊಂಡಿದ್ದಾನೆ; ಈತನ ಪಿತಾಮಹನು ಹೊಯ್ಸಳದೇಶದಲ್ಲಿಯ ಚಂಗನಾಡವೊಳಲ ಸಚಿವಶಿರೋಮಣಿ ದೇವಪ್ಪ; ತಂದೆ ಬುಕ್ಕರಸ. ತನ್ನನ್ನೂ ಸಚಿವದೇವಪ್ಪಂ ಎಂದು ಹೇಳಿಕೊಳ್ಳುತ್ತಾನೆ; ಅವ ಪ್ರಭುವಿನಲ್ಲಿ ಸಚಿವನಾಗಿದ್ದನೋ ತಿಳಿಯದು.

ಪೂರ್ವಕವಿಗಳನ್ನು ಸ್ತುತಿಸುವಲ್ಲಿ ಪಜಯಣ್ಣನ (1448) ಹೆಸರನ್ನು ಹೇಳುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನಾಗಿರಬೇಕು. ಗುರುಗಳನ್ನು ಸ್ತುತಿಸುವಾಗ 3ನೆಯ ಮುಂಗರಸನಂತೆ (1508) ಪ್ರಭೇಂದುಶ್ರುತಮುನಿಗಳ ಹೆಸರುಗಳನ್ನು ಹೇಳಿ ಮುಂದಕ್ಕೆ ಏಮುಲಕೀರ್ತಿಯ ಹೆಸರನ್ನೂ ಹೇಳುವುದರಿಂದ ಮುಂಗರಸನ ಕಾಲಕ್ಕಿಂತ ಸ್ವಲ್ಪ ಈಚೆಯವನಾಗಿರಬಹುದೆಂದು ತೋರುತ್ತದೆ; ಸುಮಾರು 1525ರಲ್ಲಿ ಇದ್ದಿರಬಹುದು.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸುತ್ತಾನೆ:—

ಗಜಗನ ಗುಣವರ್ಮನ ಶಾಂತಿವರ್ಮನ । ವಿಜಯನ ಪೊನ್ನನಗ್ಗಳನ ।
ಸುಜನೋತ್ತಂಸ ರನ್ನರ ಮಧುರಮನ । ಸಿಜರಿವರ ಸ್ತುತಿಸುವೆನು ॥

ಅಲ್ಲದೆ ಆದಿಪಂಪನನ್ನೂ, "ಸುಟ್ಟುಕಾದಂಬರಿಯನು ಲೀಲಾವತಿ । ಗಿಟ್ಟು ಕಪ್ಪನು ಲೋಕವಜೆಯೆ । ದಿಟ್ಟವಾದಿಯ ಗೆಲ್ದ" ನೇಮಿಚಂದ್ರನನ್ನೂ, "ಚಂದದ ಮೃದುಬಂಧದ ಮೈಸಿರಿಯೊಡ । ನೊಂದಿದ ಸವಿನುಡಿಯಿಂದ । ಅಂದವಡೆದ ಕಾವ್ಯ ವನುಸುರಿದ" ನಾಗಚಂದ್ರನನ್ನೂ ಹೊಗಳಿದ್ದಾನೆ. ತನ್ನ ಕವಿತಾಚಾತುರಿಯನ್ನು ರಸಿಕರು ಹೀಗೆ ಸ್ತುತಿಸಿದರು ಎಂದು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ತಿಂಗಳ ತಣ್ಗದಿರ್ಗೊಂಗಲ ಸಿರಿಯಂ । ತಿಂಗಡಲಿನ ರಸದಂತೆ ।
ರಂಗುವಡೆದ ಮಾಣಿಕದ ಮಂಜರಿಯು ದೆ । ಡಂಗಿನಂತಿವೆ ನಿನ್ನ ಮಾತು ॥
ಕೆಂಬರಲಿನ ತೊಡವನು ಬಿರಿಮುಗುಳ ತೊ । ಡಂಜೆಯನಂಬುಜಾಕ್ಷಿಯರ ।
ಕಂಬುಕಂಧರದಾಲಿಂಗನವನು ಮಾಡು । ಗೊಂಬವೊಲಿವೆ ನಿನ್ನ ಮಾತು ॥
ಒಸರುವ ಸುಧೆಯ ಕೊಡನೊ ಮುನಿದಗಲಿದ । ಸಸಿವದನೆಯ ಕೂಟದಿರವೊ ।
ಪೊಸಜವ್ವನೆಯ ಬೀಟದ ಸುಗ್ಗಿಯಂತೆ ಸಂ । ತಸವೀವುತಿವೆ ನಿನ್ನ ಮಾತು ॥
ಕೋವಿದರುಗಳ ಹೃತ್ಕಮಲಭಾಸ್ಕರ ವಾ । ಗ್ದೇವಿಯ ಮುಖಮಣಿಮುಕುರ ।
ಭಾವಕರುಗಳ ಸಂತಸಸಾಗರಮಿತ್ರ । ದೇವಪ್ಪನೊರೆದ ಸತ್ಕಾವ್ಯ ॥

ಇವನ ಗ್ರಂಥ

ರಾಮವಿಜಯ ಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 19, ಪದ್ಯ 3663. ಇದರಲ್ಲಿ ಜೈನಸಂಪ್ರದಾಯದ ಪ್ರಕಾರ ರಾಮಾಯಣದ ಕಥೆ ಹೇಳಿದೆ. ರಾವಣವಧಾನಂತರ ಶ್ರೀರಾಮನು ಅಯೋಧ್ಯೆಗೆ ಬಂದು ಕೆಲವುಕಾಲ ರಾಜ್ಯಭಾರಮಾಡಿ ಬಳಿಕ ತನ್ನ ಕಿರಿಯಮಗನಿಗೆ ಪಟ್ಟವನ್ನು ಕಟ್ಟಿ ತಾನು ವಿರಕ್ತನಾಗಿ ತಪಸ್ಸು ಮಾಡಿ ಮುಕ್ತಿಯನ್ನು ಪಡೆದನೆಂದು ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಅನಂತರ ಕವಿ ಸಿದ್ಧಾದಿಗಳು, ಸರಸ್ವತಿ ಇವರನ್ನು ಸ್ತುತಿಸಿ, ಬಳಿಕ ಪೂಜ್ಯಪಾದ, ಅಕಳಂಕ, ಸಮಂತಭದ್ರ, ಕೊಂಡಕುಂದ, ಚಾರುಕೀರ್ತಿಪಂಡಿತ,

ಪ್ರಭೇಂದುಮುನಿ, ಶ್ರುತಮುನಿ, ವಿಮಲಕೀರ್ತಿ ಎಂಬ ಗುರುಗಳನ್ನು ಹೊಗಳಿದ್ದಾನೆ. ಸಂಧಿಗಳ ಕೊನೆಯಲ್ಲಿ ಈ ಪದ್ಯವಿದೆ :—

ಇದು ಸರಸ್ವತಿಯಂಗಭೂಷಣ ಕೇಳ್ವರ ಹೃದಯಕಮಲದಿವಸೇಂದ್ರ ।
ಇದು ರಸಿಕರ ಕಿವಿಗಮೃತರಸಾಯನ । ವಿದು ಭವ್ಯಕುಮುದಚಂದ್ರಮನು ॥

ಇವನ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಉದ್ಯಾನ

ಬಲಗಸಾಲೆ ವೂಗಿಗಗಳೋಕೆಗೆ ಜೇನ । ಸಾಲೆಯಂಗಜಗೆ ಜೀವಣದಾ ।
ಸಾಲೆಯಾಉಡಿಗೆ ತಂಜೆಲರಿಗೆ ನಾಟ್ಯದ । ಸಾಲೆಯಂತೆಸೆದುದಾರಾಮ ॥

ಹಲಸು

ಅಲರಬಲಿ'ಯೊಳು ಫಲವನಿತ್ತು ಬಾಬುವ । ತರುಗಳು ಸರಿಯಲ್ಲವೆಂದ
ಅರಗಿಳಿಯಿಂ ನುಡಿಸುತ ಬಕ್ಕೆವಲಸಿನ । ಮರಗಳೆಸೆದುವಂದದಲಿ ॥

ಸ್ತ್ರೀವರ್ಣನೆ

ಅಸಿಯನಡುವಿನ ನಿಟ್ಟಿಸಲುಗಂಗಳ ವೊಚ್ಚ । ವೊಸಜವ್ವನದ ಮುದ್ದುಮೊಗದ ।
ಸಸಿಗೆಜೆದುಟಿಯಂಜೆಗಮನದ ಪೆಣ್ಣುಗ । ಳಿಸೆದಿಹರಾದೇಶದೊಳು ॥
ಸಣ್ಣನಡುವಿನೆಳಮಿಂಜ ನಗುವ ನಗು । ಗಣ್ಣಸಂಜೆಯಕೆಮ್ಮುಗಿಲಾ ।
ಬಣ್ಣವನಿಬಿ'ಕ್ಕೈವ ರಂಗದುಟಿಯ ಮುದ್ದು । ವೆಣ್ಣಲ್ಲದಿಲ್ಲವಡೆಂಬೊಳು ॥

ರಾವಣನ ಪ್ರಲಾಪ

ಕದಪಿನ ನುಣ್ಪ ಕನ್ನಡಿಗೆ ಚಂದ್ರಗೆ ನಿನ್ನ । ವದನದಿರವ ಕೋಗಿಲೆಗೆ ।
ಮೃದುಮಧುರಾಲಾಪವನಿತ್ತುವಂಚಿಸಿ । ಸುದತಿ ನೀವೋಪುದುಚಿತವೆ ॥
ಕೆಂಬಲ್ಲ ಕಡುಗಾಂತಿಯ ಕಾಂತೆ ರಸದಾ । ಳಿಂಬದ ಬಿತ್ತಿಗೆ ಕೊಟ್ಟು ।
ಕಂಬುಗೆ ನಿನ್ನ ಕೊರಲ ಸೊಬಗಿತ್ತೆನ್ನ । ಪಂಬಲ ಬಿಡುವುದುಚಿತವೆ ॥
ಮಾ ತೊಂಡೆಯಧರಗಳಿಗೆ ಕುರುಳುಗಳ । ಕಡುಗಾಂತಿಯ ಮೆಲ್ಲಳಿರವ ।
ಕಾಡುವನ್ನನ ಕೈಯು ನಿನಿಸವಮಾಲೆಗೆ । ತಡೆಯದೆ ಕೊಡುವುದುಚಿತವೆ ॥

ದುರ್ಜನನು

ಒಡಲೊಳು ಜನಿಸಲವನ ಬಾಯೊಳು ಹ ! ಲ್ಹೊಡನೆ ಪುಟ್ಟದುದಹಿಂ ಖಳನ !
ಪಡೆದ ಜನನಿ ಬದುಕಿದಳೆಂದೊಡೆ ಮಿಕ್ಕ ! ಪೊಡವಿಯ ಜನಕುಂಟೆ ಸುಖವು ॥

ಮುಖಬೋಳು ಸಿದ್ಧರಾಮಯೋಗಿ. 1656

ಇವನು ಷಟ್ಸ್ಥಲತಿಲಕವನ್ನು ಬರೆದಿದ್ದಾನೆ. ಈತನು ವೀರಶೈವಕವಿ ; ಚೆನ್ನಮಲ್ಲೇಶನ ಕರಜಾತನು. ರಾಘವಾಂಕಚಾರಿತ್ರವನ್ನು ಬರೆದ ಸಿದ್ಧನಂಜೇಶನು (ಸು. 1660) ತನ್ನ ಗುರು ಪಂಚವರ್ಣಿಗೆ ಸಿದ್ಧನಂಜೇಶನ ಶಿಷ್ಯರ ಗುಂಪಿನಲ್ಲಿ ಈ ಕವಿಯ ಹೆಸರನ್ನೂ ಹೇಳಿರುವುದರಿಂದ[1] ಇವನೂ ಸುಮಾರು 1650ರಲ್ಲಿ ಇದ್ದಿರಬೇಕು. ಆದುದರಿಂದ ಗ್ರಂಥಾಂತ್ಯದಲ್ಲಿ ಇವನ ಕಾಲವನ್ನು ತಿಳಿಸುವ " ದುರುಲಪಸಿವತ್ಸರದ ಮಾರ್ಗಮಸ್ತಕಮಾಸ ! ವರಶುದ್ಧಪೌರ್ಣಮಿಸೌಮ್ಯವಾರದಿ " ಎಂಬ ಪದ್ಯ ಭಾಗದಲ್ಲಿ ಉಕ್ತವಾದ ದುರುಲಪಸಿ ಎಂದರೆ ದುರ್ಮುಖಿವರ್ಷವು 1656 ಆಗಿರಬೇಕು.

ಇವನ ಗ್ರಂಥ

ಷಟ್ಸ್ಥಲತಿಲಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಕಂದವೃತ್ತಗಳೂ ಇವೆ ; ಸ್ಥಳ 20, ಪದ ವೃತ್ತ ಗ್ರಂಥ ಕಂದ ಸಹ 923. ಇದರಲ್ಲಿ ಷಟ್ಸ್ಥಲಗಳು ಗುರುಶಿಷ್ಯಸಂವಾದರೂಪವಾಗಿ ನಿರೂಪಿಸಲ್ಪಟ್ಟಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಭಾಗಗಳಲ್ಲಿ ತಿಳಿಸಿದ್ದಾನೆ :—

ಶರಣಚಾರಿತ್ರಗಳ ಶಿವಪುರಾಣಗಳ ಶುಚ !
ತರವಚನರತ್ನ ವೂರಿತಕೋಶವೆಂದಱಿವುದೀಕೃತಿಯ.
ಇದು ನಿಜಾನಂದರಸಜಳಕ ಶರಣರ ಪುಳಕ ! .
ಮಿದು ಮುಕ್ತಿಕರತಳಾಮಳಕ ವಿರಚಿಂತುಳಕ.

---

1. Vol. II, 380

ಗ್ರಂಥಾವತಾರದಲ್ಲಿ ಬಸವಲಿಂಗಸ್ತುತಿ ಇದೆ. ಬಳಿಕ ಕವಿ ಬಸವ, ಚೆನ್ನಬಸವ, ಪ್ರಭುದೇವ ಇವರನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಕ್ಷೀರಾಬ್ಧಿಯೊಳಗಿರ್ಪ ಹಂಸೆ ಮತ್ತನ್ಯವಹ ।
ಕ್ಷೀರಮಂ ಬಯಸುವುದೆ ಕುಸುಮದೊಳಗಿರ್ಪಳಿಗೆ ।
ಬೇಱೆಪರಿಮಳದಾಸೆಯುಂಟೆ ಕಡಲೊಳಗಿರ್ಪ ಭೇಕನನ್ಯಾಂಬುಗಳನು ॥
ಹಾರಯಿಪುದೇ ಮೊಲೆಯನುಂಬ ಶಿಶು ಬಯಸುವುದೆ ।
ಕ್ಷಾರೆಜಲ ಸಕಲಸಿದ್ಧಿಗಳೀವ ಲಿಂಗದೊಳ್ ।
ಮಾರಾರಿಶರಣ ಕೊಡಿರ್ದು ತನಗನ್ಯವಹ ಫಲಪದವ ಬಯಸನಣುಗಾ ॥

ಸುಳಿನಾಭಿಯೊಳಬಿದಿರಿನಂತೆ ನಳನಳಿಪ ತೋ ।
ಳೆಳವಾಳೆಯಂತೆ ಥಳಥಳಿಪ ತೊಡೆ ನಳಿನಕು ।
ಟ್ಮಳದಂತೆ ಪೊಳೆ[1] ಕುಚ ಪವಳದುಟಿ ತಳಿರಡಿಯ ಅಳಿಗುರುಳ ನಳಿನದೆಸಳಾ॥
ತಳೆದ ಕಂಗಳ ಕಂಬುಗಳ ಶೋಣವೆಳಗ ಪ ।
ಲ್ಗಳ ಗಿಳಿಯ ನುಡಿಯ ಕೋಕಿಳರವದ ನಳಿನಖಳ ।
ವೆಳಗಿಸಾನನದ ಪೆಣ್ಗಳ ಸುಖದೊಳಿರ್ಪವಗೆ ಶಿವಪಥಮುಸಾಧ್ಯಮಲ್ತೇ ॥

ಕಟ್ಟುಗ್ರಸಿದ್ಧರೆದೆಮೆಟ್ಟಿ ತಪಸಿಗಳ ಹೂಡಿ ।
ಗುಟ್ಟಿ ಯತಿಜನರ ಬೆನ್ನಟ್ಟಿ ಕಾಮುಕರ ಎದೆ ।
ದಟ್ಟಿ ನಿರ್ಜರರ ಮನ ಸುಟ್ಟಿಱಿದು ಶಾಸ್ತ್ರಕರ ಕಟ್ಟಿ ವಿಷಯದಪಾಶದಿಂ ॥

ನಿಟ್ಟಿಪ್ಪಡೆಯರ ಪಟ್ಟಗಟ್ಟಿ ಜಾರರ ದೇಶ ।
ಕಟ್ಟಿ ವೀರರ ಮನಂ ಮುಟ್ಟಿ ಪೀಡಿಸಿ ಮನದ ।
ಘಟ್ಟಿಯಂಕರಗಿಸುತ ಹುಟ್ಟುಗಡಲೊಳ್ ತಿರುಗಿಸುವ ಕಾಮನವಿಳಜನರಾ॥

ಹರನಾಲಯಕೆಯ್ದಿದವಂ । ಚರಣಸುರಕ್ಷ್ಮಿಗಳ ಪೊಱಗೆ ಬಿಟ್ಟಾಚಿಂತೆಯೊ ।
ಳಿರುತಿರ್ಪನಂತೆ ಸಲ್ಲದು । ಹರಶಾಸ್ತ್ರವ ಕೇಳುವಗ್ಗಿ ಪರಚಿಂತೆಗಳುಂ ॥

---

1. Volume II, 380.

ಸೆಜ್ಜೆಯಸಿದ್ಧಲಿಂಗಾರ್ಯ. ಸು. 1665

ಈತನು ಮಳೆಯರಾಜನ ಚರಿತ್ರೆಯನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಕೊಲ್ಲಿಪಾಕೆಯ ಸೋಮಲಿಂಗನ ಒಡಲಿಂದ ಜರಲಿಂಗವಾಗಿ ಹೊರಟ ರೇವಣಸಿದ್ಧನ ಸಂತತಿಯವನಾದ ಮಳೆಯ ಮಲ್ಲೇಶನ ಶಿಷ್ಯಪರಂಪರೆಗೆ ಸೇರಿದ ವಿದ್ಯಾನಗರದ ಹಿರಿಯಮಠದ ಸಿದ್ಧವೀರನ ಶಿಷ್ಯ ಸಿದ್ಧನಂಜೇಶನ ಕರಜಾತನು. ಇವನ ವಿದ್ಯಾಗುರು ಸಿದ್ಧರಾಮಾರ್ಯ. ತನ್ನ ವಿಷಯವಾಗಿ ಈ ಅಂಶಗಳನ್ನು ತಿಳಿಸಿದ್ದಾನೆ:—

ಈತನು ಕೊಟ್ಟೂರಿಗೆ ಹೋಗಿ ಬಸವಲಿಂಗೇಶ್ವರನ ಪಾದದೆಡೆಯಲ್ಲಿ ಇರುತ್ತ ಸಿದ್ಧರಾಮಾರ್ಯನಿಂದ ಬಹುಶಾಸ್ತ್ರಗಳನ್ನು ಕಲಿತನು. ಇಷ್ಟಲಿಂಗಕ್ಕೆ ಸೆಜ್ಜೆಗಳನ್ನು ಕಲ್ಪಿಸುತ್ತಿದ್ದುದರಿಂದ ಸೆಜ್ಜೆಯ ಸಿದ್ಧಲಿಂಗಾರ್ಯ ಎಂಬ ಹೆಸರನ್ನು ಪಡೆದನು. ಬಸವಲಿಂಗೇಶ್ವರನ ಬಳಿ 9 ವರ್ಷ ಶಿಷ್ಯಭಾವದಲ್ಲಿದ್ದು ಅಲ್ಲಿಂದ ಅವನ ಅಪ್ಪಣೆಯನ್ನು ಪಡೆದು ಹೊರಟು ಸುಗಟೂರ ದೊರೆಯಾದ ಇಮ್ಮಡಿ ತಮ್ಮನ ವಂಶಗುರು ಜ್ಞಾನಮೂರ್ತೀಶನು ಇರುವ ಸೌಂದರ್ಯಪುರಿಗೆ ಹೋಗಿ ಆ ಗುರುವಿನ ಮಗ ಬಸವಾರ್ಯನಿಗೆ ಸಕಲಶಾಸ್ತ್ರಗಳನ್ನೂ ಹೇಳಿದನು. ಬಸವಾರ್ಯನು ಇವನಿಗೆ ತಮ್ಮ ಕುಲದ ಹೆಣ್ಣನ್ನು ಕೊಟ್ಟು ಮದುವೆಮಾಡಿ ಹೇರಳ ದ್ರವ್ಯವನ್ನೂ ಕೊಟ್ಟನು. ಇಮ್ಮಡಿ ತಮ್ಮನ ಮಗ ಮುಮ್ಮಡಿ ತಮ್ಮನು 11ನೆಯ ವರ್ಷದಲ್ಲಿ ಶೌರ್ಯದಿಂದ ಸಿಖೀಂದ್ರಪಾಚ್ಛನನ್ನು ಸೋಲಿಸಿದನು. ಇವನಿಗೆ ಮೂರುಭಾಷೆಗಳಲ್ಲಿ ಕವಿತ್ವಮಾಡುವ ಶಕ್ತಿಯಿದ್ದಿತು. ಈ ದೊರೆ ಕವಿಗೆ ಪುರ, ಕ್ಷೇತ್ರ, ಮಂದಿರ ಮುಂತಾಗಿ ಬಹು ಭಾಗ್ಯವನ್ನು ಕೊಟ್ಟನು. ಕವಿ ಅಲ್ಲಿರುವಾಗ ಅಲ್ಲಿಗೆ ಬಂದ ನಂದೀಶದೇವನ ಶಿಷ್ಯ ಮಹತ್ತಾರ್ಯನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡಿ ವಿದ್ಯೆಕಲಿಸಿದನು. ಮಹತ್ತಾರ್ಯನಿಗೆ ಗುರುಬಸವರಾಜ, ಮಹತ್ತಾರ್ಯ, ಮುದ್ದುಲಿಂಗಾರ್ಯ ಎಂಬ ಮೂವರು ಮಕ್ಕಳು ಜನಿಸಿದರು. "ಧರೆ ಸಹಿತ ಕೈಲಾಸಕೆ ತೆರಳಿದ ಮಹಾತ್ಮನಾವಂ ಭಕ್ತರೊಳಗೆ" ಎಂದು ಆಹುಡುಗರು ಕೇಳಲು ಈ ಮಳೆಯರಾಜನ ಚರಿತ್ರೆಯನ್ನು ಕವಿ ಹೇಳಿದನು.

ಕವಿ ಸುಗಟೂರು ದೊರೆಯಾಗ ಮುಮ್ಮಡಿ ತಮ್ಮನ[1] (ಸು. 1665) ಸಮಕಾಲದವನಾದುದರಿಂದ ಅವನ ಕಾಲವೂ ಸುಮಾರು 1665 ಆಗಬಹುದು

---

1 Volume II, 450.

ಮುಮ್ಮಡಿ ತಮ್ಮನಿಗೆ ಮೂರುಭಾಷೆಗಳಲ್ಲಿ ಕವಿತ್ವವಾಡುವ ಶಕ್ತಿ ಇದ್ದಿತೆಂದು ಕವಿ ಹೇಳುವಂತೆಯೇ ಅವನೂ ತನ್ನ ಶಂಕರಸಂಹಿತೆಯಲ್ಲಿ ತಾನು ತ್ರಿವಿಧಕವೀಶ್ವರನೆಂದು ಹೇಳಿಕೊಂಡಿದ್ದಾನೆ.

ಪೂರ್ವಕವಿಗಳಲ್ಲಿ ಭವಭೂತಿ, ವ್ಯಾಸ, ಕೆರೆಯ ಪದ್ಮರಸ, ಮಯೂರ, ಹಲಾಯುಧ, ವಾಲ್ಮೀಕಿ, ಭಾರವಿ, ಸೋಮಾರಾಧ್ಯ, ಬಾಣ ಇವರುಗಳನ್ನು ಸ್ತುತಿಸಿದ್ದಾನೆ. ಅಲ್ಲದೆ ತೋಂಟದ ಸಿದ್ಧಲಿಂಗ, ನಿಜಗುಣಯೋಗಿ ಇವರ ಹೆಸರುಗಳನ್ನೂ ಹೇಳಿದ್ದಾನೆ.

'ಸಕ್ಕದ ಕನ್ನಡದ ಕವಿತೆಯ ಚದುರ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

ಮಳೆಯರಾಜನ ಚರಿತ್ರೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 34. ಇದರಲ್ಲಿ ಮಳೆಯರಾಜನೆಂಬ ಪುರಾತನ ಶಿವಭಕ್ತನ ಕಥೆ ಹೇಳಿದೆ. ಇದಕ್ಕೆ ಕವಿಕರ್ಣಭೂಷಣ ಎಂಬ ಹೆಸರೂ ಉಂಟು. ಗ್ರಂಥಾವತಾರದಲ್ಲಿ ಭೋಗಲಿಂಗಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವಿನಾಯಕ, ವೀರಭದ್ರ, ಸುಬ್ರಹ್ಮಣ್ಯ, ನಂದಿ, ಭೃಂಗಿ ಇವರನ್ನು ಸ್ತುತಿಸಿ ಬಸವ ಮೊದಲಾದ ಪುರಾತನರನ್ನೂ ತೋಂಟದ ಸಿದ್ಧಲಿಂಗ ಮುಂತಾದ ನೂತನರನ್ನೂ ಹೊಗಳಿದ್ದಾನೆ.[1] ಸಂಧಿಗಳ ಕೊನೆಯಲ್ಲಿ ಈ ಪದ್ಯವಿದೆ:—

ಇದು ಸಕಲಶಿವಭಕ್ತಪಾದ ಪಂಕೇಜಷ ।
ಟ್ಪದನೆನಿಪ ವಿಜಯನಗರದ ಹಿರಿಯಮಠದ ಪ ।
ಟ್ಟದ ಸಿದ್ಧನಂಜೇಶಕರಜಾತನಾದ ಸಕ್ಕದ ಕನ್ನಡದ ಕವಿತೆಯ ॥

---

1. ಬಸವ, ಚೆನ್ನಬಸವ, ಪ್ರಭುದೇವ, ನಂಬಿಯಣ್ಣ, ಮಾಚಯ್ಯ. ಸಾನಂದಗಣವರ, ಅದಿಮಯ್ಯ, ನಗೆಯಮಾರಿತಂದೆ, ಚಿಕ್ಕಯ್ಯ, ಕಣ್ಣಪ್ಪ, ಶಂಕರದಾಸ, ಶಾಂತಯ್ಯ, ಪರಮಸದ್ಯೋಜಾತವಾಮದೇವಾಘೋರವರತತ್ಪುರುಷವಕ್ತ್ರೆ ಶರೀರವಾದ ರೇವಣ ಏಕೋರಾಮಿ ಮರುಳಸಿದ್ಧ ಪಂಡಿತಾರಾಧ್ಯರು; ತೋಂಟವಸಿದ್ಧಲಿಂಗ, ಕೊಡ್ಡೂರುಬಸವ, ಶಾಂತಮಲ್ಲೇಶ, ಸಿದ್ಧನಂಜೇಶ, ಸಿದ್ಧರಾಮಾರ್ಯ, ನಿಜಗುಣಯೋಗಿ, ಒಂಟಿಜೋಳಿಗೆದೇವ, ಕೋರಾನ್ಯದಯ್ಯ, ಮರುಳೇಶ, ಸರ್ಪೇಶ, ಗೂಳೂರ ಒಪ್ಪತ್ತಿನಯ್ಯ, ಗಂಗಾಧರೇಶ್ವರ, ಮಹತ್ತೀಶ, ಚೆನ್ನವೀರ, ಮೌನದೇವ ಬೋಳಬಸವ.

ಪದುರ ಸೆಜ್ಜೆಯ ಸಿದ್ಧಲಿಂಗಾರ್ಯನಣುಗಗೊ೯ ।
ರೆದ ಶರಣಮಳೆಯರಾಜೇಂದ್ರ ಸಚ್ಚಾರಿತ್ರ ।
ವಿದಿತಕವಿಕರ್ಣಭೂಷಣಂ.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಸಮುದ್ರ

ಸುರಧರಾಧರನೆನೆ ಶಿವಾನ್ವಿತಂ ಕಿನ್ನರೇ ।
ಶ್ವರನಂತೆ ಪದ್ಮಕಚ್ಛಪಶಂಖಸೀಲೋನ್ಮ ।
ಕರಮಹಾಪದ್ಮಾಂಕಿತಂ ವರಮುಕುಂದಒಂಧುರವಾಗಿ ಕುಂದದುದಖಿಂ ॥
ತರುಣಿಯರ ಬೆದಳಂತೆಯೂರ್ಮಿಕೋದ್ಭಾಸಿತಂ ।
ಪಿರಿಯುರಂತುಪೆ ಪೆಪ್ಪೆವ ಮುರಿಯಾದೆ ತಪ್ಪದಾ ।
ನರಪವಾಹಿನಿಯಂತೆ ವಾರಿವಾರಣದಿಂದ ಶರಧಿ ಕಂಗೊಳಿಸಿರ್ಪುದು ॥

ಪಟ್ಟಣ

ಅರಸಂಜೆಯಿಂ ಕಮಲಮಬ್ಜರಜದಿಂ ಜಲಂ ।
ಶರದಿಂದ ಸರಸಿ ಸರದಿಂ ಕಂಪುಗಳನೆಳೆಯ ।
ಸರಮಳಿಸುವರಲನನುಸರಿಪ ಪಟ್ಟದಗಳಿಂದರಲ ಪಕ್ಕಿಗಳನಾಂತ ॥
ಬಿರಿಮುಗುಳ್ಗಳಿಂದರಲ್ಗಳಿಂದೆಸೆವ ಲತೆಗಳಾ ।
ವರಿಸಿರ್ಪ ತರುಗಳಿಪ ಬನಗಳಿಂ ಮರಗಳಿಂ ।
ದುರುನಂದನಂಗಳಂ ಪೊರೆವ ಕಪ್ಪೆತೊಪ್ಪೆಗಳಿಂ ಪುರಪಲ್ಲಿಗಳ್ ಮೆಪ್ಪೆರುವು ॥

(ದ್ವಿ. ಸಂಪುಟ, 531) ಬೆಂಗಳೂರು ಮುದ್ದವೀರಸ್ವಾಮಿ. ಸು 1700

ಈತನ ವಚನಗಳಲ್ಲಿ ಶಾಂಭವಿ ಎಂಬ ಅಂಕಿತವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ : —

ಅಂಗದೊಳ್ ಗೋಮುಖವದು, ತತ್ಪ್ರಾಣಲಿಂಗದೊಳ್ ವರ್ತುಳಂ ; ನೋಡೆ
ಸಂಗದಿಂ ಗೋಳಂಗಳೊಳ್ ಪರಂಜ್ಯೋತಿ ಉಳಿವಡೆ ಶಾಂಭವಿಯ ನಿಜವು.

ಅಂತಪ್ಪ. ಸು. 1720

ಈತನು ಅಹಿಂಸಾಕಥೆ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಇವನು ಜೈನಕವಿ, ವೈಶ್ಯವಂಶಾಗ್ರಣಿ ಎಂದು ಹೇಳಿಕೊಂಡಿದ್ದಾನೆ. ಇವನ ತಂದೆ ಜಂದಣ್ಣಸೆಟ್ಟಿ, ತಾಯಿ ಜನ್ನಮ್ಮ, ಸ್ಥಳ ಚಿಕ್ಕಬಳ್ಳಾಪುರ. ಸಮಂತಭದ್ರರ ನರದಿಂದ ತಾನು ಹುಟ್ಟಿದಂತೆ ಹೇಳುತ್ತಾನೆ. ಇವನ ಕಾಲದಲ್ಲಿ ಬೈಚಭೂಪನು ಚಿಕ್ಕಬಳ್ಳಾಪುರದಲ್ಲಿ ಪ್ರಭುವಾಗಿದ್ದನೆಂದು ಹೇಳಿದೆ. ಬೈಚಭೂಪನಕಾಲವು ಸುಮಾರು 1720 ಎಂದು ತಿಳಿದುದರಿಂದ ಕವಿಯ ಕಾಲವೂ ಅದೇ ಆಗಿರಬೇಕು.

ಇವನ ಗ್ರಂಥ

ಅಹಿಂಸಾಕಥೆ

ಇದು ಯಕ್ಷಗಾನರೂಪವಾಗಿದೆ. ಇದರಲ್ಲಿ "ವ್ರತವೊಂದಱತಿಶಯದಿ ದುರಿತವ ಹರಿಸಿ ಮುಕ್ತಿಯ ಸುಖವ ಪಡೆದ" ಧನಕೀರ್ತಿಯ ಚರಿತ್ರೆ ಹೇಳಿದೆ. ಇತರರ ಸಹಾಯವಿಲ್ಲದೆ ಈ ಗ್ರಂಥವನ್ನು ಆರುತಿಂಗಳಲ್ಲಿ ಮುಗಿಸಿದಂತೆ ಕವಿ ಹೇಳುತ್ತಾನೆ. ಈ ಗ್ರಂಥದ ವಿಷಯವಾಗಿ ಹೀಗೆ ಹೇಳಿಕೊಂಡಿದ್ದಾನೆ :—

ನವರಸಾಲಂಕಾರಮಧುರಾಲಾಪದಿಂದೊಪ್ಪುವಳನೀಕೃತಿ !
ಯುವತಿಯನು ಕಂಡವರು ಸೋಲದರುಂಟೆ ಜಗದಿ ॥

ಆರಂಭದಲ್ಲಿ ವೀರಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ ಸಮಂತಭದ್ರ ಲಕ್ಷ್ಮಿಸೇನಮುನಿ ಇವರುಗಳನ್ನು ಸ್ತುತಿಸಿದ್ದಾನೆ.

ರಾಯಣ್ಣ. ಸು. 1720

ಇವನು ಪದ್ಮಾವತಿಯ ಕೊರವಂಜಿ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ಜೈನಕವಿ ; ಇವನ ಪಿತಾಮಹನು ನಾಗಣ್ಣ, ತಂದೆ ಬೊಮ್ಮಣ್ಣ ಕವಿ, ಸ್ಥಳ ಶ್ರವಣಬೆಳುಗೊಳಕ್ಕೆ ಉತ್ತರದಲ್ಲಿರುವ ವೇಣುಪುರಿ. ಇವನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಕೃಷ್ಣರಾಜೇಂದ್ರನು ದೊರೆಯಾಗಿದ್ದನೆಂದು ಹೇಳುತ್ತಾನೆ. ಈ ರಾಜನು ಒಂದನೆಯ ಕೃಷ್ಣರಾಜನೋ (1713-1731) ಅಥವಾ ಎರಡನೆಯ ಕೃಷ್ಣರಾಜನೋ (1734-1766) ಆಗಿರಬೇಕು. ಒಂದನೆಯವನೇ ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಪದ್ಮಾವತಿಯ ಕೊರವಂಜಿ

ಈ ಯಕ್ಷಗಾನಕ್ಕೆ ರಾಮಜನನ ಎಂಬ ಹೆಸರೂ ಉಂಟು. ಇದರಲ್ಲಿ ಪದ್ಮಾವತೀದೇವಿ ಕೊರವಂಜಿಯ ವೇಷವನ್ನು ಧರಿಸಿ ಕೌಸಲ್ಯೆಯ ಒಳಗೆ ಹೋಗಿ ಅವಳಿಗೆ ಗಂಡುಮಗು ಆಗುವುದೆಂದು ಹೇಳಿದ ಕಥೆ ಉಕ್ತವಾಗಿದೆ.

ಮೈಲಾರದ ಬಸವಪ್ಪ. ಸು. 1800

ಈತನು ಗುರುಕರುಣತ್ರಿಪದಿ, ನಿರಾಭಾರಿ ವೀರಶೈವಸಿದ್ಧಾಂತ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಒಳ್ಳಾರಿಗೆ ಸೇರಿದ ಲಿಂಗನಾಯಕನಹಳ್ಳಿಯ ಚೆನ್ನವೀರಸ್ವಾಮಿಯ ಕರಜಾತನು. ಇವನ ಕಾಲವು ಸುಮಾರು 1800 ಆಗಬಹುದೆಂದು ಹೇಳುತ್ತಾರೆ.

ಇವನ ಗ್ರಂಥಗಳಲ್ಲಿ

1. ಗುರುಕರುಣತ್ರಿಪದಿ

ಇದರಲ್ಲಿ 332 ಪದ್ಯಗಳಿವೆ. ಒಂದೊಂದು ಪದ್ಯವೂ 'ಗುರುವೆ ಕೃಪೆಯಾಗು' ಎಂದು ಮುಗಿಯುತ್ತದೆ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ನವಚಕ್ರದೊಳಗಿರ್ದ | ನವಬ್ರಹ್ಮನು ತೆಗೆದು |
ಶಿವಲಿಂಗ ವಿಗ್ರಹವ ಮಾಡಿ | ಕರುಣಿಸಿದ | ಸುವಿವೇಕಗುರುವೆ ಕೃಪೆಯಾಗು ||
ಅಷ್ಟಾಂಗಯೋಗ ಬಲು | ಕಷ್ಟ ಎಲೊ ಮಗನೆ ಎಂ |
ದಿಷ್ಟಲಿಂಗವನು ಸೃಷ್ಟಿಸಿ | ಕರಕಿತ್ತ | ಶ್ರೇಷ್ಠಶ್ರೀಗುರುವೆ ಕೃಪೆಯಾಗು ||

2 ನಿರಾಭಾರಿ ವೀರಶೈವ ಸಿದ್ಧಾಂತ

ಇದು ಪ್ರಾಯಿಕವಾಗಿ ವಾರ್ಧಕ ಷಟ್ಪದಿಯಲ್ಲಿ ಬರೆದಿದೆ ; ಪ್ರಕರಣ 3, ಪದ್ಯ 121. ಇದರಲ್ಲಿ ಅಷ್ಟಾವರಣಮಹತ್ವ, ಪಂಚಾಚಾರ ಮುಂತಾದ ವಿಷಯಗಳು ಹೇಳಿವೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇನೆ:-

ಗುರುವೆ ಅಜ್ಞಾನತಿಮಿರಾರ್ಕಭವಭಂಜನನು ।
ಗುರುವೆ ಭಕ್ತಿಜ್ಞಾನ ವೈರಾಗ್ಯಮಂದಿರನು ।
ಗುರುವೆ ದೀಕ್ಷೆಸುಶಿಕ್ಷೆ ಮೋಕ್ಷಕಾರಣಕರ್ತರಲ್ಲದಿನ್ನೊರ್ವರಿಲ್ಲ ॥
ಗುರುವಿನಿಂದಧಿಕದೈವಗಳಿಲ್ಲವೆಂದಱಿದು ।
ಹರನು ನ ಗುರೋರಧಿಕವಿದಿತವೆಂದೋದಿದನು ।
ನಿರುತವಿದು ಕೇಳು ಸದ್ಗುರುವಧಿಕನಿಂತಪ್ಪಗುರುಗಳರೋದ್ಭವರಧಿಕರು ॥
ಪರಸತಿಗೆ ಪರಧನಕೆ ಪರನಿಂದೆ ಪರದೈವ ।
ಕೆಱಗಿಯನ್ಯರಜೀವಹಿಂಸೆಗಳ ಮಾಡುತಿರ ।
ದುರಿತ ಮಹಪಂಚಪಾತಕವೆಂದು ಗುರುಮುಖದೊಳಱಿದವಕ್ಕಿಜ್ಜೆ ಯಸದೆ ॥
ಗುರುಕರಾಂಬುಜದೊಳಗಿಹಿಷ್ಟಮಹಲಿಂಗವನು ।
ಸರಸಸಂಯೋಗಸಮರಸಭಾವದಿಂದಪ್ಪಿ ।
ಹೆರೆಹಿಂಗದಂತಿಪ್ಪನಿಷ್ಠೆಸದ್ವೀರಮಾಹೇಶನ ಸದಾಚಾರವು ॥

ಅನಂತನಾಥ. ಸು. 1800

ಇವನು ಮನ್ಮಥ ಕೊರವಂಜಿ ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಈತನು ಜೈನಕವಿ. ಇವನ ಕಾಲವು ಸುಮಾರು 1800 ಆಗಿರಬಹುದು. ಇವನ ಗ್ರಂಥದಲ್ಲಿ ಮನ್ಮಥನು ಕೊರಚಿಯ ವೇಷವನ್ನು ಧರಿಸಿ ತನ್ನ ಸೋದರರ ಮಾವನ ಮಗಳಾದ ವಿದರ್ಭೆಗೆ ಕಣಿಯನ್ನು ಹೇಳಿದ ಕಥೆ ಉಕ್ತವಾಗಿದೆ. ಆದಿಯಲ್ಲಿ ನೇಮಿಜಿನ, ಸರಸ್ವತಿ ಇವರ ಸ್ತುತಿ ಇದೆ.

ಪ್ರಾಣೇಶವಿಠಲ. ಸು. 1800

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವನು; ಜಗನ್ನಾಥ ದಾಸನ (ಸು. 1775) ಶಿಷ್ಯನು. ಈತನ ಸ್ಥಳ ನಿಜಾಂ ಇಲಾಖಾ ಲಿಂಗಸೂರು. ಇವನು 1822 ರಲ್ಲಿ ಸತ್ತನೆಂದು ಹೇಳುತ್ತಾರೆ.

ಬಾಲಲೀಲಾ ಮಹಂತ ಶಿವಯೋಗಿ. ಸು. 1820

ಈತನು ಕೈವಲ್ಯದರ್ಪಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಧಾರವಾಡಜಿಲ್ಲೆಗೆ ಸೇರಿದ ಮುಳುಗುಂದದ ವಿರಕ್ತಮಠಕ್ಕೆ ಸ್ವಾಮಿಯಾಗಿ

ದ್ದನು. ಬಾಲರಂತೆ ಲೀಲೆಯನ್ನು ಮಾಡುತ್ತಿದ್ದುದರಿಂದ ಈತನಿಗೆ ಬಾಲಲೀಲಾ ಮಹಂತತಿವಯೋಗಿ ಎಂದು ಹೆಸರು ಉಂಟಾಯಿತು. ಇವನು ಮೈಸೂರಿಗೆ ಹೋಗಿ ಮುಮ್ಮಡಿ ಕೃಷ್ಣರಾಜನಿಂದ (1799-1868) ಸಮ್ಮಾನಿತನಾಗಿ ಅವನಿಗೆ ಬುದ್ಧಿವಾದವನ್ನು ಹೇಳಿದಂತೆ ಈ ಗ್ರಂಥದಿಂದ ತಿಳಿವುದರಿಂದ ಕವಿಯ ಕಾಲವು ಸುಮಾರು 1820 ಆಗಿರಬಹುದು.

ಇವನ ಗ್ರಂಥ

ಕೈವಲ್ಯದರ್ಪಣ

ಇದರಲ್ಲಿ ಹಾಡುಗಳು, ಕಂದ, ಷಟ್ಪದಿ ಇವೆ. ಒಂದು ಹಾಡನ್ನೂ ಒಂದು ಷಟ್ಪದಿಯನ್ನೂ ಉದಾಹರಿಸುತ್ತೇವೆ :—

ರಾಗ ದ್ವಿಜಾವಂತಿ. ಆದಿತಾಳ.

ಅವರವರ ಭಕ್ತಿಗೆ ಅವರವರ ಭಾವಕ್ಕೆ |
ಅವರವರ ಜಿನನಾಗಿ ಇರುತಿಹನು ತಿವಯೊಗಿ || ಪಲ್ಲವಿ ||
ಇರದೊಂದು ಕನ್ನಡಿಯ ನೂರಾಜನ ಪಿಡಿಯೆ |
ಸರಳಾಗಿ ಅವರವರ ರೂಪು ಕಾಣ್ಬಂತೆ |
ಹರಿಯ ಭಕ್ತರಿಗೆ ಹರಿ ಹರನ ಭಕ್ತರಿಗೆ ಹರ|
ನರರೇನು ಭಾವಿಸುವರದಱಿಂತೆ ತೋಱುವನು || 1 ||
ಮತಭೇದದವರು ದುರ್ಮತಿಯಿಂದ ಯತಿವರಗೆ |
ಸ್ತುತಿನಿಂದೆಮಾಡಿದರೆ ಅವರಿಗೇ ತಿರುಗುವುವು |
ಯತಿವರನು ತಾ ತನ್ನ ಪಥದಲ್ಲಿ ಇರುತಿಹನು |
ಕ್ಷಿತಿಜನರ ಪಾಪಪುಣ್ಯವ ಪರೀಕ್ಷಿಸುತ || 2 ||
ಕುಲಜಲವೆ ಹಿಡಿದಿರುವ ಕಲಕುಮನದವರಲ್ಲಿ |
ತಿಳಿವಳಿಕೆ ಸಿರಿಚಂದ್ರ ಕಾಣುವ ಪರಿಯೆಂತು |
ಕುಲಜಲವನತಿಗಳೆದ ತಿಳಿಯ ಮನದವರಲ್ಲಿ |
ಸಲೆ ಮಹಂತಲಿಂಗ ಭಿತ್ಸೂರ್ಯ ಕಾಣುವನು || 3 ||
ಬೇಡದಿರು ನರರ ಕೊಂಡಾಡದಿರು ಹಿಂಸೆಯಂ |
ಮಾಡದಿರು ಪಾಪಕೆಡೆಯಾಡದಿರು ಕುಚಿತರೊಡ |
ನಾಡದಿರು ಕಾಮದೊಳು ನೋಡದಿರು ಪರಸತಿಯ ಕೂಡದಿರು ಕನಸಿನಲ್ಲಿ |

ಕೇಡೆಣಿಸದಿರು ಪರರಿಗಾಡದಿರು ನಿಷ್ಠುರವ |
ಪೀಡಿಸದಿರನ್ಯರನು ರೂಢಿಸದಿರಪಜಯದಿ |
ಕೂಡಿಸದಿರನ್ಯಾಯದೊಡವೆಯಂ ಸದ್ಗತಿಯುಮುಕ್ತಿಯಿದೆ ಎಂದನಾರ್ಯಂ||

ಕಡಕೊಳ್ಳದ ಮಡಿವಾಳಪ್ಪ. ಸು. 1820.

ಈತನು ತತ್ವಪದಗಳನ್ನೂ ವಚನಗಳನ್ನೂ ಬರೆದಿದ್ದಾನೆ. ಇವನು ವೀರ ಶೈವಕವಿ. ಇವನ ಸ್ಥಳ ನಿಜಾಂ ಇಲಾಖೆಯಲ್ಲಿರುವ ಕಡಕೊಳ್ಳ. ಈತನು ಸುಮಾರು ನೂರುವರ್ಷಕ್ಕೆ ಹಿಂದೆ ಇದ್ದನೆಂದು ಹೇಳುತ್ತಾರೆ. ಇವನ ವಚನಗಳಲ್ಲಿ ನಿರುಪಮನಿರಾಳಮುತ್ಪ್ರಭುಮಹಂತಯೋಗಿ ಎಂಬ ಅಂಕಿತವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ :—

ದಯೆ ಧರ್ಮ ಕ್ಷಮೆ ದಮೆ ಶಾಂತಿ ದಾಂತಿ ನಯ ನೀತಿ ಸುಮನ ಸುಬುದ್ಧಿ ನಿರಹಂಕಾರ ಸುಜ್ಞಾನ ಸುಚಿತ್ತ ಸದ್ಭಾವ ಸತ್ಕರ್ಮ ಪರೋಪಕಾರ ಸುಖಭೋಗ ಶಿವಯೋಗ ರಾಜಯೋಗ ಸಾಧುವರಸಂಗ ಶಿವತತ್ವಾನೇಕ್ಷೆ ಶಿವಕಥಾಸಂಗೋಷ್ಠಿಯಲ್ಲಿದ್ದು ತನ್ನ ತಾನಱಿಯದೆ ಸತ್ತುಸತ್ತು ಹೋಯಿತ್ತು ಅನಂತಕಾಲ ಅನಂತಜನ್ಮ ನಿರುಪಮ ನಿರಾಳ ಮುತ್ಪ್ರಭುಮಹಂತಯೋಗಿ.

ಕುಮಾರವಿಭು. 1821

ಈತನು ಭಿಕ್ಷುಕಮಹೇಶವಿಲಾಸವನ್ನು ಬರೆದಿದ್ದಾನೆ. ಕುಮಾರೇಶ್ವರ ಪುರಾಣವೇ ಮೊದಲಾದ ಹಲವು ಇತರಗ್ರಂಥಗಳನ್ನೂ ರಚಿಸಿರುವುದಾಗಿ ಹೇಳುತ್ತಾರೆ. ಇವು ನಮಗೆ ದೊರೆತಿಲ್ಲ.

ಇವನು ವೀರಶೈವ ಕವಿ; ಧಾರವಾಡ ಜಿಲ್ಲೆಗೆ ಸೇರಿದ ಹಾನಗಲ್ಲ ವಿರಕ್ತ ಮಠದ ಸ್ವಾಮಿಯಾಗಿದ್ದನು. ಭಿಕ್ಷುಕಮಹೇಶವಿಲಾಸವನ್ನು ಶಕ 1744 ನೆಯ ಚಿತ್ರಭಾನುವಿನಲ್ಲಿ (1821) ಬರೆದಂತೆ ಹೇಳುತ್ತಾನೆ. ಪೂರ್ವಕವಿಗಳಲ್ಲಿ ತೋಂಟದ ಸಿದ್ಧಲಿಂಗ, ಷಡಕ್ಷರದೇವ ಇವರುಗಳನ್ನು ಸ್ತುತಿಸಿದ್ದಾನೆ. ಕವಿತಾ ಸರಣಿಯಲ್ಲಿಯೂ ಷಡಕ್ಷರದೇವನನ್ನು ಅನುಕರಿಸಿರುವಂತೆ ತೋರುತ್ತದೆ.

ಇವನ ಗ್ರಂಥ

ಭಿಕ್ಷುಕ ಮಹೇಶವಿಲಾಸ.

ಇದು ಚಂಪೂರೂಪವಾಗಿದೆ; ಪ್ರಕರಣ ೩. ಇದರಲ್ಲಿ ಶಿವನು ದ್ವಾರಾವತಿಗೆ ಹೋಗಿ ಭಿಕ್ಷಾಟನಮಾಡಿದ ಕಥೆ ಹೇಳಿದೆ. ಪೂರ್ವದಲ್ಲಿ ಲಿಂಗಣಾರ್ಯನು

(ಗುರುಲಿಂಗವಿಭು-ದ್ವಿ. ಸಂಪುಟ, 262) ವರ್ಣಕರೀತಿಯಲ್ಲಿ ಬರೆದಿದ್ದ ಭಿಕ್ಷಾಟನಚರಿತೆಯನ್ನು ತಾನು ಗುರುಸಿದ್ಧದೇಶಿಕನ ಅಪ್ಪಣೆಯಮೇರೆಗೆ ವಸ್ತುಕರೀತಿಯಲ್ಲಿ ಬರೆದಂತೆ ಕವಿ ಹೇಳುತ್ತಾನೆ. ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ :—

ಸುರಗಿರಿಯಂತೆ ಸದ್ವಿಬುಧಸೇವಿತಮಂಬುಜದಂತೆ ಶ್ರೀಗುಣಂ ।
ಸರಸಿಜಮಿತ್ರನಂತೆ ಘನಮಾರ್ಗಸುಶೋಭಿ ಸಮುದ್ರದಂತೆವೋಲ್ ॥
ಸರಸಮುದಾರಭಾವಿನಿಯರೋಳಿಯವೊಲ್ ವಿಗೆ ಭಾವಜಾತಿಂ ।
ಧುರಮೆನಿಕುಂ ಕುಮಾರವಿಭುನಿರ್ಮಿತಮಿಾಕೃತಿ ಸರ್ವಲೋಕದೊಳ್ ॥

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರ, ಬಸವ, ಚೆನ್ನಬಸವ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಗಣೇಶ.

ಎಱಗುವ ನಿರ್ಜರಾಧಿಪರ ರತ್ನಕಿರೀಟಗಳೊಂದನೊಂದು ತಾ ।
ನೊರಸಲುದಿರ್ದ್ದ ಪೊನ್ನ ಪುಡಿಯಂ ಕರದೊಳ್ ತಳೆದೆತ್ತಿ ನೆತ್ತಿಯೊಳ್ ॥
ಸುರಿದುಕೊಳುತ್ತೆ ಪಾಂಸುಮುಯಕೇಳಿಯನಾಡಿ ಮನೋಸುರಾಗಮುಂ ।
ವಿರಚಿಪ ವಿಘ್ನರಾಜನತುಳೋತ್ಸವದಿಂ ವಿಗೆ ಮಾಲ್ಕ ವಿಘ್ನಮುಂ ॥

ಮೇರು.

ಅಳಿಯಂ ಶ್ರೀಪತಿ ಜಂದ್ರನಾತ್ಮತನಯಂ ನಿಚ್ಚಂ ನದೀನಾರಿಯರ್ ।
ಒಳಿಗೊಂಡಿರ್ಪರನಂತಶೈಳಜಯಮೆನ್ನೊಳ್ ತೋರ್ಪುದೆನ್ನಂತೆ ಮುಂ ॥
ಜುಳಸತ್ವಾನ್ವಿತನಾವನೀ ಧುವನದೊಳ್ ಪೇಪೆಂದು ತಾನಬ್ಧಿ ಮುಂ ।
ಗಳಮಾದುಜ್ವಲಕೇತನಂನೆಗಪಿದಂತೊಪ್ಪಿತ್ತು ಹೇಮಾಚಳಂ ॥

ಚಂದ್ರ.

ಒಗೆದಂಧಕಾರಮೆಂಬಾ । ಜಗುನೆಯ ಮಧ್ಯದೊಳೆ ಬೆಳೆದು ಬೆಳ್ವೆಳಗಿಂ ತಾಂ ।
ಸೊಗಯಿಪ ಬೆಳ್ದಾವರೆಯೆನೆ । ವಿಗೆ ಮೆಱೆದುದು ಚಂದ್ರಮಂಡಲಂಬಾನೆಡೆಯೊಳ್॥

ಗೋಪಿಕಾಸ್ತ್ರೀ.

ನಡೆಯಿಂ ಹಂಸೆಯ ನಿಂದಿಸುತ್ತೆ ನುಡಿಯಿಂ ಕೀರಾಳಿಯಂ ದೂಷಿಸು ।
ತ್ತೊಡನಂಗಪ್ರಭೆಯಿಂ ಕ್ಷಣಪ್ರಭೆಯುಮಂ ಜೋಡಾಡುತುಂ ಬಟ್ಟ ನು॥
ನ್ನೊಡೆಯಿಂ ಬಾಪೆಯ ಬಿಂಕಮುಂ ಜಱೆಯುತುಂ ಹಸ್ತಾಬ್ಜದಿಂದಬ್ಜಮುಂ ।
ಜಡಿಯುತ್ತುಂ ಪದದಿಂದೆ ಮಾಂದಳಿರುಮಂ ತಂದಿಕ್ಕಿದಳ್ ಭಿಕ್ಷಮುಂ ॥

ಶ್ರೀಪ್ರಾಣೇಶವಿಠಲ. ಸು. 1830

ಇವನು ಕೀರ್ತನೆಗಳನ್ನು ಬರೆದಿದ್ದಾನೆ. ಈತನು ಮಾಧ್ವನು; ಪ್ರಾಣೇಶವಿಠಲನ (ಸು. 1800) ಮಗನು. 1860 ರಲ್ಲಿ ಸತ್ತನೆಂದು ಹೇಳುತ್ತಾರೆ.

ಶಿಶುನಾಳ ಸರೀಫ್ ಸಾಬ. ಸು. 1840

ಈತನು ಪದಗಳನ್ನು ಬರೆದಿದ್ದಾನೆ. ಇವನು ಮುಸಲ್ಮಾನನು; ಹಿಂದೂ ಮತದೀಕ್ಷೆಯನ್ನು ತೆಗೆದುಕೊಂಡಂತೆ ತೋರುತ್ತದೆ. ಈತನ ಗುರು ಗೋವಿಂದ; ಸ್ಥಳ ಧಾರವಾಡಜಿಲ್ಲೆಗೆ ಸೇರಿದ ಶಿಶುನಾಳ. ಇವನು ಸುಮಾರು 70, 80 ವರ್ಷಗಳಿಗೆ ಹಿಂದೆ ಇದ್ದನೆಂದು ಹೇಳುತ್ತಾರೆ. ಇವನ ಪದಗಳಲ್ಲಿ ಒಂದನ್ನು ತೆಗೆದು ಬರೆಯುತ್ತೇವೆ:—

ಶ್ರೀಗುರುನಾಥ ನಿರಾಲಯನಾಲಯದೊಳು |
ನಾವು ಈರ್ವರು ನಲಿದಾಡುವ ಬಾ ||
ಬಾರದಿದ್ದರೆ ನಿನ್ನ ವೋರೆಗೆ ಹೊಡೆವೆನು |
ಸಾರಿ ಈರ್ವರು ಸವಿದಾಡುವ ಬಾ ||
ಯೋಗದ ಕುದುರೆಯ ಬೇಗನೆ ಏರುತ |
ಮೇಗೇರಿಯ ಮಠಯೋಗುವ ಬಾ ||
ನಡೆ ನಡೆ ಶಿಶುವಿನಾಳದೀಶನ ಗುಡಿಯೊಳು |
ಅಡಗಿಹ ಪ್ರಣವವ ನೋಡುವ ಬಾ ||

ನರೇಗಲ್ಲ ಶಿವಬಸಪ್ಪಶಾಸ್ತ್ರಿ. ಸು 1840

ಇವನು ಬಸವಪವಾಡಲೀಲಾಮೃತವನ್ನು ಬರೆದಿದ್ದಾನೆ. ಈತನು ವೀರಶೈವ ಕವಿ. ಇವನ ಸ್ಥಳ ಧಾರವಾಡಜಿಲ್ಲೆಗೆ ಸೇರಿದ ನರೇಗಲ್ಲು. ಈತನು ಸುಮಾರು 1840 ರಲ್ಲಿ ಇದ್ದನೆಂದು ಹೇಳುತ್ತಾರೆ.

ಇವನ ಗ್ರಂಥ

ಬಸವಪವಾಡಲೀಲಾಮೃತ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 11, ಪದ್ಯ 980. ಇದರಲ್ಲಿ ಬಸವನ ಚರಿತ್ರವು ಸುಲಭಶೈಲಿಯಲ್ಲಿ ಬರೆದಿದೆ. ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಉದ್ಯಾನ.

ಮುರುಗ ಮಲ್ಲಿಗೆ ಜಾಜಿ ಕೇತಕಿ । ಪರಿಮಳಿಪ ಸುರಹೊನ್ನೆ ತಾವರೆ ।
ಮೆಪೆವ ನೈದಿಲು ಜಟ್ಟಿದಾವರೆ ಪುಷ್ಪಜಾತಿಗಳು ॥
ಭರದಿ ವನದೊಳು ಬೆಳೆದಿಹುವು ಬಹು । ಶರದ ಸೇವಂತಿಗೆಯಪುಷ್ಪವು ।
ಹರನಿಗರ್ಪಿತವಾಗೆ ನಿಂದಿಹ ದುಂಡುಮಲ್ಲಿಗೆಯು ॥

ಪುರದ ಶೃಂಗಾರ

ಎಲ್ಲಿ ನೋಡಲು ಝಲ್ಲಿತೋರಣ । ವಲ್ಲಿಗಲ್ಲಿಗೆ ಮಕರತೋರಣ ।
ಬಿಲ್ಲು ಬಾಗಿದಪ್ಪೋಲು ಎಸೆದುವು ಕನಕತೋರಣವು ॥
ಮಲ್ಲಿಗೆಯ ಸರದೊಳಗೆ ತೋರಣ । ಝಲ್ಲಿನವರತ್ನಗಳ ತೋರಣ ।
ವೆಲ್ಲಿ ನೋಡಲು ಎಸೆಯುತಿರ್ದುವು ಹಸಿರುತೋರಣವು ॥

ಶ್ರೀಶ ಪ್ರಾಣೇಶವಿಠಲ, ಕರ್ಜಗಿ ಸುಖನಿಧಿವಿಠಲ, ಬಳ್ಳಾರಿ ವೆಂಕಟೇಶವಿಠಲ.

ಇವರುಗಳೂ ಕೀರ್ತನೆಗಳನ್ನು ಬರೆದಿರುವಂತೆ ತೋರುತ್ತದೆ. ಇವರು ಮಾಧ್ವರು. ಮೊದಲನೆಯವನು ಶ್ರೀ ಪ್ರಾಣೇಶವಿಠಲನ (ಸು. 1830) ಸೋದರಠಳಿಯನು. ಇವನು 1890 ರಲ್ಲಿ ಗತಿಸಿದಂತೆ ತಿಳಿಯಬರುತ್ತದೆ. ಎರಡನೆಯವನು ಶ್ರೀದವಿಠಲನ (ಸು. 1800) ಸೋದರಠಳಿಯನು. ಮೂರನೆಯವನು ಬಹಳ ಆಧುನಿಕನು : 1925 ರಲ್ಲಿ ಸತ್ತನು.

ಪರಮೇಶ್ವರಭಟ್ಟ.

ಈತನು ಸ್ಮಾರ್ತನು ಇವನ ತಂದೆ ವೆಂಕಟೇಶಭಟ್ಟ, ಸ್ಥಳ ಹರಿಹರಪುರ. ಶ್ರೀಮಾನ್ ಕೆರೋಡಿ ಸುಬ್ಬರಾಯರು ಈತನನ್ನು ಯಕ್ಷಗಾನಕವಿಸಾರ್ವಭೌಮ ಎಂದು ಪ್ರಶಂಸಿಸುತ್ತಾರೆ.[1] ಗ್ರಂಥಗಳು—ಪ್ರಭಾವತೀಸ್ವಯಂವರ, ಕಾಲನೇಮಿಕಾಳಗ, ಅಭಿಮನ್ಯುಕಾಳಗ ಇತ್ಯಾದಿ

ವಿ. ನರಸಿಂಹಮೂರ್ತಿರಾಯ.

ಇವನು ಮಾಧ್ವನು. ಮೈಸೂರು ಪ್ರಾಂತದವನೆಂದು ತೋರುತ್ತದೆ. ಸರಕಾರದ ಫಾರೆಸ್ಟ್ ಇಲಾಖೆಯಲ್ಲಿ ಅಧಿಕಾರಿಯಾಗಿದ್ದನು. ಗ್ರಂಥಗಳು—ವಿರಾಟಪರ್ವ, ಭ್ರಾಂತಿಯಾಮಿನೀನಾಟಕ, ಕಲಿಮಾಹಾತ್ಮ್ಯ (ಕಂ.)

---

1. ರಂಗಭೂಮಿ, I, 244.

ಸಿದ್ಧಾಂತಿ ಪುಸ್ತಕಂ ಅಳಸಿಂಗರಾಚಾರ್ಯ.

ಇವನು ಶ್ರೀವೈಷ್ಣವನು. ಇವನ ಸ್ಥಳ ಮೈಸೂರು. ಗ್ರಂಥಗಳು—ಚಾಣಕ್ಯತಂತ್ರ ಚಮತ್ಕಾರ, ನಾಗವರ್ಮನ ಕರ್ಣಾಟಕಭಾಷಾಭೂಷಣದ ಟೀಕೆ.

ಬೇಗೂರು ಮಲ್ಲಪ್ಪ.

ಈತನು ವೀರಶೈವನು. ಮೈಸೂರಲ್ಲಿ ಮಹಾರಾಜರ ಕನ್ನಡ ಸ್ಕೂಲ್ ಹೆಡ್ಮಾಸ್ಟರಾಗಿದ್ದನು. ಗ್ರಂಥಗಳು—ನಾಗವರ್ಮನ ಕಾವ್ಯಾವಲೋಕನದ ಲ್ಲಿಯ ಅರ್ಥಾಲಂಕಾರದ ಟೀಕೆ, ಶಬ್ದಾದರ್ಶ. ನಾಗವರ್ಮನ ಕಾದಂಬರಿ ಯನ್ನು ಈತನೇ ತಿದ್ದಿ ಮುದ್ರಿಸಿದವನು.

ಎಂ. ಎ. ತಿರುಮಲಾಚಾರ್ಯ.

ಇವನು ಶ್ರೀವೈಷ್ಣವನು. ಮೈಸೂರು ಸರಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದನು. ಗ್ರಂಥಗಳು—ನಾರದಭಕ್ತಿಸೂತ್ರಟೀಕೆ, ಆರ್ಯಮತಸಮನ್ವಯ.

ಎಂ. ಎ. ನರಸಿಂಹಾಚಾರ್ಯ.

ಈತನು ಶ್ರೀವೈಷ್ಣವನು. ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಹಲವು ವರ್ಷಗಳು ಉಪಾಧ್ಯಾಯನಾಗಿದ್ದು ಬಳಿಕ ವಕೀಲನಾಗಿದ್ದನು. ಗ್ರಂಥ-ಯಾಜುಷಸಂಧ್ಯಾಭಾಷ್ಯ ಟೀಕೆ.

ಪಂಡಿತ ಟಿ. ಎಂ. ಚಂದ್ರಶೇಖರಶಾಸ್ತ್ರಿ.

ಈತನು ವೀರಶೈವಕವಿ. ಇವನ ಸ್ಥಳ ದಾವಣಗೆರೆ. ಅಲ್ಲಿಯ ತೆಲಿಗಿ ಮಠದಲ್ಲಿ ಅಧಿಕಾರಿಯಾಗಿದ್ದನು. ಗ್ರಂಥಗಳು—ಅಥಿಣಿ ಶಿವಯೋಗೀಶ ಚರಿತ್ರ (ಷ.), ಅಥಿಣಿ ಶಿವಯೋಗಿ ಮಹಿಮ ಮಂಜರಿ (ಗದ್ಯ), ನವರಾತ್ರಸಮಾರಂಭ ಕಾವ್ಯ (ಚಂಪು.)

ಸಿ. ಸುಬ್ಬರಾಯ, ಬಿ. ಎ.

ಈತನು ಮಾಧ್ವನು. ಮೈಸೂರು ಮಹಾರಾಣಿ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದನು. ಗ್ರಂಥ—ಆಹಾರವಿಷಯೋಪನ್ಯಾಸ. ಬಸವಪ್ಪಶಾಸ್ತ್ರಿಯೊಡನೆ ಸೇರಿ ಶೂರಸೇನಚರಿತ್ರೆಯನ್ನು ಬರೆದನು. (ಪುಟ 217)

ಕೆ. ಎ. ದೇಶಿಕಾಚಾರ್ಯ.

ಇವನು ಶ್ರೀವೈಷ್ಣವನು. ಮೈಸೂರು ಸರಕಾರದ ಅಗ್ರಿಕಲ್ಚುರಲ್ ಇಲಾಖೆಯಲ್ಲಿ ಕೆಲವು ಕಾಲ ಕೆಲಸದಲ್ಲಿದ್ದನು. ಗ್ರಂಥ—ಮಾನುಷ ಶರೀರ ಧರ್ಮ ಶಾಸ್ತ್ರ.

ಎಂ. ಸುಬ್ಬಯ್ಯ, ಬಿ. ಎ.

ಈತನು ಒಕ್ಕಲಿಗನು. ಬೆಂಗಳೂರಲ್ಲಿ ಫ್ಯಾರಿಸ್ಟಾಗಿದ್ದನು. ಗ್ರಂಥ-ತೋಟದ ಬೇಸಾಯ.

ಪಿ. ವೇದಮಿತ್ರ.

ಇವನು ಕ್ರಿಸ್ತನು. ಮೈಸೂರಲ್ಲಿ ಉಪಾಧ್ಯಾಯನಾಗಿದ್ದನು. ಗ್ರಂಥ-ಸ್ವಪ್ರಯಾಸ ಫಲದೀಪಿಕೆ.

ಭಾಷ್ಯಂ ತಿರುಮಲಾಚಾರ್ಯ.

ಈತನು ಶ್ರೀವೈಷ್ಣವನು. ಇವನ ಸ್ಥಳ ಬೆಂಗಳೂರು. ಗ್ರಂಥ—ಸಂಕ್ಷೇಪ ರಾಮಾಯಣ (ವಾಲ್ಮೀಕಿ ರಾಮಾಯಣದ ಪ್ರಥಮ ಸರ್ಗದ ಟೀಕೆ.)

ಎಂ. ಎ. ಶ್ರೀನಿವಾಸಾಚಾರ್ಯ.

ಇವನು ಶ್ರೀವೈಷ್ಣವನು. ಮೈಸೂರು ಸರಕಾರದಲ್ಲಿ ಅಸಿಸ್ಟೆಂಟ್ ಕಂಟ್ರೋಲರಾಗಿದ್ದನು. ಗ್ರಂಥ—ರಾಜಾ ಮಲಯಸಿಂಹ.

ಬಿ. ರಾಮಕೃಷ್ಣರಾಯ.

ಈತನು ಸ್ಮಾರ್ತನು. ಮೈಸೂರು ಅರಮನೆಯಲ್ಲಿ ಕಂಟ್ರೋಲರಾಗಿದ್ದನು. ಗ್ರಂಥ—ಶ್ರೀರಾಮ ಕಥಾಪ್ರಸಂಗ. ಇವನು ಮೈಸೂರು ಮಹಾರಾಜರ ವಂಶಾವಳಿಯ ಎರಡು ಸಂಪುಟಗಳನ್ನು ತಿದ್ದಿ ಮುದ್ರಿಸಿದನು.

ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ.

ಇವನು ಸ್ಮಾರ್ತನು. ಮೈಸೂರು ಪ್ರಾಂತದವನು. ಗ್ರಂಥ—ಸಾಸೆಂದ ಗಣೇಶನ ಕಥೆ (ಯ.)

ಎಂ. ಡಿ. ಶ್ರೀನಿವಾಸಯ್ಯಂಗಾರ್.

ಈತನು ಶ್ರೀವೈಷ್ಣವನು. ಮೈಸೂರು ಸರಕಾರದಲ್ಲಿ ಅವಾತಿಕೆರಿಯಾಗಿದ್ದನು. ಗ್ರಂಥಗಳು—ಗರ್ಭಿಣೀಶಿಶುಸಂರಕ್ಷಣ, ವಿಷೂಚಿ.

ಎಂ. ರಾಮಸ್ವಾಮಿಶಾಸ್ತ್ರಿ.

ಇವನು ಸ್ಮಾರ್ತನು. ಸರಕಾರಿ ಟ್ರಾನ್ಸ್ಲೇಟರಿಗೆ ಸಹಾಯಕನಾಗಿ ಪಂಡಿತಕೆಲಸದಲ್ಲಿದ್ದನು. ಗ್ರಂಥ—ವಾಗ್ವಿಧಾಯಿನಿ

ತಿರುಮಲೆ ಶ್ರೀನಿವಾಸಾಚಾರ್ಯ.

ಈತನು ಶ್ರೀವೈಷ್ಣವನು. ಇವನ ಸ್ಥಳ ವೈಸೂರು. ಮಂಗಳೂರಲ್ಲಿ ಮೆ. ಕಿಟಲ್‌ಸಾಹೇಬನಿಗೆ ಸಹಾಯಕನಾಗಿ ಪಂಡಿತಕೆಲಸದಲ್ಲಿದ್ದನು. ಗ್ರಂಥಗಳು—ಷಡಕ್ಷರೀಯ ವಜನಟೀಕೆ, ಅನುಭವಾಮೃತ ಟೀಕೆ.

ಕೆ. ರಾಮಸ್ವಾಮಿ ಅಯ್ಯಂಗಾರ್.

ಈತನು ಶ್ರೀವೈಷ್ಣವಕವಿ. ಮೈಸೂರು ವಿದ್ಯಾಇಲಾಖೆಯಲ್ಲಿ ಉಪಾಧ್ಯಾಯನಾಗಿದ್ದನು. ಇವನ ಸ್ಥಳ ಮಾಗಡಿ. ಈತನು ಅನೇಕ ಗ್ರಂಥಗಳನ್ನು ಪದ್ಯರೂಪವಾಗಿಯೂ ಗದ್ಯರೂಪವಾಗಿಯೂ ಬರೆದಿದ್ದಾನೆ.

ಗ್ರಂಥಗಳು—ಈಶ್ವರಚಂದ್ರವಿದ್ಯಾಸಾಗರ (ಗ), ಉಪದೇಶಮಾಲೆ (ದ್ವಿಪದಿ), ಒಳ್ಳಡೆಗನ್ನಡಿ (ಕಂ), ಕನ್ನಡ ಬಾಲಭಾರತ (ಗ), ಕನ್ನಡ ಬಾಲ ಭಾಗವತ (ಗ), ಕನ್ನಡ ಬಾಲರಾಮಾಯಣ (ಗ), ಕಪಿಲನ ಇತಿಹಾಸ (ಗ), ಕುಮಾರವ್ಯಾಸನ ಮಹಾಭಾರತದ ಸಂಗ್ರಹ—ಆದಿಪರ್ವ (ಗ), ಸಭಾಪರ್ವ (ಗ), ಅರಣ್ಯಪರ್ವ (ಗ), ವಿರಾಟಪರ್ವ (ಗ), ಉದ್ಯೋಗಪರ್ವ (ಗ), ಭೀಷ್ಮ ದ್ರೋಣಪರ್ವಗಳು (ಗ), ಕರ್ಣಶಲ್ಯಸೌಪ್ತಿಕ ಸ್ತ್ರೀಪರ್ವಗಳು (ಗ); ಕೌಸಲ್ಯಾ ಪರಿಣಯ (ಗ), ಚಂದ್ರಕಲಾಕಲ್ಯಾಣ (ನಾ), ಚಾಣಕ್ಯತಂತ್ರ (ಗ), ಜೀರ್ಣ ವಿಜಯನಗರಾದರ್ಶ (ಗ), ದಾರಿದ್ರ್ಯಶತಕ, ನೀತಿರಸಾಯನ (ದ್ವಿ. ಚೌ. ಹಾ.), ಬಾಲಭಾರತ (ಷ), ಬಾಲಿಕಾನೀತಿಮಾಲಿಕೆ (ಕಂ), ಭೂಗೋಳಮಾಲಿಕೆ, ಮಕ್ಕಳ ಆಟಗಳು, ಮಹಾಭಕ್ತಿವಿಜಯ (ಗ), ಮುಕುಂದಮಾಲಾಸ್ತೋತ್ರ (ಷ.ವೃ. ಚೌ.), ರಂಗನಾಥ ರಾಮಾಯಣ (ಷ), ರಾಜಕರಂಗಿಣಿ (ಗೆ), ರಾಜಪುತ್ರ ರಮಣಿಯರು (ಗ), ರಾಜಭಕ್ತಿಸಾರ (ಷ), ರಾಜಾ ರಾಮಮೋಹನರಾಯನ ಚರಿತ್ರೆ (ಗ), ಲೇಖ್ಯಪ್ರದರ್ಶನಿ, ಸಂಕ್ಷೇಪ ಮುದ್ರಾರಾಕ್ಷಸ, ಸಂಗೀತ ಕಲ್ಯಾಣ ಪಾರಿಜಾತ (ಹಾ), ಸಂಸಾರ ನಿರ್ವಾಹಕ್ರಮ ಮತ್ತು ಗೃಹಶಿಕ್ಷಣ (ಗ), ಸತ್ಯಾ

ದ್ರೌಪದೀಸಂವಾದ (ಷ), ಸುಕನ್ಯಾಚರಿತ್ರೆ (ಷ), ಸುಯಜ್ಞೋಪಾಖ್ಯಾನ, ಹಿತಬೋಧಿನಿ (ಷ), ಹಿತೋಪದೇಶ (ಚಂ). ಈತನು ಆನಂದರಾಮಾಯಣ ಅಥವಾ ರಾವಣಾಭ್ಯುದಯ ಕಥಾಕುಸುಮಮಂಜರಿ ಎಂಬ ಗ್ರಂಥವನ್ನು ತಿದ್ದಿ ಮುದ್ರಿಸಿದನು.

ಶ್ರೀಕಂಠೇಶಗೌಡ, ಬಿ.ಎ., ಬಿ.ಎಲ್.

ಈತನು ಒಕ್ಕಲಿಗನು. ಮೈಸೂರು ಸರಕಾರದಲ್ಲಿ ಮುನ್ಸಿಫ್ ಕೆಲಸದಲ್ಲಿದ್ದನು. ಗ್ರಂಥಗಳು—ಕನ್ಯಾವಿತಂತು, ಚಾಮುನೃಪ ಚಂದ್ರಪ್ರಭೆ (ಕಂ) ಚಿಕ್ಕಬಣಜಿಗರು, ಪ್ರತಾಪರುದ್ರದೇವ, ಪ್ರವಿಾಳಾರ್ಜುನೀಯ, ಪ್ರಿಯದರ್ಶಿಕೆ, ಸೀತಾಸ್ವಯಂವರ, ಸುರಭಿ.

ಡಿ. ಶ್ರೀನಿವಾಸ ರಾಮಚಂದ್ರ ಸವದಿ.

ಇವನು ಬ್ರಾಹ್ಮಣನು. ಧಾರವಾಡ ಪ್ರಾಂತದವನು. ಗ್ರಂಥಗಳು—ದೀರ್ಘಾಯುಷ್ಯದ ಗುಟ್ಟು, ಪ್ಲೇಗೆಂಬ ಪಿಡುಗು.

ರಾಜಗೋಪಾಲಾಚಾರ್ಯ ಕಡಕೋಳ.

ಈತನು ಮಾಧ್ವನು. ಇವನ ಸ್ಥಳ ಕರಜಗಿ. ಗ್ರಂಥ—ಕೀಚಕಸಂಧಿ.

ಜಯರಾಯಾಚಾರ್ಯ (ಪುಟ 221)

ಇತರ ಗ್ರಂಥಗಳು—ಸಿರಿಯಾಳರಾಜ, ಚಂದ್ರಹಾಸ, ಕಲ್ಯಾಣಗೀತಾವಳಿ, ಸಂಗೀತದ ಕೃತಿಗಳು, ನಾಡೀನಿದಾನ, ಅನುಕರಣಗೀತಲಹರಿ, ಭವಿಷ್ಯೋತ್ತರ ಪುರಾಣ (ಚಂ). ಈತನು ನರಪತಿಚರಿತವೆಂಬ ಅಲಂಕಾರಗ್ರಂಥವನ್ನು ತಿದ್ದಿ ಮುದ್ರಿಸಿದನು.

ಶಂಕರಾನಂದಯೋಗಿ ಪುಟ (258)

ಈತನು ಬ್ರಾಹ್ಮಣನಲ್ಲ, ಕ್ಷತ್ರಿಯಮನೆತನದವನು. ಇವನ ಇತರ ಗ್ರಂಥಗಳು—ಉತ್ತರ ಕೈವಲ್ಯನವನೀತ, ರಾಮಶತ್ವಾಮೃತ, ರಾಮಭಕ್ತಿಸಾರ, ಭಕ್ತಿಕಲ್ಪದ್ರುಮ, ಪಾರ್ವತೀಪಂಚರತ್ನ, ಮುಕ್ತಿಕಾಂತಾಕಲ್ಯಾಣ, ಹರಿಹರಲೀಲಾಮೃತ.

ನಂಜನಗೂಡು ಸುಬ್ಬಾಶಾಸ್ತ್ರಿ (ಪುಟ 220)

ಇತರ ಗ್ರಂಥಗಳು—ಮಾಳವಿಕಾಗ್ನಿ ಮಿತ್ರ, ಮೃಚ್ಛಕಟಿಕೆ.

ಶಾಂತಕವಿ (ಪುಟ 221)

ಇತರ ಗ್ರಂಥಗಳು—ಅಡ್ಡಕಥೆಗಳ ಬುಕ್ಕು, ಅಲಂಕಾರಶಾಸ್ತ್ರ, ಅಲಾವಿ ಜಂಗು, ಆಂಜನೇಯವಿಜಯ, ಆನಂದಲಹರಿ, ಋತುಸಂಹಾರ, ಕನ್ನಡ ದಾಸ ಯ್ಯನ ಪದಗಳು, ಕನ್ನಡಿಗರಿಗೆ ಸವಾಲುಗಳು, ಕವಿಕಂಠಕುಠಾರ, ಕಾಲಮಹಿಮೆ, ಕಾಳಾಸುರ, ಕೃಷ್ಣರಾಧಿಕಾವಿಲಾಸ, ಗೀತಗೋವಿಂದ, ಗಾಲವಚಿತ್ರಸೇನ, ಚಿತ್ರ ಸೇನಗಂಧರ್ವ (ನಾ), ಜರಾಸಂಧವಧ, ನಾಗಾನಂದ, ನಾರದಕುಚೇಷ್ಟೆ, ಪುಷ್ಪ ಬಾಣವಿಲಾಸ, ಭರಗಾಲರಸು, ಬೃಹಜ್ಜಂಬೂಚರಿತ್ರೆ, ಭುಜಂಗೋಪದೇಶ, ಮಯೂರಧ್ವಜಪ್ರತಾಪ, ಮುಕುಂದದಾನಾಮೃತ, ಮೃಚ್ಛಕಟಿಕ (ನಾ), ರಘು ವಂಶ 2ನೆಯ ಸರ್ಗ, ರಸಿಕಾರಸಿಕವಿಚಾರ, ರಾವಣವಧೆ, ರಾವಣವೇದವತಿ, ಲಘುಕವಿತಾಪದ್ಧತಿ, ವಾಸಪ್ಪನಾಯಕನ ಫಾರ್ಸ್, ವಿಟಕಂಠಖಡ್ಗ, ವಿರಾಟ ಪರ್ವ, ವಿಶ್ವಾಮಿತ್ರತಪೋಭಂಗ ಅಥವಾ ಶಕುಂತಲೆಯ ಉತ್ಪತ್ತಿ, ವೇಶ್ಯಾವಾ ಟಿಕಾಸಂಚಾರ, ವ್ಯಭಿಚಾರಾನರ್ಥಸಿಂಧು, ಶಾಕುಂತಲ (ನಾ), ಶೃಂಗಾರಸಾಗರ, ಶ್ರೀಮತೀಸ್ವಯಂವರ, ಸದ್ವರ್ತನ, ಸೀತಾಸ್ವಯಂವರ, ಸುಧನ್ವವಧ, ಸೌಭದ್ರ (ನಾ), ಸ್ಯಮಂತಕಮಣಿ ಚರಿತ, ಹರಗರ್ವಪರಿಹಾರ, ಹರಿಮಿತ್ರೋಪಾಖ್ಯಾನ, ಹರಿಶ್ಚಂದ್ರ ಸತ್ವಪರೀಕ್ಷೆ.

ಹಿಂದೆ ಕೊಟ್ಟಿರುವ ವಸಿಷ್ಠೇಶ್ವರನ ಬಾಲಲೀಲೆ ಎಂಬ ಗ್ರಂಥವು ಈ ಕವಿ ಯದಲ್ಲವೆಂದು ತಿಳಿಯುತ್ತದೆ.

ಬಿ. ವೆಂಕಟಾಚಾರ್ಯ (ಪುಟ 223)

ಇತರ ಗ್ರಂಥಗಳು—ಅಮೃತಪುಲಿನ, ಇದೊಂದು ಚಿತ್ರ, ಉನ್ಮಾದಿನಿ, ಉಪವಾಸ, ಕರ್ಮಕ್ಕೆ ತಕ್ಕಫಲ, ಕಾಗೆ, ಕೊಹಿನೂರು, ಕ್ಷತ್ರಿಯರಮಣಿ, ಗೀತೋಕ್ತಧರ್ಮ, ಚಿತ್ರವಿಚಿತ್ರಾವಳಿ, ಚಿರತ್ನನಾಟಕರತ್ನ, ದಾಡಿಯ ಹೇಳಿಕೆ, ದೇಶಾಂತರಗಳಲ್ಲಿ ಪ್ರಾಚೀನಭಾರತ ಉಪನಿವೇಶಗಳು, ನವಾಬನಂದಿನಿ, ನೀಳಾ ಗೀತೆ, ನೊಂದನುಡಿ, ಭರತಖಂಡದ ಪೂರ್ವವೃತ್ತ, ಭರತಖಂಡದಲ್ಲಿ ವಿದುಷಿಯ ರಾಗಿದ್ದ ರಮಣಿಯರು, ಮನೋರಮಾ, ಮುಶಕ, ಯುಗಳಪ್ರದೀಪ, ಲೀಲೆ,

ಲೋಕರಹಸ್ಯ, ವಂಗವಿಜೇತ. ವೆನಿಸುನಗರದ ವಣಿಕ, ವೈಜ್ಞಾನಿಕ ಪ್ರಹಸನ, ಶಾಂತಿ, ಸಾಧನೆ, ಸುಶಿಕ್ಷಿತರೆಂಬ ಸಭ್ಯರಾದ ಹಿಂದುಗಳು, ಸ್ತ್ರೀಶಿಕ್ಷೆಯ ಸಮಸ್ಯೆ, ಹಿಂದುಗಳ ಮನುಷ್ಯತ್ವ.

ಭೀಮಾಜಿ ಶ್ರೀನಿವಾಸ ಅಡಬಡ್ಡಿ (ಪುಟ 222)

ಈತನ ನೀತಿದರ್ಪಣವು ಷಟ್ಪದಿ, ಕಂದ, ವೃತ್ತ ಇವುಗಳಲ್ಲಿ ಬರೆದಿದೆ. ಇತರ ಗ್ರಂಥಗಳು—ಸ್ತ್ರೀಧರ್ಮಸಾರ, ಧಾತ್ವರ್ಥಪ್ರಕಾಶಿಕೆ, ಕೆಲವು ನಾಟಕಗಳು.

ಗಿರಿಭಟ್ಟರ ತಮ್ಮಯ್ಯ (ಪುಟ 238)

ಇತರ ಗ್ರಂಥ—ನೀತಿಚೂಡಾಮಣಿ. ದೊಡ್ಡ ಗ್ರಂಥ, ಕಂದದಲ್ಲಿ ಬರೆದಿದೆ.

ಗರಣಿ ಕೃಷ್ಣಾಚಾರ್ಯ (ಪುಟ 221)

ಇತರ ಗ್ರಂಥಗಳು—ಹವ್ಯಪಾಕಪದ್ಧತಿ, ಗಜೇಂದ್ರಮೋಕ್ಷ ಟೀಕೆ, ಕರ್ಣಾಟಕ ಭಾಷಾವಿಷಯ, ಕರ್ಣಾಟಕ ಭಾಷಾಸಮಾಕರಣೋಪನ್ಯಾಸ, ಸದ್ವೃತ್ತಾನುಷ್ಠಾನ.

ವೆಂಕಟೇಶಶಾಸ್ತ್ರಿ (ಪುಟ 225)

ಇತರ ಗ್ರಂಥ—ರಾಜಮಾರ್ತಾಂಡ ಚರಿತ್ರೆ.

ಕೃಷ್ಣರಾಯ ರಾ. ಬಂಕಾಪುರ (ಪುಟ 394)

ಇತರ ಗ್ರಂಥ—ಮುಳಬಾಗಿಲವರ ಚರಿತ್ರಶತಕ (ನಾನಾವೃತ್ತ).

ಬಸವಪ್ಪಶಾಸ್ತ್ರಿ (ಪುಟ 217)

ಇತರ ಗ್ರಂಥಗಳು—ರತ್ನಾವಳಿ, ಮಾಲತೀಮಾಧವ, ವಿಕ್ರಮೋರ್ವಶೀಯ, ಕೃಷ್ಣರಾಜಾಭ್ಯುದಯ, ಶಂಕರಶತಕ, ಹರ್ಷಚರಿತ, ದಕ್ಷಿಣಾಮೂರ್ತ್ಯಷ್ಟಕ.

ಪಾರ್ತಿ ಸುಬ್ಬಯ್ಯ (ಪುಟ 393)

ಇವನು ಶಿವಬ್ರಾಹ್ಮಣನು. ಇವನ ಗ್ರಂಥಗಳು—ಪುತ್ರಕಾಮೇಷ್ಟಿ,

ಪಂಚವಟಿ, ವಾಲಿಸುಗ್ರೀವ ಕಾಳಗ, ಋಂಗರಸಂಧಿ, ಸೇತುಬಂಧನ, ಅಂಗದ ಸಂಧಾನ, ಸಭಾಲಕ್ಷ್ಮಣ. (ಪಂಚಕಜ್ಜಾಯ, 32).

ಗಂಗಾಧರ ಮಡಿವಾಳೇಶ್ವರ [1] (ಪುಟ 212)

ಇತರ ಗ್ರಂಥಗಳು—ಕಾವ್ಯಸಂಗ್ರಹ, ರಾಜಶೇಖರವಿಲಾಸ ಟೀಕೆ.

ಪಗಡದಿನ್ನೆ ಮಠದ ನನ್ನಪ್ಪಶಾಸ್ತ್ರಿ

ಈತನು ವೀರಶೈವನು; ರಾಯಚೂರು ಪ್ರಾಂತದವನು. ಗ್ರಂಥಗಳು—ನವಮುಗ್ಧಲೀಲೆ, ತ್ರಿಷಷ್ಟಿ ಪುರಾತನ ಚರಿತ್ರೆ, ವೇದಾಂತ ಪಟಲ, ಶಿಖಾಧಾರಣ ಖಂಡನ.

ಪಂಡಿತ ಪ್ರಭುವಪ್ಪ

ಈತನು ವೀರಶೈವನು. ಇವನ ಸ್ಥಳ ನ್ಯಾಮತಿ. ಗ್ರಂಥ—ಹಳಗನ್ನಡದ ಶಬ್ದಕೋಶ.

ಮಾಳಿ

ಇವನು ವೀರಶೈವನು; ದಾರವಾಡಪ್ರಾಂತದವನು. ಚಿತ್ರಶಿಲ್ಪದಲ್ಲಿ ಚತುರನು. ಕನ್ನಡದಲ್ಲಿ ಲೇಖನಗಳನ್ನೂ ಕವಿತೆಗಳನ್ನೂ ಬರೆಯುತ್ತಿದ್ದಂತೆ ತಿಳಿಯುತ್ತದೆ.

ಕಿತ್ತೂರ ಬಸವಾರ್ಯ

ಈತನು ವೀರಶೈವನು; ದಾರವಾಡಪ್ರಾಂತದವನು. ಅನೇಕ ಲೇಖನಗಳನ್ನೂ ಕವಿತೆಗಳನ್ನೂ ಪ್ರಬೋಧ ಮುಂತಾದ ಮಾಸಪತ್ರಿಕೆಗಳಲ್ಲಿ ಬರೆದಿರುವನು.

ಬೂದಿಹಾಳ ಬಸವಾರ್ಯ

ಇವನು ವೀರಶೈವನು; ದಾರವಾಡಪ್ರಾಂತದವನು. ಉಪನ್ಯಾಸ ಲೇಖಕನು, ಗ್ರಂಥಗಳು—ದಿವ್ಯಸುಂದರಿ ಇತ್ಯಾದಿ.

---

1. ಇಲ್ಲಿಂದ ಬೂದಿಹಾಳ ಬಸವಾರ್ಯನವರೆಗೆ ವೀರಶೈವ ಕೈರದಪರ್ಣದ ಆಧಾರದ ಮೇಲೆ ಬರೆದಿದೆ.

ಬಿ. ಕೃಷ್ಣಪ್ಪ ಎಂ. ಎ.

ಈತನು ಬ್ರಾಹ್ಮಣನು; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರಾಗಿಯೂ ಕರ್ನಾಟಕ ಗ್ರಂಥಮಾಲೆಯ ಸಂಪಾದಕನಾಗಿಯೂ ಇದ್ದನು. ಗ್ರಂಥಗಳು—ರಾಯಜೂರು ವಿಜಯ, ಅಭಿಜ್ಞಾನ ಶಾಕುಂತಳನಾಟಕ ಕರ್ನಾಟಕ ಗದ್ಯಾನುವಾದ (ವಿಮರ್ಶೆ ಸಹಿತ), ಕನಕೋರ್ನಾರ್ಜನ, ಟ್ರೋಜನ್ ದಂಡಯಾತ್ರೆ, ಯವನ ಮಹಾವೀರ ಚರಿತೆ, ಯವನ ವೀರಕಥಾವಳಿ.

ಬಿ. ಎಲ್. ರೈಸ್ ಸಿ. ಐ. ಇ.

ಈತನು ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದು ಬಳಿಕ ಶಾಸನದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದನು. ಕನ್ನಡದಲ್ಲಿ ಬಾಲಕರಿಗೂ ಪಂಡಿತರಿಗೂ ಉಪಯೋಗವಾಗುವಂತೆ ಹಲವು ಗ್ರಂಥಗಳನ್ನು ಪ್ರೌಢ ಪೀಠಿಕೆಯೊಡನೆ ಮುದ್ರಿಸಿ ಪ್ರಕಟಿಸಿದನು. ಗ್ರಂಥಗಳು—ಅಮರ ಕೋಶ, ಪದ್ಯಸಾರ, ಕರ್ನಾಟಕ ಭಾಷಾಭೂಷಣ, ಪಂಪರಾಮಾಯಣ, ಪಂಪ ಭಾರತ, ಕರ್ನಾಟಕ ಶಬ್ದಾನುಶಾಸನ.

ಕೆರೋಡೆ ಸುಬ್ಬರಾಯ ಬಿ. ಎ.

ಈತನು ಬ್ರಾಹ್ಮಣನು; ಮಂಗಳೂರು ಪ್ರಾಂತದಲ್ಲಿ ಇದ್ದನು. ಶ್ರೀಕೃಷ್ಣ ಸೂಕ್ತಿಗೆ ಪ್ರಥಮ ಸಂಪಾದಕನು.

ಗ್ರಂಥಗಳು—ಸೌಭಾಗ್ಯವತೀ ಪರಿಣಯ, ಶೃಂಗಾರಶತಕ, ಕುಮಾರ ತೇಜರ, ತಾರಾನಾಥ, ಪಲಾಂಡುಚರಿತ.

ADDITIONS AND CORRECTIONS

ಗ್ರಂಥಶುದ್ಧಿ (3)

ಈ ಸಂಪುಟಕ್ಕೆ 3ನೆಯ ಪರಿಶಿಷ್ಟರೂಪವಾಗಿ 327ನೆಯ ಪುಟದಿಂದ 333 ನೆಯ್ಕ ಪುಟದವರೆಗೆ ಒಂದು ಗ್ರಂಥಶುದ್ಧಿಯೂ, 398ನೆಯ ಪುಟದಲ್ಲಿ ಮತ್ತೊಂದು ಗ್ರಂಥಶುದ್ಧಿಯೂ ಹಿಂದೆಯೇ ಕೊಟ್ಟಿವೆ. ಈಗ ಕೊಡುವ ಗ್ರಂಥ ಶುದ್ಧಿ ಈ ಸಂಪುಟಕ್ಕೆ ಮಾತ್ರವಲ್ಲದೆ 1ನೆಯ ಮತ್ತು 2ನೆಯ ಸಂಪುಟಗಳಿಗೂ ಅನ್ವಯಿಸುತ್ತದೆ.

1ನೆಯ ಸಂಪುಟ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
i	20	ಅಪ್ಪಯ್ಯ	ಅಯ್ಯಪ್ಪ
iv	34	ಕಡ್ಕಯ	ಡಕ್ಕೆಯ
x	3	ಕೆ. ವಿನಾಯಕಶಾಸ್ತ್ರಿ ಎಂಬ ಹೆಸರನ್ನು ಬಿಡಬೇಕು	
xii	13	ಶಾಷಾದ್ರಿ	ಶೇಷಾದ್ರಿ
,,	25	ಸ್ತ್ರಗೆಕಾಯಕಡ	ಸತ್ತ್ರಿಗೆಕಾಯಕದ
xvi	37	ಕಪಾಕುಂಡಲಾ	ಕಪಾಲಕುಂಡಲಾ
xvii	14	ಕಾಮುಶಾಸ್ತ್ರ ಎಂಬುದನ್ನು ಬಿಡಬೇಕು. ನಂದಳಿಕೆ ಲಕ್ಷ್ಮೀನಾರಣಪ್ಪನು ಕಾಮುಶಾಸ್ತ್ರವನ್ನು ಬರೆದಿಲ್ಲ.	
xx	41	ತುಣುಕುವಿುಣುಕು ಎಂಬುದನ್ನು ಬಿಡಬೇಕು.	
xxvi (219)	52	ರತ್ನಾವಳೀಕಲ್ಯಾಣ	ರತ್ನಾವತೀಕಲ್ಯಾಣ
,, (221)	35	ಮೌನೇಶ್ವರನ ಬಾಲಲೀಲೆ ಎಂಬುದನ್ನು ಬಿಡಬೇಕು; ಇದನ್ನು ಶಾಂತಕವಿ ಬರೆದಿಲ್ಲ	
xxvii	10	ರಾಜಾಸ್ಥಾನ	ರಾಜಸ್ಥಾನ
xxviii	9	ಲುಲಾಯಶಾಸ್ತ್ರಿ ಎಂಬುದನ್ನು ಬಿಡಬೇಕು. ವಲೀಮುಖವಿಲಾಸನಾಟಕ 236 ಎಂದು ಸೇರಿಸಬೇಕು	
xxx	11	ಶಬ್ದವ್ಯುತತ್ತಿ	ಶಬ್ದವ್ಯುತ್ಪತ್ತಿ
xxx (164)	15	ಶಬ್ದಾರ್ಥಮಂಜರಿಯನ್ನು ಬಿಡಬೇಕು; ಇದನ್ನು ಚಂದ್ರಸಾಗರವರ್ಣಿ ಬರೆದಿಲ್ಲ	

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
xxxi	11	ಶುದ್ಧಿಪತ್ರ ಎಂಬುದನ್ನು ಬಿಡಬೇಕು	
,,	21	ಷಟಚಕ್ರದೀಪಿಕೆ	ಷಟ್ಚಕ್ರದೀಪಿಕೆ
,,	22	ಜೆಲುವಾಂಬೆ ಕೃಷ್ಣಕರ್ಣಾಮೃತ ಟೀಕೆಯನ್ನೂ ಬರೆದಿರುವುದಾಗಿ ತಿಳಿಯುತ್ತದೆ.	

36 ನಿಟ್ಟೂರು ನಂಜಯ್ಯನಿಗೆ ಹಿಂದೆ ಇನ್ನೂ ಇಬ್ಬರು ಶಬ್ದಮಣಿದರ್ಪಣಕ್ಕೆ ವ್ಯಾಖ್ಯಾನವನ್ನು ಬರೆದಿದ್ದಂತೆ ತಿಳಿಯುತ್ತದೆ. ಇವರಲ್ಲಿ ಒಬ್ಬನು ಲಿಂಗಣಾರಾಧ್ಯ. ಇವನ ವ್ಯಾಖ್ಯಾನಕ್ಕೆ "ಸೂತ್ರಾನ್ವಯರತ್ನಮಾಲೆ" ಎಂದು ಹೆಸರು. [1] ಸಂಧಿಗಳ ಕೊನೆಯಲ್ಲಿ ಈ ಗದ್ಯವಿದೆ :—ಇದು ಸಂಸ್ಕೃತ ಕರ್ಣಾಟಕೋಭಯ ಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯರತ್ನಮಾಲೆಯೊಳ್. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ. 69ನೆಯ ಸೂತ್ರದ ವ್ಯಾಖ್ಯಾನವನ್ನು ಉದಾಹರಿಸುತ್ತೇವೆ :—

ಪರಪದವೂರ್ವಂ ದ್ವಿತ್ವಾ । ಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾ ।
ಕ್ಷರಮಾಗೆ ಸಂಧಿದೋಷಂ । ಸರೇಫಮಿದಿತಾಗೆ ಶಿಥಿಲಮೆಂದನುಸರಿಪರ್ ॥

ಪರಪದದ ಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಲಘುವಾಗಿರೆ ಸಂಧಿದೋಷಮುಕ್ಕುಂ. ಛಂದೋವಿಷಯದಲ್ಲಿ ಪರಪದದ ಪೂರ್ವಂ ರೇಫವೆರಸಿರ್ದೊಡಂ ಶಿಥಿಲಮಾಗಲಾರ್ಪುದೆಂದು ಕೆಲಬರಂಗೀಕರಿಸುವರ್. ಸರೇಫಮಿದಿರಾಗೆ ದೋಷಂ ಎಂದು.....ತಾಂ ಮಾಡಿದ ಶಬ್ದಮಣಿದರ್ಪಣ ವ್ಯಾಖ್ಯಾನದೊಳ್ ಬರೆದಂ. ಅದು ಪೊಲ್ಲ. ಸೂತ್ರಕಾರನಾಗ ಕವಿಕೇಶವಂ ತಾಂ ಮಾಡಿದ ಶಬ್ದಮಣಿವೃತ್ತಿಯೊಳ್ ಸಂಧಿದೋಷವುಕ್ಕುವೆಂದು "ಬರಿಸಿ ಕ್ಷ್ಮಾತೀಶನಂ" ಇತ್ಯಾದಿ ಪದ್ಯಮಂ ಬರೆದಂ. ಸರೇಫಶಿಥಿಲಕ್ಕೆ—ಮಿಱುಗುತ್ತಿರ್ಪ ತ್ರಿಶೂಲದಿಂ.

ಪುಕ್ಕಿ ಹಾಕಿರುವ ಕಡೆ ಹುಳು ಕೊರೆದು ಓಲೆ ಹೋಗಿದೆ. ಅಲ್ಲಿಯ ಭಾಗವು ಸಿಕ್ಕಿದ್ದರೆ ಲಿಂಗಣಾರಾಧ್ಯನಿಗೆ ಹಿಂದೆ ಇದ್ದ ವ್ಯಾಖ್ಯಾಕಾರನ ಹೆಸರು ತಿಳಿಯುತ್ತಿದ್ದಿತು. ಲಿಂಗಣಾರಾಧ್ಯನು ' ಬರಿಸಿ ಪ್ರಧಾನರಂ ' ಎಂಬ ಪಾಠವು

1. ಈ ವ್ಯಾಖ್ಯೆಯ ವಿಷಯವು ಮದರಾಸ್ ಯೂನಿವರ್ಸಿಟಿ ಕನ್ನಡ ಫೆಲ್ಲೋ ಆದ ಶ್ರೀಮಾನ್ ಎಚ್. ಶೇಷಯ್ಯಂಗಾರಿಂದ ತಿಳಿಯಿತು. ಇದು ಮದರಾಸ್ ಪ್ರಾಚ್ಯ ಲಿಖಿತ ಕೋಶಾಗಾರದಲ್ಲಿದೆ.

ತಪ್ಪೆನ್ನುತ್ತಾನೆ. ಕವಿರಾಜಮಾರ್ಗದಲ್ಲಿಯೂ ' ಬರಿಸಿ ಕ್ಷಿತಿಪತಿಯಂ ' (II,7) ಎಂಬ ಪಾಠವೇ ಇದೆ.

38 ತಾವು ಗುಣಿಸಿ ನೋಡಿದುದರಲ್ಲಿ ಜಾಯೇಂದ್ರನ ಕಾಲವು 1674ಕ್ಕೆ ಸರಿಹೋಗುತ್ತದೆ ಎಂದು ಶ್ರೀಮಾ೯ ಮಂಜೇಶ್ವರದ ಗೋವಿಂದಪೈ ನನಗೆ ಬರೆದ ಒಂದು ಪತ್ರದಲ್ಲಿ ತಿಳಿಸಿದ್ದಾರೆ. ಜಾಯೇಂದ್ರನು ಪರಿವರ್ತಿಸಿರುವ ಸಂಸ್ಕೃತ ಕುವಲಯಾನಂದವನ್ನು ಅಪ್ಪಯ್ಯದೀಕ್ಷಿತನು ವಿಜಯನಗರದ ದೊರೆಯಾದ 1ನೆಯ ವೆಂಕಟಪತಿರಾಯನ (1585—1615) ಆಜ್ಞಾನುಸಾರವಾಗಿ ರಚಿಸಿದಂತೆ ಆ ಗ್ರಂಥದಲ್ಲಿರುವ ಈ ಶ್ಲೋಕದಿಂದ ತಿಳಿಯುತ್ತದೆ :—

ಅಮುಂ ಕುವಲಯಾನಂದ ಮಕರೋದಪ್ಪದೀಕ್ಷಿತಃ !
ನಿಯೋಗಾದ್ವೇಂಕಟಪತೇರ್ನಿರುಪಾಧಿಕೃಪಾನಿಧೇಃ ॥

